ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಣೆ - ೫
ಸಾಹಿತ್ಯಮಾಲೆ - ೪

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

# ನಿರ್ಮಲಾ

**Blank Page**

# ನಿರ್ಮಲಾ

ಮೂಲ

**ಪ್ರೇಮ್‌ಚಂದ್**

ಅನುವಾದ

**ಡಾ. ತಿಪ್ಪೇಸ್ವಾಮಿ**

**ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ ಬೆಂಗಳೂರು – ೫೬೦ ೦೦೨

**Nirmala** - Kannada Translation of **Nirmala** by **Premchand**; Kannada translation by **Dr. Thippeswamy**; Editor-in-Chief: **Dr. Pradhan Gurudatta**; Published by **Registrar**, **Karnataka Anuvada Sahitya Academy**, Kannada Bhavana, J.C. Road, Bangalore - 560 002. 2007; Pp. xiv + 211; Price: Rs.75/-.

ಈ ಆವೃತ್ತಿಯ ಹಕ್ಕುಗಳು : ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮುದ್ರಣ : ೨೦೦೭
ಪುಟಗಳು : xiv + ೨೧೧
ಬೆಲೆ : ರೂ. ೭೫/–
ಪ್ರತಿಗಳು : ೩೦೦

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು
ದೂ : ೨೨೧೦೭೭೭೦

ಸಹಕಾರ :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಬೆಂಗಳೂರು

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀಪಾದ್**

**ISBN : 978-81-904579-4-1**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ

KARNATAKA

ಹೆಚ್.ಡಿ. ಕುಮಾರಸ್ವಾಮಿ

ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ

ಬೆಂಗಳೂರು – ೫೬೦ ೦೦೧

ದಿನಾಂಕ : ೧೫.೦೩.೨೦೦೭

# ಮುನ್ನುಡಿ

ಕರ್ನಾಟಕ ರಾಜ್ಯ ಪುನರ್ ಘಟನೆಯ ಐವತ್ತು ವರ್ಷಗಳ ನೆನಪಿಗಾಗಿ ಕರ್ನಾಟಕ ಸರ್ಕಾರ 'ಸುವರ್ಣ ಕರ್ನಾಟಕ'ದ ಸಂಭ್ರಮಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿತು. ಈ ಹೊತ್ತಿಗೆ ಸರಿಯಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯ ಮೂಲಕ ಕರ್ನಾಟಕ ಸರ್ಕಾರ ಇನ್ನೊಂದು ಹೊಸ ಹೆಜ್ಜೆಯನ್ನೂ ಇಟ್ಟಿತ್ತು. ಭಾರತೀಯ ಭಾಷೆಗಳ ನಡುವಣ ಪಾರಸ್ಪರಿಕ ಅರಿವನ್ನು ಹೆಚ್ಚಿಸುವುದರ ಜೊತೆಗೆ, ನಮ್ಮ ನಾಡು–ನುಡಿಗಳ ಹಿರಿಮೆಯನ್ನು ಇತರ ಭಾಷಾ–ಬಾಂಧವರಿಗೆ ಹಾಗೂ ಜಾಗತಿಕ ನೆಲೆಯಲ್ಲಿ ಪರಿಚಯಿಸಿ ಕೊಡುವುದು ಮತ್ತು ಜಗತ್ತಿನ ಇತರ ಭಾಷೆಗಳ ಶ್ರೇಷ್ಠ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುವುದು ಇದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಅನುವಾದ ಸಾಹಿತ್ಯ ಈ ಹೊತ್ತು ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲದಿರುವುದರಿಂದ, ಜ್ಞಾನ–ವಿಜ್ಞಾನ– ತಂತ್ರಜ್ಞಾನಗಳ ಕ್ಷೇತ್ರಗಳನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದೂ ಇದರಲ್ಲಿ ಸೇರಿದೆ. ಇದರಿಂದ ಐತಿಹಾಸಿಕ ಹಿರಿಮೆಯ ಜೊತೆಗೆ, ಕನ್ನಡದ ಸಾಮರ್ಥ್ಯ, ವೈಶಿಷ್ಟ್ಯ, ಹಿರಿಮೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಕಂಗೊಳಿಸುವಂತಾಗುತ್ತದೆ.

'ಸುವರ್ಣ ಕರ್ನಾಟಕ' ಸಂಭ್ರಮದ ಸಂದರ್ಭದಲ್ಲಿ, ಈ ಹಿಂದೆ ನಾಡು ನುಡಿಗೆ ಸೇವೆಯನ್ನು ಸಲ್ಲಿಸಿರುವ ಹಿರಿಯ ಚೇತನಗಳು ಸ್ವಪ್ರೇರಣೆಯಿಂದ ಕನ್ನಡಕ್ಕೆ ತಂದುಕೊಟ್ಟಿರುವ ಶ್ರೇಷ್ಠ ಕೃತಿಗಳಲ್ಲಿ ಆಯ್ದ ಗ್ರಂಥಗಳನ್ನು 'ಸುವರ್ಣ ಅನುವಾದ ಮಾಲೆಯ' ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹಾಗೂ ವಿಶ್ವದಲ್ಲಿನ ಶ್ರೇಷ್ಠ ಕೃತಿಗಳನ್ನೂ ಪರಿಚಯಿಸಿ ಕೊಡಲಾಗುತ್ತಿದೆ. ಇವು ಕನ್ನಡಿಗರಿಗೆ ಪ್ರಿಯವಾಗುತ್ತವೆಂದು ನಂಬಿದ್ದೇನೆ. ಈ ಕೃತಿಗಳನ್ನು ಸಹೃದಯತೆಯಿಂದ ಸ್ವಾಗತಿಸುವ ಮೂಲಕ, ಅನುವಾದ ಸಾಹಿತ್ಯ ಅಕಾಡೆಮಿಯ ಇಂಥ ಕೆಲಸಗಳಿಗೆ ಕನ್ನಡ ನಾಡಿನ ಜನತೆ ಪ್ರೋತ್ಸಾಹ ನೀಡುತ್ತದೆ ಎಂದು ಭಾವಿಸಿದ್ದೇನೆ.

(ಹೆಚ್.ಡಿ. ಕುಮಾರಸ್ವಾಮಿ)

**ಹೆಚ್.ಎಸ್. ಮಹದೇವ ಪ್ರಸಾದ್**
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. ೩೩೦, ೩ನೇ ಮಹಡಿ,
ವಿಧಾನಸೌಧ
ಬೆಂಗಳೂರು – ೫೬೦ ೦೦೧

ದಿನಾಂಕ : ೦೮–೦೨–೨೦೦೭

## ಶುಭಾಕಾಂಕ್ಷೆ

ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿರುವ ಅನುವಾದ ಸಾಹಿತ್ಯ ಅಕಾಡೆಮಿ, ರಾಷ್ಟ್ರದಲ್ಲಿಯೇ ಇಂಥ ಆದ್ಯ ಸಂಸ್ಥೆಯಾಗಿದ್ದು ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡು, ಕನ್ನಡ ಸಾಹಿತ್ಯ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಕ್ಕೆ ಅರ್ಥಪೂರ್ಣವಾದ ಕೊಡುಗೆಗಳನ್ನು ನೀಡುವ ಹಂಬಲವನ್ನು ಹೊಂದಿದೆ. ಇದರ ಸ್ಥಾಪನೆಯ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಸುವರ್ಣ ಸಂಭ್ರಮದ ಉತ್ಸವವೂ ಕೂಡಿಬಂದಿರುವ ಕಾರಣದಿಂದಾಗಿ, ಅನುವಾದ ಸಾಹಿತ್ಯ ಅಕಾಡೆಮಿ ಗಾಂಧೀಜಿ, ನೆಹರೂ ಇಂಥ ಶ್ರೇಷ್ಠ ವ್ಯಕ್ತಿಗಳನ್ನು ಕುರಿತ ಮಹತ್ವದ ಕೃತಿಗಳನ್ನೇ ಅಲ್ಲದೆ, ವಿವಿಧ ಭಾಷೆಗಳಲ್ಲಿನ ಅತ್ಯುತ್ತಮ ಸಾಹಿತ್ಯ ಗ್ರಂಥಗಳನ್ನು ಮತ್ತು ಇತರ ಕೃತಿಗಳನ್ನು ಕನ್ನಡಿಗರಿಗೆ ಒದಗಿಸುವ ಕಾರ್ಯವನ್ನು ಹಮ್ಮಿಕೊಂಡಿರುವುದು ನನಗೆ ತುಂಬಾ ಸಂತೋಷವನ್ನು ಉಂಟುಮಾಡಿದೆ. ಇದರಲ್ಲಿ ದೇಶ–ವಿದೇಶಗಳ ಕಥೆ–ಕಾದಂಬರಿಗಳೂ, ನಾಟಕಗಳೂ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ ಕೃತಿಗಳೂ ಸೇರಿದ್ದು, ಕನ್ನಡಿಗರಿಗೆ ವೈವಿಧ್ಯಮಯ ಅನುಭವವನ್ನು ತಂದುಕೊಡುವಲ್ಲಿ ನೆರವಾಗುತ್ತವೆ ಎಂದು ನಂಬಿದ್ದೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದೆ. ಇದೇ ರೀತಿ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಿಸಿ ಕೊಡುವ ಕಾರ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ನಡೆದು ಕನ್ನಡಿಗರ ಸಾಧನೆ ಜಗತ್ತಿಗೆ ಚೆನ್ನಾಗಿ ತಿಳಿದುಬರುವಂಥ ಸಾರ್ಥಕ ಪ್ರಯತ್ನಗಳು ನಡೆಯಲಿ ಎಂದು ಹಾರೈಸುತ್ತೇನೆ.

ಈಗ ಹೊರಬರುತ್ತಿರುವ ಕೃತಿಗಳಿಗೆ ಕನ್ನಡ ವಾಚಕಲೋಕದ ಸಹೃದಯಪೂರ್ಣ ಸ್ವಾಗತ ದೊರೆಯುತ್ತದೆಂದು ನಂಬಿದ್ದೇನೆ. ಇಂಥ ಸ್ವಾಗತ ಮತ್ತು ಪ್ರೋತ್ಸಾಹಗಳು ಅಕಾಡೆಮಿಯ ಮುಂದಿನ ಕಾರ್ಯಚಟುವಟಿಕೆಗಳಿಗೆ ಪ್ರೇರಣೆಯನ್ನೊದಗಿಸಲಿ ಎಂದು ಹಾರೈಸುತ್ತೇನೆ.

**(ಹೆಚ್.ಎಸ್. ಮಹದೇವ ಪ್ರಸಾದ್)**

ಐ.ಎಂ. ವಿಠ್ಠಲಮೂರ್ತಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ
ಹಾಗೂ ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರ

ಕಛೇರಿ : ೨೨೨೫೫೪೮೨
೨೨೦೩೪೦೦೭


ಕರ್ನಾಟಕ ಸರ್ಕಾರದ ಸಚಿವಾಲಯ
ಕೊ.ನಂ.೫, ನೆಲಮಹಡಿ, ವಿಕಾಸಸೌಧ,
ಬೆಂಗಳೂರು–೫೬೦ ೦೦೧

## ಹೊಸ ಹೆಜ್ಜೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿಸಲಾಗುತ್ತಿರುವ 'ಶ್ರೀ ಕುವೆಂಪು ಭಾಷಾಭಾರತೀ' ಎಂಬ ರಾಷ್ಟ್ರೀಯ ಸಂಸ್ಥೆಯ ಒಂದು ಸ್ವತಂತ್ರ ವಿಭಾಗವಾಗಿ ಕರ್ನಾಟಕ ಸರ್ಕಾರ 'ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ'ಯನ್ನು ಈಗಾಗಲೇ (೨೦೦೬ರಲ್ಲಿ) ಅಸ್ತಿತ್ವಕ್ಕೆ ತಂದಿದೆ. ಇಂಥ ಉಪಕ್ರಮವನ್ನು ಮೆರೆಯುವಲ್ಲಿ ಕರ್ನಾಟಕವೇ ಮೊದಲನೆಯ ರಾಜ್ಯವಾಗಿದೆ ಎಂಬುದು ಹೆಮ್ಮೆಯ ಸಂಗತಿಯೇ ಆಗಿದೆ. ಈ ಅನುವಾದ ಅಕಾಡೆಮಿ, ಪ್ರಾರಂಭಗೊಂಡ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಪುನರ್–ರಚನೆಯ ಸುವರ್ಣ ಮಹೋತ್ಸವದ ಸಂದರ್ಭ ಕೂಡಿ ಬಂದದ್ದು ಒಂದು ವಿಶಿಷ್ಟ ಯೋಗಾಯೋಗವೇ ಆಗಿದೆ. ಈ ಸುವರ್ಣ ಮಹೋತ್ಸವದ ಸಂದರ್ಭದ ಆಚರಣೆಯ ಅಂಗವಾಗಿ ಅನುವಾದ ಅಕಾಡೆಮಿ ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡಿದೆ. ಈ ಮೊದಲೇ ವಿಭಿನ್ನ ಭಾಷೆಗಳಲ್ಲಿನ ಹಲವು ಶ್ರೇಷ್ಠ ಲೇಖಕರ ಹಲವಾರು ಶ್ರೇಷ್ಠ ಕೃತಿಗಳು ನಮ್ಮ ಸಾಹಿತಿಗಳ ಗಮನವನ್ನು ಸೆಳೆದಿದ್ದು, ಅವುಗಳ ಯಥಾವತ್ತಾದ, ಸಂಗ್ರಹರೂಪವಾದ, ಅಳವಡಿಕೆಯಂತಿರುವ ಅನುವಾದಗಳನ್ನು ಅವರು ನಮಗೆ ಕೊಡಮಾಡಿದ್ದಾರೆ. 'ಒಬ್ಬನೇ ಉಂಡ ಊಟ ಹಬ್ಬವಲ್ಲ; ಒಬ್ಬನೇ ಸವಿದ ರುಚಿ ರುಚಿಯಲ್ಲ' ಎಂಬ ಗಾದೆ ಮಾತನ್ನು ಸಾರ್ಥಕಗೊಳಿಸುವಂತೆ, ಅವರು ಈ ಕೆಲಸವನ್ನು ಮಾಡಿದ್ದಾರೆ. ಇಂಥ ಪ್ರಸಿದ್ಧ, ಜನಪ್ರಿಯ, ಅಲಭ್ಯ ಕೃತಿಗಳನ್ನು 'ಸುವರ್ಣ ಕರ್ನಾಟಕ' ಯೋಜನೆಯ ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹೊಸ ಶ್ರೇಷ್ಠ ಗ್ರಂಥಗಳನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಹೀಗೆ, ದೇಶ–ವಿದೇಶಗಳ ಉತ್ಕೃಷ್ಟ ಕೃತಿಗಳಿಂದ ಕನ್ನಡ ಭಾಷೆ–ಸಾಹಿತ್ಯಗಳನ್ನು ಸಮೃದ್ಧಗೊಳಿಸುವ ದಿಕ್ಕಿನಲ್ಲಿ ಅನುವಾದ ಅಕಾಡೆಮಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಬೇಕಾಗಿದೆ.

ಅನುವಾದ ಇಂದು ತನ್ನ ಆಯಾಮವನ್ನು ಬಹುವಾಗಿ ವಿಸ್ತರಿಸಿಕೊಂಡು ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಂಡಿದೆ. ಹೀಗಾಗಿ, ಈ ದಿಕ್ಕಿನಲ್ಲಿಯೂ ಕನ್ನಡವನ್ನು ಸಮೃದ್ಧಗೊಳಿಸುವತ್ತ ನಮ್ಮ ಗಮನ ಹರಿಯಬೇಕಾಗಿದೆ. ಅಕಾಡೆಮಿ ಈ ದಿಕ್ಕಿನಲ್ಲಿಯೂ ಕಾರ್ಯೋನ್ಮುಖವಾಗಿರುವುದು ಸಂತೋಷದ ವಿಚಾರವೇ ಆಗಿದೆ. ಈ ಬಗೆಯ ಬಹುಮುಖೀ ಕಾರ್ಯಚಟುವಟಿಕೆಗಳಿಂದ ಭಾರತೀಯ ಭಾಷೆಗಳಲ್ಲಿ ಈಗಾಗಲೇ ತನ್ನದೇ ಆದ ಹಿರಿಮೆಯನ್ನು

ಮರೆದಿರುವ, ಮರೆಯುತ್ತಿರುವ  ಕನ್ನಡ ಭಾಷೆ–ಸಾಹಿತ್ಯ ಮತ್ತಷ್ಟು ಕಂಗೊಳಿಸುವಂತಾಗುತ್ತದೆ. ಅನೇಕ ಮಹತ್ವದ ಗ್ರಂಥಗಳು ದೊರೆಯುವಂತಾಗುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷವನ್ನು ಉಂಟುಮಾಡುತ್ತಿದೆ. ಇಂಥ ಕಾರ್ಯಗಳಿಗೆ ಸರ್ಕಾರದ ಬೆಂಬಲದ ಜೊತೆಗೆ, ಜನತೆಯ ಹೃತ್ಪೂರ್ವಕ ಪ್ರೋತ್ಸಾಹವೂ ಅಗತ್ಯವಾಗುತ್ತದೆ. ವಿವೇಚನಾಶೀಲರೂ, ಸಹೃದಯರೂ ಆದ ಕನ್ನಡಿಗರು ಇಂಥ ಪ್ರೋತ್ಸಾಹ ನೀಡುವಲ್ಲಿ ಮುಂದಾಗುತ್ತಾರೆ ಎಂದು ನಂಬಿದ್ದೇನೆ. ಅಕಾಡೆಮಿಯ ಕಾರ್ಯಚಟುವಟಿಕೆಗಳು ಇತೋಪ್ಯತಿಶಯವಾಗಿ ಮುಂದುವರಿಯಲಿ ; ಕರ್ನಾಟಕದ ಜನತೆಗೆ ಹೊಸ ಅನುಭವಗಳ ಲೋಕವನ್ನು ತೆರೆದು ತೋರುವ ಕಾರ್ಯಗಳು ಅವಿಚ್ಛಿನ್ನವಾಗಿ ನಡೆಯಲಿ ಎಂದು ಈ ಸಂದರ್ಭದಲ್ಲಿ ಹಾರೈಸಬಯಸುತ್ತೇನೆ.



**(ಐ.ಎಂ. ವಿಠ್ಠಲಮೂರ್ತಿ)**

# ಪ್ರಸ್ತಾವನೆ

ಭಾರತದಲ್ಲಿ ಯಾವುದೇ ರಾಜ್ಯವೊಂದರಲ್ಲಿ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಮೊಟ್ಟಮೊದಲ ಬಾರಿಗೆ ಸ್ಥಾಪಿಸಿದ ಹಿರಿಮೆ ಕರ್ನಾಟಕ ಸರ್ಕಾರದ್ದಾಗಿದೆ. ಜನವರಿ ೬, ೨೦೦೬ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರು ವಿಧ್ಯುಕ್ತವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಹಾಗೂ ಭಾಷಾಂತರವನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಶಿಕ್ಷಣ ವಿಷಯವಾಗಿ ಅಳವಡಿಸಿದ ಭಾಷಾಂತರ ಕ್ಷೇತ್ರದ ಭೀಷ್ಮಾಚಾರ್ಯರೂ ಆದ ಪ್ರೊ|| ದೇ. ಜವರೇಗೌಡ ಅವರೂ, ಹಿರಿಯ ವಿದ್ವಾಂಸರಾದ ಪ್ರೊ|| ಎಲ್.ಎಸ್. ಶೇಷಗಿರಿರಾವ್ ಅವರೂ ಅಕಾಡೆಮಿಯ ಕಾರ್ಯಚಟುವಟಿಕೆಗಳ ದಿಕ್ಕು-ದೆಸೆಗಳನ್ನು ನಿರ್ದೇಶಿಸಿದರು.

ನಮ್ಮ ನಾಡಿನಲ್ಲಿರುವ ವಿಚಿತ್ರ ಪರಿಸ್ಥಿತಿ ಎಂದರೆ ವಿದೇಶೀಯ ಭಾಷಾಸಾಹಿತ್ಯಗಳ ಅಷ್ಟಿಷ್ಟು ಪರಿಚಯವಾದರೂ ಇರುವ ನಮಗೆ ನಮ್ಮ ನಾಡಿನ ನೆರೆಹೊರೆಯ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯದ, ಶ್ರೇಷ್ಠ ಸಾಹಿತಿಗಳ ಪರಿಚಯ ಬಹುಮಂದಿಗೆ ಇಲ್ಲವೇ ಇಲ್ಲದಂತಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಇತರ ಕೆಲವು ರಾಷ್ಟ್ರೀಯ ಸಂಸ್ಥೆಗಳು ತಮ್ಮ ಕಾರ್ಯಚಟುವಟಿಕೆಗಳಲ್ಲಿ ಅನುವಾದಗಳನ್ನು ಹೊರತರುವ ಕೆಲವು ಯೋಜನೆಗಳನ್ನು ಕೈಗೊಳ್ಳುತ್ತಿರುವುದುಂಟು. ಆದರೆ, ಈ ಕಾರ್ಯಗಳು ಅಪೇಕ್ಷಣೀಯ ಪ್ರಮಾಣದಲ್ಲಿ ಹಾಗೂ ಪರಸ್ಪರ ಪೂರಕವಾಗುವ ರೀತಿಯಲ್ಲಿ ಆಗುತ್ತಿಲ್ಲ. ಮೇಲಾಗಿ ಈ ಕಾರ್ಯಕ್ರಮಗಳು ಬಹುಮಟ್ಟಿಗೆ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಾಗಿವೆ. ಹೀಗಾಗಿ, ಪರಸ್ಪರ ಕೊಳು-ಕೊಡೆಯ ಕಾರ್ಯಕ್ರಮಗಳು ಹೆಚ್ಚು-ಹೆಚ್ಚಾಗಿ ಹಾಗೂ ವೈವಿಧ್ಯಮಯವಾಗಿ ಆಗಬೇಕಾದ ಅಗತ್ಯವೂ ಇದೆ.

ಭಾರತೀಯ ಭಾಷಾಸಾಹಿತ್ಯಗಳು ಸಮೃದ್ಧವಾಗಿ ಬೆಳೆಯಬೇಕಾದರೆ, ಎರಡು ಮುಖಗಳಲ್ಲಿ ಕಾರ್ಯಗಳು ಆಗಬೇಕಾಗಿದೆ: (೧) ರಾಷ್ಟ್ರೀಯ ಮಟ್ಟದಲ್ಲಿ; (೨) ಅಂತಾರಾಷ್ಟ್ರೀಯ ಮಟ್ಟದಲ್ಲಿ. ರಾಷ್ಟ್ರೀಯ ಸ್ತರದಲ್ಲಿ ನಮ್ಮ ಭಾಷಾ ಸಾಹಿತ್ಯವನ್ನು ಬಿಂಬಿಸುವ ಕೆಲಸ ಎಷ್ಟು ಮುಖ್ಯವೋ, ಇತರ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಅಷ್ಟೇ ಮುಖ್ಯ. ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಹತ್ವದ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಹಾಗೂ ಕನ್ನಡ ಸಾಹಿತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸುವುದೂ ಅಷ್ಟೇ ಮುಖ್ಯ. ಈ ದೃಷ್ಟಿಯಿಂದ ನೊಬೆಲ್ ಪ್ರಶಸ್ತಿ, ಬೂಕರ್ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿರುವ ಲೇಖಕರ ಮಹತ್ವದ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುವ ಯೋಜನೆಗಳನ್ನು

ಅನುವಾದ ಸಾಹಿತ್ಯ ಅಕಾಡೆಮಿ ತನ್ನ ಮುಂದಿರಿಸಿಕೊಂಡಿದೆ. ಅಷ್ಟೇ ಅಲ್ಲದೆ, ವಿಜ್ಞಾನ–ತಂತ್ರಜ್ಞಾನ, ವೈದ್ಯಕೀಯ, ಮಾನವಿಕ ಮೊದಲಾದ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡದಲ್ಲಿ ತರುವ ಯೋಜನೆಗಳೂ ಅಕಾಡೆಮಿಯ ಮುಂದಿವೆ. ಇತರ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, ಅಂತೆಯೇ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಭಾಗ, ಕೇಂದ್ರೀಯ ಹಿಂದೀ ನಿರ್ದೇಶನಾಲಯ, ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಪದಾವಲೀ ಆಯೋಗ ಇತ್ಯಾದಿ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಈ ದಿಕ್ಕಿನಲ್ಲಿ ಸಹಕಾರವನ್ನು ಪಡೆದುಕೊಳ್ಳುವ ಆಲೋಚನೆಯನ್ನೂ ಅಕಾಡೆಮಿ ಇರಿಸಿಕೊಂಡಿದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಕಾರ್ಯಶಿಬಿರಗಳನ್ನು ಆಯೋಜಿಸಿ, ಅನುವಾದದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ, ಸಮರ್ಥ ಭಾಷಾಂತರಕಾರರನ್ನು ಗುರುತಿಸುವ ಪ್ರಯತ್ನಗಳನ್ನು ಅಕಾಡೆಮಿ ಮಾಡುತ್ತಿದೆ. ಈಗಾಗಲೇ ಕನ್ನಡ–ತೆಲುಗು, ಕನ್ನಡ–ಹಿಂದೀ, ಯಂತ್ರಾನುವಾದ, ವಿಜ್ಞಾನ ಸಾಹಿತ್ಯ ಅನುವಾದ ಇವುಗಳಿಗೆ ಸಂಬಂಧಿಸಿದಂತೆ ರಾಜ್ಯದ ಬೇರೆ–ಬೇರೆ ಕೇಂದ್ರಗಳಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಕಾರ್ಯಶಿಬಿರಗಳನ್ನೂ, ವಿಚಾರಗೋಷ್ಠಿಗಳನ್ನೂ ನಡೆಸಲಾಗಿದೆ. ಉರ್ದೂ ಮತ್ತು ತಮಿಳು ಭಾಷೆಗಳ ಕಾರ್ಯಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಭಾಷಾಂತರ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಂಡು ಆ ದಿಕ್ಕಿನಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಆಲೋಚನೆಯೂ ಇದೆ. ಇತ್ತೀಚೆಗೆ ಸ್ಯಾಮ್ ಪಿಟ್ರೋಡಾ ಅವರು 'ರಾಷ್ಟ್ರೀಯ ಅನುವಾದ ಮಿಷನ್' (National Translation Mission) ಅನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯೋಜನೆಯೊಂದನ್ನು ಸಲ್ಲಿಸಿದ್ದು, ಕೇಂದ್ರ ಸರ್ಕಾರ ಆ ಯೋಜನೆಯನ್ನು ಒಪ್ಪಿಕೊಂಡಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದಲ್ಲಿ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳು ಜನಸಾಮಾನ್ಯರ ವರೆಗೂ ಯಶಸ್ವಿಯಾಗಿ ಮುಟ್ಟುವುದು ಸಾಧ್ಯವಾಗುತ್ತದೆ ಹಾಗೂ ರಾಷ್ಟ್ರದ ಪ್ರಗತಿಯೂ ಅಭೂತಪೂರ್ವ ರೀತಿಯಲ್ಲಿ ಆಗುತ್ತದೆ ಎಂದು ಆಶಿಸಲಾಗಿದೆ. ಈ ಯೋಜನೆ ಉದ್ಯೋಗಸೃಷ್ಟಿಯ ಮಹತ್ತರ ಯೋಜನೆಯೂ ಆಗಲಿದೆ. ಇಂಥ ಸಂದರ್ಭದಲ್ಲಿ ಅಗತ್ಯವಾಗುವ ಲಕ್ಷಾಂತರ ಮಂದಿ ಅನುವಾದಕರ ಪಡೆಯನ್ನು ಸಿದ್ಧಪಡಿಸುವುದು ಇಂಥ ಸಂಸ್ಥೆಗಳ ಮತ್ತು ವಿಶ್ವವಿದ್ಯಾನಿಲಯಗಳ ಹೊಣೆಯೇ ಆಗಿರುತ್ತದೆ. ರಾಜ್ಯದ ಹಾಗೂ ಹೊರಗಿನ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಭಾಷಾಂತರ ವಿಭಾಗಗಳು ಸ್ಥಾಪಿತವಾಗಿದ್ದು, ಅವು ಕಾರ್ಯಶೀಲವಾಗುತ್ತಿರುವುದು ಶುಭಸೂಚಕವಾಗಿದೆ.

ಇದುವರೆಗೆ ವಿದ್ವಾಂಸರ ವೈಯಕ್ತಿಕ ಪಾಂಡಿತ್ಯ, ವ್ಯುತ್ಪತ್ತಿ ಮತ್ತು ಒಲವನ್ನು ಆಧರಿಸಿ ಅನುವಾದ ಕಾರ್ಯಗಳು ನಡೆಯುತ್ತಾ ಬಂದಿವೆ. ಆದರೆ ಇಂಥ ಕಾರ್ಯಗಳು ವ್ಯವಸ್ಥಿತವಾಗಿ ಹಾಗೂ ಉತ್ತಮ ಗುಣಮಟ್ಟದೊಂದಿಗೆ ನಡೆಯಬೇಕಾದ್ದು ಅಪೇಕ್ಷಣೀಯವಾಗಿರುವ ಹಿನ್ನೆಲೆಯಲ್ಲಿ, ಭಾಷಾಂತರ ಸಂಬಂಧವಾದ ಶಿಕ್ಷಣ–ಕ್ರಮಗಳನ್ನು ರೂಪಿಸುವುದು ಹಾಗೂ ದ್ವಿಭಾಷಾ ಮತ್ತು ಬಹುಭಾಷಾ ನಿಘಂಟುಗಳನ್ನು, ನುಡಿಗಟ್ಟುಗಳ ಮತ್ತು ಗಾದೆಗಳ ಕೋಶಗಳು, ಸಮಾನಾರ್ಥಕ ಮತ್ತು ಭಿನ್ನಾರ್ಥಕ ಕೋಶಗಳು ಹಾಗೂ ವಾಕ್ಯರಚನಾ ಕೈಪಿಡಿಗಳನ್ನು ಹೊರತರುವುದು – ಇವೇ ಮೊದಲಾದ ಕಾರ್ಯಗಳು ಆದ್ಯತೆಯ ಮೇರೆಗೆ ನಡೆಯಬೇಕಾಗಿವೆ. ಅನುವಾದ ಅಕಾಡೆಮಿ ಸ್ಥಾಪಿತವಾದ ಅತ್ಯಲ್ಪ ಅವಧಿಯಲ್ಲಿಯೇ

ಇತರ ಸಂಘ–ಸಂಸ್ಥೆಗಳ ಗಮನವನ್ನು ಸೆಳೆದಿದ್ದು, ಅಂತರರಾಷ್ಟ್ರೀಯ ಕನಕದಾಸ ಮಿಷನ್‌ನಂತಹ ಸಂಸ್ಥೆ ಅನುವಾದ ಅಕಾಡೆಮಿಯೊಂದಿಗೆ ಸಹಕರಿಸಲು ಮುಂದೆ ಬಂದಿರುವುದು ಗಮನಾರ್ಹವಾದ ವಿಚಾರವೇ ಆಗಿದೆ. ಅಂತೆಯೇ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕನ್ನಡದಲ್ಲಿ ಹೊರತರುವ ಬಗ್ಗೆಯೂ ಆಲೋಚನೆ ಮಾಡಲಾಗುತ್ತಿದೆ. ಹೀಗೆ ಅನುವಾದ ಅಕಾಡೆಮಿ ಅನೇಕ ದಿಕ್ಕುಗಳಲ್ಲಿ ಮುಂದುವರಿದು ಸಾಧನೆ ಮಾಡಬೇಕಾಗಿದೆ.

ಕರ್ನಾಟಕ ಸರ್ಕಾರ ಅನುವಾದ ಅಕಾಡೆಮಿಯ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿ ಅಗತ್ಯವಾದ ನೆರವನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ವಿಶೇಷ ಸಂತೋಷದ ವಿಚಾರವೇ ಆಗಿದೆ. ಅದರಲ್ಲಿಯೂ ಈ ಬಾರಿ ಸುವರ್ಣ ಕರ್ನಾಟಕ ಕಾರ್ಯಕ್ರಮಗಳ ಅಂಗವಾಗಿ ವಿಶೇಷ ಧನಸಹಾಯ ನೀಡಿರುವುದರಿಂದ ಪ್ರಸಿದ್ಧ/ಅಲಭ್ಯ ಅನುವಾದಗಳ ಮರುಪ್ರಕಟಣೆ ಕಾರ್ಯವನ್ನು ಕೈಗೊಳ್ಳುವುದು, ಮತ್ತಿತರ ಮಹತ್ವದ ಪ್ರಕಟಣೆಗಳನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಈ ದಿಕ್ಕಿನಲ್ಲಿ ನಾಡಿನ ವಿದ್ವಾಂಸರು ವಿಶೇಷವಾದ ಸಹಾಯ–ಸಹಕಾರಗಳನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ಗೌರವದ, ಸಂತೋಷದ ಹಾಗೂ ಹೆಮ್ಮೆಯ ವಿಚಾರವೇ ಆಗಿದೆ. ಈ ಸಂದರ್ಭದಲ್ಲಿ ವಿಲ್ ಡ್ಯೂರಾಂಟ್ ಅವರ ಜಗತ್–ಪ್ರಸಿದ್ಧವಾಗಿರುವ ಹಾಗೂ ಭಾರತದ ಬೇರಾವ ಭಾಷೆಯಲ್ಲೂ ಇನ್ನೂ ಬೆಳಕು ಕಾಣದಿರುವ 'ದಿ ಸ್ಟೋರಿ ಆಫ್ ಸಿವಿಲಿಜೇಷನ್' ಸಂಪುಟಗಳ ಕನ್ನಡ ಅನುವಾದವನ್ನು ಹೊರತರುವಲ್ಲಿ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅವರೂ, ಬಹಳ ಹಿಂದೆಯೇ ಇಂಗ್ಲಿಷ್‌ನಲ್ಲಿ ೧೦ ಸಂಪುಟಗಳಲ್ಲಿ ಪ್ರಕಟಣೆಗೊಂಡಿರುವ ಸಂಸ್ಕೃತ ಸಾಹಿತ್ಯದ ವಿಶಿಷ್ಟ ಕೃತಿಯಾದ ಸೋಮದೇವನ 'ಕಥಾಸರಿತ್ಸಾಗರ'ದ ಕನ್ನಡ ಅನುವಾದವನ್ನು ನೇರವಾಗಿ ಸಂಸ್ಕೃತದಿಂದ ಅನುವಾದಿಸಿ ಹೊರತರುವಲ್ಲಿ ಡಾ॥ ಪಿ.ಎಸ್.ರಾಮಾನುಜಮ್ ಅವರೂ ನೆರವು ನೀಡುತ್ತಿರುವುದು ವಿಶೇಷವಾಗಿ ಸ್ಮರಣೀಯವಾಗಿದೆ. ಕನ್ನಡ ಸಹೃದಯಲೋಕ ಅಕಾಡೆಮಿಯ ಈ ಕಾರ್ಯಚಟುವಟಿಕೆಗಳ ವಿಷಯದಲ್ಲಿ ತನ್ನ ಸಹೃದಯತೆಯನ್ನು ಮೆರೆಯುತ್ತದೆ ಎಂದು ಆಶಿಸಿದ್ದೇನೆ.

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಗೆ ಕಾರಣರಾದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರಿಗೂ, ಅಕಾಡೆಮಿಯ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿ, ಎಲ್ಲ ನೆರವನ್ನು ನೀಡುತ್ತಿರುವ ಇಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಅವರಿಗೂ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಮಹದೇವ ಪ್ರಸಾದ್ ಅವರಿಗೂ ಅಕಾಡೆಮಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ. ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಬಗೆಯ ಸಹಾಯ–ಸಹಕಾರ–ಮಾರ್ಗದರ್ಶನ ನೀಡುತ್ತಾ ಬಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಉಷಾ ಗಣೇಶ್ ಅವರಿಗೂ, ಚೈತನ್ಯಶೀಲರೂ, ದೂರಗಾಮಿ ದೃಷ್ಟಿಯನ್ನುಳ್ಳವರೂ ಆದ ಇಂದಿನ ಕಾರ್ಯದರ್ಶಿಗಳಾದ ಶ್ರೀ ಐ.ಎಂ.ವಿಠ್ಠಲಮೂರ್ತಿ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ

ಹಿಂದಿನ ಆಯುಕ್ತರುಗಳಾಗಿದ್ದ ಶ್ರೀ ಕೆ.ಆರ್.ನಿರಂಜನ್ ಮತ್ತು ಶ್ರೀ ಎಸ್.ಎಫ್. ಯೋಗಪ್ಪನವರ್ ಅವರಿಗೂ, ನಿರ್ದೇಶಕರಾಗಿರುವ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ ಅಕಾಡೆಮಿ ವಿಶೇಷ ವಂದನೆಗಳನ್ನು ಸೂಚಿಸಬಯಸುತ್ತದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಸಹಾಯ, ಸಹಕಾರ ಮತ್ತು ಮಾರ್ಗದರ್ಶನ ಮಾಡುತ್ತಿರುವ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಹಿಂದಿಯ ಸುಪ್ರಸಿದ್ಧ ಕಾದಂಬರಿಕಾರರಾಗಿದ್ದ ಶ್ರೀ ಪ್ರೇಮ್‌ಚಂದ್ ಅವರು ಹಿಂದಿಯಲ್ಲಿ ಹೊಸ ಯುಗದ ಕಹಳೆಯನ್ನೂದಿದ ಹರಿಕಾರರು. ನಿಜವಾದ ಅರ್ಥದಲ್ಲಿ ಅಖಿಲ ಭಾರತೀಯ ಲೇಖಕರಾಗಿದ್ದವರು. ಅವರ ಅನೇಕ ಕಥೆ ಕಾದಂಬರಿಗಳು ಕನ್ನಡಕ್ಕೆ ಬಂದಿವೆ – ಹಲವಾರು ಅನುವಾದಕರಿಂದ, ಹಲವಾರು ರೂಪಗಳಲ್ಲಿ. ಡಾ. ತಿಪ್ಪೇಸ್ವಾಮಿ ಅವರು ಮೈಸೂರು ವಿಶ್ವವಿದ್ಯಾನಿಲಯದ ಹಿಂದೀ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದು ಈಗ ವಿಶ್ರಾಂತರಾಗಿದ್ದಾರೆ. "ನಿರ್ಮಲಾ' ಕಾದಂಬರಿಯ ಅವರ ಈ ಅನುವಾದ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿಯನ್ನು ಗಳಿಸಿರುವ ಕೃತಿ. ಹಿಂದೀ–ಕನ್ನಡ ಭಾಷಾ–ಬಾಂಧವ್ಯದ ಕ್ಷೇತ್ರದಲ್ಲಿ ಮಹತ್ವದ ಕೆಲಸವನ್ನು ಮಾಡುತ್ತ ಬಂದಿರುವ ಡಾ. ತಿಪ್ಪೇಸ್ವಾಮಿ ಅವರು ತಮ್ಮ ಅನುವಾದವನ್ನು ಸುವರ್ಣ ಕರ್ನಾಟಕ ಮಾಲೆಯ ಅಂಗವಾಗಿ ಹೊರತರಲು ಅವಕಾಶಮಾಡಿಕೊಟ್ಟಿದ್ದಾರೆ. ಅವರ ಈ ಔದಾರ್ಯಕ್ಕಾಗಿ ಅಕಾಡೆಮಿ ಅವರಿಗೆ ಕೃತಜ್ಞವಾಗಿದೆ.

ಅನುವಾದ ಅಕಾಡೆಮಿಯ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಅಕಾಡೆಮಿಯ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೆ ಹಾಗೂ ತಮ್ಮ ಅನೇಕ ಕಾರ್ಯಗಳ ನಡುವೆಯೂ ಬಿಡುವು ಮಾಡಿಕೊಂಡು ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಡಾ. ತಿಪ್ಪೇಸ್ವಾಮಿ ಅವರಿಗೆ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೆ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**

ಅಧ್ಯಕ್ಷ

# ಪರಿವಿಡಿ


| | |
|---|---|
| ಮುನ್ನುಡಿ | v |
| ಶುಭಾಕಾಂಕ್ಷೆ | vi |
| ಹೊಸ ಹೆಜ್ಜೆ | vii |
| ಪ್ರಸ್ತಾವನೆ | ix |
| ನಿರ್ವಾಲಾ | ೧–೨೧೧ |

**Blank Page**

# ನಿರ್ಮಲಾ

**Blank Page**

# ಒಂದು

**ಹಾ**ಗೆ ನೋಡಿದರೆ ಬಾಬು ಉದಯಭಾನು ಲಾಲರ ಕುಟುಂಬದಲ್ಲಿ ಒಬ್ಬ ಚಿಕ್ಕಮ್ಮನ ಸಂಬಂಧಿ, ಇನ್ನೊಬ್ಬ ಸೋದರತ್ತೆಯ ಮಗ, ಮತ್ತೊಬ್ಬ ತಂಗಿ ಮಗ, ಮಗದೊಬ್ಬ ಅಕ್ಕನ ಮಗ, ತಾಯಿ ಕಡೆಯವರು, ತಂದೆ ಕಡೆಯವರು ಎಂದು ಹತ್ತಾರುಜನ ವಾಸಿಸುತ್ತಿದ್ದರು. ಆದರೆ ಈ ಯಾರೊಂದಿಗೂ ನಮ್ಮ ಸಂಬಂಧವಿಲ್ಲ. ಅವರು ಒಳ್ಳೆಯ ವಕೀಲರಾಗಿದ್ದರು. ಅವರು ಲಕ್ಷ್ಮಿ ಪ್ರಸನ್ನರು. ಹೀಗಾಗಿ ತಮ್ಮ ಕುಟುಂಬಕ್ಕೆ ಸಂಬಂಧಿಸಿದ ಬಡವರಿಗೆ ನೆರವು ನೀಡುವುದು ಅವರ ಕರ್ತವ್ಯವಾಗಿತ್ತು. ಪ್ರಸ್ತುತ ನಾನು ಅವರ ಇಬ್ಬರು ಹೆಣ್ಣು ಮಕ್ಕಳ ಬಗೆಗೆ ಹೇಳಬೇಕಾಗಿದೆ. ಇವರಲ್ಲಿ ದೊಡ್ಡವಳು ನಿರ್ಮಲಾ, ಚಿಕ್ಕವಳು ಕೃಷ್ಣಾ. ನಿನ್ನೆ ಮೊನ್ನೆಯವರೆಗೆ ಇಬ್ಬರೂ ಜೊತೆಯಲ್ಲಿ ಬೊಂಬೆಯಾಟ ಆಡುತ್ತಿದ್ದರು. ನಿರ್ಮಲಾಗೆ ಈಗ ಹದಿನೈದು ವರ್ಷ, ಕೃಷ್ಣಾಗೆ ಹತ್ತು ವರ್ಷ, ಆದರೆ ಸ್ವಭಾವದಲ್ಲಿ ಅಂಥಾ ವಿಶೇಷ ಅಂತರವೇನೂ ಇಲ್ಲ. ಇಬ್ಬರೂ ಚಂಚಲ ಸ್ವಭಾವಿಗಳು, ಆಟ–ಓಟಗಳಲ್ಲಿ ಆಸಕ್ತರು, ಆರಾಮವಾಗಿ ತಿಂದು–ಉಂಡು ಓಡಾಡಿಕೊಂಡಿರುವುದೆಂದರೆ ಇಬ್ಬರಿಗೂ ಎಲ್ಲಿಲ್ಲದ ಪ್ರೀತಿ. ಮನೆಕೆಲಸಕ್ಕೆ ಚಕ್ಕರ್ ಕೊಟ್ಟು ಬೊಂಬೆಗಳ ಮದುವೆಯನ್ನು ಸಂಭ್ರಮದಿಂದ ಮಾಡುವುದೆಂದರೆ ಈ ಇಬ್ಬರಿಗೂ ಎಲ್ಲಿಲ್ಲದ ಆಸಕ್ತಿ. ಒಳಗಡೆಯಿಂದ ಅಮ್ಮ ಎಷ್ಟೇ ಕರೆದರೂ ಅಮ್ಮ ಏಕೆ ಕರೆಯುತ್ತಿದ್ದಾಳೆ ಎಂಬುದನ್ನು ಕಿವಿ ಮೇಲೆ ಹಾಕಿಕೊಳ್ಳದೆ ರೂಮಿಗೆ ಹೋಗಿ ಬಚ್ಚಿಟ್ಟುಕೊಳ್ಳುತ್ತಿದ್ದರು. ಈ ಇಬ್ಬರೂ ತಮ್ಮಂದಿರೊಡನೆ ಜಗಳವಾಡುತ್ತಿದ್ದರು, ನೌಕರರನ್ನು ಬೈಯುತ್ತಿದ್ದರು. ಸರಿ, ಹೊರಗೆ ಓಲಗ ಅಥವಾ ಬ್ಯಾಂಡ್‌ನ ಸದ್ದು ಕೇಳಿ ಬಂದರೆ ಸಾಕು, ಬಾಗಿಲಿಗೆ ಬಂದು ನಿಂತುಬಿಡುತ್ತಿದ್ದರು. ಆದರೆ ಇವತ್ತು ಮನೆಯಲ್ಲಿ ನಡೆದ ಮಾತುಕತೆಯಿಂದಾಗಿ ದೊಡ್ಡವಳು ದೊಡ್ಡವಳಾಗಿದ್ದಾಳೆ. ಚಿಕ್ಕವಳು ಚಿಕ್ಕವಳಾಗಿಯೇ ಇದ್ದಾಳೆ. ಕೃಷ್ಣಾಳ ಸ್ವಭಾವ ಮೊದಲಿನಂತೆಯೇ ಇದೆ. ಆದರೆ ನಿರ್ಮಲಾ ಗಂಭೀರಳೂ ಏಕಾಂತಪ್ರಿಯಳೂ ಆಗಿದ್ದಾಳೆ. ನಾಚಿಕೆ ಅವಳನ್ನು ತಬ್ಬಿ ನಿಂತಿದೆ. ಇತ್ತೀಚೆಗೆ, ಎಷ್ಟೋ ತಿಂಗಳುಗಳಿಂದ ಬಾಬು ಉದಯಭಾನು ಲಾಲರು ನಿರ್ಮಲಾಳ ಮದುವೆಯನ್ನು ಕುರಿತಂತೆ ಮಾತುಕತೆ

ನಡೆಸಿದ್ದರು. ಇವತ್ತು ಅದಕ್ಕೊಂದು ರೂಪ ಸಿಕ್ಕಿದೆ. ಇಷ್ಟು ದಿನಗಳ ಅಲೆದಾಟಕ್ಕೊಂದು ಫಲ ಸಿಕ್ಕಿದೆ. ಬಾಬು ಬಾಲಚಂದ್ರ ಸಿನ್ಹಾರ ಜ್ಯೇಷ್ಠಪುತ್ರ ಭುವನ್ ಮೋಹನ್ ಸಿನ್ಹಾರೊಂದಿಗೆ ಮದುವೆ ನಿಶ್ಚಿತವಾಗಿದೆ. ವರನ ತಂದೆ 'ನಿಮಗೆ ಸಂತೋಷವಿದ್ದರೆ ವರದಕ್ಷಿಣೆ ಕೊಡಿ, ಇಲ್ಲವೆಂದರೆ ಬಿಡಿ, ನನಗೆ ಇದು ಮುಖ್ಯವಲ್ಲ, ಆದರೆ ಮದುವೆಗೆ ಬರುವ ಜನರ ಆದರ ಸತ್ಕಾರ ನೀವು ಎಷ್ಟು ಚೆನ್ನಾಗಿ ಮಾಡಬೇಕೆಂದರೆ ನಮ್ಮ–ನಿಮ್ಮ ಗೌರವಕ್ಕೆ ಕಿಂಚಿತ್ತೂ ಕುಂದು ಬರಬಾರದು, ಜನ ನಗಬಾರದು' ಅಂತ ಹೇಳಿದ್ದಾರೆ. ಬಾಬು ಉದಯಭಾನು ಲಾಲರು ವಕೀಲರೇನೋ ಸರಿ. ಆದರೆ ಅವರಲ್ಲಿ ಧನ ಸಂಗ್ರಹ ಮಾಡುವ ಪ್ರವೃತ್ತಿ ಇರಲಿಲ್ಲ. ವರದಕ್ಷಿಣೆ ಅಂತಕೊಡುವುದು ಅವರಿಗೂ ಸಾಧ್ಯವಿರಲಿಲ್ಲ. ಹೀಗಾಗಿ ವರನ ತಂದೆಯೇ ಸ್ವ ಇಚ್ಛೆಯಿಂದ ವರದಕ್ಷಿಣೆಯ ಬಗೆಗೆ ನಿರಾಸಕ್ತಿ ತೋರಿದಾಗ ಇವರಿಗೆ ನೆಮ್ಮದಿಯಾಯಿತು. ಯಾರ–ಯಾರ ಮುಂದೆ ಕೈ ಒಡ್ಡಬೇಕಾಗಿ ಬರುತ್ತೋ ಎಂದು ಅವರು ಹೆದರಿದ್ದರು. ಇಬ್ಬರು–ಮೂವರು ಸಾಹುಕಾರರಿಗೂ ಹೇಳಿಟ್ಟಿದ್ದರು. ಎಷ್ಟೇ ಕೈ ಹಿಡಿದು ಹಿಡಿದು ಖರ್ಚು ಮಾಡಿದರೂ ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಖರ್ಚಿನಲ್ಲಿ ಮದುವೆ ಕಾರ್ಯ ಆಗುವುದಿಲ್ಲವೆಂದು ನಂಬಿದ್ದರು. ವರನ ತಂದೆಯ ಮಾತುಗಳನ್ನು ಕೇಳಿ ಅವರಿಗೆ ತುಂಬ ಸಂತೋಷವಾಗಿತ್ತು.

ಮದುವೆಯ ಈ ಮಾತು ಮುಗ್ಧ ಬಾಲಕಿಯ ಬಾಯ್ಮುಚ್ಚಿ ಆಕೆಯನ್ನು ಒಂದು ಮೂಲೆಯಲ್ಲಿ ಕೂಡಿಸಿದೆ. ಆಕೆಯ ಹೃದಯದ ತುಂಬಾ ಒಂದು ಬಗೆಯ ಆತಂಕ ನೆಲೆಗೊಂಡಿದೆ. ಆಕೆಯ ರೋಮರೋಮದಲ್ಲಿ ಒಂದು ರೀತಿಯ ಅಜ್ಞಾತ ಭಯ ಮನೆ ಮಾಡಿದೆ. ಮುಂದೇನಾಗುವುದೋ ಏನೋ ಎಂಬ ಪ್ರಶ್ನೆ ಆಕೆಯ ಕಣ್ಮುಂದೆ ಬೃಹದಾಕಾರವಾಗಿ ನಿಂತಿದೆ. ಯುವತಿಯರ ಕಣ್ಣುಗಳಲ್ಲಿ ನಲಿದಾಡಬೇಕಾದ ಚಂಚಲ ನೋಟವಾಗಲಿ, ಅವರ ತುಟಿಗಳಲ್ಲಿ ಲಾಸ್ಯವಾಡಬೇಕಾಗಿದ್ದ ಮಧುರ ಹಾಸ್ಯವಾಗಲಿ, ಉಳಿದ ಅಂಗಾಂಗಗಳನ್ನು ಚೇತೋಹಾರಿಯಾಗಿರಿಸಬೇಕಾದ ಯಾವ ಭಾವನೆಗಳಾಗಲಿ ಆಕಾಂಕ್ಷೆಗಳಾಗಲಿ ಅವಳ ಮನಸ್ಸಿನಲ್ಲಿರಲಿಲ್ಲ. ಅವಳ ಮನಸ್ಸಿನಲ್ಲಿ ಆಸೆಗಳೇ ಇರಲಿಲ್ಲ. ಇದ್ದದ್ದು ಅನುಮಾನಗಳು, ಚಿಂತೆಗಳು ಮತ್ತು ಹೆದರಿಸುವ ಕಲ್ಪನೆಗಳು. ಯೌವನ ಅವಳಲ್ಲಿನ್ನೂ ಪೂರ್ಣವಾಗಿ ಅರಳಿರಲಿಲ್ಲ.

ಕೃಷ್ಣಾಗೆ ಗೊತ್ತಾಗುವುದು ಗೊತ್ತಿದೆ, ಗೊತ್ತಾಗದಿರುವುದು ಗೊತ್ತಿಲ್ಲ. ಗೊತ್ತಿರುವುದೆಂದರೆ–ಅಕ್ಕನಿಗೆ ಒಳ್ಳೊಳ್ಳೆಯ ಒಡವೆ–ವಸ್ತ್ರಗಳು ಬರುತ್ತವೆ, ಮನೆಯ ಮುಂದೆ ಓಲಗ ಊದುತ್ತಾರೆ. ನೆಂಟರು ಬರುತ್ತಾರೆ, ಮೆರವಣಿಗೆ, ನೃತ್ಯಗಳಾಗುತ್ತವೆ. ಇನ್ನೂ ಹೆಚ್ಚು ಗೊತ್ತಿರುವುದೆಂದರೆ ಅಕ್ಕ ಎಲ್ಲರನ್ನು ಅಪ್ಪಿಕೊಂಡು ಅಳುತ್ತಾಳೆ. ಅಕ್ಕ ಅಳುತ್ತ–ಅಳುತ್ತ ನನ್ನನ್ನು ಒಂಟಿಯಾಗಿ ಬಿಟ್ಟು ಇಲ್ಲಿಂದ ಹೊರಟು ಹೋಗುತ್ತಾಳೆ. ಅಕ್ಕ ಹೀಗೆ ತನ್ನನ್ನು ಒಂಟಿಯಾಗಿ ಬಿಟ್ಟು ಹೋಗುತ್ತಾಳೆ ಎಂಬುದನ್ನು ನೆನೆಸಿಕೊಂಡು

ಅವಳಿಗೆ ತುಂಬ ದುಃಖವಾಯಿತು. ಅವಳಿಗೆ ಗೊತ್ತಿಲ್ಲದಿರುವುದೆಂದರೆ–ಇದೆಲ್ಲ ಏನು ? ಏಕಾಗಿ ಮಾಡುತ್ತಾರೆ ! ಅಪ್ಪ–ಅಮ್ಮ ಅಕ್ಕನನ್ನು ಮನೆಯಿಂದ ಹೊರಗೆ ಕಳಿಸಲು ಯಾಕಾಗಿ ಇಷ್ಟು ಉತ್ಸುಕರಾಗಿದ್ದಾರೆ ? ಅಕ್ಕ ಯಾರಿಗೂ ಏನೂ ಅಂದಿಲ್ಲ–ಮಾಡಿಲ್ಲ. ಜಗಳವಾಡಿಲ್ಲ. ಆದರೂ ಅವಳನ್ನು ಹೊರಗೆ ಕಳಿಸುತ್ತಿದ್ದಾರೇಕೆ ? ನನ್ನನ್ನೂ ಒಂದಲ್ಲ ಒಂದು ದಿನ ಈ ಅಪ್ಪ–ಅಮ್ಮ ಮನೆಯಿಂದ ಹೊರಗೆ ಕಳಿಸದೇ ಬಿಡುತ್ತಾರೇನು ? ಆವತ್ತು ಇದೇ ರೀತಿ ನಾನು ಸಹ ಒಂದು ಮೂಲೆಯಲ್ಲಿ ಕುಳಿತು ಅಳುತ್ತೇನೇನು ? ನನ್ನ ಬಗೆಗೂ ಯಾರ ಮನಸ್ಸಿನಲ್ಲೂ ದಯೆ ಬರುವುದಿಲ್ಲವೇನು ? ಇಷ್ಟೆಲ್ಲ ಯೋಚಿಸಿ ಅವಳು ಭಯಭೀತಳಾಗಿದ್ದಳು.

ಸಂಜೆಯ ಹೊತ್ತು, ನಿರ್ಮಲಾ ಮನೆಯ ಮಾಳಿಗೆಯ ಮೇಲೆ ಹೋಗಿ ನೆಟ್ಟ ದೃಷ್ಟಿಯಿಂದ ಆಕಾಶವನ್ನೇ ದಿಟ್ಟಿಸುತ್ತಿದ್ದಳು. ಅವಳನ್ನು ನೋಡಿದರೆ ಈ ಎಲ್ಲ ಕಷ್ಟ ಕೋಟಲೆಗಳಿಂದ ಒಮ್ಮೆಗೇ ಮುಕ್ತವಾಗಲು, ರೆಕ್ಕೆಗಳಿದ್ದಿದ್ದರೆ ಆಕಾಶದತ್ತ ಹಾರಿ ಹೋಗಬಹುದಿತ್ತಲ್ಲ. ಎಂದು ಯೋಚಿಸುತ್ತಿರುವಳಂತೆ ತೋರುತ್ತಿತ್ತು. ಸಾಮಾನ್ಯವಾಗಿ ಈ ಹೊತ್ತಿನಲ್ಲಿ ಈ ಅಕ್ಕ–ತಂಗಿಯರು ಸುತ್ತಾಡಲು ಹೋಗುತ್ತಿದ್ದರು. ಉದ್ಯಾನವನದಲ್ಲಿ ಕಣ್ಣು ಮುಚ್ಚಾಲೆಯಾಟ ಆಡುತ್ತಿರುತ್ತಿದ್ದರು. ಆದರೆ ಈಗ ಕೃಷ್ಣಾಳ ಕಣ್ಣಿಗೆ ನಿರ್ಮಲಾ ಕಾಣುತ್ತಿಲ್ಲ. ಎಲ್ಲೂ ಕಾಣದಿದ್ದಾಗ ಆಕೆ ಮಾಳಿಗೆಯ ಮೇಲೆ ಹುಡುಕಿಕೊಂಡು ಬಂದಳು. ಇಲ್ಲಿ ನಿರ್ಮಲಾ ಕಣ್ಣಿಗೆ ಬೀಳುತ್ತಲೇ ನಕ್ಕು ನುಡಿದಳು. 'ನೀನು ಇಲ್ಲಿಗೆ ಬಂದು ಬಚ್ಚಿಟ್ಟುಕೊಂಡಿದ್ದೀಯಾ ? ನಾನು ಅಲ್ಲೆಲ್ಲ ಹುಡುಕಿ–ಹುಡುಕಿ ಸಾಕಾದೆ, ಬಾ ಹೋಗಿ ಆಡೋಣ....'

ನಿರ್ಮಲಾ ನಿರಾಸಕ್ತಿಯಿಂದ ಹೇಳಿದಳು– 'ನೀನು ಹೋಗು, ನಾನು ಬರೊಲ್ಲ.'

ಕೃಷ್ಣಾ : 'ನಾನು ನಿನ್ನ ಬಿಟ್ಟು ಹೋಗಲ್ಲ ಅಕ್ಕಾ, ಬಾ ಹೋಗೋಣ. ನೋಡು, ಗಾಳಿ ಎಷ್ಟು ತಣ್ಣಗೆ ಬೀಸುತ್ತಿದೆ ಇವತ್ತು.'

ನಿರ್ಮಲಾ : 'ನನಗೆ ಮನಸ್ಸಿಲ್ಲ, ನೀನು ಹೋಗು.'

ಕೃಷ್ಣಾಳ ಕಣ್ಣುಗಳು ತುಂಬಿ ಬಂದವು, ನಡುಗುವ ಧ್ವನಿಯಲ್ಲಿ ಹೇಳಿದಳು–

'ಇವತ್ತು ನೀ ಯಾಕೆ ಬರೊಲ್ಲ ಹೇಳು ? ನನ್ನ ಹತ್ತಿರ ನೀನು ಸರಿಯಾಗಿ ಯಾಕೆ ಮಾತ್ನಾಡ್ತಿಲ್ಲ ? ನನ್ನ ಕಣ್ಣು ತಪ್ಪಿಸಿ ಅಲ್ಲಿ–ಇಲ್ಲಿ ಯಾಕೆ ಅವಿಸಿಕೊಳ್ತಿದ್ದೀಯಾ ? ನಾನು ಒಬ್ಬಳೇ ಇದ್ದರೆ ನನಗೆ ಭಯವಾಗುತ್ತೆ. ನೀನು ಬರದೇ ಇದ್ದರೆ ನಾನೂ ಹೋಗಲ್ಲ. ಇಲ್ಲೇ ನಿನ್ನ ಜೊತೇಲೇ ಕುಳಿತು ಬಿಡ್ತೇನೆ.'

ನಿರ್ಮಲಾ : 'ನಾನು ಹೊರಟು ಹೋದ ಮೇಲೆ ನೀನು ಏನು ಮಾಡ್ತೀಯಾ ? ಆಗ ನೀನು ಯಾರ ಜೊತೆ ಆಡ್ತೀಯಾ ? ಯಾರ ಜೊತೆ ಸುತ್ತುತ್ತೀಯಾ ? ಹೇಳು ನೋಡೋಣ ?'

ಕೃಷ್ಣಾ : 'ನಾನು ನಿನ್ನ ಜೊತೇಲೆ ಬರ್‍ತೀನಿ, ನಾನು ಒಬ್ಬಳೇ ಇಲ್ಲಿ ಇರಲಾರೆ.'

ನಿರ್ಮಲಾ ಮುಗುಳ್ನಕ್ಕು ಹೇಳಿದಳು–'ಅಮ್ಮ ನಿನಗೆ ಬಿಡುವುದಿಲ್ಲ.'

ಕೃಷ್ಣಾ : 'ಹಾಗಾದರೆ ನಾನು ನಿನಗೆ ಬಿಡುವುದಿಲ್ಲ. ನಾನು ಎಲ್ಲಿಗೂ ಹೋಗುವುದಿಲ್ಲಾಂತ ನೀನು ಅಮ್ಮನಿಗೆ ಏಕೆ ಹೇಳಬಾರ್‍ದು ?'

ನಿರ್ಮಲಾ : 'ನಾನು ಹೇಳ್ತಾನೇ ಇದ್ದೀನಿ, ಯಾರು ಕೇಳಿಸಿಕೊಳ್ತಿದ್ದಾರೆ ?'

ಕೃಷ್ಣಾ : 'ಹಾಗಾದರೆ ಇದು ನಿನ್ನ ಮನೆ ಅಲ್ಲವೇನು ?'

ನಿರ್ಮಲಾ : 'ಅಲ್ಲ. ನನ್ನ ಮನೆ ಆಗಿದ್ದಿದ್ದರೆ ಹೀಗೆ ಯಾರಾದ್ದೂ ಬಲವಂತವಾಗಿ ಹೊರಗೆ ಕಳಿಸಲು ಆಗುತ್ತಿತ್ತೇನು ?'

ಕೃಷ್ಣಾ : 'ಹಾಗಾದರೆ ಇದೇ ರೀತಿ ಯಾವತ್ತಾದರೂ ಒಂದು ದಿನ ನನ್ನನ್ನೂ ಹೀಗೆ ಕಳಿಸಿಬಿಡ್ತಾರ ?'

ನಿರ್ಮಲಾ : 'ಇಲ್ಲ, ನೀನು ಇಲ್ಲಿಯೇ ಕುಳಿತಿರ್‍ತೇನೆ ಅಂತ ಅಂದು ಕೊಂಡಿದ್ದೀಯೇನು ? ನಾವು ಹೆಣ್ಣುಮಕ್ಕಳು. ನಮಗೆ ನಮ್ಮ ಮನೆ ಅನ್ನುವುದಿಲ್ಲ.'

ಕೃಷ್ಣಾ : 'ಚಂದರ್‌ನನ್ನೂ ಕಳಿಸಿ ಬಿಡ್ತಾರೇನು ?'

ನಿರ್ಮಲಾ : 'ಚಂದರ್ ಗಂಡು ಮಗ, ಅವನನ್ನು ಯಾರು ಕಳಿಸ್ತಾರೆ ?'

ಕೃಷ್ಣಾ : 'ಹಾಗಾದರೆ ಹೆಣ್ಣು ಮಕ್ಕಳು ತುಂಬಾ ಕೆಟ್ಟವರಿರಬೇಕು.'

ನಿರ್ಮಲಾ : 'ಕೆಟ್ಟವರಾಗಿಲ್ಲದಿದ್ದರೆ ಅವರನ್ನು ಮನೆಯಿಂದ ಏಕಾಗಿ ಓಡಿಸುತ್ತಿದ್ದರು, ಹೇಳು ?'

ಕೃಷ್ಣಾ : 'ಚಂದರ್ ಎಷ್ಟು ತುಂಟ ಅಂತ ಗೊತ್ತ ಅಕ್ಕ ? ಆದರೂ ಅವನನ್ನು ಯಾರೂ ಓಡಿಸುತ್ತಿಲ್ಲ ? ನಾನು–ನೀನು ಎಷ್ಟು ಒಳ್ಳೆಯವರು ! ಯಾವುದೇ ತುಂಟಾಟ ಮಾಡುತ್ತಿಲ್ಲ, ಆದರೂ....'

ಇದ್ದಕ್ಕಿದ್ದಂತೆಯೇ ಚಂದರ್...ದಢ...ದಢ ಸದ್ದು ಮಾಡುತ್ತ ಮಾಳಿಗೆಯ ಮೇಲೆ ಹತ್ತಿ ಬಂದವನೇ ನಿರ್ಮಲಾಳನ್ನು ನೋಡಿ, 'ಓಹೋ! ನೀವಿಲ್ಲಿ ಕುಳಿತಿದ್ದೀರಾ ! ಮನೆ ಮುಂದೆ ಓಲಗ ಬಾರಿಸ್ತಾರೆ, ಅಕ್ಕ ಮದುಮಗಿತ್ತಿಯಾಗ್ತಾಳೆ. ಪಲ್ಲಕ್ಕಿ ಏರ್‍ತಾಳೆ, ಓ...ಓ' ಎಂದು ಕಿರುಚಾಡಿದ.

ಚಂದರ್ ಪೂರ್ತಿ ಹೆಸರು ಚಂದ್ರಭಾನು ಸಿನ್ಹಾ ಅಂತ ಇವನು ನಿರ್ಮಲಾಳಿಗಿಂತಲೂ ಮೂರು ವರ್ಷ ಚಿಕ್ಕವನು ಹಾಗೂ ಕೃಷ್ಣಾಳಿಗಿಂತಲೂ ಎರಡು ವರ್ಷ ದೊಡ್ಡವನು.

ನಿರ್ಮಲಾ : 'ಚಂದರ್, ನನಗೆ ಹೀಗೆ ಚುಡಾಯಿಸಿದರೆ ಈಗಲೇ ಹೋಗಿ ಅಮ್ಮನಿಗೆ ಹೇಳ್ತೀನಿ ನೋಡು.'

ಚಂದರ್ : 'ಯಾಕಕ್ಕಾ ಕೋಪ ಮಾಡ್ಕೊಳ್ತಿ ? ಓಲಗದ ಸದ್ದನ್ನು ನೀನು ಕೇಳು. ಓ...ಓ..... ಈಗ ನೀನು ಮದುಮಗಿತ್ತಿ...ಹಸೆ ಮೇಲೆ ಕುಳಿತ್ಕೊಳ್ಳೋ ಹೆಣ್ಣು. ಹೇ

ಕಿಶ್ನಿ...ಓಲಗ ಹೇಗಿರುತ್ತೆ ಗೊತ್ತಾ ? ನೀನೆಂದೂ ಅಂಥ ಓಲಗ ನುಡಿಸುವುದನ್ನು ಕೇಳಿಯೇ ಇಲ್ಲ !

ಕೃಷ್ಣಾ : 'ಬ್ಯಾಂಡಿಗಿಂತಲೂ ಚೆನ್ನಾಗಿರುತ್ತ ?'

ಚಂದರ್ : 'ಹೌದೌದು, ಬ್ಯಾಂಡಿಗಿಂತಲೂ ಸಾವಿರಪಟ್ಟು ಚೆನ್ನಾಗಿರುತ್ತೆ ಲಕ್ಷಪಟ್ಟು ಚೆನ್ನಾಗಿರುತ್ತೆ. ನೀನು ಯಾವತ್ತೋ ಒಂದ್ಸಾರಿ ಬ್ಯಾಂಡ್ ಕೇಳಿ ಅದಕ್ಕಿಂತಲೂ ಚೆನ್ನಾಗಿ ಬಾರಿಸುವವರು ಇನ್ನಿಲ್ಲ ಅಂದುಕೊಂಡಿದ್ದೀಯಾ ಅಲ್ಲವಾ ? ಓಲಗದವರು ಕೆಂಪು ಬಣ್ಣದ ಬಟ್ಟೆ ತೊಟ್ಟು...ಕಪ್ಪು ಬಣ್ಣದ ಟೋಪಿಗಳನ್ನೂ ಹಾಕಿರುತ್ತಾರೆ. ಅವರು ಎಷ್ಟು ಚೆನ್ನಾಗಿ ಕಾಣಿಸ್ತಾರೆ ಅಂತ ಗೊತ್ತಾ ? ಪಟಾಕಿಗಳನ್ನೂ ಹಚ್ತಾರೆ...ಏರೋಪ್ಲೇನ್ ಬಿಟ್ಟರೆ ಅವು ಆಕಾಶದ ತನಕ ಹೋಗುತ್ತವೆ. ಬಣ್ಣಬಣ್ಣದ ಪಟಾಕಿಗಳು....ತುಂಬಾ ಮಜಾ ಇರುತ್ತೆ'

ಕೃಷ್ಣಾ : 'ಅಣ್ಣಾ ಹೇಳೋ....ಇನ್ನೂ ಏನೇನು ಇರುತ್ತೆ ಅಂತ ?'

ಚಂದರ್ : 'ಈಗ ನನ್ನ ಜೊತೆ ಬಂದ್ರೆ ಎಲ್ಲ ಹೇಳ್ತೀನಿ. ಎಂಥೆಂಥಾ ತಮಾಷೆಗಳಿರುತ್ತವೆ ಅಂದರೆ ಅವನ್ನು ನೀನು ನೋಡೇ ಆನಂದಿಸಬೇಕು. ಆಕಾಶದಲ್ಲಿ ತೇಲಾಡುವ ಸುಂದರಿಯರು...ಅಪ್ಸರೆಯರು ಇವರನ್ನೆಲ್ಲಾ ನೀನು ನೋಡಬಹುದು.'

ಕೃಷ್ಣಾ : 'ನಡಿ ಹೋಗೋಣ, ಆದರೆ ಒಂದು ಮಾತು, ನೀನು ಹೇಳದೆ ಹೋದರೆ ನಿನಗೆ ಹೊಡಿತೇನೆ'

ಚಂದ್ರಭಾನು ಮತ್ತು ಕೃಷ್ಣಾ ಹೊರಟು ಹೋದರು. ನಿರ್ಮಲಾ ಅಲ್ಲಿಯೇ ಒಂಟಿಯಾಗಿ ಕುಳಿತಿದ್ದಳು. ಕೃಷ್ಣಾ ಅಲ್ಲಿಂದ ಹೊರಟು ಹೋದದ್ದರಿಂದ ಆ ಕ್ಷಣ ನಿರ್ಮಲಾಳಿಗೆ ತುಂಬಾ ದುಃಖವಾಯಿತು. ತಾನು ತನ್ನ ಪ್ರಾಣಕ್ಕಿಂತಲೂ ಮಿಗಿಲಾಗಿ ಪ್ರೀತಿಸುತ್ತಿದ್ದ ಕೃಷ್ಣಾ ಹೀಗೆ ನನ್ನನ್ನು ಒಂಟಿಯಾಗಿ ಬಿಟ್ಟು ಹೋದಳಲ್ಲ ಎಂದು ಅವಳಿಗೆ ಬೇಸರವಾಯಿತು. ಇದೇನು ಅಂಥ ದೊಡ್ಡ ವಿಷಯವಲ್ಲವಾದರೂ ದುಃಖಿಸುವ ಹೃದಯ ಮತ್ತು ಅಳುವ ಕಣ್ಣುಗಳು ಸುಮ್ಮನಿರಬೇಕಲ್ಲ ! ಇದಕ್ಕೆ ಬೀಸುವ ಗಾಳಿಗೂ ಸ್ಪಂದಿಸುವ ಶಕ್ತಿ ಇದೆ. ನಿರ್ಮಲಾ ಅದೇ ರೀತಿ ಬಹಳ ಹೊತ್ತಿನವರೆಗೆ ಕುಳಿತುಕೊಂಡು ಅಳುತ್ತಿದ್ದಳು. ತಮ್ಮ–ತಂಗಿ, ತಂದೆ–ತಾಯಿ ಎಲ್ಲರೂ ನನ್ನನ್ನು ಇದೇ ರೀತಿ ಮರೆಯುವರು. ನನ್ನಿಂದ ಕಣ್ತಪ್ಪಿಸಿಕೊಳ್ಳುವರು. ಆಗ ಇವರನ್ನು ನೋಡಲೂ ನಾನು ಚಡಪಡಿಸಬೇಕಾಗಬಹುದೇನೋ !

ಉದ್ಯಾನವನದಲ್ಲಿ ಹೂಗಳು ಅರಳಿದ್ದವು, ಸುವಾಸನೆ ತೇಲಿ ಬರುತ್ತಿತ್ತು. ಚೈತ್ರಮಾಸದ ಹಿತವಾದ ಗಾಳಿ ಬೀಸುತ್ತಿತ್ತು. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿದ್ದವು. ನಿರ್ಮಲಾ ಶೋಕತಪ್ತಳಾಗಿ ಯೋಚಿಸುತ್ತ ಮಲಗಿದ್ದಳು. ನಿದ್ದೆ ಹತ್ತುತ್ತಿದ್ದಂತೆಯೇ ಅವಳ ಮನಸ್ಸು ಕನಸಿನ ಲೋಕದಲ್ಲಿ ವಿಹರಿಸಲಾರಂಭಿಸಿತು. ಆ ಕನಸಿನಲ್ಲಿ ಆಕೆ ಕಂಡದ್ದು– 'ಒಂದು ನದಿ. ನದಿಯಲ್ಲಿ ಬಿರುಸಾದ ಅಲೆಗಳು ಉಕ್ಕಿ ಬರುತ್ತಿವೆ. ನಿರ್ಮಲಾ ನದಿಯ

ದಂಡೆಯಲ್ಲಿ ನಿಂತು ದೋಣಿಯನ್ನು ಕಾಯುತ್ತಿದ್ದಾಳೆ. ಸಂಜೆಯ ಹೊತ್ತು, ಕತ್ತಲು ಯಾವುದೋ ಭಯಂಕರ ಜಂತುವಿನಂತೆ ಮೇಲೇರಿ ಬರುತ್ತಿದೆ. ಆಕೆ ಈ ನದಿಯನ್ನು ಹೇಗೆ ದಾಟುವುದು, ಹೇಗೆ ಮನೆಯನ್ನು ಸೇರುವುದು ಎಂದು ಯೋಚಿಸುತ್ತಿದ್ದಾಳೆ. ಆಗ, ಇದ್ದಕ್ಕಿದ್ದಂತೆಯೇ ಸುಂದರವಾದ ನೌಕೆಯೊಂದು ದಡದತ್ತ ಬರುವುದು ಕಾಣುತ್ತದೆ. ಅವಳು ಸಂತೋಷದಿಂದ ಕುಣಿಯುತ್ತಾಳೆ. ನೌಕೆ ದಡದ ಬಳಿ ಬರುತ್ತಿದ್ದಂತೆಯೇ ಅವಳು ಅದರಲ್ಲಿ ಕಾಲಿಡಲು ಮುಂದೆ ಹೆಜ್ಜೆ ಇಡುತ್ತಾಳೆ. ಆಗ ನೌಕೆಯ ಅಂಬಿಗ–'ನಿನಗಿಲ್ಲಿ ಸ್ಥಳವಿಲ್ಲ. ಹೋಗು, ದೂರ ಸರಿ' ಅನ್ನುತ್ತಾನೆ. ಅವಳು ಅಂಬಿಗನನ್ನು ಓಲೈಸಲು ಪ್ರಯತ್ನಿಸುತ್ತಾಳೆ, ಕಾಲಿಗೆ ಬೀಳುತ್ತಾಳೆ, ಅಳುತ್ತಾಳೆ. ಆದರೂ ಆ ಅಂಬಿಗ ನಿಷ್ಠೂರವಾಗಿ 'ನಿನಗಿಲ್ಲಿ ಜಾಗವಿಲ್ಲ' ಎಂದು ಹೇಳುತ್ತಾನೆ. ಮುಂದಿನ ಆ ಕ್ಷಣದಲ್ಲಿ ಆ ನೌಕೆ ಅಲ್ಲಿಂದ ಹೊರಟುಹೋಗುತ್ತದೆ. ಅವಳು ಅಲ್ಲಿಯೇ ನಿಂತು ಕಿರುಚಿಕೊಳ್ಳುತ್ತ ಅಳಲು ಪ್ರಾರಂಭಿಸುತ್ತಾಳೆ. ನದಿಯ ದಂಡೆಯ ಮೇಲೆ ಇಡೀ ರಾತ್ರಿ ಒಬ್ಬೊಂಟಿಯಾಗಿ ಹೇಗೆ ಇರುವುದೆಂದು ಯೋಚಿಸಿ, ನೀರಿಗೆ ಜಿಗಿದು ಈಜಿ ಹೋಗಿ ಆ ನೌಕೆಯನ್ನು ಹಿಡಿಯಬೇಕೆಂದು ಆಕೆ ಯೋಚಿಸುವಷ್ಟರಲ್ಲಿಯೇ ಯಾರೋ ಕೂಗಿದಂತಾಗುತ್ತದೆ– 'ನಿಲ್ಲುನಿಲ್ಲು, ನದಿ ತುಂಬಾ ಆಳವಾಗಿದೆ, ಮುಳುಗಿ ಹೋಗುತ್ತೀ.... ಆ ನೌಕೆ ನಿನಗಲ್ಲ, ಇಗೋ ನಾನು ಬರುತ್ತಿದ್ದೇನೆ. ನನ್ನ ನೌಕೆಯಲ್ಲಿ ಕುಳಿತುಕೋ. ನಿನ್ನನ್ನು ನಾನು ಆ ದಂಡೆಗೆ ತಲುಪಿಸುತ್ತೇನೆ.' ಈ ಮಾತುಗಳು ಎಲ್ಲಿಂದ ಬಂದುವು ಎಂದು ಆಕೆ ತಿರುಗಿ ಅತ್ತ–ಇತ್ತ ಸುತ್ತ ನೋಡಿದಳು. ಭಯ ಅವಳನ್ನು ಬಿಗಿದಪ್ಪಿತು. ಸ್ವಲ್ಪ ಹೊತ್ತಿನ ನಂತರ ಒಂದು ಚಿಕ್ಕ ಮುರುಕಲು ದೋಣಿಯೊಂದು ಹತ್ತಿರ–ಹತ್ತಿರ ಬರುತ್ತಿರುವಂತೆ ಕಂಡಿತು. ಆ ದೋಣಿ ಎಷ್ಟರ ಮಟ್ಟಿಗೆ ಹಾಳಾಗಿತ್ತೆಂದರೆ ಅದರಲ್ಲಿ ಸುರಕ್ಷತೆ ಒಂದಿಷ್ಟೂ ಇರಲಿಲ್ಲ. ಅದರ ತುಂಬಾ ನೀರು ತುಂಬಿತ್ತು. ಅದರಲ್ಲಿ ಕುಳಿತಿದ್ದ ಒಬ್ಬ ಮನುಷ್ಯ ದೋಣಿಯಿಂದ ನೀರನ್ನು ತನ್ನ ಬೊಗಸೆಗಳಿಂದ ಹೊರಗೆ ಚಿಮ್ಮುತ್ತಿದ್ದ. 'ಈ ದೋಣಿ ಹೀಗಿದೆ. ನನ್ನನ್ನು ಆ ದಡ ಸೇರಿಸುತ್ತದೆಯೇ'? ಎಂದು ಆಕೆ ಕೇಳುತ್ತಾಳೆ. ಆಗ ಆ ಮನುಷ್ಯ 'ನಿನಗಾಗಿ ಈ ದೋಣಿಯನ್ನು ಕಳಿಸಿದ್ದಾರೆ, ಬಂದು ಕುಳಿತುಕೋ' ಅನ್ನುತ್ತಾನೆ. ಕುಳಿತುಕೊಬೇಕೋ, ಕುಳಿತುಕೊ ಬೇಡವೋ ಎಂದು ಆಕೆ ಒಂದು ಕ್ಷಣ ಯೋಚಿಸುತ್ತಾಳೆ. ಕೊನೆಗೆ ಕುಳಿತುಕೊಂಡೇಬಿಡೋಣ ಎಂದು ತೀರ್ಮಾನಿಸುತ್ತಾಳೆ. ಇಲ್ಲಿ ಒಂಟಿಯಾಗಿ ರೋದಿಸುವುದಕ್ಕಿಂತ ದೋಣಿಯಲ್ಲಿ ಕುಳಿತಿರುವುದು ಎಷ್ಟೋ ಮೇಲಲ್ಲವೆ ಎಂದು ತೀರ್ಮಾನಿಸುತ್ತಾಳೆ. ಯಾವುದೋ ಭಯಂಕರ ಪ್ರಾಣಿಯ ಹೊಟ್ಟೆಯ ಪಾಲಾಗುವುದಕ್ಕಿಂತ ನದಿಯಲ್ಲಿ ಮುಳುಗಿ ಸಾಯುವುದೇ ವಾಸಿ ಎಂದು ಭಾವಿಸುತ್ತಾಳೆ. ಇಷ್ಟರ ಮೇಲೆ ಈ ದೋಣಿ ನದಿ ದಾಟಿಸಲೂ ಬಹುದು. ಆಕೆ ಇಷ್ಟೆಲ್ಲಾ ಯೋಚಿಸಿ–ಯೋಚಿಸಿ ತನ್ನ ಪ್ರಾಣವನ್ನು ಅಂಗೈಯಲ್ಲಿಟ್ಟುಕೊಂಡು ದೋಣಿಯಲ್ಲಿ ಕುಳಿತುಕೊಳ್ಳುತ್ತಾಳೆ. ಕೊಂಚ ಹೊತ್ತಿನವರೆಗೆ ದೋಣಿ ಅತ್ತಿತ್ತ ತೂಗಾಡತ್ತಾ ಮುಂದೆ

ಸಾಗುತ್ತದೆ. ದೋಣಿ ಮುಂದೆ ಮುಂದೆ ಸಾಗಿದಂತೆ ನೀರು ದೋಣಿಯನ್ನು ತುಂಬುತ್ತಾ ಹೋಗುತ್ತದೆ. ಆಕೆಯೂ ಅಂಬಿಗನ ಜೊತೆಗೂಡಿ ತನ್ನ ಬೊಗಸೆಗಳಿಂದ ನೀರನ್ನು ಹೊರಗೆ ಚಿಮ್ಮಲಾರಂಭಿಸುತ್ತಾಳೆ. ನೀರು ಒಳಗೆ ನುಗ್ಗುತ್ತಲೇ ಹೋಗುತ್ತದೆ. ಕೊನೆಗೆ ಇಬ್ಬರೂ ನೀರಿನಲ್ಲಿ ಲಯವಾಗುತ್ತಾ ಹೋಗುತ್ತಾರೆ. ಕೈಗಳು ಮಾತ್ರ ಮುಳುಗಬೇಕಾಗಿವೆ. ದೋಣಿ ತನ್ನ ಹಿಡಿತವನ್ನು ಕಳೆದುಕೊಂಡು ಹೇಗೆಂದರೆ ಹಾಗೆ 'ಗಿರ್ರನೆ ಸುತ್ತಲಾರಂಭಿಸುತ್ತದೆ. ಇನ್ನೇನು ಅದು ಮುಳುಗಿತು, ಮುಳುಗಿತು ಅನ್ನುವಷ್ಟರಲ್ಲಿ ಯಾವುದೋ ಕಾಣದ ಶಕ್ತಿಯ ಸಹಾಯಕ್ಕಾಗಿ ಆಕೆ ತನ್ನ ಎರಡೂ ಕೈಗಳನ್ನು ಮುಂದೆ ಮಾಡುತ್ತಾಳೆ. ದೋಣಿ ಜಲ ಸಮಾಧಿಯಾಗಿ ಬಿಡುತ್ತದೆ. ಆಕೆ ಕಾಲುಗಳು ನೀರಿನ ಸೆಳೆತಕ್ಕೆ ಸಿಕ್ಕುತ್ತವೆ.' ಅವಳು ಕಿಟ್ಟನೆ ಕಿರುಚಿಕೊಂಡಳು. ಹೀಗೆ ಕಿರುಚಿಕೊಳ್ಳುತ್ತಿದ್ದಂತೆಯೇ ಅವಳಿಗೆ ಎಚ್ಚರವಾಯಿತು. ಕಣ್ಣು ಬಿಟ್ಟು ನೋಡಿದಾಗ, ತಾಯಿ ಎದುರಿಗೆ ನಿಂತಿದ್ದಳು. ನಿಂತು ನಿರ್ಮಲಾಳ ಭುಜಗಳನ್ನು ಹಿಡಿದು ಅಲ್ಲಾಡಿಸಿ ಎಚ್ಚರಿಸುತ್ತಿದ್ದಳು.

## ಎರಡು

ಬಾಬು ಉದಯಭಾನು ಲಾಲರ ಮನೆ ಗುಜುಗುಟ್ಟುವ ಸಂತೆಯಾಗಿದೆ. ಮನೆಯ ಅಂಗಳದಲ್ಲಿ ಅಕ್ಕಸಾಲಿಗ ಒಡವೆಗಳನ್ನು ಮಾಡುತ್ತ ಕಟ–ಕಟ ಎಂದು ಸುತ್ತಿಗೆಯಿಂದ ಸದ್ದು ಮಾಡುತ್ತಿದ್ದಾನೆ ; ರೂಮಿನಲ್ಲಿ ದರ್ಜಿ ಬಟ್ಟೆಗಳನ್ನು ಹೊಲಿಯುತ್ತಿದ್ದಾನೆ ; ಎದುರುಗಡೆಯ ಬೇವಿನ ಮರದ ಕೆಳಗೆ ಬಡಗಿ ಮಂಚಗಳನ್ನು ಮಾಡುತ್ತಿದ್ದಾನೆ ; ಪಕ್ಕದ ಹೆಂಚಿನ ಮನೆಯಲ್ಲಿ ಸಿಹಿತಿಂಡಿ ಮಾಡಲು ಒಲೆಗಳನ್ನು ಹಾಕುತ್ತಿದ್ದಾರೆ.

ಬರಲಿರುವ ಅತಿಥಿಗಳಿಗೆ ಪ್ರತ್ಯೇಕವಾದ ಮನೆಯನ್ನು ಮಾಡಲಾಗಿದ್ದು, ಪ್ರತಿಯೊಬ್ಬ ಅತಿಥಿಗೂ ಒಂದೊಂದು ಮಂಚ, ಒಂದೊಂದು ಕುರ್ಚಿ, ಒಂದೊಂದು ಮೇಜು ನೀಡಲು ವ್ಯವಸ್ಥೆಯಾಗುತ್ತಿದೆ. ದಿಬ್ಬಣ ಬರಲು ಇನ್ನೂ ಒಂದು ತಿಂಗಳಿದೆ. ಆದರೆ ಸಿದ್ಧತೆಗಳು ಈಗಿನಿಂದಲೇ ಶುರುವಾಗಿವೆ. ಮದುವೆಯ ವ್ಯವಸ್ಥೆಯನ್ನು ಕುರಿತಂತೆ ದಿಬ್ಬಣದಲ್ಲಿ ಬರುವವರು ತುಟಿ ಎರಡು ಮಾಡಲು ಅವಕಾಶವಾಗದಂತೆ ಅವರನ್ನು ಸತ್ಕರಿಸಬೇಕು. ಇಂಥಾ ಒಂದು ಮನೆಯ ಮದುವೆಗೆ ನಾವು ಹೋಗಿದ್ದೆವು ಎಂದು ಬಂದವರು ಜೀವನ ಪರ್ಯಂತ ನೆನಪಿಟ್ಟುಕೊಳ್ಳುವಂತೆ ವ್ಯವಸ್ಥೆ ಮಾಡಬೇಕೆಂಬ ಯೋಚನೆ ಇವರದು.

ಇನ್ನೊಂದು ಮನೆ ತುಂಬಾ ಪಾತ್ರೆಗಳು ಬಿದ್ದಿವೆ–ಟೀ ಸೆಟ್‌ಗಳು, ತಿಂಡಿಗೆ

ತಟ್ಟೆಗಳು, ಬಟ್ಟಲುಗಳು, ಲೋಟಗಳು ಅದೆಷ್ಟೋ ರಾಶಿರಾಶಿ ಬಿದ್ದಿವೆ. ಇಷ್ಟು ದಿನ ಮಂಚದ ಮೇಲೆ ಆರಾಮವಾಗಿ ಮಲಗಿ ಹುಕ್ಕಾ ಸೇದುತ್ತಿದ್ದವರೆಲ್ಲ ಈಗ ತುಂಬಾ ತನ್ಮಯತೆಯಿಂದ, ಕೆಲಸ ಕಾರ್ಯಗಳಲ್ಲಿ ತಲ್ಲೀನರಾಗಿದ್ದಾರೆ. ತಮ್ಮ ಅಸ್ತಿತ್ವದ ಸಾರ್ಥಕತೆಯನ್ನು ಸಾಧಿಸಿ ತೋರಿಸಲು ಇದಕ್ಕಿಂತಲೂ ಉತ್ತಮವಾದ ಅವಕಾಶ ಅವರಿಗಿನ್ನೆಲ್ಲಿಂದ ಬರಬೇಕು ? ಒಬ್ಬ ಹೋಗಬೇಕಾದ ಕಡೆ ಐದು ಜನ ಹೋಗುತ್ತಿದ್ದಾರೆ. ಕೆಲಸಕ್ಕಿಂತಲೂ ಹೆಚ್ಚಾಗಿ ಗಲಾಟೆ ಜಾಸ್ತಿಯಾಗುತ್ತಿದೆ. ಒಂದು ಸಣ್ಣ ಮಾತಿಗೂ ಗಂಟೆ ಗಟ್ಟಲೆ ಚರ್ಚೆಯಲ್ಲಿ ತೊಡಗುತ್ತಿದ್ದಾರೆ. ಕೊನೆಗೆ ವಕೀಲರೇ ಬಂದು ನಿರ್ಣಯ ನೀಡಿ ಹೋಗಬೇಕಾಗುತ್ತದೆ.

ಒಬ್ಬ ಈ ತುಪ್ಪ ಚೆನ್ನಾಗಿಲ್ಲ ಅಂದರೆ, ಇನ್ನೊಬ್ಬ 'ಇದಕ್ಕಿಂತಲೂ ಉತ್ತಮವಾದ ತುಪ್ಪ ಪೇಟೆಯಲ್ಲಿ ಸಿಕ್ಕಿದರೆ ನನ್ನ ಮೂಗನ್ನು ಮೂರು ತುಂಡಿಗೆ ಕುಯ್ಯಿಸಿ ಕೊಳ್ಳುತ್ತೇನೆ' ಅಂತಾನೆ, ಮತ್ತೊಬ್ಬ– 'ಇದರಲ್ಲೇನೋ ಒಂಥಾರ ವಾಸನೆ ಬರುತ್ತಿದೆ' ಅಂದರೆ, ಮಗದೊಬ್ಬ–'ಸರಿ, ನಿನ್ನ ಮೂಗೇ ಕೊಳೆತು ಹೋಗಿದೆ. ತುಪ್ಪ ಅಂದ್ರೆ ನಿನಗೇನು ಗೊತ್ತು, ಹೋಗಲೇ' ಅಂತಾನೆ. ಅಷ್ಟೇ ಅಲ್ಲ, 'ನೀನು ತುಪ್ಪದ ಮುಖ ಕಂಡಿರುವುದು ಈ ಮನೆಗೆ ಬಂದ ಮೇಲೆ ! ಇಲ್ಲಿಗೆ ಬರದೇ ಇದ್ದಿದ್ದರೆ ತುಪ್ಪದ ಮುಖದರ್ಶನವೂ ನಿನಗಾಗುತ್ತಿರಲಿಲ್ಲ' ಅಂತ ದಬಾಯಿಸುತ್ತಾನೆ. ಈ ವಿಚಾರಕ್ಕೆ ಮಾತಿಗೆ ಮಾತು ಬೆಳೆದು ಜಗಳವಾಗುವ ಸ್ಥಿತಿಗೆ ಬಂದಾಗ ವಕೀಲರು ಬಂದು ಸಮಾಧಾನ ಮಾಡಿ ಹೋಗುತ್ತಾರೆ.

ರಾತ್ರಿ ಒಂಬತ್ತರ ಸಮಯ, ಉದಯಭಾನು ಲಾಲರು ಒಳಗೆ ಕುಳಿತು ಖರ್ಚಿನ ಲೆಕ್ಕವನ್ನು ನೋಡುತ್ತಿದ್ದರು. ಸಾಮಾನ್ಯವಾಗಿ ಅವರು ದಿನವೂ ಹೀಗೆ ಲೆಕ್ಕವನ್ನು ನೋಡುತ್ತಿರುತ್ತಿದ್ದರು. ದಿನವೂ ಆ ಲೆಕ್ಕದಲ್ಲಿ ಏನಾದರೂ ಸ್ವಲ್ಪ ಪರಿವರ್ತನೆ ಅಥವಾ ಹೆಚ್ಚು ಕಡಿಮೆ ಆಗುತ್ತಲೇ ಇರುತ್ತಿತ್ತು. ಎದುರಿಗೆ ಕಲ್ಯಾಣಿ ಹುಬ್ಬು ಗಂಟಿಕ್ಕಿಕೊಂಡು ನಿಂತಿದ್ದಳು. ಬಾಬು ಸಾಹೇಬರು ಬಹಳ ಹೊತ್ತಿನ ನಂತರ ತಲೆ ಎತ್ತಿದಾಗ ಕಂಡದ್ದು ಕಲ್ಯಾಣಿಯ ನೆಟ್ಟ ನೋಟ. ಬಾಬು ಸಾಹೇಬರು ಹೇಳಿದರು– 'ಹತ್ತು ಸಾವಿರಕ್ಕಿಂತಲೂ ಕಡಿಮೆಯಾಗುವುದಿಲ್ಲ. ಬಹುಶಃ ಇನ್ನೂ ಹೆಚ್ಚಾದರೂ ಆಗಬಹುದು.'

ಕಲ್ಯಾಣಿ : 'ಈ ಹತ್ತು ದಿನಗಳಲ್ಲಿ ಐದು ಸಾವಿರ ಇದ್ದದ್ದು ಹತ್ತು ಸಾವಿರ ಆಯ್ತು. ಇನ್ನೊಂದು ತಿಂಗಳಲ್ಲಿ ಒಂದು ಲಕ್ಷ ಆದರೂ ಆಯಿತು.'

ಉದಯಭಾನು : 'ನಾನು ಏನು ಮಾಡಲಿ ಹೇಳು ? ಜನ ನಗುವುದು ಕಂಡರೆ ನನಗೂ ಆಗುವುದಿಲ್ಲ. ಯಾವುದಕ್ಕಾದರೂ ಕೊರತೆ ಬಿದ್ದರೆ ಈ ಜನ ಏನಂತಾರೆ ಗೊತ್ತೇನು ? 'ಆಳು ನೋಡಿದರೆ ಅಲಂಕಾರ, ಬಾಳ್ ನೋಡಿದರೆ ಬಡಿದುಕೊಂಡ ಹಾಗೆ' ಅಂತ ಆಡಿಕೊಳ್ತಾರೆ. ಇದೆಲ್ಲ ನನಗೆ ಸರಿಹೋಗಲ್ಲ. ಅಷ್ಟಕ್ಕೂ ವರನ ಕಡೆಯವರು

ವರದಕ್ಷಿಣೆ ಅಂತ ಒಂದು ಬಿಡಿಗಾಸನ್ನೂ ಕೇಳಿಲ್ಲ. ಅಂದ ಮೇಲೆ ಬಂದವರ–ಹೋದವರ ಆದರ–ಸತ್ಕಾರವನ್ನು ಮಾಡುವುದರಲ್ಲಿ ಯಾವುದೇ ಕೊರತೆಯುಂಟಾಗದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ.'

ಕಲ್ಯಾಣಿ : 'ಬ್ರಹ್ಮ ಈ ಬ್ರಹ್ಮಾಂಡವನ್ನು ಸೃಷ್ಟಿಸಿದಲಾಗಾಯ್ತು ಇಂದಿನವರೆಗೆ ಯಾರೂ ವರನ ಕಡೆಯ ದಿಬ್ಬಣದವರನ್ನು ಸಂತೃಪ್ತಿಗೊಳಿಸಿದವರಿಲ್ಲ. ಯಾವುದಾದರೊಂದು ದೋಷ ಹುಡುಕಲು, ಇಲ್ಲವೇ ನಿಂದನೆ ಮಾಡಲು ಅವರಿಗೆ ಒಂದಲ್ಲ ಒಂದು ಅವಕಾಶ ಸಿಕ್ಕಿಯೇ ಬಿಡುತ್ತೆ. ತನ್ನ ಮನೆಯಲ್ಲಿ ತಿನ್ನಲಿಕ್ಕೆ ಗತಿ ಇಲ್ಲದವನು, ದಿಬ್ಬಣದ ಜೊತೆ ಬಂದನೆಂದರೆ ರಾಜಕುಮಾರ ಆಗಿ ಬಿಡುತ್ತಾನೆ. 'ಸುಗಂಧಿತ ಎಣ್ಣೆ ಇಲ್ಲ, ಯಾವುದೋ ಎರಡಾಣೆ ಸೋಪು ತಂದಿದ್ದಾರೆ. ನೌಕರರು ಮಾತು ಕೇಳೋಲ್ಲ, ಲಾಟೀನುಗಳಲ್ಲಿ ಹೊಗೆ ಜಾಸ್ತಿ ಬರುತ್ತೆ ಕುರ್ಚಿಗಳಲ್ಲಿ ತಿಗಣೆಗಳಿವೆ, ಮಂಚಗಳು ಕಿರ್‌ಕಿರ್ ಅಂತ ಸದ್ದು ಮಾಡುತ್ತವೆ, ಇಲ್ಲಿ ಗಾಳಿ ಚೆನ್ನಾಗಿ ಬರೋಲ್ಲ—' ಅಂತ ನೂರಾರು ದೂರುಗಳು ಇದ್ದೇ ಇರುತ್ತವೆ. ಇಂಥಾ ದೂರುಗಳನ್ನು ನೀವು ಎಷ್ಟು ಅಂತ ನಿಲ್ಲಿಸ್ತೀರಿ ? ಒಂದು ವೇಳೆ ಯಾವುದೇ ದೂರಿಗೂ ಅವಕಾಶ ವಾಗಲಿಲ್ಲಾಂತ ಇಟ್ಕೊಳ್ಳಿ. ಆಗ ಬೇಕೂಂತ ದೋಷಗಳನ್ನು ಹುಡುಕೇ ಹುಡುಕುತ್ತಾರೆ. 'ಈ ಎಣ್ಣೆ ಸೂಳೇರು ಹಾಕುವಂಥಾದ್ದು, ನಮಗೆ ಸಾದಾ ಎಣ್ಣೆ ಬೇಕಾಗಿತ್ತು. ಈ ಮನುಷ್ಯ ನಾವು ಸೋಪಿನ ಮುಖ ಕಾಣೆವು ಅಂತ ಇಷ್ಟು ಬೆಲೆಬಾಳುವ ಸೋಪು ಕಳಿಸಿ ತನ್ನ ದೌಲತ್ ಪ್ರದರ್ಶಿಸುತ್ತಿದ್ದಾನೆ. ಈ ಮನೆಯ ನೌಕರ–ಚಾಕರರು ಯಮದೂತರು, ಯಾವಾಗಲೂ ತಲೆ ಮೇಲೆ ಕುಳಿತಿರ್ತಾರೆ, ಲಾಟೀನ್‌ಗಳ ಬೆಳಕು ಕಣ್ಣಿಗೆ ಹೊಡೆಯುತ್ತೆ. ಒಂದು ಹತ್ತು ದಿನ ಈ ಬೆಳಕಿನಲ್ಲಿ ಕುಳಿತೆವು ಅಂದ್ರೆ ನಮ್ಮ ಕಣ್ಣುಗಳೇ ಹೊರಟು ಹೋಗುತ್ತವೆ. ಇದೆಲ್ಲ ಏನು ದಿಮಾಕು. ಅಲ್ಪನಿಗೆ ಐಶ್ವರ್ಯ ಬಂದಿರಬೇಕು, ಅದಕ್ಕೆ ಇಷ್ಟೆಲ್ಲ ಜೋರು' ಹೀಗೆಲ್ಲ ಟೀಕೆ ಟಿಪ್ಪಣಿ ಮಾಡೇ ಮಾಡ್ತಾರೆ. ಅದಕ್ಕೇನೇ ನಾನು ಹೇಳೋದು, ದಿಬ್ಬಣದಲ್ಲಿ ಬಂದವರಿಗೆಲ್ಲ ಇಷ್ಟು ಅದ್ದೂರಿ ಸತ್ಕಾರ ಬೇಡವೇ ಬೇಡಾಂತ.'

ಉದಯಭಾನು : 'ಅಂದ್ರೆ ನಾನು ಏನು ಮಾಡಬೇಕೂಂತಿಯಾ ನೀನು ?'

ಕಲ್ಯಾಣಿ : 'ಐದು ಸಾವಿರಕ್ಕಿಂತಲೂ ಹೆಚ್ಚು ಖರ್ಚು ಮಾಡಲ್ಲ ಅಂತ ಮೊದಲು ನೀವು ತೀರ್ಮಾನ ಮಾಡಿಕೊಳ್ಳಿ. ಮನೇಲಿ ಐಶ್ವರ್ಯವೇನು ಕೊಳ್ಳೇ ಹೋಗುತ್ತಿದೆಯೇನು ಇಷ್ಟೆಲ್ಲ ಮಾಡಲಿಕ್ಕೆ ! ಎಲ್ಲವನ್ನೂ ಸಾಲದ ಭರವಸೆಯ ಮೇಲೆಯೇ ಮಾಡಬೇಕು. ಜೀವನಪೂರ್ತಿ ತೀರಿಸಿದರೂ ತೀರದಷ್ಟು ಸಾಲವನ್ನು ಏಕಾದರೂ ಮಾಡಬೇಕು ? ಇನ್ನೂ ಮಕ್ಕಳಿದ್ದಾರೆ. ಅವರಿಗೂ ಒಂದಿಷ್ಟು ಇರಲಿ.'

ಉದಯಭಾನು : 'ಅಂದರೆ ನಾನು ಇವತ್ತೇ ಸತ್ತು ಹೋಗ್ತೀನೇನು ? ನೀನು ಇಲ್ಲಿ ಕುಳಿತುಕೊಂಡು ಇದನ್ನೇ ಬಯಸುತ್ತಿದ್ದಿಯೇನು'?

ಕಲ್ಯಾಣಿ : 'ಈ ಮಾತಿಗೆ ಇಷ್ಟು ಕೋಪ ಮಾಡಿಕೊಳ್ಳುವ ಆವಶ್ಯಕತೆ ಏನಿಲ್ಲ. ಸಾಯುವುದು–ಬದುಕುವುದು ಯಾರ ಕೈಲಿದೆ ? ಹುಟ್ಟಿದ ಮೇಲೆ ಎಲ್ಲರೂ ಒಂದು ದಿನ ಸಾಯಲೇಬೇಕು. ಅಮರತ್ವ ಪಡೆದುಕೊಂಡು ಯಾರು ಬಂದಿದ್ದಾರೆ ? ಯಾರು ಸತ್ತರೂ, ಬದುಕಿದರೂ ಆಗುವುದನ್ನು ತಡೆಯೋಕೆ ಆಗುತ್ತೇನು ? ದಿನವೂ ಕಣ್ಣಾರೆ ನೋಡ್ತಿಲ್ಲವೇ ನಾನು ? ಅಪ್ಪ ಸತ್ತಾಂದ್ರೆ ಆತನ ಮಕ್ಕಳು ಬೀದಿ ಪಾಲಾಗ್ತಾರೆ. ಹಾಗೇಕೆ ಮಾಡ್ಕೋಬೇಕು ?'

ಉದಯಭಾನು ಕೋಪದಿಂದ ಹೇಳಿದರು—'ಅಂದ್ರೆ ನಾನು ಸಾಯುವ ದಿನಗಳು ಹತ್ತಿರ ಬಂದಿವೆ ಅಂತ ನಾನು ತಿಳಿದುಕೊಳ್ಳಲೆ ? ಇದು ನಿನ್ನ ಭವಿಷ್ಯವಾಣಿ ! ಗಂಡ ಬದುಕಿರುವುದರಿಂದ ಹೆಂಡತಿಗೆ ಬೇಸರವಾಗುವುದನ್ನು ನಾನು ಇದುವರೆಗೆ ಕೇಳಿರಲಿಲ್ಲ. ಇವತ್ತೇ ಕೇಳಿದ್ದು ಈ ಹೊಸ ಮಾತನ್ನ. ಮುಂಡೆಯಾಗುವುದರಲ್ಲೂ ಹೆಂಗಸಿಗೆ ಸುಖವಿರಬಹುದು ಅಂತ ಕಾಣುತ್ತೆ!'

ಕಲ್ಯಾಣಿ : 'ಪ್ರಪಂಚ ಹೀಗೆ ಅಂತಾ ನಿಮ್ಮ ಹತ್ತಿರ ಯಾವುದಾದರೂ ಒಂದು ಮಾತು ಹೇಳಿದರೆ ನನ್ನ ಮೇಲೆ ಹೀಗೇಕೆ ವಿಷ ಕಾರ್ತೀರಾ ? ನನಗೆ ಯಾರೂ ದಿಕ್ಕಿಲ್ಲ ನಿಮ್ಮ ಅನ್ನದ ಮೇಲೆ ಬಿದ್ದಿದ್ದೀನಿ ಅಂತಲೋ ಅಥವಾ ಇನ್ನೇನಾದರೂ ಇದೆಯೋ ? ಏನಾದರೂ ಹೇಳಿದರೆ ಸಾಕು ನಾನು ಮನೇಲಿರೋ ರಂಡೆ ಅಂತ ತಿಳ್ಕೊಂಡು ಉರಿದು ಬೀಳ್ತೀರಾ. ಈ ಸಂಸಾರದ ಜೊತೆ ಹಿಟ್ಟು–ಬಟ್ಟೆದಷ್ಟೇ ಸಂಬಂಧಾನ ನನ್ನದು ? ನಾನು ಸುಮ್ಮನೆ ಇದ್ದಷ್ಟೂ ತುಳಿತೀರಾ. ಬಂದವರು–ಹೋದವರು ಮನೆ ಲೂಟಿ ಮಾಡಲಿ, ಹೆಂಡ–ಶರಾಬು ಅಂತ ಇದ್ದ ಬದ್ದ ಹಣವನ್ನೆಲ್ಲ ದೋಚಲಿ, ನಾನು ಮಾತ್ರ ತುಟಿ ಎರಡು ಮಾಡಬಾರದು. ಇದನ್ನೆಲ್ಲ ಮುಂದೆ ನನ್ನ ಮಕ್ಕಳು ತಾನೇ ಅನುಭವಿಸಬೇಕು ?'

ಉದಯಭಾನು : 'ಹೆಂಡತಿ ಹೇಳ್ದಂಗೆ ಕೇಳುವ ಗಂಡಸು ನಾನಲ್ಲ.'

ಕಲ್ಯಾಣಿ : 'ಹಾಗೇನೇ ಗಂಡಸು ಚಪ್ಪಲೀಲಿ ಹೊಡೆದರೂ ಹೊಡೆಸಿಕೊಂಡಿರುವ ಹೆಂಗಸು ನಾನಲ್ಲ.'

ಉದಯಭಾನು : 'ದುಡಿದು ತರೋನು ನಾನು. ನನ್ನಿಷ್ಟ ಬಂದಂತೆ ನಾನು ಖರ್ಚು ಮಾಡ್ತೇನೆ. ಇದರಲ್ಲಿ ಯಾರಿಗೂ ಬಾಯಿ ಹಾಕುವ ಅಧಿಕಾರವಿಲ್ಲ.'

ಕಲ್ಯಾಣಿ : 'ಅಂದ ಮೇಲೆ ನಿಮ್ಮ ಮನೆ ನೀವೇ ಇಟ್ಕೊಳ್ಳಿ ನನಗೆ ಗೌರವ ಇಲ್ಲದೇ ಇರುವ ಮನೆಗೆ ಇಗೋ ದೂರದಿಂದಲೇ ನಮಸ್ಕಾರ. ಈ ಮನೇಲಿ ನಿಮಗೆಷ್ಟು ಅಧಿಕಾರವಿದೆಯೋ ಅಷ್ಟೇ ಅಧಿಕಾರ ನನಗೂ ಇದೆ. ಒಂದು ಸಾಸುವೆ ಕಾಳಿನಷ್ಟೂ ಹೆಚ್ಚಿಲ್ಲ. ಕಡಿಮೆಯಿಲ್ಲ. ನೀವು ನಿಮ್ಮ ಮಟ್ಟಿಗೆ ರಾಜ ಆಗಿದ್ದರೆ, ನಾನು ನನ್ನ ಮಟ್ಟಿಗೆ ರಾಣೀನೆ. ನಿಮ್ಮ ಮನೆ ನಿಮಗೇ ಇರಲಿ. ನನಗೂ ಹೊಟ್ಟೆ ಬಟ್ಟೆಗೆ ಏನೂ ಕಡಿಮೆ ಇಲ್ಲ. ನಿಮ್ಮ ಮಕ್ಕಳು ಇವು. ಬದುಕಿಸಾದರೂ ಬದುಕಿಸಿ, ಸಾಯಿಸಾದರೂ ಸಾಯಿಸಿ. ಕಣ್ಣು

ಮರೆಯಾಗಿ ಹೋಗುವುದರಿಂದ ನನಗೆ ಕಿಂಚಿತ್ತೂ ನೋವಾಗೊಲ್ಲ, ಕಣ್ಣೆದುರಿಗೆ ಇದ್ದರೆ ತಾನೇ ಕಣ್ಣೀರು !'

ಉದಯಭಾನು : ಅಂದರೆ, ನೀನಿಲ್ಲದೆ ಹೋದರೆ, ನನ್ನ ಮನೆಯೇ ಇರೊಲ್ಲ ಅಂತ ನೀನು ಭಾವಿಸಿದ್ದೀಯೇನು ? ನಾನೊಬ್ಬನೇ ಇಂಥ ಹತ್ತು ಮನೆಗಳನ್ನು ಬೇಕಾದರೂ ನೋಡಿಕೊ ಬಲ್ಲೆ'

ಕಲ್ಯಾಣಿ : 'ಏನಂದಿರಿ ? ಒಂದು ತಿಂಗಳಲ್ಲಿ ಈ ಮನೆ ಹಾಳಾಗಿ ಹೋಗದಿದ್ರೆ ನಾನು ಏನು ಹೇಳಿದ್ದೆ ಅಂತ ನೆನಪು ಮಾಡಿಕೊಳ್ಳಿ.'

ಇಷ್ಟು ಹೇಳುತ್ತ-ಹೇಳುತ್ತ ಕಲ್ಯಾಣಿಯ ಮುಖ ಕೆಂಡ ಕಾರುತ್ತಿತ್ತು. ಆಕೆ ಸರ್ರನೆ ಅಲ್ಲಿಂದ ಎದ್ದು ತನ್ನ ರೂಮಿನ ಕಡೆಗೆ ಧಾವಿಸಿದಳು. ವಕೀಲರು ಮೊಕದ್ದಮೆಗಳನ್ನು ವಾದಿಸುವುದರಲ್ಲಿ ಚತುರರೇನೋ ಸರಿ. ಆದರೆ ಹೆಂಗಸರ ಸ್ವಭಾವದ ಪರಿಚಯ ಅವರಿಗೆ ಅಷ್ಟಕ್ಕಷ್ಟೇ ಇತ್ತು. ಈ ಒಂದು ವಿಷಯದಲ್ಲಿ ಮನುಷ್ಯ ಮುದುಕನಾದರೂ ಎಳೆ ನಿಂಬೆಕಾಯಿಯಾಗಿಯೇ ಇರುತ್ತಾನೆ. ಅವರು ಈಗಲಾದರೂ ಕೊಂಚ ಮೃದುವಾಗಿ, ಕಲ್ಯಾಣಿಯ ಕೈಹಿಡಿದು ಕೂಡಿಸಿಕೊಂಡಿದ್ದರೆ ಆಕೆ ಬಹುಶಃ ಹಾಗೆ ನೋಡುತ್ತಿರಲಿಲ್ಲ, ಇಷ್ಟನ್ನಂತೂ ಅವರಿಂದ ಮಾಡಲಾಗಲಿಲ್ಲ, ಅದರ ಬದಲು ಅವಳು ಹೋಗುತ್ತಿದ್ದಾಗ ಇನ್ನೊಂದು ಬಾಣ ಬಿಟ್ಟರು–'ತವರಿನ ಅಹಂಕಾರವಲ್ಲವೆ ನಿನಗೆ ?'

ಈ ಮಾತನ್ನು ಕೇಳಿಸಿಕೊಂಡ ಕಲ್ಯಾಣಿ ಬಾಗಿಲ ಬಳಿ ಒಮ್ಮೆಗೇ ನಿಂತು ಗಂಡನನ್ನು ತನ್ನ ಕೆಂಗಣ್ಣುಗಳಿಂದ ನೋಡುತ್ತ ಅಲ್ಲಿಂದಲೇ ಬಿರುಸಾಗಿ ನುಡಿದಳು– 'ನನ್ನ ಹಣೆಬರಹಕ್ಕೆ ನನ್ನ ತವರಿನವರು ಏಕೆ ಬರ್ತಾರೆ ? ಅಷ್ಟಕ್ಕೂ ಅವರ ಅನ್ನಕ್ಕೆ ದುಂಬಾಲು ಬೀಳುವಷ್ಟು ನೀಚಳಲ್ಲ ನಾನು."

ಉದಯಭಾನು : 'ಹಾಗಾದರೆ ಎಲ್ಲಿಗೆ ಹೋಗ್ತಿದ್ದೀಯಾ ನೀನು ?'

ಕಲ್ಯಾಣಿ : 'ಇದನ್ನು ಕೇಳೋಕೆ ನೀವ್ಯಾರು ? ಪರಮಾತ್ಮನ ಸೃಷ್ಟಿಯಲ್ಲಿ ಅಸಂಖ್ಯ ಜೀವಿಗಳಿಗೆ ಜಾಗವಿದೆ ಅಂದ ಮೇಲೆ ನನಗೆ ಜಾಗವಿಲ್ಲ ವೇನು ?'

ಇಷ್ಟು ಹೇಳಿ ಕಲ್ಯಾಣಿ ರೂಮಿನಿಂದ ಹೊರಗೆ ಬಂದಳು. ಅಂಗಳಕ್ಕೆ ಬಂದು ಅವಳು ಒಂದು ಸಾರಿ ಈ ಎಲ್ಲಕ್ಕೂ ನಕ್ಷತ್ರಗಳು ಸಾಕ್ಷಿಯೇನೋ ಎಂಬಂತೆ ಆಕಾಶದತ್ತ ನೋಡಿದಳು.

ರಾತ್ರಿಯ ಹನ್ನೊಂದು ಗಂಟೆ. ಈ ಹೊತ್ತಿನಲ್ಲಿ ನಿರ್ದಯದಿಂದ ಅವಳನ್ನು ಹೊರಗೆ ಕಳಿಸಲಾಗುತ್ತಿದೆ. ಮನೆ ತುಂಬ ನಿಶ್ಯಬ್ದ ಆವರಿಸಿದೆ. ಆಕೆಯ ಇಬ್ಬರು ಗಂಡು ಮಕ್ಕಳು ಅವಳ ರೂಮಿನಲ್ಲೇ ಮಲಗುತ್ತಿದ್ದರು. ಅವಳು ಪುನಃ ರೂಮಿಗೆ ಬಂದಳು. ಚಂದ್ರಭಾನು ಮಲಗಿದ್ದಾನೆ. ಎಲ್ಲರಿಗಿಂತ ಚಿಕ್ಕವನಾದ ಸೂರ್ಯಭಾನು

ಎದ್ದು ಮಂಚದ ಮೇಲೆ ಕುಳಿತಿದ್ದಾನೆ. ತಾಯಿಯನ್ನು ನೋಡುತ್ತಿದ್ದಂತೆಯೇ ಅವನು 'ಎಲ್ಲಿ ಹೋಗಿದ್ದೆ ಅಮ್ಮ'? ಅಂದ.

ಕಲ್ಯಾಣಿ ದೂರದಲ್ಲೇ ನಿಂತು ಹೇಳಿದಳು–'ಎಲ್ಲಿಗೂ ಹೋಗಿರಲಿಲ್ಲ ಮಗು, ನಿನ್ನ ತಂದೆ ಹತ್ತಿರ ಇದ್ದೆ.'

ಸೂರ್ಯಭಾನು : 'ನೀನು ಹೋದೆ, ನನಗೆ ತುಂಬಾ ಭಯವಾಗಿತ್ತು. ನೀನು ಅಲ್ಲಿಗೆ ಯಾಕೆ ಹೋಗಿದ್ದೆ ಹೇಳು ?'

ಇಷ್ಟು ಹೇಳಿ ಅಮ್ಮನ ತೋಳಿಗೆ ಬರಲು ಅವನು ಕೈಗಳನ್ನು ಮುಂದೆ ಚಾಚಿದ. ಕಲ್ಯಾಣಿಗೆ ಈಗ ತನ್ನ ದುಃಖ ತಡೆಯಲಾಗಲಿಲ್ಲ. ಮಾತೃ ವಾತ್ಸಲ್ಯದ ಸುಧಾ ಪ್ರವಾಹದಲ್ಲಿ ಅವಳ ಬೆಂದ ಹೃದಯ ಕರಗಿಹೋಯಿತು. ಕೋಪದ ತಾಪದಿಂದ ಬಾಡಿ ಹೋಗಿದ್ದ ಹೃದಯವಂತಿಕೆಯ ಕೋಮಲ ಎಲೆಗಳು ಈಗ ಪುನಃ ನಳನಳಿಸಿದವು. ಕಣ್ಣುಗಳು ತುಂಬಿ ಬಂದುವು. ಅವಳು ಮಗುವನ್ನು ಎತ್ತಿಕೊಂಡು ಎದೆಗಪ್ಪಿಕೊಳ್ಳುತ್ತ 'ನೀನು ನನ್ನನ್ನು ಏಕೆ ಕರೆಯಲಿಲ್ಲ ಮಗು ?' ಅಂದಳು.

ಸೂರ್ಯಭಾನು : 'ಕರೆದೆ, ಆದರೆ ನನ್ನ ಕೂಗು ನಿನ್ನ ಕಿವಿಗೆ ಕೇಳಿಸಲಿಲ್ಲ. ನನ್ನನ್ನು ಬಿಟ್ಟು ಎಲ್ಲೂ ಹೋಗೋಲ್ಲ ತಾನೇ ? ಹೇಳಮ್ಮ.'

ಕಲ್ಯಾಣಿ : 'ಇಲ್ಲ ನನ್ನ ರಾಜ. ಇನ್ನೆಲ್ಲೂ ಹೋಗಲ್ಲ.'

ಇಷ್ಟು ಹೇಳಿ ಕಲ್ಯಾಣಿ ಸೂರ್ಯಭಾನುವನ್ನು ಜೊತೆಯಲ್ಲಿ ಮಲಗಿಸಿಕೊಂಡು ತಾನೂ ಮಲಗಿದಳು. ಅಮ್ಮನನ್ನು ಅಪ್ಪಿಕೊಂಡು ಮಗು ಭಯರಹಿತವಾಗಿ ನಿದ್ರಿಸಿತು. ಈಗ ಕಲ್ಯಾಣಿಯ ಮನಸ್ಸು ಉಯ್ಯಾಲೆಯಾಡತೊಡಗಿತು. ಗಂಡನ ಮಾತುಗಳು ನೆನಪಾಗುತ್ತಿದ್ದಂತೆಯೇ ಈ ಮನೆಗೆ ತಿಲಾಂಜಲಿ ಕೊಟ್ಟು ಹೊರಟುಬಿಡೋಣವೇ ಎಂದನ್ನಿಸುತ್ತಿತ್ತು. ಆದರೆ ಮಕ್ಕಳ ಮುಖಗಳನ್ನು ನೋಡುತ್ತಿದ್ದಂತೆಯೇ ಹೃದಯ ವಾತ್ಸಲ್ಯದಿಂದ ಒತ್ತಿ ಬರುತ್ತಿತ್ತು. ಮಕ್ಕಳನ್ನು ಯಾರ ಮೇಲೆ ಬಿಟ್ಟು ಹೋಗಲಿ ? ನನ್ನ ಮಕ್ಕಳನ್ನು ಯಾರು ಸಾಕುತ್ತಾರೆ ? ಯಾರ ಮಕ್ಕಳಾಗಿ ಇವರು ಬೆಳೆಯುತ್ತಾರೆ? ಬೆಳಗಾಗೆದ್ದು ಇವರಿಗೆ ಹಾಲು ಕುಡಿಸುವವರು ಯಾರು? ತಿಂಡಿ ತಿನಿಸುವವರು ಯಾರು? ಇವರು ಎದ್ದಾಗ ಏಳುವವರು, ಮಲಗಿದಾಗ ಮಲಗುವವರು ಯಾರು? ಪಾಪ, ನಾನಿಲ್ಲದಿದ್ದರೆ ಬೀದಿ ಬಾಯಿಗೆ ತುತ್ತಾಗುತ್ತಾರೆ. ಇಲ್ಲ, ಇಲ್ಲ ಮಕ್ಕಳೇ, ನಾನು ನಿಮ್ಮನ್ನು ಬಿಟ್ಟು ಹೋಗುವುದಿಲ್ಲ. ನಿಮಗಾಗಿ ನಾನು ಏನನ್ನು ಬೇಕಾದರೂ ಸಹಿಸಿಕೊಳ್ಳುತ್ತೇನೆ. ನಿರಾದರ, ಅಪಮಾನ, ಬೈಗುಳ, ಕಿರಿಕಿರಿ, ನೋವು ಏನೆಲ್ಲವನ್ನೂ ನಿಮಗಾಗಿ ನಾನು ಸಹಿಸಿಕೊಳ್ಳುತ್ತೇನೆ.

ಕಲ್ಯಾಣಿಯೇನೋ ಮಗುವನ್ನು ಮಲಗಿಸಿಕೊಂಡು ಮಲಗಿದಳು. ಆದರೆ ಬಾಬುಸಾಹೇಬರಿಗೆ ನಿದ್ದೆ ಬರಲಿಲ್ಲ. ತಮಗೆ ಆಘಾತಗೊಳಿಸಿದ ಯಾವುದೇ ಮಾತನ್ನು ಅಷ್ಟು ಸುಲಭವಾಗಿ ಮರೆಯುವವರಾಗಿರಲಿಲ್ಲ ಅವರು, ಓಹೋ ! ಇಷ್ಟು ದೌಲೋ

ಇವಳಿಗೆ ! ನಾನೇ ಇವಳ ಹೆಂಡತಿ ಅಂತ ತಿಳಿದುಕೊಂಡುಬಿಟ್ಟಿದ್ದಾಳೆ. ಇವಳ ಮುಂದೆ ಬಾಯಿ ಬಿಡುವುದೇ ಕಷ್ಟ. ಈಗ ನಾನು ಇವಳ ಗುಲಾಮನಾಗಿರಬೇಕೇನು? ಈ ಮನೆಯಲ್ಲಿ ಇವಳೊಬ್ಬಳಿರಬೇಕು. ಬೇರೆಯವರನ್ನೆಲ್ಲ ಹೊರಗಟ್ಟಬೇಕು. ಹೊಟ್ಟೆ ಉರಿದುಕೊಂಡು ಸಾಯ್ತಾಳೆ. ನನ್ನನ್ನು ಸಾಯಿಸಿ ತಾನು ಆರಾಮವಾಗಿರಬೇಕೆಂದು ಬಯಸುತ್ತಿದ್ದಾಳೆ. ಯಾರು ಎಷ್ಟೇ ಬಚ್ಚಿಟ್ಟರೂ ಹೊಟ್ಟೆಯೊಳಗಿನ ಮಾತು ಬಾಯಿಗೆ ಬಂದೇ ಬಿಡುತ್ತೆ

ಎಷ್ಟೋ ದಿನಗಳಿಂದ ನಾನೂ ನೋಡುತ್ತಿದ್ದೇನೆ. ನನಗೆ ಬಾಯಿಗೆ ಬಂದ ಹಾಗೆ ಅಪದ್ದ ಮಾತುಗಳನ್ನು ಆಡುತ್ತಿದ್ದಾಳೆ. ಇವಳಿಗೆ ತವರಿನ ಅಹಂ ಇರಬಹುದು. ಆದರೆ ನನಗ್ಗೊತ್ತು ಅಲ್ಲೂ ಇವಳನ್ನು ಕ್ಯಾರೆ ಅನ್ನುವುದಿಲ್ಲ. ಅಲ್ಲಿಗೆ ಹೋದರೆ ಇವಳಿಗೆ ಹಿಟ್ಟಿನ ಬೆಲೆ ಏನೂಂತ ಗೊತ್ತಾಗುತ್ತದೆ. ಅಲ್ಲಿಂದ ಪುನಃ ಅಳುತ್ತ ಇಲ್ಲಿಗೇ ಬರಬೇಕಾಗುತ್ತೆ. ಅಬ್ಬಾ ! ಏನು ಅಹಂಕಾರ ಇವಳಿಗೆ. ತಾನೊಬ್ಬಳೇ ಸಂಸಾರ ಮಾಡುತ್ತಿರುವುದು ಅಂತ ತಿಳಿದುಕೊಂಡಿದ್ದಾಳೆ. ನಾಲ್ಕು ದಿನ ನಾನು ಹೊರಗೆ ಹೋದರೆ ಅಮ್ಮಣ್ಣಿಗೆ ಗೊತ್ತಾಗುತ್ತೆ ಕಷ್ಟ ಅಂದ್ರೆ ಏನೂಂತ. ಒಂದು ಸಾರಿ ಇವಳ ಅಹಂಕಾರವನ್ನು ಮಟ್ಟ ಹಾಕಲೇಬೇಕು. ವೈಧವ್ಯ ಎಂದರೇನು ಎಂಬುದನ್ನು ಇವಳಿಗೆ ತೋರಿಸಬೇಕು. ನನಗೆ ಬೈಯುವಷ್ಟು ಧೈರ್ಯ ಇವಳಿಗೆ ಎಲ್ಲಿಂದ ಬಂತೋ ಕಾಣೆ. ತಾನು ಏನು ಅಂದರೂ ನಾನು ಕೇಳಿಕೊಂಡು ಬಿದ್ದಿರ್ತೇನೆ ಅಂತ ಅವಳು ತಿಳಿದುಕೊಂಡಿದ್ದಾಳೆ. ಇವಳು ಹಾಗೆ ಭಾವಿಸಿದ್ದರೆ ನಾನು ಅದಕ್ಕೆ ಸೊಪ್ಪು ಹಾಕುವವನಲ್ಲ. ಇಂಥ ಹೆಂಗಸರಿರುವ ಮನೆ ಹಾಳಾಗಿ ಹೋಗಲಿ. ಇದು ಮನೆಯೋ, ಇಲ್ಲ, ನರಕಾನೋ ? ಗಂಡಸು ಹೊರಗೆ ದುಡಿದು ದಣಿದು ಸಾಕಾಗಿ ಬಂದರೆ ಅವನಿಗೆ ಮನೆಯಲ್ಲಿ ನೆಮ್ಮದಿ ಸಿಗಬೇಕು. ಆದರೆ ಇಲ್ಲಿ ನೆಮ್ಮದಿ ಬದಲು ಬೈಗಳು ಸಿಗುತ್ತವೆ. ಈ ಬೈಗುಳಗಳನ್ನು ಕೇಳಿ–ಕೇಳಿ ಸಾಕಾಗಿದೆ. ಈಕೆ ನನ್ನ ಸಾವನ್ನು ಬಯಸಿ ವ್ರತ ಮಾಡುತ್ತಿದ್ದಾಳೆ. ಇವತ್ತಿಗೆ ನಮ್ಮ ಇಪ್ಪತ್ತೈದು ವರ್ಷಗಳ ದಾಂಪತ್ಯ ಜೀವನದ ಪರಿಸಮಾಪ್ತಿ ಆಯಿತು ಅಂತ ಕಾಣುತ್ತದೆ. ಇಲ್ಲಿಂದ ಇನ್ನು ಹೊರಡುವುದೇ ಲೇಸು. ಇವಳ ಎಲ್ಲ ಅಹಂಕಾರ ನುಚ್ಚು ನೂರಾಗಿದೆ, ದೌಲು ಇಳಿದಿದೆ ಅಂತ ಗೊತ್ತಾದ ಮೇಲೆಯೇ ನಾನು ಇಲ್ಲಿಗೆ ಬರುವುದು. ಐದಾರು ದಿನಗಳಾಗಲಿ, ಆಗ ನಿನಗೂ ಗಂಡ ಅಂದರೆ ಏನೂಂತ ಗೊತ್ತಾಗುತ್ತೆ ನೋಡ್ತಿರು...

ಹೀಗೆ ಯೋಚಿಸುತ್ತ ಬಾಬು ಸಾಹೇಬರು ಎದ್ದು ರೇಷ್ಮೆ ಶಾಲನ್ನು ಹೆಗಲ ಮೇಲೆ ಹಾಕಿಕೊಂಡರು. ಕೊಂಚ ಹಣವನ್ನೂ ತೆಗೆದುಕೊಂಡರು. ತಮ್ಮ ಗುರುತಿನ ಕಾರ್ಡನ್ನು ತೆಗೆದುಕೊಂಡು ಇನ್ನೊಂದು ಜೇಬಿಗಿಟ್ಟುಕೊಂಡರು. ಛಡಿಯನ್ನು ಕೈಗೆತ್ತಿಕೊಂಡು, ಸದ್ದಿಲ್ಲದಂತೆ ಹೊರಗೆ ಬಂದರು. ಎಲ್ಲ ನೌಕರರು ನಿದ್ದೆಯಲ್ಲಿ ಲೀನರಾಗಿದ್ದರು. ಕಾಲು ಸಪ್ಪಳ ಕೇಳಿ ನಾಯಿ ಬೆಚ್ಚಿ, ಎಚ್ಚರಗೊಂಡು ಅವರನ್ನೇ ಹಿಂಬಾಲಿಸಿತು.

ಇದೆಲ್ಲ ವಿಧಿ ವಿಲಾಸ ಎಂಬುದು ಯಾರಿಗೆ ಗೊತ್ತು ? ಜೀವನ ಎಂಬ ರಂಗಶಾಲೆಯ ಆ ನಿರ್ದಯ ಸೂತ್ರಧಾರ ಯಾವುದೋ ಕಾಣದ ಗುಪ್ತ ಸ್ಥಾನದಲ್ಲಿ ಕುಳಿತು ತನ್ನ ಕ್ರೂರ ಕ್ರೀಡೆಯಾಟವಾಡುತ್ತಿರುವುದನ್ನು ಕಂಡವರಾರು ? ತಮಾಷೆ ಸತ್ಯವೇ ಆಗಿಬಿಡುತ್ತದೆ. ಅಭಿನಯ ಸತ್ಯದ ರೂಪವನ್ನೇ ಪಡೆದುಕೊಳ್ಳುತ್ತದೆ ಎಂಬುದು ಯಾರಿಗೆ ಗೊತ್ತಿತ್ತು ?

ಕತ್ತಲು ಚಂದ್ರನನ್ನು ಮರೆಮಾಡಿ ತನ್ನ ಸಾಮ್ರಾಜ್ಯವನ್ನು ನೆಲೆಗೊಳಿಸಿತ್ತು. ಅದರ ಪೈಶಾಚಿಕ ಸೇನೆ ಪ್ರಕೃತಿಯನ್ನು ಆತಂಕಕ್ಕೀಡು ಮಾಡಿತ್ತು. ಸಾತ್ವಿಕ ಭಾವಗಳು ತಲೆಮರೆಸಿಕೊಂಡಿದ್ದವು. ತಾಮಸೀ ಪ್ರವೃತ್ತಿಗಳು ವಿಜಯೋತ್ಸಾಹದಿಂದ ಬೀಗುತ್ತಿದ್ದುವು. ಕಾಡಿನಲ್ಲಿ ವನ್ಯ ಪ್ರಾಣಿಗಳು ಬೇಟೆಗೆಂದು ಅಲೆದಾಡುತ್ತಿದ್ದರೆ ಪಟ್ಟಣಗಳ ಗಲ್ಲಿಗಲ್ಲಿಗಳಲ್ಲಿ ನರ ಪಿಶಾಚಿಗಳು ಸುತ್ತಾಡುತ್ತಿದ್ದರು.

ಬಾಬು ಉದಯಭಾನು ಲಾಲರು ವೇಗವಾಗಿ ಹೆಜ್ಜೆ ಹಾಕುತ್ತ ಗಂಗಾ ನದಿಯ ಕಡೆ ಬರುತ್ತಿದ್ದರು. ಗಂಗೆಯ ದಡದ ಮೇಲೆ ತಮ್ಮ ಅಂಗಿಯನ್ನು ಇಟ್ಟು ನಂತರ ನಾಲ್ಕೈದು ದಿನಗಳ ಮಟ್ಟಿಗೆ ಮಿರ್ಜಾಪುರಕ್ಕೆ ಹೋಗಬೇಕೆಂದು ಅವರು ನಿಶ್ಚಯಿಸಿದ್ದರು. ಈ ಅಂಗಿಯನ್ನು ನೋಡಿ ಜನ ನಾನು ಆತ್ಮಹತ್ಯೆ ಮಾಡಿಕೊಂಡೆನೆಂದು ಭಾವಿಸುತ್ತಾರೆ ಎಂದು ಯೋಚಿಸಿದರು. ವಿಳಾಸ ಪತ್ತೆ ಹಚ್ಚಲು ಸುಲಭವಾಗುವಂತೆ ಗುರುತಿನ ಕಾರ್ಡ್ ಅನ್ನು ಜೇಬಿಗೆ ಹಾಕಿದ್ದರು. ಪತ್ತೆ ಹಚ್ಚಲು ಕಷ್ಟವಾಗುವುದಿಲ್ಲ. ಈ ಸುದ್ದಿ ಕಣ್ಮುಚ್ಚಿ ತೆರೆಯುವುದರಲ್ಲಿ ಇಡೀ ಊರಿನಲ್ಲಿ ಹಬ್ಬುತ್ತದೆ. ಬೆಳಗಿನ ಎಂಟು ಗಂಟೆಯ ಹೊತ್ತಿಗೆ ನನ್ನ ಮನೆಯ ಮುಂದೆ ಇಡೀ ಊರಿಗೆ ಊರೇ ನೆರೆದಿರುತ್ತದೆ. ಆಗ ನೋಡ್ತೀನಿ ಇವಳು ಏನು ಮಾಡ್ತಾಳೆ ಅಂತ....

ಈ ಪ್ರಕಾರವಾಗಿ ಯೋಚಿಸುತ್ತ ಬಾಬು ಸಾಹೇಬರು ಬೀದಿಗಳನ್ನು ದಾಟುತ್ತಿದ್ದರು....ಮುಂದೆ ಮುಂದೆ ಹೋಗುತ್ತಿದ್ದರು. ಆಗ ಇದ್ದಕ್ಕಿದ್ದಂತೆಯೇ ತಮ್ಮ ಹಿಂದೆ ಯಾರೋ ಬರುತ್ತಿದ್ದಾರೆ ಎಂದು ಅವರಿಗೆ ಅನ್ನಿಸಿತು. ಯಾರೋ ಇರಬಹುದು ಅಂದುಕೊಂಡು ಮುಂದೆ ನಡೆದರು. ಆದರೆ ಯಾವ ತಿರುವಿನಲ್ಲಿ ಇವರು ತಿರುಗುತ್ತಿದ್ದರೋ ಅದೇ ತಿರುವಿನಲ್ಲಿ ಅವನೂ ತಿರುಗುತ್ತಿದ್ದ. ಆಗ ಈ ಮನುಷ್ಯ ತನ್ನನ್ನು ಹಿಂಬಾಲಿಸುತ್ತಿದ್ದಾನೆ ಎಂದು ಅವರಿಗನ್ನಿಸಿತು. ಇದರಲ್ಲೇನೋ ಇದೆ ಎಂಬ ಅನುಮಾನ ಬಂತು ಅವರಿಗೆ. ಸರಿ, ತಮ್ಮ ಜೇಬಿನಲ್ಲಿದ್ದ ಚಿಕ್ಕ ಬ್ಯಾಟರಿಯನ್ನು ತೆಗೆದು ಬೆಳಕು ಮಾಡಿ ಆ ಬೆಳಕಿನಲ್ಲಿ ಆ ಮನುಷ್ಯನನ್ನು ನೋಡಿದರು. ಒಬ್ಬ ಬಲಿಷ್ಠ ಮನುಷ್ಯ ಹೆಗಲ ಮೇಲೆ ಒಂದು ಲಾಠಿಯನ್ನು ಇಟ್ಟುಕೊಂಡು ಇವರನ್ನು ಹಿಂಬಾಲಿಸುತ್ತಿದ್ದ. ಬಾಬು ಸಾಹೇಬರು ಈ ಮನುಷ್ಯನನ್ನು ನೋಡಿ ಬೆಚ್ಚಿದರು. ಈತ ಊರಿನ ಕುಪ್ರಸಿದ್ಧ ಗೂಂಡಾ. ಮೂರು ವರ್ಷಗಳ ಹಿಂದೆ ಇವನ ವಿರುದ್ಧ ದರೋಡೆಯ ಆಪಾದನೆಯ ಮೇಲೆ ಮೊಕದ್ದಮೆ ದಾಖಲಾಗಿತ್ತು. ಉದಯಭಾನು

ಅವರು ಈ ಮೊಕದ್ದಮೆಯಲ್ಲಿ ಸರ್ಕಾರಿ ವಕೀಲರಾಗಿ ವಾದ ಮಾಡಿ ಈ ಗೂಂಡಾಗೆ ಮೂರು ವರ್ಷಗಳ ಸಜೆಯನ್ನು ನೀಡಲು ಕಾರಣರಾಗಿದ್ದರು. ಆವತ್ತಿನಿಂದ ಇವನು ಬಾಬು ಅವರ ರಕ್ತ ಹೀರಲು ಕಾತರನಾಗಿದ್ದ. ನಿನ್ನೆ ತಾನೇ ಇವನಿಗೆ ಜೈಲಿನಿಂದ ಬಿಡುಗಡೆಯಾಗಿ ಹೊರಗೆ ಬಂದಿದ್ದ. ಇವತ್ತು, ಸಂಯೋಗವೆಂಬಂತೆ ಬಾಬು ಸಾಹೇಬರು ರಾತ್ರಿಯ ಹೊತ್ತಿನಲ್ಲಿ ಒಂಟಿಯಾಗಿ ಹೋಗುತ್ತಿದ್ದುದನ್ನು ನೋಡಿ, ಸಾಲ ತೀರಿಸಲು ಇದೇ ಸರಿಯಾದ ಸಮಯ, ಇಂಥಾ ಸಮಯ ಬಿಟ್ಟರೆ ಸಿಕ್ಕುವುದಿಲ್ಲ ಎಂದು ಯೋಚಿಸಿ ಹಿಂಬಾಲಿಸಿದ. ಇನ್ನೇನು ತಲೆಯ ಮೇಲೆ ಲಾಠಿಯಿಂದ ಹೊಡೆಯಬೇಕೆನ್ನುವಷ್ಟರಲ್ಲಿ ಬಾಬು ಸಾಹೇಬರು ಬ್ಯಾಟರಿ ಹಾಕಿದರು. ಆ ಗೂಂಡಾ ಗಡಸು ಧ್ವನಿಯಲ್ಲಿ ಕೇಳಿದ–'ಏನ್ ಸ್ವಾಮಿ, ಗುರುತೈತಾ ನಾನ್ ಯಾರೂಂತ? ನಾನು ಮತಈ.'

ಬಾಬು ಸಾಹೇಬರು ಗದರಿಸುವ ಧ್ವನಿಯಲ್ಲಿ ಪ್ರಶ್ನಿಸಿದರು–'ನೀನು ನನ್ನ ಹಿಂದೆ–ಹಿಂದೇನೆ ಏಕೆ ಬರುತ್ತಿದ್ದೀಯಾ?'

ಮತಈ : 'ಏಕೆ, ಈ ರಸ್ತೆಯಲ್ಲಿ ಹೋಗಬಾರದು ಅಂತ ಯಾರಾದರೂ ಹೇಳಿದ್ದಾರೇನು ? ಈ ರಸ್ತೆ ನಿಮ್ಮಪ್ಪುದಾ ?'

ಬಾಬು ಸಾಹೇಬರು ತಮ್ಮ ಯೌವನದ ದಿನಗಳಲ್ಲಿ ಕುಸ್ತಿ ಮಾಡುತ್ತಿದ್ದರು. ಈಗಲೂ ಗಟ್ಟಿಮುಟ್ಟಾದ ದೇಹವೇ ಅವರದು. ಜೊತೆಗೆ ಧೈರ್ಯವಂತರೂ ಇದ್ದರು. ತಮ್ಮ ಕೈಲಿದ್ದ ಲಾಠಿಯನ್ನು ಮುಷ್ಠಿಯಲ್ಲಿ ಭದ್ರವಾಗಿ ಹಿಡಿದುಕೊಂಡು ಹೇಳಿದರು–'ನಿನಗೆ ಮೂರು ವರ್ಷ ಸಾಕಾಗಲಿಲ್ಲಾಂತ ಕಾಣಿಸುತ್ತೆ ಈ ಸಾರಿ ಏಳು ವರ್ಷ ಜೈಲಿಗೆ ಹೋಗ್ಬೇಕಾಗುತ್ತೆ ನೋಡ್ತಿರು.'

ಮತಈ : 'ನಾನು ಏಳು ವರ್ಷ ಹೋಗ್ತೀನೋ, ಹದಿನಾಲ್ಕು ವರ್ಷ ಹೋಗ್ತೀನೋ ಅದು ಬೇರೆ ಮಾತು. ಆದರೆ ಈಗ ನಿನಗೆ ಜೀವಂತ ಬಿಡೊಲ್ಲ. ಆದರೆ, ಒಂದು ಷರತ್ತು, ನೀನು ನನ್ನ ಕಾಲಿಗೆ ಬಿದ್ದು, ಇನ್ನೆಂದೂ ಯಾರಿಗೂ ಸಜೆ ಮಾಡಿಸೊಲ್ಲ ಅಂತ ಪ್ರಮಾಣ ಮಾಡಿದರೆ ಮಾತ್ರ ನಿನ್ನನ್ನು ಬಿಡ್ತೇನೆ. ಒಪ್ಪಿಗೇನಾ ಹೇಳು ?'

ಉದಯಭಾನು : 'ನಿನಗಿನ್ನೂ ಬುದ್ಧಿ ಬರಲಿಲ್ಲವೆ ?'

ಮತಈ : 'ನನಗೆ ಬಂದಿಲ್ಲ. ನಿನಗೆ ಬಂದಿದೆ. ಹೇಳು. ನಾನ್ ಹೇಳ್ದಾಗೆ ಪ್ರಮಾಣ ಮಾಡ್ತೀಯೋ, ಇಲ್ಲವೊ ? ಒಂದು...?'

ಉದಯಭಾನು : 'ನೀನು ನನ್ನ ಎದುರಿನಿಂದ ಹೋಗ್ತಿಯೋ, ಇಲ್ಲ, ಪೊಲೀಸರನ್ನು ಕರೆಸಲೋ ?'

ಮತಈ : 'ಎರಡು.....?'

ಉದಯಭಾನು : 'ಪಕ್ಕಕ್ಕೆ ಸರಿಯೋ ನನ್ಮಗನೆ !'

ಮತಈ : 'ಮೂರು....?

ಬಾಯಿಂದ 'ಮೂರು' ಎಂಬ ಶಬ್ದ ಹೊರಬರುವುದಕ್ಕೂ ಬಾಬು ಸಾಹೇಬರ ತಲೆ ಮೇಲೆ ಲಾಠಿಯಿಂದ ಬಲವಾದ ಪೆಟ್ಟು ಬೀಳುವುದಕ್ಕೂ ಸರಿಹೋಯಿತು. ಪೆಟ್ಟು ಬೀಳುತ್ತಿದ್ದಂತೆಯೇ ಅವರು ಪ್ರಜ್ಞಾಹೀನರಾಗಿ ಅಲ್ಲೇ ಕುಸಿದರು. ಬಾಯಿಂದ 'ಹಾಯ್, ನನ್ನನ್ನು ಕೊಂದು ಹಾಕಿದ' ಎಂಬ ಮಾತುಗಳಷ್ಟೇ ಹೊರಬಂದವು.

ಮತಈ ಹತ್ತಿರ ಬಂದು ನೋಡಿದ. ತಲೆ ಒಡೆದು ಎರಡು ಹೋಳಾಗಿತ್ತು. ರಕ್ತದ ಕೋಡಿ ಹರಿದಿತ್ತು. ನಾಡಿ ಸಿಗುತ್ತಿರಲಿಲ್ಲ. ಇವನ ಕೆಲಸ ಇಲ್ಲಿಗೆ ಮುಗಿಯಿತು ಅಂದುಕೊಂಡು ಅವನು ಅವರ ಕೈನಲ್ಲಿದ್ದ ಬಂಗಾರದ ಗಡಿಯಾರವನ್ನು ಬಿಚ್ಚಿಕೊಂಡ, ಅಂಗಿಯಲ್ಲಿದ್ದ ಬಂಗಾರದ ಗುಂಡಿಗಳನ್ನು ತೆಗೆದುಕೊಂಡ, ನಂತರ ಬೆರಳುಗಳಲ್ಲಿದ್ದ ಉಂಗುರಗಳನ್ನೂ ತೆಗೆದುಕೊಂಡು, ಏನೂ ಆಗಿಯೇ ಇಲ್ಲವೇನೋ ಎಂಬಂತೆ ತನ್ನ ಹಾದಿ ಹಿಡಿದ. ಅಂದ ಹಾಗೆ, ರಸ್ತೆಯಲ್ಲಿ ಬಿದ್ದಿದ್ದ ಹೆಣವನ್ನು ಪಕ್ಕಕ್ಕೆ ಸರಿಸುವಷ್ಟು ದಯೆ ತೋರಿದ. ಪಾಪ ! ಬಾಬು ಸಾಹೇಬರು ಯೋಚಿಸುತ್ತ ಬರುತ್ತಿದ್ದುದೇ ಒಂದು. ಆದದ್ದೇ ಇನ್ನೊಂದು ! ಜೀವನವೇ, ನಿನ್ನಷ್ಟು ಕ್ಷಣಭಂಗುರವಾದದ್ದು ಪ್ರಪಂಚದಲ್ಲಿ ಬೇರೆ ಇನ್ನೇನಾದರೂ ಇದೆಯಾ ? ಗಾಳಿಯ ಒಂದು ಪುಟ್ಟ ಅಲೆಗೆ ಆರಿಹೋಗುವ ದೀಪದಂತೆ ಕ್ಷಣಿಕವಲ್ಲವೇ ನಮ್ಮ ಬದುಕು ? ನೀರಿನ ಗುಳ್ಳೆಗಳನ್ನು ನೀವು ನೋಡಿರಬೇಕಲ್ಲವೆ ? ಆ ಗುಳ್ಳೆಗಳು ಒಡೆಯಲು ಕೆಲವು ಕ್ಷಣಗಳಾದರೂ ಬೇಕು. ಆದರೆ ಜೀವ ನಂದಲು ಅಷ್ಟೂ ಸಮಯ ಬೇಕಾಗಿಲ್ಲ. ಜೀವದ ಮೇಲೆ ಏನು ನೆಚ್ಚಿಗೆ ? ಆದರೂ, ಈ ಜೀವ ನಶ್ವರವೆಂದು ಗೊತ್ತಿದ್ದರೂ ನಾವು ಅದೆಷ್ಟು ಆಶಾ ಮಂದಿರಗಳನ್ನು ಕಟ್ಟುತ್ತೇವೆ. ಒಳಗೆ ಹೋದ ಉಸಿರು ಮೇಲಕ್ಕೆ ಬರುತ್ತೋ ಇಲ್ಲವೋ ಎಂಬುದೇ ನಮಗೆ ಗೊತ್ತಿಲ್ಲದಿರುವಾಗ, ನಾವು ಅಮರರೇನೋ ಎಂಬಂತೆ ದೂರದ್ದನ್ನು ಕುರಿತು ಯೋಚಿಸುತ್ತೇವೆ.

## ಮೂರು

ವಿಧವೆಯ ಪ್ರಲಾಪ ಮತ್ತು ಅನಾಥರ ಗೋಳನ್ನು ವರ್ಣಿಸಿ ನಾನು ಓದುಗರ ಮನಸ್ಸನ್ನು ನೋಯಿಸಲು ಇಚ್ಛಿಸುವುದಿಲ್ಲ. ಕಷ್ಟಕ್ಕೆ ತುತ್ತಾದವರು ಅಳುತ್ತಾರೆ. ಗೋಳಾಡುತ್ತಾರೆ, ವಿಲಿವಿಲಿ ಒದ್ದಾಡುತ್ತಾರೆ ಎಂಬ ಮಾತು ಹೊಸದೇನಲ್ಲ. ಆದರೆ ನಾನೇ ನನ್ನ ಗಂಡನ ಸಾವಿಗೆ ಕಾರಣಳಾದೆ ಎಂದು ಪರಿತಪಿಸುತ್ತ ಪ್ರಲಾಪಿಸುತ್ತಿರುವ ಆ ಕಲ್ಯಾಣಿಯ ಘೋರ ಮಾನಸಿಕ ಯಾತನೆಯನ್ನು ನೀವೇ ಕಲ್ಪಿಸಿಕೊಳ್ಳಿ. ಕೋಪದ ಆವೇಶದಲ್ಲಿ ಅವಳ ಬಾಯಿಂದ ಬಂದ ಮಾತುಗಳು ಈಗ ಅವಳ ಹೃದಯವನ್ನು ಬಾಣಗಳಂತೆ ಚುಚ್ಚುತ್ತಿದ್ದವು. ತನ್ನ ತೊಡೆಯ ಮೇಲೆ ಗಂಡ ತಲೆಯಿಟ್ಟು ನರಳಿ–ನರಳಿ

ಪ್ರಾಣ ಬಿಟ್ಟಿದ್ದಿದ್ದರೆ, ಗಂಡನ ಸೇವೆ ಆ ಕ್ಷಣದವರೆಗೂ ಮಾಡಿದೆನಲ್ಲ ಎಂಬ ಸಂತೋಷವಾದರೂ ಆಕೆಗಿರುತ್ತಿತ್ತು. ಶೋಕತಪ್ತ ಹೃದಯಕ್ಕೆ ಅಷ್ಟರ ಮಟ್ಟಿನ ಸಾಂತ್ವನ–ಸಮಾಧಾನವಾದರೂ ಸಿಗುತ್ತಿತ್ತು. ನನ್ನ ಗಂಡ ಸಂತೋಷದಿಂದ ನನ್ನಿಂದ ಬೀಳ್ಕೊಂಡರು, ಕೊನೆ ಕ್ಷಣದವರೆಗೆ ಅವರ ಹೃದಯದಲ್ಲಿ ನನ್ನ ಬಗೆಗೆ ಪ್ರೇಮ ಅಚ್ಚಳಿಯದಂತಿತ್ತು ಎಂಬ ವಿಚಾರವೇ ಎಷ್ಟು ಸಂತೋಷವನ್ನೀಯುತ್ತಿತ್ತು ! ಈಗ ಕಲ್ಯಾಣಿ ಆ ಸಂತೋಷದಿಂದ ವಂಚಿತಳಾಗಿದ್ದಳು. ಅವಳು ಯೋಚಿಸುತ್ತಿದ್ದಳು– 'ಅಯ್ಯೋ ದೇವರೆ ! ನನ್ನ ಇಪ್ಪತ್ತೈದು ವರ್ಷದ ತಪಸ್ಸು ನೀರಿನಲ್ಲಿ ಹೋಮ ಮಾಡಿದಂತಾಯಿತಲ್ಲ ! ಕೊನೆಗಾಲದಲ್ಲಿ ನಾನು ನನ್ನ ಗಂಡನ ಪ್ರೀತಿಯಿಂದ ವಂಚಿತಳಾದೆ. ನಾನು ನನ್ನ ಬಾಯಿಂದ ಅಷ್ಟು ಕಠೋರವಾದ ಮಾತುಗಳನ್ನಾಡದೆ ಇದ್ದಿದ್ದರೆ ಅವರು ಅಷ್ಟು ರಾತ್ರಿಯಲ್ಲಿ ಮನೆಯಿಂದ ಹೊರಗೆ ಹೋಗುತ್ತಿರಲಿಲ್ಲ. ಅವರು ಮನಸ್ಸಿನಲ್ಲಿ ಏನೇನು ವಿಚಾರ ಯೋಚಿಸಿದರೋ ಏನೋ !' ಅವರ ಮನೋಭಾವಗಳನ್ನು ಕಲ್ಪಿಸಿಕೊಳ್ಳುತ್ತ ಹಾಗೂ ತನ್ನ ಅಪರಾಧವನ್ನೇ ದೊಡ್ಡದು ಮಾಡಿಕೊಳ್ಳುತ್ತಾ ಹಗಲು–ರಾತ್ರಿ ಆಕೆ ಬೇಯುತ್ತಿದ್ದಳು. ತನ್ನ ಪ್ರಾಣವನ್ನೇ ಕೊಡಲು ತಯಾರಿರುತ್ತಿದ್ದ ಮಕ್ಕಳನ್ನು ಕಂಡರೆ ಸಾಕು, ಈಗ ಅವಳಲ್ಲಿ ದ್ವೇಷ ಮತ್ತು ತಿರಸ್ಕಾರ ಮೂಡುತ್ತಿತ್ತು. ಈ ಮಕ್ಕಳಿಂದಾಗಿಯೇ ಅಲ್ಲವೆ ನಾನು ನನ್ನ ಗಂಡನ ಜೊತೆ ಹಾಗೆ ಜಗಳವಾಡಿದ್ದು. ಹೀಗಾಗಿ ಇವರೇ ನನ್ನ ಶತ್ರುಗಳು. ದಿನದ ಇಪ್ಪತ್ತನಾಲ್ಕು ಗಂಟೆ ಗುಜು ಗುಜುಗುಟ್ಟುತ್ತಿದ್ದ ಮನೆಯಲ್ಲೀಗ ಸ್ಮಶಾನಮೌನ ಆವರಿಸಿದೆ. ಜಾತ್ರೆ ಮುಗಿದಿದೆ. ತಂದು ಹಾಕಿ ತಿನ್ನಿಸುವವನೇ ಇಲ್ಲದ ಮೇಲೆ ಬರೀ ತಿನ್ನುವವರು ಎಲ್ಲಿರುತ್ತಾರೆ ? ಇಷ್ಟು ದಿನ, ಈ ಮನೆಗಾಗಿ ನೀರಿನ ಜಾಗದಲ್ಲಿ ರಕ್ತ ಹರಿಸಲು ತಾವು ತಯಾರು ಎಂದು ಹೇಳುತ್ತಿದ್ದವರೆಲ್ಲ ಹೇಗೆ ಕಂಬಿ ಕಿತ್ತರೆಂದರೆ ಹಿಂತಿರುಗಿ ನೋಡಲೇ ಇಲ್ಲ. ಈಗಿನ ಪ್ರಪಂಚವೇ ಬೇರೆಯಾಯಿತು. ಯಾವ ಮಕ್ಕಳನ್ನು ನೋಡಿದರೆ, ಎತ್ತಿಕೊಂಡು ಮುದ್ದಿಸಲು ಮನಸ್ಸಾಗುತ್ತಿತ್ತೋ, ಆ ಮಕ್ಕಳ ಮುಖದಲ್ಲಿ ಈಗ ಪ್ರೇತ ಕಳೆ ರಾರಾಜಿಸುತ್ತಿತ್ತು. ಮೊದಲಿನ ಕಾಂತಿ ಎಲ್ಲಿ ಹೋಯಿತೋ ಏನೋ !

ಸಾವಿನ ದುಃಖ ಕೊಂಚ ಕಮ್ಮಿಯಾದ ಮೇಲೆ ನಿರ್ಮಲಾಳ ಮದುವೆಯ ಸಮಸ್ಯೆ ಪುನಃ ಮುಂದೆ ಬಂದಿತು. ಕೆಲವರು ಮದುವೆ ಈ ವರ್ಷ ಬೇಡ, ಮುಂದಿನ ವರ್ಷ ಮಾಡಿದರಾಯಿತು ಎಂದು ಸಲಹೆ ನೀಡಿದರು. ಆಗ ಕಲ್ಯಾಣಿ ಹೇಳಿದಳು– 'ಇಷ್ಟೆಲ್ಲ ಸಿದ್ಧತೆಗಳನ್ನು ಮಾಡಿಕೊಂಡಿರುವಾಗ ಮದುವೆಯನ್ನು ನಿಲ್ಲಿಸಿದರೆ ಇದೆಲ್ಲ ವ್ಯರ್ಥವಾಗುತ್ತೆ. ಜೊತೆಗೆ ಮುಂದಿನ ವರ್ಷವಾದರೂ ಇಷ್ಟೆಲ್ಲ ಸಿದ್ಧತೆಗಳನ್ನು ಮಾಡಲೇಬೇಕಾಗುತ್ತೆ. ಆದರೆ ಇದನ್ನೆಲ್ಲ ಮಾಡಬಲ್ಲೆ ಅನ್ನುವ ಧೈರ್ಯವೂ ನನಗಿಲ್ಲ. ಹೀಗಾಗಿ ಮದುವೆ ಮಾಡಿಬಿಡುವುದೇ ಒಳ್ಳೆಯದು. ಹೇಗಿದ್ದರೂ ಕೊಡುವುದು, ತೆಗೆದುಕೊಳ್ಳುವುದು ಏನೂ ಇಲ್ಲವಲ್ಲ. ದಿಬ್ಬಣದಲ್ಲಿ ಬರುವವರ ಸತ್ಕಾರಕ್ಕಾಗಿ ಸಾಕಷ್ಟು

ಸಾಮಾನು ಸರಂಜಾಮುಗಳನ್ನು ಜೋಡಿಸಿಯಾಗಿದೆ. ಮದುವೆಯನ್ನು ನಿಲ್ಲಿಸಿದರೆ ನಮಗೆ ತೊಂದರೆಯಾಗುತ್ತೆ. ಮದುವೆ ಮಾಡಬೇಕೆಂದು ನಿರ್ಧರಿಸಿ, ಭಾಲಚಂದ್ರರಿಗೆ ಮನೆಯ ಶೋಕ ಸುದ್ದಿಯನ್ನು ಕಳಿಸುವುದರ ಜೊತೆಗೆ ತನ್ನ ಪತ್ರದಲ್ಲಿ ಕಲ್ಯಾಣಿ ಹೀಗೆ ಬರೆದಳು–'ಈ ಅನಾಥೆಯ ಬಗೆಗೆ ದಯೆ ತೋರಿಸಿ, ನಮ್ಮ ಮುಳುಗುತ್ತಿರುವ ದೋಣಿಯನ್ನು ದಂಡೆಗೆ ತಲುಪಿಸಿ, ನನ್ನ ಪತಿದೇವರ ಮನಸ್ಸಿನಲ್ಲಿ ಎಷ್ಟೊಂದು ಆಸೆ. ಆಕಾಂಕ್ಷೆಗಳಿದ್ದುವು ! ಆದರೆ ಅವೆಲ್ಲ ಈಡೇರುವುದು ಆ ಭಗವಂತನಿಗೆ ಬೇಕಾಗಿರಲಿಲ್ಲ ಅಂತ ಕಾಣುತ್ತಿದೆ. ಅವರು ಬಯಸಿದ್ದೇ ಒಂದು. ಭಗವಂತ ಮಾಡಿದ್ದೇ ಇನ್ನೊಂದು! ಈಗ ನನ್ನ ಗೌರವ ನಿಮ್ಮ ಕೈಲಿದೆ. ನಮ್ಮ ಹುಡುಗಿ ನಿಮ್ಮವಳಾಗಿದ್ದಾಳೆ. ತಮ್ಮನ್ನು ಸ್ವಾಗತಿಸಿ, ತಮ್ಮೆಲ್ಲರ ಆದರ ಸತ್ಕಾರ ಮಾಡುವುದನ್ನು ನಾನು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ. ಆದರೆ ಇದರಲ್ಲಿ ಏನಾದರೂ ಕೊರತೆಯುಂಟಾದರೆ, ತಪ್ಪು ಕಂಡುಬಂದರೆ, ನಾನಿರುವ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕ್ಷಮಿಸಬೇಕು. ಈ ಅನಾಥೆಗೆ ಯಾರೂ ನಿಂದನೆಯ ಮಾತನಾಡಲು ತಾವು ಅವಕಾಶ ಕೊಡುವುದಿಲ್ಲ ಎಂಬ ವಿಶ್ವಾಸವಿದೆ, ಇತ್ಯಾದಿ....'

ಕಲ್ಯಾಣಿ ಈ ಪತ್ರವನ್ನು ಅಂಚೆಯ ಮೂಲಕ ಕಳಿಸಲಿಲ್ಲ. ಬದಲಾಗಿ, ಒಬ್ಬ ಪುರೋಹಿತರನ್ನು ಕರೆದು ಹೇಳಿದಳು–'ನಿಮಗೆ ನಾನು ಕಷ್ಟ ಕೊಡುತ್ತಿದ್ದೇನೆ ಅಂತ ನನಗೆ ಗೊತ್ತಿದೆ. ಆದರೂ ನೀವೇ ಈ ಪತ್ರ ತೆಗೆದುಕೊಂಡು ಹೋಗಿ ಅವರಿಗೆ ಕೊಟ್ಟು ಅತ್ಯಂತ ವಿನಯಪೂರ್ವಕವಾಗಿ ದಿಬ್ಬಣದ ಜೊತೆ ಸಾಧ್ಯವಾದಷ್ಟು ಕಡಿಮೆ ಜನ ಬರಬೇಕಂತಲೂ, ಇಲ್ಲಿ ವ್ಯವಸ್ಥೆ ಮಾಡುವವರು ಯಾರೂ ಇಲ್ಲವೆಂತಲೂ ನಿವೇದಿಸಿಕೊಳ್ಳಿ.'

ಪುರೋಹಿತ ಮೋಟೆರಾಮರು ಈ ಸಂದೇಶವನ್ನು ತೆಗೆದುಕೊಂಡು ಮಾರನೆಯ ದಿನ ಲಖನೌಗೆ ಬಂದರು.

ಸಂಜೆಯ ಹೊತ್ತು, ಬಾಬು ಭಾಲಚಂದ್ರರು ಮನೆಯ ಅಂಗಳದಲ್ಲಿ ಆರಾಮ ಕುರ್ಚಿಯಲ್ಲಿ ಅರೆನಗ್ನಾವಸ್ಥೆಯಲ್ಲಿ ಕುಳಿತುಕೊಂಡು ಹುಕ್ಕಾ ಸೇದುತ್ತಿದ್ದರು. ತುಂಬಾ ಸ್ಥೂಲಕಾಯದ ಆತ ಅಜಾನುಬಾಹು. ನೋಡಿದರೆ ಕಪ್ಪು ದೇವತೆಯಂತೆ ಅಥವಾ ಆಫ್ರಿಕಾದ ಒಬ್ಬನನ್ನು ತಂದು ಇಲ್ಲಿ ಕೂರಿಸಿದಂತೆ ತೋರುತ್ತಿತ್ತು. ಅಂದರೆ ಅಡಿಯಿಂದ ಮುಡಿಯವರೆಗೆ ಅಷ್ಟು ಕಪ್ಪು, ಮುಖ ಎಷ್ಟು ಕಪ್ಪು ಅಂದರೆ ಹಣೆ ಎಲ್ಲಿಗೆ ಕೊನೆಯಾಗುತ್ತದೆ ಮತ್ತು ತಲೆ ಎಲ್ಲಿಂದ ಆರಂಭವಾಗುತ್ತದೆ ಎಂಬುದೇ ಗೊತ್ತಾಗುತ್ತಿರಲಿಲ್ಲ. ಒಟ್ಟಿನಲ್ಲಿ ಅವರು ತೊಳೆದ ಕೆಂಡದ ಜೀವಂತ ಮೂರ್ತಿಯಾಗಿದ್ದರು. ಸೆಕೆ ಅವರನ್ನು ತುಂಬಾ ಹಿಂಸಿಸುತ್ತಿತ್ತು. ಹೀಗಾಗಿ ಅವರ ಅಕ್ಕಪಕ್ಕದಲ್ಲಿ ಇಬ್ಬರು ನಿಂತು ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದರು. ಇಷ್ಟಾಗಿಯೂ ಬೆವರು ಹನಿಗಳು ಅವರ ಮೈಮೇಲೆ ಸಾಲುಗಟ್ಟಿ ನಿಂತಿರುತ್ತಿದ್ದುವು. ಅವರು ಅಬ್ಕಾರಿ ವಿಭಾಗದಲ್ಲಿ ಉನ್ನತ ಹುದ್ದೆಯಲ್ಲಿದ್ದರು. ಆರುನೂರು ರೂಪಾಯಿ ಸಂಬಳ ಬರುತ್ತಿತ್ತು. ಕಂಟ್ರಾಕ್ಟರುಗಳಿಂದ

ಚೆನ್ನಾಗಿ ಲಂಚ ತೆಗೆದುಕೊಳ್ಳುತ್ತಿದ್ದರು. ಕಂಟ್ರಾಕ್ಟರುಗಳು ಹೆಂಡದ ಹೆಸರಿನಲ್ಲಿ ನೀರನ್ನು ಮಾರಿದರೂ ಇಪ್ಪತ್ತನಾಲ್ಕು ಗಂಟೆ ಅಂಗಡಿಗಳನ್ನು ತೆರೆದೇ ಇಟ್ಟಿದ್ದರೂ ಇವರು ಕೇಳುತ್ತಿರಲಿಲ್ಲ. ಅವರು ಇವರನ್ನು ಸಂತೋಷವಾಗಿ ನೋಡಿಕೊಂಡರೆ ಸಾಕಾಗಿತ್ತು. ಎಲ್ಲ ಕಾನೂನುಗಳು ಇವರ ಸಂತೋಷ ಮತ್ತು ಮರ್ಜಿಯ ಮುಂದೆ ಗಾಳಿಗೆ ತೂರಿ ಹೋಗುತ್ತಿದ್ದವು. ಇವರು ಎಂಥ ಭಯಂಕರ ಆಕೃತಿಯವರಾಗಿದ್ದರೆಂದರೆ ಬೆಳದಿಂಗಳ ರಾತ್ರಿಯಲ್ಲಿ ಇವರನ್ನು ನೋಡಿದ ಜನರೂ ಗಾಬರಿಯಿಂದ ಬೆಚ್ಚಿಬೀಳುತ್ತಿದ್ದರು. ಹೆಂಗಸರು, ಮಕ್ಕಳು ಅಂತಿರಲಿ, ಗಂಡಸರು ಸಹ ಒಂದು ಕ್ಷಣ ಹಿಮ್ಮೆಟ್ಟುತ್ತಿದ್ದರು. ಬೆಳದಿಂಗಳ ರಾತ್ರಿ ಎಂದು ಏಕೆ ಹೇಳಿದೆನೆಂದರೆ ಕತ್ತಲಲ್ಲಿ ಇವರು ಕಾಣುತ್ತಲೇ ಇರಲಿಲ್ಲ. ಕತ್ತಲ ಕಪ್ಪಿನಲ್ಲಿ ಇವರೂ ಐಕ್ಯವಾಗಿಬಿಡುತ್ತಿದ್ದರು. ಇವರ ಕಣ್ಣುಗಳು ಮಾತ್ರ ಕೆಂಪಾಗಿದ್ದವು. ನಿಜವಾದ ಮುಸಲ್ಮಾನ ದಿನಕ್ಕೆ ಐದು ಸಾರಿ ನಮಾಜು ಮಾಡುವಂತೆ ಇವರೂ ದಿನಕ್ಕೆ ಐದುಸಾರಿ ಮದ್ಯಪಾನ ಮಾಡುತ್ತಿದ್ದರು. ಬಿಟ್ಟಿ ಬಂದರೆ ನನಗೂ ಇರಲಿ, ನಮ್ಮಪ್ಪನಿಗೂ ಇರಲಿ ಅಂದ ಹಾಗೆ. ಜೊತೆಗೆ ಇವರು ಅಬ್ಕಾರಿ ಇಲಾಖೆಯ ಅಧಿಕಾರಿಯಾಗಿದ್ದುದರಿಂದ ಎಷ್ಟು ಕುಡಿದರೂ ಯಾರೂ ಕೈ ಅಡ್ಡಮಾಡುವಂತಿರಲಿಲ್ಲ. ಬಾಯಾರಿಕೆ ಆದಾಗಲೆಲ್ಲ ಇವರು ಮದ್ಯವನ್ನೇ ಕುಡಿಯುತ್ತಿದ್ದರು. ಕೆಲವು ಬಣ್ಣಗಳಲ್ಲಿ ಪರಸ್ಪರ ಸಹಾನುಭೂತಿ ಇರುವಂತೆ, ಕೆಲವು ಬಣ್ಣಗಳಲ್ಲಿ ಪರಸ್ಪರ ವಿರೋಧವೂ ಇರುತ್ತದೆ. ಕೆಂಬಣ್ಣದೊಡನೆ ಬೆರತು ಕಪ್ಪು ವರ್ಣ ಮತ್ತೂ ಭಯಂಕರವಾಗಿ ಕಾಣುತ್ತದೆ.

* * * * *

ಬಾಬೂ ಸಾಹೇಬರು ಪಂಡಿತರನ್ನು ನೋಡುತ್ತಿದ್ದಂತೆಯೇ ಕುರ್ಚಿಯಿಂದ ಎದ್ದು– 'ಓಹ್ ! ನೀವಾ ? ಬನ್ನಿ ಬನ್ನಿ, ಈ ಮನೆಯ ಭಾಗ್ಯ ಬಂದಂತಾಯಿತು ಅರೆ, ಯಾರಿದ್ದೀರೋ ಇಲ್ಲಿ ? ಎಲ್ಲರೂ ಎಲ್ಲಿ ಹಾಳಾಗಿ ಹೋದರೋ ಏನೊ ! ಝುಗಡೂ, ಗುರ್‌ದೀನ್, ಛಕೌಡಿ, ಭವಾನಿ, ರಾಮ್ ಗುಲಾಂ, ಯಾರಿದ್ದೀರ್‍ರೋ ಇಲ್ಲಿ ? ಎಲ್ಲರೂ ಸತ್ತು ಹೋದರೇನೋ ? ಅರೇ ರಾಂ ಗುಲಾಂ, ಭವಾನಿ, ಛಕೌಡಿ, ಗುರುದ್ದೀನ್, ಝುಗಡೂ ಯಾವನೂ ಮಾತಾಡ್ತಿಲ್ಲ ಎಲ್ಲರೂ ಸತ್ತು ಹೋದರು ಅಂತ ಕಾಣುತ್ತೆ : ಒಂದು ಡಜನ್ ಆಳುಗಳಿದ್ದಾರೆ ಲೆಕ್ಕಕ್ಕೆ. ಆದರೆ ಸಮಯದಲ್ಲಿ ಒಬ್ಬನ ಮುಖವೂ ಕಾಣುವುದಿಲ್ಲ. ಎಲ್ಲರೂ ಎಲ್ಲಿ ಹಾಳಾಗಿ ಹೋದರೋ ಏನೋ! ಸ್ವಾಮಿಯವರಿಗೆ ಒಂದು ಕುರ್ಚಿ ತನ್ನಿರೋ'– ಎಂದು ಕೂಗಿದರು.

ಬಾಬು ಸಾಹೇಬರು ಮೇಲಿನ ಐದು ಹೆಸರುಗಳನ್ನು ಎಷ್ಟೋ ಸಾರಿ ಪುನರಾವರ್ತಿಸಿದರು. ಆದರೆ ಅಕ್ಕ ಪಕ್ಕದಲ್ಲಿ ನಿಂತು ಗಾಳಿ ಹಾಕುತ್ತಿದ್ದವರನ್ನು ಮಾತ್ರ ಕುರ್ಚಿಯನ್ನು ತರಲೂ ಕಳಿಸಲಿಲ್ಲ. ಅಲ್ಲಿಂದ ಮುಂದಿನ ಮೂರು–ನಾಲ್ಕು ನಿಮಿಷಗಳ ನಂತರ ಒಬ್ಬ ಮನುಷ್ಯ ಕೆಮ್ಮುತ್ತಾ ಬಂದ. ಬಂದವನೇ ಏನೇನೋ ಬಡಬಡಿಸಿದ.

ಭಾಲಚಂದ್ರ : 'ಬಾಯಿಗೆ ಬಂದದ್ದೇ ಹರಟ ಬೇಡ್ವೋಲೇ ಹೋಗಿ ಒಂದು

ಕುರ್ಚಿ ತಗೊಂಡು ಬಾ. ಏನಾದರೂ ಕೆಲಸ ಹೇಳಿದರೆ ಸಾಕು, ಅಳೋಕೆ ಶುರು ಮಾಡ್ತೀಯಾ ? ಪುರೋಹಿತರೇ ಈಗ ಹೇಳಿ, ಎಲ್ಲರೂ ಕ್ಷೇಮ ತಾನೆ ?'

ಮೋಟೆರಾಮ : "ಏನ್ ಕ್ಷೇಮವೋ ಏನ್ ಸುಡುಗಾಡೋ ! ಏನ್ ಕ್ಷೇಮಾಂತ ಹೇಳಲಿ ? ಮನೆ ಎಲ್ಲ ಸರ್ವನಾಶವಾಯಿತು.'

ಅಷ್ಟರಲ್ಲಿ ಮನೆಯ ನೌಕರನೊಬ್ಬ ಮರದ ಪೆಟ್ಟಿಗೆಯೊಂದನ್ನು ತಂದು ಅಲ್ಲಿಡುತ್ತ ಹೇಳಿದ — 'ನಮ್ಮ ಮನೆಯ ಕುರ್ಚಿಗಳು ಎಷ್ಟು ಭಾರಿಯಾಗಿವೆ ಅಂದ್ರೆ ಒಬ್ಬನಿಂದ ಎತ್ತಲು ಆಗುವುದಿಲ್ಲ.'

ಪುರೋಹಿತರು ಸಂಕೋಚದಿಂದ ಹೆದರುತ್ತ ಅದರ ಮೇಲೆ ಕುಳಿತರು. ಏಕೆಂದರೆ ಈ ಮರದ ಪೆಟ್ಟಿಗೆ ಎಲ್ಲಿ ಮುರಿದು ಹೋದೀತೋ ಎಂಬ ಭಯ ಅವರನ್ನು ಕಾಡುತ್ತಿತ್ತು. ಕುಳಿತುಕೊಂಡು ಕಲ್ಯಾಣಿಯ ಪತ್ರವನ್ನು ಬಾಬು ಸಾಹೇಬರ ಕೈಗಿತ್ತರು.

ಭಾಲಚಂದ್ರ : 'ಇನ್ನೇನು ಉಳಿದಿದೆ ? ಇದಕ್ಕಿಂತಲೂ ದೊಡ್ಡ ವಿಪತ್ತು ಇನ್ನಾವುದಿದೆ ಹೇಳಿ ? ಬಾಬು ಉದಯಭಾನು ಲಾಲರು ನನ್ನ ಹಳೇ ಸ್ನೇಹಿತರು. ಅವರು ಮನುಷ್ಯರಲ್ಲ. ರತ್ನ ! ಎಂಥ ಹೃದಯವಂತರು. ಏನು ಕಥೆ ! ಎಷ್ಟು ಧೈರ್ಯವಿತ್ತು ಅವರಲ್ಲಿ ! (ಕಣ್ಣೊರೆಸಿಕೊಂಡು) ಅವರ ಸಾವಿನ ಸುದ್ದಿ ಕೇಳಿ ನನ್ನ ಬಲಗೈ ಕಡಿದು ಹೋದಂತಾಗಿದೆ. ನೀವು ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಅವರ ಸಾವಿನ ಸುದ್ದಿ ಕೇಳಿದಲಾಗಾಯ್ತು ನನ್ನ ಕಣ್ಣುಗಳು ಕಪ್ಪಿಟ್ಟಿವೆ. ಊಟಕ್ಕೆ ಕುಳಿತರೆ ತುತ್ತುಗಳೇ ಒಳಗೆ ಇಳಿಯುವುದಿಲ್ಲ, ಅವರ ಆಕೃತಿ ಕಣ್ಮುಂದೆ ಬಂದು ನಿಂತಂತಾಗಿ ಕೈ ಎಂಜಲು ಮಾಡಿ ಬಿಟ್ಟುಬಿಡುತ್ತೇನೆ. ಯಾವ ಕೆಲಸದಲ್ಲೂ ಆಸಕ್ತಿ ಇಲ್ಲದಂತಾಗಿದೆ. ಸ್ವಂತ ತಮ್ಮ ಸತ್ತರೆ ಎಷ್ಟು ದುಃಖವಾಗುತ್ತೋ. ಅಷ್ಟೇ ದುಃಖವಾಗಿದೆ ನನಗೀಗ. ಅವರು ಮನುಷ್ಯರಲ್ಲ ರತ್ನ, ರತ್ನದಂತಿದ್ದರು!'

ಮೋಟೆರಾಮ : 'ಆ ಊರಲ್ಲಿ ಇನ್ನು ಅಂಥ ಮನುಷ್ಯ ಸಿಗೊಲ್ಲ ಸಾಹುಕಾರರೆ.'

ಭಾಲಚಂದ್ರ : 'ನನಗೆ ಗೊತ್ತಿದೆ ಪುರೋಹಿತರೆ. ನೀವು ನನಗೆ ಹೇಳಬೇಕಾ ? ಅಂಥ ಮನುಷ್ಯರು ಲಕ್ಷಕ್ಕೊಬ್ಬರು, ಕೋಟಿಗೊಬ್ಬರು, ಅಷ್ಟೆ. ನನಗೆ ಅವರು ಎಷ್ಟು ಚೆನ್ನಾಗಿ ಗೊತ್ತಿತ್ತೋ, ಅಷ್ಟು ಚೆನ್ನಾಗಿ ಅವರು ಯಾರಿಗೂ ಗೊತ್ತಿರಲಿಲ್ಲವೆಂದರೂ ಸರಿಹೋಗುತ್ತೆ. ಎರಡು-ಮೂರು ಸಾರಿ ಭೇಟಿಯಾಗುವುದರಲ್ಲಿಯೇ ನಾನು ಅವರ ಭಕ್ತನಾಗಿಬಿಟ್ಟೆ. ನಾನು ಸಾಯುವವರೆಗೂ ಹಾಗೆಯೇ ಇರ್ತೇನೆ. ನಮ್ಮ ಬೀಗತಿಯವರಿಗೆ ಹೇಳಿ ನನಗೆ ತುಂಬಾ ಬೇಸರವಾಗಿದೆ ಅಂತ.'

ಮೋಟೆರಾಮ : 'ನೀವು ಹೀಗೆ ಹೇಳ್ತೀರಾ ಅಂತ ನನಗೆ ಗೊತ್ತಿತ್ತು ! ನಿಮ್ಮಂಥ ಸಜ್ಜನರ ದರ್ಶನವಾಗುವುದೇ ಒಂದು ಪುಣ್ಯ. ಹೀಗಿಲ್ಲದೆ ಇದ್ದಿದ್ದರೆ ಇವತ್ತಿನ ಕಾಲದಲ್ಲಿ ವರದಕ್ಷಿಣೆ ಇಲ್ಲದೆ ತಮ್ಮ ಮಗನಿಗೆ ಯಾರು ಮದುವೆ ಮಾಡ್ತಾರೆ ಹೇಳಿ ?'

ಭಾಲಚಂದ್ರ : 'ಅಲ್ಲಾ ಸ್ವಾಮಿ, ಅಂಥಾ ಸತ್ಯಪುರುಷನ ಜೊತೆ ವರದಕ್ಷಿಣೆ ಮಾತು ಕೂಡದು, ಕೂಡದು. ಅವರೊಡನೆ ಸಂಬಂಧ ಬೆಳೆಯೋದು ಅಂದ್ರೇನೆ ಒಂದು ಲಕ್ಷ ರೂಪಾಯಿಗೆ ಸಮಾನ. ನಾನು ಇದನ್ನೇ ನನ್ನ ಅಹೋಭಾಗ್ಯ ಅಂದುಕೊಂಡಿದ್ದೇನೆ. ಓಹ್ ! ಅವರು ಎಂಥಾ ಉದಾರ ಹೃದಯವಂತರಾಗಿದ್ದರು! ಅವರು ಹಣಕ್ಕೆ ಯಾವುದೇ ಮಹತ್ವವನ್ನು ಕೊಟ್ಟವರಲ್ಲ. ಹುಲ್ಲು ಗರಿಕೆಯಷ್ಟು ಸಹ ಅವರು ಅದನ್ನು ಮಹತ್ವದ್ದಾಗಿ ಸ್ವೀಕರಿಸಲಿಲ್ಲ. ವರದಕ್ಷಿಣೆ ಅನ್ನುವುದು ಅನಿಷ್ಟ ಸಂಪ್ರದಾಯ, ಖಂಡಿತ ಅನಿಷ್ಟ ಸಂಪ್ರದಾಯ. ನನ್ನ ಕೈ ನಡೆದಿದ್ದರೆ ವರದಕ್ಷಿಣೆ ತೆಗೆದುಕೊಳ್ಳುವವರಿಗೆ ಮತ್ತು ಕೊಡುವವರಿಗೆ, ಇಬ್ಬರಿಗೂ ಗುಂಡಿನಿಂದ ಹೊಡೆದು ಸಾಯಿಸಿ ಬಿಡ್ತಿದ್ದೆ. ನಿಜವಾಗಿಯೂ ಪುರೋಹಿತರೆ, ಆಮೇಲೆ ನೇಣು ಹಾಕಿದರೂ ಹಾಕಲಿ, ಜೈಲಿಗಾದರೂ ಕಳಿಸಲಿ, ನಾನು ಲೆಕ್ಕಕ್ಕಿಡುವವನಲ್ಲ. ಗಂಡಿನವರು ಮಗನ ಮದುವೆ ಮಾಡ್ತಾರೋ, ಇಲ್ಲ, ಅವನನ್ನು "ಮಾರ್ತಾರೋ' ! ಮದುವೇನ ವೈಭವದಿಂದ ಮಾಡಬೇಕು ಅಂತಿದ್ದರೆ ಖಂಡಿತವಾಗಿಯೂ ಮಾಡಿ ಸ್ವಾಮಿ:, ಆದರೆ ಒಂದು ಮಾತು ನೆನಪಿಟ್ಟುಕೊಳ್ಳಿ, ನಿಮ್ಮ ಖರ್ಚಿನಿಂದ ಮಾಡಿ. ಅದು ಬಿಟ್ಟು ಮಗನ ಮದುವೆ ಮಾಡ್ತೀನಿ ಅಂತ ಕನ್ಯಾಪಿತೃಗಳ ಕತ್ತನ್ನು ಏಕೆ ಹಿಸುಕುತ್ತೀರಿ ? ಹೀಗೆ ಮಾಡುವುದು ನೀಚ ಕೆಲಸ ಅಂದ್ರೆ ನೀಚ ಕೆಲಸ. ನನ್ನ ಕೈಲಿ ಅಧಿಕಾರವಿದ್ದಿದ್ದರೆ ಈ ಪಾಪಿಗಳಿಗೆ ಬಂದೂಕದಿಂದ ಸಾಯಿಸಿಬಿಡ್ತಿದ್ದೆ'

ಮೋಟೆರಾಮ : 'ಈ ಮಾತುಗಳನ್ನು ಕೇಳಿ ನಾನು ಧನ್ಯನಾದೆ ಸ್ವಾಮೀ, ಧನ್ಯನಾದೆ. ದೇವರು ನಿಮಗೆ ದೊಡ್ಡ ಬುದ್ಧಿ ದೊಡ್ಡ ಮನಸ್ಸು ಕೊಟ್ಟಿದ್ದಾನೆ. ಇದು ಧರ್ಮದ ಪ್ರತಾಪವಲ್ಲದೆ ಮತ್ತೇನು ? ನಮ್ಮ ಯಜಮಾನಿತಿ ವಿವಾಹದ ಮುಹೂರ್ತ ಅದೇ ಇರಲಿ ಅಂತ ಹೇಳಿದ್ದಾರೆ. ಬಾಕಿ ವಿಷಯಗಳನ್ನು ಪತ್ರದಲ್ಲಿ ಬರೆದಿದ್ದು ನೀವು ಓದಿದ್ದೀರಿ. ಈಗ ನೀವು ಅವರ ಉದ್ಧಾರಕರು. ನಿಮ್ಮ ಕೃಪೆಯೊಂದಿದ್ದರೆ ನಾವು ಉದ್ಧಾರವಾಗ್ತೀವಿ ಹಾಗೆ ನೋಡಿದರೆ, ದಿಬ್ಬಣದ ಜತೆ ಬಂದವರನ್ನೆಲ್ಲ ನಾವು ಸತ್ಕರಿಸುತ್ತೇವೆ. ಆದರೆ ಸಂದರ್ಭಗಳು ಬದಲಾಗಿವೆ. ಅಲ್ಲಿ ಮಾಡುವವರು ಯಾರೂ ಇಲ್ಲ. ವಕೀಲ ಸಾಹೇಬರ ಹೆಸರಿಗೆ ಕಳಂಕ ಬರದಂತೆ ನೀವು ದೊಡ್ಡ ಮನಸ್ಸು ಮಾಡಿ ನಿಗಾ ವಹಿಸಿದರೆ ಸಾಕು.'

ಭಾಲಚಂದ್ರರು ಒಂದು ನಿಮಿಷ ಕಣ್ಮುಚ್ಚಿಕೊಂಡರು. ನಂತರ ನಿಟ್ಟುಸಿರಿಡುತ್ತ ನುಡಿದರು. 'ಆ ಲಕ್ಷ್ಮಿ ನಮ್ಮ ಮನೆಗೆ ಬರುವುದು ಆ ಪರಮೇಶ್ವರನಿಗೆ ಇಷ್ಟವಿಲ್ಲ ಅಂತ ಕಾಣುತ್ತೆ. ಇಲ್ಲದಿದ್ದರೆ ಈ ವಜ್ರಾಘಾತವೇಕಾದರೂ ಆಗುತ್ತಿತ್ತು ? ಮನಸ್ಸಿನ ಆಸೆ–ಆಕಾಂಕ್ಷೆಗಳೆಲ್ಲ ಹೀಗೇಕೆ ಮಣ್ಣುಗೂಡುತ್ತಿದ್ದವು ? ಮಗನ ಮದುವೆಯಾಗುತ್ತಿದೆ, ಮದುವೆ ದಿನಗಳು ಹತ್ತಿರ ಬರುತ್ತಿವೆ ಎಂದು ಅದೆಷ್ಟು ಸಂತೋಷದಿಂದಿದ್ದೆ ನಾನು. ಆದರೆ ಭಗವಂತನ ಇಚ್ಛೆಯೇ ಬೇರೆಯಾಯ್ತು. ಸತ್ತವರ ನೆನಪೇ ಸಾಕು

ಬದುಕಿರುವವರ ಕಣ್ಣಲ್ಲಿ ನೀರು ತರಲು. ಬೀಗಿತಿಯವರನ್ನು ನೋಡಿದರೆ ನೆನಪು ಇನ್ನೂ ಹಸಿರಾಗಿ ಬಿಡುತ್ತದೆ. ಆಗ ನಾನು ಏನು ಮಾಡುತ್ತೇನೆ ಎಂಬುದು ನನಗೆ ಗೊತ್ತಿರುವುದಿಲ್ಲ. ಯಾರೊಡನೆಯೇ ಆಗಲಿ ಒಂದು ಸಾರಿ ಆತ್ಮೀಯತೆ ಬೆಳೆಯಿತು ಅಂದರೆ ಅವರ ನೆನಪು ನನ್ನ ಮನಸ್ಸಿನಿಂದ ದೂರವಾಗುವುದೇ ಇಲ್ಲ. ಇದನ್ನು ನೀವು ನನ್ನ ಗುಣವೆನ್ನಬಹುದು. ಇಲ್ಲ, ದೋಷವೆನ್ನಬಹುದು. ಈಗಂತೂ ಅವರ ರೂಪವೇ ನನ್ನ ಕಣ್ಮುಂದೆ ನರ್ತಿಸುತ್ತಿದೆ. ಇನ್ನು ಆ ಹುಡುಗಿ ಮನೆಗೆ ಬಂದಳೂ ಅಂದರೆ ನಾನು ಬದುಕಿ ಉಳಿಯುವುದೇ ಕಷ್ಟವಾಗುತ್ತೆ. ನಂಬಿದರೆ ನಂಬಿ ಬಿಟ್ಟರೆ ಬಿಡಿ ಅತ್ತು–ಅತ್ತು ನನ್ನ ಕಣ್ಣುಗಳೇ ಹೊರಟು ಹೋಗುತ್ತವೆ. ಹೀಗೆ ಅತ್ತು–ಕರೆದು ಮಾಡುವುದು ವ್ಯರ್ಥ ಅಂತ ನನಗೆ ಗೊತ್ತಿದೆ. ಸತ್ತು ಸ್ವರ್ಗ ಸೇರಿದವರು ಮತ್ತೆ ಬರೋಲ್ಲ ಎಂಬುದೂ ಸ್ಪಷ್ಟವಾಗಿಯೇ ಇದೆ. ಆದರೆ ಸಮಾಧಾನ ತಂದುಕೊಳ್ಳುವುದನ್ನು ಬಿಟ್ಟರೆ ಬೇರೆ ಉಪಾಯವಿಲ್ಲ. ನನ್ನ ಹೃದಯ ಬೆಂದಿದೆ. ಆ ಅನಾಥ ಹುಡುಗಿಯನ್ನು ನೋಡಿದರೆ ಕರುಳು ಕಿತ್ತು ಬರುತ್ತದೆ.'

ಮೋಟೆರಾಮ: 'ಹೀಗೆಲ್ಲ ಮಾತನಾಡಬೇಡಿ ಸ್ವಾಮಿ. ವಕೀಲ ಸಾಹೇಬರು ತೀರಿಕೊಂಡರೇನಾಯಿತು. ಅವರ ಜಾಗದಲ್ಲಿ ನೀವಿದ್ದೀರಲ್ಲ ಈಗ ನೀವು ಆಕೆಯ ತಂದೆಯ ಸ್ಥಾನದಲ್ಲಿದ್ದೀರಿ. ಈಗ ಆಕೆ ವಕೀಲರ ಮಗಳಲ್ಲ. ನಿಮ್ಮ ಮಗಳು. ನಿಮ್ಮ ಹೃದಯದ ಭಾವನೆಗಳು ಜನರಿಗೆ ಗೊತ್ತಾಗುವುದಿಲ್ಲ. ಆದರೆ ಜನಗಳು ಏನು ತಿಳಿದುಕೊಳ್ಳುತ್ತಾರೆ ಗೊತ್ತಾ ? ವಕೀಲರು ಸತ್ತು ಹೋಗುತ್ತಿದ್ದಂತೆಯೇ ನೀವು ಮಾತಿಗೆ ಕದ್ದಿರಿ ಅಂತ ಹೇಳ್ತಾರೆ. ಇದರಿಂದ ನಿಮಗೆ ಕೆಟ್ಟ ಹೆಸರು ಬರುತ್ತೆ. ಮನಸ್ಸಿಗೆ ಧೈರ್ಯ ತಂದುಕೊಂಡು ಸಂತೋಷದಿಂದ ನಗುನಗುತ್ತ ಕನ್ಯೆಯ ಪಾಣಿಗ್ರಹಣ ಮಾಡಿಸಿಕೊಳ್ಳಿ. ಆನೆ ಸತ್ತರೂ ಅದರ ಬೆಲೆ ಅದಕ್ಕೆ ಇದ್ದೇ ಇದೆ. ಲಕ್ಷ ಕಷ್ಟಗಳಿದ್ದರೂ ನಮ್ಮ ಯಜಮಾನಿತಿ ದಿಬ್ಬಣದ ಜೊತೆ ಬರುವವರ ಆದರ ಸತ್ಕಾರ ಮಾಡುವುದರಲ್ಲಿ ಯಾವುದೇ ಕೊರತೆ ಇರುವುದಿಲ್ಲ.'

ಪಂಡಿತ ಮೋಟೆರಾಮರು ಬರಿ ಪುಸ್ತಕದ ಬದನೆಕಾಯಿ ಪಂಡಿತರಲ್ಲ. ವ್ಯವಹಾರ ಕುಶಲರೂ ಇದ್ದಾರೆ ಎಂಬುದನ್ನು ಬಾಬು ಸಾಹೇಬರು ಅರ್ಥ ಮಾಡಿಕೊಂಡರು. ನಂತರ ಮಾತು ಮುಂದುವರಿಸಿದರು–'ಪುರೋಹಿತರೆ, ಪ್ರಮಾಣ ಪೂರ್ವಕವಾಗಿ ಹೇಳ್ತಿದ್ದೇನೆ. ಆ ಹುಡುಗಿಯನ್ನು ಕಂಡರೆ ನನಗೆ ಎಷ್ಟು ಪ್ರೀತಿ ಇದೆ ಅಂದ್ರೆ ಅಷ್ಟು ಪ್ರೀತಿ ನನ್ನ ಮಗಳ ಮೇಲೂ ಇಲ್ಲ. ಆದರೆ ಈ ಸಂಬಂಧ ಆ ಭಗವಂತನಿಗೇ ಇಷ್ಟವಿಲ್ಲಾಂದ ಮೇಲೆ ನನ್ನದೇನು ನಡೆಯುತ್ತೆ ? ಈ ಸಾವು ಒಂದು ಅಶುಭದ ಸೂಚನೆಯಾಗಿದ್ದು, ಆ ದೇವರೇ ಅದನ್ನು ಈ ಮೂಲಕ ನಮಗೆ ನೀಡಿದ್ದಾನೆ. ಮುಂಬರುವ ಯಾವುದೋ ಕಷ್ಟದ ಆಕಾಶವಾಣಿ ಇದು. ಈ ಮದುವೆ ಮಂಗಳಮಯವಾದುದಲ್ಲ ಎಂದು ಆ ವಿಧಾತನೇ ಸ್ಪಷ್ಟ ಸೂಚನೆ ನೀಡಿದ್ದಾನೆ. ನೀವು

ತಿಳಿದವರು, ಓದಿದವರು. ಈಗ ಈ ಸಂಬಂಧ ಮಾಡುವುದು ಎಷ್ಟು ಮಟ್ಟಿಗೆ ಉಚಿತ ಎಂಬುದನ್ನು ನೀವೇ ಹೇಳಿ ? ಒಂದು ಕೆಲಸ ಅಮಂಗಳದಲ್ಲೇ ಆರಂಭವಾದರೆ ಅದರ ಅಂತ್ಯ ಮಂಗಳವಾಗುತ್ತೇನು ? ಇಲ್ಲ, ಇಲ್ಲ. ಸಾಧ್ಯವಾಗುವುದಿಲ್ಲ. ನೋಡಿ ನೋಡಿ ಯಾರಾದರೂ ನೊಣ ತಿನ್ತಾರೇನು ? ಬೀಗತಿಯವರಿಗೆ ತಿಳಿಸಿ ಹೇಳಿ. ನಾನೇನೊ ಅವರ ಆಜ್ಞೆಯನ್ನು ಪಾಲಿಸಲು ಸಿದ್ಧ. ಆದರೆ ಅದರ ಪರಿಣಾಮ ಚೆನ್ನಾಗೊಲ್ಲ ಅಂತ. ಸ್ವಾರ್ಥಾಂಧನಾಗಿ ನಾನು ನನ್ನ ಪರಮ ಸ್ನೇಹಿತರ ಮಗಳಿಗೆ ಅನ್ಯಾಯ ಮಾಡಲು ಸಿದ್ಧನಿಲ್ಲ ಅಂತ'

ಈ ತರ್ಕದ ಮುಂದೆ ಪುರೋಹಿತರು ನಿರುತ್ತರರಾದರು. ಆತ ತನ್ನ ಬತ್ತಳಿಕೆಯಿಂದ ಎಂಥ ಅಸ್ತ್ರವನ್ನು ಬಿಟ್ಟಿದ್ದನೆಂದರೆ ಅದನ್ನು ಶಮನಗೊಳಿಸುವ ಅಸ್ತ್ರ ಇವರ ಬಳಿ ಇರಲಿಲ್ಲ. ಶತ್ರು ಎದುರಾಳಿಯ ಅಸ್ತ್ರದಿಂದಲೇ ಆತನನ್ನು ಹಿಮ್ಮೆಟ್ಟಿಸಿದ್ದ. ಹೀಗಾಗಿ ಅದಕ್ಕೆ ಬದಲು ಹೇಳುವುದು ಸುಲಭವಾಗಿ ಸಾಧ್ಯವಾಗಲಿಲ್ಲ. ಪುರೋಹಿತರು ಉತ್ತರಕ್ಕಾಗಿ ಯೋಚಿಸುತ್ತಿದ್ದರು. ಅಷ್ಟರಲ್ಲಿ ಬಾಬುಸಾಹೇಬರು ಪುನಃ ನೌಕರರನ್ನು ಕರೆಯಲಾರಂಭಿಸಿದರು. ಅರೆ ಎಲ್ಲಿ ಹಾಳಾದರೋ ಝುಗಡೂ, ಛಕೌಡಿ, ಭವಾನಿ. ಗುರುದ್ದೀನ್, ರಾಮಗುಲಾಂ ! ಒಬ್ಬನೂ ಬಾಯಿ ಬಿಡೋಲ್ಲ. ಎಲ್ಲರೂ ಸತ್ತು ಹೋದರು ಅಂತ ಕಾಣುತ್ತೆ ಪುರೋಹಿತರಿಗೆ ತಿಂಡಿ–ತೀರ್ಥದ ವ್ಯವಸ್ಥೆ ಮಾಡಬೇಕು ಅನ್ನುವುದರ ಪರಿಜ್ಞಾನವಾದರೂ ಇದೆಯೇ ? ಇವರಿಗೆ ಎಷ್ಟು ಅಂತ ಹೇಳೋದು. ಬುದ್ಧಿ ಅನ್ನೋದು ಕೊಂಚವೂ ಇಲ್ಲ. ಈ ಪುರೋಹಿತರು ಎಷ್ಟು ದೂರದಿಂದ ದಣಿದು ಬಂದಿದ್ದಾರೆ ಅಂತ ಏನಾದರೂ ಯೋಚಿಸಿದ್ದಾರಾ ? ಎಲ್ಲಿಗೆ ಹಾಳಾಗಿ ಹೋದರೊ ? ತಿಂಡಿ–ತೀರ್ಥ ತಗೊಂಡು ಬನ್ನಿರೋ. ಪುರೋಹಿತರೆ, ಶರಬತ್ ಮಾಡಿಸಲೋ, ಇಲ್ಲ ಸಿಹಿ ತಿಂಡಿ ತರಿಸಲೋ ?'

ಮೋಟೆರಾಮ ಸಿಹಿ ತಿಂಡಿಗಳ ವಿಚಾರದಲ್ಲಿ ಯಾವುದೇ ಬಗೆಯ ಬಂಧನವನ್ನು ಇಟ್ಟವರಲ್ಲ. ಅವರ ಪ್ರಕಾರ ತುಪ್ಪ ಹಾಕಿದರೆ ಎಲ್ಲ ವಸ್ತುಗಳೂ ಪವಿತ್ರವಾಗಿ ಬಿಡುತ್ತವೆ. ರಸಗುಲ್ಲಾ ಮತ್ತು ಲಾಡು ಅವರಿಗೆ ತುಂಬಾ ಪ್ರಿಯವಾದ ಸಿಹಿಗಳು. ಶರಬತ್ ಅಂದರೆ ಅಷ್ಟು ಆಸಕ್ತಿ ಇರಲಿಲ್ಲ. ನೀರಿನಿಂದ ಹೊಟ್ಟೆ ತುಂಬಿಕೊಳ್ಳುವುದು ಅವರ ನಿಯಮಕ್ಕೆ ವಿರುದ್ಧವಾಗಿತ್ತು. ಸಂಕೋಚದಿಂದಲೇ ಹೇಳಿದರು–'ಶರಬತ್ ಕುಡಿದು ನನಗೆ ಅಭ್ಯಾಸವಿಲ್ಲ, ಸಿಹಿ ತಿಂಡಿ ತಿನ್ತೇನೆ'

ಅಷ್ಟು ಹೊತ್ತಿಗೆ ಸರಿಯಾಗಿ ಒಬ್ಬ ಮುದುಕ ಅಲ್ಲಿಗೆ ಬಂದ. ಅವನನ್ನು ಕುರಿತು ಬಾಬು ಸಾಹೇಬರು ಹೇಳಿದರು–'ಪೇಟೆಗೆ ಹೋಗಿ ಒಂದಾಣೆಯ ತಾಜಾ ಸಿಹಿತಿಂಡಿಯನ್ನು ತೆಗೆದುಕೊಂಡು ಬಾ. ಬೇಗಾ.......' ಆತನಿಗೆ ಆಜ್ಞೆ ಮಾಡಿ ಬಾಬು ಸಾಹೇಬರು ಮನೆ ಒಳಗಡೆ ಹೋಗಿ ಹೆಂಡತಿಗೆ ಹೇಳಿದರು–'ಅಲ್ಲಿಂದ ಪುರೋಹಿತರು ಬಂದಿದ್ದಾರೆ. ಈ ಕಾಗದ ತಂದಿದ್ದಾರೆ, ಓದಿಕೋ'

ಅವರ ಹೆಂಡತಿಯ ಹೆಸರು ರಂಗೀಲಿಬಾಯಿ ಅಂತ. ಗೌರವರ್ಣದ ಆಕೆ ಸದಾ

ಪ್ರಸನ್ನಚಿತ್ತಳಾಗಿರುತ್ತಿದ್ದಳು. ರೂಪ ಮತ್ತು ಯೌವನ ಅವಳಿಂದ ಬೀಳ್ಕೊಳ್ಳಲಾರಂಭಿಸಿದ್ದುವು. ಆದರೆ ಅವು ಪ್ರಿಯತಮನಂತೆ ಮೂವತ್ತು ವರ್ಷಗಳ ಕಾಲ ಜೊತೆಯಲ್ಲಿದ್ದುದರಿಂದ ಅಷ್ಟು ಸುಲಭವಾಗಿ ಬೀಳ್ಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ರಂಗೀಲಿಬಾಯಿ ಕುಳಿತುಕೊಂಡು ತಾಂಬೂಲ ಹಾಕಿಕೊಳ್ಳುತ್ತಿದ್ದಳು. 'ನಾವು ಅಲ್ಲಿ ಮದುವೆ ಮಾಡಿಕೊಳ್ಳೊಲ್ಲ ಅಂತ ಹೇಳಿದಿರಿ ತಾನೇ ?' ಅಂದಳು.

ಭಾಲಚಂದ್ರ : 'ಒಂದು ಸಾರಿ ಆಡಿದ ಮಾತನ್ನು ಉಳಿಸಿಕೊಳ್ಳದೇ ಇರುವುದು ಒಳ್ಳೆಯದಲ್ಲ. ಯಾರೂ ಬಾಯಿಂದ ಆಡದೇ ಹೋದರೂ ಕೆಟ್ಟ ಹೆಸರು ಬರದೇ ಇರುವುದಿಲ್ಲ. ಆದರೆ ನಿನ್ನ ಹಠದ ಮುಂದೆ ನನಗೆ ಬೇರೆ ಗತ್ಯಂತರವಿರಲಿಲ್ಲ.'

ರಂಗೀಲಿಬಾಯಿ ತಾಂಬೂಲ ಮೆಲ್ಲುತ್ತ ಪತ್ರವನ್ನು ತೆರೆದು ಓದಲಾರಂಭಿಸಿದಳು. ಹಿಂದಿಯನ್ನು ಓದಿ–ಬರೆಯುವುದು ಬಾಬು ಸಾಹೇಬರಿಗೆ ಕೊಂಚವೂ ಬರುತ್ತಿರಲಿಲ್ಲ. ರಂಗೀಲಿ ಬಾಯಿಗೂ ಪುಸ್ತಕಗಳನ್ನು ಓದುವ ಅಭ್ಯಾಸವಿತ್ತೆಂದೇನೂ ಅಲ್ಲ. ಆದರೆ ಸಣ್ಣ ಪುಟ್ಟ ಪತ್ರಗಳನ್ನು ಆಕೆ ಓದಿಕೊಳ್ಳುತ್ತಿದ್ದಳು. ಕಲ್ಯಾಣಿಯ ಪತ್ರದ ಮೊದಲ ಪಂಕ್ತಿಯನ್ನು ಓದುತ್ತಿದ್ದಂತೆಯೇ ಆಕೆಯ ಕಣ್ಣುಗಳು ನೀರಾಡಲಾರಂಭಿಸಿದುವು. ಪತ್ರವನ್ನು ಓದಿ ಮುಗಿಸುವ ಹೊತ್ತಿಗೆ ಅವಳ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಹರಿಯತೊಡಗಿತ್ತು. ಆ ಪತ್ರದ ಒಂದೊಂದು ಅಕ್ಷರದಲ್ಲೂ ದೈನ್ಯತೆ ಹೆಪ್ಪುಗಟ್ಟಿತ್ತು. ರಂಗೀಲಿಬಾಯಿಯ ಸ್ವಭಾವ ಕಲ್ಲಿನಂಥ ಕಠೋರ ಸ್ವಭಾವದ ಅರಗಿನಂತಿತ್ತು. ಕಲ್ಯಾಣಿಯ ಕರುಣಾಪೂರಿತ ಶಬ್ದಗಳು ಆಕೆಯ ಸ್ವಾರ್ಥಾಂಧ ಹೃದಯವನ್ನೂ ಕರಗಿಸಿಬಿಟ್ಟವು. ತುಂಬಿ ಬಂದ ಗಂಟಲಿನಲ್ಲಿ 'ಪುರೋಹಿತರು ಇನ್ನೂ ಇಲ್ಲಿಯೇ ಇದ್ದಾರಾ ?' ಅಂತ ಕೇಳಿದಳು.

ಭಾಲಚಂದ್ರರು ಹೆಂಡತಿಯ ಕಣ್ಣೀರನ್ನು ನೋಡಿ ಸ್ತಂಭೀಭೂತರಾದರು. ನಾನು ಈ ಪತ್ರವನ್ನು ಹೆಂಡತಿಗೆ ಏಕಾದರೂ ತೋರಿಸಿದೆನೋ ಎಂದುಕೊಂಡು ಪರದಾಡಿದರು. ನಾನು ಈ ಪತ್ರವನ್ನು ಈಕೆಗೆ ತೋರಿಸುವ ಅವಶ್ಯಕತೆಯಾದರೂ ಏನಿತ್ತು ? ಈ ಬಗೆಯ ತಪ್ಪನ್ನು ಅವರೆಂದೂ ಮಾಡಿದವರಲ್ಲ. ಸಂದಿಗ್ಧ ಭಾವದಲ್ಲಿ ಹೇಳಿದರು– 'ಬಹುಶಃ ಕುಳಿತಿರಬಹುದು, ನಾನೇನೋ ಅವರಿಗೆ ಹೋಗಿ ಅಂತ ಹೇಳ್ದೆ.' ರಂಗೀಲಿ ಕಿಟಕಿಯಲ್ಲಿ ಇಣುಕಿ ನೋಡಿದಳು. ಪಂಡಿತ್ ಮೋಟರಾಮ ಬಕ ಪಕ್ಷಿಯ ಹಾಗೆ ಧ್ಯಾನ ಮಾಡುತ್ತ ಪೇಟೆಯ ಕಡೆಗೇ ದಿಟ್ಟಿಸುತ್ತಿದ್ದರು. ಸಿಹಿ ತಿಂಡಿಯನ್ನು ಕಾಯುತ್ತ ಕುಳಿತಿದ್ದ ಅವರು ಕಾತುರತೆಯಿಂದ ಮಗ್ಗಲು ಬದಲಿಸಿ ಬದಲಿಸಿ ಕುಳಿತುಕೊಳ್ಳುತ್ತಿದ್ದರು. 'ಒಂದಾಣೆಯ ಸಿಹಿ ತಿಂಡಿ' ಅವರಿಂದ ಹೀಗೆಲ್ಲ ಮಾಡಿಸುತ್ತಿತ್ತು. ಅದನ್ನು ತರುವುದರಲ್ಲೂ ಇಷ್ಟು ತಡ ! ಅವರು ಕುಳಿತಿರುವುದನ್ನು ನೋಡಿ ರಂಗೀಲಿ ಬಾಯಿ ನುಡಿದಳು : 'ಇದಾರೆ. ಇದಾರೆ, ಇನ್ನೂ ಇಲ್ಲೇ ಇದಾರೆ. ಹೋಗಿ ಹೇಳಿ ಅಂದ್ರೆ.... ನಾವು ಮದುವೆ ಮಾಡಿಕೊಳ್ತೇವೆ. ಖಂಡಿತ ಮಾಡಿಕೊಳ್ತೇವೆ ಅಂತ. ಪಾಪ, ಆ ಬಡಪಾಯಿ ತುಂಬಾ ಕಷ್ಟದಲ್ಲಿದ್ದಾಳೆ.'

ಭಾಲಚಂದ್ರ : 'ನೀನು ಒಂದೊಂದು ಸಾರಿ ಮಕ್ಕಳಂತೆ ಮಾತನಾಡ್ತೀಯಾ, ಈಗ ತಾನೇ ನಾನು ಅವರಿಗೆ ಈ ಮದುವೆ ನಮಗೆ ಒಪ್ಪಿಗೆ ಇಲ್ಲ ಅಂತ ಹೇಳಿ ಬಂದಿದ್ದೇನೆ. ಅಷ್ಟು ಹೇಳೋಕೆ ಅದೆಷ್ಟು ಕಷ್ಟಪಡಬೇಕಾಯ್ತು ಗೊತ್ತಾ ? ಈಗ ಹೋಗಿ ನಿನ್ನ ಮಾತನ್ನು ಹೇಳಿದರೆ ಅವರು ಮನಸ್ಸಿನಲ್ಲಿ ಏನು ತಿಳಿದುಕೊಂಡಾರು ಅಂತ ನೀನು ಯೋಚಿಸಿದ್ದೀಯಾ ? ಇದು ಮದುವೆ ವಿಚಾರ. ಮಕ್ಕಳ ಆಟವಲ್ಲ, ಈಗೊಂದು ಆಮೇಲೊಂದು ಅಂತ ಹೇಳೋದಕ್ಕೆ. ಕ್ಷಣಕ್ಷಣಕ್ಕೂ ಮಾತು ಬದಲಾಯಿಸಿದರೆ ಯಾರಾದರೂ ನಮ್ಮನ್ನು ದೊಡ್ಡ ಮನುಷ್ಯರು ಅಂತಾರೇನು ? ಹುಡುಗಾಟಿಕೆ ಮಾಡ್ತಿದ್ದಾರೆ ಅಂತ ಅನ್ನುವುದಿಲ್ಲವೇನು ?'

ರಂಗೀಲಿ : 'ಆಯಿತು. ನಿಮ್ಮ ಬಾಯಿಂದ ನಿಮಗೆ ಹೇಳಲಾಗದಿದ್ದರೆ ಬಿಡಿ, ಆ ಪುರೋಹಿತರನ್ನು ನನ್ನ ಬಳಿ ಕಳಿಸಿ. ನಿಮ್ಮ ಮಾತೂ ಉಳಿಯಬೇಕು, ಕೆಲಸವೂ ಆಗಬೇಕು, ಆ ರೀತಿ ನಾನು ಅವರಿಗೆ ಹೇಳ್ತೀನಿ. ಇದಕ್ಕೆ ನಿಮ್ಮ ಆಕ್ಷೇಪಣೆ ಇಲ್ಲ ತಾನೆ ?'

ಭಾಲಚಂದ್ರ : 'ನೀನು ನಿನ್ನ ಹೊರತಾಗಿ ಉಳಿದ ಪ್ರಪಂಚವನ್ನೆಲ್ಲ ಮುಗ್ಧವೆಂದೇ ಭಾವಿಸಿದ್ದೀಯಾ. ನೀನು ಹೇಳಿದರೂ ಒಂದೇ, ನಾನು ಹೇಳಿದರೂ ಒಂದೇ ಅಲ್ಲವೇನು ? ಮಾತಾಡಿದ್ದು ಆಗಿದೆ. ಅಲ್ಲಿಗೆ ಅದು ಮುಗಿಯಿತು. ನಾನು ಮತ್ತೆ ಅದೇ ಮಾತನ್ನು ಎತ್ತಲು ಬಯಸುವುದಿಲ್ಲ. ನಾನು ಆ ಮನೆಯಿಂದ ಹೆಣ್ಣನ್ನು ತಂದುಕೊಳ್ಳುವುದಿಲ್ಲ ಅಂತ ನೀನೇ ತಾನೇ ರಾಗ ಹಾಡುತ್ತಿದ್ದುದು ? ನಿನ್ನಿಂದಾಗಿಯೇ ನಾನು ನನ್ನ ಮಾತನ್ನು ಕಳೆದುಕೊಳ್ಳಬೇಕಾಯಿತು. ಈಗ ಪುನಃ ನೀನು ಬಣ್ಣ ಬದಲಿಸುತ್ತಿದ್ದೀಯಾ ? ನಿನ್ನ ಈ ವರ್ತನೆ ಹೇಗಿದೆಯೆಂದರೆ ಈಗ ನೀನು ನನ್ನ ಎದೆಗೆ ಭರ್ಜಿಯಿಂದ ತಿವಿಯುತ್ತಿದ್ದೀಯಾ. ನನ್ನ ಮಾನ–ಅಪಮಾನದ ಬಗೆಗೂ ನೀನು ಕೊಂಚ ಯೋಚಿಸಬೇಕು.'

ರಂಗೀಲಿ : 'ಆ ವಿಧವೆಯ ಸ್ಥಿತಿ ಇಷ್ಟು ಹೀನಾಯವಾಗಿದೆಯೆಂದು ನನಗೇನು ಗೊತ್ತು ? ತನ್ನ ಗಂಡನ ಸಂಪತ್ತನ್ನೆಲ್ಲವನ್ನೂ ಆಕೆ ಬಚ್ಚಿಟ್ಟುಕೊಂಡು, ಹೊರಗೆ ಬಡತನ ಅಂತ ನಾಟಕ ಆಡಿ ತನ್ನ ಕೆಲಸ ಮಾಡಿಕೊಳ್ಳಲು ಬಯಸುತ್ತಿದ್ದಾಳೆ. ಆಕೆ ಘಾಟಿ ಹೆಂಗಸು ಅಂತ ನೀವೇ ತಾನೇ ಹೇಳಿದ್ದು ? ನೀವು ಹೇಳಿದಿರಿ ಅಂತ ನಾನು ಒಪ್ಪಿಕೊಂಡೆ. ಒಳ್ಳೆಯದನ್ನು ಮೊದಲು ಮಾಡಿ ಆಮೇಲೆ ಕೆಟ್ಟದ್ದನ್ನು ಮಾಡುವಾಗ ಸಂಕೋಚವಾಗಬೇಕು, ನಾಚಿಕೆಯಾಗಬೇಕು. ಆದರೆ ಮೊದಲು ಕೆಟ್ಟದ್ದನ್ನು ಮಾಡಿ ಆಮೇಲೆ ಒಳ್ಳೆಯದನ್ನು ಮಾಡಲು ಸಂಕೋಚವೇನೂ ಆಗಬೇಕಿಲ್ಲ. ನೀವು 'ಆಯಿತು' ಅಂತ ಒಪ್ಪಿಕೊಂಡು ಬಂದು, ನಾನು 'ಆಗಲ್ಲ' ಅಂತ ಹೇಳಿ ಅಂದರೆ ಆಗ ನಿಮಗೆ ಸಂಕೋಚವಾಗುವುದರಲ್ಲಿ ಸಂದೇಹವಿಲ್ಲ. ಆದರೆ 'ಆಗುವುದಿಲ್ಲ' ಅಂತ ಹೇಳಿ 'ಆಗುತ್ತೆ' ಅಂತ ಹೇಳುವುದರಲ್ಲಿ ನಮ್ಮ ದೊಡ್ಡತನವೇ ಕಾಣುತ್ತದೆ.'

ಭಾಲಚಂದ್ರ : 'ನಿನಗೆ ಇದು ದೊಡ್ಡತನ ಅನ್ನಿಸಬಹುದು. ನನಗಂತೂ ಇದರಲ್ಲಿ ಲುಚ್ಚಾತನವೇ ಕಾಣುತ್ತಿದೆ. ನಾನು ವಕೀಲರ ಹೆಂಡತಿಯ ಬಗೆಗೆ ಹೇಳಿದ್ದು ಸುಳ್ಳು ಅಂತ

ನೀನು ಹೇಗೆ ಒಪ್ಪಿದೆ ? ಈ ಪತ್ರವನ್ನು ನೋಡಿಯೇನು ? ನೀನು ಎಷ್ಟು ಸರಳ ಸ್ವಭಾವದವಳಿದ್ದೀಯೋ ಅಷ್ಟೇ ಸರಳ ಸ್ವಭಾವದವರೆಂದು ಬೇರೆಯವರನ್ನೂ ಭಾವಿಸಿದ್ದೀಯಾ ?'

ರಂಗೀಲಿ : 'ಈ ಪತ್ರದಲ್ಲಿ ಯಾವ ಕೃತ್ರಿಮತೆಯೂ ನನಗೆ ಕಾಣುವುದಿಲ್ಲ. ಕೃತ್ರಿಮ ಮಾತುಗಳು ಹೃದಯವನ್ನು ತಟ್ಟುವುದಿಲ್ಲ.'

ಭಾಲಚಂದ್ರ : 'ಕೃತ್ರಿಮ ಮಾತುಗಳು ಹೃದಯವನ್ನು ಹೇಗೆ ತಟ್ಟುತ್ತವೆಯೆಂದರೆ ಅವುಗಳ ಮುಂದೆ ನಿಜದ ಮಾತುಗಳೂ ನಿಜವಾಗಿಯೂ ಸಪ್ಪೆಯಾಗಿ ಕಾಣುತ್ತವೆ. ಕತೆ ಕಾದಂಬರಿಗಳನ್ನು ಓದಿ ನೀನು ಗಂಟೆಗಟ್ಟಲೆ ಕಣ್ಣೀರು ಸುರಿಸುತ್ತೀಯಲ್ಲ, ಇವನ್ನು ಬರೆಯುವವರು ನಿಜವಾದದ್ದನ್ನು ಬರೆಯುತ್ತಾರೇನು ? ಇವರು ಬರೆಯುವುದೆಲ್ಲ ಸುಳ್ಳಿನ ಕಂತೆ ! ಇದೂ ಒಂದು ಕಲೆ.'

ರಂಗೀಲಿ : 'ನೀವು ನನ್ನ ಕಣ್ಣಿಗೂ ಮಣ್ಣೆರಚಲು ಪ್ರಯತ್ನಿಸುತ್ತಿದ್ದೀರಲ್ಲ ? ಅಂಗೈ ಹುಣ್ಣಿಗೆ ಕನ್ನಡಿ ಬೇಕೇನು ? ನೀವು ಹೇಳಿದ್ದನ್ನು ನಾನು ಒಪ್ಪಿಕೊಂಡು ಬಿಡ್ತೇನೆ ಅಂದಾಕ್ಷಣಕ್ಕೆ ನೀವು ನನಗೆ ಚಳ್ಳೇ ಹಣ್ಣು ತಿನ್ನಿಸಿ ಬಿಟ್ಟಿರಿ ಅಂತ ಭಾವಿಸಬೇಡಿ. ನನಗೆ ನಿಮ್ಮ ಒಂದೊಂದು ನರ ನಾಡಿಗಳ ಪರಿಚಯವೂ ಇದೆ. ನೀವು ನಿಮ್ಮ ತಪ್ಪನ್ನು ನನ್ನ ತಲೆಗೆ ಕಟ್ಟಿ ನೀವು ಯಾವ ತಪ್ಪನ್ನೂ ಮಾಡದವರಂತೆ ನಿಷ್ಕಳಂಕವಾಗಿರಲು ಬಯಸುತ್ತೀರೇನು ? ನೀವೇ ಹೇಳಿ, ನಾನು ಸುಳ್ಳು ಹೇಳ್ತಿದ್ದೀನೇನು ? ಆ ವಕೀಲ ಸಾಹೇಬರು ಬದುಕಿದ್ದಾಗ, ವರದಕ್ಷಿಣೆ ಅಂತ ಏನನ್ನಾದರೂ ತೆಗೆದುಕೊಳ್ಳುವುದರ ಅವಶ್ಯಕತೆಯಾದರೂ ಏನಿದೆ, ಅವರು ತಾವಾಗಿಯೇ ಎಷ್ಟು ಕೊಡ್ತಾರೋ ಕೊಡಲಿ ಅಂತ ನೀವು ಹೇಳಿದಿರಿ, ಕೇಳದೆಯೇ ಕೇಳುವುದಕ್ಕಿಂತಲೂ ಹೆಚ್ಚಾಗಿ ಅವರು ಕೊಡ್ತಾರೆ ಅಂತ ನೀವು ನಿರೀಕ್ಷಿಸಿದ್ದಿರಿ ಅಲ್ಲವೆ ? ಈಗ ವಕೀಲ ಸಾಹೇಬರು ತೀರಿಕೊಂಡರು ಅಂತ ಈ ಆಟಗಳನ್ನಾಡುತ್ತಿದ್ದೀರಿ. ಇದು ಒಳ್ಳೆತನವಲ್ಲ, ಸಣ್ಣತನ. ಏನ್ ಮಾಡ್ತೀರೋ ಮಾಡಿ. ನಾನು ಈ ಮದುವೆ ವಿಚಾರಕ್ಕೆ ತಲೆ ಹಾಕುವುದಿಲ್ಲ. ಒಳಗೊಂದು, ಹೊರಗೊಂದು ಮಾಡುವ ಜನರನ್ನು ಕಂಡರೇ ನನಗೆ ಆಗುವುದಿಲ್ಲ. ಒಳ್ಳೆಯ ಕೆಲಸವಾಗಲಿ, ಕೆಟ್ಟ ಕೆಲಸವಾಗಲಿ, ಯಾವುದನ್ನು ಮಾಡಿದರೂ ಒಂದು ಮನಸ್ಸಿನಿಂದ ಮಾಡಿ. ಆಡುವುದೊಂದು, ಮಾಡುವುದೊಂದು ಅನ್ನುವ ನಿಮ್ಮ ಈ ಸಿದ್ಧಾಂತ ನಿಮಗೆ ಶೋಭಿಸುವುದಿಲ್ಲ. ಈಗ ಹೇಳಿ, ಈಗಲಾದರೂ ಅಲ್ಲಿಯೇ ಮದುವೆ ಮಾಡುತ್ತೀರೋ ಅಥವಾ ಇಲ್ಲವೊ ?'

ಭಾಲಚಂದ್ರ : 'ನಾನು ಅಪ್ರಾಮಾಣಿಕ, ಮೋಸಗಾರ, ಸುಳ್ಳುಗಾರ ಅಂತ ಆದ ಮೇಲೆ ನನ್ನನ್ನು ಕೇಳುವುದೇನು ಉಳಿದಿದೆ ? ಜನರನ್ನು ನೀನು ಚೆನ್ನಾಗಿಯೇ ಅರ್ಥಮಾಡಿಕೊಂಡಿದ್ದೀಯಾ. ನಿನ್ನ ಬುದ್ಧಿವಂತಿಕೆಗೆ ಏನು ಹೇಳಲಿ ನಾನು ? ದೊಡ್ಡ ಮನುಷ್ಯೆ ನೀನು.'

ರಂಗೀಲಿ : 'ಇಲ್ಲ, ನೀವು ದೊಡ್ಡ ಮನುಷ್ಯರು. ಈಗಲೂ ನಿಮಗೆ ನಾಚಿಕೆಯಾಗುವುದಿಲ್ಲವೇನು ? ನಿಜವಾಗಿ ಹೇಳಿ ನಾನು ನಿಮ್ಮ ಮನಸ್ಸಿನಲ್ಲಿದ್ದುದನ್ನು ಇದ್ದಂತೆಯೇ ಹೇಳಲಿಲ್ಲವೇನು ?'

ಭಾಲಚಂದ್ರ: 'ಬಿಡು ಬಿಡು, ಗಂಡನ ಮನಸ್ಸನ್ನು ಅರ್ಥಮಾಡಿಕೊಳ್ಳುವ ಹೆಂಗಸರ ರೀತಿಯೇ ಬೇರೆ. ಹೆಂಗಸರ ದೃಷ್ಟಿ ತುಂಬಾ ಸೂಕ್ಷ್ಮವಾಗಿರುತ್ತೆ ಎಂದು ನಾನು ಇವತ್ತಿನವರೆಗೂ ಅಂದುಕೊಂಡಿದ್ದೆ. ಆದರೆ ಇವತ್ತು ನನ್ನ ಅನಿಸಿಕೆ ತಪ್ಪು ಅಂತ ಗೊತ್ತಾಯ್ತು. ಹೆಂಗಸರ ವಿಷಯದಲ್ಲಿ ಸಾಧು–ಸಂತರು ಹೇಳಿರುವ ತತ್ವದ ಮಾತುಗಳನ್ನು ಇವತ್ತು ಒಪ್ಪಿಕೋಬೇಕಾಯಿತು.'

ರಂಗೀಲಿ : 'ಹೋಗಿ ಕನ್ನಡಿಯಲ್ಲಿ ನಿಮ್ಮ ಮುಖ ನೋಡಿಕೊಳ್ಳಿ, ನನ್ನಾಣೆಗೂ ನೋಡಿಕೊಳ್ಳಿ. ಮುಖ ಎಷ್ಟು ಇಳಿದುಹೋಗಿದೆ ಅಂತ ಗೊತ್ತಾಗುತ್ತೆ'

ಭಾಲಚಂದ್ರ: 'ಎಷ್ಟು ಇಳಿದು ಹೋಗಿದೆ ಅಂತ ನಿಜ ಹೇಳು.'

ರಂಗೀಲಿ : 'ಎಷ್ಟು ಅಂದ್ರೆ ? ಒಳ್ಳೆಯ ಮನುಷ್ಯನ ಕಳ್ಳತನ ಸಿಕ್ಕಿಕೊಂಡರೆ ಅವನ ಮುಖ ಯಾವ ರೀತಿ ಕಳಾಹೀನವಾಗುತ್ತೊ, ಹಾಗೆ ಆಗಿದೆ, ನೋಡಿಕೊಳ್ಳಿ.'

ಭಾಲಚಂದ್ರ : 'ಆಯಿತು. ನನ್ನ ಮುಖ ಇಳಿದು ಹೋಗಿದ್ದರೂ ಹೋಗಲಿ, ಚಿಂತೆಯಿಲ್ಲ. ಆದರೆ ಈ ಮದುವೆಯಂತೂ ಸಾಧ್ಯವಿಲ್ಲ.'

ರಂಗೀಲಿ : 'ಆಯ್ತು ಮಾರಾಯ್ರೆ, ನಿಮಗೆ ಬೇಕಾದ ಕಡೆ ಮಾಡಿ, ನನಗೇನು ? ಭುವನನನ್ನೂ ಒಂದು ಮಾತು ಕೇಳುವುದಿಲ್ಲವೇನು ?'

ಭಾಲಚಂದ್ರ : 'ಆಯಿತು, ಅವನು ಏನು ತೀರ್ಮಾನ ಮಾಡುತ್ತಾನೆಯೋ ಅದರಂತೆಯೇ ಮಾಡೋಣ.'

ರಂಗೀಲಿ : 'ಕಣ್ಣು ಮಿಟುಕಿಸಿ ಅವನಿಗೆ ಯಾವುದೆ ಸನ್ನೆ ಮಾಡಕೂಡದು.'

ಭಾಲಚಂದ್ರ: 'ನಾನು ಅವನ ಕಡೆ ನೋಡುವುದೂ ಇಲ್ಲ, ಸರಿ ತಾನೇ ?'

* * * * *

ಆಕಸ್ಮಿಕವೆಂಬಂತೆ ಅದೇ ಸಮಯಕ್ಕೆ ಸರಿಯಾಗಿ ಭುವನ ಮೋಹನ್ ಬಂದ. ಇಷ್ಟು ಸುಂದರ, ದೃಢಕಾಯ, ಬಲಿಷ್ಠ ಯುವಕರು ಕಾಲೇಜುಗಳಲ್ಲಿ ಕಾಣುವುದೇ ಕಡಿಮೆ. ನೋಡಲು ಅಷ್ಟು ಚೆನ್ನಾಗಿದ್ದ. ಥೇಟ್ ತಾಯಿಯ ಅಚ್ಚು. ಅದೇ ಗೌರವರ್ಣ, ತೆಳು ಗುಲಾಬಿ ಬಣ್ಣದ ತುಟಿಗಳು, ವಿಶಾಲವಾದ ಹಣೆ, ದೊಡ್ಡ ದೊಡ್ಡ ಕಣ್ಣುಗಳು. ಆದರೆ ಜಬರದಸ್ತು ಮಾತ್ರ ತಂದೆಯದು. ನೀಳವಾದ ಕೋಟು, ಟೈ, ಬೂಟ್, ಹ್ಯಾಟ್ ಅವನ ರೂಪು ಯೌವನಕ್ಕೆ ಹೊಂದಿಕೊಂಡಂತಿದ್ದುವು. ಕೈಯಲ್ಲಿ ಒಂದು ಹಾಕಿ ಸ್ಟಿಕ್ ಹಿಡಿದಿದ್ದ, ಅವನ ನಡಿಗೆಯಲ್ಲಿ ಯೌವನದ ಉನ್ಮಾದವಿತ್ತು ಕಣ್ಣುಗಳಲ್ಲಿ ಆತ್ಮಗೌರವ ಪ್ರಜ್ವಲಿಸುತ್ತಿತ್ತು.

ರಂಗೀಲಿ ಹೇಳಿದಳು : 'ಇವತ್ತೇ ಏಕೆ ಹೊತ್ತಾಯಿತಲ್ಲ ಬರುವುದು ? ಇಲ್ನೋಡು,

ನಿಮ್ಮ ಅತ್ತೆ ಮನೆಯಿಂದ ಪತ್ರ ಬಂದಿದೆ. ನಿಮ್ಮ ಅತ್ತೆ ಬರೆದಿದ್ದಾರೆ. ಇನ್ನೂ ಕಾಲ ಮಿಂಚಿಲ್ಲ. ಸ್ಪಷ್ಟವಾಗಿ ಹೇಳು–ನಿನಗೆ ಈ ಮದುವೆ ಇಷ್ಟವೋ, ಇಲ್ಲ , ಇಷ್ಟವಿಲ್ಲವೋ ಅಂತ.'

ಭುವನ : 'ಮದುವೆಯಂತೂ ಮಾಡಿಕೊಳ್ಳಬೇಕು ಅಮ್ಮ. ಆದರೆ ನಾನು ಅಲ್ಲಿ ಮಾಡಿಕೊಳ್ಳುವುದಿಲ್ಲ.'

ರಂಗೀಲಿಬಾಯಿ : 'ಏಕೆ ?'

ಭುವನ : 'ಏಕೆಂದರೆ, ಎಲ್ಲಿ ಹಣ ಹೇರಳವಾಗಿ ಸಿಗುತ್ತೋ ಅಲ್ಲಿ ನನ್ನ ಮದುವೆ ಮಾಡಿ. ಏನಿಲ್ಲವೆಂದರೂ ಒಂದು ಲಕ್ಷದ ಕುಳವಾಗಿರಬೇಕು ಅವರು, ಈಗ ಅಲ್ಲೇನು ಉಳಿದಿದೆ ? ವಕೀಲ ಸಾಹೇಬರಂತೂ ಸತ್ತು ಹೋದರು. ಈಗ ಆ ಮುದುಕಿಯ ಹತ್ತಿರ ಏನಿದೆ ?'

ರಂಗೀಲಿಬಾಯಿ : 'ಇಂಥ ಮಾತುಗಳನ್ನು ಆಡುವುದಕ್ಕೆ ನಿನಗೆ ನಾಚಿಗೆ ಆಗಲಿಲ್ಲವೇನು ?'

ಭುವನ : 'ಇದರಲ್ಲಿ ನಾಚಿಕೆ ಮಾಡಿಕೊಳ್ಳುವುದೇನಿದೆ ? ದುಡ್ಡು ಕಂಡರೆ ಯಾರಿಗೆ ಪ್ರೀತಿಯಿಲ್ಲಮ್ಮ ? ನಾನು ಜೀವನ ಪರ್ಯಂತ ದುಡಿದರೂ ಒಂದು ಲಕ್ಷವನ್ನು ನನ್ನಿಂದ ದುಡಿಯಲು ಆಗುವುದಿಲ್ಲ. ಈ ವರ್ಷ ಪರೀಕ್ಷೆಯಲ್ಲಿ ಪಾಸಾದೆ ಅಂತ ಇಟ್ಟುಕೊಂಡರೂ ಇನ್ನೈದು ವರ್ಷ ಹಣದ ಮುಖನೂ ನೋಡೋ ಹಾಗಿಲ್ಲ. ಆಮೇಲೆ ತಿಂಗಳಿಗೆ ನೂರೋ ಇನ್ನೂರೋ ಸಂಪಾದಿಸಬಹುದು. ಇನ್ನೈದು, ಆರು ವರ್ಷ ಕಳೆದುವು ಅಂದರೆ ಜೀವನದ ಮೂರನೆಯ ಒಂದು ಭಾಗವೇ ಕಳೆದು ಹೋಗುತ್ತೆ. ಹಣ ಕೂಡಿಡುವ ಅವಕಾಶವೇ ಬರೊಲ್ಲ. ಈ ಪ್ರಪಂಚದಲ್ಲಿ ಹುಟ್ಟಿದ್ದಕ್ಕೆ ಮಜಾ ಮಾಡಿಕೊಂಡು ಇರಲು ಆಗುವುದೇ ಇಲ್ಲ. ಆದ್ದರಿಂದ ಸಾಹುಕಾರರ ಮನೆ ಹುಡುಗಿಯನ್ನು ಮದುವೆ ಆದರೆ ಸುಖವಾಗಿರಬಹುದು. ನನಗೆ ಹೆಚ್ಚು ಬೇಕಾಗಿಲ್ಲ. ಒಂದು ಲಕ್ಷ ಸಾಕು. ಒಬ್ಬಳೇ ಮಗಳಿರುವ ಶ್ರೀಮಂತರ ಮನೆ ಸಿಕ್ಕಿದರೆ ಇನ್ನೂ ಸಂತೋಷ.'

ರಂಗೀಲಿಬಾಯಿ : 'ಹುಡುಗಿ ಹೇಗಿದ್ದರೂ ಸರಿ !'

ಭುವನ : 'ಹಣ ಎಲ್ಲ ದೋಷಗಳನ್ನು ಮುಚ್ಚಿಹಾಕುತ್ತೆ. ಅವಳು ನನಗೆ ಬೈದರೂ ಏನಂತೆ. ಹಾಲು ಕೊಡುವ ಹಸು ಒದ್ದರೆ ತಪ್ಪು ತಿಳಿದುಕೊಳ್ತಾರೇನು ?'

ಬಾಬು ಸಾಹೇಬರು ಪ್ರಶಂಸಾತ್ಮಕ ದೃಷ್ಟಿಯಿಂದ ಮಗನ ಕಡೆ ನೋಡಿದರು–

'ದೇವರು ಅವರಿಗೆ ಇಂಥ ಕಷ್ಟ ಕೊಟ್ಟನಲ್ಲ ಅಂತ ನಮಗೆ ಅವರ ಬಗ್ಗೆ ಸಹಾನುಭೂತಿ ಇದೆ. ಅವರ ದುಃಖ ನಮ್ಮ ದುಃಖವೂ ಹೌದು. ಆದರೆ ಈಗ ವ್ಯಾವಹಾರಿಕವಾಗಿ ಯೋಚಿಸಿ ಬುದ್ಧಿವಂತಿಕೆಯಿಂದ ಯಾವುದೇ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ನಾವು ಎಷ್ಟೇ ಕಡಿಮೆ ಜನರನ್ನು ದಿಬ್ಬಣದ ಜೊತೆ ಕರೆದುಕೊಂಡು ಹೋದರೂ ಅದು ತಾನಾಗಿಯೇ ದೊಡ್ಡ ಗುಂಪಾಗುತ್ತದೆ. ಅಲ್ಲಿ ಊಟಕ್ಕೂ ಗತಿ ಇರುವುದಿಲ್ಲ. ಜನ ನಗುವುದನ್ನು ನೋಡುವುದನ್ನು ಬಿಟ್ಟರೆ ಇನ್ನೇನೂ ಸಾಧಿಸಿದಂತಾಗುವುದಿಲ್ಲ ಅಷ್ಟೆ.'

ರಂಗೀಲಿಬಾಯಿ : 'ನೀವು ಅಪ್ಪ-ಮಗ ಒಂದೇ. ನೀವಿಬ್ಬರೂ ಸೇರಿಕೊಂಡು ಆ ಬಡ ಹುಡುಗಿಯ ಕತ್ತು ಕುಯ್ಯಬೇಕೂಂತಿದ್ದೀರೇನು ?'

ಭುವನ : 'ಬಡವರು ಬಡವರ ಜೊತೆ ಸಂಬಂಧ ಮಾಡಬೇಕು. ತಮ್ಮ ಯೋಗ್ಯತೆಗೆ ಮೀರಿದವರ......'

ರಂಗೀಲಿಬಾಯಿ : '......ಸುಮ್ಮನಿರೋ. ನೀನು ಯಾವ ಯೋಗ್ಯತೆ ಮಾತನಾಡ್ತಿದ್ದೀಯಾ ? ಯಾರಾದರೂ ಮನೆ ಬಾಗಿಲಿಗೆ ಬಂದರೆ ಒಂದು ಲೋಟ ನೀರಿಗೂ ಬಾಯಿ-ಬಾಯಿ ಬಿಟ್ಟುಕೊಂಡು ಎದುರು ನೋಡಬೇಕು ! ಅಂಥಾದ್ದರಲ್ಲಿ ಬಂದಿದ್ದಾನೆ ದೊಡ್ಡಸ್ತಿಕೆ ಹೇಳಿಕೊಳ್ಳೋಕೆ. ನೀನು ಯಾವ ದೊಡ್ಡ ಶ್ರೀಮಂತ ಹೇಳು ?'

ಇಷ್ಟು ಹೇಳಿ ರಂಗೀಲಿಬಾಯಿ ಅಡಿಗೆಗೆ ವ್ಯವಸ್ಥೆ ಮಾಡಲು ಎದ್ದು ಹೊರಟು ಹೋದಳು. ಭುವನ ಮೋಹನ ಮುಗುಳ್ನಗುತ್ತ ತನ್ನ ರೂಮಿಗೆ ಹೋದ. ಬಾಬು ಸಾಹೇಬರು ಮೀಸೆ ಮೇಲೆ ಕೈ ಹಾಕಿಕೊಂಡು ತಮ್ಮ ಕೊನೆಯ ನಿರ್ಣಯವನ್ನು ಮೋಟೆರಾಮನಿಗೆ ಹೇಳಲು ಹೊರಗೆ ಬಂದು ನೋಡುತ್ತಾರೆ : ಅಲ್ಲಿ ಮೋಟೆರಾಮ ಇರಲಿಲ್ಲ.

* * * * *

ಮೋಟೆರಾಮ ಸ್ವಲ್ಪ ಹೊತ್ತಿನವರೆಗೆ ಸಿಹಿತಿಂಡಿ ತರಲು ಹೋದ ನೌಕರನ ಹಾದಿಯನ್ನೇ ನೋಡುತ್ತ ಕುಳಿತರು. ಆದರೆ ಅವನು ಬರುವುದರಲ್ಲಿ ಎಷ್ಟು ತಡವಾಯಿತೆಂದರೆ, ಇವರಿಂದ ಇನ್ನು ಕಾಯಲಾಗಲಿಲ್ಲ. ಇನ್ನು ಇಲ್ಲಿ ಕುಳಿತುಕೊಂಡೇ ಇದ್ದರೆ ಆಗಲ್ಲ, ಏನಾದರೂ ಮಾಡಬೇಕು. ಅದೃಷ್ಟವನ್ನು ನಂಬಿ ಕುಳಿತರೆ ಹಸಿವೆಯಿಂದ ಇಲ್ಲೇ ಸಾಯಬೇಕಾಗುತ್ತೆ ಎಂದು ಯೋಚಿಸಿ, ಮೆಲ್ಲಗೆ ತಮ್ಮ ಲಾಠಿಯನ್ನು ಕೈಗೆತ್ತಿಕೊಂಡು ನೌಕರರು ಹೋದ ದಿಕ್ಕಿನಲ್ಲಿಯೇ ಹೊರಟರು. ಬಂದ ಕೆಲಸವೂ ಆಗಲಿಲ್ಲವೆಂಬ ಸಂಕಟವೂ ಅವರಿಗಿತ್ತು. ಪೇಟೆ ಕೊಂಚ ದೂರದಲ್ಲಿತ್ತು. ಐದಾರು ನಿಮಿಷಗಳಲ್ಲಿ ಪೇಟೆ ತಲುಪಿದರು. ಅಲ್ಲಿ ಆ ನೌಕರ ಸಿಹಿ ತಿಂಡಿಯ ಅಂಗಡಿಯ ಮುಂದೆ ಕುಳಿತು ಹುಕ್ಕಾ ಸೇದುತ್ತಿದ್ದ. ಅವನನ್ನು ಕುರಿತು ಮೋಟೆರಾಮ ಕೊಂಚ ಒರಟಾಗಿಯೇ ಹೇಳಿದರು– 'ಇನ್ನೂ ಸಿಹಿತಿಂಡಿ ತಯಾರಾಗಿಲ್ವೇನೋ ? ಅಲ್ಲಿ ನೀನು ಎಲ್ಲಿ ನೆಗೆದು ಬಿದ್ದು ಹೋದೆ ಅಂತ ರೇಗಾಡ್ತಾ ಇದ್ದಾರೆ. ಮುದುಕ ನಿಧಾನಕ್ಕೆ ಬರ್ತಾ ಇದಾನೆ' ಅಂತ ಸಮಾಧಾನ ಹೇಳಿದೆ. ವಿಚಿತ್ರ ಜನರಯ್ಯಾ ನೀವು. ನಿಮ್ಮಂಥವರೆಲ್ಲ ಬಂದು ಇಲ್ಲಿದ್ದೀರಲ್ಲ, ಹೇಗಿದ್ದೀರೋ ಏನೋ !'

ನೌಕರ : 'ನನ್ನ ಹೊರತಾಗಿ ಇಲ್ಲಿ ಯಾರೂ ಉಳಿದಿಲ್ಲ. ಮುಂದೆ ಉಳಿಯೋದು ಇಲ್ಲ. ವರ್ಷದಿಂದ ಸಂಬಳ ಕೊಟ್ಟಿಲ್ಲ. ಇವರು ಯಾರಿಗೂ ಸಂಬಳ ಕೊಡುವುದಿಲ್ಲ. ಯಾರಾದರೂ ಸಂಬಳ ಕೇಳಿದರೆ ಸಾಕು ರೇಗಿ ಬೀಳ್ತಾರೆ. ಸರಿ. ನೌಕರರು ಕೆಲಸ ಬಿಟ್ಟು

ಬೇರೆ ಕಡೆಗೆ ಹೋಗ್ತಾರೆ. ಅವರಿಗೆ ಗಾಳಿ ಹಾಕುತ್ತಿದ್ದರಲ್ಲ ಇಬ್ಬರು, ಅವರು ಸರ್ಕಾರಿ ನೌಕರರು. ಸರ್ಕಾರ ಅಲ್ಲಿ ಅವರಿಗೆ ಸಂಬಳ ಕೊಡುತ್ತೆ ಇಲ್ಲಿ ಗಾಳಿ ಹಾಕ್ತಾರೆ. ಅವರು ಎಷ್ಟು ಕೊಡ್ತಾರೋ ಅಷ್ಟೇ ಕೆಲಸ ತಾನೇ ಮಾಡಬೇಕಾಗಿರುವುದು ! ಇಲ್ಲಿಗೆ ಬಂದು ಹಾಗೂ ಹೀಗೂ ಹತ್ತು ವರ್ಷಗಳಾದವು. ಇನ್ನೊಂದೋ, ಎರಡೋ ವರ್ಷಗಳನ್ನು ಹೇಗೋ ಕಳೆದರಾಯ್ತು.'

ಮೋಟೆರಾಮ : 'ಹಾಗಾದರೆ ನೀನೊಬ್ಬನೇ ನೌಕರನಾ ಇಲ್ಲಿರೋದು ?'

ನೌಕರ : 'ಎರಡು–ಮೂರು ತಿಂಗಳ ಹಿಂದೆ ಅವರೆಲ್ಲ ಬಂದರು. ಬಂದವರು ಒಬ್ಬೊಬ್ಬರಾಗಿ ಜಾಗ ಖಾಲಿ ಮಾಡಿ ಹೋದರು. ತಾವು ಎಷ್ಟು ದೊಡ್ಡವರು ಅಂತ ಬಡಾಯಿ ಕೊಚ್ಚಿಕೊಳ್ಳಲು ಬಂದವರ ಎದುರಿಗೆ ಅವರ ಹೆಸರುಗಳನ್ನು ಜಪ ಮಾಡ್ತಾರೆ. ನನಗೊಂದು ಕೆಲಸ ನೀವು ಕೊಡಿಸಿದರೆ, ನಾನೂ ನಿಮ್ಮ ಜತೆ ಬಂದುಬಿಡ್ತೀನಿ ಸ್ವಾಮಿ.'

ಮೋಟೆರಾಮ : 'ನೌಕರಿಗಳಿಗೇನು ಕಡಿಮೆ. ಅದರಲ್ಲೂ ನಿನ್ನಂಥ ಅಡಿಗೆಯವನಿಗೆ ? ಅಡಿಗೆಯವರು ಹುಡುಕಿದರೂ ಸಿಗುವುದಿಲ್ಲ. ನೀನು ವಯಸ್ಸಾದವನು ಬೇರೆ. ನಿನಗೇನು ನೌಕರಿಗೆ ಕೊರತೆ ? ನಿಮ್ಮ ಯಜಮಾನರು ನನಗೆ ಅನ್ನ ಮಾಡಿಸಲೋ ಅಂತ ಕೇಳಿದರು. ಅದಕ್ಕೆ ನಾನು, ಸಾಹುಕಾರರೇ ನಿಮ್ಮ ನೌಕರ ಮುದುಕ, ವಯಸ್ಸಾಗಿದೆ. ಇಷ್ಟು ಹೊತ್ತಿನಲ್ಲಿ ನನಗಾಗಿ ಅಡುಗೆ ಮಾಡಿಸುವುದು ಬೇಡ, ಪೇಟೆಗೆ ಹೋಗಿ ಏನಾದರೂ ತಿಂದು ಬರ್ತೇನೆ, ನೀವು ಚಿಂತಿಸಬೇಡಿ ಅಂದೆ. ಅದಕ್ಕೆ ಅವರು ಹಾಗಾದರೆ ಹಾಗೆ ಮಾಡಿ. ನಮ್ಮ ನೌಕರ ಅಲ್ಲಿಯೇ ಅಂಗಡಿ ಹತ್ತಿರ ಸಿಗ್ತಾನೆ. ಹೋಗಿ' ಅಂದರು. 'ಏನ್ ಸಾವುಕಾರ್ರೆ, ಏನ್ ಸಿಹಿ ತಯಾರಾಗಿದೆ ?' ಓಹ್ ! ಲಾಡು ಈಗ ತಾನೇ ಮಾಡಿದಂಗಿದೆ. ಎರಡು ಸೇರು ತೂಗಿ ಕೊಡಿ, ಮೇಲಕ್ಕೆ ಬರಲಾ ?'

—ಇಷ್ಟು ಹೇಳುತ್ತ ಮೋಟೆರಾಮ ಸಿಹಿತಿಂಡಿ ಅಂಗಡಿಯ ಒಳಗೆ ಹೋಗಿ ಕುಳಿತರು. ಕುಳಿತು ಬಿಸಿಬಿಸಿ ಲಾಡುಗಳನ್ನು ತಿನ್ನಲಾರಂಭಿಸಿದರು. ಸವಿದು ಸವಿದು ತಿಂದರು. ಎರಡು ಮೂರು ಸೇರು ತೂಗಿಸಿಕೊಂಡು ಹೊಟ್ಟೆಗೆ ಸೇರಿಸಿದರು. ತಿನ್ನುವಾಗ ಅಂಗಡಿಯವನನ್ನು ಹೊಗಳುತ್ತಿದ್ದರು– 'ಸ್ವಾಮಿ, ನಿಮ್ಮ ಅಂಗಡಿ ಹೆಸರು ಕೇಳಿದ್ದೆ, ಹೆಸರಿನಂತೆ ತಿಂಡಿಯೂ ಇದೆ. ಬನಾರಸ್‌ನವರು ಇಂಥ ರಸಗುಲ್ಲಾ ಮಾಡುವುದಿಲ್ಲ. ಹಾಲ್–ಕೋವಾ ಚೆನ್ನಾಗಿ ಮಾಡ್ತಾರೆ ಅವರು. ನೀವೂ ಚೆನ್ನಾಗಿಯೇ ಮಾಡ್ತೀರಾ, ಏನೇನು ಹಾಕಬೇಕೋ ಹಾಕಿದರೆ ಆಗಲಿಲ್ಲ ಸ್ವಾಮಿ. ಸಿಹಿ ತಿಂಡಿ ಮಾಡುವುದೂ ಒಂದು ವಿದ್ಯೆ, ಒಂದು ಕಲೆ.'

ಅಂಗಡಿಯವ : 'ಇನ್ನೂ ಸ್ವಲ್ಪ ತಿನ್ನಿ ಸ್ವಾಮಿಗಳೆ, ನನ್ನ ಪರವಾಗಿ ಒಂದೆರಡು ತಿನ್ನಿ.'

ಮೋಟೆರಾಮ : 'ಹೊಟ್ಟೆ ತುಂಬಿದೆ, ಸಾಕು ಅನ್ನಿಸುತ್ತಿದೆ. ನೀವು ಹೇಳ್ತಿದ್ದೀರಾ ಅಂದ ಮೇಲೆ ಇನ್ನೊಂದು ಪಾವು ಕೊಡಿ'

ಅಂಗಡಿಯವ : 'ಪಾವಿಗೆ ಎಷ್ಟು ಬರುತ್ತೆ ಸ್ವಾಮಿ ? ತಿಂಡಿ ಚೆನ್ನಾಗಿದೆ, ಅರ್ಧ ಸೇರಾದರೂ ತಗೊಳ್ಳಿ.'

ತಮ್ಮ ಮನಸ್ಸಿಗೆ ಹಿಡಿಸಿದ ತಿಂಡಿ–ತೀರ್ಥ ಮಾಡಿ ಪುರೋಹಿತರು ಸ್ವಲ್ಪ ಹೊತ್ತು ಪೇಟೆಯಲ್ಲಿ ಅಡ್ಡಾಡಿದರು. ಒಂಬತ್ತು ಗಂಟೆಯ ಹೊತ್ತಿಗೆ ಮನೆಗೆ ಹಿಂತಿರುಗಿ ಬಂದರು. ಮನೆ ತುಂಬಾ ನಿಶ್ಶಬ್ದ ಆವರಿಸಿತ್ತು. ಒಂದು ಲಾಟೀನು ಉರಿಯುತ್ತಿತ್ತು. ಅಲ್ಲೇ ಜಗುಲಿಯ ಮೇಲೆ ಚಾಪೆ ಹಾಕಿಸಿಕೊಂಡು ಮಲಗಿದರು.

......ಬೆಳಗ್ಗೆ ತಮ್ಮ ನಿಯಮದಂತೆ ಎಂಟು ಗಂಟೆಯ ಸುಮಾರಿಗೆ ಎದ್ದರು. ಇವರು ಎದ್ದು ಕಣ್ಣು ಬಿಟ್ಟಾಗ ಬಾಬುಸಾಹೇಬರು ಅಲ್ಲೇ ಅಡ್ಡಾಡುತ್ತಿದ್ದರು. ಇವರು ಎದ್ದುದನ್ನು ಗಮನಿಸಿದ ಬಾಬು ಸಾಹೇಬರು ನಮಸ್ಕರಿಸುತ್ತ ಹೇಳಿದರು– 'ಏನ್ ಪುರೋಹಿತರೆ, ರಾತ್ರಿ ಎಲ್ಲಿಗೆ ಹೋಗಿ ಬಿಟ್ಟಿರಿ ? ರಾತ್ರಿ ತುಂಬ ಹೊತ್ತಿನವರೆಗೂ ನಿಮ್ಮ ದಾರಿಯನ್ನೇ ಕಾಯುತ್ತಿದ್ದೆ. ನಿಮ್ಮ ಅಡಿಗೆಯ ಸಾಮಾನುಗಳನ್ನು ತಯಾರಿಡಿಸಿದ್ದೆ. ನೀವು ಬರದೇ ಇದ್ದುದ್ದನ್ನು ನೋಡಿ, ಒಳಗೆ ಎತ್ತಿಡಿಸಿದೆ. ನೀವು ಊಟ ಮಾಡಿದಿರೋ ಇಲ್ಲವೋ ?'

ಮೋಟೆರಾಮ : 'ಇಲ್ಲ ಅಲ್ಲೇ ಸಿಹಿ ತಿಂಡಿಯನ್ನು ತಿಂದೆ'

ಭಾಲಚಂದ್ರ : 'ಚಪಾತಿ–ಸಾಗು, ಅನ್ನ–ಸಾಂಬಾರಿನಲ್ಲಿರುವ ತೃಪ್ತಿ ಬರೀ ಸಿಹಿ ತಿನ್ನುವುದರಲ್ಲಿ ಏನಿದೆ ಸ್ವಾಮಿ ? ಹತ್ತು–ಹನ್ನೆರಡು ಆಣೆ ಖರ್ಚಾಗಿರುಹುದಲ್ಲವೆ ? ಆದರೂ ಹೊಟ್ಟೆ ತುಂಬಿರಲಾರದು. ನೀವು ನನ್ನ ಅತಿಥಿಗಳು, ಎಷ್ಟು ದುಡ್ಡು ಖರ್ಚಾಗಿದೆಯೋ ಅಷ್ಟನ್ನು ನನ್ನಿಂದ ತಗೊಳ್ಳಿ.'

ಮೋಟೆರಾಮ : 'ತಮ್ಮ ವರ್ತನೆಯ ಸಿಹಿತಿಂಡಿ ಅಂಗಡಿಗೇ ಹೋಗಿದ್ದೆ. ಅದೇ ಆ ಸರ್ಕಲ್‌ನಲ್ಲಿದೆಯಲ್ಲ ?'

ಭಾಲಚಂದ್ರ: 'ಎಷ್ಟು ಹಣ ಕೊಟ್ಟಿರಿ ?'

ಮೋಟೆರಾಮ : 'ನಿಮ್ಮ ಲೆಕ್ಕಕ್ಕೆ ಬರೆಸಿದ್ದೀನಿ.'

ಭಾಲಚಂದ್ರ: 'ನೀವು ಎಷ್ಟು ತಿಂದಿರಿ ಅನ್ನೋದನ್ನಾದರೂ ಹೇಳಿ ಪುರೋಹಿತರೆ, ಆಮೇಲೆ ಅವನು ಮೋಸ ಮಾಡ್ತಾನೆ. ಲೆಕ್ಕಕ್ಕೆ ಇನ್ನೊಂದಷ್ಟನ್ನು ಸೇರಿಸಿ ಬರೆದುಬಿಡ್ತಾನೆ. ನಂಬರ್ ಒನ್ ಮೋಸಗಾರ ಅವನು.'

ಮೋಟೆರಾಮ– 'ಎರಡೂವರೆ ಸೇರು ರಸಗುಲ್ಲ, ಒಂದರ್ಧ ಸೇರು ಹಾಲ್ಕೋವಾ ಅಷ್ಟೆ'

ಬಾಬು ಸಾಹೇಬರು ಬಿಟ್ಟ ಬಾಯಿ ನೆಟ್ಟ ಕಣ್ಣುಗಳಿಂದ ಪುರೋಹಿತರನ್ನೇ ಏನೋ ಆಶ್ಚರ್ಯಕರವಾದ ಮಾತನ್ನು ಕೇಳಿದವರಂತೆ, ದಿಟ್ಟಿಸಿ ನೋಡಿದರು. ಈ ಮನೆಯಲ್ಲಿ ತಿಂಗಳಿಗೆ ಮೂರು ಸೇರು ಸಿಹಿತಿಂಡಿ ತಂದುದ್ದಿರಲಿಲ್ಲ. ಆದರೆ ಈ ಮಹಾರಾಯ ಪುರೋಹಿತ

ಒಂದೇ ಹೊತ್ತಿಗೇ ನಾಲ್ಕು ರೂಪಾಯಿ ಸಿಹಿತಿಂಡಿಯನ್ನು ಉಡಾಯಿಸಿದ್ದಾನೆ! ಇನ್ನೊಂದು ದಿನ, ಎರಡು ದಿನ ಇವನು ಇಲ್ಲಿದ್ದರೆ ಮನೆ ತೊಳೆದು ಹೋಗ್ತಾನೆ. ಇವನ್ದೇನು ಹೊಟ್ಟೇನೊ, ದೆವ್ವದ ಗುಡಾಣಾನೋ ! ಮೂರು ಸೇರು ! ತಿನ್ನೋದಕ್ಕೆ ಬೆಲೆ ಬೇಡವೆ ! ಉದ್ವಿಗ್ನರಾದವರಂತೆ ಬಾಬು ಸಾಹೇಬರು ಮನೆಯ ಒಳಗಡೆ ಓಡಿ, ತಮ್ಮ ಹೆಂಡತಿ ರಂಗೀಲಿ ಬಾಯಿಗೆ ಹೇಳಿದರು– 'ಕೇಳಿದೆಯಾ ! ಆ ಮಾರಾಯ ಮೂರು ಸೇರು ಸಿಹಿ ತಿಂಡಿ ತಿಂದೇ ಬಂದಿದ್ದಾನೆ. ಮೂರು ಸೇರು !' ರಂಗೀಲಿ ಬಾಯಿ ಸಹ ಆಶ್ಚರ್ಯದಿಂದ ನುಡಿದಳು– 'ಏನ್ ಹೇಳ್ತಿದ್ದೀರಾ ನೀವು. ಮೂರು ಸೇರು ಸಿಹಿತಿಂಡಿಯನ್ನು ಒಬ್ಬ ಮನುಷ್ಯ ಹೇಗೆ ತಾನೇ ತಿಂದಾನು ! ಇವನೇನು ಮನುಷ್ಯನೋ, ದನಾನೋ !'

ಭಾಲಚಂದ್ರ : 'ಮೂರು ಸೇರು ಅಂತ ಬಾಯಲ್ಲಿ ಹೇಳ್ತಿದ್ದಾನೆ, ಅಷ್ಟೆ. ನಾಲ್ಕು ಸೇರಿಗಿಂತ ಕಡಿಮೆ ತಿಂದಿರಲಾರ.'

ರಂಗೀಲಿಬಾಯಿ : 'ಅವನ ಹೊಟ್ಟೆಯಲ್ಲಿ ಶನಿ ಕುಳಿತಿರಬೇಕು.'

ಭಾಲಚಂದ್ರ: 'ಇವತ್ತೂ ಇವನು ಇಲ್ಲೇ ಉಳಿದನೆಂದರೆ ಆರು ಸೇರು ತಿಂದುಬಿಡ್ತಾನೆ.'

ರಂಗೀಲಿಬಾಯಿ : 'ಏಕೆ ಉಳಿಯಬೇಕು ? ಆ ಪತ್ರಕ್ಕೆ ಏನು ಉತ್ತರ ಕೊಡಬೇಕೋ ಕೊಟ್ಟು ಕಳಿಸಿ. ಹಾಗೂ ಇಲ್ಲೇ ಉಳಿದನೆಂದರೆ, ಸ್ಪಷ್ಟವಾಗಿ ಹೇಳಿಬಿಡಿ ನಮ್ಮಲ್ಲಿ ಊಟ ಬಿಟ್ಟಿ ಬರೋಲ್ಲ ಅಂತ. ಅನ್ನ ಮಾಡಿಕೊಳ್ಳಲಿ, ಇಲ್ಲವೆಂದರೆ ಗಾಡಿ ಬಿಡಲಿ. ಇಂಥ ಹೊಟ್ಟೆಬಾಕರಿಗೆ ತಿನ್ನಿಸುವುದರಿಂದ ಪುಣ್ಯ ಬರುವುದಾದರೆ, ಪುಣ್ಯ ಬೇಕಾದವರು ತಿನ್ನಿಸಲಿ. ನಮಗಂತೂ ಇಂಥ ಪುಣ್ಯ ಬೇಕಿಲ್ಲ.'

ಪಂಡಿತರು ಬೀಳ್ಕೊಳ್ಳಲು ಸಿದ್ಧರಾಗಿಯೇ ಕುಳಿತಿದ್ದರು. ಹೀಗಾಗಿ ಬಾಬು ಸಾಹೇಬರಿಗೆ ಹೆಚ್ಚು ಖರ್ಚು ಮಾಡುವ ಆವಶ್ಯಕತೆ ಬೀಳಲಿಲ್ಲ. ಕೇಳಿದರು–'ಏನ್ ಪುರೋಹಿತರೆ, ಊರಿಗೆ ಹೊರಡಲು ಸಿದ್ಧರಾಗಿದ್ದೀರಾ ?'

ಮೋಟೆರಾಮ : 'ಹೌದು ಸ್ವಾಮಿ, ಇನ್ನೇನು ಕೆಲಸ ? ಬರ್ತೀನಿ. ಒಂಬತ್ತು ಗಂಟೆ ಗಾಡಿ ಸಿಗುತ್ತಲ್ಲ ?'

ಭಾಲಚಂದ್ರ: 'ಇವತ್ತು ಇಲ್ಲೇ ಇದ್ದು ಹೋಗಬಹುದಲ್ಲ ?'

ಈ ಮಾತನ್ನು ಹೇಳುವಾಗ ಇಷ್ಟೇ ಸಾಕು ಅಂತ ಪುರೋಹಿತರು ಇಲ್ಲೇ ಉಳಿದು ಬಿಟ್ಟಾರೆಂಬ ಭಯ ಅವರನ್ನು ಒಂದು ಕ್ಷಣ ಕಾಡಿತು. ಹೀಗಾಗಿ ತಮ್ಮ ವಾಕ್ಯವನ್ನು ಹೀಗೆ ಪೂರ್ಣಗೊಳಿಸಿದರು– 'ಅಂದ ಹಾಗೆ ಅಲ್ಲಿ ನಿಮ್ಮ ದಾರಿಯನ್ನು ಅವರು ಕಾಯುತ್ತಿರಬಹುದು ಅಲ್ಲವೆ ?'

ಮೋಟೆರಾಮ : 'ಒಂದೆರಡು ದಿನ ತಡವಾಗಿ ಹೋಗಿದ್ದರೆ ಏನೂ ಆಗುತ್ತಿರಲಿಲ್ಲ. ತ್ರಿವೇಣಿಯಲ್ಲಿ ಸ್ನಾನ ಮಾಡಿಕೊಂಡು ಹೋಗುವ ವಿಚಾರವೂ ಮನಸ್ಸಿನಲ್ಲಿತ್ತು. ಆದರೆ ನೀವು ತಪ್ಪು ತಿಳಿದುಕೊಳ್ಳದಿದ್ದರೆ ಒಂದು ಮಾತು ಹೇಳ್ಲಾ ? ಬ್ರಾಹ್ಮಣರ ಬಗೆಗೆ ನಿಮ್ಮಗಳ ಮನಸ್ಸಿನಲ್ಲಿ ತೃಣದಷ್ಟೂ ಶ್ರದ್ಧೆ–ಭಕ್ತಿ ಇಲ್ಲ. ನಮ್ಮ ಯಜಮಾನರು ಹೀಗಲ್ಲ.

ಪುರೋಹಿತರು ಏನ್ ಹೇಳ್ತಾರೆ ಅಂತ ಕೈ ಕಟ್ಟಿಕೊಂಡು ನಿಂತಿರ್ತಾರೆ. ನಾನು ಅವರ ಬಾಗಿಲಿಗೆ ಹೋದರೆ, ಅದನ್ನು ತಮ್ಮ ಪುಣ್ಯ ಅಂತ ಭಾವಿಸುತ್ತಾರೆ. ಚಿಕ್ಕವರಿಂದ ದೊಡ್ಡವರವರೆಗೆ ನನ್ನ ಸತ್ಕಾರ ಮಾಡಲು ತುದಿಗಾಲಲ್ಲಿ ನಿಂತಿರ್ತಾರೆ. ಗೌರವ ಇಲ್ಲದ ಕಡೆ ಒಂದು ಕ್ಷಣ ಇರುವುದೂ ನನ್ನಿಂದ ಸಾಧ್ಯವಿಲ್ಲ. ಬ್ರಾಹ್ಮಣರನ್ನು ಗೌರವಿಸದ ಮನೆ ಉದ್ಧಾರವಾಗುವುದಿಲ್ಲ.'

ಭಾಲಚಂದ್ರ : 'ಪುರೋಹಿತರೆ, ನಮ್ಮಿಂದ ಅಂಥ ಅಪರಾಧವೇನೂ ಆಗಿಲ್ಲವಲ್ಲ ?'

ಮೋಟೆರಾಮ : 'ಅಪರಾಧ ಆಗಲಿಲ್ಲವೆ ! ನಿಮ್ಮ ದೃಷ್ಟಿಯಲ್ಲಿ ಅಪರಾಧ ಅಂದರೆ ಯಾವುದು ? ಈಗ ತಾನೇ ನೀವು ಮನೆಯ ಒಳಗೆ ಹೋಗಿ, ಈ ಪುರೋಹಿತ ಮೂರು ಸೇರು ಸಿಹಿ ತಿಂಡಿ ತಿಂದುಬಿಟ್ಟ, ಮೂರು ಸೇರು, ಅಂತ ಹೇಳಲಿಲ್ಲವೇ ? ತಿನ್ನೋದನ್ನು ಏನ್ ನೋಡಿದ್ದೀರಿ ನೀವು ? ಒಂದು ಸಾರಿ ತಿನ್ನಿಸಿ ನೋಡಿ. ಆಗ ಗೊತ್ತಾಗುತ್ತೆ ಪಂಚೇರು ಸಿಹಿ ತಿಂದರೂ ತೇಗದೇ ಇರುವ ಮಹಾಪುರುಷರು ನಮ್ಮಲ್ಲಿದ್ದಾರೆ. ಒಂದು ಮಿಠಾಯಿ ತುಂಡು ತಿನ್ನಬೇಕಾದರೂ ನಮ್ಮ ಕಾಲಿಗೆ ಅಡ್ಡ ಬೀಳ್ತಾರೆ. ದಕ್ಷಿಣೆ ಕೊಡ್ತಾರೆ. ನಾನು ನಿಮ್ಮ ಮನೆ ಬಾಗಿಲಿಗೆ ಬಂದಿರುವ ಭಿಕ್ಷುಕ ಬ್ರಾಹ್ಮಣ ಅಲ್ರೀ, ನಿಮ್ಮ ಹೆಸರು ಕೇಳಿ ಇಲ್ಲಿಗೆ ಬಂದೆವು. ಇಲ್ಲಿ ಹೀಗೆ ತುತ್ತು ಅನ್ನಕ್ಕೂ ದರಿದ್ರ ಅಂತ ಯಾರಿಗೆ ಗೊತ್ತಿತ್ತು ? ಹೋಗ್‌ಹೋಗಿ, ದೇವರ ನಿಮಗೆ ಒಳ್ಳೇದು ಮಾಡಲಿ.'

ಬಾಬು ಸಾಹೇಬರು ಒಂದು ಕ್ಷಣ ದಿಕ್ಕೆಟ್ಟಂತಾದರು. ಅವರ ಬಾಯಿಂದ ಮಾತೇ ಹೊರಡಲಿಲ್ಲ. ಅವರ ಜೀವಮಾನದಲ್ಲಿ ಯಾರೂ ಈ ರೀತಿ ಬೈದಿರಲಿಲ್ಲ. ಅವರು ಸ್ಪಷ್ಟೀಕರಣ ನೀಡಿದರು. ನಾವು ಮಾತನಾಡುತ್ತಿದ್ದು ನಿಮ್ಮ ಬಗ್ಗೆಯಲ್ಲ ಬೇರೆ ಯಾರದೋ ವಿಷಯ ನಾವು ಮಾತನಾಡುತ್ತಿದ್ದೆವು.' ಎಂದು ಪರಿಪರಿಯಾಗಿ ಹೇಳಿದರು. ಆದರೆ ಪುರೋಹಿತರ ಕೋಪಮಾತ್ರ ಇಳಿಯಲಿಲ್ಲ. ಅವರು ಯಾವುದನ್ನು ಬೇಕಾದರೂ ಸಹಿಸಿಕೊಳ್ಳಲು ಸಿದ್ಧರಿದ್ದರು. ಆದರೆ ತಮ್ಮ ಹೊಟ್ಟೆಯ ಬಗ್ಗೆ ಈ ಬಗೆಯ ನಿಂದನೆಯ ಮಾತುಗಳನ್ನು ಕೇಳಲು ಸರ್ವಥಾ ಸಿದ್ಧರಿರಲಿಲ್ಲ. ಹೆಂಗಸರ ರೂಪವನ್ನು ಅವರ ಎದುರಿನಲ್ಲೇ ಟೀಕಿಸಿದರೆ ಹೇಗೆ ಅವರಿಗೆ ಹಿಡಿಸುವುದಿಲ್ಲವೋ ಹಾಗೆ ಪುರುಷರ ಹೊಟ್ಟೆಯನ್ನು ನಿಂದಿಸಿದರೆ ಇವರಿಗೆ ಅದು ಅಪ್ರಿಯವಾಗುತ್ತೆ ! ಕೊಂಚ ಹೆಚ್ಚು ಗೌರವವನ್ನು ತೋರಿಸಿದರೆ ಇವರು ಎಲ್ಲಿ ಉಳಿದು ಬಿಡುವರೋ ಎಂಬ ಆತಂಕ ಬಾಬು ಸಾಹೇಬರನ್ನು ಕಾಡುತ್ತಿತ್ತು ಈಗ. ಆದರೆ ಅವರ ಜಿಪುಣತನ ಜಗಜ್ಜಾಹೀರಾಗಿತ್ತು. ತಾವು ಅಂಥ ಜಿಪುಣರಲ್ಲ ಎಂದು ಹೇಳಲು ಏನೇನೋ ಮಾಡಿದರು. ಆದರೆ ಅದಾವುದನ್ನೂ ಮುಚ್ಚಿಡಲಾಗಲಿಲ್ಲ. ಏನಾಗಬೇಕಿತ್ತೋ ಅದು ಆಯಿತು.

ಆದದ್ದು ಆಗಿ ಹೋಯಿತು. ನಾನು ಯಾಕಾದರೂ ಈ ಮಾತನ್ನು ಹೇಳಲು ಒಳಕ್ಕೆ ಹೋದೆ, ಹೇಳಿದರೂ ದೊಡ್ಡ ಗಂಟಲಿನಲ್ಲಿ ಯಾಕಾದರೂ ಹೇಳಿದೆ ಎಂದು ಅವರು ಈಗ ಪಶ್ಚಾತ್ತಾಪ ಪಡುತ್ತಿದ್ದರು. ಈ ದುಷ್ಟ ನನ್ನ ಮಾತುಗಳನ್ನು ಕಿವಿಗೊಟ್ಟು ಕೇಳಿಸಿಕೊಳ್ಳುತ್ತಿದ್ದ

ಬೇರೆ. ಈಗ ಪಶ್ಚಾತ್ತಾಪ ಪಡುವುದರಿಂದ ಬರುವ ಲಾಭವಾದರೂ ಏನು ? ಎದ್ದು ಯಾರ ಮುಖ ನೋಡಿದ್ದೆನೋ ಏನೋ, ಇವತ್ತು ಇಂಥ ವಿಪತ್ತು ಬಂತು ! ಈಗ ಇವನು ಕೋಪಮಾಡಿಕೊಂಡು ಹೋದನೆಂದರೆ, ಹೋಗಿ ನಮ್ಮ ಹೆಸರಿಗೆ ಮಸಿ ಬಳಿಯುತ್ತಾನೆ. ನನ್ನ ವ್ಯವಹಾರ ಕುಶಲತೆಯೆಲ್ಲ ರಟ್ಟಾಗುತ್ತದೆ. ಈಗ ಏನಾದರೂ ಮಾಡಿ ಇವನ ಬಾಯಿ ಮುಚ್ಚಿಸಬೇಕು ಎಂದೆಲ್ಲ ಯೋಚಿಸಿದರು.

ಹೀಗೆ ಯೋಚಿಸುತ್ತ ಮನೆಯ ಒಳಗಡೆ ಹೋಗಿ ರಂಗೀಲಿ ಬಾಯಿಗೆ ಹೇಳಿದರು– 'ಈ ದುಷ್ಟ ನಾನು ನೀನು ಆಡಿದ ಮಾತುಗಳನ್ನು ಕೇಳಿಸಿಕೊಂಡಿದ್ದಾನೆ. ಈಗ ಕೋಪ ಮಾಡಿಕೊಂಡು ಹೋಗ್ತಿದ್ದಾನೆ ನೋಡು.'

ರಂಗೀಲಿಬಾಯಿ : 'ಅವನು ಬಾಗಿಲಲ್ಲೇ ನಿಂತಿದ್ದಾನೆ ಅಂತ ಗೊತ್ತಿದ್ದರೂ ಅಷ್ಟು ಜೋರಾಗಿ ನೀವು ಏಕೆ ಮಾತನಾಡಬೇಕಿತ್ತು ?'

ಭಾಲಚಂದ್ರ : 'ಕಷ್ಟ ಬಂದರೆ ಒಂಟಿಯಾಗಿ ಬರೋಲ್ಲ. ಅವನು ಕಿವಿಗೊಟ್ಟು ಕೇಳಿಸಿಕೊಳ್ತಿದ್ದಾನೆ ಅಂತ ನನಗೇನು ಗೊತ್ತು ?'

ರಂಗೀಲಿಬಾಯಿ : 'ಯಾರ ಮುಖ ನೋಡಿದ್ದರೋ ಬೆಳಗ್ಗೆ ?'

ಭಾಲಚಂದ್ರ : 'ಆ ದುಷ್ಟನೇ ಎದುರಿಗೆ ಮಲಗಿದ್ದ. ಅವನು ಅಲ್ಲಿ ಮಲಗಿರುವುದು ಗೊತ್ತಿದ್ದರೆ ಅವನ ಕಡೆ ತಿರುಗಿಯೂ ನೋಡುತ್ತಿರಲಿಲ್ಲ. ಈಗ ಏನೋ ಅಷ್ಟು ಇಷ್ಟು ಕೊಟ್ಟು ರಾಜೀ ಮಾಡಿಕೊಳ್ಳೋಣ.'

ರಂಗೀಲಿಬಾಯಿ : 'ಸಾಕು ಸುಮ್ಮನಿರ್ರಿ. ಅಲ್ಲಿ ಮದುವೆ ಮಾಡಿಕೊಳ್ಳೊಲ್ಲ ಅಂತ ನಿರ್ಣಯಿಸಿದ ಮೇಲೆ ಅವನ ವಶೀಲಿ ಏಕೆ ಹಚ್ಚಬೇಕು ? ಏನ್ ಬೇಕಾದರೂ ಅಂದುಕೊಳ್ಳಲಿ ಏನಾದರೂ ತಿಳಿದುಕೊಳ್ಳಲಿ, ನೀವು ಸುಮ್ಮನಿರಿ.'

ಭಾಲಚಂದ್ರ : 'ಹಾಗಲ್ಲ, ಸುಮ್ಮನೆ ಹತ್ತು ರೂಪಾಯಿ ಕೊಡು. ಬೀಳ್ಕೊಡುವ ನೆಪದಲ್ಲಿ ಇಷ್ಟನ್ನು ಕೊಟ್ಟು ಈ ದರಿದ್ರ ಮುಖದ ಪುರೋಹಿತನನ್ನು ಸಾಗಿ ಹಾಕುತ್ತೇನೆ. ರಂಗೀಲಿಬಾಯಿ ಗೊಣಗುತ್ತ–ಗೊಣಗುತ್ತ ಪಶ್ಚಾತ್ತಾಪ ಪಡುತ್ತ ಹತ್ತು ರೂಪಾಯಿ ತೆಗೆದಳು. ಬಾಬು ಸಾಹೇಬರು ಅದನ್ನು ತೆಗೆದುಕೊಂಡು ಹೋಗಿ ಪುರೋಹಿತರ ಚರಣಾರವಿಂದಗಳಿಗೆ ಅರ್ಪಿಸಿದರು.

'ಥೂ ನನ್ಮಗನೇ, ನೊಣ ತಿನ್ನುವ ಜಿಪುಣಶೆಟ್ಟಿ. ನಿನಗೆ ಚೆನ್ನಾಗಿ ಬುದ್ಧಿ ಕಲಿಸಿದ್ದೀನಿ ಇವತ್ತು ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತ ಪುರೋಹಿತರು ನುಡಿದರು– 'ಈ ಹತ್ತು ರೂಪಾಯಿ ಕೊಟ್ಟು ನನ್ನನ್ನ ಮಂಕಣ್ಣನ ಮಾಡಬಹುದು ಅಂತ ನೀವು ಭಾವಿಸಿರಬಹುದು. ಹೀಗೆ ಭಾವಿಸಿದರೆ ನಿಮ್ಮದು ತಪ್ಪಾಗುತ್ತೆ. ನಿಮ್ಮ ಪ್ರತಿ ನರನಾಡಿಯೂ ನನಗೆ ಗೊತ್ತಿದೆ' ಇಷ್ಟು ಹೇಳಿ ಹತ್ತು ರೂಪಾಯಿ ನೋಟನ್ನು ಜೇಬಿಗೆ ಸೇರಿಸಿ, ಆಶೀರ್ವಾದ ಮಾಡಿ ತಮ್ಮ ಹಾದಿ ಹಿಡಿದರು.

ಬಾಬು ಸಾಹೇಬರು ಬಹಳ ಹೊತ್ತಿನವರೆಗೆ ಅಲ್ಲೇ ನಿಂತು–ಈಗಲೂ ನನ್ನನ್ನು

ಜೆಪ್ರಣ ಅಂತ ಭಾವಿಸಿಕೊಂಡೇ ಇವನು ಹೋದನೋ ಅಥವಾ ಮರೆತು ಹೀಗಾಗಿರಬಹುದು ಅಂತ ಅಂದುಕೊಂಡು ಹೋದನೋ ! ಈ ಹಣವೂ ನೀರುಪಾಲು ಆಯಿತೇನೋ ! ಎಂದು ಯೋಚಿಸುತ್ತಿದ್ದರು.

## ನಾಲ್ಕು

ಕಲ್ಯಾಣಿಯ ಮುಂದೆ ಈಗೊಂದು ವಿಷಮ ಸಮಸ್ಯೆ ಬಂದು ನಿಂತಿದೆ. ಗಂಡ ಸತ್ತನಂತರ ಅವಳಿಗೆ ಆದ ತನ್ನ ದುಸ್ಥಿತಿಯ ಮೊಟ್ಟ ಮೊದಲ ಅನುಭವವೇ ಅತ್ಯಂತ ಕಹಿಯಾಗಿದೆ, ಓರ್ವ ದರಿದ್ರ ವಿಧವೆಗೆ ಇದಕ್ಕಿಂತಲೂ ದೊಡ್ಡ ವಿಪತ್ತು ಯಾವುದಿದೆ ! ಬೆಳೆದು ನಿಂತ ಹುಡುಗಿ ತಲೆ ಮೇಲೆ ಕುಳಿತಿದ್ದಾಳೆ. ಮಕ್ಕಳು ಬರಿಗಾಲಲ್ಲಿ ಶಾಲೆಗೆ ಹೋದರೂ ಹೋಗಬಹುದು, ಮನೆಯ ಪಾತ್ರೆ ತೊಳೆಯುವುದು, ಕಸ–ಮುಸುರೆ ಮಾಡಿಕೊಳ್ಳುವುದನ್ನು ತಮ್ಮ ಕೈಗಳಿಂದಲೇ ಮಾಡಿಕೊಂಡರೂ ಮಾಡಿಕೊಳ್ಳಬಹುದು. ಕೊನೆಗೆ ಒಂದು ಗುಡಿಸಿಲಲ್ಲಿ ನೆಲಸಿ ಬಾಳನ್ನು ಸವೆಸಲೂಬಹುದು. ಆದರೆ ಬೆಳೆದು ನಿಂತ ಹುಡುಗಿಯನ್ನು ಮನೆಯಲ್ಲಿಟ್ಟುಕೊಂಡಿರಲು ಸಾಧ್ಯವಿಲ್ಲ. ಭಾಲಚಂದ್ರನ ಮೇಲೆ ಕಲ್ಯಾಣಿಗೆ ಎಂಥ ಕೋಪ ಬಂತೆಂದರೆ, ಈಗಲೇ ಹೋಗಿ ಅವನ ಮುಖಕ್ಕೆ ಮಸಿ ಬಳಿದು, ತಲೆಗೆ ಸುಣ್ಣ ಕಾಯಿಸಿ, 'ಮಾತಿಗೆ ತಪ್ಪಿದಲ್ಲೋ ಚಂಡಾಲ, ನೀನು ನಿಮ್ಮಪ್ಪನಿಗೆ ಹುಟ್ಟಿದವನಲ್ಲ' ಅಂತ ಹೇಳಿಬರಲೇ ಅಂತಲೂ ಯೋಚಿಸಿದಳು. ಪುರೋಹಿತರಾದ ಮೋಟೆರಾಮ ಅವನ ಕುಟಿಲಲೀಲಾ ವೃತ್ತಾಂತವನ್ನೆಲ್ಲ ಸಾಂಗೋಪಾಂಗವಾಗಿ ಆಕೆಗೆ ವರ್ಣಿಸಿದ್ದರು.

ಈ ಕೋಪದಲ್ಲಿ ಬೇಯುತ್ತ ಅವಳು ಕುಳಿತಿರುವಾಗಲೇ ಆಡುತ್ತಿದ್ದ ಕೃಷ್ಣಾ ಅಲ್ಲಿಗೆ ಬಂದಳು– 'ದಿಬ್ಬಣ ಯಾವಾಗ ಬರುತ್ತಮ್ಮಾ ? ಪಂಡಿತರು ಬಂದಿದ್ದಾರಲ್ಲ ?'

ಕಲ್ಯಾಣಿ : 'ನೀನು ದಿಬ್ಬಣದ ಕನಸು ಕಾಣುತ್ತಿದ್ದೀಯೇನು ?'

ಕೃಷ್ಣಾ : 'ಇನ್ನು ಎರಡು–ಮೂರು ದಿನಗಳಲ್ಲಿ ಬರುತ್ತೆ ಅಂತಾ ಚಂದರ್ ಹೇಳ್ತಿದ್ದ. ಏಕೆ, ಬರುವುದಿಲ್ವಾ ಅಮ್ಮ ?'

ಕಲ್ಯಾಣಿ : 'ಒಂದು ಸಾರಿ ಹೇಳಿದೆನಲ್ಲ. ನನ್ನ ತಲೆ ಏಕೆ ತಿನ್ತೀಯಾ ?'

ಕೃಷ್ಣಾ : 'ಎಲ್ಲರ ಮನೇಲೂ ದಿಬ್ಬಣಗಳು ಬರುತ್ತಿವೆ. ಮದುವೆಗಳಾಗ್ತಿವೆ. ನಮ್ಮನೆಯಲ್ಲಿ ಯಾಕ್ ಆಗೋಲ್ಲ ?'

ಕಲ್ಯಾಣಿ : 'ನಿಮ್ಮನೆಗೆ ಬರಬೇಕಾಗಿದ್ದ ದಿಬ್ಬಣದವರ ಮನೆಯವರು ನೆಗೆದುಬಿದ್ದರು, ಅವರ ಮನೆಗೆ ಬೆಂಕಿ ಬಿತ್ತುತೆ.'

ಕೃಷ್ಣಾ : 'ಹಾಗಾ ಅಮ್ಮ ! ಹಾಗಾದ್ರೆ ಅವರ ಮನೇಲಿದ್ದ ಸಾಮಾನೆಲ್ಲ ಸುಟ್ಟು ಹೋಗಿರಬೇಕು. ಈಗೆಲ್ಲಿದ್ದಾರೋ ಏನೋ, ಮತ್ತೆ ಅಕ್ಕ ಹೋಗಿ ಅಲ್ಲಿ ಎಲ್ಲಿರ್ತಾಳೆ ?'

ಕಲ್ಯಾಣಿ : 'ಅಯ್ಯೋ ಪೆದ್ದಿ ! ನಿನಗರ್ಥವಾಗುವುದಿಲ್ಲ ಇದು ! ಬೆಂಕಿ ನಿಜವಾಗಿ ಬೀಳಲಿಲ್ಲವೆ. ಅವರು ನಮ್ಮ ಮನೆಯಲ್ಲಿ ಮದುವೆ ಮಾಡಿಕೊಳ್ಳಲು ಒಪ್ಪಲಿಲ್ಲ, ಅಷ್ಟೆ'

ಕೃಷ್ಣಾ : 'ಏಕಮ್ಮಾ ? ಮೊದಲು ಒಪ್ಪಿಕೊಂಡಿದ್ದರಲ್ಲಾ ?'

ಕಲ್ಯಾಣಿ : 'ಅವರು ತುಂಬ ಹಣ ಕೇಳ್ತಿದ್ದಾರೆ. ಅವರಿಗೆ ಬೇಕಾಗಿರುವಷ್ಟು ಕೊಡೋವಷ್ಟು ಹಣ ನನ್ನಲ್ಲಿಲ್ಲ.'

ಕೃಷ್ಣಾ : 'ಅವರು ತುಂಬ ಆಸೆಬುರುಕರು ಅಲ್ವಾ ಅಮ್ಮಾ ?'

ಕಲ್ಯಾಣಿ : 'ಆಸೆಬುರುಕರಲ್ಲದೆ ಮತ್ತೇನು ? ಕಟುಕರು, ನಿರ್ದಯಿಗಳು, ಮೋಸಗಾರರು.'

ಕೃಷ್ಣಾ : 'ಹಾಗಾದ್ರೆ ಒಳ್ಳೆಯದೇ ಆಯಿತು ಬಿಡು. ಆ ಮನೇಲಿ ಅಕ್ಕನ ಮದುವೆಯಾಗಲಿಲ್ಲ ಸದ್ಯ. ಅಂಥವರ ಜೊತೆ ಅಕ್ಕ ಹೇಗೆ ಜೀವನ ಮಾಡಬೇಕಾಗಿತ್ತು ? ಇದು ಸಂತೋಷ ಪಡಬೇಕಾದ ವಿಚಾರಕಣಮ್ಮ. ನೀನೇಕೆ ದುಃಖಪಡ್ತಿದ್ದೀಯಾ ?'

ಕಲ್ಯಾಣಿ ಅತ್ಯಂತ ಸ್ನೇಹಮಯ ದೃಷ್ಟಿಯಿಂದ ಮಗಳ ಕಡೆ ನೋಡಿದಳು. ಮಗಳು ಎಂಥಾ ಸತ್ಯ ಹೇಳುತ್ತಿದ್ದಾಳೆ ! ತನ್ನ ಮುಗ್ಧ ಶಬ್ದಗಳಲ್ಲಿ ಸಮಸ್ಯೆಯನ್ನು ಅದೆಷ್ಟು ಚೆನ್ನಾಗಿ ಬಿಡಿಸಿದಳು ! ಇಂಥ ಅಯೋಗ್ಯರ ಜೊತೆ ಸಂಬಂಧ ಬೆಳೆಯಲಿಲ್ಲವೆಂಬುದು ನಿಜಕ್ಕೂ ಸಂತೋಷಪಡಬೇಕಾದ ಸಂಗತಿ. ಇದರಲ್ಲಿ ದುಃಖಪಡುವ ಸಂಗತಿ ಏನಿಲ್ಲ. ಇಂಥ ಕೆಟ್ಟ ಮನುಷ್ಯರ ಮಧ್ಯೆ ನಿರ್ಮಲಾ ಹೋಗಿದ್ದಿದ್ದರೆ ಅದೆಷ್ಟು ಕಷ್ಟ ಪಡುತ್ತಿದ್ದಳೋ ಏನೋ ! ತನ್ನ ದೌರ್ಭಾಗ್ಯಕ್ಕಾಗಿ ರೋದಿಸುತ್ತಿದ್ದಳು. ಸಾರಿಗೆ ಒಂದು ತೊಟ್ಟು ತುಪ್ಪ ಹೆಚ್ಚಿಗೆ ಬಿದ್ದರೆ ಮನೆ ಒಡೆದು ಹೋಗುವಂತೆ ಅರುಚುತ್ತಿದ್ದರು ಅಂತ ಕಾಣುತ್ತೆ. ಅನ್ನ ಒಂದು ಸುತ್ತು ಹೆಚ್ಚಿಗೆ ಬೆಂದಿದ್ದರೆ ಅತ್ತೆ ಪಾತ್ರೆ ಎತ್ತಿ ಇವಳ ತಲೆಗೆ ಕುಕ್ಕುತ್ತಿದ್ದಳು ಅಂತ ತೋರುತ್ತೆ ಆ ಹುಡುಗನೂ ಅಷ್ಟೇ ಲೋಭಿ. ಆದದ್ದೆಲ್ಲ ಒಳ್ಳೆಯದಕ್ಕೆ ಆಯಿತು. ಇಲ್ಲಾಂದ್ರೆ ಈ ಬಡಪಾಯಿ ಹುಡುಗಿ ಅಲ್ಲಿ ಬೇಯಬೇಕಾಗುತ್ತಿತ್ತು. ಹೀಗೆಲ್ಲ ಯೋಚಿಸುತ್ತ ಕುಳಿತಿದ್ದ ಕಲ್ಯಾಣಿ ಅಲ್ಲಿಂದ ಎದ್ದಾಗ ಅವಳ ಹೃದಯ ಹಗುರಾಗಿತ್ತು.

ಆದರೆ ಮದುವೆ ಮಾಡಲೇಬೇಕಿತ್ತು. ಸಾಧ್ಯವಾದರೆ ಇದೇ ವರ್ಷ ಮಾಡಿದರೆ ಒಳ್ಳೆಯದು. ಇಲ್ಲವಾದರೆ ಮುಂದಿನ ವರ್ಷ ಹೊಸದಾಗಿ ಸಿದ್ಧತೆಗಳನ್ನು ಮಾಡಬೇಕಾಗುತ್ತದೆ. ಈಗ ಒಳ್ಳೆಯ ಮನೆಯ ಅವಶ್ಯಕತೆ ಇರಲಿಲ್ಲ, ಒಳ್ಳೆಯ ವರನ ಅವಶ್ಯಕತೆ ಇರಲಿಲ್ಲ. ಈ ಅಭಾಗಿನಿಗೆ ಒಳ್ಳೆಯ ಮನೆ, ಒಳ್ಳೆಯ ಗಂಡು ಎಲ್ಲಿ ಸಿಗಬೇಕು ! ಈಗ ಹೇಗಾದರೂ ಮಾಡಿ ತಲೆಯ ಮೇಲಿನ ಭಾರವನ್ನು ಇಳಿಸಿಕೊಳ್ಳಬೇಕಿತ್ತು. ಹೇಗಾದರೂ ಮಾಡಿ ಈ ಹುಡುಗಿಯನ್ನು ದಡ ಸಾಗಿಸಬೇಕಿತ್ತು, ಇವಳನ್ನು ಬಾವಿಗೆ ನೂಕಬೇಕಿತ್ತು ! ಈಕೆ ರೂಪವತಿ,

ಗುಣವಂತೆ, ಚತುರೆ, ಒಳ್ಳೆಯ ಮನೆತನದವಳು. ಏನಾದರೇನು, ವರದಕ್ಷಿಣೆ ಇಲ್ಲವೆಂದರೆ ಈ ಎಲ್ಲ ಗುಣಗಳೂ ದೋಷಗಳೇ. ವರದಕ್ಷಿಣೆ ಇದ್ದರೆ ಎಲ್ಲ ದೋಷಗಳೂ ಗುಣಗಳೇ. ಮನುಷ್ಯನಿಗೆ ಯಾವ ಬೆಲೆಯೂ ಇಲ್ಲ. ಬೆಲೆ ಇರುವುದು ವರದಕ್ಷಿಣೆಗೆ. ಇದೆಂಥ ವಿಧಿ, ಭಾಗ್ಯಲೀಲೆ !

ಕಲ್ಯಾಣಿಯದೂ ತಪ್ಪು ಇರಲಿಲ್ಲವೆಂದಲ್ಲ. ಆಕೆ ಅಬಲೆ ಮತ್ತು ವಿಧವೆ ಆದಾಕ್ಷಣಕ್ಕೆ ಅವಳ ತಪ್ಪುಗಳೆಲ್ಲವೂ ಮುಚ್ಚಿ ಹೋದಂತೇನಲ್ಲ. ಅವಳಿಗೆ ತನ್ನ ಗಂಡು ಮಕ್ಕಳು ಹೆಣ್ಣು ಮಕ್ಕಳಿಗಿಂತಲೂ ಹೆಚ್ಚು ಪ್ರಿಯವಾಗಿದ್ದುವು. ಗಂಡು ಮಕ್ಕಳು ಅಂದರೆ ಉಳುವ ಎತ್ತುಗಳು. ಮೇವಿನ ಮೇಲೆ ಅವಕ್ಕೆ ಮೊದಲ ಹಕ್ಕಿದೆ, ಅವು ತಿಂದು ಮಿಕ್ಕಿದ್ದು ಉಳಿದ ಹಸುಗಳಿಗೆ ! ಮನೆ ಇತ್ತು, ಕೊಂಚ ನಗದು ಹಣವೂ ಇತ್ತು. ಎಷ್ಟೋ ಸಾವಿರ ಬೆಲೆ ಬಾಳುವ ಒಡವೆಗಳಿದ್ದುವು. ಅವಳು ಇನ್ನೂ ಎರಡು ಗಂಡು ಮಕ್ಕಳನ್ನು ಸಾಕಬೇಕಿತ್ತು. ಓದಿಸಬೇಕಿತ್ತು. ಇನ್ನೊಬ್ಬ ಮಗಳು ನಾಲ್ಕೈದು ವರ್ಷದಲ್ಲಿ ಮದುವೆಗೆ ಬರುವವಳಿದ್ದಳು. ಈ ಕಾರಣದಿಂದಾಗಿ ಅವಳು ಹೆಚ್ಚು ಹಣವನ್ನು ವರದಕ್ಷಿಣೆ ರೂಪದಲ್ಲಿ ಕೊಡಲು ಸಿದ್ಧಳಿರಲಿಲ್ಲ. ಗಂಡು ಮಕ್ಕಳಿಗೂ ಕೊಂಚ ಉಳಿಸಬೇಕಲ್ಲ ? ನಮ್ಮ ತಂದೆ ನಮಗೇನು ಮಾಡಿದರು ಅಂತ ಅವರು ಅಂದುಕೊಳ್ಳುವುದಿಲ್ಲವೇನು ?

ಪಂಡಿತ ಮೋಟೆರಾಮರು ಲಖನೌನಿಂದ ಬಂದು ಹದಿನೈದು ದಿನಗಳಾಗಿದ್ದುವು. ಅಲ್ಲಿಂದ ಬಂದ ದಿನದಿಂದಲೇ ಅವರು ವರಾನ್ವೇಷಣೆಯಲ್ಲಿ ತೊಡಗಿದ್ದರು, ಲಖನೌದವರಿಗೆ, ಪ್ರಪಂಚದಲ್ಲಿ ನೀವೊಬ್ಬರೇ ಅಲ್ಲ ಗಂಡು ಹೆತ್ತಿರುವವರು. ನಿಮ್ಮಂಥವರು ಇನ್ನು ಬೇಕಾದಷ್ಟು ಜನ ಇದ್ದಾರೆ ಎಂಬುದನ್ನು ತೋರಿಸಲೇಬೇಕು ಎಂದು ಅವರು ಪ್ರಮಾಣ ಮಾಡಿದ್ದರು. ಕಲ್ಯಾಣಿ ಅವರು ಬರುವ ದಿನಗಳನ್ನೇ ಎಣಿಸುತ್ತಿದ್ದಳು. ಇವತ್ತು ಅವರಿಗೆ ಪತ್ರ ಬರೆಯಬೇಕೆಂದುಕೊಂಡು ಕಾಗದ ಪೆನ್ನು ಕೈಲಿಡಿದು ಕುಳಿತಿದ್ದಳು. ಅಷ್ಟರಲ್ಲಿ ಪಂಡಿತ ಮೋಟೆರಾಮರೇ ಆಗಮಿಸಿದರು.

ಕಲ್ಯಾಣಿ : 'ಬನ್ನಿ ಪಂಡಿತರೆ, ನಿಮಗೆ ಈಗ ಪತ್ರ ಬರೆಯಲು ಕುಳಿತಿದ್ದೆ. ಯಾವಾಗ ಬಂದಿರಿ ?'

ಮೋಟೆರಾಮ : 'ಬೆಳಗ್ಗೇನೆ ಬಂದೆನಮ್ಮ, ಈ ಮಧ್ಯೆ ಒಬ್ಬ ಸೇಠ್ ಹೇಳಿ ಕಳಿಸಿದರು. ಎಷ್ಟೋ ದಿನಗಳಿಂದ ಸರಿಯಾಗಿ ಊಟ ಮಾಡಿರಲಿಲ್ಲ. ಸರಿ, ಅದನ್ನು ಮುಗಿಸಿಕೊಂಡೇ ಹೋದರಾಯಿತು ಎಂದು ಅಲ್ಲಿಗೆ ಹೋದೆ. ಈಗ ಅಲ್ಲಿಂದಲೇ ಬರುತ್ತಿದ್ದೇನೆ. ಐನೂರು ಜನ ಬ್ರಾಹ್ಮಣರಿಗೆ ಅಲ್ಲಿ ಸಂತರ್ಪಣೆ ಇತ್ತು.'

ಕಲ್ಯಾಣಿ : 'ಏನಾದರೂ ಕೆಲಸವಾಯಿತೋ, ಇಲ್ಲ. ಬರೀ ರಸ್ತೆ ಸವೆಸಿದ್ದೇ ಲಾಭವೋ ?'

ಮೋಟೆರಾಮ : ಕೆಲಸ ಏಕೆ ಆಗೊಲ್ಲ, ಇದೇನ್ ಮಹಾ ದೊಡ್ಡ ವಿಚಾರ ? ಐದು ಕಡೆ ಮಾತನಾಡಿಕೊಂಡು ಬಂದಿದ್ದೇನೆ. ಅವರ ವಿವರಗಳನ್ನೂ ತಂದಿದ್ದೇನೆ. ನೀವು

ಯಾರನ್ನು ಇಷ್ಟ ಪಡ್ತೀರೋ ನೋಡಿ. ಇಲ್ಲಿ ನೋಡಿ, ಈ ಹುಡುಗನ ತಂದೆ ಅಂಚೆ ಇಲಾಖೆಯಲ್ಲಿ ನೌಕರರು. ೧೦೦ರೂ. ಸಂಬಳ ಬರುತ್ತೆ ಹುಡುಗ ಇನ್ನೂ ಕಾಲೇಜಿನಲ್ಲಿ ಓದ್ತಾ ಇದ್ದಾನೆ. ನೌಕರಿ ಸಿಗುವ ಭರವಸೆ ಇದೆ. ಆದರೆ ಆಸ್ತಿಯೇನಿಲ್ಲ. ಹುಡುಗ ಚುರುಕಾಗಿದ್ದಾನೆ. ಒಳ್ಳೆಯ ಮನೆತನ. ೨೦೦೦ಕ್ಕೇ ಒಪ್ಪಿಸಿದ್ದೀನಿ. ಅವರು ೩೦೦೦ ಕೇಳುತ್ತಿದ್ದರು.'

ಕಲ್ಯಾಣಿ : 'ಹುಡುಗನಿಗೆ ಅಣ್ಣ–ತಮ್ಮಂದಿರು ಇದ್ದಾರಾ ?'

ಮೋಟೆರಾಮ : 'ಇಲ್ಲ , ಆದರೆ ಮೂರು ಜನ ತಂಗಿಯರಿದ್ದಾರೆ. ಯಾರಿಗೂ ಮದುವೆಯಾಗಿಲ್ಲ. ತಾಯಿ ಬದುಕಿದ್ದಾರೆ. ಸರಿ, ಈ ಹುಡುಗನ್ನ ನೋಡಿ ಇವನು ರೈಲ್ವೇನಲ್ಲಿದ್ದಾನೆ. ತಿಂಗಳಿಗೆ ಐವತ್ತು ರೂಪಾಯಿ ಸಂಬಳ ತರ್‍ತಾನೆ. ತಂದೆ–ತಾಯಿ ಇಲ್ಲ, ರೂಪವಂತ, ಗುಣವಂತ, ಆರೋಗ್ಯವಂತ, ಕಸರತ್ ಮಾಡಿ–ಮಾಡಿ ಮೈ ಕೈ ಗಟ್ಟಿಮುಟ್ಟಾಗಿಟ್ಟುಕೊಂಡಿದ್ದಾನೆ. ಆದರೆ ಮನೆತನ ಚೆನ್ನಾಗಿಲ್ಲ ಅಂತ ಜನ ಹೇಳ್ತಾರೆ. ಅಮ್ಮ ಹಜಾಮರವಳು ಅಂತ ಒಬ್ಬರು ಅಂದರೆ ಇನ್ನೊಬ್ಬರು ಆಕೆ ಒಳ್ಳೆ ಮನೆತನದವಳು ಎಂದು ಹೇಳ್ತಾರೆ. ತಂದೆ ಯಾವುದೋ ಊರಿನಲ್ಲಿ ರೆವಿನ್ಯೂ ಇಲಾಖೆಯಲ್ಲಿದ್ದಾರಂತೆ. ಮನೇಲಿ ಕೊಂಚ ಜಮೀನ್ದಾರಿಕೆ ಇದೆಯಂತೆ. ಆದರೆ ತಲೆಯ ಮೇಲೆ ಸಾವಿರಗಟ್ಟಲೆ ಸಾಲವೂ ಇದೆಯಂತೆ. ಇಲ್ಲಿ ಕೊಡೋದು–ತಗೋಳ್ಳೋದು ಏನೂ ಇಲ್ಲ. ವಯಸ್ಸು ಸುಮಾರು ೨೦ ಇರಬಹುದು.'

ಕಲ್ಯಾಣಿ : 'ಮನೆತನ ಚೆನ್ನಾಗಿದ್ದಿದ್ದರೆ ಒಪ್ಪಿಕೊಂಡು ಬಿಡುತ್ತಿದ್ದೆ. ನೋಡಿ, ನೋಡಿ ನೊಣ ತಿನ್ನಲಿಕ್ಕಾಗುತ್ತೇನು ? ಇರುಳು ಕಂಡ ಬಾವಿಗೆ ಹಗಲು ಬೀಳಲಿಕ್ಕೆ ಬರುತ್ತೇನು ?'

ಮೋಟೆರಾಮ : 'ಈ ಮೂರನೆ ವರನ ಫೋಟೋ ನೋಡಿ, ಇವನು ಒಬ್ಬ ಜಮೀನ್ದಾರನ ಮಗ, ವರ್ಷಕ್ಕೆ ಒಂದು ಸಾವಿರ ರೂಪಾಯಿ ಆದಾಯವಿದೆ. ಮನೆ ಕಡೆ ಕೊಂಚ ಜಮೀನು ಇದೆ. ಹುಡುಗ ಅಷ್ಟೇನೂ ಓದಿಲ್ಲ. ಆದರೆ ಹೊರಗಡೆ ಕೆಲಸ ಕಾರ್ಯಗಳಲ್ಲಿ ಚುರುಕಾಗಿದ್ದಾನೆ. ಇದು ಎರಡನೆಯ ಮದುವೆ. ಮೊದಲನೆಯ ಹೆಂಡತಿ ಸತ್ತು ಎರಡು ವರ್ಷಗಳಾಗಿವೆ. ಅವಳಿಂದ ಮಕ್ಕಳೇನಿಲ್ಲ. ಮನೆ ಕಡೆ ಚೆನ್ನಾಗಿದ್ದಾರೆ. ಶ್ರಮಜೀವಿ.'

ಕಲ್ಯಾಣಿ : 'ವರದಕ್ಷಿಣೆ ಕೇಳ್ತಾರೇನು ?'

ಮೋಟೆರಾಮ : 'ಕೇಳ್ದೇ ಇರ್ತಾರೇನು ? ನಾಲ್ಕು ಸಾವಿರ ಅಂತಿದ್ದಾರೆ. ಆಯಿತು, ಈ ನಾಲ್ಕನೆಯ ವರನ ಬಗ್ಗೆ ಕೇಳಿ – ಈ ವರ ವಕೀಲ. ವಯಸ್ಸು ಸುಮಾರು ಮುವತ್ತೈದು ಇರಬಹುದು. ತಿಂಗಳಿಗೆ ೩೦೦–೪೦೦ರೂ. ಸಂಪಾದನೆ ಇದೆ. ಮೊದಲ ಹೆಂಡತಿ ಸತ್ತು ಹೋಗಿದ್ದಾಳೆ. ಅವಳಿಂದ ಮೂರು ಮಕ್ಕಳಿವೆ. ಸ್ವಂತ ಮನೆಯಿದೆ, ಸ್ವಲ್ಪ ಆಸ್ತಿಯೂ ಇದೆ. ಇಲ್ಲಿ ಕೊಡೋದು ತೆಗೆದುಕೊಳ್ಳೋದು ಏನಿಲ್ಲ.'

ಕಲ್ಯಾಣಿ : 'ಮನೆತನ ಹೇಗಿದೆ ?'

ಮೋಟೆರಾಮ : 'ತುಂಬಾ ಚೆನ್ನಾಗಿದೆ. ಹಳೇ ಕಾಲದ ಜಮೀನ್ದಾರರ ವಂಶಕ್ಕೆ

ಸೇರಿದುವರು, ಈಗ ಐದನೆಯ ಹುಡುಗನ ಬಗ್ಗೆ ಕೇಳಿ. ತಂದೆಯ ಪ್ರಿಂಟಿಂಗ್ ಪ್ರೆಸ್ ಇದೆ. ಹುಡುಗ ಬಿ.ಎ.ವರೆಗೂ ಓದಿದ್ದಾನೆ. ಆದರೆ ಈತ ತಂದೆಯ ಪ್ರೆಸ್‌ನಲ್ಲೇ ಕೆಲಸ ಮಾಡುತ್ತಿದ್ದಾನೆ. ವಯಸ್ಸು ೧೮ ಇರಬಹುದು. ಮನೆಯಲ್ಲಿ ಪ್ರೆಸ್ ಬಿಟ್ಟರೆ ಏನೂ ಆಸ್ತಿಯಿಲ್ಲ. ಆದರೆ ಯಾರ ಸಾಲವೂ ತಲೆ ಮೇಲಿಲ್ಲ. ಮನೆತನ ಅಷ್ಟು ಕೆಟ್ಟದ್ದೂ ಅಲ್ಲ, ಅಷ್ಟು ಒಳ್ಳೆಯದೂ ಅಲ್ಲ. ಹುಡುಗ ರೂಪವಂತ, ಗುಣವಂತ. ಇವರು ಮೂರು ಸಾವಿರ ಕೇಳ್ತಾರೆ. ಆದರೆ ಒಂದು ಸಾವಿರಕ್ಕೆ ಕಡಿಮೆ ಇಳಿಯೋದಿಲ್ಲ. ಈಗ ಹೇಳಿ–ನಿಮಗೆ ಯಾವ ವರ ಇಷ್ಟ ಆಯಿತು ಅಂತ.'

ಕಲ್ಯಾಣಿ : 'ನಿಮಗೆ ಯಾವ ವರ ಇಷ್ಟವಾದ ?'

ಮೋಟೆರಾಮ : 'ನನಗೆ ಎರಡು ವರಗಳು ಇಷ್ಟವಾದವು. ಒಂದು ರೈಲ್ವೆನಲ್ಲಿರುವವ, ಎರಡು, ಪ್ರೆಸ್‌ನಲ್ಲಿ ಕೆಲಸ ಮಾಡುವವ.'

ಕಲ್ಯಾಣಿ : 'ಈ ಮೊದಲನೆಯ ವರನ ಮನೆತನ ಚೆನ್ನಾಗಿಲ್ಲ ಅಂತ ಹೇಳಿದಿರಲ್ಲ ?'

ಮೋಟೆರಾಮ : 'ಹೌದು ಚೆನ್ನಾಗಿಲ್ಲ. ಪ್ರೆಸ್ ಹುಡುಗನೇ ಇರಲಿ ಬಿಡಿ.'

ಕಲ್ಯಾಣಿ : 'ಇವರಿಗೆ ಒಂದು ಸಾವಿರ ಕೊಡಬೇಕಾಗುತ್ತೆ. ಅದನ್ನೆಲ್ಲಿಂದ ತರೋದು ? ಬೇರೆಯವರ ಮುಂದೆ ಕೈ ಒಡ್ಡಬೇಕಾಗುತ್ತೆ. ನಮ್ಮ ಮನೆಯ ಸ್ಥಿತಿ ನಿಮ್ಮಿಂದ ಮುಚ್ಚಿಟ್ಟಿಲ್ಲ. ಎರಡು ಊಟ ನಡೆದರೆ ಅದೇ ಅದೃಷ್ಟ, ಹಣ ಎಲ್ಲಿಂದ ಬರಬೇಕು ? ಜಮೀನ್ದಾರನ ವರನ ಕಡೆಯವರು ನಾಲ್ಕು ಸಾವಿರ ಕೇಳ್ತಾರೆ ; ಅಂಚೆ ಇಲಾಖೆ ಯಲ್ಲಿರುವವರು ಎರಡು ಸಾವಿರ ಕೇಳ್ತಾರೆ , ಇವರನ್ನೂ ಬಿಟ್ಟು ಬಿಡಿ. ಇನ್ನು ಉಳಿದವರು ಅಂದ್ರೆ–ವಕೀಲರು, ಮೂವತ್ತೈದು ವರ್ಷ ಅಷ್ಟೇನು ಜಾಸ್ತಿಯಲ್ಲ. ಇವರನ್ನೇ ಯಾಕೆ ಆರಿಸಿಕೋಬಾರದು ?'

ಮೋಟೆರಾಮ : 'ನೀವು ಯೋಚಿಸಿ ಅಮ್ಮ. ನಾನು ನೀವ್ ಹೇಳಿದಂಗೆ ಮಾಡ್ತೀನಿ. ನೀವು ಒಪ್ಪಿದ ಕಡೆ ನಿಶ್ಚಯ ಮಾಡ್ತೀನಿ. ಒಂದು ಮಾತು ಹೇಳಲಾ ? ಪ್ರೆಸ್ ಹುಡುಗ ತುಂಬಾ ಚೆನ್ನಾಗಿದ್ದಾನೆ, ರತ್ನ. ಸಾವಿರ ರೂ. ಮುಖ ನೋಡಬೇಡಿ. ಅವನ ಜೊತೆ ಮದುವೆಯಾದರೆ ಹುಡುಗಿ ಸುಖವಾಗಿರ್ತಾಳೆ. ಈ ಹುಡುಗಿ ಹೇಗೆ ರೂಪ–ಗುಣದಲ್ಲಿ ಚೆನ್ನಾಗಿದ್ದಾಳೋ ಅವನೂ ಅಷ್ಟೇ ಚೆನ್ನಾಗಿದ್ದಾನೆ.'

ಕಲ್ಯಾಣಿ : 'ನನಗೂ ಆ ಹುಡುಗನೇ ಇಷ್ಟವಾದ ಪಂಡಿತರೆ. ಆದರೆ ಹಣ ಎಲ್ಲಿಂದ ತರಲಿ ? ಯಾರು ಕೊಡ್ತಾರೆ ? ದಾನಿಗಳು ಯಾರಾದರೂ ಇದ್ದಾರೇನು ? ತಿನ್ನಲಿಕ್ಕೆ ಇದ್ದವರು ತಿಂದು–ಉಟ್ಟು, ಹಾಸಿ–ಹೊದ್ದು ಹೊರಟು ಹೋದರು. ಈಗ ಯಾರ ಮುಖವೂ ಕಾಣುತ್ತಿಲ್ಲ. ನಾನು ಅವರನ್ನೆಲ್ಲ ಹೊರಗೆ ಹಾಕಿದೆ ಅಂತ ನನಗೇ ಆಕ್ಷೇಪಣೆ ಮಾಡುತ್ತಿದ್ದಾರೆ. ನನ್ನ ಕೈಗೆ ಎಟುಕದೇ ಇರುವುದಕ್ಕೆ ನಾನೇಕೆ ಕೈಚಾಚಬೇಕು ? ಮಕ್ಕಳು ಯಾವ ತಾಯಿಗೆ ಪ್ರಿಯವಲ್ಲ, ಹೇಳಿ ? ಮಕ್ಕಳು ಸುಖವಾಗಿರುವುದನ್ನು ನೋಡಲು ಯಾವ ತಾಯಿ ಇಷ್ಟಪಡುವುದಿಲ್ಲ ? ಜೊತೆಗೆ ಕೈಯೂ ನಡೆಯಬೇಕಲ್ಲ ? ನೀವು

ದೇವರ ಹೆಸರು ಹೇಳಿ ಆ ವಕೀಲ ಸಾಹೇಬರನ್ನೇ ನಿಶ್ಚಯ ಮಾಡಿಕೊಂಡು ಬನ್ನಿ. ವಯಸ್ಸು ಕೊಂಚ ಜಾಸ್ತಿಯಾಯ್ತು ಅನ್ನುವುದೇನೋ ಸರಿ, ಆದರೆ ಬದುಕುವುದು. ಸಾಯುವುದು ಎಲ್ಲ ವಿಧಿಯ ಕೈಲಿದೆ. ಮೂವತ್ತೈದು ವರ್ಷದ ಮನುಷ್ಯ ಮುದುಕ ಏನಲ್ಲ. ಹುಡುಗಿಯ ಹಣೆಬರಹದಲ್ಲಿ ಸುಖ ಅನುಭವಿಸಬೇಕು ಅಂತ ಬರೆದಿದ್ದರೆ, ಯಾವ ಮನೆಗೆ ಹೋಗ್ತಾಳೋ ಅಲ್ಲಿಯೇ ಸುಖವನ್ನು ಅನುಭವಿಸುತ್ತಾಳೆ. ದುಃಖಾನೇ ಅವಳ ಹಣೆಬರಹವಾಗಿದ್ದರೆ, ಎಲ್ಲಿಗೆ ಹೋದರೂ ದುಃಖವನ್ನೇ ಅನುಭವಿಸುತ್ತಾಳೆ. ನಮ್ಮ ನಿರ್ಮಲಾಗೆ ಮಕ್ಕಳನ್ನು ಕಂಡರೆ ಪ್ರೀತಿ. ಅವರ ಮಕ್ಕಳನ್ನು ತನ್ನ ಮಕ್ಕಳು ಅಂತಾಲೇ ತಿಳಿದುಕೊಳ್ತಾಳೆ. ಈಗ ನೀವು ಒಂದು ಶುಭಮುಹೂರ್ತ ನೋಡಿ ಮದುವೆ ನಿಶ್ಚಯಿಸಿ ಬಿಡಿ.'

# ಐದು

ನಿರ್ಮಲಾಳ ಮದುವೆಯಾಯಿತು. ಆಕೆ ಗಂಡನ ಮನೆಗೆ ಬಂದಳು. ವಕೀಲರ ಹೆಸರು ತೋತಾರಾಮ ಅಂತ. ಕಪ್ಪು ಬಣ್ಣ , ಸ್ಥೂಲಕಾಯದ ಕೊಂಚ ದಢೂತಿ ಮನುಷ್ಯ. ವಯಸ್ಸು ನಲವತ್ತು ದಾಟಿರಲಿಲ್ಲ. ವಕೀಲ ವೃತ್ತಿಯ ಕಠಿಣ ಪರಿಶ್ರಮ ತಲೆಯ ಕೂದಲುಗಳನ್ನು ಬೆಳ್ಳಗಾಗಿಸಿತ್ತು. ವ್ಯಾಯಾಮ ಮಾಡಲು ಅವರಿಗೆ ಬಿಡುವೇ ಸಿಗುತ್ತಿರಲಿಲ್ಲ, ಆಗೊಮ್ಮೆ ಈಗೊಮ್ಮೆಯಾದರೂ ಗಾಳಿಯಲ್ಲಿ ಅಡ್ಡಾಡಲು ಅವರಿಗೆ ಆಗುತ್ತಿರಲಿಲ್ಲವಾದ್ದರಿಂದಲೇ ಬೊಜ್ಜು ಬಂದಿತ್ತು. ಸ್ಥೂಲದೇಹದವರಾದ್ದರಿಂದ ಏನಾದರೊಂದು ಖಾಯಿಲೆ ಇದ್ದೇ ಇರುತ್ತಿತ್ತು. ಜಠರದ ತೊಂದರೆ ಮತ್ತು ಮೂಲವ್ಯಾಧಿಯೊಡನೆ ಅವರ ಶಾಶ್ವತ ಸಂಬಂಧವಿತ್ತು. ಆದ್ದರಿಂದ ಅವರು ಬಹಳ ಜೋಪಾನವಾಗಿ ತಮ್ಮ ಆರೋಗ್ಯ ಕಾಪಾಡಿಕೊಂಡು ಬಂದಿದ್ದರು.

ಅವರಿಗೆ ಮೂವರು ಮಕ್ಕಳಿದ್ದರು. ದೊಡ್ಡವನು ಮಂಸಾರಾಮ, ಹದಿನಾರು ವರ್ಷದವನು. ಮಧ್ಯದವನು ಜಿಯಾರಾಮ, ಹನ್ನೆರಡು ವರ್ಷದವನು. ಕೊನೆಯವನು ಸಿಯಾರಾಮ, ಏಳು ವರ್ಷದವನು. ಮೂವರೂ ಇಂಗ್ಲಿಷ್ ಸ್ಕೂಲ್‌ನಲ್ಲಿ ಓದುತ್ತಿದ್ದರು. ಮನೆಯಲ್ಲಿ ವಕೀಲರ ವಿಧವೆ ಅಕ್ಕನ ಹೊರತಾಗಿ ಬೇರಾವ ಹೆಂಗಸರೂ ಇರಲಿಲ್ಲ. ಆಕೆಯೇ ಮನೆ ಯಜಮಾನಿತಿಯಾಗಿದ್ದಳು, ಆಕೆಯ ಹೆಸರು ರುಕ್ಮಿಣಿ ಅಂತ. ವಯಸ್ಸು ಐವತ್ತು ಮೀರಿತ್ತು. ಆಕೆಯ ಅತ್ತೆಯ ಮನೆಕಡೆ ಯಾರೂ ಇರಲಿಲ್ಲ. ಹೀಗಾಗಿ ಈ ಮನೆಯಲ್ಲೇ ಬಂದು ನೆಲೆಗೊಂಡಿದ್ದಳು.

ತೋತಾರಾಮ ದಾಂಪತ್ಯ ವಿಜ್ಞಾನದಲ್ಲಿ ಪಂಡಿತರಿದ್ದರು. ತಮ್ಮಲ್ಲಿದ್ದ ಸ್ವಾಭಾವಿಕ ದೋಷಗಳನ್ನು ಮುಚ್ಚಿಕೊಳ್ಳಲು ಹಾಗೂ ನಿರ್ಮಲಾಳನ್ನು ಪ್ರಸನ್ನಚಿತ್ತಳನ್ನಾಗಿರಿಸಲು ಅವಳಿಗೆ ಅನೇಕ ಬಗೆಯ ಕಾಣಿಕೆಗಳನ್ನು ತರುತ್ತಿದ್ದರು. ಹಾಗೆ ನೋಡಿದರೆ ಅವರು

ತುಂಬಾ ಕೈ ಹಿಡಿತದ ಮನುಷ್ಯರಾದರೂ ನಿರ್ಮಲಾಳಿಗೆಂದು ದಿನವೂ ಒಂದಲ್ಲ ಒಂದು ಹೊಸತನ್ನು ತಂದು ಕೊಡುತ್ತಿದ್ದರು. ಸಮಯದಲ್ಲಿ ಹಣವನ್ನು ಖರ್ಚುಮಾಡಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಮಕ್ಕಳಿಗೆ ಹಾಲು ಮಾತ್ರ ಕೊಂಡುಕೊಳ್ಳುತ್ತಿದ್ದರು. ಆದರೆ ನಿರ್ಮಲಾಳಿಗೆ ದ್ರಾಕ್ಷಿ, ಗೋಡಂಬಿ ಸಿಹಿತಿಂಡಿಗಳನ್ನು ತರುತ್ತಿದ್ದರು. ಯಾವುದಕ್ಕೂ ಕೊರತೆ ಮಾಡಲಿಲ್ಲ. ಅವರು ತಮ್ಮ ಜೀವನದಲ್ಲಿ ಎಂದೂ ಸಿನಿಮಾಗೆ, ಪ್ರವಾಸಕ್ಕೆ ಅಂತ ಹೋಗಿದ್ದಿರಲಿಲ್ಲ. ಆದರೆ ಈಗ ರಜೆ ಸಿಕ್ಕಿದಾಗಲೆಲ್ಲ ಸಿನಿಮಾ, ಸರ್ಕಸ್, ಪಾರ್ಕ್‌ಗೆ ನಿರ್ಮಲಾಳನ್ನು ಕರೆದುಕೊಂಡು ಹೋಗುತ್ತಿದ್ದರು. ತಮ್ಮ ಅಮೂಲ್ಯ ವೇಳೆಯ ಸ್ವಲ್ಪ ಭಾಗವನ್ನು ನಿರ್ಮಲಾಳ ಜೊತೆ ಕೂತು ಗ್ರಾಮಫೋನ್ ಕೇಳುವುದರಲ್ಲೂ ಕಳೆಯುತ್ತಿದ್ದರು.

ಆದರೆ ಅದೇಕೋ ನಿರ್ಮಲಾಳಿಗೆ ತೋತಾರಾಮರ ಜೊತೆ ಕುಳಿತುಕೊಳ್ಳಲು, ಮಾತನಾಡಲು ಸಂಕೋಚವಾಗುತ್ತಿತ್ತು. ಇದಕ್ಕೆ ಬಹುಶಃ ಈ ಕಾರಣವಿದ್ದಿರಬಹುದು– ಇಂಥಾ ಒಬ್ಬ ಮನುಷ್ಯನೇ ಇದುವರೆಗೆ ಈಕೆಯ ತಂದೆಯಾಗಿದ್ದ. ಆತನ ಮುಂದೆ ಮಾತನಾಡುವಾಗಲೆಲ್ಲ, ಓಡಾಡುವಾಗಲೆಲ್ಲ ತಲೆತಗ್ಗಿಸಿಕೊಂಡು, ದೇಹವನ್ನು ಹಿಡಿ ಮಾಡಿಕೊಂಡು ಅಡ್ಡಾಡುತ್ತಿದ್ದಳು. ಈಗ ಆ ತಂದೆಯ ವಯಸ್ಸಿನ ಈ ಇನ್ನೊಬ್ಬ ಮನುಷ್ಯ ನಿರ್ಮಲಾಳ ಗಂಡನಾಗಿದ್ದಾನೆ. ಈತನನ್ನು ಪ್ರೇಮದಿಂದಲ್ಲ ಗೌರವದಿಂದ ನೋಡುತ್ತಿದ್ದಾಳೆ. ಹೀಗಾಗಿ ಈತನ ನೆರಳನ್ನು ಕಂಡರೆ ಸಾಕು ನಿರ್ಮಲಾಳ ಮನಸ್ಸಿನ ಪ್ರಫುಲ್ಲತೆಯೆಲ್ಲ ಒಮ್ಮೆಗೇ ಮಂಗಮಾಯವಾಗಿಬಿಡುತ್ತದೆ.

ವಕೀಲರಿಗೆ ಅವರ ದಾಂಪತ್ಯ ವಿಜ್ಞಾನ ಏನನ್ನು ಕಲಿಸಿತ್ತೆಂದರೆ ಯುವತಿಯರ ಮುಂದೆ ಕೂತು ಪ್ರೇಮಪೂರ್ಣ ಮಾತುಗಳನ್ನಾಡಬೇಕು, ಹೃದಯವನ್ನೇ ತೆಗೆದು ಅವಳ ಮುಂದೆ ಇಡಬೇಕು. ಈ ಮೂಲಕ ಅವಳನ್ನು ವಶೀಕರಿಸಿಕೊಳ್ಳಬೇಕು ಇತ್ಯಾದಿ. ವಕೀಲರು ತಮ್ಮ ಪ್ರೇಮ ಪ್ರದರ್ಶನದಲ್ಲಿ ಯಾವುದೇ ಕೊರತೆ ಮಾಡುತ್ತಿರಲಿಲ್ಲ, ಆದರೆ ನಿರ್ಮಲಾಳಿಗೆ ಈ ಎಲ್ಲ ಮಾತುಗಳನ್ನು ಕೇಳುವಾಗ ತಿರಸ್ಕಾರವುಂಟಾಗುತ್ತಿತ್ತು, ಅಸಹ್ಯವೆನಿಸುತ್ತಿತ್ತು. ಈ ಎಲ್ಲ ಮಾತುಗಳು ಯಾವನೇ ಒಬ್ಬ ಯುವಕನ ಬಾಯಿಂದ ಪುಟಿದು ಬಂದಿದ್ದರೆ ನಿರ್ಮಲಾಳ ಹೃದಯ ಪ್ರೇಮೋನ್ಮಾದದಿಂದ ನಲಿದಾಡುತ್ತಿತ್ತು. ಆದರೆ ವಕೀಲರ ಬಾಯಿಂದ ಬರುತ್ತಿದ್ದ ಈ ಮಾತುಗಳು ಈಕೆಯ ಹೃದಯವನ್ನು ಬಾಣದೋಪಾದಿಯಲ್ಲಿ ಹಿಂಸಿಸುತ್ತಿದ್ದುವು. ಈ ಎಲ್ಲ ಪ್ರೇಮದ ಮಾತುಗಳಲ್ಲಿ ಪ್ರೇಮ ಕಾರಂಜಿಯಾಗಲಿ, ಉಲ್ಲಾಸವಾಗಲಿ, ಉನ್ಮಾದವಾಗಲಿ, ಹೃದಯವಾಗಲಿ ಇರದೆ, ಅಲ್ಲಿ ಕೃತ್ರಿಮತೆ ಇತ್ತು, ಮೋಸವಿತ್ತು, ಶುಷ್ಕತೆ ಇತ್ತು , ರಸಹೀನ ಶಬ್ದಾಡಂಬರವಿತ್ತು. ನಿರ್ಮಲಾಳಿಗೆ ಸುಗಂಧ, ಸುಗಂಧಿತ ಎಣ್ಣೆ ಕೆಟ್ಟದ್ದು ಅನ್ನಿಸುತ್ತಿರಲಿಲ್ಲ. ಸಿನಿಮಾ–ಪಾರ್ಕ್ ಅಂತ ತಿರುಗಾಡುವುದು ತಪ್ಪು ಅನ್ನಿಸುತ್ತಿರಲಿಲ್ಲ. ಕೃತ್ರಿಮ–ಶೃಂಗಾರ ಮಾಡಿಕೊಂಡು ಸುತ್ತಾಡುವುದು ಸಹ ಅಸಹನೀಯವೆನ್ನಿಸುತ್ತಿರಲಿಲ್ಲ. ಆದರೆ ತೋತಾರಾಮರ ಪಕ್ಕದಲ್ಲಿ

ಕುಳಿತುಕೊಳ್ಳುವುದು ಅಂದರೆ ಮುಜುಗರವಾಗುತ್ತಿತ್ತು. ಹೇಳಲಾರದ ಸಂಕಟವಾಗುತ್ತಿತ್ತು. ಆಕೆ ತನ್ನ ರೂಪ ಮತ್ತು ಯೌವನವನ್ನು ಅವರಿಗೆ ತೋರಿಸಲು ನಿರಾಸಕ್ತಳಾಗಿದ್ದಳು. ಏಕೆಂದರೆ ಅಲ್ಲಿ ನೋಡುವ, ಸವಿಯುವ ಕಣ್ಣುಗಳಿರಲಿಲ್ಲ. ಈ ಎಲ್ಲವನ್ನೂ ಆಸ್ವಾದಿಸುವುದಕ್ಕೆ ಆತನನ್ನು ಆಕೆ ಯೋಗ್ಯವೆಂದು ಭಾವಿಸಿರಲಿಲ್ಲ. ಮುಂಜಾನೆಯ ಮಂದ ಮಾರುತದ ಸ್ಪರ್ಶಕ್ಕೆ ತಾನೇ ಮೊಗ್ಗು ಅರಳುವುದು ! ಇವೆರಡಕ್ಕೂ ಅಷ್ಟು ಅವಿನಾಭಾವ ಸಂಬಂಧ ಆದರೆ ನಿರ್ಮಲಾಳ ಪಾಲಿಗೆ ಮುಂಜಾನೆಯ ಮಾರುತದ ಸ್ಪರ್ಶಭಾಗ್ಯವೆಲ್ಲಿ ?

ಮೊದಲ ತಿಂಗಳು ಕಳೆಯುವುದರೊಳಗಾಗಿ ತೋತಾರಾಮರು ನಿರ್ಮಲಾಳನ್ನು ತಮ್ಮ ಖಜಾಂಚಿಯನ್ನಾಗಿ ಮಾಡಿದರು. ಕಛೇರಿಯಿಂದ ಬಂದು ಆ ದಿನದ ದುಡಿಮೆಯನ್ನೆಲ್ಲ ಅವಳ ಕೈಗೆ ಕೊಟ್ಟುಬಿಡುತ್ತಿದ್ದರು. ಈ ಹಣವನ್ನು ನೋಡಿ ನಿರ್ಮಲಾ ತುಂಬಾ ಸಂತೋಷಪಡುವಳು ಎಂಬುದೇ ಅವರ ಅನಿಸಿಕೆಯಾಗಿತ್ತು. ನಿರ್ಮಲಾ ತುಂಬಾ ಸಂತೋಷದಿಂದಲೇ ಈ ಕೆಲಸವನ್ನು ನಿಭಾಯಿಸತೊಡಗಿದಳು. ಒಂದೊಂದು ಆಣೆಯ ಲೆಕ್ಕವನ್ನೂ ಬರೆದಿಡುತ್ತಿದ್ದಳು. ಕಡಿಮೆ ಹಣ ಕೈ ಸೇರಿದಾಗ 'ಇವತ್ತು ಏಕೆ ಕಡಿಮೆ ? ' ಎಂದು ಪ್ರಶ್ನಿಸುತ್ತಿದ್ದಳು. ಮನೆಯ ವ್ಯವಹಾರಕ್ಕೆ ಸಂಬಂಧಿಸಿದಂತೆ ಅವರೊಂದಿಗೆ ಚೆನ್ನಾಗಿಯೇ ಮಾತನಾಡುತ್ತಿದ್ದಳು. ಅವರನ್ನು ಇದಕ್ಕೆ ಮಾತ್ರ ಯೋಗ್ಯವೆಂದು ಅವಳು ಭಾವಿಸಿದ್ದಳು. ಯಾವುದೇ ಪ್ರಸಂಗದಲ್ಲಿ ಹಾಸ್ಯ–ವಿನೋದದ ಮಾತು ತೋತಾರಾಮರ ಬಾಯಿಂದ ಬಂತೆಂದರೆ ಸಾಕು, ಇವಳ ಮುಖ ಬಾಡಿ ಹೋಗುತ್ತಿತ್ತು.

ನಿರ್ಮಲಾ ವಸ್ತ್ರಭೂಷಣಗಳಿಂದ ಸಿಂಗರಿಸಿಕೊಂಡು ಕನ್ನಡಿ ಮುಂದೆ ನಿಂತು ಅದರಲ್ಲಿ ತನ್ನ ಸೌಂದರ್ಯದ ಮೋಹಕತೆಯನ್ನು ನಿಟ್ಟಿಸಿದಾಗೆಲ್ಲಾ ಅವಳ ಹೃದಯದಲ್ಲಿ ಕಾಮನೆಗಳು ಗರಿಗೆದರಿ ನರ್ತಿಸುತ್ತಿದ್ದವು. ಆಗೆಲ್ಲ ಅವಳ ಹೃದಯದಲ್ಲಿ ಒಂದು ಬಗೆಯ ಜ್ವಾಲಾಮುಖಿ ಎದ್ದಂಥ ಅನುಭವವಾಗುತ್ತಿತ್ತು. ಕೂಡಲೇ ಈ ಮನೆಗೆ ಬೆಂಕಿ ಇಟ್ಟುಬಿಡಲೇ ಎಂದೆಂದು ಕೊಳ್ಳುತ್ತಿದ್ದಳು. ತನ್ನ ತಾಯಿಯ ಬಗೆಗೂ ಕೋಪ ಬರುತ್ತಿತ್ತು. ಆದರೆ ಎಲ್ಲಕ್ಕಿಂತ ಹೆಚ್ಚು ಕೋಪ ಬಡಪಾಯಿ ನಿರಪರಾಧಿ ತೋತಾರಾಮರ ಮೇಲೆ ಬರುತ್ತಿತ್ತು. ಆಕೆ ಸದಾ ಈ ಉರಿಯಲ್ಲಿಯೇ ಬೇಯುತ್ತಿದ್ದಳು. ಕಾಲ್ನಡಿಗೆಯಲ್ಲಿ ನಡೆದರೂ ಚಿಂತೆಯಿಲ್ಲ. ಕಟ್ಟುಮಸ್ತಾದ ಸವಾರ ಕುಂಟ ಕುದುರೆಯನ್ನು ಏರಲು ಬಯಸುತ್ತಾನೇನು ? ನಿರ್ಮಲಾ ತುಂಬು ಯೌವನವನ್ನೊತ್ತ ಹೆಣ್ಣು, ಕಟ್ಟುಮಸ್ತಾದ ಶರೀರದ ಜವ್ವನೆ. ಸರಿಯಾದ ಕುದುರೆಯನ್ನೇರಿ ಸವಾರಿ ಮಾಡ ಬಯಸುತ್ತಿದ್ದಳು. ಅತ್ಯಂತ ಉಲ್ಲಸಿತಳಾಗಿ ವಿದ್ಯುತ್ ವೇಗದಲ್ಲಿ ಹಾರಿ ಹೋಗಬಯಸುತ್ತಿದ್ದಳು. ಮಕ್ಕಳೊಡನೆ ಆಡುತ್ತ–ನಗುತ್ತ ತನ್ನ ಸಂಕಟವನ್ನು ಕೊಂಚ ಹೊತ್ತಾದರೂ ಮರೆಯುವ ಸಾಧ್ಯತೆ ಇತ್ತು. ಆ ಮೂಲಕ ತನ್ನ ಮನಸ್ಸನ್ನು ಪ್ರಫುಲ್ಲಗೊಳಿಸಿಕೊಳ್ಳುವ ಅವಕಾಶವಿತ್ತು. ಆದರೆ ರುಕ್ಮಿಣಿದೇವಿ, ಇವಳೊಬ್ಬಳು ಮಕ್ಕಳನ್ನು ನುಂಗುವ ಪಿಶಾಚಿನಿ ಎಂದು ಭಾವಿಸಿದಂತೆ ಮಕ್ಕಳನ್ನು ಆಕೆಯ ಹತ್ತಿರ ಸುಳಿಯಲೂ ಬಿಡುತ್ತಿರಲಿಲ್ಲ.

ರುಕ್ಮಿಣಿ ದೇವಿಯ ಸ್ವಭಾವ ಪ್ರಪಂಚದಲ್ಲೇ ಅಪರೂಪದ ಸ್ವಭಾವವಾಗಿತ್ತು. ಯಾವ ಮಾತಿಗೆ ಆಕೆಗೆ ಸಂತೋಷವಾಗುತ್ತೆ ಯಾವ ಮಾತಿನಿಂದ ಕೋಪ ಬರುತ್ತದೆ ಎಂಬುದನ್ನು ಪತ್ತೆ ಹಚ್ಚುವುದೇ ಕಷ್ಟವಾಗಿತ್ತು. ನಿರ್ಮಲಾ ತನ್ನ ಕೋಣೆಯಲ್ಲಿ ಕುಳಿತಿದ್ದರೆ, 'ಮಾತಿಲ್ಲ ಕತೆಯಿಲ್ಲ' ಎಲ್ಲಿಂದ ಬಂದಳೋ ದರಿದ್ರ ಗೂಬೆ ಅನ್ನುತ್ತಿದ್ದಳು. ಮನೆಯ ಮಾಳಿಗೆ ಏರಿ ಅಡ್ಡಾಡತೊಡಗಿದರೆ ಅಥವಾ ನೌಕರ–ಚಾಕರರೊಡನೆ ಮಾತನಾಡಿದರೆ, 'ನಾಚಿಕೆ–ಗೀಚಿಕೆ ಏನಿಲ್ಲ ! ಯಾರೆಂದರೆ ಅವರೊಂದಿಗೆ ಮಾತನಾಡ್ತಿದ್ದಾಳೆ. ಇನ್ನೊಂದೆರಡು ದಿನ ಕಳೆದರೆ ಪೇಟೆ ಬೀದೀಲಿ ನರ್ತನ ಮಾಡ್ತಾಳೆ !' ಎಂದು ಎದೆ ಎದೆ–ಬಡಿದುಕೊಳ್ಳುತ್ತಿದ್ದಳು. ವಕೀಲರು ಹಣ–ಕಾಸನ್ನು ನಿರ್ಮಲಾಳ ಕೈಗೆ ಕೊಡಲಾರಂಭಿಸಿದ ಮೇಲಂತೂ ರುಕ್ಮಿಣಿ ಅದನ್ನು ಟೀಕಿಸಲಾರಂಭಿಸಿದ್ದಳು. ಆಗೆಲ್ಲ ಪ್ರಳಯವಾಗುವುದರಲ್ಲಿ ಇನ್ನೇನು ಬಹಳ ಹೊತ್ತಿಲ್ಲ ಎಂದೇ ಅವಳಿಗನ್ನಿಸುತ್ತಿತ್ತು. ಮಕ್ಕಳಿಗೆ ಆಗಾಗ ಹಣದ ಅವಶ್ಯಕತೆ ಬೀಳುತ್ತಿತ್ತು. ತಾನು ಯಜಮಾನಿಯಾಗಿದ್ದಾಗ ಹಾಗೂ ಹೀಗೂ ಮಾಡಿ ಅವರನ್ನು ಸುಮ್ಮನಿರಿಸುವುದೋ, ಇಲ್ಲ, ಅಷ್ಟು–ಇಷ್ಟು ಕೊಟ್ಟು ಕಳಿಸುವುದನ್ನೋ ಮಾಡುತ್ತಿದ್ದಳು. ಆದರೆ ಈಗ ಅವರನ್ನು ನೇರವಾಗಿ ನಿರ್ಮಲಾಳ ಬಳಿಗೇ ಕಳಿಸುತ್ತಿದ್ದಳು. ನಿರ್ಮಲಾಳಿಗೆ ಮಕ್ಕಳ ಹಠ, ಕಾಟ, ತುಂಟತನ ಇಷ್ಟವಾಗುತ್ತಿರಲಿಲ್ಲ. ಯಾವಾಗಲಾದರೊಮ್ಮೆ ಅವರು ಹಣ ಕೇಳಿದರೆ ಅವಳು ಇಲ್ಲ ಎಂದು ಬಿಡುತ್ತಿದ್ದಳು. ಆಗೆಲ್ಲ ತನ್ನ ವಾಗ್ಬಾಣಗಳನ್ನು ಚಲಾಯಿಸಲು ರುಕ್ಮಿಣಿಗೆ ಸದವಕಾಶ ದೊರೆಯುತ್ತಿತ್ತು. 'ಈಕೆ ಯಜಮಾನಿತಿ ಆಗಿದ್ದೇ ಆಗಿದ್ದು. ಇನ್ನು ಮಕ್ಕಳು ಏಕೆ ಬೇಕು ? ತಾಯಿ ಇಲ್ಲದ ಮಕ್ಕಳನ್ನು ಯಾರು ಕೇಳಬೇಕು ? ಇದುವರೆಗೆ ರೂಪಾಯಿಗಟ್ಟಲೆ ಮಿಠಾಯಿ ತಿನ್ನುತ್ತಿದ್ದರು. ಈಗ ಬೆಂಡು–ಬತ್ತಾಸಿಗೂ ಬಾಯಿ ಬಾಯಿ ಬಿಡುವಂತಾಗಿದೆ' ಒಂದುವೇಳೆ ನಿರ್ಮಲಾ ಬೇಸರಗೊಂಡು ಯಾವತ್ತಾದರೂ ಏನನ್ನೂ ವಿಚಾರಿಸದೆ ಹಣವನ್ನು ಕೊಟ್ಟಳೆಂದಿಟ್ಟುಕೊಳ್ಳಿ, ಆಗ ರುಕ್ಮಿಣಿ ಇನ್ನೊಂದು ರೀತಿಯಲ್ಲಿ ಟೀಕಿಸುತ್ತಿದ್ದಳು – 'ಇವಳಿಗೇನಾಗಬೇಕು ? ಹುಡುಗರು ಸಾಯಲಿ, ಬದುಕಲಿ, ಅದರ ಯೋಚನೆ ಇವಳಿಗಿದೆಯಾ ? ಇಷ್ಟೊಂದು ಮಿಠಾಯಿ ತಿನ್ನಬಾರದಪ್ಪ ಅಂತ ತಾಯಿ ಅಲ್ಲದೆ ಇನ್ಯಾರು ಹೇಳಬೇಕು ? ಇವರಿಗೇನಾದರೂ ಆಯಿತು ಅಂದರೆ ನನ್ನ ತಲೆಗೆ ಬರುತ್ತೆ ಇವಳಿಗೇನಾಗಬೇಕು ?' ಇಷ್ಟೇ ಆಗಿದ್ದಿದ್ದರೆ ನಿರ್ಮಲಾ ಬಹುಶಃ ಸಹಿಸಿಕೊಳ್ಳುತ್ತಿದ್ದಳು. ಆದರೆ ರುಕ್ಮಿಣಿ ಗಸ್ತು ತಿರುಗುವ ಪೊಲೀಸಿನಂತೆ ನಿರ್ಮಲಾಳನ್ನೇ ಹಿಂಬಾಲಿಸಲಾರಂಭಿಸಿದಳು. ಮಾಳಿಗೆಯ ಮೇಲೆ ನಿಂತಿದ್ದರೆ–ಯಾರ ಮೇಲೋ ಕಣ್ಣು ಹಾಕುತ್ತಿದ್ದಾಳೆ ಅಂತ ಹೇಳುವುದು, ನೌಕರನೊಡನೆ ಮಾತನಾಡುತ್ತಿದ್ದರೆ ನನ್ನನ್ನು ಬೈಯ್ಯುತ್ತಿದ್ದಾಳೆ ಎಂದು ಅನುಮಾನ ಪಡುವುದು, ಪೇಟೆಯಿಂದ ಏನನ್ನಾದರೂ ತರಿಸಿದರೆ–ಏನೋ ವಿಲಾಸದ ಸಾಮಗ್ರಿಯನ್ನು ತರಿಸಿದ್ದಾಳೆ ಎಂದು ಶಂಕಿಸುವುದು, ಬಂದ ಕಾಗದ ಪತ್ರಗಳನ್ನು ಕದ್ದು ಓದಲು ಪ್ರಯತ್ನಿಸುವುದು, ಕದ್ದು ಮಾತು ಕೇಳಿಸಿಕೊಳ್ಳುವುದು.... ಇತ್ಯಾದಿಗಳಿಂದ ನಿರ್ಮಲಾ ರೋಸಿ ಹೋಗಿದ್ದಳು. ಒಂದು ದಿನ

ಗಂಡನಿಗೆ ಹೇಳಿದಳು – 'ನಿಮ್ಮ ತಂಗಿಗೆ ಬುದ್ಧಿ ಹೇಳಿ, ನನ್ನ ಬೆನ್ನು ಏಕೆ ಹತ್ತಿದ್ದಾರೆ ಅಂತ ಕೇಳಿ.'

ತೋತಾರಾಮ : ಕೋಪದಿಂದಲೇ ಕೇಳಿದರು – 'ನಿನಗೇನಾದರೂ ಅಂದ ಳೇನು ?'

'ದಿನವೂ ಇದೇ ಗೋಳು, ಬಾಯಿಂದ ಒಂದು ಮಾತನಾಡೋದೂ ಕಷ್ಟಕ್ಕಿಟ್ಟುಕೊಂಡಿದೆ. ನಾನು ಮನೆ ಯಜಮಾನಿ ಆಗಿರುವುದು ಈಕೆಗೆ ಇಷ್ಟವಿಲ್ಲದಿದ್ದರೆ ನೀವು ಆಕೆಯ ಕೈಗೇ ಹಣ–ಕಾಸು ತಂದು ಕೊಡಿ. ನನಗೆ ಇದಾವುದೂ ಬೇಡ. ಈಕೆನೇ ಯಜಮಾನಿಯಾಗಿರಲಿ. ಆದರೆ ನನಗೆ ಯಾರೂ ಬೈಯ್ಯೋದು – ಅನ್ನೋದು ಮಾಡಕೂಡದು ಅಷ್ಟೆ...'

ಇಷ್ಟು ಹೇಳುತ್ತಿರುವಾಗಲೇ ನಿರ್ಮಲಾಳ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಹರಿಯಲಾರಂಭಿಸಿತು. ತೋತಾರಾಮರಿಗೂ ತಮ್ಮ ಪ್ರೇಮವನ್ನು ಅಭಿವ್ಯಕ್ತಿಸಲು ಒಂದು ಒಳ್ಳೆಯ ಅವಕಾಶ ದೊರೆಯಿತು. ಹೇಳಿದರು– 'ನಾನೀಗಲೇ ಅವಳನ್ನು ವಿಚಾರಿಸಿಕೊಳ್ತೇನೆ. ಬಾಯಿ ಮುಚ್ಚಿಕೊಂಡು ಇರುವುದಾದರೆ ಇಲ್ಲಿರು, ಇಲ್ಲಾಂದರೆ ನಿನ್ನ ದಾರಿ ಹಿಡ್ಕೊಂಡು ಹೋಗು ಅಂತ ಸ್ಪಷ್ಟವಾಗಿ ಹೇಳಿ ಬಿಡ್ತೇನೆ. ಈ ಮನೆಯ ಒಡತಿ ನೀನು, ಅವಳಲ್ಲ. ಆಕೆ ಇರೋದು ನಿನ್ನ ಸಹಾಯಕ್ಕಾಗಿ, ಅಷ್ಟೆ. ಸಹಾಯ ಮಾಡುವುದರ ಬದಲು ನಿನಗೇ ತಿರುಗಿಸಿ ಮಾತನಾಡ್ತಾಳೆ ಅಂದ್ರೆ, ಇನ್ನು ಅವಳಿಲ್ಲಿರುವುದು ಬೇಡ. ಏನೋ ವಿಧವೆ, ಅನಾಥೆ, ಒಂದು ತುತ್ತು ತಿಂದುಕೊಂಡು ಇರ್ತಾಳೆ. ಬೇರೆ ಎಷ್ಟೋ ಜನ ನೌಕರ–ಚಾಕರರು ತಿಂದುಕೊಂಡು ಹೋಗ್ತಿರಬೇಕಾದರೆ ಇವಳು ನನ್ನ ತಂಗಿ ತಾನೇ ಅಂತ ಸುಮ್ಮನಿದ್ದೆ. ಇನ್ನು, ಮಕ್ಕಳನ್ನು ನೋಡಿಕೊಳ್ಳಲು ಒಬ್ಬ ಹೆಂಗಸು ಬೇಕಾಗಿತ್ತು ಅಂತ ಇಟ್ಟುಕೊಂಡಿದ್ದೆ. ಅಂದಾಕ್ಷಣಕ್ಕೆ ಈಗ ನಿನ್ನ ಮೇಲೆ ಮೇಲೆ ಅಧಿಕಾರ ಮಾಡಬಹುದು ಅಂತ ಅರ್ಥವಲ್ಲ.'

ನಿರ್ಮಲಾ ಮತ್ತೆ ಹೇಳಿದಳು – 'ಹುಡುಗರಿಗೆ ಹೇಳಿಕೊಡ್ತಾರೆ – 'ಅಮ್ಮನ ಹತ್ತಿರ ಹೋಗಿ ಹಣ ಇಸ್ಕೊಳ್ಳಿ, ಅದು ಇಸ್ಕೊಳ್ಳಿ, ಇದು ಇಸ್ಕೊಳ್ಳಿ ಅಂತ'. ಹುಡುಗರು ಬಂದು ನನ್ನ ಪ್ರಾಣ ತಿನ್ತಾರೆ, ಒಂದು ಕ್ಷಣ ಆರಾಮವಾಗಿ ಮಲಗಿಕೊಳ್ಳಲಿಕ್ಕೂ ಈ ಮನೇಲಿ ಆಗೋದಿಲ್ಲ ಬೈದರೆ ಕಣ್ಣು ಕೆಂಪಗೆ ಮಾಡಿಕೊಂಡು ಹೋಗ್ತಾರೆ. ನಾನು ಈ ಹುಡುಗರನ್ನು ನೋಡಿ ಹೊಟ್ಟೆ ಉರಿದುಕೊಳ್ತೇನೆ ಅಂತ ತಿಳಿದುಕೊಂಡಿದ್ದಾರೆ. ಈ ಮಕ್ಕಳನ್ನು ನಾನೆಷ್ಟು ಪ್ರೀತಿಸುತ್ತೇನೆ ಎಂಬುದು ಆ ದೇವರೊಬ್ಬನಿಗೇ ಗೊತ್ತು. ಇವರು ನನ್ನ ಮಕ್ಕಳು ತಾನೇ ? ಇವರನ್ನು ಕಂಡರೆ ನಾನೇಕೆ ಬೆಂಕಿ ಕಾರಬೇಕು ?'

ತೋತಾರಾಮ ಕೋಪದಿಂದ ಕೆಂಡವಾಗಿ ನುಡಿದರು – 'ನಿನಗೆ ಎದುರು ಮಾತಾಡಿ, ಕಾಟಕೊಟ್ಟವನಿಗೆ ಎರಡು ಬಾರಿಸು, ನಾನಿದ್ದೀನಿ. ಇವರು ಹೆಚ್ಚಿಬಿಟ್ಟಿದ್ದಾರೆ. ಮಂಸಾರಾಮನನ್ನು ನಾಳೆಯೇ ಬೋರ್ಡಿಂಗ್ ಹೌಸ್‌ಗೆ ಕಳಿಸುತ್ತೇನೆ. ಉಳಿದ ಇಬ್ಬರನ್ನು ಇವತ್ತೇ ಸರಿ ಮಾಡ್ತೇನೆ.'

ಆಗ ತೋತಾರಾಮರು ಕಛೇರಿಗೆ ಹೊರಟಿದ್ದರು. ಹೀಗಾಗಿ ತರಾಟೆಗೆ ತೆಗೆದುಕೊಳ್ಳಲು ಅವರಿಗೆ ಸಮಯವಿರಲಿಲ್ಲ. ಆದರೆ ಕಛೇರಿಯಿಂದ ಮನೆಗೆ ಬರುತ್ತಿದ್ದಂತೆಯೇ ರುಕ್ಮಿಣಿಗೆ ಹೇಳಿದರು – 'ನೋಡಮ್ಮ ತಂಗಿ, ನೀನು ಈ ಮನೆಯಲ್ಲಿ ಇರಬೇಕು ಅಂತ ಇದ್ದೀಯೋ ಅಥವಾ ಇಲ್ಲವೋ ? ಇಲ್ಲಿ ಇರಬೇಕು ಅಂತ ಇದ್ದರೆ ಬಾಯಿ ಮುಚ್ಚಿಕೊಂಡು ಸುಮ್ಮನಿರಬೇಕು. ಬೇರೆಯವರಿಗೆ ತೊಂದರೆ ಕೊಡಬಾರದು.'

ನಿರ್ಮಲಾ ತನ್ನ ಗಂಡನ ಕಿವಿ ಊದುವುದರಲ್ಲಿ ಯಶಸ್ವಿಯಾದಳು ಎಂದು ರುಕ್ಮಿಣಿ ಅಂದುಕೊಂಡಳು. ಆದರೆ ಆಕೆ ಅಷ್ಟು ಸುಲಭವಾಗಿ ಸೋಲನ್ನು ಒಪ್ಪಿಕೊಳ್ಳುವ ಹೆಂಗಸಾಗಿರಲಿಲ್ಲ. ಆಕೆ ವಯಸ್ಸಿನಲ್ಲಿಯೂ ಹಿರಿಯವಳಾಗಿದ್ದಳು. ಜೊತೆಗೆ ಈ ಮನೆಯವರ ಸೇವೆ ಮಾಡುತ್ತ ಇಷ್ಟು ವರ್ಷ ತನ್ನ ದೇಹವನ್ನು ಸವೆಸಿದ್ದಳು. ಇವಳ ಅಧಿಕಾರವನ್ನು ಪ್ರಶ್ನಿಸುವ ಹಕ್ಕು ಇಷ್ಟು ಬೇಗ ಯಾರಿಗೆ ಬಂತು ? ಅಣ್ಣ ಈ ಮಾತುಗಳನ್ನಾಡಿದುದು ಅವಳಿಗೆ ಆಶ್ಚರ್ಯ ತಂದಿತ್ತು. ಸರಿ, ಈಕೆಯೂ ಅಷ್ಟೇ ಬಿರುಸಾಗಿ ನುಡಿದಳು. 'ಹಾಗಾದರೆ ನಾನು ಈ ಮನೆಯ ಜವಾನಿಯೇನು ? ಜವಾನಿಯಾಗಿ ನೀನು ನನ್ನನ್ನು ಕಾಣುವುದಾದರೆ ನಾನಿಲ್ಲಿರಲು ಇಷ್ಟಪಡುವುದೇ ಇಲ್ಲ, ಈ ಮನೆಗೆ ಯಾರಾದರೂ ಬೆಂಕಿ ಇಟ್ಟರೆ, ಅದನ್ನು ಸುಮ್ಮನೆ ನೋಡಿಕೊಂಡಿರಲು, ಯಾರಾದರೂ ತಪ್ಪು ದಾರಿಯಲ್ಲಿ ನಡೆದರೆ ಅದನ್ನು ತಿದ್ದದೆ ಸುಮ್ಮನಿರಲು ನನ್ನಿಂದಂತೂ ಸಾಧ್ಯವಿಲ್ಲ. ಇಷ್ಟುಮಟ್ಟಿಗೆ ಬಾಯಿಗೆ ಬಂದಂತೆ ಅನ್ನಲು ಆದದ್ದಾರೂ ಏನು ? ನಿನಗೆ ಬುದ್ಧಿ ಇದೆಯೇನು ? ನಿನ್ನೆ–ಮೊನ್ನೆ ಬಂದ ಗರತಿ ಕೈಲಿ ನಿನ್ನ ಜುಟ್ಟು ಕೊಟ್ಟುಬಿಟ್ಟೇನು ? ಹೇಳೋದು ಕೇಳೋದು ಏನು ಬೇಡವೇನು ? ಅವಳು ಹೇಳಿದಳು ಅಂತ ನೀನು ಕತ್ತಿ ಹಿಡಿದುಕೊಂಡು ಬಂದ್ಬಿಟ್ಟೆ ಇದು ನಿನಗೆ ಸರಿನೇನು ?'

ತೋತಾರಾಮ : 'ನೀನು ಮಾತು ಮಾತಿಗೂ ತಪ್ಪು ಕಂಡು ಹಿಡಿತೀಯಂತೆ. ಬೈಯುತ್ತೀಯಂತೆ. ಹೀಗೆಲ್ಲ ಏಕೆ ಮಾಡಬೇಕು ? ಬುದ್ಧಿ ಮಾತು ಹೇಳುವುದಿದ್ದರೆ ಪ್ರೀತಿಯಿಂದ ಒಳ್ಳೆ ಮಾತುಗಳಲ್ಲಿ ಹೇಳಬೇಕು. ಅದು ಬಿಟ್ಟು ಮಾತು–ಮಾತಿಗೂ ಬೈದರೆ, ಹಂಗಿಸಿದರೆ, ಅದು ನಿನಗೇ ತಿರುಗುಬಾಣವಾಗುತ್ತೆ'

ರುಕ್ಮಿಣಿ : 'ಆಯಿತು, ಇನ್ನು ಏನೇ ಮಾಡಿದರೂ ಟುಟಿಕ್–ಪಿಟಿಕ್ ಅನ್ನಬೇಡಾಂತ ತಾನೇ ನೀನು ಹೇಳ್ತಿರೋದು. ಹಾಗೇ ಆಯಿತು ಬಿಡು. ನಾಳೆ ಏನಾದರೂ ಆಯಿತು ಅಂದರೆ, ನೀನು ಮನೇಲಿದ್ದೆ ಯಾಕೆ ಹೇಳಲಿಲ್ಲ ಅಂತ ಮಾತ್ರ ಕೇಳಬೇಡ. ನನ್ನ ಮಾತುಗಳು ವಿಷ ಅಂತ ಭಾವಿಸಿಕೊಂಡಿರುವವರಿಗೆ ಮತ್ತೆ ಏನಾದರೂ ಹೇಳಲಿಕ್ಕೆ ಹೋಗೋದಕ್ಕೆ ನನಗೇನು ಹುಚ್ಚುನಾಯಿ ಕಡಿದಿದೆಯೇನು ? ನಾನೂ ನೋಡ್ತೀನಿ. ಮನೆ ಸೊಸೆ ಎಷ್ಟರ ಮಟ್ಟಿಗೆ ಮನೆ ನಡೆಸ್ತಾಳೆ ಅಂತ.'

ಅಷ್ಟರಲ್ಲಿ ಸಿಯಾರಾಮ ಮತ್ತು ಜಿಯಾರಾಮ ಸ್ಕೂಲಿನಿಂದ ಬಂದರು. ಬಂದವರೇ ಅತ್ತೆಯ ಹತ್ತಿರ ಬಂದು ತಿನ್ನಲು ಏನಾದರೂ ಕೊಡುವಂತೆ ಕೇಳಿದರು. ಆಗ ರುಕ್ಮಿಣಿ

ಹೇಳಿದಳು. ಹೊಸದಾಗಿ ಬಂದಿರುವ ನಿಮ್ಮ ಅಮ್ಮನನ್ನು ಹೋಗಿ ಕೇಳಿ, ನನಗೆ ಈ ಮನೆಯಲ್ಲಿ ಮಾತನಾಡುವ ಅಧಿಕಾರವಿಲ್ಲ.'

ತೋತಾರಾಮ : 'ನೀವು ಆಕೆಯ ರೂಮಿಗೆ ಕಾಲಿಟ್ಟರೆ ಕಾಲು ಮುರಿದುಬಿಡ್ತೇನೆ. ತುಂಟತನಕ್ಕೂ ಒಂದು ಹದ್ದಿರಬೇಕು.'

ಜಿಯಾರಾಮ ಕೊಂಚ ಜೋರಾಗಿದ್ದ – 'ನೀವು ಅವರಿಗೆ ಒಂದು ಮಾತೂ ಅನ್ನೊಲ್ಲ. ಬರೀ ನಮಗೇ ಹೇಳ್ತೀರಲ್ಲ ? ಯಾವಾಗ ಕೇಳಿದರೂ ಅವರು ಒಂದು ಪೈಸಾನೂ ಕೊಡೊಲ್ಲ.'

ಸಿಯಾರಾಮ ಈ ಮಾತನ್ನು ಅನುಮೋದಿಸಿದ – 'ನನಗೆ ಒಂದು ಮಾತು ಅಂದರೂ ನಿಮ್ಮ ಕಿವಿ ಕಿತ್ತು ಕೈಗೆ ಕೊಡ್ತೇನೆ ಅಂದರು. ಅನ್ನಲಿಲ್ಲವೇನೋ ಜಿಯಾ ?'

ನಿರ್ಮಲಾ ತನ್ನ ಕೋಣೆಯಿಂದಲೇ ಹೇಳಿದಳು – 'ನಿಮ್ಮ ಕಿವಿ ಕಿತ್ತು ಕೈಗೆ ಕೊಡ್ತೇನೆ ಅಂತ ನಾನು ನಿಮಗೆ ಯಾವಾಗ ಅಂದೆ ? ಈಗಲಿಂದಲೇ ಸುಳ್ಳು ಹೇಳ್ತೀದ್ದೀರೇನು ?'

ನಿರ್ಮಲಾಳಿಂದ ಇಷ್ಟು ಕೇಳುತ್ತಿದ್ದಂತೆಯೇ ತೋತಾರಾಮರು ಸಿಯಾರಾಮನ ಎರಡು ಕಿವಿಗಳನ್ನೂ ಹಿಡಿದುಕೊಂಡು ಮೇಲಕ್ಕೆ ಎತ್ತಿದರು. ಅವನು ಜೋರಾಗಿ ಕಿರುಚುತ್ತ ಅಳತೊಡಗಿದ.

ರುಕ್ಮಿಣಿ ಓಡಿ ಬಂದವಳೇ ಮಗುವನ್ನು ತೋತಾರಾಮರ ಕೈಯಿಂದ ಬಿಡಿಸಿಕೊಳ್ಳುತ್ತ ಹೇಳಿದಳು – 'ಹೋಗಲಿ ಬಿಡು ಅಣ್ಣಯ್ಯಾ, ಈ ಮಗುವನ್ನು ಸಾಯಿಸಬೇಕೆಂದು ಮಾಡಿಕೊಂಡಿದ್ದಿಯೇನು ? ಅಯ್ಯೋ ದೇವರೆ, ಕಿವಿ ಎಷ್ಟು ಕೆಂಪಾಯಿತು ನೋಡು ! ಎರಡನೆಯ ಹೆಂಡತಿ ಬಂದರೆ ಅವಳ ಮೋಹದಲ್ಲಿ ಮನುಷ್ಯ ಕುರುಡನಾಗುತ್ತಾನೆ ಅಂತ ಹಿರಿಯರು ಸರಿಯಾಗಿಯೇ ಹೇಳಿದ್ದಾರೆ. ಈಗಲೇ ಈ ಗತಿಯಾದರೆ ಈ ಮನೆಯನ್ನು ಆ ದೇವರೇ ಕಾಪಾಡಬೇಕು.'

ತನ್ನ ಮಾತು ನಡೆದದ್ದಕ್ಕೆ ನಿರ್ಮಲಾ ಮನಸ್ಸಿನಲ್ಲಿಯೇ ಸಂತೋಷಪಡುತ್ತಿದ್ದಳು. ಆದರೆ ಯಜಮಾನರು ಮಗುವಿನ ಕಿವಿಗಳನ್ನು ಹಿಡಿದು ಮೇಲಕ್ಕೆ ಎತ್ತಿದಾಗ ಅವಳಿಂದ ಸುಮ್ಮನಿರಲಾಗಲಿಲ್ಲ. ಅವನನ್ನು ಬಿಡಿಸಿಕೊಳ್ಳಲು ಅವಳು ಓಡಿ ಬರುವಷ್ಟರಲ್ಲಿ ರುಕ್ಮಿಣಿ ಓಡಿಬಂದವಳೇ ಹೇಳಿದಳು – 'ಇಡುವ ಕೊಳ್ಳಿ ಮೊದಲೇ ಇಟ್ಟು ಈಗ ಆರಿಸುವುದಕ್ಕೆ ಓಡಿ ಬಂದಿಯೇನೆ. ಅಮ್ಮಾ ! ನಿನಗೇ ಮಕ್ಕಳಾದಾಗ ನೋವು ಗೊತ್ತಾಗುತ್ತೆ ಬೇರೆಯವರ ನೋವು ನಿನಗೇನು ಗೊತ್ತಾಗಬೇಕು ?'

ನಿರ್ಮಲಾ : 'ಇಲ್ಲೇ ನಿಂತಿದ್ದಾರೆ ಕೇಳಿ, ನಾನು ಏನು ಕೊಳ್ಳಿ ಇಟ್ಟೆ ಅಂತ, ಈ ಹುಡುಗರು ನನಗೆ ಹಣ ಕೊಡು, ಹಣ ಕೊಡು ಅಂತ ಪೀಡಿಸ್ತಾರೆ ಅಂತ ಅಷ್ಟೇ ನಾನು ಹೇಳಿದ್ದು. ಇದಕ್ಕಿಂತಲೂ ಹೆಚ್ಚಿಗೆ ನಾನೇನಾದರೂ ಹೇಳಿದ್ದರೆ ನನ್ನ ಕಣ್ಣಿಗೆ ಅಕ್ಕಿಕಾಳು ಬೀಳಲಿ.'

ತೋತಾರಾಮ : 'ಈ ತುಂಟರ ತುಂಟಾಟಗಳನ್ನು ನಾನು ನೋಡ್ತಾನೇ ಇದ್ದೀನಿ ;

ನ್ನ ಕಣ್ಣುಗಳು ಕುರುಡಾಗಿವೆಯೇನು ? ಈ ಮೂವರೂ ಹಠಮಾರಿಗಳೂ ತುಂಟರೂ ಆಗಿದ್ದಾರೆ. ದೊಡ್ಡವನಿಗೆ ಇವತ್ತೇ ಹಾಸ್ಟಲಿಗೆ ಸೇರಿಸ್ತೇನೆ.'

ರುಕ್ಮಿಣಿ : 'ಇಷ್ಟು ದಿನ ಇವರು ನಿನಗೆ ತುಂಟರು, ಹಠಮಾರಿಗಳಾಗಿರಲಿಲ್ಲ, ಅಲ್ಲವೇ ? ಇವತ್ತು ಆದರು ನಿನ್ನ, ಕಣ್ಣು ಕೆಂಪಾದವು.'

ತೋತಾರಾಮ : 'ನೀನೇ ಇವರನ್ನು ಕೆಡಿಸಿರುವುದು.'

ರುಕ್ಮಿಣಿ : 'ಹೌದಪ್ಪಾ , ನಾನೇ ಕೆಡಿಸಿದ್ದೀನಿ ಈ ಹುಡುಗರನ್ನು ನನ್ನಿಂದಲೇ ನಿನ್ನ ಮನೆ ಹಾಳಾಗಿ ಹೋಗ್ತಿದೆ ಅಂದ ಮೇಲೆ, ಇಗೋ ನಾನು ಹೊರಟೆ, ನಿನ್ನ ಮಕ್ಕಳು, ಹೊಡೆದು ಸಾಯಿಸು, ಬದುಕಿಸು, ನಾನು ಒಂದು ಮಾತೂ ಆಡುವುದಿಲ್ಲ.'

ಇಷ್ಟು ಹೇಳಿ ಅವಳು ಅಲ್ಲಿಂದ ಹೊರಟು ಹೋದಳು. ಮಗು ಅಳುತ್ತಿರುವುದನ್ನು ಕಂಡು ನಿರ್ಮಲಾ ವಿಹ್ವಲಳಾದಳು. ಅವಳು ಕೂಡಲೇ ಮಗುವನ್ನು ಎತ್ತಿಕೊಂಡು ಎದೆಗಪ್ಪಿಕೊಂಡಳು. ಆದರೆ ಮಗು ಇನ್ನೂ ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಲೇ ಇತ್ತು. ದೈವ ಆ ಮಗುವನ್ನು ತಾಯಿಯ ವಾತ್ಸಲ್ಯದಿಂದ ವಂಚಿಸಿತ್ತು. ನಿರ್ಮಲಾ ಮುದ್ದಿನಲ್ಲಿ ಅದು ತಾಯಿಯನ್ನು ಕಾಣಲಿಲ್ಲ. ಅವಳದು ವಾತ್ಸಲ್ಯವಲ್ಲ , ಕೇವಲ ಕರುಣೆ. ಅವಳ ಅಂತರಂಗದ ಮೇಲೆ ಈ ಮಗುವಿಗೆ ಯಾವುದೇ ಅಧಿಕಾರವಿರಲಿಲ್ಲ. ಭಿಕ್ಷೆಯಂತೆ ಆಕೆ ತನ್ನ ಮುದ್ದನ್ನು ನೀಡುತ್ತಿದ್ದಳು, ಅಷ್ಟೆ , ತನ್ನ ತಾಯಿ ಬದುಕಿದ್ದಾಗ ಅಪ್ಪ ಒಂದೆರಡು ಬಾರಿ ಹೀಗೆ ಹೊಡೆದುದ್ದುಂಟು. ಆಗೆಲ್ಲ ಅವರ ತಾಯಿ ತನ್ನನ್ನು ಎದೆಗಪ್ಪಿಕೊಂಡು ಅಳುತ್ತಿರಲಿಲ್ಲ. ಅವಳು ಮುನಿಸಿಕೊಂಡು ಮಾತನಾಡುವುದನ್ನೇ ಬಿಟ್ಟುಬಿಡುತ್ತಿದ್ದಳು. ಕೊಂಚ ಹೊತ್ತಿನ ನಂತರ ಆದದ್ದೆಲ್ಲವನ್ನು ಮರೆತವನಂತೆ ಅಮ್ಮನ ಬಳಿಗೆ ಓಡಿಹೋಗುತ್ತಿದ್ದ. ತುಂಟತನಕ್ಕೆ ಶಿಕ್ಷೆಯಾಗುವುದೇನೋ ಸರಿ, ಆದರೆ ಒದೆ ತಿಂದನಂತರ ಹೀಗೆ ಮುದ್ದಿಸಿಕೊಳ್ಳುವುದು ಅವನಿಗೆ ಗೊತ್ತಿರಲಿಲ್ಲ. ಮಾತೃಪ್ರೇಮದಲ್ಲಿ ಮೃದುತ್ವ ತುಂಬಿದ ಕಾಠಿಣ್ಯತೆ ಇರುತ್ತಿತ್ತು. ಈಕೆಯ ಪ್ರೇಮದಲ್ಲಿ ಕರುಣೆ ಇತ್ತೇ ಹೊರತಾಗಿ, ಆತ್ಮೀಯತೆಯ ಗುಪ್ತ ಸಂದೇಶವಾದ ಕಾಠಿಣ್ಯತೆಯಿರಲಿಲ್ಲ. ಆರೋಗ್ಯ ಪೂರ್ಣವಾದ ಶರೀರದ ಯಾವುದೇ ಭಾಗವನ್ನು ಯಾರು ತಾನೇ ಲಕ್ಷಿಸುತ್ತಾರೆ ? ಆದರೆ ಅದೇ ಭಾಗ ನೋವಿನಿಂದ ನರಳುವಾಗ, ಅದಕ್ಕೆ ಮತ್ತೆ ನೋವಾಗದಂತೆ, ಅದು ಯಾವುದಕ್ಕೂ ತಗಲದಂತೆ ಎಚ್ಚರ ವಹಿಸುತ್ತೇವೆ. ನಿರ್ಮಲಾಳ ಕರುಣಾಪೂರ್ಣವಾದ ರೋದನೆ ಆ ಮಗುವಿಗೆ ನೀನು ಅನಾಥ ಎಂದು ಸಾರಿ ಹೇಳುತ್ತಿತ್ತು. ಅವನು ಬಹಳ ಹೊತ್ತಿನವರೆಗೆ ನಿರ್ಮಲಾಳ ತೊಡೆಯ ಮೇಲೆ ಕೂತು ಅಳುತ್ತಲೇ ಇದ್ದ. ಆಮೇಲೆ ಅಳುತ್ತ –ಅಳುತ್ತಲೇ ನಿದ್ದೆ ಹೋದ. ನಿರ್ಮಲಾ ಅವನನ್ನು ಮಂಚದ ಮೇಲೆ ಮಲಗಿಸಬಯಸಿದಳು, ಆದರೆ ಅವನು ತನ್ನ ಸುಷುಪ್ತಾವಸ್ಥೆಯಲ್ಲಿ ತನ್ನೆರಡು ಕೋಮಲ ಕೈಗಳಿಂದ ಅವಳ ಕೊರಳನ್ನು ಬಳಸಿ ಹಿಡಿದುಕೊಂಡಿದ್ದ. ಆ ಹಿಡಿತ ಎಷ್ಟು ಬಿಗಿಯಾಗಿತ್ತೆಂದರೆ ಕೆಳಗೆ ಯಾವುದೋ ಗುಂಡಿ ಇರುವುದೇನೋ ಎಂಬ ಭಯ ಅವನನ್ನು ಕಾಡುತ್ತಿದೆಯೇನೋ ಎಂದೆನಿಸುತ್ತಿತ್ತು. ಶಂಕೆ ಮತ್ತು ಭಯದಿಂದಾಗಿ ಅವನ ಮುಖದಲ್ಲಿ

ಗಾಬರಿ ಇಣುಕಿತ್ತು. ನಿರ್ಮಲಾ ಪುನಃ ಮಗುವನ್ನು ಎತ್ತಿಕೊಂಡಳು ಮಂಚದ ಮೇಲೆ ಅವನನ್ನು ಮಲಗಿಸಲಾಗಲೇ ಇಲ್ಲ. ಮಗುವನ್ನು ಎತ್ತಿ ಎದೆಗವಚಿಕೊಂಡಿದ್ದ ನಿರ್ಮಲಾಳಿಗೆ ಅದೆಂಥ ಅಪೂರ್ವ ಸುಖದ ಅನುಭವವಾಗುತ್ತಿತ್ತೆಂದರೆ ಇಂಥ ಅನುಭವ ಆಕೆಗೆ ಎಂದೂ ಆಗಿರಲಿಲ್ಲ.

ಇವತ್ತು ಮೊದಲ ಸಾರಿ ಅವಳಿಗೆ ವೇದನೆಯಾಗಿತ್ತು. ಹೀಗಾಗದೇ ಇದ್ದಿದ್ದರೆ ಅವಳ ಕಣ್ಣುಗಳು ತೆರೆಯುತ್ತಿರಲಿಲ್ಲ , ತನ್ನ ಕರ್ತವ್ಯದ ಅರಿವು ಅವಳಿಗಾಗುತ್ತಿರಲಿಲ್ಲ. ತನ್ನ ಕರ್ತವ್ಯವೇನು ಎಂಬುದರ ಪ್ರಶ್ನೆ ಈಗ ಅವಳಿಗಾಗತೊಡಗಿತ್ತು.

# ಆರು

ಆ ದಿನ ತಮ್ಮ ಪ್ರಗಾಢ ಪ್ರೇಮವನ್ನು ಪ್ರತ್ಯಕ್ಷವಾಗಿ ಪ್ರಮಾಣೀಕರಿಸಿ ತೋರಿಸಿದ ನಂತರ, ಅದರಿಂದ ನಿರ್ಮಲಾಳ ಹೃದಯದ ಮೇಲೆ ಅದ್ಭುತ ಪರಿಣಾಮವಾಗಿರಬಹುದು ಎಂದು ತೋತಾರಾಮರು ನಿರೀಕ್ಷಿಸಿದ್ದರು. ಆದರೆ ಅವರ ನಿರೀಕ್ಷೆ ಕೊಂಚವೂ ಫಲಕಾರಿಯಾಗಲಿಲ್ಲ. ಈ ಮೊದಲು ಆಗೊಮ್ಮೆ – ಈಗೊಮ್ಮೆಯಾದರೂ ಅವಳು ಅವರೊಂದಿಗೆ ನಗುತ್ತ ಮಾತನಾಡುತ್ತಿದ್ದಳು. ಆದರೆ ಈಗ ಯಾವಾಗ ನೋಡಿದರೂ ಮಕ್ಕಳ ಲಾಲನೆ. ಪೋಷಣೆಯಲ್ಲಿಯೇ ನಿರತಳಾಗಿರುತ್ತಿದ್ದಳು. ಅವರು ಮನೆಗೆ ಬಂದಾಗ ಮಕ್ಕಳು ಅವಳನ್ನು ಮುತ್ತಿ ಕುಳಿತಿರುತ್ತಿದ್ದರು. ಅವರಿಗೆ ಊಟ ಮಾಡಿಸುವುದು, ಬಟ್ಟೆ ತೊಡಿಸುವುದು, ಆಟವಾಡಿಸುವುದು, ಅವರನ್ನು ಕೂಡಿಸಿಕೊಂಡು ಕತೆ ಹೇಳುವುದನ್ನು ಮಾಡುತ್ತ ಸದಾ ವ್ಯಸ್ತಳಾಗಿರುತ್ತಿದ್ದಳು. ನಿರ್ಮಲಾಳ ಭಗ್ನ ಹೃದಯ ಪ್ರಣಯವನ್ನು ಕುರಿತಂತೆ ನಿರಾಶೆಗೊಂಡು, ಮಕ್ಕಳ ಮಧ್ಯೆ ಇದ್ದುಕೊಂಡು ಆನಂದಿಸುವುದರಲ್ಲೇ ಸುಖವನ್ನನುಭವಿಸುತ್ತಿತ್ತು. ಹೀಗೆ ಮಕ್ಕಳೊಡನೆ ನಗುತ್ತ–ಮಾತನಾಡುತ್ತ ನಲಿಯುವುದರಲ್ಲಿಯೇ ಅವಳ ಮಾತೃ–ತೃಷೆ ತೃಪ್ತವಾಗುತ್ತಿತ್ತು. ಗಂಡನ ಜೊತೆ ಮಾತನಾಡುವುದಕ್ಕೆ, ನಗುವುದಕ್ಕೆ ಆಕೆಗೆ ಸಂಕೋಚ, ಅನಾಸಕ್ತಿ ಮತ್ತು ಅಭಿರುಚಿ ಎಳ್ಳಷ್ಟೂ ಇರಲಿಲ್ಲ. ಅವಳ ಮನಸ್ಸು ಎಷ್ಟರ ಮಟ್ಟಿಗೆ ಜಿಗುಪ್ಸೆಗೊಂಡಿತೆಂದರೆ ಈ ಜಾಗ ಬಿಟ್ಟು ಎಲ್ಲಿಗಾದರೂ ಓಡಿಹೋಗೋಣವೇ ಎಂದು ಬಯಸುತ್ತಿತ್ತು. ಈಗ ಈ ಮಕ್ಕಳ ನಿಷ್ಕಲ್ಮಶ ಸರಳ ಸ್ನೇಹದಿಂದಾಗಿ, ಇವರ ಒಡನಾಟದಿಂದಾಗಿ ಮನಸ್ಸು ಪ್ರಫುಲ್ಲವಾಗತೊಡಗಿತ್ತು.

ಮೊದಲು ಮಂಸಾರಾಮ ಅವಳ ಬಳಿಗೆ ಬರಲು ಹಿಂದೆ–ಮುಂದೆ ನೋಡುತ್ತಿದ್ದ. ಈಗ ಅವನು ಆಗೊಮ್ಮೆ–ಈಗೊಮ್ಮೆ ಬಂದು ಅವಳ ಬಳಿ ಕುಳಿತುಕೊಳ್ಳುತ್ತಿದ್ದ. ಅವನು ನಿರ್ಮಲಾಳ ಓರಿಗೆಯವನೇ. ಆದರೆ ಮಾನಸಿಕ ವಿಕಾಸದ ದೃಷ್ಟಿಯಿಂದ ಐದು ವರ್ಷ

ಚಿಕ್ಕವನಾಗಿದ್ದ ಅಷ್ಟೆ. ಹಾಕಿ ಮತ್ತು ಫುಟ್‌ಬಾಲ್ ಅವನ ಪ್ರಪಂಚವಾಗಿತ್ತು. ಅಲ್ಲಿ ಅವನ ಕಲ್ಪನೆಗಳು ಗರಿಗೆದರುತ್ತಿದ್ದುವು. ಕಾಮನೆಗಳು ಹಸಿರು ಚೆಲ್ಲುತ್ತಿದ್ದವು. ಗೌರವರ್ಣದ ಕಾಂತಿಯುಕ್ತ ಶರೀರ, ಸ್ಫುರದ್ರೂಪಿ, ನಗುವ ಮುಖ, ನಾಚಿಕೆಯ ಸ್ವಭಾವದ ಹುಡುಗ ಆತ. ಮನೆಗೆ ಬಂದರೆ ಊಟಕ್ಕೆ ಮಾತ್ರ ಬರುತ್ತಿದ್ದ. ಇಡೀ ದಿನ ಅಲ್ಲಿ ಇಲ್ಲಿ ಸುತ್ತುತ್ತಿರುತ್ತಿದ್ದ. ನಿರ್ಮಲಾ ಅವನ ಬಾಯಿಂದ ಆಟಕ್ಕೆ ಸಂಬಂಧಿಸಿದ ಮಾತುಗಳನ್ನು ಕೇಳಿಸಿಕೊಳ್ಳುತ್ತ ಆ ಹೊತ್ತು ತನ್ನೆಲ್ಲ ಚಿಂತೆಗಳನ್ನು ಮರೆತುಬಿಡುತ್ತಿದ್ದಳು. ಆಗ, ತಾನು ಬೊಂಬೆಯಾಟವಾಡುತ್ತಿದ್ದ ಆ ದಿನಗಳು ಪುನಃ ಮರಳಿ ಬಂದರೆ ಅದೆಷ್ಟು ಚೆನ್ನ ಎಂದು ಹಂಬಲಿಸುತ್ತಿದ್ದಳು. ಓಹ್ ! ಆ ದಿನಗಳು ಕೈಬಿಟ್ಟುಹೋಗಿ ಕೆಲವು ದಿನಗಳಷ್ಟೇ ಕಳೆದಿವೆ !

ತೋತಾರಾಮರ ಸಹ ಇತರೆ ಎಷ್ಟೋ ಮನುಷ್ಯರಂತೆ ರಸಿಕರು, ಇಂದ್ರಿಯಾಸಕ್ತರಾಗಿದ್ದರು. ಕೆಲವು ದಿನ ಅವರು ನಿರ್ಮಲಾಳನ್ನು ಅಲ್ಲಿ–ಇಲ್ಲಿ ಸುತ್ತಿಸಿದರು. ಆದರೆ ಇದಾವುದರ ಪ್ರಭಾವವೂ ಆಗುತ್ತಿಲ್ಲವೆಂದು ಗೊತ್ತಾದ ಮೇಲೆ ಏಕಾಂತ ಜೀವಿಯಾದರು. ದಿನವಿಡೀ ಕಠಿಣ ಮಾನಸಿಕ ಪರಿಶ್ರಮದ ನಂತರ ಮನೆಗೆ ಬಂದರೆ ಅವರ ಮನಸ್ಸು ಆಮೋದ–ಪ್ರಮೋದ ವಿನೋದಕ್ಕಾಗಿ ಚಡಪಡಿಸುತ್ತಿತ್ತು. ಆದರೆ ಅವರ ಈ ವಿನೋದ–ಉದ್ಯಾನಕ್ಕೆ ಬಂದರೆ ಇಲ್ಲಿನ ಹೂಗಳು ಬಾಡಿರುತ್ತಿದ್ದವು. ಗಿಡಗಳು ಒಣಗಿರುತ್ತಿದ್ದವು. ಅವುಗಳ ಮೇಲೆ ಧೂಳು ಕುಳಿತಿರುತ್ತಿತ್ತು. ಆಗ, ಈ ಉದ್ಯಾನವನ್ನು ಸರ್ವನಾಶ ಮಾಡಿಬಿಡಲೇ ಎಂದು ಅವರು ಯೋಚಿಸುತ್ತಿದ್ದರು. ನಿರ್ಮಲಾ ನನ್ನ ಬಗ್ಗೆ ಏಕೆ ಅನಾಸಕ್ತಳಾಗಿದ್ದಾಳೆ ಎಂಬುದು ಅವರಿಗೆ ಅರ್ಥವಾಗುತ್ತಿರಲಿಲ್ಲ. ದಾಂಪತ್ಯ ವಿಜ್ಞಾನದ ಎಲ್ಲ ಮಂತ್ರಗಳನ್ನು ಪರೀಕ್ಷಿಸಿದ್ದಾಯಿತು. ಆದರೆ ಅವರ ಮನೋಭಿಲಾಶೆ ಮಾತ್ರ ಪೂರ್ಣವಾಗಲಿಲ್ಲ. ಈಗೇನು ಮಾಡಬೇಕೆಂದು ಅವರಿಗೆ ತೋಚುತ್ತಿರಲಿಲ್ಲ.

ಒಂದು ದಿನ ಇದೇ ಚಿಂತೆಯಲ್ಲಿ ಕುಳಿತಿರುವಾಗ ಅವರ ಸಹಪಾಠಿಯಾಗಿದ್ದ ಸ್ನೇಹಿತ ನಯನಸುಖರಾಮ ಬಂದರು. ನಮಸ್ಕಾರಗಳ ವಿನಿಮಯವಾದ ನಂತರ ಅವರು ಮುಗುಳ್ನಗುತ್ತ ಕೇಳಿದರು— 'ಇತ್ತೀಚಿನ ದಿನಗಳಲ್ಲಿ ಮಜವಾಗಿದ್ದೀರಿ ಅಂತ ಕಾಣುತ್ತೆ. ಹೊಸ ಹೆಂಡತಿಯ ಆಲಿಂಗನದಲ್ಲಿ ಯೌವನದ ನೆನಪು ಹಸಿರಾಗುತ್ತಿದೆಯಲ್ಲವೆ ? ತುಂಬಾ ಅದೃಷ್ಟವಂತರು ನೀವು ! ಮರೆತಿರುವ ಯೌವನವನ್ನು ನೆನಪು ಮಾಡಿಕೊಳ್ಳಲು ಇನ್ನೊಂದು ಮದುವೆಯಾಗುವುದೇ ಒಳ್ಳೆಯದು. ನನ್ನ ಜೀವನ ನೋಡಿ ಹೇಗೆ ಹಾಳಾಗ್ತಿದೆ ಅಂತ ನನ್ನ ಹೆಂಡತಿ ನನ್ನನ್ನು ಬಿಟ್ಟಿರೋಲ್ಲ, ಚಿಮಟದಂತೆ ನನ್ನನ್ನು ಹಿಡಿದುಕೊಂಡಿದ್ದಾಳೆ. ನನಗೂ ಇನ್ನೊಂದು ಮದುವೆಯಾಗುವ ಆಸೆ. ಎಲ್ಲಾದರೂ ಸರಿಯಾಗಿರೋ ಹೆಣ್ಣಿದ್ದರೆ ನನಗೆ ಅಂತ ಗೊತ್ತುಮಾಡಿ. ಇದಕ್ಕೆ ಲಂಚವಾಗಿ ಒಂದು ದಿನ ಅವಳ ಕೈಯಿಂದ ಮಾಡಿಸಿದ ತಾಂಬೂಲವನ್ನು ತಿನ್ನಿಸುತ್ತೇನೆ'

ತೋತಾರಾಮ ಗಂಭೀರವಾಗಿ ಉತ್ತರಿಸಿದರು – 'ಹೀಗೆ ಎಲ್ಲಾದರೂ ಮಾಡಿಬಿಟ್ಟೀರಿ ಮಹಾರಾಯ್ರೆ. ಆಮೇಲೆ ಪಶ್ಚಾತ್ತಾಪ ಪಡಬೇಕಾಗುತ್ತೆ ನೋಡಿ. ಹುಡುಗಿಯರು ತೃಪ್ತರಾಗುವುದು ಹುಡುಗರಿಂದ. ನಾನು ನೀವು ಈಗ ಈ ಕೆಲಸಕ್ಕೆ ನಾಲಾಯಕ್ಕಾಗಿದ್ದೇವೆ. ನಾನು ನಿಜ ಹೇಳಿದ್ದೇನೆ. ಈ ಮದುವೆ ಮಾಡಿಕೊಂಡು ನಾನು ಪಶ್ಚಾತ್ತಾಪ ಪಡುತ್ತಿದ್ದೇನೆ. ಏಕಾದರೂ ಕೊರಳಿಗೆ ಉರುಲು ಹಾಕಿಕೊಂಡೆನೋ ಅಂತ ಅನ್ನಿಸುತ್ತಿದ್ದೆ ನಾಲ್ಕಾರು ವರ್ಷ ಮಜವಾಗಿದ್ದುಕೊಂಡು ಸುಖವಾಗಿರಬೇಕು ಅಂದ್ಕೊಂಡಿದ್ದೆ. ಆದರೆ ಈಗ ಆದದ್ದೇ ಬೇರೆ.'

ನಯನಸುಖ : 'ಏನ್ ಮಾತನಾಡ್ತಿದ್ದೀರಿ ನೀವು ? ಹುಡುಗಿಯರನ್ನು ವಶ ಮಾಡಿಕೊಳ್ಳೋದು ಅಷ್ಟು ಕಷ್ಟವೇನು ? ಹೊರಗಡೆ ಕರೆದುಕೊಂಡು ಹೋಗಿ ಸುತ್ತಾಡಿಸಿ, ಅವರ ರೂಪ ಮತ್ತು ಬಣ್ಣವನ್ನು ಪ್ರಶಂಸೆ ಮಾಡಿ ನೋಡಿ, ಆಮೇಲೆ ನೋಡಿ ಹೇಗೆ ವಶ ಆಗ್ತಾರೆ ಅಂತ.'

ತೋತಾರಾಮ : 'ಇದೆಲ್ಲ ಮಾಡಿ ಮಾಡಿ ಸಾಕಾಯಿತು.'

ನಯನಸುಖ : 'ಆಯಿತು, ಸುಗಂಧಿತ ದ್ರವ್ಯಗಳನ್ನು ಕೊಡಿಸಿ, ಹೂವು–ಹಣ್ಣುಗಳನ್ನೂ ಕೊಡಿಸಿ, ಹೋಟೆಲ್‌ಗಳಿಗೆ ಸುತ್ತಾಡಿಸಿ.'

ತೋತಾರಾಮ : 'ಅದೆಲ್ಲ ಮಾಡಿದ್ದಾಯ್ತು ಮಾರಾಯ್ರೆ. ದಾಂಪತ್ಯ ಶಾಸ್ತ್ರದ ಎಲ್ಲ ಮಂತ್ರಗಳನ್ನು ಹಾಕಿದೆ. ಏನೂ ಪ್ರಯೋಜನವಾಗಲಿಲ್ಲ.'

ನಯನಸುಖ : 'ಸರಿ, ಈಗ ನನ್ನ ಒಂದು ಸಲಹೆಯನ್ನು ಕೇಳಿ. ನೀವು ನಿಮ್ಮ ರೂಪಸೌಂದರ್ಯವನ್ನು ಸರಿಮಾಡಿಕೊಳ್ಳಿ. ಇತ್ತೀಚೆಗೆ ಇಲ್ಲಿ ಒಬ್ಬರು ಡಾಕ್ಟರ್ ಬಂದಿದ್ದಾರೆ. ಇವರು ವೃದ್ಧಾಪ್ಯದ ಎಲ್ಲ ಗುರುತುಗಳನ್ನು ಅಳಿಸಿ ಹಾಕಿಬಿಡ್ತಾರೆ. ಮುಖದಲ್ಲಿ ಒಂದು ಸುಕ್ಕೂ ಕಾಣಬಾರದು. ತಲೆಯ ಒಂದು ಕೂದಲು ಸಹ ನರೆತಿರಬಾರದು. ಹಾಗೆ ಮಾಡ್ತಾರೆ. ಅವರು ಏನು ಮಂತ್ರ–ಮಾಟ ಮಾಡ್ತಾರೋ ! ಮನುಷ್ಯನ ರೂಪವೇ ಬದಲಾಗಿಬಿಡುತ್ತೆ'

ತೋತಾರಾಮ : 'ಫೀಸ್ ಏನ್ ತಗೊಳ್ತಾರೆ ?'

ನಯನಸುಖ : 'ಬಹುಶಃ ಐದುನೂರು ರೂಪಾಯಿ ತಗೊಳ್ತಾರೆ ಅಂತ ಕೇಳಿದ್ದೇನೆ.'

ತೋತಾರಾಮ : 'ಅಯ್ಯೋ ಹೋಗಿ ಸ್ವಾಮಿ, ಅವರು ಯಾರೋ ಪಾಖಂಡಿ ಇರಬೇಕು. ದಡ್ಡರನ್ನು ಲೂಟಿ ಮಾಡ್ತಾ ಇದ್ದಾರೆ. ಅವರು ಮಾಡೋ ಚಿಕಿತ್ಸೆಯಿಂದ ಏನೋ ನಾಲ್ಕೈದು ದಿನ ಮುಖ ಒಂದಿಷ್ಟು ಮಿಂಚಬಹುದು ಅಷ್ಟೆ. ನನಗೆ ಇಂಥ ವೈದ್ಯರ ಬಗ್ಗೆ ವಿಶ್ವಾಸವಿಲ್ಲ. ಹತ್ತೋ–ಹದಿನೈದೋ ಆಗಿದ್ದಿದ್ದರೆ, ತಮಾಷೆಗೆ ಅಂತ ಒಂದು ಕೈ ನೋಡಬಹುದಿತ್ತು. ಐದುನೂರು ರೂಪಾಯಿ ಜಾಸ್ತಿ ಆಯಿತು.'

ನಯನಸುಖ : 'ನಿಮಗೆ ಐನೂರು ರೂಪಾಯಿ ಅದ್ಯಾವ ದೊಡ್ಡ ಮಾತೂರೀ,

ಕಾಲು ಕಸ ! ಒಂದು ತಿಂಗಳ ಆದಾಯ, ನನ್ನ ಹತ್ತಿರ ಐನೂರು ಇದ್ದಿದ್ದರೆ ನಾನು ಮೊದಲು ಈ ಕೆಲಸವನ್ನೇ ಮಾಡ್ತಿದ್ದದ್ದು. ಯೌವನ ಅನ್ನೋದು ಒಂದು ಗಂಟೆ ಇದ್ದರೆ, ಅದು ಐನೂರು ರೂಪಾಯಿಗಿಂತಲೂ ಹೆಚ್ಚೇ.'

ತೋತಾರಾಮ : 'ಏನಾದರೂ ಸುಲಭದ ಉಪಾಯ, ಚಿಕಿತ್ಸೆ ಹೇಳಿ ಮಾರಾಯ್ರೆ. ಗಿಡಮೂಲಿಕೆ ಅಥವಾ ಇನ್ನೇನಾದರೂ ಇದ್ದರೆ ಹೇಳಿ, ನೀವು ಹೇಳಿದಂಥ ವೈದ್ಯರು ಚಿಕಿತ್ಸೆ ದೊಡ್ಡ ಮನುಷ್ಯರಿಗೆ ಇರಲಿ ಬಿಡಿ, ದೇವರು ಅವರಿಗೆ ಒಳ್ಳೆಯದು ಮಾಡಲಿ.'

ನಯನಸುಖ : 'ಹಾಗಾದರೆ ಒಂದು ಕೆಲಸ ಮಾಡಿ. ನಿಮ್ಮ ಈ ರೂಪ ಬದಲಾಯಿಸಿಕೊಳ್ಳಿ. ಈ ದೊಗಲೆ ಕೋಟನ್ನು ಕಿತ್ತು ಬಿಸಾಡಿ ಒಂದು ಒಳ್ಳೆಯ ಸೂಟು ಹೊಲಿಸಿ ಅದನ್ನು ಹಾಕಿಕೊಂಡು ಟ್ರಿಮ್ಮಾಗಿರಿ, ಕೊರಳಿಗೆ ಒಂದು ಚಿನ್ನದ ಸರ ಹಾಕ್ಕೊಳ್ಳಿ, ತಲೆಗೆ ಒಂದು ಜಯಪುರದ ಪೇಟ ಕಟ್ಕೊಳ್ಳಿ, ಕಣ್ಣಿಗೆ ಕಾಡಿಗೆ ಹಚ್ಕೊಳ್ಳಿ, ತಲೆಗೆ ಘಮಘಮ ಅನ್ನೊ ಎಣ್ಣೆ ತಿಕ್ಕೊಳ್ಳಿ. ಬೊಜ್ಜನ್ನೂ ಕಡಿಮೆ ಮಾಡ್ಕೋಬೇಕು. ಅದಕ್ಕೆ ಇನ್ನು ಮುಂದೆ ಎರಡು ಬೆಲ್ಟ್ ಹಾಕಿ ಬಿಗೀರಿ, ಸ್ವಲ್ಪ ಕಷ್ಟ ಆಗುತ್ತೆ ನಿಜ, ಆದರೆ ಚೆನ್ನಾಗಿ ಕಾಣಿಸ್ತೀರಲ್ಲ. ನಿಮ್ಮ ನರೆತ ಕೂದಲುಗಳನ್ನು ಕಪ್ಪಗೆ ಮಾಡಿಕೊಳ್ಳೋಕೆ ಬೇಕಾದ ಹೇರ್–ಡೈವ್ ನಾನು ತಂದುಕೊಡ್ತೇನೆ. ಐವತ್ತೋ ನೂರೋ ಗಜ಼ಲ್‌ಗಳನ್ನು ಬಾಯಿಪಾಠ ಮಾಡ್ಕೊಳ್ಳಿ, ಸಮಯ ಬಿದ್ದಾಗಲೆಲ್ಲ ಅವನ್ನ ಹೇಳಿ. ನಿಮ್ಮ ಮಾತುಗಳಲ್ಲಿ ಅಮೃತ ತೊಟ್ಟಿಕ್ಕಬೇಕು. ನೋಡಿದವರಿಗೆ ಈತನಿಗೆ ಪ್ರಿಯತಮೆಯ ಚಿಂತೆ ಬಿಟ್ಟರೆ ಇನ್ನೇನೂ ಚಿಂತೆಯೇ ಇಲ್ಲವೇನೋ ಎಂದನ್ನಿಸಬೇಕು. ಯೌವನೋತ್ಸಾಹ ಮತ್ತು ಧೈರ್ಯದಿಂದ ಕೆಲಸ ಮಾಡಬೇಕಾದ ಸಂದರ್ಭಗಳನ್ನು ಹುಡುಕ್ತಾ ಇರಿ. ರಾತ್ರಿ ಹೊತ್ತು ಸುಳ್ಳು–ಸುಳ್ಳೆ, ಕಳ್ಳರು–ಕಳ್ಳರು ಅಂಥ ಗದ್ದಲ ಎಬ್ಬಿಸಿ ಅವರನ್ನು ಹಿಂಬಾಲಿಸಲು ಒಬ್ಬರೇ ಬಂದೂಕ ಹಿಡಿದು ಹೊರಗೆ ಹೋಗಿ. ಅಂದ ಹಾಗೆ ಒಂದು ಮಾತು ನೆನಪಿನಲ್ಲಿಡಿ, ಸಮಯ ಸಂದರ್ಭ ನೋಡಿ ವ್ಯವಹರಿಸಬೇಕು. ಒಂದು ವೇಳೆ ನಿಜವಾದ ಕಳ್ಳನೇ ಬಂದ ಅಂತ ಇಟ್ಕೊಳ್ಳಿ. ಆಗ ಈ ರೀತಿ ನೀವು ಓಡಿಹೋದರೆ, ಆಗ ಅವನನ್ನು ಎದುರಿಸಲಾಗದೆ ನೀವು ಇಂಗು ತಿಂದ ಮಂಗರಾಗ್ತೀರಿ. ಅಂಥಾ ಸಂದರ್ಭದಲ್ಲಿ ಬುದ್ಧಿವಂತಿಕೆ ಅಂದರೆ ಸುಮ್ಮನಿದ್ದು ಬಿಡುವುದು, ಏನೂ ಗೊತ್ತೇ ಇಲ್ಲವೇನೋ ಎಂಬಂತೆ. ಕಳ್ಳ ಓಡಿಹೋದಮೇಲೆ ನೀವು ಉತ್ಸಾಹದಿಂದ ಹೊರಗೆ ಬಂದು, ಬಂದೂಕನ್ನು ಕೈಲಿ ಹಿಡಿದುಕೊಂಡು ಎಲ್ಲಿದ್ದಾನೆ ಕಳ್ಳ ? ಎಲ್ಲಿದ್ದಾನೆ ಕಳ್ಳ ? ಎಂದು ಕೂಗುತ್ತ ಬನ್ನಿ. ಹೆಚ್ಚು ಬೇಡ, ಒಂದು ತಿಂಗಳು ನಾನು ಹೇಳಿದಂತೆ ಮಾಡಿ. ಆಮೇಲೂ ಅವಳು ನಿಮ್ಮ ದಾರಿಗೆ ಬರದೇ ಹೋದರೆ ನೀವು ಕೇಳಿದ ದಂಡ ಕೊಡಲಿಕ್ಕೆ ನಾನು ತಯಾರು.'

ಆ ಹೊತ್ತು ಒಬ್ಬ ವ್ಯವಹಾರಕುಶಲವ್ಯಕ್ತಿ ಹೇಗೆ ವ್ಯವಹರಿಸಬೇಕೋ ಹಾಗೆ ವ್ಯವಹರಿಸಿ ತೋತಾರಾಮರು ನಕ್ಕು ಆ ಮಾತುಗಳನ್ನು ಗೇಲಿ ಮಾಡಿದ್ದುಂಟಾದರೂ

ಅವರ ಮಾತುಗಳಲ್ಲಿದ್ದ ಕೆಲವೊಂದು ಅಂಶಗಳು ಇವರ ಮನಸ್ಸಿನಲ್ಲಿ ಉಳಿದುಕೊಂಡು ಬಿಟ್ಟವು ! ಅವುಗಳ ಪ್ರಭಾವವಾಗುವುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಒಮ್ಮೆಗೇ ಪರಿವರ್ತನೆ ಮಾಡಿದರೆ ಜನರಿಗೆ ಕಣ್ಣು ಕುಕ್ಕುವುದೆಂಬ ಉದ್ದೇಶದಿಂದ ರೂಪು–ರಂಗಿನಲ್ಲಿ ಸ್ವಲ್ಪ–ಸ್ವಲ್ಪವೇ ಪರಿವರ್ತನೆ ಮಾಡಲಾರಂಭಿಸಿದರು. ಮೊದಲು ಕ್ರಮ–ಕ್ರಮೇಣ ತಮ್ಮ ತಲೆಕೂದಲುಗಳನ್ನು ಕಪ್ಪು ಮಾಡುವುದರಿಂದ ಶುರುಮಾಡಿದರು ನಂತರ ಮುಖಕ್ಕೆ ಪೌಡರ್, ಸ್ನೋ ಹಚ್ಚಲು ಪ್ರಾರಂಭಿಸಿದರು. ಹೀಗೆ ಮಾಡುತ್ತ ಹೊರಟ ತೋತಾರಾಮರ ರೂಪ ಲಾವಣ್ಯವೇ ಒಂದೆರಡು ತಿಂಗಳಲ್ಲಿ ಬದಲಾಗಿ ಹೋಯಿತು. ಗಜ಼ಲ್‌ಗಳನ್ನು ಬಾಯಿಪಾಠ ಮಾಡಿ ಮಾಡಿ ಹೇಳುವುದು ಕೊಂಚ ಹಾಸ್ಯಾಸ್ಪದವೆನಿಸಿತು ಆದರೆ ಧೈರ್ಯವಂತರಂತೆ ನಾಟಕಮಾಡುವುದರಲ್ಲಿ ಯಾವ ತಪ್ಪೂ ಅವರಿಗೆ ಕಾಣಲಿಲ್ಲ.

ಅವತ್ತಿನಿಂದ ಅವರು ಪ್ರತಿನಿತ್ಯವೂ ತಮ್ಮ ಯೌವನೋತ್ಸಾಹವನ್ನು ಪ್ರದರ್ಶಿಸಲು ಒಂದಲ್ಲ ಒಂದು ಪ್ರಸಂಗವನ್ನು ಸೃಷ್ಟಿಸಿಕೊಳ್ಳಲಾರಂಭಿಸಿದರು. ತನ್ನ ಗಂಡನಿಗೆ ಉನ್ಮಾದದ ರೋಗ ಹತ್ತಿರಬಹುದೆಂದು ನಿರ್ಮಲಾಳಿಗೆ ಸಂದೇಹವಾಗತೊಡಗಿತು ! ಒಂದೆರಡು ರೊಟ್ಟಿ, ಒಂದಿಷ್ಟು ಬೇಳೆಸಾರು ತಿಂದು ಕಾಲ ಕಳೆಯುತ್ತಿದ್ದ ಮನುಷ್ಯ ಹೀಗೆ ಒಮ್ಮೆಗೇ ಯೌವನೋತ್ಸಾಹ ತುಂಬಿ ಬಂದವರಂತೆ ಆಡತೊಡಗಿದರೆ ಇದು ಉನ್ಮಾದ ರೋಗವಲ್ಲದೆ ಮತ್ತೇನು ? ಹೀಗಾದಾಗ ನಿರ್ಮಲಾಗೆ ಆಶ್ಚರ್ಯವಾಗದೆ ಇರುತ್ತದೆಯೇನು ? ಅವರ ಹುಚ್ಚಾಟ ನಿರ್ಮಲಾಳ ಮೇಲೆ ಪ್ರಭಾವ ಬೀರುವುದು ಹಾಗಿರಲಿ, ಅವಳಿಗೆ ಅವರ ಮೇಲೆ ಕನಿಕರವುಂಟಾಗತೊಡಗಿತು. ಕೋಪ ಮತ್ತು ತಿರಸ್ಕಾರದ ಬದಲು ಕರುಣೆ ಮೂಡತೊಡಗಿತು. ತಮ್ಮ ಮನಸ್ಸನ್ನು ಸ್ಥಿಮಿತದಲ್ಲಿಟ್ಟುಕೊಂಡು ವ್ಯವಹರಿಸುವವರ ಬಗೆಗೆ ಕೋಪ ಹಾಗೂ ತಿರಸ್ಕಾರ ಬೆಳೆಸಿಕೊಳ್ಳಬಹುದು. ಆದರೆ ಹುಚ್ಚರು ದಯೆಗೆ ಪಾತ್ರರಾಗುತ್ತಾರೆ. ಅವಳು ಮಾತು ಮಾತಿಗೂ ಅವರನ್ನು ಗೇಲಿ ಮಾಡಲಾರಂಭಿಸಿದಳು. ಚುಡಾಯಿಸತೊಡಗಿದಳು–ಹುಚ್ಚರ ಜೊತೆ ಮಾಡುತ್ತೇವಲ್ಲ ಹಾಗೆ, ಹೀಗೆ ಮಾಡುವಾಗಲೆಲ್ಲ ತಾನು ಮಾಡುತ್ತಿರುವುದು ಅವರಿಗೆ ಅರ್ಥವಾಗದಂತೆ ಎಚ್ಚರ ವಹಿಸುತ್ತಿದ್ದಳು. ನಿರ್ಮಲಾ ಯೋಚಿಸುತ್ತಿದ್ದಳು– ಈ ಬಡಪಾಯಿ ತನ್ನ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಅನುಭವಿಸುತ್ತಿದ್ದಾನೆ. ನಾನು ನನ್ನ ದುಃಖವನ್ನು ಮರೆಯಲಿ ಎಂದು ತಾನೇ ಇಷ್ಟೆಲ್ಲಾ ನಾಟಕವಾಡುತ್ತಿರುವುದು ? ಆದದ್ದಾಯಿತು. ನನ್ನ ಹಣೆಬರಹವಂತೂ ಬದಲಾಗುವುದಿಲ್ಲ. ಈ ಬಡಪಾಯಿಯ ಹೊಟ್ಟೆಯನ್ನೇಕೆ ಉರಿಸಬೇಕು ?

ಒಂದು ದಿನ ರಾತ್ರಿ ಒಂಬತ್ತು ಗಂಟೆಯ ಸಮಯದಲ್ಲಿ ತೋತಾರಾಮ ಏನನ್ನೋ ಸಾಧಿಸಿದವರಂತೆ ಬೀಗುತ್ತ ವಾಯು ವಿಹಾರ ಮುಗಿಸಿ ಬಂದವರೇ ನಿರ್ಮಲಾಳಿಗೆ ಹೇಳಿದರು— 'ಇವತ್ತು ಮೂರು ಜನ ಕಳ್ಳರನ್ನು ಎದುರಿಸಿದೆ ಗೊತ್ತಾ ? ಶಿವಪುರದ ಕಡೆ ಹೋಗಿದ್ದೆ. ಕತ್ತಲಾಗಿತ್ತು. ರೈಲ್ವೆ ಹಳಿಯ ಹತ್ತಿರ ಬಂದಾಗ ಎಲ್ಲಿದ್ದರೋ ಏನೋ ಮೂರು ಜನ ಕಳ್ಳರು ಕತ್ತಿಹಿಡಿದು ನನ್ನ ಮೇಲೆ ನುಗ್ಗಿ ಬಂದರು. ನಂಬಿದರೆ ನಂಬು ಬಿಟ್ಟರೆ ಬಿಡು,

ಆ ಮೂವರೂ ಯಮದೂತರಂತಿದ್ದರು. ನಾನು ಒಂಟಿ. ಈ ಲಾಠಿ ಒಂದೇ ನನ್ನ ಜತೆ ಇದ್ದದ್ದು. ಕತ್ತಿ ಹಿಡಿದು ನಿಂತಿದ್ದ ಆ ಮೂವರನ್ನು ನೋಡಿದ್ದೇ ನೋಡಿದ್ದು. ನನ್ನ ಪ್ರಾಣವೇ ಹಾರಿಹೋಯಿತು. ಇನ್ನೇನು ಸತ್ತೆ, ನನ್ನ ಆಯಸ್ಸು ಇಷ್ಟೆ ಅಂತ ಅಂದುಕೊಂಡೆ. ಆದರೆ ಸಾಯುವುದು ನಿಶ್ಚಿತ ಆದ ಮೇಲೆ ವೀರರಂತೆ ಸಾಯೋಣ, ಹೇಡಿಯಂತೆ ಏಕೆ ಸಾಯಬೇಕು ಅಂತ ಯೋಚಿಸುತ್ತಿರವಷ್ಟರಲ್ಲೇ ಅವರಲ್ಲಿನ ಒಬ್ಬ–'ನಿನ್ನ ಹತ್ತಿರ ಏನಿದೆಯೋ ಅದನ್ನೆಲ್ಲ ತೆಗೆದು ಕೊಟ್‌ಬಿಟ್ಟು ಉಸಿರು ಬಿಡದೆ ಹಾಗೆ ಹೊರಟುಹೋಗು' ಎಂದು ಅಬ್ಬರಿಸಿದ.

ಆಗ ನಾನು ನನ್ನ ಕೈಲಿದ್ದ ಲಾಠಿಯನ್ನು ಮೇಲಕ್ಕೆ ಎತ್ತಿ ಹೇಳಿದೆ– 'ನನ್ನ ಹತ್ತಿರ ಇರುವುದು ಈ ಲಾಠಿಯೊಂದೇ. ಇದರ ಬೆಲೆ ಎಷ್ಟೆಂದರೆ ಒಬ್ಬನ ತಲೆ !' ನನ್ನ ಬಾಯಿಂದ ಇಷ್ಟು ಮಾತುಗಳು ಹೊರಡುವುದೇ ತಡ, ಆ ಮೂವರು ತಮ್ಮ ಕೈಗಳಲ್ಲಿದ್ದ ಕತ್ತಿಗಳನ್ನು ಎತ್ತುತ್ತ ನನ್ನ ಮೇಲೆ ಬಿದ್ದರು. ಅವರ ಕತ್ತಿಗಳ ಏಟುಗಳನ್ನು ನಾನು ಈ ಲಾಠಿಯಿಂದ ತಡೆದೆ. ಆ ಮೂರು ಜನ ಮುಖ–ಮುಸುಡಿ ನೋಡದ ಹಾಗೆ ಕತ್ತಿಗಳನ್ನು ಬೀಸುತ್ತಲೇ ಇದ್ದರು. ನಾನು ಸುಮ್ಮನಿರ್ತೀನಾ ? ಅವರ ಎಲ್ಲ ಏಟುಗಳನ್ನು ಈ ಲಾಠಿಯಿಂದ ತಡೆದುಕೊಂಡೆ. ಒಂದು ಹತ್ತು ನಿಮಿಷದವರೆಗೆ ಅವರು ತಮ್ಮ ಅಟಾಟೋಪಗಳನ್ನು ತೋರಿಸಿದರೂ ನನ್ನ ಒಂದು ಕೂದಲನ್ನೂ ಅಲ್ಲಾಡಿಸಲು ಆಗಲಿಲ್ಲ. ನನ್ನ ಕೈಯಲ್ಲೂ ಒಂದು ಕತ್ತಿ ಇದ್ದಿದ್ದರೆ ಅವರಿಗೆ ಗ್ರಹಚಾರ ಬಿಡಿಸುತ್ತಿದ್ದೆ. ಸಂಜೆ ನಡೆದುದನ್ನು ಹೇಳಲಿಕ್ಕೆ ನನ್ನ ಹತ್ತಿರ ಶಬ್ದಗಳೇ ಇಲ್ಲ, ನನ್ನ ಕೈಚಳಕ ಅಷ್ಟು ಚೆನ್ನಾಗಿತ್ತು. ಈಗ ನೆನಸಿಕೊಂಡರೆ ಆಶ್ಚರ್ಯವಾಗುತ್ತೆ ನನ್ನ ಹತ್ತಿರ ತಮ್ಮ ಬೇಳೆಬೇಯಲ್ಲ ಅಂತ ಅವರಿಗೆ ಅನ್ನಿಸುತ್ತಿದ್ದಂತೆಯೇ ತಮ್ಮ ಕತ್ತಿಗಳನ್ನು ಒರೆಗೆ ತುರುಕಿ ಕಂಬಿ ಕೀಳುವಾಗ ಏನು ಹೇಳಿದರು ಗೊತ್ತಾ ? 'ಸ್ವಾಮಿ, ನಿಮ್ಮ ಹಾಗೆ ನಮ್ಮೊಂದಿಗೆ ಕಾದಾಡಿದವರನ್ನು ನಾವು ಇದುವರೆಗೆ ನೋಡಲಿಲ್ಲ. ಇನ್ನೂರು–ಮುನ್ನೂರು ಜನರನ್ನು ನಾವು ಮೂರೇ ಜನ ಎದುರಿಸಿದ್ದೇವೆ. ಆದರೆ ನೀವು ಇವತ್ತು ನಮ್ಮನ್ನು ಸೋಲಿಸಿಬಿಟ್ರಿ. ಇವತ್ತು ನಾವು ನಿಮಗೆ ಶರಣಾಗಿದ್ದೇವೆ.' ಇಷ್ಟು ಹೇಳಿ ಆ ಮೂರು ಜನ ಕಂಬಿ ಕಿತ್ತರು.

ನಿರ್ಮಲಾ ಗಂಭೀರ ಭಾವದಲ್ಲೇ ಮುಗುಳ್ನಗುತ್ತ ಕೇಳಿದಳು– 'ಹಾಗಾದರೆ ಈ ಲಾಠಿ ಮೇಲೆ ಕತ್ತಿಗಳ ಏಟಿನ ಗುರುತುಗಳು ಬಿದ್ದಿರಬೇಕಲ್ಲವೇ' ?

ತೋತಾರಾಮ ಈ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. ಆದರೆ ಪ್ರಶ್ನೆಗೆ ಉತ್ತರಿಸಲೇ ಬೇಕಿತ್ತು. ಹೇಳಿದರು– 'ಅವರು ಕತ್ತಿಗಳನ್ನು ಬೀಸಿದಾಗ ನಾನು ಚಾಕಚಕ್ಯತೆಯಿಂದ ತಪ್ಪಿಸಿಕೊಳ್ಳುತ್ತಿದ್ದೆ. ಮೂರು–ನಾಲ್ಕು ಏಟುಗಳು ಈ ಲಾಠಿ ಮೇಲೆ ಬಿದ್ದವಾದರೂ ಅವು ಜಾರೇಟುಗಳಾಗಿದ್ದವು. ಹೀಗಾಗಿ ಈ ಲಾಠಿ ಮೇಲೆ ಯಾವ ಗುರುತೂ ಇಲ್ಲ.'

ಅವರ ಬಾಯಿಂದ ಇಷ್ಟು ಮಾತುಗಳು ಇನ್ನೂ ಮುಗಿದಿರಲಿಲ್ಲ. ಅಷ್ಟರಲ್ಲಿ ಇದ್ದಕ್ಕಿದ್ದಂತೆಯೇ ರುಕ್ಮಿಣಿದೇವಿ ಏದುಸಿರು ಬಿಡುತ್ತ ಓಡಿ ಬಂದು ಒಂದೇ ಉಸಿರಿನಲ್ಲಿ

ಹೇಳಿದಳು – 'ತೋತಾ, ತೋತಾ, ಇದ್ದಿಯೋ ಇಲ್ಲವೋ ? ನನ್ನ ರೂಮಿಗೆ ಒಂದು ಹಾವು ಬಂದಿದೆ ಕಣೋ ! ನನ್ನ ಮಂಚದ ಕೆಳಗೆ ಮಲಗಿದೆ, ಎರಡು ಮಾರಿದೆ. ಹೆಡೆ ಎತ್ತಿ ಬುಸುಗುಟ್ಟುತ್ತಿದೆ. ನನಗೆ ಹೆದರಿಕೆಯಾಗ್ತಿದೆ. ಬೇಗ ಒಂದು ದೊಣ್ಣೆ ತಗೊಂಡು ಬಾರೋ'.

ತೋತಾರಾಮ ತಬ್ಬಿಬ್ಬಾದರು. ಮುಖ ಕಪ್ಪಿಟ್ಟಿತು. ಬಾಯಿಂದ ಮಾತುಗಳೇ ಹೊರಡದಾದವು. ಆದರೆ ಒಳಗಿನದನ್ನು ಹೊರಗೆ ತೋರಿಸಿಕೊಳ್ಳದೆ, 'ಹಾವು ಇಲ್ಲಿಗೆ ಹೇಗೆ ಬಂತು ? ನೀನೆಲ್ಲೋ ಮೋಸ ಹೋಗಿದ್ದೀಯಾ. ಹಗ್ಗವನ್ನು ಹಾವು ಅಂತ ತಿಳ್ಕೊಂಡಿದ್ದೀಯಾ ಅಂತ ಕಾಣುತ್ತೆ ' ಅಂದರು.

ರುಕ್ಮಿಣಿ : 'ಅಯ್ಯೋ ದೇವರೆ ! ನಾನೇ ಕಣ್ಣಿಂದ ನೋಡಿದ್ದೀನಿ ಕಣೋ. ಬಾ ನೀನು, ಬಂದು ನೋಡು. ಛೀ, ಛೀ, ಗಂಡಸಾಗಿ ಹೆದರ್ಕೋತೀಯಾ ?' ತೋತಾರಾಮರು ಮನೆಯ ಒಳಗಡೆಯಿಂದ ಹೊರಗೆ ಬಂದರು. ಆದರೆ ಅಂಗಳ ದಾಟಿ ಮುಂದಕ್ಕೆ ಹೆಜ್ಜೆ ಇಡಲಿಲ್ಲ. ಕಾಲುಗಳು ಹಿಂದಕ್ಕೇ ಎಳೆಯುತ್ತಿದ್ದವು. ಎದೆ ಡವಡವ ಅನ್ನಲಾರಂಭಿಸಿತು. ಹಾವಿಗೆ ತುಂಬಾ ಕೋಪ. ಅಕಸ್ಮಾತ್ ಕಚ್ಚಿತು ಅಂದರೆ ಪ್ರಾಣವೇ ಹೋಗಿಬಿಡುತ್ತೆ ಎಂದೆಲ್ಲಾ ಯೋಚಿಸಿ ಹೇಳಿದರು – 'ನಾನೇನೂ ಹೆದರಿಕೊಳ್ತಾ ಇಲ್ಲ. ಹಾವ್ ತಾನೇ ಬಂದಿರೋದು. ಹುಲಿ ಅಲ್ಲವಲ್ಲ. ಹಾವನ್ನು ಲಾಠಿಯಿಂದ ಹೊಡೆಯಲು ಸಾಧ್ಯವಿಲ್ಲ. ಭರ್ಜಿ ಬೇಕು ಯಾರ ಮನೆಯಲ್ಲಾದರೂ ಭರ್ಜಿ ಇದ್ದರೆ ಹೇಳಿ ಕಳಿಸಿ ತರಿಸು'.

ಇಷ್ಟು ಹೇಳಿ ತೋತಾರಾಮ ಹುಶಾರಾಗಿ ಹೊರಗಡೆ ಬಂದರು. ಮಂಸಾರಾಮ ಊಟ ಮಾಡುತ್ತಿದ್ದ. ಅತ್ತ ತೋತಾರಾಮ ಹೊರಗಡೆ ಹೋದ ಮೇಲೆ ಇತ್ತ ಅವನು ಊಟವನ್ನು ಅರ್ಧಕ್ಕೆ ನಿಲ್ಲಿಸಿ, ತನ್ನ ಹಾಕಿ ದಂಡವನ್ನು ಕೈಲಿ ಹಿಡಿದುಕೊಂಡು ರೂಮಿಗೆ ಬಂದವನೇ ಮಂಚವನ್ನು ಕೈಯಿಂದ ಒಂದು ಮಗ್ಗುಲಿಗೆ ಎಳೆದ. ಹಾವು ಕಟ್ಟುಮಸ್ತಾಗಿತ್ತು. ಅದು ಅಲ್ಲಿಂದ ಓಡುವ ಬದಲು ಹೆಡೆಎತ್ತಿ ನಿಂತಿತು. ಮಂಸಾರಾಮ ತಕ್ಷಣ ಮಂಚದ ಮೇಲಿದ್ದ ಹೊದಿಕೆಯನ್ನು ಎತ್ತಿ ಹಾವಿನ ಮೇಲೆ ಎಸೆದು ರಪರಪ ಎಂದು ಮೂರು ನಾಲ್ಕು ಏಟನ್ನು ತನ್ನ ಹಾಕಿ ದಂಡದಿಂದ ರಭಸವಾಗಿ ಹೊಡೆದ. ಹಾವು ಹೊದಿಸಿದ್ದ ಹೊದಿಕೆಯೊಳಗಡೆ ವಿಲಿ ವಿಲಿ ಒದ್ದಾಡಿ ಸುಮ್ಮನಾಯಿತು. ಆಗ ಅದನ್ನು ಲಾಠಿಯ ಮೇಲೆ ಹಾಕಿಕೊಂಡು ಹೊರಗಡೆ ತಂದ. ತೋತಾರಾಮರು ಹೊರಗಡೆಯಿಂದ ಒಂದಷ್ಟು ಜನರನ್ನು ಜತೆಯಲ್ಲಿ ಕರೆದುಕೊಂಡು ಬರುವುದು ಕಾಣಿಸಿತು. ಮಂಸಾರಾಮ ಹಾಗೆ ಹಾವನ್ನು ಲಾಠಿದಂಡಕ್ಕೆ ನೇತುಹಾಕಿಕೊಂಡು ಬರುವುದನ್ನು ನೋಡಿ ತೋತಾರಾಮರಿಗೆ ಜೀವ ಹೋದಂತಾಗಿ ಕಿಟ್ಟನೆ ಕಿರುಚಿದರು. ಕೂಡಲೇ ಸಾವರಿಸಿಕೊಂಡು ಹೇಳಿದರು – 'ನಾನು ಬರುತ್ತಿದ್ದೆ. ಅಷ್ಟು ಆತುರ ನಿನಗೆ. ಕೊಡು, ಅದನ್ನು ಇವರ್‍ಯಾರಾದರೂ ದೂರ ಬಿಸಾಡಿಬರ್‍ತಾರೆ'

ಇಷ್ಟು ಹೇಳಿ ಧೈರ್ಯವಂತರಂತೆ ರುಕ್ಮಿಣಿಯ ರೂಮಿನ ಬಾಗಿಲ ಬಳಿ ಹೋಗಿ,

ಒಳಗಡೆ ಸುತ್ತಮುತ್ತ ನೋಡಿ ಮೀಸೆ ತಿರುವುತ್ತ ನಿರ್ಮಲಾಳ ಬಳಿ ಬಂದು 'ನಾನು ಬರುವುದರೊಳಗಾಗಿ ಮಂಸಾರಾಮ ಹಾವನ್ನು ಹೊಡೆದುಹಾಕಿದ. ಹುಡುಗನಿಗೆ ತಿಳುವಳಿಕೆ ಇಲ್ಲ , ಲಾಠಿ ತಗೊಂಡು ಅದನ್ನು ಹೊಡೆಯಲು ಹೋಗಿದ್ದಾನೆ. ಹಾವನ್ನು ಯಾವತ್ತು ಭರ್ಜಿಯಿಂದ ಹೊಡೆಯಬೇಕು. ನಮ್ಮ ಹುಡುಗರಲ್ಲಿ ಇರುವ ದೋಷ ಅಂದರೆ ಇದೇನೆ. ಹಿಂದೆ–ಮುಂದೆ ಯೋಚಿಸೋದಿಲ್ಲ. ನಾನು ಇಂಥ ಎಷ್ಟು ಹಾವುಗಳನ್ನು ಹೊಡೆದು ಸಾಯಿಸಿಲ್ಲ ? ಹಾವುಗಳಿಗೆ ಹಾಲು ಕೊಟ್ಟು ಕೊಟ್ಟು ಅವನ್ನು ಸಾಯಿಸಿದ್ದೇನೆ. ಎಷ್ಟೋ ಹಾವುಗಳನ್ನು ನಾನು ಕೈಯಲ್ಲಿ ಹಿಡಿದುಕೊಂಡು ಹೊಸಕಿ ಹಾಕಿದ್ದೇನೆ' ಎಂದು ಹೇಳಿದರು.

ರುಕ್ಮಿಣಿ ಹೇಳಿದಳು : 'ಹೋಗಪ್ಪಾ ಹೋಗು. ನಿನ್ನ ಗಂಡಸ್ತನನಾ ನೋಡಿದೆವಲ್ಲ.'

ತೋತಾರಾಮ ಉಡಾಫೆಯಿಂದ ನುಡಿದರು – 'ಆಯಿತು ಹೋಗಮ್ಮ , ನಾನು ಅಂಜುಬುರುಕ. ನಿನ್ನಿಂದ ನಾನೇನು ಇನಾಮು ಕೇಳುತ್ತಿಲ್ಲವಲ್ಲ ? ಹೋಗಿ ಅಡಿಗೆಯವನಿಗೆ ಊಟ ಬಡಿಸಲಿಕ್ಕೆ ಹೇಳು.'

ತೋತಾರಾಮ ಊಟಕ್ಕೆ ಹೋದರು. ಆದರೆ ನಿರ್ಮಲಾ ಬಾಗಿಲ ಹೊಸ್ತಿಲ ಮೇಲೆ ನಿಂತೇ ಯೋಚಿಸುತ್ತಿದ್ದಳು. 'ಹೇ ಭಗವಂತ ! ಇವರಿಗೇನು ನಿಜವಾಗಿಯೂ ಯಾವುದಾದರೂ ಭೀಷಣ ಖಾಯಿಲೆಯಾಗಿದೆಯಾ ! ನೀನು ನನಗೆ ಇನ್ನೂ ದಾರುಣ ಸ್ಥಿತಿಯನ್ನು ಕೊಡಬೇಕೆಂದಿದ್ದೀಯೇನು ? ನಾನು ಇವರ ಸೇವೆ ಮಾಡಬಲ್ಲೆ , ಗೌರವಿಸಬಲ್ಲೆ ಇಡೀ ನನ್ನ ಬದುಕನ್ನು ಇವರ ಚರಣಾರವಿಂದಗಳಲ್ಲಿ ಅರ್ಪಿಸಬಲ್ಲೆ ಆದರೆ ನನ್ನಿಂದಾಗದ ಆ ಕೆಲಸವನ್ನು ಮಾತ್ರ ಮಾಡಲು ಆಗುವುದಿಲ್ಲ. ನಮ್ಮಿಬ್ಬರ ನಡುವೆ ಇರುವ ವಯಸ್ಸಿನ ಈ ಅಂತರವನ್ನು ಅಳಿಸಿಹಾಕುವುದು ನನ್ನಿಂದ ಸಾಧ್ಯವಿಲ್ಲ. ಇವರು ನನ್ನಿಂದ ಏನು ಬಯಸುತ್ತಿದ್ದಾರೆ ಎಂಬುದು ನನಗೀಗ ಅರ್ಥವಾಗಿದೆ ! ಓಹ್ ! ಮೊದಲು ನನಗಿದು ಅರ್ಥವಾಗಲಿಲ್ಲ. ನನಗಾಗಿ ಇವರು ಅದೆಷ್ಟು ತಪಸ್ಸು ಮಾಡಿದರು ! ಅದೆಷ್ಟು ನಾಟಕವಾಡಿದರು !'

# ಏಳು

ಆ ದಿನದಿಂದ ನಿರ್ಮಲಾಳ ಆಚಾರ–ವಿಚಾರ, ಜೀವನ ವಿಧಾನದಲ್ಲಿ ಪರಿವರ್ತನೆಯಾಗತೊಡಗಿತು. ತನ್ನ ಕರ್ತವ್ಯಕ್ಕಾಗಿ ತನ್ನನ್ನು ಅರ್ಪಿಸಿಕೊಳ್ಳಲು ಆಕೆ ನಿಶ್ಚಯಿಸಿದಳು. ಇದುವರೆಗೆ ನಿರಾಸೆಯ ದುಃಖದಿಂದಾಗಿ ಆಕೆ ತನ್ನ ಕರ್ತವ್ಯದ ಕಡೆ ಗಮನವನ್ನೇ ಕೊಟ್ಟಿರಲಿಲ್ಲ. ಅವಳ ಹೃದಯದಲ್ಲಿ ವಿಷಾದ ಜ್ವಾಲೆ ದಹದಹಿಸುತ್ತಿತ್ತು. ಹಾಗೂ ಅದರಿಂದುಂಟಾಗುತ್ತಿದ್ದ ಅಸಹನೀಯ ವೇದನೆಯಿಂದಾಗಿ ಆಕೆ ತನ್ನ ಮೈ ಮೇಲಿನ ಎಚ್ಚರವನ್ನೇ ಮರೆತಂತಾಗಿದ್ದಳು.

ಈಗ ಈ ವೇದನೆ ನಿಧಾನವಾಗಿ ಶಾಂತವಾಗತೊಡಗಿತ್ತು. ಬದುಕಿನ ಸಂತೋಷ ಎಂಬುದು ನನ್ನ ಪಾಲಿಗೆ ಇಲ್ಲವೆಂದ ಮೇಲೆ ಆ ಕನಸಿನಲ್ಲಿ ಈ ಬದುಕನ್ನು ವೃಥಾ ಏಕೆ ಹಾಳು ಮಾಡಿಕೊಳ್ಳಬೇಕು ಎಂದು ಸಮಾಧಾನ ಹೇಳಿಕೊಳ್ಳತೊಡಗಿದಳು. ಪ್ರಪಂಚದಲ್ಲಿ ಹುಟ್ಟಿರುವ ಎಲ್ಲರೂ ಸುಖದ ಸುಪ್ಪತ್ತಿಗೆಯ ಮೇಲೆ ಮಲಗಿಕೊಂಡಿಲ್ಲ. ನಾನೂ ಈ ಗುಂಪಿಗೇ ಸೇರಿರುವ ಅಭಾಗಿನಿ, ದುಃಖದ ಭಾರವನ್ನು ಹೊರಲೆಂದೇ ಆ ಪರಮಾತ್ಮ ನನ್ನನ್ನು ಸಹ ಸೃಷ್ಟಿಸಿರಬಹುದು. ಈ ಹೊರೆಯನ್ನು ತಲೆಯಿಂದ ನಾನು ಇಳಿಸಲಾರೆ. ಬಿಸಾಡೋಣವೇ ಅಂದರೆ ಅದನ್ನು ಮಾಡಲು ಸಹ ನನ್ನಿಂದಾಗುತ್ತಿಲ್ಲ. ಈ ಹೊ ಭಾರದಿಂದ ಕಣ್ಣುಗಳು ಕತ್ತಲೆಯಿಂದಾವರಿಸಿಕೊಳ್ಳಲಿ, ಕತ್ತು ಮುರಿದು ಹೋಗಲಿ, ಭಾರ ಸಹಿಸಲಾರದೆ ಕಾಲುಗಳು ಮುರಿದು ಹೋಗಲಿ, ಈ ದುಃಖದ ಭಾರವಾದ ಗಂಟನ್ನು ನಾನು ಹೊರಲೇಬೇಕು. ಆಜೀವ ಶಿಕ್ಷೆಗೊಳಗಾಗಿರುವ ಕೈದಿ ಎಷ್ಟು ದಿನ ಎಂದು ಅಳಬಲ್ಲ ? ಒಂದು ವೇಳೆ ಅತ್ತರೂ ಅದನ್ನು ಕೇಳುವವರಾರು ? ಅವನನ್ನು ಕಂಡು ಮರುಗುವವರು ಯಾರು ? ಅಳುತ್ತಲೇ ಕೂಡುವುದರಿಂದ ಕೆಲಸ ಕಾರ್ಯಗಳಲ್ಲಿ ಅಡಚಣೆಯಾಗುವುದು. ಇದರಿಂದ ಇನ್ನಷ್ಟು ಕಷ್ಟಗಳನ್ನೇ ಸಹಿಸಬೇಕಾಗುತ್ತದೆ.

ಮಾರನೆಯ ದಿನ ವಕೀಲರು ಕಛೇರಿಯಿಂದ ಮನೆಗೆ ಬಂದಾಗ ನೋಡಿದ್ದು– ನಿರ್ಮಲಾ ಮಂದಹಾಸ ಬೀರುತ್ತಾ ತನ್ನ ರೂಮಿನ ಮುಂದೆ ನಿಂತಿದ್ದಾಳೆ. ಅವಳ ಅನುಪಮ ಸೌಂದರ್ಯವನ್ನು ನೋಡಿ ವಕೀಲರ ಕಣ್ಣುಗಳು ತೃಪ್ತಗೊಂಡವು. ಎಷ್ಟೋ ದಿನಗಳ ನಂತರ ಈ ಕಮಲ ಅರಳಿ ನಗುತ್ತಿರುವುದನ್ನು ನೋಡಿದರು. ರೂಮಿನಲ್ಲಿನ ಒಂದು ಗೋಡೆಗೆ ಆಳೆತ್ತರದ ಒಂದು ನಿಲುವುಗನ್ನಡಿಯನ್ನು ನೇತು ಹಾಕಿತ್ತು. ಆದರೆ ಪರದೆ ಹಾಕಿ ಮುಚ್ಚಿದ್ದಳು. ಇವತ್ತು ಹೆಜ್ಜೆ ಇಡುತ್ತಿದ್ದಂತೆಯೇ ಅವರ ಗಮನ ಕನ್ನಡಿಯ ಕಡೆ ಹೊರಳಿತು. ಅವರಿಗೆ ತಮ್ಮ ರೂಪ ಸ್ಪಷ್ಟವಾಗಿ ಕಾಣಿಸಿತು. ಅವರ ಹೃದಯದ ಮೇಲೆ ಏನೋ ಚುಚ್ಚಿದಂತಾಯಿತು. ದಿನವಿಡೀ ಹೊರಗೆ ದುಡಿದು ಬಂದದ್ದರಿಂದ ಮುಖದ ಕಾಂತಿ ಕುಂದಿತ್ತು. ನಾನಾ ಬಗೆಯ ಪೌಷ್ಟಿಕ ತಿಂಡಿ ತಿನಿಸುಗಳನ್ನು ತಿಂದಾಗ್ಯೂ ಅವರ ಕೆನ್ನೆಯ ಮೇಲಿನ ಸುಕ್ಕುಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಬೊಜ್ಜನ್ನು ಮುಚ್ಚಲು ಎರಡೆರಡು ಬೆಲ್ಟ್‌ಗಳನ್ನು ಬಿಗಿದಿದ್ದರೂ ಬೊಜ್ಜು

ಹೊರಗೆ ಇಣುಕುತ್ತಿತ್ತು. ಆ ಕನ್ನಡಿಯ ಮುಂದೆ ಬೇರೆ ಕಡೆ ನೋಡುತ್ತ ನಿರ್ಮಲಾ ಅಲ್ಲೇ ನಿಂತಿದ್ದಳು. ಅವರಿಬ್ಬರ ರೂಪ-ಸೌಂದರ್ಯ ಆಕೃತಿಗಳಲ್ಲಿ ಅದೆಷ್ಟು ಅಂತರ ಎದ್ದು ಕಾಣುತ್ತಿತ್ತು! ಒಂದು ರತ್ನಜಟಿತ ವಿಶಾಲಭವನ! ಇನ್ನೊಂದು ಪಾಳು ಬಿದ್ದ ಭಗ್ನಾವಶೇಷ! ಅವರಿಂದ ಕನ್ನಡಿಯುತ್ತ ನೋಡಲಾಗಲಿಲ್ಲ. ತಮ್ಮ ದುರವಸ್ಥೆಯನ್ನು ಕನ್ನಡಿಯಲ್ಲಿ ನೋಡಿ ಅವರಿಗೆ ಅಸಹ್ಯವೆನಿಸಿತು. ಅವರು ಕನ್ನಡಿಯ ಮುಂದೆ ನಿಲ್ಲಲಾರದೆ ದೂರ ಸರಿದರು. ತಮ್ಮ ರೂಪವನ್ನು ಕಂಡು ಅವರಿಗೇ ಛಿ! ಛಿ! ಅನ್ನಿಸಿತು. ಅಂದ ಮೇಲೆ ಈ ರೂಪವತಿ ಕಾಮಿನಿ ನನ್ನನ್ನು ದೂರೀಕರಿಸುವುದರಲ್ಲಿ ಆಶ್ಚರ್ಯವೇನಿಲ್ಲ. ಈಗ ನಿರ್ಮಲಾಳ ಕಡೆ ನೋಡುವಷ್ಟು ಧೈರ್ಯವೂ ಅವರಿಗೆ ಬರಲಿಲ್ಲ. ಆಕೆಯ ಮನ ಮೋಹಕ ಸೌಂದರ್ಯ ಅವರ ಹೃದಯವನ್ನು ಚುಚ್ಚುವ ಶೂಲವಾಗಿ ಕಂಡಿತು.

ನಿರ್ಮಲಾ ನುಡಿದಳು– 'ಇವತ್ತು ಏಕೆ ಇಷ್ಟು ಹೊತ್ತು ಮಾಡಿದಿರಿ ? ದಿನವಿಡೀ ನಿಮ್ಮ ಹಾದಿ ನೋಡಿ–ನೋಡಿ ಕಣ್ಣುಗಳು ತೂತು ಬಿದ್ದು ಹೋದವು.'

ತೋತಾರಾಮ ಕಿಟಕಿಯ ಕಡೆ ನೋಡುತ್ತ ಉತ್ತರಿಸಿದರು–'ಮೊಕದ್ದಮೆಗಳು ಎಷ್ಟು ಇವೆಯೆಂದರೆ ಉಸಿರಾಡುವುದಕ್ಕೂ ಪುರುಸೊತ್ತು ಇರುವುದಿಲ್ಲ. ಇನ್ನೂ ಒಂದು ಮೊಕದ್ದಮೆ ಇತ್ತು. ಆದರೆ ನಾನು ತಲೆ ನೋವಿನ ನೆಪ ಮಾಡಿಕೊಂಡು ಓಡಿ ಬಂದೆ.'

ನಿರ್ಮಲಾ : 'ಇಷ್ಟೊಂದು ಮೊಕದ್ದಮೆಗಳನ್ನು ಏಕಾದರೂ ತಗೊಳ್ತೀರಿ ? ಆರಾಮವಾಗಿ ಎಷ್ಟು ಕೆಲಸ ಮಾಡಿಕೊಂಡು ಹೋಗಲು ಸಾಧ್ಯವೋ ಅಷ್ಟು ಕೆಲಸ ಮಾತ್ರ ಒಪ್ಪಿಕೊಳ್ಳಿ. ಆರೋಗ್ಯದ ಕಡೆ ಗಮನ ಕೊಡದೆ ಏಕಿಷ್ಟು ಕೆಲಸ ಮಾಡಬೇಕು ? ನಾಳೆಯಿಂದ ಇಷ್ಟೆಲ್ಲಾ ಮೊಕದ್ದಮೆಗಳನ್ನು ತೆಗೆದುಕೊಳ್ಳಬೇಡಿ, ನನಗೆ ದುಡ್ಡಿನ ಆಸೆಯೇನೂ ಇಲ್ಲ. ನೀವು ಸುಖವಾಗಿದ್ದರೆ ಸಾಕು, ಎಷ್ಟೋ ಹಣ ಆದಾಗ ಅದೇ ಬರುತ್ತೆ'

ತೋತಾರಾಮ : 'ಬರುತ್ತಿರೋ ಲಕ್ಷ್ಮೀನಾ ಹೀಗೆ ಹೊರಗೆ ಕಳಿಸಬೇಡ ಮಹಾರಾಯತಿ.'

ನಿರ್ಮಲಾ : 'ಈ ಲಕ್ಷ್ಮಿ ರಕ್ತ ಮತ್ತು ಮಾಂಸದ ಕಾಣಿಕೆ ತೆಗೆದುಕೊಂಡು ಬಂದರೆ ಅವಳು ಬರುವುದಕ್ಕಿಂತ ಬರದೇ ಇರುವುದೇ ವಾಸಿ, ನನಗೆ ಧನದ ದಾಹವಿಲ್ಲ.'

ಅದೇ ಹೊತ್ತಿಗೆ ಸರಿಯಾಗಿ ಮಂಸಾರಾಮ ಸಹ ಸ್ಕೂಲಿನಿಂದ ಬಂದ. ಬಿಸಿಲಲ್ಲಿ ಬಂದದ್ದರಿಂದ ಅವನ ಮುಖದ ಮೇಲೆ ಬೆವರಿನ ಹನಿಗಳು ಮೂಡಿ ಬಂದಿದ್ದವು. ಗೌರವರ್ಣದ ಮುಖದ ತುಂಬಾ ಕೆಂಪು ರಕ್ತ ಚಿಮ್ಮಿದಂತೆ ಕಾಣುತ್ತಿದ್ದವು. ಕಣ್ಣುಗಳು ದೀಪ ಉರಿದಂತೆ ಕಾಣುತ್ತಿದ್ದವು. ಬಂದವನೇ, 'ಅಮ್ಮಾಜಿ, ಏನಾದರೂ ತಿನ್ನಲಿಕ್ಕೆ ತನ್ನಿ ಮತ್ತೆ ಆಟ ಆಡಲಿಕ್ಕೆ ಹೋಗಬೇಕು ನಾನು' ಎಂದ.

ನಿರ್ಮಲಾ ಒಳಗೆ ಹೋಗಿ ಲೋಟದಲ್ಲಿ ನೀರು ಹಾಗೂ ಒಂದು ತಟ್ಟೆಯಲ್ಲಿ ತಿಂಡಿಯನ್ನಿಟ್ಟುಕೊಂಡು ಬಂದು ಮಂಸಾರಾಮನಿಗೆ ಕೊಟ್ಟಳು. ಮಂಸಾರಾಮ ತಿಂಡಿ ತಿಂದು ಹೊರಡುತ್ತಿರುವಾಗ ನಿರ್ಮಲಾ 'ಎಷ್ಟು ಹೊತ್ತಿಗೆ ಬರ್ತೀಯಾ ?' ಎಂದು ಕೇಳಿದಳು.

ಮಂಸಾರಾಮ : 'ಹೇಳಲಿಕ್ಕಾಗಲ್ಲ, ಕಾನ್ವೆಂಟ್ ಹುಡುಗರ ಜೊತೆ ಹಾಕಿ ಮ್ಯಾಚ್ ಇದೆ. ಫೀಲ್ಡ್ ಇಲ್ಲಿಂದ ದೂರದಲ್ಲಿದೆ.'

ನಿರ್ಮಲಾ : 'ಬೇಗ ಬಾರಪ್ಪ, ಊಟ ತಣ್ಣಗಾದರೆ ನೀನು ನನಗೆ ಹಸಿವಿಲ್ಲ ಅಂದುಬಿಡ್ತೀಯಾ.'

ಮಂಸಾರಾಮ ಸರಳ ಸಹಜ ಸ್ನೇಹಭಾವದಿಂದ ನಿರ್ಮಲಾಳತ್ತ ನೋಡಿ ಹೇಳಿದ– 'ನಾನು ಬರುವುದು ಹೊತ್ತಾದರೆ ಅಲ್ಲೇ ಊಟ ಮಾಡಿದೆ ಅಂತ ತಿಳ್ಕೊಳಮ್ಮಾ. ನನಗಾಗಿ ಕಾಯುವುದು ಬೇಡ.'

ಅವನು ಹೊರಟು ಹೋದ ಮೇಲೆ ನಿರ್ಮಲಾ ಹೇಳಿದಳು– 'ಮೊದಲು ಇವನು ಮನೆಗೆ ಬರುತ್ತಲೇ ಇರಲಿಲ್ಲ. ನ್ನ ಜೊತೆ ಮಾತನಾಡೋಕೆ ನಾಚಿಕೆ ಪಟ್ಕೊಳ್ತಿದ್ದ. ಏನಾದರೂ ಬೇಕಿದ್ದರೆ ಯಾರಿಂದಲಾದರೂ ಹೇಳಿ ಕಳಿಸಿ ತರಿಸಿಕೊಳ್ತಿದ್ದ. 'ಹೀಗೇಕೆ ಮಾಡ್ತೀಯಾ ? ಏನು ಬೇಕೋ ಅದನು ನನ್ನ ಹತ್ತಿರ ಬಂದು ಕೇಳಿ ತೆಗೆದುಕೋ' ಅಂತ ಹೇಳಿದ ಮೇಲೆ ಬರ್‍ತಾ ಇದ್ದಾನೆ'

ತೋತಾರಾಮ ಕೊಂಚ ಕೋಪದಿಂದಲೇ ಹೇಳಿದರು–'ತಿನ್ನೋದು ಉಣ್ಣೋದು ಕೇಳುವುದಕ್ಕೆ ಅವನು ನಿನ್ನ ಹತ್ತಿರ ಏಕೆ ಬರ್‍ತಾನೆ ? ರುಕ್ಮಿಣಿ ಹತ್ತಿರ ಏಕೆ ಹೋಗಬಾರದು ?'

ನಿರ್ಮಲಾ ಮೇಲಿನ ಮಾತುಗಳನ್ನು ಗಂಡನಿಂದ ಪ್ರಶಂಸೆ ಪಡೆದುಕೊಳ್ಳುವ ಆಸೆಯಿಂದ ಹೇಳಿದ್ದಳು. 'ನಾನು ನಿಮ್ಮ ಮಕ್ಕಳನ್ನು ಎಷ್ಟು ಪ್ರೀತಿಸುತ್ತಿದ್ದೇನೆ ನೋಡಿ' ಎಂದು ಅವಳು ತೋರಿಸಬಯಸುತ್ತಿದ್ದಳು. ಅವಳ ಈ ಪ್ರೀತಿ ಕೃತ್ರಿಮವಾಗಿರಲಿಲ್ಲ. ಮಕ್ಕಳ ಬಗ್ಗೆ ಅವಳ ಹೃದಯದಲ್ಲಿ ನಿಜಕ್ಕೂ ಅಂತಃಕರಣವಿತ್ತು, ಪ್ರೀತಿಯಿತ್ತು. ಅವಳ ಸ್ವಭಾವದಲ್ಲೂ ಅಷ್ಟೆ. ಇನ್ನೂ ಹುಡುಗತನವೇ ಪ್ರಾಧಾನ್ಯವಾಗಿತ್ತು. ಅವಳಲ್ಲಿ ಅದೇ ಉತ್ಸಾಹ, ಅದೇ ಚಂಚಲತೆ, ಅದೇ ವಿನೋದ ಪ್ರವೃತ್ತಿ ಇತ್ತು. ಈ ಹುಡುಗರೊಡನೆ ಮಿಳಿತಗೊಂಡಾಗ ಈ ಎಲ್ಲ ಭಾವಗಳು ರೆಕ್ಕೆ ಬಿಚ್ಚುತ್ತಿದ್ದುವು. ಹೆಂಡತಿಗೆ ಸಹಜವಾದ ಈರ್ಷ್ಯೆ, ಇನ್ನೂ ಅವಳಲ್ಲಿ ಜನ್ಮವೆತ್ತಿರಲಿಲ್ಲ. ಆದರೆ ಗಂಡ ಸಂತೋಷಗೊಳ್ಳುವ ಬದಲು ಹೀಗೆ ಮುಖ ಸಿಂಡರಿಸಿಕೊಂಡದ್ದರ ಆಶಯವನ್ನು ಅರ್ಥಮಾಡಿಕೊಳ್ಳದ ಆಕೆ ಹೇಳಿದಳು– 'ಅವರ ಹತ್ತಿರ ಹೋಗಿ ಏಕೆ ಕೇಳೊಲ್ಲ ಅಂತ ನನಗೇನು ಗೊತ್ತು ? ನನ್ನ ಹತ್ತಿರ ಬಂದರೆ ನಾನು ಬಯ್ಯುವುದಿಲ್ಲ. ಬೈದರೆ, ನಾನು ಈ ಹುಡುಗರನ್ನು ಕಂಡರೆ ಉರಿದು ಬೀಳ್ತೀನಿ ಅಂತ ತಾನೇ ಆಕೆ ಹೇಳುವುದು.'

ತೋತಾರಾಮ ಇದಕ್ಕೆ ಯಾವ ಉತ್ತರವನ್ನೂ ಕೊಡಲಿಲ್ಲ. ಆದರೆ ಅವರು ಇಂದು ಯಾವ ಕಕ್ಷಿದಾರನೊಂದಿಗೂ ಮಾತನಾಡಲಿಲ್ಲ. ನೇರವಾಗಿ ಮಂಸಾರಾಮನ ಬಳಿಗೆ ಹೋಗಿ ಅವನ ಓದು–ಬರಹದ ಬಗ್ಗೆ ವಿಚಾರಿಸಿಕೊಳ್ಳತೊಡಗಿದರು. ಅವರು ತಮ್ಮ ಜೀವನದಲ್ಲಿ ಮೊಟ್ಟಮೊದಲ ಸಾರಿ ಇವತ್ತು ಮಂಸಾರಾಮ ಅಥವಾ ಇನ್ನಾವುದೇ ಹುಡುಗನ ಶೈಕ್ಷಣಿಕ ಪ್ರಗತಿಯನ್ನು ಕುರಿತು ಆಸಕ್ತಿ ತೋರಿಸಿದ್ದರು. ಏಕೆಂದರೆ ಅವರಿಗೆ ತಮ್ಮ ವೃತ್ತಿ ಜೀವನದಲ್ಲಿ

ತಲೆ ಕೆರೆದುಕೊಳ್ಳುವುದಕ್ಕೂ ಬಿಡುವು ದೊರಕುತ್ತಿರಲಿಲ್ಲ. ಈ ಹುಡುಗರು ಓದುತ್ತಿದ್ದ ವಿಷಯಗಳನ್ನು ಅವರು ಓದಿ ಸುಮಾರು ನಲ್ವತ್ತು ವರ್ಷಗಳೇ ಕಳೆದಿದ್ದುವು. ಆಗ ಓದಿದ್ದೇ ಓದಿದ್ದು. ಅವತ್ತಿನಿಂದ ಇವತ್ತಿನತನಕ ಈ ವಿಷಯಗಳ ಬಗ್ಗೆ ತಲೆ ಕೊಡಿಸಿಕೊಂಡಿದ್ದೇ ಇರಲಿಲ್ಲ. ಅವರು ಕಾನೂನಿನ ಪುಸ್ತಕಗಳನ್ನು ಹಾಗೂ ಕಕ್ಷಿದಾರರ ಕಾಗದ ಪತ್ರಗಳ ಹೊರತಾಗಿ ಬೇರೇನನ್ನೂ ಓದುತ್ತಿರಲಿಲ್ಲ. ಓದಲು ಸಮಯ ತಾನೇ ಎಲ್ಲಿಂದ ಬರಬೇಕು ? ಆದರೆ ಇವತ್ತು ಮಂಸಾರಾಮನ ಬಳಿ ಅದೇ ವಿಷಯಗಳನ್ನು ಕುರಿತು ಪ್ರಶ್ನೆ ಕೇಳಲಾರಂಭಿಸಿದರು. ಮಂಸಾರಾಮ ಬುದ್ಧಿವಂತ, ಕಷ್ಟ ಪಟ್ಟು ಓದುತ್ತಲೂ ಇದ್ದ. ಆಟದಲ್ಲಿ ಟೀಮಿನ ಕ್ಯಾಪ್ಟನ್ ಆಗಿದ್ದರೂ, ತರಗತಿಯಲ್ಲೂ ಮೊದಲನೆಯವನಾಗಿಯೇ ಇರುತ್ತಿದ್ದ. ಅವನು ಯಾವುದನ್ನೇ ಆಗಲಿ ಒಂದು ಸಾರಿ ಓದಿದರೆ ಸಾಕು, ಅದು ಅವನ ತಲೆಯಲ್ಲಿ ಕಲ್ಲಿನ ಮೇಲೆ ಎಳೆದ ಗೆರೆಯಂತೆ ಅಚ್ಚೊತ್ತಿದಂತಾಗಿ ಬಿಡುತ್ತಿತ್ತು. ಬುದ್ಧಿವಂತ ಹುಡುಗರು ಕೊಂಚ ಯೋಚಿಸಿ ಉತ್ತರ ನೀಡುವಂಥ ಪ್ರಶ್ನೆಗಳನ್ನು ಕೇಳಲು ಅತ್ಯಾತುರದಲ್ಲಿದ್ದ ತೋತಾರಾಮರಿಗೆ ಹೊಳೆಯಲೇ ಇಲ್ಲ. ಇನ್ನು ಅವರು ಕೇಳಿದ ಮಾಮೂಲಿ ಪ್ರಶ್ನೆಗಳಿಗೆ ಈತ ಚುಟುಕಿ ಹೊಡೆಯುವುದರಲ್ಲಿ ಉತ್ತರಿಸಿದ. ಯಾವನೇ ಒಬ್ಬ ಸೈನಿಕ ತನ್ನ ಶತ್ರುವಿನ ಮೇಲೆ ಪ್ರಹಾರ ಮಾಡಿದಾಗ , ಆ ಪ್ರಹಾರಗಳನ್ನೆಲ್ಲ ಈ ಶತ್ರು ತಪ್ಪಿಸಿಕೊಳ್ಳುತ್ತಾ ಹೋದಾಗ, ಸೈನಿಕನ ಕೋಪ ನೆತ್ತಿಗೇರಿ ಯಾವ ರೀತಿ ಯದ್ವಾತದ್ವಾ ರಭಸವಾಗಿ ಪ್ರಹಾರ ಮಾಡಲಾರಂಭಿಸುತ್ತಾನೋ, ಹಾಗೆ, ಮಂಸಾರಾಮನ ಉತ್ತರಗಳನ್ನು ಕೇಳಿ–ಕೇಳಿ ವಕೀಲರು ಸಹ ಏಕ್‌ದಂ ದಂಗಾಗಿ ಹೋದರು. ಮಂಸಾರಾಮ ಉತ್ತರ ಕೊಡಲಾಗದಂಥ ಪ್ರಶ್ನೆಗಳನ್ನು ಅವರು ಕೇಳಲು ಬಯಸುತ್ತಿದ್ದರು. ಇವನ ದುರ್ಬಲತೆ ಎಲ್ಲಿದೆ ಎಂದು ಹುಡುಕಲು ಪ್ರಯಾಸ ಪಡುತ್ತಿದ್ದರು. ಇವನು ಏನು ಮಾಡ್ತಿದ್ದಾನೆ ಎಂಬುದನ್ನು ನೋಡಿ ಸಂತೋಷ ಪಡುವ ಸ್ಥಿತಿಯಲ್ಲಿರಲಿಲ್ಲ. ಆದರೆ ಇವನಿಂದ ಏನು ಆಗುವುದಿಲ್ಲ ಎಂಬುದನ್ನೂ ಅವರು ನೋಡಲು ಬಯಸುತ್ತಿದ್ದರು. ಯಾವನೇ ಒಬ್ಬ ಅನುಭವಿ ಪರೀಕ್ಷಕ ಮಂಸಾರಾಮನ ತಪ್ಪುಗಳನ್ನು ಸುಲಭವಾಗಿ ತೋರಿಸಬಹುದಿತ್ತು. ಆದರೆ ವಕೀಲರು ತಮ್ಮ ಅರ್ಧ ಶತಮಾನದ ಹಿಂದೆ ಈಗಾಗಲೇ ಮರೆತು ಹೋಗಿದ್ದ ಜ್ಞಾನದ ಆಧಾರದ ಮೇಲೆ ಇವನ ತಪ್ಪುಗಳನ್ನು ಹುಡುಕುವುದರಲ್ಲಿ ಸಫಲರಾಗಲು ಸಾಧ್ಯವೇನು ? ಕೊನೆಗೆ ತಮ್ಮ ಕೋಪವನ್ನು ತೋರಿಸಿಕೊಳ್ಳಲು ಬೇರಾವ ನೆಪವೂ ಸಿಗದಿದ್ದಾಗ, ವಿವಶರಾಗಿ ಹೇಳಿದರು– 'ನೀನು ಇಡೀ ದಿನ ಅಲ್ಲಿ–ಇಲ್ಲಿ ಗಸ್ತು ತಿರುಗ್ತಾ ಇರ್ತಿಯಂತೆ. ನಿನ್ನ ಬುದ್ಧಿವಂತಿಕೆಗಿಂತ ಹೆಚ್ಚಾಗಿ ನಿನ್ನ ಗುಣ ನನಗೆ ಚೆನ್ನಾಗಿ ಗೊತ್ತು. ಹೀಗೆ ನೀನು ಆವಾರಾನ ತರಹ ಅಂಡಲೆಯುವುದು ನನಗೆ ಸ್ವಲ್ಪವೂ ಹಿಡಿಸುವುದಿಲ್ಲ.'

ಮಂಸಾರಾಮ ನಿರ್ಭಿಡೆಯಿಂದ ನುಡಿದ– 'ನಾನು ಸಂಜೆ ಹೊತ್ತಿನಲ್ಲಿ ಆಟ ಆಡಲಿಕ್ಕೆಂದು ಒಂದು ಗಂಟೆ ಹೊರಗೆ ಹೋಗುವುದರ ಹೊರತಾಗಿ ದಿನದ ಉಳಿದ ಸಮಯದಲ್ಲಿ ಎಲ್ಲೂ ಹೋಗುವುದಿಲ್ಲ. ನೀವು ಅಮ್ಮ ಅಥವಾ ಅತ್ತೆನ ಕೇಳಿಬೇಕಾದರೆ.

ನನಗೂ ಈ ರೀತಿ ಆವಾರನ ತರಹ ಅಲೆಯುವುದು ಇಷ್ಟವಾಗುವುದಿಲ್ಲ. ಅಂದ ಹಾಗೆ, ಆಟಕ್ಕೆ ಬಾ ಅಂತ ಹೆಡ್ ಮಾಸ್ಟರ್ ಬಲವಂತವಾಗಿ ಕರೆಯುತ್ತಾರೆ. ಹೀಗಾಗಿ ಬೇರೆ ಉಪಾಯವಿಲ್ಲದೆ ಹೋಗ್ತೇನೆ. ನಾನು ಆಟಕ್ಕೆ ಹೋಗುವುದು ನಿಮಗೆ ಇಷ್ಟವಿಲ್ಲವಾದರೆ ನಾಳೆಯಿಂದ ಹೋಗುವುದಿಲ್ಲ.'

ಮಾತಿನ ದಿಕ್ಕು ಏಕೋ ಬೇರೆಕಡೆ ತಿರುಗುತ್ತಿದೆ ಎಂಬುದನ್ನು ಗಮನಿಸಿದ ತೋತಾರಾಮರ ಇನ್ನೂ ಕೋಪದಿಂದಲೇ ನುಡಿದರು– 'ಆಟ ಆಡುವುದಕ್ಕೆ ಹೋಗುವುದೊಂದನ್ನು ಬಿಟ್ಟರೆ ಬೇರೆ ಎಲ್ಲೂ ನೀನು ಹೋಗುತ್ತಿಲ್ಲ ಎಂಬುದು ನನಗೆ ಹೇಗೆ ಗೊತ್ತಾಗಬೇಕು ? ನಿನ್ನ ಬಗ್ಗೆ ನನಗೆ ದೂರುಗಳು ಬರುತ್ತಾ ಇವೆ.'

ಮಂಸಾರಾಮ ಕೊಂಚ ಆವೇಶದಿಂದಲೇ ಉತ್ತರಿಸಿದ– 'ನಿಮ್ಮ ಹತ್ತಿರ ಬಂದು ಯಾರು ಹೇಳಿದರು ಅಂತ ಹೇಳಿ ನೋಡೋಣ. ನನಗೂ ಅವರ ಹೆಸರು ಗೊತ್ತಾಗಲಿ.'

ತೋತಾರಾಮ : 'ಯಾರಾದರೂ ಹೇಳಲಿ, ಅದನ್ನು ಕಟ್ಟಿಕೊಂಡು ನೀನೇನು ಮಾಡ್ತೀಯಾ ? ನಾನು ಸುಳ್ಳು ಹೇಳುತ್ತಿಲ್ಲ ಅನ್ನುವುದನ್ನು ನೀನು ನಂಬಬೇಕು.'

ಮಂಸಾರಾಮ : 'ನಾನು ಅಲ್ಲಿ–ಇಲ್ಲಿ ಆವಾರಾನ ತರಹ ಸುತ್ತುತ್ತೀನಿ ಅಂತ ನನ್ನ ಮುಂದೆ ಬಂದು ಯಾರಾದರೂ ಹೇಳಿದರು ಅಂದ್ರೆ ಮಾತ್ರ ನಾನು ಒಪ್ಪಿಕೋತೀನಿ. ನೀವು ನೀಡಿದ ಶಿಕ್ಷೆ ನನಗೆ ಒಪ್ಪಿಗೆ.'

ತೋತಾರಾಮ : 'ನಿನ್ನ ಎದುರಿಗೆ ಅವರು ಬಂದು, ನಿನ್ನ ಮುಂದೆ ದೂರು ಹೇಳಿ ನಿನ್ನನ್ನು ಎದುರು ಹಾಕಿಕೊಳ್ಳುವಂಥಾದ್ದು ಏನಿದೆ ? ಆಗ ನೀನು ನಿನ್ನ ಒಂದಷ್ಟು ಜನ ಸ್ನೇಹಿತರನ್ನು ಜೊತೇಲಿ ಕರೆದುಕೊಂಡು ಹೋಗಿ ಅವರ ಮನೆ ಹೆಂಚುಗಳನ್ನು ಚೂರು–ಚೂರು ಮಾಡಿಸಿದರೆ ಏನು ಗತಿ ? ಈ ರೀತಿಯ ದೂರನ್ನು ಒಬ್ಬರಲ್ಲ, ಅನೇಕರು ನನಗೆ ಹೇಳಿದ್ದಾರೆ. ಅವರ ಮಾತನ್ನು ನಂಬದೇ ಇರಲು ಸಾಧ್ಯವೇನು ? ಆದ್ದರಿಂದ ನೀನು ಇನ್ನು ಮುಂದೆ ಸ್ಕೂಲಿನ ಬೋರ್ಡಿಂಗ್‌ನಲ್ಲೇ ಇದ್ದುಬಿಡು.'

ಮಂಸಾರಾಮ ಕೊಂಚ ಬೇಸರದಿಂದ ನುಡಿದ : 'ಅಲ್ಲೇ ಇರಲು ನನ್ನದೇನೂ ಆಕ್ಷೇಪಣೆ ಇಲ್ಲ. ನೀವು ಯಾವತ್ತಿನಿಂದ ಹೋಗು ಅಂತಿರೋ ಅವತ್ತಿನಿಂದ ನಾನು ಅಲ್ಲೇ ಇರ್ತೀನಿ.'

ತೋತಾರಾಮ : 'ನೀನು ಮುಖ ಹೀಗೇಕೆ ಸಪ್ಪಗೆ ಮಾಡಿಕೊಂಡೆ ? ಅಲ್ಲಿರಲು ನಿನಗಿಷ್ಟವಿಲ್ಲವೇನು ? ಅಲ್ಲಿಗೆ ಹೋಗುವುದರಿಂದ ಇಲ್ಲಿ ನಿನ್ನದೇನೂ ಗಂಟು ಹೊರಟು ಹೋಗುತ್ತೆ ಅನ್ನೋ ರೀತೀಲಿ ನೀನು ಮುಖ ಮಾಡಿಕೊಂಡೆ. ಏನ್ ಸಮಾಚಾರ ? ಅಲ್ಲಿ ನಿನಗೇನು ಕಷ್ಟ ಇದೆ ?'

ಮಂಸಾರಾಮನಿಗೆ ಹಾಸ್ಟೆಲ್‌ನಲ್ಲಿರಲು ಯಾವುದೇ ಆಸಕ್ತಿ ಇರಲಿಲ್ಲ. ಆದರೆ ವಕೀಲರು ಈ ಮಾತನ್ನು ಹೇಳಿದರು. ಕಾರಣ ಕೇಳಿದರೆ ಹೇಳಲಿಲ್ಲ. ಆಗ ತನ್ನ ಬೇಸರವನ್ನು

ನುಂಗಿಕೊಂಡು ಕೊಂಚ ಸಂತೋಷದಿಂದಲೇ ಹೇಳಿದ – 'ನಾನೇಕೆ ಮುಖ ಸಪ್ಪಗೆ ಮಾಡಿಕೊಳ್ಳಲಿ ? ನನಗೆ ಮನೆ ಹೇಗೋ ಬೋರ್ಡಿಂಗ್ ಹೌಸೂ ಹಾಗೇನೇ. ಅಲ್ಲಿರಲು ನನಗೇನೂ ಕಷ್ಟವಿಲ್ಲ. ಕಷ್ಟ ಇದ್ದರೂ ನಾನದನ್ನು ಸಹಿಸಿಕೊಳ್ಳುತ್ತೇನೆ. ನಾನು ನಾಳೆಯಿಂದಲೇ ಅಲ್ಲಿಗೆ ಹೋಗ್ತೇನೆ. ಅಂದ ಹಾಗೆ ಒಂದು ವೇಳೆ ಅಲ್ಲಿ ಜಾಗ ಖಾಲಿ ಇಲ್ಲದೇ ಹೋದರೆ ಮಾತ್ರ ಏನೂ ಮಾಡಲಿಕ್ಕೆ ಆಗುವುದಿಲ್ಲ.'

ಎಷ್ಟೇ ಆಗಲಿ ತೋತಾರಾಮರು ವಕೀಲರು ತಾನೇ ? ಬಹುಶಃ ಈ ಬಡ್ಡಿಮಗ ಅಲ್ಲಿಗೆ ಹೋದಂತೆ ಮಾಡಿ, ಮತ್ತೆ ಅಲ್ಲಿ ಜಾಗ ಇಲ್ಲ ಅಂತ ವಾಪಸ್ಸು ಬರುವಂತೆ ಆಗಲು ಏನೋ ನೆಪ ಹಾಕುತ್ತಿದ್ದಾನೆ. ಈ ಮೂಲಕ ತನ್ನ ತಲೆ ಮೇಲೆ ಬಂದಿರುವ ಆಕ್ಷೇಪಣೆಯನ್ನು ದೂರಮಾಡಿಕೊಳ್ಳಲೂ ಪ್ರಯತ್ನಿಸುತ್ತಿದ್ದಾನೆ ಎಂದೆಲ್ಲ ಯೋಚಿಸಿ ಹೇಳಿದರು– 'ಎಲ್ಲಾ ಹುಡುಗರಿಗೂ ಜಾಗಸಿಕ್ಕಿ ನಿನಗೆ ಮಾತ್ರ ಸಿಗುವುದಿಲ್ಲೇನೋ ?'

ಮಂಸಾರಾಮ : 'ಎಷ್ಟೋ ಹುಡುಗರಿಗೆ ಜಾಗ ಸಿಕ್ಕಿಲ್ಲ ಅಲ್ಲಿ. ಅವರೆಲ್ಲ ಹೊರಗಡೆ ರೂಮುಗಳನ್ನು ಮಾಡಿಕೊಂಡು ಓದ್ತಿದ್ದಾರೆ. ನಿನ್ನೆ ಮೊನ್ನೆ ಒಬ್ಬ ಹುಡುಗ ಬೋರ್ಡಿಂಗ್ ಹೌಸ್‌ನ್ನ ಖಾಲಿ ಮಾಡಿದ. ಆ ಒಂದು ಜಾಗಕ್ಕೆ ಐವತ್ತೋ, ಅರವತ್ತೋ ಅರ್ಜಿಗಳು ಬಂದಿದ್ದವು.'

ವಕೀಲರು ಇನ್ನು ಹೆಚ್ಚು ವಾದ–ವಿವಾದ ಮಾಡುವುದನ್ನು ಉಚಿತವೆಂದು ಭಾವಿಸಿರಲಿಲ್ಲ. ನಾಳೆ ಮನೆಯಿಂದ ಹೊರಡಲು ಆಜ್ಞೆ ಮಾಡಿ ಸಂಜೆಯ ವಾಯುವಿಹಾರಕ್ಕೆ ಹೊರಟು ಹೋದರು.

ಇತ್ತೀಚೆಗೆ ಕೆಲವು ದಿನಗಳಿಂದ ಅವರು ಸಂಜೆಹೊತ್ತು ಸಾಮಾನ್ಯವಾಗಿ ವಾಯುವಿಹಾರಕ್ಕೆ ಹೋಗುವ ಅಭ್ಯಾಸ ಮಾಡಿಕೊಂಡಿದ್ದರು. ದೀರ್ಘಜೀವನಕ್ಕೆ ಇದಕ್ಕಿಂತಲೂ ಉತ್ತಮವಾದ ಬೇರೆ ಮಂತ್ರವಿಲ್ಲವೆಂದು ಯಾರೋ ಅನುಭವಿಗಳು ಅವರಿಗೆ ಉಪದೇಶ ನೀಡಿದ್ದರು. ಅವರು ಹೊರಟು ಹೋದ ನಂತರ ಮಂಸಾರಾಮ ಬಂದು ರುಕ್ಮಿಣಿಗೆ ಹೇಳಿದ– 'ಅತ್ತೆ ಅಪ್ಪಾಜಿ ನಾಳೆಯಿಂದ ನಾನು ಬೋರ್ಡಿಂಗ್ ಹೌಸ್‌ನಲ್ಲಿರುವಂತೆ ಹೇಳಿದ್ದಾರೆ.'

ರುಕ್ಮಿಣಿ ಆಶ್ಚರ್ಯದಿಂದ ಕೇಳಿದಳು : 'ಏಕೆ ?'

ಮಂಸಾರಾಮ : 'ನನಗೇನು ಗೊತ್ತು ? ನಾನು ಆವಾರಾನ ತರಹ ಅಲ್ಲಿ–ಇಲ್ಲಿ ಸುತ್ತುತ್ತೀನಂತೆ.'

ರುಕ್ಮಿಣಿ : 'ನಾನು ಎಲ್ಲೂ ಸುತ್ತುವುದಿಲ್ಲ ಅಂತ ಹೇಳಬೇಕಾಗಿತ್ತು.'

ಮಂಸಾರಾಮ : 'ಹೇಳದೇ ಏನು ? ಹೇಳಿದೆ. ನನ್ನ ಮಾತುಗಳನ್ನು ಅವರು ಕೇಳಿಸಿಕೊಂಡರೆ ತಾನೆ ?'

ರುಕ್ಮಿಣಿ : 'ನಿನ್ನ ಹೊಸ ಅಮ್ಮನ ಕೃಪೆಯಿರಬಹುದು, ಅಲ್ವಾ ?'

ಮಂಸಾರಾಮ : 'ಇಲ್ಲ ಅತ್ತೆ ಅವರ ಮೇಲೆ ನನಗೆ ಯಾವುದೇ ಅನುಮಾನವಿಲ್ಲ.

ಪಾಪ, ಬಾಯಿ ತಪ್ಪಿಯೂ ಅವರು ನನ್ನ ಬಗ್ಗೆ ಏನೂ ಹೇಳುವವರಲ್ಲ. ನಾನು ಏನೇ ಕೇಳಿದರೂ ತಕ್ಷಣ ಕೊಡ್ತಾರೆ.'

ರುಕ್ಮಿಣಿ : 'ಹೆಂಗಸರ ಗುಣ, ಸ್ವಭಾವ ನಿನಗೇನು ಗೊತ್ತು ? ಇದು ಅವಳು ಇಟ್ಟಿರುವ ಬೆಂಕಿ, ನೋಡ್ತಿರು, ನಾನು ಹೋಗಿ ವಿಚಾರಿಸ್ತೀನಿ.'

ರುಕ್ಮಿಣಿ ಕಾಯುವ ಕೆಂಡವಾಗಿ ನಿರ್ಮಲಾಳ ಬಳಿ ಹೋದಳು. ಅವಳಿಗೆ ದಬಾಯಿಸುವ, ಹೀಯಾಳಿಸುವ, ಬೈಗಳಿಂದ ಚುಚ್ಚುವ, ಅಳಿಸುವ, ಯಾವುದೇ ಸುಸಂದರ್ಭವನ್ನು ಈಕೆ ಕೈ ತಪ್ಪಿ ಹೋಗಲು ಬಿಡುತ್ತಿರಲಿಲ್ಲ. ಆದರೆ ನಿರ್ಮಲಾ ಈಕೆಯನ್ನು ಗೌರವಿಸುತ್ತಿದ್ದಳು. ಇವಳ ಎದುರಿಗೆ ತಗ್ಗಿ ನಡೆಯುತ್ತಿದ್ದಳು. ಇವಳ ಮಾತಿಗೆ ಎದುರು ಮಾತುಗಳನ್ನಾಡುತ್ತಿರಲಿಲ್ಲ. ಈಕೆಗೆ ಬುದ್ಧಿ ಮಾತುಗಳನ್ನಾಡುತ್ತಿರಲಿಲ್ಲ. ಈಕೆ ಬುದ್ಧಿಮಾತುಗಳನ್ನು ಹೇಳಲಿ, ನಾನು ತಪ್ಪು ಮಾಡಿದಾಗ ತಿದ್ದಲಿ, ನಾನು ಮಾಡುವ ಎಲ್ಲ ಕೆಲಸಗಳನ್ನು ಈಕೆ ನೋಡಲಿ ಎಂದೇ ಬಯಸುತ್ತಿದ್ದಳು. ಹೀಗಿದ್ದರೂ ರುಕ್ಮಿಣಿ ಮಾತ್ರ ಸದಾ ಮುಖವನ್ನು ಊದಿಸಿಕೊಂಡೇ ಇರುತ್ತಿದ್ದಳು.

ಮಂಚದ ಮೇಲೆ ಕುಳಿತ್ತಿದ್ದ ನಿರ್ಮಲಾ ಎದ್ದು ನಿಂತು, 'ಬನ್ನಿ ಅಕ್ಕ, ಕುಳಿತುಕೊಳ್ಳಿ' ಅಂದಳು.

ರುಕ್ಮಿಣಿ ನಿಂತೇ ಹೇಳಿದಳು : 'ನೀನು ಮನೇಲಿರೋ ಎಲ್ಲರನ್ನೂ ಹೊರಗೆ ಅಟ್ಟಿ ನೀನೊಬ್ಬಳೇ ಇರಬೇಕು ಅಂತ ಇದ್ದಿಯೇನು ?'

ನಿರ್ಮಲಾ ಕಾತರ ಭಾವದಿಂದ ಕೇಳಿದಳು : 'ಏನಾಯಿತು ಅಕ್ಕ? ನಾನು ಯಾರಿಗೂ ಏನೂ ಅಂದಿಲ್ಲವಲ್ಲ ?'

ರುಕ್ಮಿಣಿ : ಈಗ ಮಂಸಾರಾಮನನ್ನು ಹೊರಗೆ ಅಟ್ಟುತ್ತಿದ್ದೀಯಾ. ಮಾಡುವುದನ್ನು ಮಾಡಿ, ಏನೂ ಮಾಡಲೇ ಇಲ್ಲ ಅಂತಿಯೇನು ? ಇವನು ಮನೇಲಿರುವುದನ್ನು ನೋಡಲಿಕ್ಕೆ ನಿನ್ನಿಂದ ಆಗುವುದಿಲ್ಲವೇನು ?'

ನಿರ್ಮಲಾ : 'ಅಕ್ಕಾ ನಿಮ್ಮ ಕಾಲು ಮುಟ್ಟಿ ಪ್ರಮಾಣ ಮಾಡಿ ಹೇಳ್ತೀನಿ. ನನಗೆ ಇದೊಂದೂ ಗೊತ್ತಿಲ್ಲ. ಇವನ ಬಗ್ಗೆ ನಾನು ಒಂದು ಮಾತು ಆಡಿದ್ದರೂ ನನ್ನ ಕಣ್ಣುಗಳು ಹಿಂಗಿ ಹೋಗಲಿ.'

ರುಕ್ಮಿಣಿ : 'ಸುಮ್ಮನೆ ಆಣೆ–ಪ್ರಮಾಣ ಅಂತ ಏಕೆ ಮಾಡ್ತೀಯಾ ? ಇವತ್ತಿನವರೆಗೆ ತೋತಾರಾಮ ಹುಡುಗರನ್ನು ಮಾತನಾಡಿಸುತ್ತಲೂ ಇರಲಿಲ್ಲ, ಒಂದು ಮಾತೂ ಅನ್ನುತ್ತಿರಲಿಲ್ಲ. ಒಂದು ಸಾರಿ ಮಂಸಾರಾಮ ಸೋದರಮಾವನ ಮನೆಗೆ ಹೋದವನು ಒಂದು ವಾರವಾದರೂ ಬಾರದಿದ್ದಾಗ, ತೋತಾರಾಮ ಎಷ್ಟು ಗಾಬರಿಗೊಂಡನೆಂದರೆ ತಾನೇ ಹೋಗಿ ಇವನನ್ನು ಕರೆದುಕೊಂಡು ಬಂದ. ಈಗ ಇದೇ ಮಂಸಾರಾಮನನ್ನು ಹಾಸ್ಟಲ್‌ನಲ್ಲಿ ಬಿಡಲು ಸಿದ್ಧನಾಗಿದ್ದಾನೆ. ಈ ಹುಡುಗನಿಗೆ ಏನಾದರೂ ಒಂದು ಚೂರು ತೊಂದರೆಯಾದರೂ ನಿನ್ನ ಗತಿ ಚೆನ್ನಾಗಿರುವುದಿಲ್ಲ. ಈ ಹುಡುಗ ಎಂದೂ ಒಂದು ದಿನಕ್ಕೂ ಹೊರಗಡೆ ಇದ್ದವನಲ್ಲ.

ಇವನಿಗೆ ತಿನ್ನುವುದು–ಉಡುವುದರ ಬಗ್ಗೆ ಯಾವುದೇ ಲಕ್ಷ್ಯವಿಲ್ಲ. ಎಲ್ಲಿರುತ್ತಾನೋ ಅಲ್ಲೇ ನಿದ್ದೆ ಮಾಡ್ತಾನೆ. ನೋಡೋಕೆ ಅವನು ದೊಡ್ಡವನಾಗಿದ್ದಾನೆ. ಆದರೆ ಇವನ ಸ್ವಭಾವ ಮಾತ್ರ ಮಕ್ಕಳ ಹಾಗೆ. ಹಾಸ್ಟೆಲ್‌ನಲ್ಲೇ ಇದ್ದು ಬಿಟ್ಟರೆ ಖಂಡಿತ ಅವನು ಸತ್ತು ಹೋಗ್ತಾನೆ. ಅವನು ತಿಂದನೋ ಬಿಟ್ಟನೋ, ಸ್ನಾನ ಮಾಡಿದನೋ ಬಿಟ್ಟನೋ, ಬಟ್ಟೆ ಬದಲಿಸಿದನೋ ಇಲ್ಲವೋ, ಎಲ್ಲಿ ಮಲಗಿಕೊಂಡ, ಎಲ್ಲಿ ಎದ್ದ ಎಂಬುದನ್ನು ವಿಚಾರಿಸುವವರೇ ಇರುವುದಿಲ್ಲ. ಮನೆಯಲ್ಲೇ ಯಾರೂ ಕೇಳುವವರಿಲ್ಲ. ಅಂದ ಮೇಲೆ ಹೊರಗಡೆ ಯಾರು ಕೇಳ್ತಾರೆ ಹೇಳು ? ನಾನು ಹೇಳುವುದನ್ನು ಹೇಳಿದ್ದೇನೆ, ಮುಂದಿನದು ನಿನಗೆ ಬಿಟ್ಟಿದ್ದು ' – ಇಷ್ಟು ಹೇಳಿ ರುಕ್ಮಿಣಿ ಅಲ್ಲಿಂದ ಹೊರಟು ಹೋದಳು.

ವಕೀಲರು ವಾಯುಸಂಚಾರ ಮುಗಿಸಿಕೊಂಡು ಮನೆಗೆ ಬರುತ್ತಿದ್ದಂತೆಯೇ ನಿರ್ಮಲಾ ವಿಷಯವನ್ನು ತೆಗೆದಳು— 'ಇತ್ತೀಚಿನ ದಿನಗಳಲ್ಲಿ ನಾನು ಮಂಸಾರಾಮನಿಂದ ಇಂಗ್ಲಿಷ್ ಹೇಳಿಸಿಕೊಳ್ಳುತ್ತಿದ್ದೆ. ಈಗ ಇವನು ಹೊರಟು ಹೋದ ಅಂದರೆ ನನಗೆ ಹೇಳಿಕೊಡುವರಾರು ? ನನ್ನ ಕಲಿಕೆಗೂ ಕಲ್ಲು ಬಿದ್ದಂತಾಯಿತು.'

ವಕೀಲರಿಗೆ ಈ ವಿಷಯ ಇದುವರೆಗೆ ಗೊತ್ತಿರಲಿಲ್ಲ. ಕೊಂಚ ಅಭ್ಯಾಸವಾದ ನಂತರ, ವಕೀಲರೊಂದಿಗೆ ಇಂಗ್ಲಿಷ್‌ನಲ್ಲಿ ಮಾತನಾಡಿ ಅವರನ್ನು ಚಕಿತಗೊಳಿಸಬೇಕೆಂದು ನಿರ್ಮಲಾ ಮನಸ್ಸಿನಲ್ಲೇ ಯೋಚಿಸುತ್ತಿದ್ದಳು. ಕೊಂಚ ಕೊಂಚವಾಗಿ ಅಭ್ಯಾಸವನ್ನು ಆರಂಭಿಸಿದ್ದ ಈಕೆ ಇತ್ತೀಚೆಗೆ ನಿಯಮಿತವಾಗಿ ಓದಿ–ಬರೆದು ಮಾಡುತ್ತಿದ್ದಳು. ಈ ಮಾತುಗಳನ್ನು ಕೇಳಿಸಿಕೊಂಡ ವಕೀಲರಿಗೆ ತಮ್ಮ ಮೈ ಒಮ್ಮೆಗೇ ತಣ್ಣಗಾದಂಥ ಅನುಭವವಾಯಿತು. ಮುಖ ಸಿಂಡರಿಸಿಕೊಂಡು, ಕೋಪದಿಂದ ನುಡಿದರು – 'ನಿನಗೆ ಅವನು ಎಷ್ಟು ದಿನಗಳಿಂದ ಹೇಳಿಕೊಡುತ್ತಿದ್ದಾನೆ ? ನೀನು ಈ ವಿಷಯವನ್ನು ನನಗೆ ಹೇಳಲೇ ಇಲ್ಲವಲ್ಲ ?'

ನಿರ್ಮಲಾ ತನ್ನ ಗಂಡನ ಉಗ್ರರೂಪವನ್ನು ಒಮ್ಮೆ ಮಾತ್ರ ನೋಡಿದ್ದಳು – ಸಿಯಾರಾಮನನ್ನು ಯಾವುದೋ ಮಾತಿಗೆ ಹೊಡೆದು– ಹೊಡೆದು ಅರೆ ಜೀವ ಮಾಡಿದ್ದಾಗ, ಅವರ ಅಂದಿನ ಆ ಉಗ್ರರೂಪ ಇನ್ನಷ್ಟು ಭಯಂಕರವಾಗಿ ಕಂಡದ್ದು ಇವತ್ತೇ. ನಿರ್ಮಲಾ ತುಂಬಾ ವಿನೀತಳಾಗಿ ಹೇಳಿದಳು – 'ನನಗೆ ಹೇಳಿ ಕೊಡುವುದರಿಂದ ಇವನ ಓದಿಗೆ ಯಾವ ತೊಂದರೆಯೂ ಆಗುತ್ತಿಲ್ಲ. ಈತನಿಗೆ ಬಿಡುವಿದ್ದಾಗ ಮಾತ್ರ ನಾನು ಹೇಳಿಸಿಕೊಳ್ಳುವುದು, 'ನಿನಗೆ ಬಿಡುವಿದೆಯೇನಪ್ಪಾ ?' ಅಂತ ಕೇಳಿಯೇ ನಾನು ಹೇಳಿಸಿಕೊಳ್ಳುವುದು. ಇವನು ಆಟಕ್ಕೆ ಹೊರಟು ನಿಂತಾಗ ಹತ್ತು ನಿಮಿಷ ತಡೆದು ಪಾಠ ಹೇಳಿಸಿಕೊಳ್ತೇನೆ. ಈತನಿಗೆ ನನ್ನಿಂದ ಯಾವುದೇ ತೊಂದರೆಯಾಗಬಾರದೆಂದೇ ನಾನು ಬಯಸುತ್ತೇನೆ.

ಈ ವಿಷಯ ಅಂಥಾ ಮಹತ್ವದ್ದೇನಾಗಿರಲಿಲ್ಲವಾದರೂ ವಕೀಲರು ಹತಾಶರಾದಂತಾಗಿ ಅಲ್ಲೇ ಇದ್ದ ಮಂಚದ ಮೇಲೆ ಉರುಳಿಕೊಂಡರು, ತಲೆಯ ಮೇಲೆ ಕೈ ಇಟ್ಟುಕೊಂಡು ಚಿಂತಾಕ್ರಾಂತರಾದರು. ವಿಷಯ ಅವರು ತಿಳಿದುಕೊಂಡಿದ್ದಕ್ಕಿಂತಲೂ ಹೆಚ್ಚು ಮುಂದುವರಿದಿತ್ತು. ನಾನು ಮೊದಲೇ ಈ ಬಡ್ಡೀಮಗನನ್ನು ಬೋರ್ಡಿಂಗ್ ಹೌಸ್‌ನಲ್ಲಿ ಏಕೆ ಇಡಲಿಲ್ಲ ಎಂದು

ತಮ್ಮ ಬಗ್ಗೆಯೇ ಅವರಿಗೆ ಕೋಪ ಬಂತು. ಇತ್ತೀಚಿನ ದಿನಗಳಲ್ಲಿ ಈ ಮಹಾರಾಣಿ ಏಕಾಗಿ ಇಷ್ಟು ಸಂತೋಷದಿಂದಿದ್ದಾಳೆ ಎಂಬ ರಹಸ್ಯದ ಹಿನ್ನೆಲೆ ಈಗ ಗೊತ್ತಾಯಿತು. ಈ ಮೊದಲು ಕೋಣೆಯನ್ನು ಇಷ್ಟು ಅಚ್ಚುಕಟ್ಟಾಗಿಡುತ್ತಿರಲಿಲ್ಲ, ತನ್ನನ್ನು ತಾನು ಅಲಂಕರಿಸಿಕೊಳ್ಳದೆ ಹೇಗೆಂದರೆ ಹಾಗೇ ಇದ್ದು ಬಿಡುತ್ತಿದ್ದಳು, ಈಗ ನೋಡಿದರೆ ವಾತಾವರಣವೇ ಸಂಪೂರ್ಣ ಬದಲಾಗಿದೆ. ಈ ಕೂಡಲೇ ಹೋಗಿ ಮಂಸಾರಾಮನ ಕತ್ತು ಹಿಡಿದು ಮನೆಯಿಂದಾಚೆಗೆ ದಬ್ಬೋಣವೇ ಎಂದು ಅವರಿಗೆ ಮನಸ್ಸಾಯಿತಾದರೂ, ಅವರ ಪ್ರೌಢ ಬುದ್ಧಿ ಈ ಸಂದರ್ಭದಲ್ಲಿ ಕೋಪ ಮಾಡಿಕೊಳ್ಳದಂತೆ ಅವರನ್ನು ತಡೆಯಿತು. ನನ್ನ ಮನಸ್ಸು ಇವರಿಗೆ ಅರ್ಥವಾದರೆ ಅನರ್ಥವಾಗುವುದು. ಆದ್ದರಿಂದ ನನ್ನ ಮನಸ್ಸನ್ನು ಇವರಿಗೆ ಬಿಟ್ಟುಕೊಡದಂತೆ ಈಗ ಕೆಲಸ ಮಾಡಬೇಕು ಎಂದು ಮನಸ್ಸಿನಲ್ಲಿಯೇ ಯೋಚಿಸಿ ಹೇಳಿದರು– 'ನಿನಗೆ ಐದು–ಹತ್ತು ನಿಮಿಷ ಪಾಠ ಹೇಳಿಕೊಡುವುದರಿಂದ ಅವನಿಗೇನೂ ತೊಂದರೆಯಾಗುವುದಿಲ್ಲ ಎಂದು ನನಗೆ ಗೊತ್ತಿದೆ. ಆದರೆ ಇವನೊಬ್ಬ ಅಲ್ಲಂಡೆ ಅಲೆಯುವ ಹುಡುಗನಾದ್ದರಿಂದ ತನ್ನ ಕರ್ತವ್ಯದಿಂದ ವಿಮುಖನಾಗಲು ಇದರಿಂದ ಒಂದು ನೆಪ ಸಿಕ್ಕಿದಂತಾಗುತ್ತದೆ. ನಾಳೆ ದಿನ ಫೇಲಾದರೆ, 'ನಾನು ಅಮ್ಮನಿಗೆ ಪಾಠ ಹೇಳುತ್ತಿದ್ದೆ, ಸಮಯವೇ ಸಿಗುತ್ತಿರಲಿಲ್ಲ' ಅಂತ ಸ್ಪಷ್ಟವಾಗಿ ಹೇಳಿ ಬಿಡ್ತಾನೆ. ನಿನಗೆ ಪಾಠ ಹೇಳುವುದಕ್ಕೆ ಒಬ್ಬ ಮೇಷ್ಟ್ರನ್ನು ಇಡುತ್ತೇನೆ. ಅಷ್ಟೇನೂ ಹೆಚ್ಚು ಖರ್ಚು ಬರುವುದಿಲ್ಲ. ನೀನು ಈ ಮೊದಲು ನನಗೆ ಹೇಳಲೇ ಇಲ್ಲವಲ್ಲ ? ಇವನು ನಿನಗೇನು ಹೇಳಿಕೊಡ್ತಾನೆ ಮಹಾ ! ಒಂದೆರಡು ಅಕ್ಷರ ಹೇಳಿಕೊಟ್ಟು ಓಡಿ ಹೋಗ್ತಾನೆ. ಹೀಗೆ ಹೇಳಿಸಿಕೊಂಡರೆ ನಿನಗೇನೂ ಬರುವುದೂ ಇಲ್ಲ.'

ನಿರ್ಮಲಾ ಕೂಡಲೇ ಈ ಆಕ್ಷೇಪಣೆಯನ್ನು ನಿರಾಕರಿಸುತ್ತ ಉತ್ತರಿಸಿದಳು : 'ಹಾಗೇನಿಲ್ಲ. ಇವನು ಮನಸ್ಸಿಟ್ಟು ಹೇಳಿಕೊಡ್ತಿದ್ದಾನೆ. ಜೊತೆಗೆ ಈತ ಪಾಠ ಹೇಳಿಕೊಡುವ ರೀತಿ ಹೇಗಿರುತ್ತದೆ ಅಂದ್ರೆ ಮನಸ್ಸು ಓದಬೇಕು ಅನ್ನಿಸುತ್ತೆ. ಇವನು ಪಾಠ ಹೇಳುವುದನ್ನು ಒಂದು ದಿನ ನೋಡಿ, ನನಗನಿಸುತ್ತೆ, ಬೇರೆ ಯಾವ ಮೇಷ್ಟ್ರೂ ಇಷ್ಟು ಚೆನ್ನಾಗಿ ಹೇಳಿಕೊಡಲಾರರು.' ವಕೀಲರು ತಾವು ಕೇಳಿದ ಪ್ರಶ್ನೆಗೆ ತಾವೇ ಅತೀವ ಆನಂದವನ್ನು ಅನುಭವಿಸುತ್ತಾ ಹೇಳಿದರು– 'ದಿನಕ್ಕೆ ಒಂದು ಸಾರಿ ಹೇಳಿಕೊಡ್ತಾನೋ, ಇಲ್ಲ ಅನೇಕ ಸಾರಿ ಹೇಳಿಕೊಡ್ತಾನೋ ?'

ನಿರ್ಮಲಾ ಈಗಲೂ ಅವರ ಪ್ರಶ್ನೆಯ ಧ್ವನಿಯನ್ನು ಅರ್ಥಮಾಡಿ ಕೊಳ್ಳಲಿಲ್ಲ. ಸಹಜವಾಗಿಯೇ ಹೇಳಿದಳು: 'ಮೊದಲು ಸಂಜೆ ಹೊತ್ತಿನಲ್ಲಿ ಹೇಳಿಕೊಡುತ್ತಿದ್ದ. ಈಗ ಎಷ್ಟೋ ದಿನಗಳಿಂದ ಹಗಲು ಹೊತ್ತು ಬಂದು ನಾನು ಬರೆದದ್ದನ್ನು ನೋಡಿ ತಿದ್ದಿ ಹೋಗ್ತಾನೆ. ಈತ ಹೇಳ್ತಿದ್ದ – ಈತನ ಕ್ಲಾಸಿನಲ್ಲಿ ಇವನೇ ಫಸ್ಟ್ ಅಂತೆ. ಮೊನ್ನೆ ನಡೆದ ಪರೀಕ್ಷೆಯಲ್ಲೂ ಈತನಿಗೇ ಮೊದಲನೆ ಸ್ಥಾನ ಸಿಕ್ಕಿದೆಯಂತೆ, ಅಂದ ಮೇಲೆ ಇವನ ಮನಸ್ಸು ಪಾಠಗಳಲ್ಲಿಲ್ಲ ಅಂತ ನೀವು ಹೇಗೆ ಹೇಳ್ತೀರಿ ? ಆದ್ದರಿಂದ ನಾನು ನಿಮ್ಮಲ್ಲಿ ಕೇಳುವುದೇನೆಂದರೆ ಇವನನ್ನು ಹಾಸ್ಟೆಲ್‌ಗೆ ಸೇರಿಸಬೇಡಿ. ಹಾಗೇನಾದರೂ ಆದರೆ

ರುಕ್ಮಿಣಕ್ಕ ನಾನೇ ಇದಕ್ಕೆಲ್ಲ ಕಾರಣ ಅಂತ ಬೈತಾರೆ! ಸುಮ್ಮ ಸುಮ್ಮನೆ ನಾನು ಬೈಗುಳನ್ನು ತಿನ್ನ ಬೇಕಾಗುತ್ತೆ ಈಗ ಸ್ವಲ್ಪ ಹೊತ್ತಿನ ಮುಂಚೆ ಅವರು ಬಂದು ನನಗೆ ಅಂದು ಹೆದರಿಸಿ ಹೋದರು.

ವಕೀಲರು ಮನಸ್ಸಿನಲ್ಲಿಯೇ ಅಂದುಕೊಂಡರು–ನನಗೆಲ್ಲ ಗೊತ್ತು. ನಿನ್ನೆ ಮೊನ್ನೆ ಹುಡುಗಿ ನನಗೇ ಹೇಳಿಕೊಡಲು ಬಂದಿದ್ದಾಳೆ. ಅಕ್ಕನ ನೆಪ ಹೇಳಿ ತನ್ನ ಕೆಲಸ ಮಾಡಿಕೋಬೇಕು ಅಂತಿದ್ದಾಳೆ ಲೌಡಿ. ಒಂದೆರಡು ನಿಮಿಷದ ನಂತರ ಹೇಳಿದರು: 'ಬೋರ್ಡಿಂಗ್ ಹೆಸರು ಹೇಳಿದರೆ ಸಾಕು ಈ ಬಡ್ಡಿಮಗ ಏನೋ ಅವನ ತಾತನ ಮನೆ ಗಂಟು ಕಳೆದುಕೊಂಡವನಂತೆ ಆಡ್ತಾನೆ. ಬೇರೆ ಹುಡುಗರನ್ನು ನೋಡು, ಜೊತೆ ಹುಡುಗರ ಸಹವಾಸದಲ್ಲಿರಬಹುದು ಅಂತ ಸಂತೋಷ ಪಡ್ತಾರೆ. ಆದರೆ ಇವನು ಒಂದೇ ಕಣ್ಣಿನಲ್ಲಿ ಅಳ್ತಿದ್ದಾನೆ, ಮೊನ್ನೆ–ಮೊನ್ನೆಯವರೆಗೆ ಮನಸ್ಸಿಟ್ಟು ಓದುತ್ತಿದ್ದ. ಹೀಗಾಗಿ ತನ್ನ ತರಗತಿಯಲ್ಲಿ ಮೊದಲನೆಯವನಾಗಿ ಬಂದ, ಆದರೆ ಇತ್ತೀಚೆಗೆ ಸುತ್ತುವ ಅಭ್ಯಾಸ ಬೆಳೆದಿದೆ. ಈ ಅಭ್ಯಾಸವನ್ನು ಈಗಲೇ ತಡೆಯದೇ ಇದ್ದರೆ ನಾಳೆ ಪಶ್ಚಾತ್ತಾಪ ಪಡಬೇಕಾಗುತ್ತೆ ನೋಡು. ನಿನಗೆ ಪಾಠಕ್ಕೆ ಒಬ್ಬ ಮೇಡಂನನ್ನು ನೇಮಿಸಿದರಾಯಿತು.'

ಮಾರನೆಯ ದಿನ ಬೆಳಗ್ಗೆಯೇ ವಕೀಲರು ಬಟ್ಟೆ ಬರೆ ತೊಟ್ಟು ರೆಡಿಯಾಗಿ ಹೊರಗೆ ಹೊರಟರು. ಅವರ ದಿವಾನಖಾನೆಯಲ್ಲಿ ಎಷ್ಟೋ ಜನ ಕಕ್ಷಿದಾರರು ಕುಳಿತಿದ್ದರು. ಇವರಲ್ಲಿ ರಾಜಾಸಾಹೇಬರೂ ಒಬ್ಬರು. ಇವರಿಂದಲೇ ವರ್ಷಕ್ಕೆ ಎಷ್ಟೋ ಸಾವಿರ ಲಾಭ ಬರುತ್ತಿತ್ತು. ಇವರಿಗೂ ಕುಳಿತಿರುವಂತೆ ಹೇಳಿ, ಹತ್ತು ನಿಮಿಷದಲ್ಲಿ ಹಿಂತಿರುಗಿ ಬರುವ ಭರವಸೆ ಕೊಟ್ಟು ಕುದುರೆ ಗಾಡಿಯಲ್ಲಿ ಕುಳಿತು, ಸ್ಕೂಲ್ ಹೆಡ್ ಮಾಸ್ಟರ್ ಬಳಿಗೆ ಹೋದರು. ಹೆಡ್‌ಮಾಸ್ಟರ್ ತುಂಬಾ ಒಳ್ಳೆಯ ಮನುಷ್ಯರು. ವಕೀಲ ಸಾಹೇಬರನ್ನು ಗೌರವದಿಂದ ಕಂಡರು. ಆದರೆ ಅವರ ಹಾಸ್ಟಲ್‌ನಲ್ಲಿ ಒಂದು ಜಾಗವೂ ಖಾಲಿ ಇರಲಿಲ್ಲ. ಎಲ್ಲ ರೂಮುಗಳೂ ಭರ್ತಿ ಆಗಿದ್ದವು. ಮೊದಲು ಗ್ರಾಮಾಂತರ ಪ್ರದೇಶದ, ನಂತರ ನಗರದ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವನ್ನು ಕೊಡಬೇಕೆಂದು ಸ್ಕೂಲ್ ಇನ್ಸ್‌ಪೆಕ್ಟರ್‌ರಿಂದ ಕಟ್ಟುನಿಟ್ಟಿನ ಆದೇಶವಾಗಿತ್ತು. ಒಂದು ವೇಳೆ ಯಾವುದಾದರೂ ಒಂದು ಜಾಗ ಖಾಲಿ ಇದ್ದಿದ್ದರೂ ಅದು ಮಂಸಾರಾಮನಿಗೆ ಸಿಗುವಂತಿರಲಿಲ್ಲ. ಏಕೆಂದರೆ ಅವರಲ್ಲಿ ಗ್ರಾಮಾಂತರ ಪ್ರದೇಶದ ಹುಡುಗರ ಎಷ್ಟೋ ಪ್ರಾರ್ಥನಾ–ಪತ್ರಗಳಿದ್ದುವು. ತೋತಾರಾಮರು ಹೇಳಿ ಕೇಳಿ ವಕೀಲರು. ಬೆಳಗಾದರೆ ಇಂಥ ನೂರು ಜನರ ಜೊತೆ ಅವರ ಒಡನಾಟ ಸಾಗಿರುತ್ತಿತ್ತು. ಅಸಂಭವವೆನಿಸಿದ್ದನ್ನು ಸಂಭವಗೊಳಿಸುವ, ಅಸಾಧ್ಯವನ್ನು ಸಾಧ್ಯವಾಗಿಸುವ ಕಲೆ ಅವರಿಗೆ ಗೊತ್ತಿತ್ತು. ಕೊಂಚ ಕೈ ಬಿಸಿ ಮಾಡಿದರೆ ಕೆಲಸ ಆಗಬಹುದೇನೋ ಅಂದುಕೊಂಡು, ಕಛೇರಿಯ ಕ್ಲರ್ಕ್‌ನೊಡನೆ ಮಾತನಾಡಿದರು. ಅದಕ್ಕೆ ಅವನು ನಗುತ್ತ 'ವಕೀಲರೆ, ಇದು ಯಾವುದೋ ಕಛೇರಿಯಲ್ಲ. ಸ್ಕೂಲ್ ಹೆಡ್‌ಮಾಸ್ಟರ್ ಕಿವಿಗೆ ನಿಮ್ಮ ಈ ಮಾತುಗಳು ಬಿದ್ದುವು ಅಂದ್ರೆ ಅಲ್ಲಿಗೆ ಮುಗಿಯಿತು ನಿಮ್ಮ ಕತೆ! ಬೆಂಕಿಯಾಗ್ತಾರೆ! ಮಂಸಾರಾಮನನ್ನು

ಈ ಕ್ಷಣದಿಂದಲೇ ಹೊರಗೆ ಹಾಕ್ತಾರೆ ! ಮೇಲಿನ ಅಧಿಕಾರಿಗಳಿಗೆ ದೂರು ಕೊಟ್ಟರೂ ಕೊಡಬಹುದು.' ಅಂದ. ಪಾಪ ! ಬಡಪಾಯಿ ವಕೀಲರು ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಸಪ್ಪೆಮೋರೆ ಹಾಕಿಕೊಂಡು, ಹತ್ತು ಗಂಟೆಯ ಹೊತ್ತಿಗೆ ಮನೆಗೆ ಬಂದರು. ಅದೇ ಹೊತ್ತಿಗೆ ಮಂಸಾರಾಮ ಸ್ಕೂಲಿಗೆ ಹೋಗಲು ಮನೆಯಿಂದ ಹೊರಟ. ವಕೀಲರು ಅವನತ್ತ ಅವನು ತಮ್ಮ ಜನ್ಮಜಾತ ಶತ್ರುವೇನೋ ಎಂಬಂತೆ ಕ್ರೂರ ದೃಷ್ಟಿಯಿಂದ ನೋಡಿದರು. ಆಮೇಲೆ ಮನೆಯ ಒಳಗೆ ಬಂದರು.

ಈ ಘಟನೆಯ ನಂತರ ಮುಂದಿನ ಹತ್ತು–ಹನ್ನೆರಡು ದಿನಗಳವರೆಗೆ ಒಮ್ಮೆ ಬೆಳಗ್ಗೆ, ಒಮ್ಮೆ ಸಂಜೆ, ಒಂದಲ್ಲ ಒಂದುಸ್ಕೂಲಿನ ಹೆಡ್‌ಮಾಸ್ಟರ್‌ನ್ನ ಭೇಟಿಯಾಗುವುದು, ಮಂಸಾರಾಮನನ್ನು ಯಾವುದಾದರೂ ಬೋರ್ಡಿಂಗ್ ಸ್ಕೂಲಿಗೆ ಸೇರಿಸಲು ಪ್ರಯತ್ನಿಸುವುದು ಅವರ ಕಾರ್ಯಕ್ರಮವಾಯಿತು. ಆದರೆ ಯಾವ ಸ್ಕೂಲಿನಲ್ಲೂ ಜಾಗ ಸಿಗಲಿಲ್ಲ, ಎಲ್ಲ ಕಡೆಯೂ ನಿರಾಶಾದಾಯಕ ಉತ್ತರವೇ ಸಿಕ್ಕಿತು. ಈಗ ಅವರ ಮುಂದೆ ಇದ್ದದ್ದು ಎರಡೇ ಮಾರ್ಗಗಳು– ಒಂದು, ಬೇರೆ ಮನೆ ಮಾಡಿ ಅಲ್ಲಿ ಮಂಸಾರಾಮನ ವಾಸಕ್ಕೆ ವ್ಯವಸ್ಥೆ ಮಾಡುವುದು ! ಎರಡು, ಬೇರೆ ಯಾವುದಾದರೊಂದು ಸ್ಕೂಲಿಗೆ ಸೇರಿಸುವುದು ! ನಗರದಿಂದ ದೂರದ ಬಡಾವಣೆಗಳಲ್ಲಿನ ಸ್ಕೂಲುಗಳಲ್ಲಿ ಸಾಮಾನ್ಯವಾಗಿ ಜಾಗ ಖಾಲಿ ಇರುತ್ತಿತ್ತು ! ವಕೀಲರ ಅನುಮಾನದ ಹೃದಯ ಈಗ ಕೊಂಚ ಶಾಂತವಾಗಿತ್ತು. ಏಕೆಂದರೆ ಅವತ್ತಿನಿಂದ ಅವರು ಮಂಸಾರಾಮ ನಿರ್ಮಲಾಳ ರೂಮಿಗೆ ಹೋಗಿದ್ದನ್ನು ಗಮನಿಸಲಿಲ್ಲ. ಜೊತೆಗೆ ಅವನು ಆಟಕ್ಕೆ ಹೋಗುವುದನ್ನೂ ಬಿಟ್ಟಿದ್ದ. ಸ್ಕೂಲಿಗೆ ಹೋಗುವ ಮುಂಚೆ ಮತ್ತು ಸ್ಕೂಲಿನಿಂದ ಬಂದ ನಂತರ ತನ್ನ ರೂಮಿನಲ್ಲೇ ಕುಳಿತು ಓದುತ್ತಿದ್ದ. ರಣರಣ ಬೇಸಿಗೆಯ ದಿನಗಳು, ಸೊಂಪಾಗಿ ಗಾಳಿ ಬೀಸುತ್ತಿದ್ದ ಮೈದಾನ ಪ್ರದೇಶದಲ್ಲಿ ನಿಂತಿದ್ದರೂ ಮೈಯಿಂದ ಬೆವರು ಸುರಿದು ಹೋಗುತ್ತಿತ್ತು. ಆದರೆ ಇಂಥ ಸಂದರ್ಭದಲ್ಲೂ ಮಂಸಾರಾಮ ತನ್ನ ರೂಮಿನಿಂದ ಹೊರಗೆ ಬರುತ್ತಿರಲಿಲ್ಲ. ತಂದೆ ತನ್ನನ್ನು ಆವಾರಾ ಎಂದು ಮಾಡಿದ ಆರೋಪದಿಂದ ಮುಕ್ತಗೊಳ್ಳಲು ಇವನ ಆತ್ಮಾಭಿಮಾನ ಚಡಪಡಿಸುತ್ತಿತ್ತು. ಹೀಗಾಗಿ ತನ್ನ ಆಚಾರ–ವಿಚಾರಗಳ ಮೂಲಕ ಈ ಕಳಂಕವನ್ನು ತೊಡೆದುಹಾಕಲು ಮಂಸಾರಾಮ ಪ್ರಯತ್ನಶೀಲನಾಗಿದ್ದ.

ಒಂದು ದಿನ, ವಕೀಲರು ಊಟ ಮಾಡುತ್ತ ಕುಳಿತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಮಂಸಾರಾಮ ಸಹ ಸ್ನಾನಮಾಡಿಕೊಂಡು ಊಟಕ್ಕೆ ಬಂದ. ವಕೀಲರು ಇತ್ತೀಚೆಗೆ ಎಷ್ಟೋ ದಿನಗಳಿಂದ ಅವನನ್ನು ಬರಿ ಮೈಲಿ ನೋಡಿರಲಿಲ್ಲ. ಈಗ ಅವರ ದೃಷ್ಟಿ ಮಂಸಾರಾಮನ ಮೈ ಕಡೆ ಹೊರಳಿತು. ಮೂಳೆಗಳನ್ನು ಜೋಡಿಸಿದ ಅಸ್ಥಿ ಪಂಜರವೊಂದನ್ನು ತಾವು ನೋಡುತ್ತಿರುವಂಥ ಅನುಭವವಾಗಿ ಅವರಿಗೆ ತಮ್ಮ ಕರುಳು ಕಿತ್ತು ಬಂದಂತಾಯಿತು. ಅವನ ಮುಖದಲ್ಲಿ ಈಗಲೂ ಬ್ರಹ್ಮಚರ್ಯದ ತೇಜಸ್ಸು ರಾರಾಜಿಸುತ್ತಿತ್ತಾದರೂ ಮೈ ಮಾತ್ರ ಮೂಳೆಯ ಹಂದರವಾಗಿತ್ತು. ಕೇಳಿದರು– 'ನಿನ್ನ ಆರೋಗ್ಯ ಚೆನ್ನಾಗಿದೆ ತಾನೆ ? ಏಕಿಷ್ಟು ಬಡಕಲಾಗಿದ್ದೀಯಾ ?'

ಮಂಸಾರಾಮ ಎದೆಯ ಮೇಲೆ ಟವಲನ್ನು ಹೊದ್ದುಕೊಳ್ಳುತ್ತ ಹೇಳಿದ– 'ನನ್ನ ಆರೋಗ್ಯ ತುಂಬಾ ಚೆನ್ನಾಗಿದೆ.'

ವಕೀಲರು : 'ಮತ್ತೆ ನಿನ್ನ ಮೈ ಏಕೆ ಇಷ್ಟು ಬಡಕಲಾಗಿದೆ ?

ಮಂಸಾರಾಮ : 'ಏನಿಲ್ಲವಲ್ಲ ? ನಾನು ಇದಕ್ಕಿನ್ನ ದಪ್ಪ ಯಾವತ್ತಿದ್ದೆ ?'

ವಕೀಲರು : 'ವಾಹ್ ! ಆಗ್ಲೂ–ಈಗ್ಲೂ ಎಷ್ಟು ಇಳಿದು ಹೋಗಿದೆ ನಿನ್ನ ಮೈ ! ಇಷ್ಟಾದರೂ ಏನು ಆಗಿಲ್ಲ, ಸರಿಯಾಗಿದೆ ಅಂತ ಹೇಳ್ತಿದ್ದೀಯಾ ? ಏನಕ್ಕಾ, ಇವನು ಮೊದಲು ಹೀಗೆಯೇ ಇದ್ದನಾ ?'

ರುಕ್ಮಿಣಿ ಮನೆಯ ಅಂಗಳದಲ್ಲಿದ್ದ ತುಳಸಿ ಗಿಡಕ್ಕೆ ನೀರು ಹಾಕುತ್ತಿದ್ದರು. ಹೇಳಿದರು– 'ಸಣ್ಣಗೆ ಏಕೆ ಆಗಿದ್ದಾನೆ ? ಈಗಂತೂ ತುಂಬಾ ಚೆನ್ನಾಗಿಯೇ ಇವನ ಲಾಲನೆ–ಪೋಷಣೆ ಆಗುತ್ತಿದೆಯಲ್ಲಾ ? ನಾನು ಹೇಳಿ–ಕೇಳಿ ಗುಗ್ಗು, ಮಕ್ಕಳನ್ನು ಹೇಗೆ ಸಾಕಬೇಕು ಅಂತ ಗೊತ್ತಿರಲಿಲ್ಲ. ಅದು–ಇದು ಅಂತ ತಿನ್ನಿಸಿ ಇವರನ್ನ ಹಾಳು ಮಾಡಿದ್ದೆ. ಈಗ ಓದಿ–ಬರೆದಿರೋ, ಮನೆಗೆಲಸದಲ್ಲಿ ಬುದ್ಧಿವಂತಳಾದ ಹೆಂಗಸು ಮನೆಗೆ ಬಂದಿದ್ದಾಳಲ್ಲ ! ಇವಳ ಶತ್ರುಗಳು ಬಡಕಲಾಗಿರಬೇಕಷ್ಟೆ'

ವಕೀಲರು : 'ಅಕ್ಕ, ನಿನಗೆ ಯಾರು ಹೇಳಿದರು ನೀನು ಮಕ್ಕಳನ್ನು ಹಾಳು ಮಾಡ್ತಿದ್ದೀಯಾ ಅಂತ ? ಬೇರೆಯವರ ಕೈಲಿ ಆಗದಿದ್ದ ಕೆಲಸಗಳನ್ನು ನೀನು ಸ್ವತಃ ಮಾಡಬೇಕು. ಮನೇಲಿ ಏನ್ ಆಗ್ತಿದೆ. ಮಕ್ಕಳು ಹೇಗೆ ಬೆಳೀತಿದ್ದಾರೆ ಅನ್ನೋದನ್ನ ನೀನು ನೋಡಿಕೋ ಬೇಡವೇನು ? ಆಕೆ ಇನ್ನೂ ಹುಡುಗಿ. ಪಾಪ, ಆಕೆ ಈ ಮಕ್ಕಳನ್ನು ಏನು ನೋಡಿಕೋಬಲ್ಲಳು ! ಇವರನ್ನು ನೋಡಿಕೊಳ್ಳೋದು ನಿನ್ನ ಕೆಲಸ'

ರುಕ್ಮಿಣಿ : 'ನನ್ನದು–ತನ್ನದು ಅನ್ನೋ ಭಾವನೆ ಇರುವವರೆಗೆ ನಾನು ನೋಡಿಕೊಂಡೆ. ಈಗ ನೀನು ನನ್ನನ್ನು ಯಾರು ಅಂತ ಕೇಳ್ತಿದ್ದೀಯಾ ಅಂದ ಮೇಲೆ ನಿನ್ನ ದುಂಬಾಲು ಬಿದ್ದು ಬೇಡಿಕೊಳ್ಳೋದು ನನಗ್ಯಾಕೆ ಬೇಕು ? ಹಾಲು ಕುಡಿದು ಎಷ್ಟು ದಿನಗಳಾದವು ಅಂತ ಕೇಳು ಇವನಿಗೆ ? ರೂಮಿಗೆ ಹೋಗಿ ನೀನೇ ನೋಡಿಕೊಂಡು ಬಾ, ತಿಂಡಿಗೆ ಅಂತ ಕಳಿಸಿದ ಸಿಹಿ ತಿಂಡಿಗಳು ಇಟ್ಟ ಜಾಗದಲ್ಲೇ ಕೊಳೆಯುತ್ತಾ ಬಿದ್ದಿವೆ. ಆ ಯಜಮಾನಿತಿ ಏನು ಹೇಳ್ತಾಳೆ ಗೊತ್ತಾ ? ತಿಂಡಿಗೆ ಅಂತ ನಾನು ಇಡೋದು ಇಟ್ಟಿದ್ದೀನಿ, ಯಾರು ತಿಂದರೆಷ್ಟು, ಬಿಟ್ಟರೆಷ್ಟು ? ನಾನು ಈ ಹುಡುಗರ ಬಾಯಿಗೆ ಇಡಬೇಕಾ ಅಂತ ಕೇಳ್ತಾಳೆ. ಎಂದೂ ಪ್ರೀತಿ–ಪ್ರೇಮ ಕಾಣದ ಮಕ್ಕಳು ಈ ರೀತಿ ಬೆಳೆಯಬಹುದು. ನಿನ್ನ ಮಕ್ಕಳು ಈಗ ತರಗೆಲೆಗಳಂತಾಗಿದ್ದಾರೆ. ಅನಾಥರಂತಿರುವ ಇವರು ಎಂದೂ ಸುಖವಾಗಿರುವುದಿಲ್ಲ. ನಾನು ಕಡ್ಡಿ ಎರಡು ತುಂಡು ಮಾಡಿದಂತೆ ಮಾತನಾಡ್ತೀನಿ. ಯಾರು ತಪ್ಪು ತಿಳಿದುಕೊಂಡರೆ ನನಗೇನು ಮಾಡ್ಕೋತಾರೆ ? ನಿನ್ನೆ–ಮೊನ್ನೆ ಒಂದು ಮಾತು ಕೇಳಿದೆ. ನೀನು ಇವನನ್ನು ಬೋರ್ಡಿಂಗ್‌ನಲ್ಲಿಡೋದಕ್ಕೆ ಯೋಚಿಸುತ್ತಿದ್ದೀಯಂತೆ ! ಪಾಪ, ಈ ಬಡಪಾಯಿ ಇನ್ನು ಮುಂದೆ ಮನೇಗೂ ಬರುವಂತಿಲ್ಲ. ನನ್ನ ಹತ್ತಿರ ಬರೋದಕ್ಕೂ

ಹೆದರ್ಕೋತಾನೆ. ಅಷ್ಟಕ್ಕೂ ನನ್ನ ಹತ್ತಿರ ಏನಿದೆ ಅಂತ ಬರ್ತಾನೆ ಹೇಳು–ತಿನ್ನೋದಕ್ಕೆ–ಕುಡಿಯೋದಕ್ಕೆ ಕೊಡಲು ?'

ಅಷ್ಟರಲ್ಲಿ ಮಂಸಾರಾಮ ಎರಡು ತುತ್ತು ತಿಂದು ಎದ್ದು ನಿಂತ. ವಕೀಲರು ಕೇಳಿದರು–'ಊಟಕ್ಕೆ ಕುಳಿತು ಒಂದು ನಿಮಿಷವೂ ಆಗಿಲ್ಲ. ಅಗಲೇ ನಿನ್ನ ಊಟ ಮುಗೀತೇನು ? ನೀನು ಏನ್ ತಿಂದೆ ? ಎರಡು ಚೂರು ರೊಟ್ಟಿ ಸಾಕಾಯಿತಾ ?'

ಮಂಸಾರಾಮ ಸಂಕೋಚದಿಂದ ಹೇಳಿದ– 'ತಿಂದೆನಲ್ಲ ? ಪಲ್ಯಾನೂ ಇತ್ತು. ಹೆಚ್ಚು ತಿಂದರೆ ಗಂಟಲಲ್ಲಿ ಉರಿ ಶುರುವಾಗುತ್ತೆ. ಹುಳಿ ತೇಗುಗಳು ಬರುತ್ತವೆ.'

ವಕೀಲರು ಊಟ ಮಾಡಿ ಎದ್ದಾಗ ತುಂಬಾ ಚಿಂತಾಕ್ರಾಂತರಾಗಿದ್ದರು. ಇವನು ಇದೇ ರೀತಿ ದಿನೇ ದಿನೇ ಕೃಶನಾಗುತ್ತ ಹೋದನೆಂದರೆ ಯಾವುದಾದರೊಂದು ಭಯಂಕರ ಖಾಯಿಲೆಗೆ ತುತ್ತಾಗುತ್ತಾನೆ, ಎಂದಂದುಕೊಂಡರು.

ಈಗ ಅವರಿಗೆ ರುಕ್ಮಿಣಿಯ ಮೇಲೆ ಅಗಾಧವಾದ ಕೋಪ ಬರುತ್ತಿತ್ತು. ತಾನು ಮನೆಯ ಯಜಮಾನಿತಿಯಾಗಲು ಯಾವ ಅಧಿಕಾರವಿದೆ ಎಂಬುದನ್ನು ಈಕೆ ಯೋಚಿಸುತ್ತಿಲ್ಲ. ಕೊಟ್ಟ ಹಣವನ್ನು ಎಣಿಸಲಿಕ್ಕೆ ಬರದಿದ್ದರೂ ಮನೆಯ ಯಜಮಾನಿಕೆ ಮಾತ್ರ ಈಕೆಗೆ ಬೇಕು. ಇಷ್ಟು ದಿನ ಈಕೆ ತಾನೇ ಯಜಮಾನಿ ಆಗಿದ್ದದ್ದು ? 'ಒಂದು ಪೈಸೆಯನ್ನೂ ಈಕೆ ಉಳಿತಾಯ ಅಂತ ಮಾಡಲಿಲ್ಲ. ಇಷ್ಟೇ ಆದಾಯದಲ್ಲಿ ರೂಪಕಲಾ ಇನ್ನೂರು– ಇನ್ನೂರೈವತ್ತು ಉಳಿಸುತ್ತಿದ್ದಳು. ಇವಳ ರಾಜ್ಯಭಾರದಲ್ಲಿ ಈ ಆದಾಯ ಖರ್ಚಿಗೂ ಸಾಕಾಗುತ್ತಿರಲಿಲ್ಲ. ಇದು ಹೋಗಲಿ ಅಂದ್ರೆ ಈಕೆಯ ಅತಿ ಪ್ರೀತಿ ಈ ಹುಡುಗರನ್ನು ಹಾಳುಮಾಡಿತು. ಇಷ್ಟು ದೊಡ್ಡ–ದೊಡ್ಡ ಹುಡುಗರಿಗೂ ಕೈಯಿಂದ ತಿನ್ನಿಸಬೇಕೇನು ? ಕೊಟ್ಟಿದ್ದು–ಇಟ್ಟಿದ್ದು ತಿನ್ನಲಿಕ್ಕಾಗುವುದಿಲ್ಲವೇನು ? ಈ ಹುಡುಗರೂ ಅಷ್ಟೆ ತಮ್ಮ ಹೊಟ್ಟೆ ತಾವು ನೋಡಿಕೋಬೇಕು. ವಕೀಲರು ಇಡೀ ದಿನ ಇದೇ ಚಿಂತೆಯಲ್ಲಿದ್ದರು. ಇಬ್ಬರು–ಮೂವರು ಮಿತ್ರರೊಂದಿಗೂ ಇದರ ಪ್ರಸ್ತಾಪ ಮಾಡಿದರು. ಆಗ ಅವರು ಹೇಳಿದರು– 'ಮಂಸಾರಾಮ ಆಟಕ್ಕೆ ಹೋಗದಂತೆ ತಡೆಯಬೇಡಿ, ಈಗಿಲಿಂದಲೇ ಅವನನ್ನು ಕೈದಿಯಂತೆ ಬಂಧನದಲ್ಲಿಡಬೇಡಿ. ಹೀಗೆ ಬಂಧನದಲ್ಲಿಟ್ಟರೆ ಅವನು ಕೆಡುವ ಸಾಧ್ಯತೆ ಹೆಚ್ಚಿಗೆ ಇರುತ್ತದೆಯೇ ಹೊರತಾಗಿ, ಹೊರಗಡೆ ಸುತ್ತಾಡಿಕೊಂಡು ಇರುವುದರಿಂದ ಕೆಡುವ ಸಾಧ್ಯತೆ ಕಡಿಮೆಯಿರುತ್ತದೆ. ಕೆಟ್ಟ ಸಂಗವನ್ನು ತಪ್ಪಿಸಿ, ಆದರೆ ಮನೆಯಿಂದ ಹೊರಗಡೆ ಹೋಗದಂತೆಯೇ ತಡೆಯುವುದು ತಪ್ಪಾಗುತ್ತದೆ. ಯೌವನದಲ್ಲಿ ಏಕಾಂತದ ಬದುಕು ಅವನ ಚಾರಿತ್ರ್ಯದ ವಿಕಾಸದಲ್ಲಿ ಅಡ್ಡಿಯುಂಟುಮಾಡುತ್ತದೆ.' ಈಗ ವಕೀಲರಿಗೆ ತಮ್ಮ ತಪ್ಪಿನ ಅರಿವಾಯಿತು. ಮನೆಗೆ ಬಂದು ಮಂಸಾರಾಮನ ಬಳಿ ಹೋದರು. ಇವನು ಅದಾಗ ತಾನೇ ಸ್ಕೂಲಿನಿಂದ ಬಂದಿದ್ದ. ಬಂದವನೇ ಬಟ್ಟೆಗಳನ್ನೂ ಬಿಚ್ಚದೆ ಕುರ್ಚಿಯಲ್ಲಿ ಕುಳಿತು, ಎದುರಿಗೆ ಒಂದು ಪುಸ್ತಕವನ್ನು ತೆರೆದಿಟ್ಟುಕೊಂಡು ಎದುರಿಗಿದ್ದ ಕಿಟಕಿಯ ಮೂಲಕ ಹೊರಗೆ ನೋಡುತ್ತಿದ್ದ. ಅವನು ನೋಡುತ್ತಿದ್ದುದ್ದು ಒಬ್ಬ ಭಿಕ್ಷುಕಿಯನ್ನು. ಆಕೆ ತನ್ನ ಮಗುವನ್ನು ಕಂಕುಳಲ್ಲಿ ಎತ್ತಿಕೊಂಡು ಭಿಕ್ಷೆ ಬೇಡುತ್ತಿದ್ದಳು. ತನ್ನ ತಾಯಿಯ

ಕಂಕುಳಲ್ಲಿ ಕುಳಿತಿದ್ದ ಮಗು ಎಷ್ಟು ಸಂತೋಷವಾಗಿತ್ತೆಂದರೆ, ಯಾವುದೋ ರಾಜ ಸಿಂಹಾಸನದ ಮೇಲೆ ಕುಳಿತಷ್ಟು ಖುಷಿಯನ್ನು ಅದು ಅನುಭವಿಸುತ್ತಿತ್ತು. ಮಂಸಾರಾಮ ಆ ಮಗುವನ್ನು ನೋಡಿ ಅಳಲಾರಂಭಿಸಿದ. ಆ ಮಗು ನನಗಿಂತಲೂ ಹೆಚ್ಚು ಸುಖಿಯಾಗಿಲ್ಲವೇನು ? ಇಷ್ಟು ಸಂತೋಷವನ್ನು ನೀಡುವ ತಾಯಿಯ ಮಡಿಲಿಗಿಂತ ಮಿಗಿಲಾದಂಥ ವಸ್ತು ಈ ಅನಂತ ವಿಶ್ವದಲ್ಲಿ ಬೇರೆ ಏನಾದರೂ ಇದೆಯೇ ? ಪರಮಾತ್ಮನು ಸಹ ಬೇರೊಂದನ್ನು ಸೃಷ್ಟಿ ಮಾಡಿರಲಾರ. ಮಾತೃ–ವಿಯೋಗವನ್ನು ಅನುಭವಿಸಬೇಕಾಗಿ ಬರುವ ಮಕ್ಕಳನ್ನು ಆ ಪರಮಾತ್ಮ ಏಕಾದರೂ ಸೃಷ್ಟಿಸಬೇಕು ? ಇವತ್ತು ನನಗಿಂತಲೂ ನತದೃಷ್ಟ ಬೇರೆ ಯಾರಾದರೂ ಉಂಟೇನು ? ನಾನು ಉಂಡೆನೋ ಬಿಟ್ಟೆನೋ ? ಸತ್ತೆನೋ–ಬದುಕಿದೆನೋ ಎಂಬುದನ್ನು ಯಾರು ಕೇಳುತ್ತಾರೆ ? ಇವತ್ತು ನಾನು ಸತ್ತರೂ ಯಾವ ಹೃದಯ ನನಗಾಗಿ ಪರಿತಪಿಸುತ್ತೆ ? ನಾನು ಅಳುವುದನ್ನು ನೋಡಿ ಅಪ್ಪ ಸಂತೋಷ ಪಡುತ್ತಿದ್ದಾರೆ. ಅವರು ನನ್ನ ಮುಖವನ್ನು ನೋಡಲು ಸಹ ಇಷ್ಟ ಪಡುತ್ತಿಲ್ಲ. ನನ್ನನ್ನು ಮನೆಯಿಂದಾಚೆಗೆ ಅಟ್ಟುವ ಸಿದ್ಧತೆಗಳಾಗುತ್ತಿವೆ– ಅಯ್ಯೋ ಅಮ್ಮಾ ! ನಿನ್ನ ಈ ಪ್ರೀತಿಯ ಮಗನನ್ನು ಅಪ್ಪ ಇವತ್ತು ಆವಾರ ಅಂತ ಕರೆಯುತ್ತಿದ್ದಾರೆ ! ಈ ಮೂರು ಜನ ಅಣ್ಣ– ತಮ್ಮಂದಿರನ್ನು ಯಾರ ಕೈಗಿಟ್ಟೆಯೋ, ಆ ತಂದೆಯೇ ನನ್ನನ್ನು ಆವಾರ ಮತ್ತು ಬದ್‌ಮಾಶ್ ಅಂತ ಬೈಯುತ್ತಿದ್ದಾರೆ. ಈ ಮನೆಯಲ್ಲಿರದಷ್ಟು ಅಯೋಗ್ಯ ನಾನಾಗಿ ಹೋದೆ–ಎಂದೆಲ್ಲ ಯೋಚಿಸುತ್ತ–ಯೋಚಿಸುತ್ತ ಮಂಸಾರಾಮ ಅಪಾರ ದುಃಖದಿಂದ ಬಿಕ್ಕಳಿಸಿ–ಬಿಕ್ಕಳಿಸಿ ಅಳಲಾರಂಭಿಸಿದ.

ಆ ಸಮಯಕ್ಕೆ ಸರಿಯಾಗಿ ತೋತಾರಾಮ ರೂಮಿನೊಳಗಡೆ ಬಂದರು. ಮಂಸಾರಾಮ ಆತುರಾತುರವಾಗಿ ಕಣ್ಣೀರನ್ನು ಒರೆಸಿಕೊಂಡು ತಲೆ ತಗ್ಗಿಸಿ ನಿಂತುಕೊಂಡ. ಬಹುಶಃ ತೋತಾರಾಮ ಇದೇ ಮೊದಲ ಸಾರಿ ಅಂತ ಕಾಣುತ್ತೆ – ಮಂಸಾರಾಮನ ರೂಮಿಗೆ ಬಂದದ್ದು. ಇವತ್ತೇನು ಕಷ್ಟ ಬಂತಪ್ಪ ಎಂದು ಮಂಸಾರಾಮನ ಹೃದಯ ಡಬಡಬ ಎಂದು ಹೊಡೆದುಕೊಳ್ಳಲಾರಂಭಿಸಿತು. ಅವನು ಅಳುತ್ತಿದ್ದುದನ್ನು ನೋಡಿದ ವಕೀಲರ ಹೃದಯದ ವಾತ್ಸಲ್ಯ ಒಮ್ಮೆಗೇ ಜಾಗೃತಗೊಂಡಿತು. 'ಗಾಬರಿಯಿಂದಲೇ ಏಕೆ......ಏಕೆ ಅಳುತ್ತಿದ್ದೀಯಾ ಮಗು ? ಯಾರಾದರೂ ಏನನ್ನಾದರೂ ಅಂದರೇನು ?' ಎಂದು ಪ್ರಶ್ನಿಸಿದರು.

ಮಂಸಾರಾಮ ತುಂಬಾ ಕಷ್ಟಪಟ್ಟು ಉಕ್ಕಿ ಬರುತ್ತಿದ್ದ ಅಳುವನ್ನು, ಕಣ್ಣೀರನ್ನು ತಡೆದುಕೊಂಡು 'ಇಲ್ಲವಲ್ಲ, ಅಳ್ತಾ ಇಲ್ಲವಲ್ಲ ಅಪ್ಪಾಜಿ.......' ಅಂದ.

ತೋತಾರಾಮ : 'ನಿಮ್ಮ ಅಮ್ಮ ಏನೂ ಅನ್ನಲಿಲ್ಲ ತಾನೇ ?'

ಮಂಸಾರಾಮ : 'ಇತ್ತೀಚೆಗೆ ಎಷ್ಟೋ ತಿಂಗಳಿಂದ ಮಾತನಾಡುತ್ತಿಲ್ಲ.'

ತೋತಾರಾಮ : 'ವಿಚಿತ್ರ ಸ್ವಭಾವದ ಹೆಂಗಸು ಆಕೆ. ಅವಳಿಗೆ ಏನ್ ಬೇಕು ಅಂತಾನೇ ನನಗೆ ಅರ್ಥವಾಗುವುದಿಲ್ಲ. ಅವಳ ಸ್ವಭಾವ ಇಂಥಾದ್ದು ಅಂತ ಗೊತ್ತಿದ್ದರೆ ಎಂದಿಗೂ ನಾನು ಮದುವೆ ಮಾಡಿಕೊಳ್ಳುತ್ತಿರಲಿಲ್ಲ. ದಿನವೂ ಒಂದಲ್ಲ ಒಂದು ಮಾತು ತಗೊಂಡು

ರಾದ್ಧಾಂತ ಮಾಡ್ತಾಳೆ. ನೀನು ಹಗಲೆಲ್ಲ ಎಲ್ಲಿ ಸುತ್ತುವುದಕ್ಕೆ ಹೋಗ್ತಿಯೊ ಏನೋ ಅಂತ ಆಕೆನೇ ನನಗೆ ಹೇಳಿದ್ದು. ಅವಳ ಅಂತರಂಗ ನನಗೆ ಹೇಗೆ ಗೊತ್ತಾಗಬೇಕು ಹೇಳು ? ಆಗ ನೀನು ಕೆಟ್ಟ ಸಂಗಾತಿಗಳ ಜೊತೆ ಸೇರಿ ಹಗಲೆಲ್ಲ ಯಾರ್‍ಯಾರ ಜೊತೆಯೋ ಸುತ್ತುತ್ತಿರಬೇಕು ಅಂತ ನಾನು ತಿಳ್ಕೊಂಡೆ. ನನ್ನ ಮಗ ಅಲ್ಲಂಡೆ ತರಹ ಹಗಲೆಲ್ಲ ಅಲೆಯುವುದನ್ನು ನೋಡಿಕೊಂಡು ಸುಮ್ಮನಿರುವಂಥ ತಂದೆ ಎಲ್ಲಿಯಾದರೂ ಉಂಟೇನು ? ಹೀಗಾಗಿ ನಾನು ನಿನ್ನನ್ನು ಬೋರ್ಡಿಂಗ್ ಹೌಸ್‌ನಲ್ಲಿಡಲು ನಿಶ್ಚಯಿಸಿದೆ. ನಡೆದದ್ದಿಷ್ಟು ಮಗು, ನಾನು ನೀನು ಆಟಕ್ಕೆ ಹೋಗುವುದನ್ನು ತಡೆಯಲಿಲ್ಲ. ಇವತ್ತು, ನಿನ್ನ ಈ ಅವಸ್ಥೆಯನ್ನು ನೋಡಿ ನನ್ನ ಕರುಳು ಕಿತ್ತು ಬರುತ್ತಿದೆ. ನಿನ್ನೆಯವರೆಗೂ ನಾನು ಭ್ರಮೆಯಲ್ಲಿದ್ದೆ ಎಂದು ನನಗನ್ನಿಸುತ್ತಿದೆ. ಇವತ್ತಿನಿಂದ ನೀನು ಮುಂಚಿನಂತೆ ಖುಷಿಯಿಂದ ಆಟ ಆಡು, ಬೆಳಿಗ್ಗೆ ಸಂಜೆ ಮೈದಾನಕ್ಕೆ ಹೋಗಿ ಜೊತೆಗಾರರ ಜೊತೆ ಕಸರತ್ತು ಮಾಡು, ಅಡ್ಡಾಡು, ಒಳ್ಳೆಯ ಗಾಳಿ ಸೇವನೆಯಿಂದ ದೇಹಕ್ಕೆ ಒಳ್ಳೆಯದಾಗುತ್ತೆ. ನಿನಗೆ ಏನು ಬೇಕಿದ್ದರೂ ನನಗೆ ಹೇಳು. ಅವರ್‍ಯಾರಿಗೂ ಹೇಳುವ ಆವಶ್ಯಕತೆ ಇಲ್ಲ. ಅವಳು ಮನೇಲಿ ಇಲ್ಲವೇ ಇಲ್ಲ ಅಂತ ತಿಳ್ಕೊ. ನಿನ್ನ ಅಮ್ಮ ನಿಮ್ಮನ್ನೆಲ್ಲ ಬಿಟ್ಟು ಹೋದರೂ ನಾನಿದ್ದೀನಲ್ಲ !'

ಆ ಹುಡುಗನ ಸರಳ ನಿಷ್ಕಪಟ ಹೃದಯ ತಂದೆಯ ವಾತ್ಸಲ್ಯದಿಂದಾಗಿ ಪುಲಕಿತಗೊಂಡಿತು. ಸಾಕ್ಷಾತ್ ಪರಮೇಶ್ವರನೇ ಎದುರಿಗೆ ನಿಂತಿದ್ದಾನೆ ಎಂದು ಇವನಿಗನ್ನಿಸಿತು. ನಿರಾಶೆ ಮತ್ತು ಕ್ಷೋಭೆಯಿಂದಾಗಿ ಮಂಸಾರಾಮ ತನ್ನ ತಂದೆಯ ಬಗೆಗೆ ಏನೇನೆಲ್ಲ ಯೋಚಿಸಿದ. ತನ್ನ ಮಲತಾಯಿಯ ಬಗ್ಗೆ ಇವನ ಮನಸ್ಸಿನಲ್ಲಿ ಈವರೆಗೆ ಯಾವುದೇ ದೂರಿರಲಿಲ್ಲ. ಆದರೆ ಇವತ್ತು ತನ್ನ ದೇವತಾ ಸಮಾನರಾದ ತಂದೆಯ ಬಗೆಗೆ ಎಷ್ಟು ಕಠಿಣವಾಗಿ ಯೋಚಿಸಿದೆ. ಅವನ ಹೃದಯದಲ್ಲಿ ಪಿತೃಭಕ್ತಿಯ ಅಲೆಯೊಂದು ಸಂಚರಿಸಿದಂತಾಗಿ ಕೂಡಲೇ ಅವರ ಪಾದಗಳ ಮೇಲೆ ತಲೆಯಿಟ್ಟು ಅಳಲಾರಂಭಿಸಿದ, ವಕೀಲರ ಹೃದಯ ಕರುಣೆಯಿಂದ ತುಂಬಿ ಬಂತು. ಈ ಮಗು ಒಂದು ಕ್ಷಣ ಕಣ್ಣಿನಿಂದ ಮರೆಯಾದರೂ ಅವರು ಚಡಪಡಿಸುತ್ತಿದ್ದರು. ಇವನ ಚಾರಿತ್ರ್ಯ, ಬುದ್ಧಿವಂತಿಕೆ, ಸ್ವಭಾವವನ್ನು ಕುರಿತಂತೆ ಕಂಡವರ ಬಳಿಯೆಲ್ಲ ಹೊಗಳುತ್ತಿದ್ದರು. ಇವತ್ತು ಅದೇ ಮಗನ ಬಗ್ಗೆ ಅವರ ಹೃದಯ ಇಷ್ಟು ಕಠೋರವಾದದ್ದಾದರೂ ಹೇಗೆ ? ಅವರು ತಮ್ಮ ಪ್ರೀತಿಯ ಮಗನನ್ನೇ ಶತ್ರುವೆಂದು ಭಾವಿಸಿದರು. ಮನೆಯಿಂದ ಹೊರಗೆ ಅಟ್ಟಲು ಸಿದ್ಧವಾದರು. ನಿರ್ಮಲಾ ತಂದೆ ಮತ್ತು ಮಗನ ಮಧ್ಯೆ ಗೋಡೆಯಾಗಿ ನಿಂತಿದ್ದಳು. ನಿರ್ಮಲಾಳನ್ನು ತನ್ನತ್ತ ಆಕರ್ಷಿಸಿಕೊಳ್ಳಲು ಅವರು ಏನು ಬೇಕಾದರೂ ಮಾಡಲು ಸಿದ್ಧರಿದ್ದರು. ಹೀಗಾಗಿಯೇ ತಂದೆ–ಮಗನ ಮಧ್ಯೆ ಕಂದಕ ಹೆಚ್ಚಾಗುತ್ತಾ ಹೋಗುತ್ತಿತ್ತು, ಇದೆಲ್ಲದರ ಪರಿಣಾಮವೆಂದರೆ ತನ್ನ ಪ್ರೀತಿಯ ಮಗನೊಂದಿಗೆ ಇಷ್ಟೆಲ್ಲಾ ಆಟವಾಡಬೇಕಾಗಿ ಬಂದಿದೆ. ಇವತ್ತು ಬಹಳಷ್ಟು ಯೋಚಿಸಿದ ನಂತರ ಅವರಿಗೆ ಒಂದು ಉಪಾಯ ಹೊಳೆದಿದ್ದು. ಅದರಂತೆ ತಂದೆ–ಮಗನ ಮಧ್ಯದಿಂದ ನಿರ್ಮಲಾಳನ್ನು ಹೊರದೂಡಿ, ತನ್ನ ಪ್ರೀತಿ ಪಾತ್ರರಾದ ಮಕ್ಕಳನ್ನು

ತಮ್ಮೆಡೆಗೆ ಸೆಳೆದುಕೊಳ್ಳಬೇಕು. ಇದು ಸಾಧ್ಯವಾಗುವುದೆ ? ಅವರು ಈ ಉಪಾಯವನ್ನು ಕಾರ್ಯಗತಗೊಳಿಸುವ ಪ್ರಯತ್ನವನ್ನೂ ಪ್ರಾರಂಭಿಸಿದರು. ಆದರೆ ಇದರಲ್ಲಿ ಅವರಿಗೆ ಯಶಸ್ಸು ಸಿಗುವುದೋ ಇಲ್ಲವೋ ಕಂಡವರಾರು ?

ಮಂಸಾರಾಮನನ್ನು ಬೋರ್ಡಿಂಗ್ ಹೌಸ್‌ಗೆ ಸೇರಿಸುವುದು ಬೇಡ ಎಂದು ಆವತ್ತು ಅದೆಷ್ಟು ಬೇಡಿಕೊಂಡರೂ, ಅದನ್ನೆಲ್ಲ ತಿರಸ್ಕರಿಸಿ ತೋತಾರಾಮರು ತಾವು ಮಾಡಿದ್ದೇ ಮಾಡಿದ್ದು ಎಂದು ನಿಶ್ಚಯಿಸಿದ ದಿನದಿಂದ ನಿರ್ಮಲಾ ಮಂಸಾರಾಮನಿಂದ ಪಾಠ ಹೇಳಿಸಿಕೊಳ್ಳುವುದನ್ನು ಬಿಟ್ಟು ಬಿಟ್ಟಳು. ಅವನೊಡನೆ ಮಾತನಾಡುವುದನ್ನೂ ನಿಲ್ಲಿಸಿದಳು. ತನ್ನ ಗಂಡ ನಮ್ಮಿಬ್ಬರ ಬಗ್ಗೆ ಅನುಮಾನ ಪಡುತ್ತಿದ್ದಾರೆ ಎಂಬುದರ ಆಭಾಸ ಅವಳಿಗಾಗತೊಡಗಿತ್ತು. ಓಹ್ ! ಈ ಮಟ್ಟದ ಅನುಮಾನ ! ಈ ಮನೆಯನ್ನು ಇನ್ನು ದೇವರೇ ಕಾಪಾಡಬೇಕು. ಇವರ ಮನಸ್ಸಿನಲ್ಲಿ ಈ ರೀತಿಯ ದುರ್ಭಾವನೆಗಳು ತುಂಬಿಕೊಂಡಿವೆಯಾ ! ನಾನು ಇಷ್ಟು ಕೆಟ್ಟವಳು ಎಂದು ಭಾವಿಸಿದ್ದಾರೇನು ?– ಹೀಗೆಲ್ಲ ಯೋಚಿಸಿ ನಿರ್ಮಲಾ ಎಷ್ಟೋ ದಿನಗಳವರೆಗೆ ಅಳುತ್ತಿದ್ದಳು. ನಂತರ, ಇವರ ಮನಸ್ಸಿನಲ್ಲಿ ಈ ಬಗೆಯ ಸಂಶಯ, ಅನುಮಾನ ಉಂಟಾಗಲು ಕಾರಣವೇನು ಎಂದು ಚಿಂತಿಸಲಾರಂಭಿಸಿದಳು. ಅವರ ಕಣ್ಣು ಕುಕ್ಕುವಂಥಾದ್ದು ನನ್ನಲ್ಲೇನಿದೆ. ಎಷ್ಟು ಯೋಚಿಸಿದರೂ ಅವಳಿಗೆ ತನ್ನಲ್ಲಿ ಏನೂ ದೋಷ ಕಾಣಲಿಲ್ಲ. ಮಂಸಾರಾಮನಿಂದ ಪಾಠ ಹೇಳಿಸಿಕೊಳ್ಳುವುದು, ಅವನೊಂದಿಗೆ ಮಾತನಾಡುವುದು ಅವರ ಸಂದೇಹ, ಅನುಮಾನಕ್ಕೆ ಕಾರಣವಾಗಿದ್ದರೆ, ಅವನಿಂದ ಪಾಠ ಹೇಳಿಸಿಕೊಳ್ಳುವುದನ್ನೇ ಬಿಟ್ಟುಬಿಡುತ್ತೇನೆ. ಅವನ ಮುಖ ದರ್ಶನವನ್ನೂ ಮಾಡುವುದಿಲ್ಲ ಎಂದು ತೀರ್ಮಾನಿಸಿದಳು.

ಆದರೆ ಹೀಗೆ ಮಾಡುವುದು ತುಂಬಾ ಕಷ್ಟವೆಂದು ಅವಳಿಗೆ ಅನ್ನಿಸುತ್ತಿತ್ತು. ಮಂಸಾರಾಮನೊಡನೆ ಮಾತನಾಡುವುದು, ನಗುವುದು, ತಮಾಷೆಯಿಂದಿರುವುದರಲ್ಲಿ ಇವಳಿಗೆ ಒಂದು ಬಗೆಯ ಸಂತೋಷ ಕಾಣುತ್ತಿತ್ತು. ಅತೃಪ್ತ ಮನಸ್ಸು ತೃಪ್ತಗೊಂಡಂಥ ಅನುಭವವಾಗುತ್ತಿತ್ತು. ಅವನೊಂದಿಗೆ ಮಾತನಾಡುವಾಗ ಅವಳಿಗೆ ಅಪಾರ ಸುಖ ಸಿಕ್ಕಂಥ, ಶಬ್ದಗಳಲ್ಲಿ ವರ್ಣಿಸಲಾಗದಂತಹ ಅನುಭೂತಿಯಾದಂಥ ಅನುಭವವಾಗುತ್ತಿತ್ತು. ಆದರೆ ಅಲ್ಲಿ ಕಾಮದ ಲೇಶ ಮಾತ್ರ ಛಾಯೆಯೂ ಇರಲಿಲ್ಲ. ಆಕೆ ಕನಸಿನಲ್ಲೂ ಮಂಸಾರಾಮನೊಂದಿಗೆ ಅನೈತಿಕ ಪ್ರೇಮವನ್ನು ಬೆಳೆಸಿಕೊಳ್ಳುವುದರ ಬಗ್ಗೆ ಯೋಚಿಸಿದ್ದಿರಲಿಲ್ಲ. ಯಾವುದೇ ಪ್ರಾಣಿಗಾಗಲಿ ತನ್ನ ಸಮ ವಯಸ್ಕರೊಂದಿಗೆ ನಕ್ಕು–ನಲಿಯುವುದರಿಂದ ಒಂದು ಬಗೆಯ ನೈಸರ್ಗಿಕ ತೃಪ್ತಿ ಸಿಗುತ್ತದೆಯಲ್ಲ, ಅದು ನಿರ್ಮಲಾಳಿಗೆ ಮಂಸಾರಾಮನೊಡನೆಯ ಒಡನಾಟದಿಂದ ಸಿಗುತ್ತಿತ್ತು. ಈಗ ಆ ಅತೃಪ್ತ ಆಕಾಂಕ್ಷೆ ನಿರ್ಮಲಾಳ ಹೃದಯದಲ್ಲಿ ದೀಪದಂತೆ ಉರಿಯಲಾರಂಭಿಸಿತು. ಮತ್ತೆ ಮತ್ತೆ ಅವಳ ಮನಸ್ಸು ಅಜ್ಞಾತ ದುಃಖದಿಂದ ಚಡಪಡಿಸುತ್ತಿತ್ತು. ಕಳೆದುಕೊಂಡ ಯಾವುದೋ ವಸ್ತುವಿಗಾಗಿ ಹುಡುಕುತ್ತಿರುವವಳಂತೆ ಇಲ್ಲಿ–ಅಲ್ಲಿ ಓಡಾಡುತ್ತಿದ್ದಳು. ಕುಳಿತ ಜಾಗದಲ್ಲಿ ಕುಳಿತೇ ಬಿಡುತ್ತಿದ್ದಳು. ಯಾವ ಕೆಲಸದಲ್ಲೂ ಮನಸ್ಸು ತಲ್ಲೀನವಾಗುತ್ತಿರಲಿಲ್ಲ. ಅಂದಹಾಗೆ ವಕೀಲರು ಬಂದಾಗ ಮಾತ್ರ ತನ್ನೆಲ್ಲ ಆಕಾಂಕ್ಷೆಗಳನ್ನು

ನಿರಾಶೆಯಲ್ಲಿ ಮರೆ ಮಾಡಿಕೊಂಡು, ಮುಗುಳ್ನಗುತ್ತ ಅವರೊಂದಿಗೆ ಅದು–ಇದು ಮಾತುಗಳನ್ನಾಡುತ್ತಿದ್ದಳು.

ನಿನ್ನೆ ಏನಾಯಿತೆಂದರೆ, ವಕೀಲರು ಊಟಮಾಡಿಕೊಂಡು ಕಛೇರಿಗೆ ಹೊರಟು ಹೋದ ಮೇಲೆ ರುಕ್ಮಿಣಿ ನಿರ್ಮಲಾಳನ್ನು ತರಾಟೆಗೆ ತೆಗೆದುಕೊಂಡಳು– 'ಅಲ್ಲವೇ ಅಮ್ಮಣ್ಣಿ, ಈ ಮನೆಗೆ ಬಂದು ಇಲ್ಲಿ ಮಕ್ಕಳ ಲಾಲನೆ–ಪೋಷಣೆ ಮಾಡಬೇಕಾಗುತ್ತೆ ಅಂತ ಗೊತ್ತಿದ್ದರೂ, ಇಂಥ ಕಡೆ ಮದುವೆ ಬೇಡ ಅಂತ ನಿನ್ನ ಅಮ್ಮನಿಗೆ ಹೇಳಬೇಕಾಗಿತ್ತು. ಗಂಡನ ಹೊರತಾಗಿ ಬೇರೆ ಯಾರೂ ಇಲ್ಲದಿರುವ ಮನೆಯಲ್ಲಿ ಮದುವೆಯಾಗಬೇಕಿತ್ತು. ಅಲ್ಲಿ ಅವನು ನಿನ್ನ ಈ ಶೃಂಗಾರ, ರೂಪ, ವೈಯ್ಯಾರ, ಬಿನ್ನಾಣಗಳನ್ನು ನೋಡಿ ಸಂತೋಷ ಪಡುತ್ತಿದ್ದ. ತಾನು ಭಾಗ್ಯವಂತ ಎಂದು ಬೀಗುತ್ತಿದ್ದ. ಇಲ್ಲಿ ಈ ಮುದುಕ ನಿನ್ನ ರೂಪ, ಸೌಂದರ್ಯ ಹಾವ–ಭಾವಗಳನ್ನು ಕಟ್ಟಿಕೊಂಡು ಮುದ್ದಾಡ್ತಾನೇನು ? ಇವನು ಈ ಮಕ್ಕಳ ಸೇವೆ ಮಾಡಲಿಕ್ಕೆ ನಿನ್ನ ಮದುವೆ ಮಾಡಿಕೊಂಡನೇ ಸಿವಾಯ್ ನಿನ್ನೊಂದಿಗೆ ಭೋಗ–ವಿಲಾಸ ಮಾಡುವುದಕ್ಕೆ ಮದುವೆಯಾಗ್ಲಿಲ್ಲ.' ಅವಳು ಬಹಳ ಹೊತ್ತಿನವರೆಗೆ ನಿರ್ಮಲಾಳ ಗಾಯದ ಮೇಲೆ ಉಪ್ಪು ಸುರಿಯುತ್ತಲೇ ಇದ್ದಳು. ಆದರೆ ಈಕೆ ತುಟಿಕ್–ಪಿಟಿಕ್ ಅನ್ನಲಿಲ್ಲ. ಈಕೆ ತನ್ನ ಸ್ಪಷ್ಟೀಕರಣ ಕೊಡಬಯಸುತ್ತಿದ್ದಳು. ಆದರೆ ಕೊಡಲಿಲ್ಲ. ನನ್ನ ಗಂಡನ ಇಚ್ಛೆಯಂತೆಯೇ ನಾನು ಮಾಡುತ್ತಿದ್ದೇನೆ ಎಂದು ಹೇಳಿದ್ದರೆ ಮನೆಯ ಗುಟ್ಟು ರಟ್ಟಾಗುತ್ತದೆ. ಇಲ್ಲ, ತನ್ನ ತಪ್ಪು ಒಪ್ಪಿಕೊಂಡು ಅದನ್ನು ತಿದ್ದಿಕೊಂಡರೆ, ಅದರ ಪರಿಣಾಮ ಏನಾಗುವುದೋ ಎಂಬ ಭಯ ಕಾಡುತ್ತದೆ. ಹಾಗೆ ನೋಡಿದರೆ ನಿರ್ಮಲಾ ಕಡ್ಡಿ ಎರಡು ತುಂಡು ಮಾಡಿದ ಹಾಗೆ ಮಾತನಾಡುವವಳೇ, ಇದ್ದದ್ದನ್ನು ಇದ್ದಂತೆ ಹೇಳುವುದರಲ್ಲಿ ಅವಳಿಗೆ ಯಾವ ಸಂಕೋಚವಾಗಲಿ, ಭಯವಾಗಲಿ ಆಗುತ್ತಿರಲಿಲ್ಲ. ಆದರೆ ಇವತ್ತಿನ ಗಂಭೀರ ವಾತಾವರಣವನ್ನು ನೋಡಿ ಅವಳು ತುಟಿ ಬಿಚ್ಚದೆ ಸುಮ್ಮನಿದ್ದಳು. ಇದರ ಹೊರತಾಗಿ ಬೇರೆ ಮಾರ್ಗವೇ ಅವಳ ಮುಂದಿರಲಿಲ್ಲ. ಮಂಸಾರಾಮ ಇತ್ತೀಚೆಗೆ ತುಂಬ ವಿರಕ್ತನಂತಿದ್ದಾನೆ. ಬೇಸರದಿಂದ್ದಾನೆ, ದಿನೇ ದಿನೇ ಕೃಶವಾಗುತ್ತಾ ಹೋಗುತ್ತಿದ್ದಾನೆ. ನಿರ್ಮಲಾ ಇದನ್ನೆಲ್ಲ ಗಮನಿಸುತ್ತಿದ್ದಾಳೆ. ಆದರೆ ಅವಳು ಮಾತಿಗೆ ಮತ್ತು ಕ್ರಿಯೆಗೆ ಬೀಗ ಹಾಕಿ ಮೊಹರು ಹಾಕಿದ್ದಾಳೆ. ಕಳ್ಳನ ಮನೆಯಲ್ಲೇ ಕಳ್ಳತನವಾದರೆ, ಆ ಕಳ್ಳನ ಮನಸ್ಥಿತಿ ಹೇಗೆ ಇರುವುದೋ ಆ ರೀತಿ ಇದೆ ನಿರ್ಮಲಾಳ ಮನಸ್ಥಿತಿ.

# ಎಂಟು

ನಮ್ಮ ನಿರೀಕ್ಷೆಗೆ ವಿರುದ್ಧವಾಗಿ ಯಾವುದೇ ಒಂದು ಘಟನೆ ನಡೆದರೆ ಆಗ ನಮಗೆ ದುಃಖವಾಗುತ್ತದೆ. ನಿರ್ಮಲಾ ತನ್ನ ವಿರುದ್ಧ ತಂದೆಗೆ ಚಾಡಿ ಹೇಳುತ್ತಾಳೆ ಎಂದು ಮಂಸಾರಾಮ ನಿರೀಕ್ಷಿಸಿಯೇ ಇರಲಿಲ್ಲ. ಹೀಗಾಗಿ ಅವನು ತುಂಬ ದುಃಖದಿಂದ ನೋಯುತ್ತಿದ್ದ. ಆಕೆ ನನ್ನ ವಿರುದ್ಧ ಏಕಾದರೂ ಚಾಡಿ ಹೇಳಬೇಕು ? ಆಕೆಯ ಮನಸ್ಸಿನಲ್ಲಿರುವುದಾದರೂ ಏನು ? ಆಕೆಯ ಗಂಡನ ದುಡಿಮೆಯನ್ನು ನಾನು ತಿನ್ನುತ್ತಿದ್ದೇನೆಂದೆ ? ನನ್ನ ಓದು ಬರಹಕ್ಕೆಂದು ಹಣ ಖರ್ಚಾಗುತ್ತಿದೆಯೆಂದೆ ? ಒಳ್ಳೊಳ್ಳೆಯ ಬಟ್ಟೆಗಳನ್ನು ತೊಡುತ್ತಿದ್ದೇನೆ ಎಂದು ಆಕೆಗೆ ದುಃಖವಾಗುತ್ತಿದೆಯೇ ? ನಾನು ಮನೆಯಲ್ಲಿರಕೂಡದೆಂದು ಆಕೆಯ ಇಚ್ಛೆಯಿರಬಹುದೆ ? ನಾನು ಇಲ್ಲಿಂದ ಹೊರಟು ಹೋದನೆಂದರೆ ಆಕೆಯ ಹಣ ಆಕೆಗೇ ಉಳಿಯುತ್ತದೆ. ಆಕೆ ನನ್ನೊಂದಿಗೆ ಆತ್ಮೀಯವಾಗಿಯೇ ವ್ಯವಹರಿಸುತ್ತಿದ್ದಳು. ಆಕೆಯ ಬಾಯಿಂದ ಒಂದು ಕಟು ಶಬ್ದವನ್ನೂ ನಾನು ಕೇಳಿದ್ದಿಲ್ಲ. ಇದೆಲ್ಲ ಆಕೆಯ ಬುದ್ಧಿವಂತಿಕೆಯೇನು ? ಇದ್ದರೂ ಇರಬಹುದು, ಹಕ್ಕಿಗಳನ್ನು ತನ್ನ ಬಲೆಯೊಳಗೆ ಹಾಕಿಕೊಳ್ಳುವ ಮುನ್ನ ಕಾಳುಗಳನ್ನು ಹಾಕಿ ಅವಕ್ಕೆ ಆಸೆ ತೋರಿಸುವುದಿಲ್ಲವೆ ? ಹಾಗೆಯೇ ಆಗಿದೆ ನನ್ನ ಸ್ಥಿತಿ. ಓಹ್ ! ಈ ಕಾಳುಗಳ ಕೆಳಗೆ ಬಲೆ ಹಾಸಿದೆ ಎಂಬುದು ನನಗೆ ಗೊತ್ತಾಗಲಿಲ್ಲ. ಆ ಮಾತೃಸ್ನೇಹ ನನ್ನನ್ನು ನಿಷ್ಕಾಷಿಸಲು ರಚಿಸಿದ ಮುನ್ನುಡಿ ಎಂಬುದು ನನಗೆ ಅರ್ಥವಾಗಲಿಲ್ಲ.

ಆಯಿತು, ನಾನು ಈ ಮನೆಯಲ್ಲಿರುವುದರಿಂದ ಆಕೆಗೇನು ತೊಂದರೆ ? ಆಕೆಯ ಗಂಡ ನನಗೆ ತಂದೆಯೂ ಅಲ್ಲವೇನು ? ತಂದೆ–ಮಗನ ಸಂಬಂಧ ಗಂಡು ಹೆಣ್ಣಿನ ಸಂಬಂಧಕ್ಕಿಂತಲೂ ಕಡಿಮೆಯೇನು ? ಆಕೆ ತನಗೆ ಇಷ್ಟ ಬಂದದ್ದನ್ನು ಮಾಡಿಕೊಳ್ಳಲಿ. ತನ್ನ ಆಧಿಪತ್ಯವನ್ನು ತನ್ನ ಗಂಡನ ಮೇಲೆ ಸಂಪೂರ್ಣವಾಗಿ ಸ್ಥಾಪಿಸಿಕೊಳ್ಳಲಿ, ನನಗೇನೂ ತೊಂದರೆ ಇಲ್ಲ. ಆದರೆ ಆಕೆ ಪಿತೃ–ವಾತ್ಸಲ್ಯದಿಂದ ನನ್ನನ್ನು ಏಕೆ ವಂಚಿಸಿಟ್ಟಿರಲು ಬಯಸುತ್ತಾಳೆ ? ಆಕೆ ತನ್ನ ಸಾಮ್ರಾಜ್ಯದಲ್ಲಿನ ಒಂದಂಗುಲ ಭೂಮಿಯನ್ನು ಸಹ ನನಗೆ ಕೊಡಲು ಏಕೆ ಇಚ್ಛಿಸುತ್ತಿಲ್ಲ ? ತಾನು ಗಟ್ಟಿ ಅರಮನೆಯಲ್ಲಿದ್ದು ಕೊಂಡು ನಾನು ಮರದ ನೆರಳಿನಲ್ಲಿರುವುದನ್ನೂ ಆಕೆ ನೋಡಿ ಸಹಿಸುವುದಿಲ್ಲವೇಕೆ ?

ಹೀಗಿರಬಹುದು–ನಾನು ದೊಡ್ಡವನಾದ ಮೇಲೆ ಆಕೆಯ ಗಂಡನ ಆಸ್ತಿಗೆ ಅಧಿಕಾರಿಯಾಗಬಹುದು. ಆದ್ದರಿಂದಲೆ ಈಗಲೇ ಮನೆಯಿಂದ ಹೊರಗೆ ಅಟ್ಟಿದರೆ ಅನುಕೂಲ ಎಂದು ಆಕೆ ಯೋಚಿಸಿರಬಹುದು. ನನ್ನ ಬಗ್ಗೆ ಈ ರೀತಿ ಯೋಚಿಸಬೇಡಿ, ಯಾವುದೇ ಅನುಮಾನ ಇಟ್ಟುಕೊಳ್ಳಬೇಡಿ ಅಂತ ಆಕೆಗೆ ನಂಬಿಕೆ ಹುಟ್ಟುವಂತೆ ನಾನು ಹೇಗೆ ಹೇಳಲಿ ? ನಿಮ್ಮ ಅಹಿತ ಬಯಸುವ ಮೊದಲು ಈ ಮಂಸಾರಾಮ ವಿಷ ಕುಡಿದು ಸಾಯಲು ಸಿದ್ಧ ಎಂದು ನಾನು ಆಕೆಗೆ ಹೇಗೆ ಹೇಳಲಿ ? ನಾನೆಷ್ಟು ಕಷ್ಟಗಳನ್ನು

ಸಹಿಸಬೇಕಾಗಿ ಬಂದರೂ ಸರಿಯೇ ಆಕೆಯ ಹೃದಯ ಚುಚ್ಚುವ ಮುಳ್ಳಾಗುವುದಿಲ್ಲ. ಅಪ್ಪಾಜಿ ನನಗೆ ಜನ್ಮ ಕೊಟ್ಟಿದ್ದಾರೆ. ಈಗಲೂ ನನ್ನನ್ನು ಅವರು ಪ್ರೀತಿಸುತ್ತಿದ್ದಾರೆ. ಆದರೆ ಅವರು ಎರಡನೆಯ ಮದುವೆಯಾದ ದಿನವೇ ತಮ್ಮ ಹೃದಯದಿಂದ ನಮ್ಮನ್ನು ಹೊರಗೆ ಎಸೆದುಬಿಟ್ಟರು ಎಂಬುದು ನನಗೆ ಗೊತ್ತಾಗುವುದಿಲ್ಲವೇನು ? ಈಗ ನಾವು ಈ ಮನೆಯಲ್ಲಿ ಅನಾಥರಂತೆ ಬಿದ್ದಿರಬಹುದು. ಅಷ್ಟೆ ಹೊರತಾಗಿ ಈ ಮನೆಯ ಮೇಲೆ ನಮಗಾರಿಗೂ ಯಾವ ಅಧಿಕಾರವೂ ಇಲ್ಲ. ಬಹುಶಃ ಪೂರ್ವಜನ್ಮದ ಪುಣ್ಯದ ಬಲದಿಂದ ಬೇರೆಲ್ಲ ಅನಾಥರ ಪಾಡಿಗಿಂತಲೂ ನಮ್ಮ ಪಾಡು ಉತ್ತಮವಾಗಿದೆ ಅಷ್ಟೆ. ಆದರೆ ನಾವೂ ಅನಾಥರೇ. ನಮ್ಮ ಅಮ್ಮ ಪರಲೋಕವಾಸಿಯಾದ ದಿನದಿಂದಲೇ ನಾವು ಅನಾಥರಾದೆವು. ಈ ಮದುವೆ ನಮ್ಮನ್ನು ಇನ್ನಷ್ಟು ಪಾತಾಳಕ್ಕೆ ತಳ್ಳಿತು. ನಾನಾಗಿಯೇ ಆಕೆಯೊಂದಿಗೆ ಯಾವುದೇ ಸಂಬಂಧ–ಸ್ನೇಹವನ್ನಿಟ್ಟುಕೊಂಡಿರಲಿಲ್ಲ, ಆಕೆ ಅವತ್ತೇ ನನ್ನ ಬಗ್ಗೆ ಚಾಡಿ ಹೇಳಿದ್ದಿದ್ದರೆ ನನಗೆ ಇವತ್ತು ಇಷ್ಟು ದುಃಖವಾಗುತ್ತಿರಲಿಲ್ಲವೇನೋ ! ಈ ಬಗೆಯ ಆಘಾತ ಸಹಿಸಿಗೊಳ್ಳಲು ನಾನು ಸಿದ್ಧನಾಗಿಯೇ ಇದ್ದೆ. ಈ ಪ್ರಪಂಚದಲ್ಲಿ ಒಂದು ಕೂಲಿ ಕೆಲಸವನ್ನೂ ನಾನು ಮಾಡುವಂತಿಲ್ಲವೇನು ? ಆಕೆ ಸಮಯವಲ್ಲದ ಸಮಯದಲ್ಲಿ ನನ್ನ ಮೇಲೆ ಬಿದ್ದಳು. ಹಿಂಸಿಸುವ ಪ್ರಾಣಿಗಳೂ ಅಷ್ಟೆ ತಾನೆ ? ಮನುಷ್ಯ ಅಸಹಾಯಕನಾಗಿದ್ದಾನೆ ಅಂತ ಮೊದಲು ಖಾತರಿ ಮಾಡಿಕೊಂಡು ಅವನ ಮೇಲೆ ಬೀಳುತ್ತವೆ. ಬಹುಶಃ ನನ್ನನ್ನು ಈ ಅಧಃಪಾತಾಳಕ್ಕೆ ತಳ್ಳುವುದಕ್ಕೆಂದೇ ಇರಬೇಕು, ಆಕೆ ನನ್ನನ್ನು ಅಷ್ಟೊಂದು ಸತ್ಕರಿಸುತ್ತಿದ್ದದ್ದು. ಊಟಕ್ಕೆ ಏಳುವುದರಲ್ಲಿ ಕೊಂಚ ತಡವಾದರೂ ಸಾಕು, ಕರೆಯ ಮೇಲೆ ಕರೆಗಳು ಬರುತ್ತಿದ್ದವು. ತಿಂಡಿಗೆ ಅಂತ ಬೆಳಿಗ್ಗೆ ಹೊತ್ತು ಬಿಸಿ ಬಿಸಿ ಹಲ್ವಾ ಮಾಡುತ್ತಿದ್ದಳು. ಹಣದ ಆವಶ್ಯಕತೆ ಇದೆಯಾ ಅಂತ ಮತ್ತೆ ಮತ್ತೆ ಕೇಳುತ್ತಿದ್ದಳು. ನೂರು ರೂಪಾಯಿಯ ಹೊಸ ಗಡಿಯಾರ ತರಿಸಿಕೊಟ್ಟಳು.

ನನಗೆ ಆವಾರಾ ಎಂದು ಚಾಡಿ ಹೇಳುವುದರ ಹೊರತಾಗಿ ಆಕೆಗೆ ಬೇರೆ ಯಾವ ಚಾಡಿಯೂ ಹೊಳೆಯಲಿಲ್ಲವೇನು ? ಅಷ್ಟಕ್ಕೂ ಆಕೆ ನನ್ನಲ್ಲಿ ಕಂಡ ಆವಾರತನವಾದರೂ ಏನು ? ನಾನು ಪೋಲಿ–ಪೋಕರನೇನು ? ಇವನ ಮನಸ್ಸು ಓದುವುದರಲ್ಲಿಲ್ಲ. ಒಂದಲ್ಲ ಒಂದಕ್ಕೆ ಯಾವಾಗಲೂ ಹಣ ಕೇಳ್ತಿರ್ತಾನೆ ಅಂತ ಹೇಳಬಹುದಿತ್ತು. ಇದೆಲ್ಲ ಬಿಟ್ಟು ನನ್ನನ್ನು ಆವಾರ ಅಂತ ಕರೆಯುವುದು ಒಂದೇನಾ ಆಕೆಗೆ ಹೊಳದದ್ದು ? ಇದೊಂದೇ ಆರೋಪವನ್ನು ನನ್ನ ಮೇಲೆ ಆಕೆ ಮಾಡಬಹುದಿತ್ತು ಅಂತ ಕಾಣಿಸುತ್ತದೆ. ಆಕೆ ಬಿಟ್ಟ ಈ ಅಗ್ನಿಬಾಣದಿಂದ ನಾನು ಹೇಗೆ ಮುಕ್ತಿ ಪಡೆಯಲಿ ? ಎಲ್ಲಿ ಪಡೆಯಲಿ ? ಅಪ್ಪಾಜಿಯ ದೃಷ್ಟಿಯಲ್ಲಿ ನಾನು ಕೆಟ್ಟವನು ಎಂದು ಸಾಬೀತಾಗಲಿ ಎಂದು ಈ ಚಕ್ರವ್ಯೂಹವೆ ? ನನ್ನನ್ನು ಬೋರ್ಡಿಂಗ್ ಹೌಸ್‌ನಲ್ಲಿರಿಸಲು ಒಂದು ನೆಪ ಬೇಕಾಗಿತ್ತು. ಹಾಲಿಗೆ ಬಿದ್ದ ನೊಣವನ್ನು ಸೂಕ್ಷ್ಮವಾಗಿ ಹಿಡಿದು ಹೊರಗೆ ಹಾಕುವಂತೆ ನನ್ನನ್ನು ಹೊರಗೆ ಹಾಕಲಾಗುತ್ತಿದೆ. ಇನ್ನು ಎರಡು–ಮೂರು ತಿಂಗಳ ನಂತರ ನನ್ನ ಖರ್ಚಿಗೆ ಅಂತ ಕೊಡುವ ಹಣವನ್ನೂ ನಿಲ್ಲಿಸಲಾಗುತ್ತದೆ.

ನಾನು ಇದ್ದರೆಷ್ಟು , ಹೋದರೆಷ್ಟು ? ನನಗೆ ಮೊದಲೇ ಆಕೆಯೇ ಇಷ್ಟಕ್ಕೆಲ್ಲ ಕಾರಣ ಅಂತ ಸುಳಿವು ಸಿಕ್ಕಿದ್ದರೂ ಸಾಕಾಗಿತ್ತು. ನಾನೇ ಜಾಗವಿಲ್ಲದ ಹಾಸ್ಟೆಲ್‌ನಲ್ಲಿ ಹೇಗಾದರೂ ಜಾಗ ಮಾಡಿಕೊಳ್ಳುತ್ತಿದ್ದೆ. ಎಲ್ಲಿಲ್ಲವೆಂದರೂ ಅಲ್ಲಿನ ಜವಾನರ ಮನೆಯಲ್ಲಾದರೂ ಕೊಂಚ ಜಾಗ ಸಿಗುತ್ತಿತ್ತು. ಅವರ ಮನೆಗಳ ವಠಾರದಲ್ಲಾದರೂ ಬಿದ್ದಿರಬಹುದಾಗಿತ್ತು. ಆದದ್ದಾಯಿತು ಈಗ, ಪ್ರೀತಿ ಇಲ್ಲದ ಕಡೆ ಕೇವಲ ಹೊಟ್ಟೆ ತುಂಬಿಕೊಳ್ಳುವುದಕ್ಕೋಸ್ಕರ ಇರುವುದೆಂದರೆ ನನ್ನ ಮನಸ್ಸಿಗೆ ಒಗ್ಗುವುದಿಲ್ಲ. ಈಗ ಈ ಮನೆ ನನ್ನದಲ್ಲ. ಈ ಮನೆ ನನ್ನದಲ್ಲ. ಈ ಮನೆಯಲ್ಲಿ ಹುಟ್ಟಿ, ಇಲ್ಲಿ ಆಡಿದೆನಾದರೂ ಈ ಮನೆ ನನ್ನದಲ್ಲ ! ಈ ಅಪ್ಪಾಜಿ ನನ್ನ ಅಪ್ಪಾಜಿ ಅಲ್ಲ. ನಾನು ಇವರ ಮಗ ನಿಜ, ಆದರೆ ಇವರು ನನ್ನ ತಂದೆ ಅಲ್ಲ. ಪ್ರಪಂಚದಲ್ಲಿ ಎಲ್ಲ ಸಂಬಂಧಗಳ ಆಧಾರ ಸ್ನೇಹ. ಈ ಸ್ನೇಹವೇ ಇಲ್ಲದ ಕಡೆ ಏನೂ ಇಲ್ಲ. ಹಾಯ್ ಅಮ್ಮಾ ! ನೀನೆಲ್ಲಿದ್ದೀಯಾ ?

ಈ ಪ್ರಕಾರವಾಗಿ ಯೋಚಿಸುತ್ತಾ ಮಂಸಾರಾಮ ಅಳತೊಡಗಿದ. ತನ್ನ ಹೆತ್ತ ತಾಯಿಯ ವಾತ್ಸಲ್ಯದ ಹಿಂದಿನ ನೆನಪುಗಳು ಜಾಗೃತಗೊಂಡಂತೆಲ್ಲ ಇವನ ಕಣ್ಣಿಂದ ಉಕ್ಕುತ್ತಿದ್ದ ಕಣ್ಣೀರಿನ ಧಾರೆ ತೀವ್ರವಾಗುತ್ತಿತ್ತು. ಆಕೆ ತನ್ನೆದುರಿಗೆ ನಿಂತು ಇದನ್ನೆಲ್ಲ ಕೇಳಿಸಿಕೊಳ್ಳುತ್ತಿರುವಳೇನೋ ಎಂಬಂತೆ ಅವನು ಎಷ್ಟೋ ಸಾರಿ 'ಅಮ್ಮಾ...... ಅಮ್ಮಾ' ಎಂದು ಕೂಗತೊಡಗಿದ. ತಾಯಿ ಇಲ್ಲದ ದುಃಖ ಮೊಟ್ಟ ಮೊದಲ ಸಾರಿ ಇವತ್ತು ಅವನಿಗಾಯಿತು. ಮಂಸಾರಾಮ ಆತ್ಮಾಭಿಮಾನಿ, ಧೈರ್ಯವಂತನಾದರೂ ಈವರೆಗೆ ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದದ್ದರಿಂದ ಈಗ ತನಗೆ ತಾನು ಆಶ್ರಯಹೀನ, ಅನಾಥ ಎಂದು ಭಾವಿಸುತ್ತಿದ್ದ.

ರಾತ್ರಿಯ ಹತ್ತು ಗಂಟೆಯಾಗಿತ್ತು. ವಕೀಲರು ಯಾರದೋ ಮನೆಗೆ ಔತಣಕ್ಕೆಂದು ಹೋಗಿದ್ದರು. ಮನೆಯ ಕೆಲಸದಾಕೆ ಎರಡು ಸಾರಿ ಹೋಗಿ ಮಂಸಾರಾಮನನ್ನು ಊಟಕ್ಕೆಂದು ಕರೆದು ಬಂದಿದ್ದಳು. ಆಗೆಲ್ಲ ಮಂಸಾರಾಮ ಸಿಡುಕಿನಿಂದಲೇ, 'ನನಗೆ ಹಸಿವಿಲ್ಲ. ಏನೂ ಬೇಡ ನನಗೆ, ಮತ್ತೆ ಮತ್ತೆ ಬಂದು ನನ್ನ ತಲೆ ಏಕೆ ತಿನ್ನುತ್ತೀಯಾ' ಎಂದು ಗದರಿಸಿ ಕಳಿಸಿದ್ದ. ಹೀಗಾಗಿ ಈಗ ನಿರ್ಮಲಾ ಆಕೆಯನ್ನು ಪುನಃ ಅದೇ ಕೆಲಸಕ್ಕೆ ಕಳಿಸಲು ಪ್ರಯತ್ನಿಸಿದಾಗ, ಕೆಲಸದಾಕೆ– 'ಅಮ್ಮಾವರೆ, ಅವರು ನಾನು ಕರೆದರೆ ಬರುವುದಿಲ್ಲ,' ಎಂದಳು.

ನಿರ್ಮಲಾ : 'ಏಕೆ ಬರೊಲ್ಲ ? ಊಟ ತಣ್ಣಗಾಗುತ್ತಿದೆ ಅಂತ ಹೋಗಿ ಹೇಳು. ಎಷ್ಟು ಆಗುತ್ತೋ ಅಷ್ಟೇ ಊಟ ಮಾಡಲಿಕ್ಕೆ ಹೇಳು.'

ಕೆಲಸದಾಕೆ : 'ಇದನ್ನೆಲ್ಲ ಹೇಳಿದೆ ಅಮ್ಮಾವರೆ, ಅವರು ಬರುವುದಿಲ್ಲ.'

ನಿರ್ಮಲಾ : 'ನಾನು ಕಾಯುತ್ತಿದ್ದೇನೆ ಅಂತ ಹೇಳಿದೆಯೇನು ?'

ಕೆಲಸದಾಕೆ : 'ಇಲ್ಲ ಅಮ್ಮಾವ್ರೆ, ನಾನು ಇದನ್ನು ಹೇಳಲಿಲ್ಲ. ನಿಮ್ಮ ಹತ್ತಿರ ಸುಳ್ಳು ಯಾಕೆ ಹೇಳಬೇಕು.?'

ನಿರ್ಮಲಾ : 'ಆಯಿತು, ನಾನು ಇಲ್ಲಿ ಕುಳಿತು ಅವನು ಬರುವುದನ್ನೇ ಕಾಯುತ್ತಿದ್ದೇನೆ. ಅವನು ಬರದಿದ್ದರೆ ಊಟ ಎತ್ತಿಟ್ಟು ನಾನೂ ಊಟ ಮಾಡದೆಯೇ ಮಲಗಿಕೊಳ್ಳುತ್ತೇನೆ ಅಂತ ಹೇಳು. ನೀನು ಜಾಣೆ ಅಲ್ವಾ ಭೂಂಗಿ, ಇದೊಂದು ಸಾರಿ ಹೋಗಮ್ಮ (ನಗುತ್ತ) ಅವನು ಬರದೇ ಇದ್ದರೆ ಎತ್ತಿಕೊಂಡು ಬಾ.'

ಭೂಂಗಿ ಸಿಡುಕಿನಿಂದಲೇ ಪುನಃ ಹೋಗಿ, ಒಂದೆರಡು ಕ್ಷಣದಲ್ಲಿ ಹಿಂತಿರುಗಿ ಬಂದು ಹೇಳಿದಳು– 'ಅಮ್ಮಾವ್ರೆ, ಅವರು ಅಳ್ತಾ ಇದ್ದಾರೆ. ನೀವು ಯಾರಾದರೂ ಏನಾದರೂ ಅಂದಿರಾ ?' ಈ ಮಾತನ್ನು ಕೇಳಿ, ಮಗ ಬಾವಿಗೆ ಬಿದ್ದ ಸುದ್ದಿಯನ್ನು ಕೇಳಿ ತಾಯಿ ಗಾಬರಿ ಮತ್ತು ಆತಂಕದಿಂದ ಧಾವಿಸುವಂತೆ ನಿರ್ಮಲಾ ಸಹ ಗಾಬರಿಯಿಂದ ಬೆಚ್ಚಿ ಎದ್ದದ್ದೇ ಮೂರು–ನಾಲ್ಕು ಹೆಜ್ಜೆ ಮುಂದೆ ಬಂದಳು. ಆದರೆ ಪುನಃ ನಿಂತು ಭೂಂಗಿಯನ್ನು ಕೇಳಿದಳು– 'ಅಳ್ತಾ ಇದ್ದಾನಾ ? ಏಕೆ ಅಳ್ತಾ ಇದ್ದೀರಾ ಅಂತ ನೀನು ಕೇಳಲಿಲ್ವೇನು ?'

ಭೂಂಗಿ : 'ಇಲ್ಲ ಅಮ್ಮಾವ್ರೆ, ಕೇಳಲಿಲ್ಲ. ನಿಮ್ಮ ಹತ್ತಿರ ಸುಳ್ಳು ಏಕೆ ಹೇಳಲಿ ?'

ಆತ ಅಳ್ತಾ ಇದ್ದಾನಾ ? ಈ ನಿಶ್ಶಬ್ದ ರಾತ್ರಿಯಲ್ಲಿ ಒಂಟಿಯಾಗಿ ಕುಳಿತು ಆತ ಅಳ್ತಿದ್ದಾನ ? ಬಹುಶಃ ತಾಯಿಯ ನೆನಪಾಗಿರಬಹುದು. ಆತನಿಗೆ ನಾನು ಹೇಗೆ ಸಮಾಧಾನ ಮಾಡಲಿ ? ಓ ದೇವರೆ ! ಈ ಮನೆಯಲ್ಲಿ ಸೀನಿದರೂ ಮೂಗು ಕಿತ್ತು ಬರುತ್ತದೆ. ನಾನು ಮರೆತೂ ಕೂಡ ಅವನಿಗೆ ಒಂದು ಮಾತಾದರೂ ಅಂದಿದ್ದರೆ ಅದಕ್ಕೆ ನೀನೇ ಸಾಕ್ಷಿ, ಪರಮಾತ್ಮ ! ನಾನು ಏನು ಮಾಡಲಿ ? ಅವನ ತಂದೆಗೆ ನಾನೇ ಚಾಡಿ ಹೇಳಿರಬಹುದೆಂದು ಅವನು ತಿಳಿದುಕೊಂಡಿರಬಹುದು. ಆದರೆ ನಾನು ನಿನ್ನ ವಿರುದ್ಧ ಒಂದೇ ಒಂದು ಮಾತನ್ನು ಆಡಿಲ್ಲವೆಂದು ನಿನಗೆ ಹೇಗೆ ಸಿದ್ಧಪಡಿಸಿ ತೋರಿಸಲಿ ? ನಿನ್ನಂಥ ದೇವತಾಸದೃಶನಾದ ಚಾರಿತ್ರ್ಯವುಳ್ಳ ಯುವಕನ ವಿರುದ್ಧ ನಾನು ಒಂದು ಕೆಟ್ಟ ಮಾತನ್ನಾಡಿದರೂ ನನ್ನಂಥ ರಾಕ್ಷಸಿ ಈ ಪ್ರಪಂಚದಲ್ಲೇ ಮತ್ತೊಬ್ಬಳಿಲ್ಲ.

ನಿರ್ಮಲಾ ನೋಡುತ್ತಿದ್ದಳು– ಮಂಸಾರಾಮನ ಆರೋಗ್ಯ ದಿನದಿಂದ ದಿನಕ್ಕೆ ಕೆಡುತ್ತಿದೆ; ದಿನದಿಂದ ದಿನಕ್ಕೆ ಅವನು ಕೃಶನಾಗುತ್ತಾ ಹೋಗುತ್ತಿದ್ದಾನೆ; ಅವನ ಮುಖದ ಉಜ್ವಲ–ಕಾಂತಿ ದಿನದಿಂದ ದಿನಕ್ಕೆ ಕುಗ್ಗುತ್ತಾ ಕಳಾಹೀನವಾಗುತ್ತಿದೆ; ಅವನ ಸದೃಢ ಶರೀರ ದಿನದಿಂದ ದಿನಕ್ಕೆ ಕುಗ್ಗುತ್ತಾ ಹೋಗುತ್ತಿದೆ. ಇದರ ಕಾರಣವೂ ಅವಳಿಗೆ ಗೊತ್ತಿಲ್ಲದಿರಲಿಲ್ಲ. ಆದರೆ ಅವಳು ಈ ಬಗ್ಗೆ ತನ್ನ ಗಂಡನೊಂದಿಗೆ ಏನೊಂದನ್ನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ಮನೆಯಲ್ಲಿ ಏನೆಲ್ಲ ಆಗುತ್ತಿರುವುದನ್ನು ನೋಡಿ ಅವಳ ಕರುಳು ಕಿತ್ತು ಬಂದಂತಾಗುತ್ತಿದ್ದರೂ ಅವಳ ಬಾಯಿಗೆ ಮಾತ್ರ ಬೀಗ ಹಾಕಿದಂತಾಗಿತ್ತು. ಇಷ್ಟು ಚಿಕ್ಕ ಮಾತಿಗೆಲ್ಲ ಮಂಸಾರಾಮ ಏಕಿಷ್ಟು ತಲೆಕೆಡಿಸಿಕೊಂಡಿದ್ದಾನೆ ಎಂದು ಮನಸ್ಸಿನಲ್ಲಿ ತನ್ನೊಳಗೇ ಚಡಪಡಿಸುತ್ತಿದ್ದಳು. ಇವರು ಅವನನ್ನು ಆವಾರಾ ಎಂದಾಕ್ಷಣಕ್ಕೆ ಅವನು ಆವಾರ ಆಗಿಬಿಟ್ಟನೇ ? ಇನ್ನು ನನ್ನ ಕತೆಯೇ ಬೇರೆ. ಒಂದು ಅಕ್ಕಿ ಕಾಳಿನಷ್ಟು

ಅನುಮಾನ ನನ್ನ ಸರ್ವನಾಶವನ್ನೇ ಮಾಡಬಲ್ಲದು. ಆದರೆ ಮಂಸಾರಾಮ ಇದನ್ನೆಲ್ಲಾ ಲೆಕ್ಕಕ್ಕಿಟ್ಟುಕೊಳ್ಳಬಾರದಲ್ಲವೇ ?'

ಕೂಡಲೇ ಹೋಗಿ ಅವನನ್ನು ಸಮಾಧಾನ ಪಡಿಸುವ ಹಾಗೂ ಕರೆದುಕೊಂಡು ಬಂದು ಊಟಕ್ಕೆ ಬಡಿಸುವ ತೀವ್ರ ಆಸೆ ನಿರ್ಮಲಾಗೆ ಆಯಿತು. ಪಾಪ ! ಹುಡುಗ ರಾತ್ರಿಯೆಲ್ಲ ಉಪವಾಸ ಮಲಗಿಕೊಳ್ತಾನೆ ! ಅಯ್ಯೋ ! ಇಷ್ಟೆಲ್ಲಾ ಉಪದ್ರಾಗಲು ನಾನೇ ಕಾರಣ. ನಾನು ಈ ಮನೆಗೆ ಬರುವ ಮೊದಲು ಇಲ್ಲಿ ಶಾಂತಿಯಿತ್ತು. ತನ್ನ ಮಕ್ಕಳನ್ನು ಕಂಡರೆ ಅಪ್ಪ ತನ್ನ ಪ್ರಾಣವನ್ನೇ ಕೊಟ್ಟುಬಿಡುತ್ತಿದ್ದ. ಮಕ್ಕಳೂ ಅಷ್ಟೇ. ಅಪ್ಪ–ಅಪ್ಪ ಅಂತ ಸುತ್ತುವರಿದುಕೊಂಡಿದ್ದರು. ನಾನು ಈ ಮನೆಗೆ ಬಂದ ಮೇಲೆ ಈ ಎಲ್ಲ ಸಮಸ್ಯೆಗಳೂ ಹುಟ್ಟಿಕೊಂಡವು. ಈ ಎಲ್ಲದರ ಅಂತ್ಯ ಹೇಗಾಗುವುದೋ ಏನೋ ! ಆ ದೇವರಿಗೆ ಗೊತ್ತು. ದೇವರು ನನಗೆ ಸಾವನ್ನಾದರೂ ಕೊಡುವುದಿಲ್ಲ. ಪಾಪ ! ಅವನು ಒಂಟಿಯಾಗಿ ಹಸಿವಿನಿಂದ ಕಂಗಾಲಾಗಿದ್ದಾನೆ. ಮಧ್ಯಾಹ್ನವೂ ಅಷ್ಟೆ. ಸರಿಯಾಗಿ ಊಟ ಮಾಡಲಿಲ್ಲ. ತಟ್ಟೆ ಮುಂದೆ ಹಾಗೆ ಕುಳಿತುಕೊಂಡು ಹೀಗೆ ಎದ್ದ. ಅವನು ತಿನ್ನೋದು ತಾನೇ ಎಷ್ಟು ? ಅವನು ತಿನ್ನೋದನ್ನು ಎರಡು ವರ್ಷದ ಮಕ್ಕಳು ತಿನ್ನುತ್ತಾರೆ.

ನಿರ್ಮಲಾ ಒಳಗೆ ಹೋದಳು. ತನ್ನ ಗಂಡನ ಇಚ್ಛೆಗೆ ವಿರುದ್ಧವಾಗಿ ಹೋದಳು. ಸಂಬಂಧದ ದೃಷ್ಟಿಯಿಂದ ಅವನು ಅವಳ ಮಗನಾಗಬೇಕು. ಈಗ ಅವನನ್ನು ಸಮಾಧಾನ ಪಡಿಸಲು ಹೋಗಬೇಕಾದರೆ ಅವಳ ಹೃದಯ ನಡುಗುತ್ತಿತ್ತು.

ಅವಳು ಮೊದಲು ರುಕ್ಮಿಣಿಯ ರೂಮಿನ ಕಡೆ ನೋಡಿದಳು. ಅವಳು ತನ್ನ ಊಟ ಮುಗಿಸಿ ಪ್ರಪಂಚದ ಪರಿಜ್ಞಾನವೇ ಇಲ್ಲದಂತೆ ಮಲಗಿದ್ದಳು. ಆನಂತರ ಅವಳು ಹೊರಗಿನ ರೂಮಿನ ಕಡೆ ಬಂದಳು. ಅಲ್ಲೂ ನಿಶ್ಶಬ್ದವಿತ್ತು, ವಕೀಲರು ಇನ್ನೂ ಬಂದಿರಲಿಲ್ಲ. ಇದನ್ನೆಲ್ಲ ನೋಡಿ ಅವಳು ಮಂಸಾರಾಮನ ರೂಮಿನ ಮುಂದೆ ಬಂದು ನಿಂತಳು. ರೂಮಿನ ಬಾಗಿಲು ತೆರೆದಿತ್ತು. ಶೋಕ ಮತ್ತು ಚಿಂತೆಯ ಜೀವಂತ ಮೂರ್ತಿಯೋಪಾದಿಯಲ್ಲಿ ಮಂಸಾರಾಮ ತನ್ನ ಮುಂದೆ ಒಂದು ಪುಸ್ತಕವನ್ನಿಟ್ಟುಕೊಂಡು, ತಲೆ ತಗ್ಗಿಸಿಕೊಂಡು ಕುಳಿತಿದ್ದ. ನಿರ್ಮಲಾ ಅವನ ಹೆಸರು ಹಿಡಿದು ಕರೆಯಲು ಪ್ರಯತ್ನಿಸಿದಳು. ಆದರೆ ಅವಳ ಗಂಟಲಿಂದ ಧ್ವನಿಯೇ ಹೊರಬೀಳಲಿಲ್ಲ.

ಅಕಸ್ಮಾತ್ ಮಂಸಾರಾಮ ತಲೆ ಎತ್ತಿ ಬಾಗಿಲ ಕಡೆ ನೋಡಿದ. ಕತ್ತಲಿದ್ದುದರಿಂದ ನಿರ್ಮಲಾಳ ಗುರುತು ಬೇಗ ಸಿಗಲಿಲ್ಲ. ಬೆಚ್ಚಿ 'ಯಾರು ?' ಅಂದ.

ನಿರ್ಮಲಾ ನಡುಗುವ ಧ್ವನಿಯಲ್ಲಿ ಹೇಳಿದಳು– 'ನೀನು ಊಟ ಮಾಡಲು ಬರುವುದಿಲ್ಲವೇನು ? ಎಷ್ಟು ರಾತ್ರಿಯಾಗಿದೆ ನೋಡು'

ಮಂಸಾರಾಮ ಮುಖ ತಿರುಗಿಸಿ ಹೇಳಿದ– 'ನನಗೆ ಹಸಿವಿಲ್ಲ.'

ನಿರ್ಮಲಾ : 'ಈ ಮಾತನ್ನ ಭೂಂಗಿ ಮೂರು ಸಾರಿ ಹೇಳಿದ್ದಾಳೆ.'

ಮಂಸಾರಾಮ : 'ಈಗ ನಾಲ್ಕನೆಯ ಸಾರಿ ನನ್ನ ಬಾಯಿಂದ ಕೇಳಿ.'

ನಿರ್ಮಲಾ : 'ಸಂಜೆಯೂ ನೀನು ಏನನ್ನೂ ತಿನ್ನಲಿಲ್ಲ. ಹಸಿವೇಕೆ ಆಗುವುದಿಲ್ಲ ?'

ಮಂಸಾರಾಮ ವ್ಯಂಗ್ಯದಿಂದ ನಕ್ಕು ಉತ್ತರಿಸಿದ : 'ಹೆಚ್ಚು ಹಸಿವಾದರೆ ತಿನ್ನಲಿಕ್ಕೆ ಎಲ್ಲಿಂದ ಬರುತ್ತೆ ?'

ಇಷ್ಟು ಹೇಳುತ್ತ ಹೇಳುತ್ತ ಮಂಸಾರಾಮ ರೂಮಿನ ಬಾಗಿಲು ಹಾಕಲು ಪ್ರಯತ್ನಿಸಿದ. ಆದರೆ ಅಷ್ಟು ಹೊತ್ತಿಗಾಗಲೇ ನಿರ್ಮಲಾ ಒಳಗೆ ಬಂದಿದ್ದಳು. ನಿರ್ಮಲಾ ಮಂಸಾರಾಮನ ಕೈಹಿಡಿದುಕೊಂಡು ತುಂಬಿ ಬಂದ ಕಣ್ಣುಗಳಿಂದ ಅತ್ಯಂತ ವಿನಯದಿಂದ ಮೃದುವಾಗಿ ಹೇಳಿದಳು– 'ನಾನು ಹೇಳುತ್ತಿದ್ದೀನಿ. ಬಂದು ಸ್ವಲ್ಪವಾದರೂ ಊಟ ಮಾಡು. ನೀನು ಊಟ ಮಾಡದಿದ್ದರೆ ನಾನೂ ಹಾಗೆಯೇ ಹೋಗಿ ಮಲಗಿಕೊಳ್ಳುತ್ತೇನೆ ನೋಡು. ಎರಡು ತುತ್ತಾದರೂ ತಿನ್ನು, ನನಗೂ ರಾತ್ರಿಯಿಡೀ ಉಪವಾಸದಿಂದ ಸಾಯಿಸಬೇಕು ಅಂತಿದ್ದೀಯೇನು ?'

ಮಂಸಾರಾಮ ಯೋಚಿಸಲಾರಂಭಿಸಿದ – ಈಕೆ ಇನ್ನೂ ಊಟ ಮಾಡಿಲ್ಲವೇನು ? ನನ್ನನ್ನೇ ಕಾಯುತ್ತಾ ಕುಳಿತಿದ್ದಳೇನು ? ಈಕೆ ಸ್ನೇಹ, ವಾತ್ಸಲ್ಯ ಮತ್ತು ವಿನಯದ ದೇವತೆಯೋ ಅಥವಾ ಈರ್ಷ್ಯೆ ಮತ್ತು ಕೆಡುಕನ್ನು ಬಯಸುವ ಮಾಯಾವಿನಿಯೋ ? ಅವನಿಗೆ ತನ್ನ ತಾಯಿಯ ನೆನಪಾಯಿತು. ಆಕೆಯೂ ಹೀಗೆಯೇ. ಯಾವಾಗಲಾದರೂ ನಾನು ಮುನಿಸಿಕೊಂಡು ಬಂದನೆಂದರೆ, ಇದೇ ರೀತಿ ಬಂದು ನನ್ನನ್ನು ಸಮಾಧಾನಪಡಿಸಿ ರಮಿಸುತ್ತಿದ್ದಳು. ನಾನು ಊಟಕ್ಕೆ ಏಳುವವರೆಗೂ ಆಕೆಯೂ ನಿಂತ ಜಾಗದಿಂದ ಕದಲುತ್ತಿರಲಿಲ್ಲ. ಈಗ ಅವನಿಂದ ನಿರ್ಮಲಾಳ ವಿನಯವನ್ನು ತಿರಸ್ಕರಿಸಲಾಗಲಿಲ್ಲ. ಹೇಳಿದ– 'ನನ್ನಿಂದ ನಿಮಗೆ ತೊಂದರೆಯಾಯಿತು. ದಯವಿಟ್ಟು ಕ್ಷಮಿಸಿ, ನನ್ನನ್ನು ಕಾಯುತ್ತಾ ನೀವೂ ಉಪವಾಸವಿದ್ದಿರಿ ಎಂಬುದು ನನಗೆ ಗೊತ್ತಾಗಿದ್ದರೆ, ನಾನೂ ಊಟಕ್ಕೆ ಬರುತ್ತಿದ್ದೆ.'

ನಿರ್ಮಲಾ ನುಡಿದಳು : 'ನೀನು ಉಪವಾಸದಿಂದಿದ್ದು ನಾನು ಊಟ ಮಾಡಿ ಮಲಗಿಬಿಡುತ್ತೇನೆ ಎಂದು ನೀನು ಹೇಗಾದರೂ ಯೋಚಿಸಿದೆ ? ನಾನು ನಿನ್ನ ಮಲತಾಯಿ ಅಂದಾಕ್ಷಣ ಇಷ್ಟು ಸ್ವಾರ್ಥಿಯಾಗಿ ಬಿಡುತ್ತೇನೇನು ?'

ಆಗ ಇದ್ದಕ್ಕಿದ್ದಂತೆಯೇ ಹೊರಗೆ ವಕೀಲರು ಕೆಮ್ಮಿದ ಸದ್ದಾಯಿತು. ಮಂಸಾರಾಮನ ರೂಮಿನತ್ತಲೇ ಅವರು ಬರುತ್ತಿದ್ದಾರೆ ಎಂದನ್ನಿಸಿತು. ನಿರ್ಮಲಾಳ ಮುಖ ಒಮ್ಮೆಗೇ ಕಳಾಹೀನವಾಯಿತು. ಆಕೆ ಕೂಡಲೇ ರೂಮಿನಿಂದ ಹೊರ ಬಂದದ್ದೇ, ಒಳಗೆ ಹೋಗಲು ಅವಕಾಶವಾಗದೇ ಇದ್ದಾಗ ಅಲ್ಲೇ ನಿಂತು ಅತ್ಯಂತ ಕಠೋರ ಸ್ವರದಲ್ಲಿ ಗುಡುಗಿದಳು. 'ಇಷ್ಟು ರಾತ್ರಿಯಾದರೂ ಅಡುಗೆ ಮನೆ ಬಾಗಿಲಲ್ಲೇ ಕಾದು ಕುಳಿತಿರುವುದಕ್ಕೆ ನಾನೇನು ಈ ಮನೆಯ ಆಳಲ್ಲ. ಊಟ ಮಾಡಲಿಕ್ಕೆ ಇಷ್ಟವಿಲ್ಲದಿದ್ದವರು ಮೊದಲೇ ಹೇಳಿಬಿಡಬೇಕು.'

ನಿರ್ಮಲಾ ಅಲ್ಲಿ ನಿಂತಿದ್ದನ್ನು ವಕೀಲರು ನೋಡಿದರು. ಇದೇನು

ಅನರ್ಥವಾಯಿತು ! ಇಲ್ಲಿಗೆ ಇವಳು ಬಂದಿದ್ದಾದರೂ ಏಕೆ ? 'ಇಲ್ಲಿ ಏನು ಮಾಡ್ತಿದ್ದೀಯಾ ?' ಎಂದು ಪ್ರಶ್ನಿಸಿದರು. ನಿರ್ಮಲಾ ಒರಟಾಗಿಯೇ ಹೇಳಿದಳು– 'ಏನು ಮಾಡ್ತಿದ್ದೀಯಾ ಅಂದ್ರೆ, ನನ್ನ ಹಣೆ ಬರಹಕ್ಕೆ ತಲೆ ಚಚ್ಚಿಕೊಳ್ತಿದ್ದೇನೆ. ಈ ಮನೆಯಲ್ಲಿ ಏನಾದರೂ ಅದಕ್ಕೆ ನಾನೇ ಮೂಲ. ಒಬ್ಬ ಮುಖ ಊದಿಸಿಕೊಂಡು ಕುಳಿತಿರ್ತಾನೆ. ಇನ್ನೊಬ್ಬ ಮಾತನಾಡಿದರೆ ಮುತ್ತು ಸುರಿಯುತ್ತೆ ಅಂತ ಕುಳಿತಿರ್ತಾನೆ. ಯಾರು ಯಾರಿಗೆ ಅಂತ ನಾನು ಸಮಾಧಾನ ಮಾಡಲಿ, ಯಾರು, ಯಾರಿಗೆ ಅಂತ ಸುಮ್ಮನಿರಿಸಲಿ ?'

ವಕೀಲರು ಚಕಿತರಾಗಿ ಕೇಳಿದರು– 'ಏನ್ ವಿಷಯ ?'

ನಿರ್ಮಲಾ : 'ಇನ್ನೇನಿದೆ ? ಇಷ್ಟು ಹೊತ್ತಾದರೂ ಊಟಕ್ಕೆ ಬರಲಿಲ್ಲ. ಕೆಲಸದಾಕೆಯನ್ನು ಹತ್ತು ಸಾರಿ ಕಳಿಸಿದೆ. ಆದರೂ ಬರಲಿಲ್ಲ. ಕೊನೆಗೆ ನಾನೇ ಬಂದೆ. ನನಗೆ ಹಸಿವಿಲ್ಲ ಎಂದು ಹೇಳುವುದು ಸುಲಭ. ನಾನು ಈ ಮನೇಲಿ ಬಿಟ್ಟಿ ಸಿಕ್ಕಿದ್ದೀನಲ್ಲ, ಏನು ಅಂದರೂ ಅನ್ನಿಸಿಕೊಳ್ಳುವುದಕ್ಕೆ. ಇಡೀ ಪ್ರಪಂಚವೇ ಆಮೇಲೆ ನನ್ನನ್ನು ದೂಷಿಸುತ್ತವೆ. ಹಸಿವಿಲ್ಲದೇ ಇರಬಹುದು, ಆದರೆ ಈ ಪಿಶಾಚಿನಿ ಯಾರಿಗೂ ಊಟಕ್ಕೂ ಇಡುವುದಿಲ್ಲ ಅಂತ ಅನ್ನುವವರ ಬಾಯಿ ತಡೆಯೋರು ಯಾರು ?'

ವಕೀಲರು ಮಂಸಾರಾಮನಿಗೆ ಹೇಳಿದರು– 'ಊಟ ಏಕೆ ಮಾಡಬಾರದಪ್ಪ ? ಈಗ ಎಷ್ಟು ಹೊತ್ತಾಗಿದೆ ಅಂತ ಗೊತ್ತೇನು ?'

ಮಂಸಾರಾಮ ಸ್ತಂಭೀಭೂತನಾದವನಂತೆ ನಿಂತಿದ್ದ. ಅವನ ಮುಂದೆ ಈಗ ನಡೆಯುತ್ತಿರುವುದೇನು ಎಂಬುದನ್ನು ಅವನಿಂದ ಅರ್ಥಮಾಡಿಕೊಳ್ಳಲಾಗಲಿಲ್ಲ. ಒಂದು ಕ್ಷಣದ ಹಿಂದೆ ಯಾವ ಕಣ್ಣುಗಳಿಂದ ಅನುನಯದ ಕಣ್ಣೀರು ತುಂಬಿತ್ತೋ ಅವೇ ಕಣ್ಣುಗಳಲ್ಲಿ ಈಗ ಈರ್ಷ್ಯಾಗ್ನಿ, ಒಂದು ಕ್ಷಣದ ಹಿಂದೆ ಯಾವ ಬಾಯಿಂದ ಸುಧಾವೃಷ್ಟಿಯಾಗುತ್ತಿತ್ತೋ ಅದೇ ಬಾಯಿಂದ ಈಗ ವಿಷದ ಪ್ರವಾಹ ಹರಿಯುತ್ತಿರುವುದಾದರೂ ಹೇಗೆ ? ಮಂಸಾರಾಮ ಅದೇ ಅರ್ಧಚೇತನಾವಸ್ಥೆಯಲ್ಲಿ 'ನನಗೆ ಹಸಿವಿಲ್ಲ' ಅಂದ.

ವಕೀಲರು ಸಿಡುಕಿನಿಂದ ನುಡಿದರು– 'ಹಸಿವು ಏಕಿಲ್ಲ ?, ಹಸಿವಿಲ್ಲದಿದ್ದರೆ ಸಾಯಂಕಾಲವೇ ಏಕೆ ಹೇಳಲಿಲ್ಲ ?' ನಿನಗೆ ಹಸಿವು ಆಗುವುದನ್ನೇ ಕಾಯ್ದು ಕೊಂಡು ಯಾರು ಕುಳಿತಿರ್ತಾರೆ ? ನಿನಗೆ ಮೊದಲು ಹೀಗಾಗ್ತಿರಲಿಲ್ಲವಲ್ಲ ? ಹೀಗೆ ಮುನಿಸಿಕೊಂಡು ಕುಳಿತುಕೊಳ್ಳುವುದನ್ನು ಯಾವತ್ತಿನಿಂದ ಕಲಿತುಕೊಂಡೆ ? ಹೋಗಿ ಊಟ ಮಾಡು !'

ಮಂಸಾರಾಮ : 'ಇಲ್ಲ, ನನಗೆ ಸ್ವಲ್ಪವೂ ಹಸಿವಿಲ್ಲ.'

ತೋತಾರಾಮ ಹಲ್ಲು ಕಡಿಯುತ್ತ ನುಡಿದರು– 'ಆಯಿತು ನಿನಗೆ ಹಸಿವಾದಾಗಲೇ ಊಟಮಾಡು'– ಇಷ್ಟು ಹೇಳಿ ಅವರು ಒಳಗೆ ಹೋದರು. ನಿರ್ಮಲಾ ಅವರನ್ನೇ ಹಿಂಬಾಲಿಸಿದಳು. ವಕೀಲರು ಮಲಗಲು ಹೋದರು. ನಿರ್ಮಲಾ ಅಡುಗೆ ಮನೆಗೆ ಹೋಗಿ ಅಡುಗೆಯನ್ನೆಲ್ಲಾ ಎತ್ತಿಟ್ಟು, ಬಾಯಿ ತೊಳೆದುಕೊಂಡು, ತಾಂಬೂಲವನ್ನು

ತಿಂದು ಮುಗುಳ್ನಗುತ್ತ ವಕೀಲರ ಕೋಣೆಗೆ ಬಂದಳು. ವಕೀಲರು ಕೇಳಿದರು– 'ಊಟ ಮಾಡಿದೆ ತಾನೆ ?'

ನಿರ್ಮಲಾ : 'ಮಾಡದೆ ಏನು ಮಾಡಲಿ ? ನಾನು ಯಾರಿಗೆ ಅಂತ ಅನ್ನ–ನೀರು ಬಿಡಬೇಕು ?'

ವಕೀಲರು : 'ಇವನಿಗೇನಾಗಿದೆಯೋ ಏನೋ ! ಒಂದೂ ಅರ್ಥವಾಗುವುದಿಲ್ಲ. ದಿನೇ ದಿನೇ ಇಳಿದು ಹೋಗ್ತಿದ್ದಾನೆ. ಯಾವಾಗ ನೋಡಿದರೂ ಆ ರೂಮಿನಲ್ಲೇ ಬಿದ್ದಿರ್ತಾನೆ'

ನಿರ್ಮಲಾ ಏನೊಂದೂ ಮಾತನಾಡಲಿಲ್ಲ. ಅವಳು ಚಿಂತೆಯ ಸಾಗರದಲ್ಲಿ ಮುಳುಗಿ ಹೋಗಿದ್ದಳು. ನನ್ನಲ್ಲಾದ ಭಾವ ಪರಿವರ್ತನೆಯನ್ನು ಕಂಡು ಮಂಸಾರಾಮ ತನ್ನ ಮನಸ್ಸಿನಲ್ಲಿ ಏನೇನು ಅಂದುಕೊಂಡನೋ ಏನೋ ! ಅಪ್ಪಾಜಿಯನ್ನು ನೋಡಿದೊಡನೆಯೇ ಈಕೆ ಹೀಗೇಕೆ ತನ್ನನ್ನು ತಾನು ಬದಲಾಯಿಸಿಕೊಂಡಳು ಎಂಬ ಪ್ರಶ್ನೆ ಇವನಲ್ಲಿ ಮೂಡಿರಬಹುದು. ನಾನು ಹೀಗೆ ಮಾಡಿದ್ದರ ಹಿಂದಿರುವ ಕಾರಣವನ್ನು ಈತ ಊಹಿಸಿರಬಹುದೆ ? ಪಾಪ ! ಊಟ ಮಾಡಲು ಬರುವವನಿದ್ದ. ಅಷ್ಟರಲ್ಲಿ ಈ ಮಹಾಶಯರು ಎಲ್ಲಿಂದ ಬಂದರೋ ಏನೋ ! ಈ ರಹಸ್ಯವನ್ನು ಮಂಸಾರಾಮನಿಗೆ ಹೇಗೆ ಹೇಳಲಿ ? ಹೇಳಲು ನನ್ನಿಂದ ಸಾಧ್ಯವಾಗುವುದಾ ? ನಾನು ಎಂಥ ಇಕ್ಕಟ್ಟಿನ ಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದೇನೆ !

ಬೆಳಗಾದಾಗ ಆಕೆ ಎದ್ದು ತನ್ನ ಕೆಲಸ ಕಾರ್ಯಗಳಲ್ಲಿ ನಿರತಳಾದಳು. ಆಗ, ಇದ್ದಕ್ಕಿದ್ದಂತೆಯೇ ಒಂಬತ್ತು ಗಂಟೆಯ ಹೊತ್ತಿಗೆ ಭೂಂಗಿ ಬಂದು, 'ಮಂಸಾರಾಮ ತಮ್ಮ ಕಾಗದ–ಪುಸ್ತಕಗಳನ್ನೆಲ್ಲ ಟಾಂಗಾಕ್ಕೆ ಹಾಕುತ್ತಿದ್ದಾರೆ ' ಎಂದಳು.

ನಿರ್ಮಲಾ ಪೆಚ್ಚಾದವಳಂತೆ ಪ್ರಶ್ನಿಸಿದಳು– 'ಏನು ? ಟಾಂಗಾಕ್ಕೆ ಹಾಕುತ್ತಿದ್ದಾನಾ ? ಎಲ್ಲಿಗೆ ಹೋಗ್ತಾನಂತೆ ?'

ಭೂಂಗಿ : 'ನಾನು ಕೇಳಿದ್ದಕ್ಕೆ ಸ್ಕೂಲಿನಲ್ಲೇ ಇರ್ತೀನಿ ಅಂತ ಹೇಳಿದರು.'

ಮಂಸಾರಾಮ ಬೆಳಿಗ್ಗೆ ಎದ್ದು ತನ್ನ ಶಾಲೆಯ ಹೆಡ್ ಮಾಸ್ಟರ್ ಬಳಿಗೆ ಹೋಗಿ ಸ್ಕೂಲಿನಲ್ಲಿರಲು ಒಂದು ವ್ಯವಸ್ಥೆ ಮಾಡಿಕೊಂಡು ಬಂದಿದ್ದ. ಹೆಡ್ ಮಾಸ್ಟರ್ ಮೊದಲು, 'ಇಲ್ಲಿ ಜಾಗ ಎಲ್ಲಿದೆ ? ನಿನಗಿಂತಲೂ ಮೊದಲು ಎಷ್ಟೋ ಜನ ವಿದ್ಯಾರ್ಥಿಗಳು ಅರ್ಜಿ ಹಾಕಿದ್ದು, ಅವರಿಗೆಲ್ಲ ಇನ್ನೂ ಜಾಗ ಕೊಟ್ಟಿಲ್ಲ' ಎಂದು ಹೇಳಿದರಾದರೂ ಮಂಸಾರಾಮ ಪುನಃ 'ನನಗೆ ಬೋರ್ಡಿಂಗ್‌ನಲ್ಲಿ ಜಾಗ ಕೊಡದೇ ಹೋದರೆ ಬಹುಶಃ ನನ್ನಿಂದ ಓದನ್ನು ಮುಂದುವರಿಸಲು ಆಗುವುದಿಲ್ಲ, ಪರೀಕ್ಷೆಗೂ ಬರಲಾಗುವುದಿಲ್ಲ' ಎಂದು ಹೇಳಿದ ಮೇಲೆ ಕೊನೆಗೆ ಹೆಡ್ ಮಾಸ್ಟರ್ ಸೋಲಬೇಕಾಯಿತು. ಮಂಸಾರಾಮ ಪ್ರಥಮ ಶ್ರೇಣಿಯಲ್ಲಿ ಪಾಸಾಗುವ ನಿರೀಕ್ಷೆ ಇತ್ತು. ಈತ ಈ ಶಾಲೆಗೆ ಕೀರ್ತಿ ತರುತ್ತಾನೆಂಬ ನಂಬಿಕೆ ಅಲ್ಲಿನ ಅಧ್ಯಾಪಕರಿಗಿತ್ತು. ಹೀಗೆಲ್ಲ ಇದ್ದುದರಿಂದ ಹೆಡ್‌ಮಾಸ್ಟರ್ ಇಂಥ ಹುಡುಗನನ್ನು ಹೇಗೆ ಬಿಟ್ಟಾರು ? ಹೀಗಾಗಿ ಅವರು ತಮ್ಮ ಕಛೇರಿಯ ಒಂದು ರೂಮನ್ನೇ ಅವನಿಗೆ ಖಾಲಿ

ಮಾಡಿ ಕೊಟ್ಟರು. ಆದ್ದರಿಂದ ಮಂಸಾರಾಮ ಸ್ಕೂಲಿನಿಂದ ಬರುತ್ತಲೇ ತನ್ನ ಸಾಮಾನುಗಳನ್ನು ಟಾಂಗಾಕ್ಕೆ ತುಂಬತೊಡಗಿದ್ದ.

ವಕೀಲರು ಹೇಳಿದರು– 'ಈಗಲೇ ಹೋಗುವಷ್ಟು ಅವಸರವೇನಿದೆ ? ಎರಡು–ಮೂರು ದಿನಗಳಲ್ಲಿ ಹೋದರಾಯ್ತು. ಬಿಡು, ನಿನಗೆ ಒಬ್ಬ ಅಡಗೆಯವನನ್ನು ನೇಮಿಸಿ ಕೊಡುತ್ತೇನೆ.'

ಮಂಸಾರಾಮ : 'ಅಲ್ಲಿನ ಅಡಿಗೆಯವನು ತುಂಬಾ ಚೆನ್ನಾಗಿ ಅಡಿಗೆ ಮಾಡುತ್ತಾನೆ.'

ವಕೀಲ : 'ನಿನ್ನ ಆರೋಗ್ಯದ ಕಡೆ ಗಮನ ಕೊಟ್ಟುಕೋ. ಓದ್ತೀನಿ ಅಂತ ನಿನ್ನ ಆರೋಗ್ಯ ಕೆಟ್ಟು ಹೋದೀತು ಜೋಕೆ.'

ಮಂಸಾರಾಮ : 'ಅಲ್ಲಿ ರಾತ್ರಿ ಒಂಬತ್ತು ಗಂಟೆಯ ನಂತರ ಯಾರೂ ಓದುವಂತಿಲ್ಲ. ಎಲ್ಲರೂ ನಿಯಮಕ್ಕನುಸಾರವಾಗಿ ನಡೆದುಕೊಳ್ಳಬೇಕು.'

ವಕೀಲ : 'ಹಾಸಿಗೆಯನ್ನು ಬಿಟ್ಟು ಹೋಗುತ್ತಿದ್ದೀಯಾ ? ಯಾವುದರ ಮೇಲೆ ಮಲಗುತ್ತೀಯಾ ?'

ಮಂಸಾರಾಮ : 'ಕಂಬಳಿ ತಗೊಂಡಿದ್ದೀನಿ, ಹಾಸಿಗೆಯ ಆವಶ್ಯಕತೆಯಿಲ್ಲ.'

ವಕೀಲ : 'ಜವಾನ ಈ ಸಾಮಾನುಗಳನ್ನು ಟಾಂಗಾದಲ್ಲಿಡುವ ಹೊತ್ತಿಗೆ, ಊಟ ಮಾಡಿಕೊಂಡು ಬಾ ಹೋಗು, ರಾತ್ರಿನೂ ಊಟ ಮಾಡಲಿಲ್ಲ.'

ಮಂಸಾರಾಮ : 'ಅಲ್ಲೇ ಊಟ ಮಾಡುತ್ತೇನೆ. ನನಗೂ ಅಡಿಗೆ ಮಾಡಿ ಅಂತ ಅಲ್ಲಿನ ಅಡಿಗೆಯವನಿಗೆ ಹೇಳಿ ಬಂದಿದ್ದೇನೆ. ಇಲ್ಲಿ ಊಟಕ್ಕೆ ಅಂತ ಕುಳಿತರೆ ಹೊತ್ತಾಗುತ್ತೆ'

ಮನೆಯಲ್ಲಿ ಜಿಯಾರಾಮ ಮತ್ತು ಸಿಯಾರಾಮ ಸಹ ಅಣ್ಣನೊಂದಿಗೆ ತಾವು ಹೋಗುತ್ತೇವೆಂದು ಹಠ ಮಾಡಲಾರಂಭಿಸಿದರು. ನಿರ್ಮಲಾ ಅವರನ್ನು ಸಮಾಧಾನ ಪಡಿಸುತ್ತಿದ್ದಳು– 'ಅಲ್ಲಿಗೆ ಚಿಕ್ಕ ಮಕ್ಕಳು ಹೋಗಲು ಬರುವುದಿಲ್ಲ. ಮಕ್ಕಳೇ, ಅಲ್ಲಿ ನಿಮ್ಮ ಎಲ್ಲ ಕೆಲಸಗಳನ್ನು ನೀವೇ ಮಾಡಿಕೋ ಬೇಕಾಗುತ್ತೆ. ಆಗ ಇದ್ದಕ್ಕಿದ್ದಂತೇ ರುಕ್ಮಿಣಿ ಅಲ್ಲಿಗೆ, ಬಂದವಳೇ ಹೇಳಿದಳು– 'ನಿನ್ನದು ಎಂಥಾ ವಜ್ರದ ಹೃದಯವೇ ಮಹಾರಾಣಿ ! ಹುಡುಗ ರಾತ್ರಿನೂ ಏನೂ ತಿನ್ನಲಿಲ್ಲ. ಈಗಲೂ ಏನನ್ನೂ ತಿನ್ನದೇ ಉಣ್ಣದೇ ಹೋಗುತ್ತಿದ್ದಾನೆ. ಇಲ್ಲಿ ನೀನು ಈ ಮಕ್ಕಳೊಂದಿಗೆ ಚೆಲ್ಲಾಟ ಆಡ್ತಿದ್ದೀಯಾ ! ನೀನಿನ್ನೂ ಅವನನ್ನು ಅರ್ಥ ಮಾಡಿಕೊಂಡಿಲ್ಲ. ಚೆನ್ನಾಗಿ ತಿಳಿದ್ಕೊ. ಮಂಸಾರಾಮ ಸ್ಕೂಲಿಗೆ ಹೋಗುತ್ತಿಲ್ಲ. ವನವಾಸಕ್ಕೆ ಹೋಗ್ತಿದ್ದಾನೆ. ಪುನಃ ಇಲ್ಲಿಗೆ ಬರುವುದಿಲ್ಲ. ನೋಡ್ತಿರು, ಆಟದಲ್ಲಿ ಬಿದ್ದ ಏಟನ್ನು ಮರೆಯುವ ಹುಡುಗನಲ್ಲ, ಯಾವುದೇ ಮಾತನ್ನಾಗಲೀ ಈತ ಎದೆಯಲ್ಲಿ ಕಲ್ಲಿನ ಮೇಲೆ ಬರೆದ ಗೆರೆ ಹಾಗೆ ಇಟ್ಕೊಂಡಿರ್ತಾನೆ.'

ನಿರ್ಮಲಾ ಕಾತರ ಸ್ವರದಲ್ಲಿ ಹೇಳಿದಳು– 'ನಾನೇನು ಮಾಡಲಿ ಅಕ್ಕ ? ಅವನು ಯಾರು ಹೇಳಿದ ಮಾತನ್ನೂ ಕೇಳುವುದಿಲ್ಲವಲ್ಲ ? ನೀವು ಹೋಗಿ ಕರೆದಾದರೂ ಕರೆಯಬಾರದೆ ? ನೀವು ಕರೆದರೆ ಬರ್ತಾನೆ .'

ರುಕ್ಮಿಣಿ : 'ಅಲ್ಲ, ಆದದ್ದಾದರೂ ಏನು ? ಯಾಕೆ ಇವನು ಮನೆ ಬಿಟ್ಟು ಹೋಗ್ತಿದ್ದಾನೆ ? ಮನೆ ಅಂದರೆ ಇವನ ಮನಸ್ಸು ಯಾವತ್ತಿಗೂ ಹಿಂದೇಟು ಹೊಡೆಯುವುದಿಲ್ಲ. ಇವನಿಗೆ ತನ್ನ ಮನೆ ಬಿಟ್ಟರೆ ಎಲ್ಲೂ ಮನಸ್ಸಿರುವುದಿಲ್ಲ. ಮನೆಯ ಹೊರಗೆ ಇವನು ಎಂದೂ ಇದ್ದವನಲ್ಲ. ನೀನೇ ಇವನಿಗೆ ಏನಾದರೂ ಅಂದಿರಬೇಕು. ಇಲ್ಲ. ಚಾಡಿ ಹೇಳಿರಬೇಕು. ನಿನ್ನ ಮಡಿಲಿಗೆ ನೀನೇ ಏಕಾದರೂ ಮುಳ್ಳನ್ನು ತುಂಬಿಕೊಳ್ತಿದ್ದೀಯೋ ನಾನಾದರೂ ಕಾಣೆ. ಈ ಮನೆ ಹಾಳು ಮಾಡಿದರೆ ನಿನಗೆ ಶಾಂತಿ ಸಿಗುತ್ತೆ ಅಂದುಕೊಂಡಿದ್ದೀಯೇನು ? ಖಂಡಿತ ಸಿಗುವುದಿಲ್ಲ.'

ನಿರ್ಮಲಾ ಅಳುತ್ತಾ ಹೇಳಿದಳು– 'ಅವನಿಗೆ ನಾನೇದಾರೂ ಅಂದಿದ್ದರೆ, ನನ್ನ ನಾಲಗೆ ಸೀದು ಹೋಗಲಿ, ಮಲತಾಯಿ ಆಗಿರುವುದರಿಂದಲೇ ತಾನೇ ಇಷ್ಟೆಲ್ಲಾ ದೂರು ದೂಷಣೆಗಳು ! ನಿಮ್ಮನ್ನ ಕೈ ಮುಗಿದು ಬೇಡಿಕೊಳ್ತೇನೆ. ಹೋಗಿ ಮಂಸಾರಾಮನನ್ನು ಕರೆದುಕೊಂಡು ಬನ್ನಿ.'

ರುಕ್ಮಿಣಿ ಇನ್ನೂ ಒರಟಾಗಿಯೇ ಅಂದಳು– 'ನೀನೇ ಹೋಗಿ ಯಾಕೆ ಕರೆಯಬಾರದು ಅಂತೀನಿ. ಯಾಕೆ ? ಚಿಕ್ಕವಳಾಗಿ ಬಿಡ್ತಿಯೇನು ? ನಿನ್ನ ಮಗನೇ ಆಗಿದ್ದಿದ್ದರೆ ಹೀಗೆ ಸುಮ್ಮನಿರುತ್ತಿದ್ದೆಯೇನು ?'

ನಿರ್ಮಲಾಳ ಅವಸ್ಥೆ ಈಗ ರೆಕ್ಕೆ ಇಲ್ಲದ ಪಕ್ಷಿಯಂತಾಗಿತ್ತು. ತನ್ನೆಡೆಗೆ ಬರುತ್ತಿರುವ ಸರ್ಪವನ್ನು ನೋಡಿ ಹಾರಬಯಸುವ, ಆದರೆ ಹಾರಲಾಗದೆ ವಿಲಿವಿಲಿ ಒದ್ದಾಡಿ, ಮೇಲೆ ನೆಗೆದು ಮತ್ತೆ ನೆಲದ ಮೇಲೆ ಬೀಳುವ, ರೆಕ್ಕೆಗಳನ್ನು ಪಟಪಟ ಬಡಿಯುತ್ತಾ ಒದ್ದಾಡುವ ಪಕ್ಷಿಯಂತಾಗಿತ್ತು ಆಕೆಯ ಸ್ಥಿತಿ. ಅವಳ ಹೃದಯ ಒಳಗೊಳಗೇ ಚಡಪಡಿಸುತ್ತಿತ್ತು. ಆದರೂ ಅವಳು ಹೊರಗೆ ಬರುವಂತಿರಲಿಲ್ಲ.

ಅಷ್ಟರಲ್ಲಿ ಉಳಿದ ಇಬ್ಬರು ಮಕ್ಕಳು ಬಂದು 'ಅಣ್ಣ ಹೊರಟು ಹೋದ' ಎಂದು ಹೇಳಿದರು.

ನಿರ್ಮಲಾ ತನ್ನ ಮೈಮೇಲಿನ ಪ್ರಜ್ಞೆಯನ್ನೇ ಕಳೆದುಕೊಂಡವಳಂತೆ ಶಿಲೆಯೋಪಾದಿಯಲ್ಲಿ ನಿಂತೇ ಇದ್ದಳು. ಹೊರಟೇ ಹೋದೆಯಾ ? ಮನೆಯ ಒಳಗೂ ನೀನು ಬರಲಿಲ್ಲ. ನನ್ನನ್ನು ಮಾತನಾಡಿಸಲಿಲ್ಲ ! ಹೊರಟು ಹೋದೆಯಾ ! ನನ್ನನ್ನು ಕಂಡರೆ ಅಷ್ಟು ದ್ವೇಷವಾ ನಿನಗೆ ? ನನ್ನನ್ನು ಬಿಟ್ಟು ಬಿಡು. ಒಳಗೆ ನಿನ್ನ ಅತ್ತೆ ಇದ್ದರು. ಇವರನ್ನಾದರೂ ಮಾತನಾಡಿಸಲು ನೀನು ಬರಬೇಕಾಗಿತ್ತಲ್ಲ ? ಓಹ್ ! ನಾನು ಇಲ್ಲಿದ್ದೆ ಅಂದ ಮೇಲೆ ನೀನು ಒಳಕ್ಕೆ ಕಾಲುಗಳನ್ನು ಹೇಗೆ ಇಡುತ್ತೀ ಹೇಳು ? ನಾನು ನೋಡಿಬಿಡುತ್ತಿದ್ದೆ ಅಲ್ಲವಾ ? ಆದ್ದರಿಂದಲೇ ಹಾಗೆಯೇ ಹೊರಟು ಹೋದೆಯಲ್ಲವೆ ?'

# ಒಂಬತ್ತು

ಮಂಸಾರಾಮ ಹೊರಟು ಹೋದದ್ದರಿಂದ ಮನೆ ಬಿಕೋ ಅನ್ನುತ್ತಿತ್ತು. ಉಳಿದ ಇಬ್ಬರು ಹುಡುಗರು ಅದೇ ಸ್ಕೂಲಿನಲ್ಲಿ ಓದುತ್ತಿದ್ದರು. ನಿರ್ಮಲಾ ಪ್ರತಿನಿತ್ಯವೂ ಮಂಸಾರಾಮನ ಬಗ್ಗೆ ಇವರನ್ನು ವಿಚಾರಿಸಿಕೊಳ್ಳುತ್ತಿದ್ದಳು. ರಜೆ ದಿನದಂದು ಅವನು ಬರಬಹುದೆಂದು ನಿರೀಕ್ಷಿಸುತ್ತಿದ್ದಳು. ರಜೆ ಮುಗಿಯಿತು. ಆದರೆ ಅವನು ಮಾತ್ರ ಬರಲಿಲ್ಲ. ಈಗ ನಿರ್ಮಲಾ ತುಂಬ ಆತಂಕಕ್ಕೊಳಗಾದಳು. ಅವನು ಭಾನುವಾರ ಬರಬಹುದೆಂದು ಅವಳು ಲಾಡು ಮಾಡಿಟ್ಟಿದ್ದಳು. ಆದರೆ ಅವನು ಬರಲಿಲ್ಲವಾದ್ದರಿಂದ ಸೋಮವಾರ ಬೆಳಗ್ಗೆ ಭೂಂಗಿಯ ಕೈಲಿ ಲಾಡು ಕೊಟ್ಟು ಸ್ಕೂಲಿಗೆ ಕಳಿಸಿದಳು. ಭೂಂಗಿ ಒಂಬತ್ತು ಗಂಟೆಗೆ ವಾಪಸಾದಳು. ಮಂಸಾರಾಮ ಲಾಡುಗಳನ್ನು ತೆಗೆದುಕೊಳ್ಳದೆ ಹಿಂತಿರುಗಿಸಿದ್ದ

ನಿರ್ಮಲಾ ಕೇಳಿದಳು– 'ಮೊದಲಿಗಿಂತಲೂ ಕೊಂಚ ಚೆನ್ನಾಗಿ ಆಗಿದ್ದಾನಾ ?'

ಭೂಂಗಿ– 'ಏನ್ ಚೆನ್ನಾಗಿದ್ದಾನೋ ಏನೋ ! ಇನ್ನೂ ಒಣಗಿ ಹೋಗಿದ್ದಾನೆ ?'

ನಿರ್ಮಲಾ– 'ಯಾಕೆ ಆರೋಗ್ಯ ಚೆನ್ನಾಗಿಲ್ಲವಂತೇನು ?'

ಭೂಂಗಿ– 'ನಾನು ಇದನ್ನು ಕೇಳಲಿಲ್ಲ ಅಮ್ಮಾವ್ರೆ. ನಿಮ್ಮ ಹತ್ತಿರ ಸುಳ್ಳೇನು ? ಅಂದ ಹಾಗೆ ನನ್ನ ಮೈದುನ ಅಲ್ಲಿ ಕೆಲಸ ಮಾಡ್ತಾನೆ. 'ನಿಮ್ಮ ಯಜಮಾನರ ಮಗ ಚೆನ್ನಾಗಿ ತಿನ್ನೊಲ್ಲ, ಎರಡು ರೊಟ್ಟಿ ತಿಂದು ಕೈ ತೊಳೆದುಕೊಳ್ತಾನೆ. ಅಷ್ಟಾಯಿತು ಅಂದ್ರೆ ದಿನವಿಡೀ ಇನ್ನೇನನ್ನೂ ತಿನ್ನುವುದಿಲ್ಲ. ಯಾವಾಗಲೂ ಓದ್ತಾನೇ ಇರ್ತಾನೆ.' ಅಂತ ಹೇಳಿದ

ನಿರ್ಮಲಾ– 'ಈ ಲಾಡುಗಳನ್ನು ವಾಪಸ್ ಯಾಕೆ ಕೊಡ್ತಿದ್ದೀಯಾ ಅಂತ ನೀನು ಕೇಳಲಿಲ್ಲವೇನೆ ?'

ಭೂಂಗಿ– 'ನಿಮ್ಮ ಹತ್ತಿರ ಸುಳ್ಳೇನು ? ನಾನು ಕೇಳಲಿಲ್ಲ ಅಮ್ಮಾವ್ರೆ ಇದನ್ನು ಇಲ್ಲಿಂದ ತಗೊಂಡು ಹೋಗು, ಇದನ್ನು ಇಲ್ಲಿಟ್ಟೋಯಾ !' ಅಂದರು. ನಾನು ತಗೊಂಡು ಬಂದೆ

ನಿರ್ಮಲಾ– 'ಇನ್ನೇನಾದರೂ ಅಂದನಾ ? ನಿನ್ನೆ ಏಕೆ ಮನೆಗೆ ಬರಲಿಲ್ಲ ಅಂತ ಕೇಳಬೇಕಾಗಿತ್ತು. ರಜ ಇತ್ತಲ್ಲ ?

ಭೂಂಗಿ– 'ನಾನು ಸುಳ್ಳು ಏಕೆ ಹೇಳಲಿ ಅಮ್ಮಾವ್ರೆ ಈ ಮಾತು ಕೇಳಬೇಕೂಂತ ನನಗೆ ನೆನಪೇ ಆಗಲಿಲ್ಲ. ಆಂ! ನೆನಪಾಯಿತು. ನೀನು ಇನ್ನು ಮೇಲೆ ಈ ಕಡೆ ಯಾವತ್ತೂ ಬರಬೇಡ ಮತ್ತು ಮನೆಯ ಯಾವ ತಿಂಡಿಯನ್ನೂ ನನಗೆ ತರಬೇಡ. ನಿನ್ನ ಯಜಮಾನಿತಿಗೆ ಹೇಳು, ಕಾಗದ ಪತ್ರವನ್ನು ಸಹ ನನಗೆ ಕಳಿಸಬೇಡ ಅಂತ, ಹುಡುಗರ ಜತೇಲೂ ಯಾವ ಸಂದೇಶವನ್ನೂ ಕಳಿಸುವುದು ಬೇಡ ಅಂತ. ಇನ್ನೂ

ಒಂದು ಮಾತು ಹೇಳಿದರು ಅಮ್ಮಾವ್ರೆ, ಅದನ್ನು ಹೇಳೋಕೆ ಬಾಯಿ ಬರ್‍ತಿಲ್ಲ. ಆಮೇಲೆ ಅಳೋಕೆ ಶುರು ಮಾಡಿದರು.

ನಿರ್ಮಲಾ : 'ಏನು ಮಾತದು ?'

ಭೂಂಗಿ– 'ಏನ್ ಹೇಳ್ಲಿ ಅಮ್ಮಾವ್ರೆ? ನಾನು ಇದ್ದರೂ ಒಂದೇ ಸತ್ತರೂ ಒಂದೇ, ಯಾರು ಅಳಬೇಕು ಅಂತ ಹೇಳಿ ಗೋಳೋ ಅಂತ ಅಳತೊಡಗಿದರು ಅಮ್ಮಾವ್ರೆ'

ನಿರ್ಮಲಾಳ ಬಾಯಿಂದ ನಿರಾಶಾದಾಯಕವಾದ ನಿಟ್ಟುಸಿರೊಂದು ಬಂತು. ಕರುಳು ಕಿತ್ತು ಬರುತ್ತಿರುವಂಥ ಅನುಭವವಾಯಿತು ಅವಳಿಗೆ, ಅವಳ ರೋಮ ರೋಮದಿಂದ ಆರ್ತನಾದ ಚೀತ್ಕರಿಸತೊಡಗಿತು. ಅಲ್ಲಿ ಅವಳಿಂದ ಕುಳಿತು ಕೊಳ್ಳಲಾಗಲಿಲ್ಲ. ಹೋಗಿ ಹಾಸಿಗೆಯ ಮೇಲೆ ಬಿಕ್ಕಳಿಸಿ–ಬಿಕ್ಕಳಿಸಿ ಅಳತೊಡಗಿದಳು. 'ಅವನಿಗೂ ಗೊತ್ತಾಯಿತು ಅಂತ ಕಾಣುತ್ತೆ' ಅವಳ ಅಂತಃಕರಣದಿಂದ ಮತ್ತೆ ಮತ್ತೆ "ಅವನಿಗೂ ಗೊತ್ತಾಯಿತು ಅಂತ ಕಾಣುತ್ತೆ' ಎಂಬ ಮಾತುಗಳೇ ಪ್ರತಿಧ್ವನಿಸತೊಡಗಿದವು. ದೇವರೇ ಮುಂದೇನು ಗತಿ ? ಅನುಮಾನದ ಬೆಂಕಿಯಲ್ಲಿ ಭಸ್ಮವಾಗುತ್ತಿದ್ದ ಆಕೆ, ಅದೇ ಬೆಂಕಿಯಲ್ಲಿ ಇನ್ನೂ ತೀವ್ರವಾಗಿ ಬೇಯತೊಡಗಿದಳು. ಅವಳಿಗೆ ತನ್ನ ಬದುಕಿನ ಬಗೆಗೆ ಯಾವುದೇ ಚಿಂತೆಯಿರಲಿಲ್ಲ. ತಾನು ಆಸೆಪಡುವಂಥಾದ್ದು ಅವಳ ಬದುಕಿನಲ್ಲಿ ಇನ್ನೇನು ತಾನೇ ಉಳಿದಿದೆ?

ಇದೆಲ್ಲ ನನ್ನ ಪೂರ್ವಾರ್ಜಿತ ಕರ್ಮಗಳ ಫಲವಲ್ಲದೇ ಮತ್ತೇನು ಎಂದು ತನಗೆ ತಾನು ಸಮಾಧಾನ ಹೇಳಿಕೊಂಡಳು. ಇಂಥ ಅವಸ್ಥೆಯಲ್ಲಿ ಬಹಳ ದಿನ ಬದುಕಬೇಕೆಂದು ಯಾವ ನಿರ್ಲಜ್ಜ ತಾನೇ ಬಯಸುತ್ತಾನೆ ? ಕರ್ತವ್ಯದ ಹೋಮಕುಂಡದ ಮೇಲೆ ಆಕೆ ತನ್ನ ಬದುಕನ್ನು, ಬದುಕಿನ ಎಲ್ಲಾ ಆಕಾಂಕ್ಷೆಗಳನ್ನು ಹೋಮ ಮಾಡಿದ್ದಳು. ಅವಳ ಹೃದಯ ರೋದಿಸುತ್ತಿತ್ತು. ಆದರೆ ಮುಖಕ್ಕೆ ನಗುವಿನ ಲೇಪನ ಮಾಡಿಕೊಂಡಿದ್ದಳು. ಯಾರ ದೇಹದ ಸ್ಪರ್ಶ ಸರ್ಪದ ಶೀತಲ ಸ್ಪರ್ಶದ ಅನುಭವವನ್ನು ನೀಡುತ್ತಿತ್ತೋ ಅವರ ದೇಹವನ್ನು ಆಲಂಗಿಸಿಕೊಳ್ಳುವಾಗ ಅವಳ ಮನಸ್ಸಿನಲ್ಲಿ ಎಷ್ಟು ತಿರಸ್ಕಾರ, ಅಸಹ್ಯ, ನೋವು ಉಂಟಾಗುತ್ತಿತ್ತೋ ಅದನ್ನು ಯಾರು ಅರ್ಥಮಾಡಿಕೊಳ್ಳಬಲ್ಲರು ? ಈ ಭೂಮಿ ಬಿರುಕು ಬಿಟ್ಟರೆ ನಾನು ಅದರೊಳಗೆ ತೂರಿಬಿಟ್ಟೇನು ಎಂದೇ ಆಗೆಲ್ಲ ಅವಳಿಗನ್ನಿಸುತ್ತಿತ್ತು. ಬದುಕಿನ ಈ ವಿಡಂಬನೆಗಳೆಲ್ಲ ಈವರೆಗೆ ಅವಳ ಮಟ್ಟಿಗೆ ಮಾತ್ರ ಇದ್ದುವು. ತನ್ನ ಬಗೆಗೆ ಚಿಂತಿಸುವುದನ್ನೇ ಅವಳು ಬಿಟ್ಟಿದ್ದಳು. ಆದರೆ ಆ ಸಮಸ್ಯೆ ಈಗ ಅತ್ಯಂತ ಭಯಂಕರವಾಗಿ ನಿಂತಿದೆ. ಅವಳು ತನ್ನ ಕಣ್ಣುಗಳಿಂದ ಮಂಸಾರಾಮನ ಆತ್ಮರೋದನೆಯನ್ನು ನೋಡಲು ಸಿದ್ಧಳಿರಲಿಲ್ಲ. ಮಂಸಾರಾಮನಂಥ ಆತ್ಮಾಭಿಮಾನಿ, ಸಾಹಸಿ ಯುವಕನ ಮೇಲೆ ಈ ಆರೋಪಣೆಯಿಂದಾಗಬಹುದಾಗಿದ್ದ ಸ್ಥಿತಿಯ ಕಲ್ಪನೆ ಮಾಡಿಕೊಳ್ಳುವಷ್ಟರಿಂದಲೇ ಅವಳ ಪ್ರಾಣ ಕಂಪಿಸುತ್ತಿತ್ತು. ಇನ್ನು ಮುಂದೆ ಎಂಥೆಂಥ ಆರೋಪ–ಅನುಮಾನಗಳು ಬಂದರೂ ಸರಿ, ಇನ್ನು ನಾನು ಸುಮ್ಮನಿರಬಾರದೆಂದು ಯೋಚಿಸಿದಳು. ಮಂಸಾರಾಮನನ್ನು

ರಕ್ಷಿಸಬೇಕೆಂಬ ಛಲ ಅವಳಲ್ಲಿ ಮೂಡಿತು. ತನ್ನೆಲ್ಲ ಸಂಕೋಚ ಮತ್ತು ನಾಚಿಕೆಯನ್ನು ತೆಗೆದು ಬಿಸಾಡಬೇಕೆಂದು ಆಕೆ ನಿರ್ಧರಿಸಿದಳು.

ವಕೀಲರು ಊಟ ಮುಗಿಸಿ ಕಛೇರಿಗೆ ಹೊರಡುವ ಮುಂಚೆ ನಿರ್ಮಲಾಳನ್ನು ಒಂದು ಸಾರಿ ಅವಶ್ಯವಾಗಿ ಭೇಟಿಯಾಗುತ್ತಿದ್ದರು. ಅವರು ಹೊರಡುವ ಸಮಯವಾಗಿತ್ತು. ಇನ್ನೇನು ಬರುತ್ತಾರೆ ಅಂದುಕೊಂಡು ನಿರ್ಮಲಾ ಬಾಗಿಲಲ್ಲೇ ನಿಂತು ಕಾಯತೊಡಗಿದಳು. ಆದರೆ ಇವತ್ತು ಅವಳು ಏನು ನೋಡುತ್ತಿದ್ದಾಳೆ ? ಅವರು ಇವಳಲ್ಲಿಗೆ ಬರದೆ ಹಾಗೆಯೇ ಹೊರಗೆ ಬಂದರು. ನಿನ್ನೆಯವರೆಗೆ ಟಾಂಗಾವನ್ನು ರೆಡಿಮಾಡಿಕೊಂಡು ತರುವಂತೆ ಅವರು ಅಲ್ಲಿಂದಲೇ ಆಜ್ಞಾಪಿಸುತ್ತಿದ್ದರು. ಹಾಗಾದರೆ ಇವತ್ತು ಅವರು ಇಲ್ಲಿಗೆ ಬರುವುದಿಲ್ಲ, ತಮ್ಮ ರೂಮಿನಿಂದ ಹಾಗೆಯೇ ಹೊರಟು ಹೋಗುವರೇನು ? ಇಲ್ಲ, ಹೀಗಾಗಬಾರದು. ಆಕೆ ಭೂಂಗಿಯನ್ನು ಕರೆದು ಹೇಳಿದಳು.– 'ಹೋಗಿ ಯಜಮಾನರನ್ನು ಕರೆದುಕೊಂಡು ಬಾ. ತುರ್ತು ಕೆಲಸವಿದೆ, ಬಂದು ಹೋಗುವಂತೆ ಹೇಳು.'

ವಕೀಲರು ಹೊರಡಲು ಸಿದ್ಧರಾಗಿದ್ದರು. ಭೂಂಗಿ ಹೋಗಿ ಹೇಳಿದ ಮೇಲೆ ನಿರ್ಮಲಾಳ ರೂಮಿನವರೆಗೆ ಬಂದರು. ಆದರೆ ಒಳಗಡೆ ಹೋಗದೆ ದೂರದಿಂದಲೇ 'ಏನ್ ವಿಷಯ ? ಬೇಗ ಹೇಳು, ನಾನು ಒಂದು ತುರ್ತು ಕೆಲಸದ ಮೇಲೆ ಹೋಗಬೇಕಿದೆ. ಈಗ ಕೊಂಚ ಹೊತ್ತಿನ ಮುಂಚೆ ಹೆಡ್‌ಮಾಸ್ಟರ್ ಸಾಹೇಬರಿಂದ ಒಂದು ಪತ್ರ ಬಂದಿದೆ. ಮಂಸಾರಾಮನಿಗೆ ಜ್ವರವಂತೆ, ಮನೆಗೆ ಕರೆದುಕೊಂಡು ಹೋಗಿ ಶುಶ್ರೂಷೆ ಮಾಡಿದರೆ ಒಳ್ಳೆಯದು ಅಂತ ಬರೆದಿದ್ದಾರೆ. ಆದ್ದರಿಂದ ಆ ಮಾರ್ಗವಾಗಿಯೇ ಕಛೇರಿಗೆ ಹೋಗೋಣಾಂತ ಇದ್ದೀನಿ. ನಿನ್ನ ಬಳಿ ಅಂಥ ವಿಶೇಷವಾದದ್ದೇನೂ ಇಲ್ಲವಲ್ಲ, ಹೇಳೋದಕ್ಕೆ ?'

ನಿರ್ಮಲಾಳಿಗೆ ವಜ್ರಾಘಾತವಾದಂಥ ಅನುಭವವಾಯಿತು. ಮಾತು ಮತ್ತು ಕಣ್ಣೀರಿನ ಮಧ್ಯೆ ಸಂಘರ್ಷವೇ ನಡೆಯತೊಡಗಿತು. ಯಾವುದು ಮುಂಚೆ ಎಂಬುದರಲ್ಲಿ ಪೈಪೋಟಿ ಇದ್ದಂಥ ಅನುಭವವಾಯಿತು. ಈ ಎರಡರಲ್ಲಿ ಯಾವುದೇ ಒಂದು, ಒಂದು ಹೆಜ್ಜೆ ಹಿಮ್ಮೆಟ್ಟಲೂ ಸಿದ್ಧವಿರಲಿಲ್ಲ. ಧ್ವನಿ ದುರ್ಬಲವಾಗಿದ್ದುದರಿಂದ ಹಾಗೂ ಕಣ್ಣೀರು ಸಬಲವಾಗಿದ್ದುದರಿಂದ ಇವೆರಡರ ಮಧ್ಯೆ ಯಾರ ಗೆಲುವಾಗುತ್ತದೆ, ಯಾರು ಮುನ್ನುಗ್ಗುತ್ತಾರೆ ಎಂದು ಹೇಳುವುದೇ ಕಷ್ಟವಾಗಿತ್ತು. ಹೀಗಾಗಿ ಇಬ್ಬರೂ ಒಟ್ಟಿಗೇನೇ ಹೊರ ಬಂದರು. ಹೊರ ಬರುತ್ತಿದ್ದಂತೆಯೇ ಬಲಶಾಲಿ ದುರ್ಬಲನನ್ನು ಅದುಮಿಬಿಟ್ಟಿ, ಬಾಯಿಂದ ಬಂದದ್ದು– 'ಅಂಥಾ ವಿಶೇಷವೇನಿಲ್ಲ, ನೀವು ಇವತ್ತು ಆ ಕಡೆ ಹೋಗ್ತಿದ್ದೀರಲ್ಲ ?'

ವಕೀಲರು : 'ಹುಡುಗರು ಹೇಳಿದರು, ನಿನ್ನೆ ಚೆನ್ನಾಗಿದ್ದನಂತೆ, ಕುಳಿತು ಓದ್ತಾ ಇದ್ದನಂತೆ. ಆದರೆ ಇವತ್ತೇನಾಯಿತೋ ಅವನಿಗೆ !'

ನಿರ್ಮಲಾ ಆವೇಶದಿಂದ ನಡುಗುತ್ತಾ ಹೇಳಿದಳು– 'ಇದನ್ನೆಲ್ಲಾ ನೀವೇ ಮಾಡ್ತಿರೋದು.'

ವಕೀಲರು ಹುಬ್ಬು ಗಂಟಿಕ್ಕಿಕೊಂಡು ನುಡಿದರು– 'ನಾನಾ ? ನಾನೇನು ಮಾಡ್ತಾ ಇದ್ದೀನಿ ?'

ನಿರ್ಮಲಾ : 'ನೀವು ಏನ್ ಮಾಡ್ತಾ ಇದ್ದೀರಾ ಅಂತ ನಿಮ್ಮ ಆತ್ಮವನ್ನು ನೀವು ಕೇಳಿಕೊಳ್ಳಿ.'

ವಕೀಲರು : 'ಇಲ್ಲಿ ಓದಲು ಅವನಿಗೆ ಮನಸ್ಸಿಲ್ಲ, ಅಲ್ಲಿ ಹುಡುಗರ ಜೊತೆ ಸಂತೋಷದಿಂದ ಓದಿಕೊಳ್ತಾನೆ ಅಂತ ನಾನು ತಿಳಿದುಕೊಂಡಿದ್ದೆ. ಹೀಗೆ ನಾನು ಯೋಚಿಸಿದ್ದು ತಪ್ಪೇನು ? ಇಷ್ಟು ಬಿಟ್ಟು ನಾನು ಏನು ಮಾಡಿದೆ ?'

ನಿರ್ಮಲಾ : 'ಚೆನ್ನಾಗಿ ಯೋಚಿಸಿ, ಈ ಕಾರಣಕ್ಕಾಗಿಯಾ ನೀವು ಅವನ್ನು ಹೊರಗೆ ಕಳಿಸಿದ್ದು ? ನಿಮ್ಮ ಮನಸ್ಸಿನಲ್ಲಿ ಬೇರೇನೂ ಇರಲಿಲ್ಲವೇನು ?'

ವಕೀಲರು ಕೊಂಚ ಹಿಂದೆ ಮುಂದೆ ನೋಡಿದರು. ತಮ್ಮ ತಪ್ಪನ್ನು ಮುಚ್ಚಿಕೊಳ್ಳುವುದಕ್ಕಾಗಿ ಮುಗುಳ್ನಗುತ್ತಾ ಹೇಳಿದರು– 'ಇದು ಬಿಟ್ಟು ಇನ್ನೇನಿರಲು ಸಾಧ್ಯ, ನೀನೇ ಹೇಳು ?'

ನಿರ್ಮಲಾ : 'ಆಯಿತು, ಇದೇ ಕಾರಣ ಅಂತ ಇಟ್ಕೊಳ್ಳೋಣ, ದಯವಿಟ್ಟು ನೀವು ಇವತ್ತು ಅವನನ್ನು ಮನೆಗೆ ಕರೆದುಕೊಂಡು ಬನ್ನಿ, ಅಲ್ಲಿದ್ದರೆ ಅವನ ಖಾಯಿಲೆ ಹೆಚ್ಚಾಗುವ ಸಾಧ್ಯತೆಯಿದೆ. ಇಲ್ಲಿ ಅಕ್ಕ ಅವನನ್ನು ಚೆನ್ನಾಗಿ ನೋಡ್ಕೋತಾರೆ.'

ಒಂದು ಕ್ಷಣ ಬಿಟ್ಟು ಅವಳು ತಲೆ ತಗ್ಗಿಸಿ ಹೇಳಿದಳು– 'ನಾನಿಲ್ಲಿರುವುದರಿಂದ ಅವನ್ನು ಕರೆದುಕೊಂಡು ಬರಲು ನಿಮ್ಮಿಂದ ಆಗದೇ ಹೋದರೆ ನನ್ನನ್ನು ನನ್ನ ತೌರು ಮನೆಗೆ ಕಳಿಸಿಬಿಡಿ, ನಾನು ಅಲ್ಲಿ ಸುಖವಾಗಿರ್ತೀನಿ.'

ವಕೀಲರು ಏನೂ ಮಾತನಾಡಲಿಲ್ಲ. ಅವರು ಹೊರಗೆ ಬಂದರು. ಟಾಂಗಾ ಸ್ಕೂಲಿನ ಕಡೆ ಹೊರಟಿತು.

ಹೇ ಮನವೇ, ನಿನ್ನ ಸ್ವಭಾವ ಅದೆಷ್ಟು ವಿಚಿತ್ರ! ನಿನ್ನಲ್ಲಿ ಅದೆಷ್ಟು ರಹಸ್ಯಗಳುಂಟು ? ನಿನ್ನನ್ನು ಅರಿತವರಾರು ! ಎಷ್ಟು ಬೇಗ ನೀನು ನಿನ್ನ ಬಣ್ಣ ಬದಲಾಯಿಸುತ್ತಿ ? ಈ ಕಲೆಯಲ್ಲಿ ನೀನು ಪ್ರವೀಣನಾಗಿದ್ದೀಯಾ ! ಬಾಣ ಬಿರುಸುಗಳು ತಮ್ಮ ಬಣ್ಣ ಬದಲಾಯಿಸುವಲ್ಲಿ ಕೊಂಚ ತಡವಾಗಬಹುದು. ಆದರೆ ನೀನು ಬಣ್ಣ ಬದಲಿಸುವಲ್ಲಿ ಅದರ ಲಕ್ಷಾಂಶವೂ ತಡವಾಗುವುದಿಲ್ಲ. ಇದುವರೆಗೆ ವಾತ್ಸಲ್ಯ ನೆಲೆ ಮಾಡಿದ್ದ ಜಾಗದಲ್ಲಿ ಈಗ ಅನುಮಾನ ತಳವೂರಿದೆ ! 'ಮನೆಗೆ ಬರಲು ಅವನು ನೆಪ ಹೂಡಿಲ್ಲ ತಾನೇ ?' ಅವರು ಯೋಚಿಸುತ್ತಿದ್ದರು.

# ಹತ್ತು

ಮಂಸಾರಾಮ ಎರಡು ದಿನಗಳವರೆಗೆ ಗಾಢವಾದ ಚಿಂತೆಯಲ್ಲಿದ್ದ. ಅವನಿಗೆ ಮತ್ತೆ ಮತ್ತೆ ತನ್ನ ತಾಯಿಯ ನೆನಪಾಗುತ್ತಿತ್ತು. ಊಟದ ರುಚಿಯೂ ನಾಲಗೆಗೆ ಹತ್ತುತ್ತಿರಲಿಲ್ಲ. ಓದಿನಲ್ಲೂ ಮನಸ್ಸು ಮಗ್ನವಾಗುತ್ತಿರಲಿಲ್ಲ. ಅವನ ಬದುಕಿನ ರೀತಿಯೇ ಬದಲಾಗಿ ಹೋಗಿತ್ತು. ಎರಡು ದಿನಗಳಾಗಿದ್ದವು. ಹಾಸ್ಟೆಲ್‌ನಲ್ಲಿದ್ದರೂ ಅಧ್ಯಾಪಕರು ಕೊಟ್ಟಿದ್ದ ಮನೆ ಕೆಲಸವನ್ನೂ ಅವನು ಮಾಡಿರಲಿಲ್ಲ. ಇದರಿಂದಾಗಿ ಅವನು ತರಗತಿಯಲ್ಲಿ ಬೆಂಚಿನ ಮೇಲೆ ನಿಲ್ಲುವ ಪ್ರಸಂಗ ಬಂತು. ಈ ರೀತಿ ಹಿಂದೆಂದೂ ಅವನ ವಿದ್ಯಾರ್ಥಿ ಜೀವನದಲ್ಲಾಗಿರಲಿಲ್ಲ. ಈ ಅಸಹನೀಯ ಅಪಮಾನವನ್ನೂ ಸಹಿಸಿಕೊಂಡ.

ಮೂರನೆಯ ದಿನ ಇದೇ ಚಿಂತೆಯಲ್ಲಿ ಮುಳುಗಿದ್ದ ಮಂಸಾರಾಮ ತನಗೆ ತಾನೇ ಸಮಾಧಾನ ಹೇಳಿಕೊಳ್ಳುತ್ತಿದ್ದ– 'ಈ ಪ್ರಪಂಚದಲ್ಲಿ ನನ್ನೊಬ್ಬನ ತಾಯಿ ಮಾತ್ರವೇ ಸತ್ತಿರುವುದು ? ಮಲತಾಯಂದಿರು ಇರುವುದು ಹೀಗೇಯೇನು ? ನನ್ನೊಬ್ಬನ ಜೊತೆ ಮಾತ್ರ ಹೀಗಾಗುತ್ತಿದೆ ಎಂದು ನಾನೇಕೆ ಭಾವಿಸಬೇಕು ? ಈಗ ನಾನು ಗಂಡಸಿನಂತೆ ಎರಡು ಪಟ್ಟು ಹೆಚ್ಚಿನ ಕಷ್ಟಪಟ್ಟು ಕೆಲಸ ಮಾಡಬೇಕು. ಈ ವರ್ಷ ನನಗೆ ವಿದ್ಯಾರ್ಥಿವೇತನ ಬಂತೆಂದರೆ ಮನೆಯಿಂದ ಒಂದು ಕಾಸೂ ಕೇಳುವ ಪ್ರಸಂಗ ಬರುವುದಿಲ್ಲ. ಎಷ್ಟೋ ಹುಡುಗರು ತಮ್ಮ–ತಮ್ಮ ಸ್ವಂತ ಪರಿಶ್ರಮದಿಂದ ದೊಡ್ಡ–ದೊಡ್ಡ ಉಪಾಧಿಗಳನ್ನು ಪಡೆದುಕೊಂಡಿಲ್ಲವೇನು ? ಕಷ್ಟಗಳನ್ನು ಎದುರಿಸುವುದು, ಹಿಡಿದ ಕೆಲಸವನ್ನು ಸಾಧಿಸುವುದು ಅದಕ್ಕಾಗಿ ಕೆಲಸ ಮಾಡುವುದು ಮನುಷ್ಯನ ಕರ್ತವ್ಯವಾಗಬೇಕು. ಅದೃಷ್ಟ ಚೆನ್ನಿಲ್ಲ ಅಂತ ಅತ್ತೂ ಕರೆದು ಮಾಡುವುದರಿಂದ ಏನು ಪ್ರಯೋಜನ ?'

ಅಷ್ಟರಲ್ಲಿ ಜಿಯಾರಾಮ ಅಲ್ಲಿಗೆ ಬಂದ.

ಮಂಸಾರಾಮ ಕೇಳಿದ : 'ಮನೆಯ ಸ್ಥಿತಿ ಹೇಗಿದೆ ಜಿಯಾ ? ಹೊಸ ಅಮ್ಮ ಸಂತೋಷದಿಂದಿರಬೇಕಲ್ಲವಾ ?'

ಜಿಯಾರಾಮ : 'ಅವರ ಮನಸ್ಸಿನಲ್ಲೇನಿದೆಯೋ ಅದು ನನಗೆ ಗೊತ್ತಿಲ್ಲಣ್ಣ. ಆದರೆ ನೀನು ಮನೆ ಬಿಟ್ಟಲಾಗಾಯ್ತು ಅವರು ಒಂದು ಹೊತ್ತೂ ಊಟ ಮಾಡಿಲ್ಲ. ಯಾವಾಗ ನೋಡಿದರೂ ಅಳ್ತಿರ್ತಾರೆ. ಅಪ್ಪಾಜಿ ಬಂದದ್ದು ಕಂಡರೆ ಸಾಕು, ಇದ್ದಕ್ಕಿದ್ದಂತೆಯೇ ನಗಲಾರಂಭಿಸುತ್ತಾರೆ. ನೀನು ಬೆಳಿಗ್ಗೆ ಬಂದೆ. ಆವತ್ತು ಸಂಜೇನೇ ನಾನೂ ಇಲ್ಲಿಗೆ ಬಂದು ಬಿಡೋಣ ಅಂತ, ನಿನ್ನ ಜತೇಲೆ ಇದ್ದುಬಿಡೋಣಾಂತ ನನ್ನ ಪುಸ್ತಕಗಳನ್ನು ಜೋಡಿಸಿಟ್ಟು ಕೊಳ್ಳುತ್ತಿದ್ದೆ. ಅಷ್ಟರಲ್ಲಿ ಭೂಂಗಿ ಹೋಗಿ ಅಮ್ಮನಿಗೆ ಹೇಳಿದಳು. ಅಪ್ಪಾಜಿ ಅಲ್ಲೇ ಕುಳಿತಿದ್ದರು. ಅವರ ಮುಂದೆಯೇ ಅಮ್ಮನಿಗೆ ಹೇಳಿದಳು. ಅವರ ಮುಂದೆಯೇ ಅಮ್ಮ ಬಂದು ನನ್ನ ಕೈಲಿದ್ದ ಪುಸ್ತಕಗಳನ್ನು ಕಿತ್ತುಕೊಂಡು ಅಳುತ್ತ ಹೇಳಿದಳು– 'ನೀನೂ ಹೊರಟುಹೋದೆ ಅಂದರೆ ಈ ಮನೆಯಲ್ಲಿ ಯಾರಿರುತ್ತಾರೆ ? ನನ್ನಿಂದಾಗಿ

ನೀವೆಲ್ಲರೂ ಒಬ್ಬೊಬ್ಬರಾಗಿ ಮನೆ ಬಿಟ್ಟು ಹೋಗ್ತಾ ಹೋದರೆ, ಇಗೋ ನಾನೇ ಈ ಮನೆಬಿಟ್ಟು ಎಲ್ಲಿಗಾದರೂ ಹೊರಟು ಹೋಗ್ತೇನೆ, ನನಗೂ ಬೇಸರವಾಗಿದೆ. ಅಷ್ಟು ಹೊತ್ತಿಗೆ ಅಪ್ಪಾಜಿ ಎದ್ದು ಹೋಗಿದ್ದರು. ಸರಿ, ನಾನೂ ಕೂಡ ಕೋಪದಿಂದಲೇ ಹೇಳಿದೆ– 'ನೀವೇಕೆ ಹೋಗ್ತೀರಾ ಎಲ್ಲಿಗಾದರೂ ? ಈ ಮನೆ ನಿಮ್ಮದು, ನೀವು ಆರಾಮವಾಗಿರಿ, ನಾವ್‌ತಾನೇ ಬೇರೆಯವರು, ನಾವುಗಳು ಇಲ್ಲದೆ ಹೋದರೆ ನೀವು ಸುಖವಾಗಿ ಇರಬಹುದು.'

ಮಂಸಾರಾಮ : 'ಚೆನ್ನಾಗಿ ಹೇಳಿದೆ. ತುಂಬಾ ಚೆನ್ನಾಗಿ ಹೇಳಿದ್ದೀಯಾ ! ಈ ಮಾತುಗಳನ್ನು ಕೇಳಿ ಆಕೆಗೆ ಇನ್ನೂ ಕೋಪ ಬಂದಿರಬೇಕು. ಅದೇ ಕೋಪದಲ್ಲಿ ಹೋಗಿ ಅಪ್ಪಾಜಿಗೆ ಚಾಡಿ ಹೇಳಿರಬೇಕು.'

ಜಿಯಾರಾಮ : 'ಇಲ್ಲ ಹಾಗೇನಾಗಲಿಲ್ಲ. ಪಾಪ ಅವರು ನೆಲದ ಮೇಲೆ ಕೂತು ಅಳಲಾರಂಭಿಸಿದರು' ನನ್ನಿಂದಲೂ ಏಕೋ ತಡೆಯಲಾಗಲಿಲ್ಲ. ನಾನೂ ಅಳಲಾರಂಭಿಸಿದೆ ಅವರು ತಮ್ಮ ಸೆರಗಿನಿಂದ ನನ್ನ ಕಣ್ಣೀರನ್ನು ಒರೆಸುತ್ತ ಹೇಳಿದರು– 'ಜಿಯಾ, ಆ ದೇವರನ್ನು ಸಾಕ್ಷಿಯಾಗಿಟ್ಟುಕೊಂಡು ಹೇಳ್ತಿದ್ದೇನೆ. ನಾನು ನಿನ್ನಣ್ಣನ ವಿಷಯವಾಗಿ ನಿಮ್ಮ ತಂದೆಯವರಿಗೆ ಒಂದು ಮಾತನ್ನೂ ಹೇಳಿಲ್ಲ. ನನ್ನ ಹಣೆಬರಹದಲ್ಲಿ ಕಳಂಕವೇ ಬರೆದಿದೆ. ನಾನು ಅದನ್ನು ಅನುಭವಿಸುತ್ತಿದ್ದೇನೆ. ಅಪ್ಪಾಜಿಯವರನ್ನು ಕುರಿತಂತೆ ಇನ್ನೂ ಏನೇನನ್ನೋ ಹೇಳಿದರು. ಆದರೆ ನನಗೆ ಅದಾವುದೂ ಅರ್ಥವಾಗಲಿಲ್ಲ.'

ಮಂಸಾರಾಮ ಉದ್ವಿಗ್ನತೆಯಿಂದ ಕೇಳಿದ : 'ಅಪ್ಪಾಜಿ ವಿಷಯದಲ್ಲಿ ಆಕೆ ಏನು ಹೇಳಿದಳು ಅಂತ ನೆನಪಿದೆಯೇ ನಿನಗೆ ?'

ಜಿಯಾರಾಮ : 'ಇಲ್ಲಣ್ಣ, ನನಗೆ ಯಾವ ಮಾತೂ ನೆನಪಿಲ್ಲ. ನನ್ನ ಮೆಮೋರಿ ಅಷ್ಟೇನೂ ಚೆನ್ನಿಲ್ಲ. ಆದರೆ ಅವರ ಮಾತಿನಿಂದ ಏನು ಅನ್ನಿಸಿತೆಂದರೆ ಅಪ್ಪಾಜಿಯವರನ್ನು ಸಂತೋಷವಾಗಿಡಲು ಅವರು ಈ ಎಲ್ಲ ನಾಟಕವಾಡಬೇಕಾಗಿ ಬಂದಿದೆಯಂತೆ. ಧರ್ಮ ಅಧರ್ಮ ಅಂತ ಏನೇನೋ ಮಾತನಾಡಿದರು. ನನಗೊಂದೂ ಅರ್ಥವಾಗಲಿಲ್ಲ. ಅವರ ಉದ್ದೇಶ ನಿನ್ನನ್ನು ಇಲ್ಲಿಗೆ ಕಳಿಸಬೇಕೆಂಬುದು ಸರ್ವಥಾ ಆಗಿರಲಿಲ್ಲವೆಂಬುದಂತೂ ನನಗೆ ಸ್ಪಷ್ಟವಾಗಿದೆ.'

ಮಂಸಾರಾಮ : 'ನಿನಗೆ ಆಕೆಯ ನಾಟಕ ಅರ್ಥವಾಗುವುದಿಲ್ಲ. ಅವು ಅರ್ಥವಾಗದಷ್ಟು ಆಳದಲ್ಲಿವೆ.'

ಜಿಯಾರಾಮ : 'ನಿನಗೆ ಹಾಗೆ ಅನ್ನಿಸುತ್ತಿರಬಹುದು. ಆದರೆ ನನಗೆ ಹಾಗೆ ಅನ್ನಿಸುತ್ತಿಲ್ಲ.'

ಮಂಸಾರಾಮ : 'ಜಾಮಿಟ್ರಿಯನ್ನೇ ನಿನ್ನಿಂದ ಅರ್ಥಮಾಡಿಕೊಳ್ಳಲಾಗುವುದಿಲ್ಲ ಅಂದ ಮೇಲೆ ಇದೆಲ್ಲ ನಿನಗೆ ಹೇಗೆ ಅರ್ಥವಾಗುತ್ತೆ ಹೇಳು ? ಅವತ್ತು ರಾತ್ರಿ ನನ್ನನ್ನು ಊಟಕ್ಕೆ ಕರೆಯಲು ಆಕೆ ಬಂದಳು. ಬಂದು ನನ್ನನ್ನು ಒತ್ತಾಯ ಮಾಡಿದಳು. ಆ ಒತ್ತಾಯಕ್ಕೆ

ಕಟ್ಟುಬಿದ್ದು ನಾನೂ ಹೊರಡಲು ರೆಡಿಯಾದೆ. ಆಗ ಹೊರಗಡೆಯಿಂದ ಬಂದ ಅಪ್ಪಾಜಿಯವರನ್ನು ನೋಡುತ್ತಿದ್ದಂತೆಯೇ ಆಕೆ ತನ್ನ ರೂಪವನ್ನೇ ಬದಲಿಸಿಬಿಟ್ಟಳು. ಆ ಪ್ರಸಂಗವನ್ನು ನನ್ನಿಂದ ಮರೆಯಲಾಗುವುದೇನು ?'

ಜಿಯಾರಾಮ : 'ಇದೇ ನನಗೂ ಅರ್ಥವಾಗುತ್ತಿಲ್ಲಾ. ನಿನ್ನೆ ಏನಾಯಿತು ಅಂತಿಯಾ ? ಸ್ಕೂಲಿನಿಂದ ನಾನು ಮನೆಗೆ ಹೋಗುತ್ತಿದ್ದಂತೆಯೇ 'ನಿನ್ನ ಅಣ್ಣ ಹೇಗಿದ್ದಾನೆ ? ಅಂತ ವಿಚಾರಿಸಿದರು. 'ಇನ್ನೆಂದೂ ಆತ ಮನೆಗೆ ಬರುವುದಿಲ್ಲ ಅಂತ ಹೇಳಿದ್ದಾನೆ ' ಎಂದು ಹೇಳಿದೆ. ನಾನೇನೂ ಸುಳ್ಳು ಹೇಳಲಿಲ್ವಲ್ಲ ? ನೀನೇ ಹೇಳಿದ್ದಲ್ಲ ?' ನಾನು ಇಷ್ಟು ಹೇಳುತ್ತಿದ್ದಂತೆಯೇ ಅವರು ಬಿಕ್ಕಳಿಸಿ ಬಿಕ್ಕಳಿಸಿ ಎಷ್ಟು ಅತ್ತರೆಂದರೆ, ನಾನು ಈ ಮಾತನ್ನು ಏಕಾದರೂ ಹೇಳಿದೆನೋ ಅಂತ ನನಗೆ ಪಶ್ಚಾತ್ತಾಪವಾಗತೊಡಗಿತು. ಪುನಃ ಪುನಃ ಅವರು 'ಅವನು ನನ್ನಿಂದಾಗಿ ಮನೆ ಬಿಟ್ಟು ಹೊರಟು ಹೋದನಾ ? ನನ್ನ ಮೇಲೆ ಅವನಿಗೆ ಅಷ್ಟು ಕೋಪವಾ ?' ಅಂತ ಕೇಳುತ್ತಿದ್ದರು. ಅಯ್ಯೊ, ಅವನು ಹೊರಟು ಹೋದ. ಹೋಗುವಾಗ ನನ್ನನ್ನು ಬಂದು ನೋಡಲೂ ಇಲ್ಲ. ಅಡಿಗೆ ಸಿದ್ಧವಾಗಿತ್ತು , ಊಟಕ್ಕೂ ಬರಲಿಲ್ಲ. ಅಯ್ಯೋ ದೇವರೆ ! ನಾನು ಏನ್ ಹೇಳ್ಲಿ, ಎಂಥ ಕಷ್ಟ ನನಗೆ ಬಂದಿದೆ ಅಂತ ಅವರು ಗೋಳಾಡುತ್ತಲೇ ಇದ್ದರು. ಅಷ್ಟರಲ್ಲಿ ಅಪ್ಪಾಜಿ ಬಂದರು. ಅವರು ಕೂಡಲೇ ಕಣ್ಣುಗಳನ್ನು ಒರೆಸಿಕೊಂಡು ಮುಗುಳ್ನಗುತ್ತ ಅವರ ಹತ್ತಿರ ಹೋದರು. ಇದು ನನಗೆ ಅರ್ಥವಾಗುತ್ತಿಲ್ಲ. ಇವತ್ತು ನಾನು ಮನೆಯಿಂದ ಹೊರಟಾಗ ನಿನ್ನನ್ನು ಮನೆಗೆ ಕರೆದುಕೊಂಡು ಬಾ ಅಂತ ಗೋಗರೆದರು. ಇವತ್ತು ನಾನು ನಿನ್ನನ್ನು ಎಳೆದುಕೊಂಡು ಹೋಗ್ತೀನಿ ಎರಡು ದಿನಗಳಲ್ಲಿ ಅವರು ಎಷ್ಟು ಸಣ್ಣದಾಗಿದ್ದಾರೆ ಎಂಬುದನ್ನು ನೀನು ಕಣ್ಣಾರೆ ನೋಡಿದರೆ ನಿನಗೇ ಅವರ ಬಗ್ಗೆ ಮರುಕ ಉಂಟಾಗುತ್ತೆ ಬರ್ತೀಯಲ್ಲ ಮನೆಗೆ ?

ಮಂಸಾರಾಮ ಯಾವ ಉತ್ತರವನ್ನೂ ನೀಡಲಿಲ್ಲ. ಅವನ ಕಾಲುಗಳು ನಡುಗುತ್ತಿದ್ದವು. ಹಾಜರಿಯ ಘಂಟೆ ಬಾರಿಸುತ್ತಿದ್ದಂತೆಯೇ ಜಿಯಾರಾಮ ಹೊರಟು ಹೋದ. ಆದರೆ ಮಂಸಾರಾಮ ಬೆಂಚಿನ ಮೇಲೆ ಮಲಗಿಕೊಂಡ. ಎಷ್ಟೋ ಹೊತ್ತಿನಿಂದ ಉಸಿರೇ ಆಡಿಲ್ಲವೇನೋ ಎಂಬಂತೆ ದೀರ್ಘವಾಗಿ ಉಸಿರು ಎಳೆದುಕೊಂಡ. ಅತೀವ ವೇದನೆಯಿಂದೊಡಗೂಡಿದ ಶಬ್ದಗಳ ಹೊರತಾಗಿ ಅವನಿಗೆ ತನ್ನ ಬದುಕು ನಿರಾಧಾರವಾಗಿ ತೋರುತ್ತಿತ್ತು. ಈ ಒಂದು ಉಚ್ಛ್ವಾಸದಲ್ಲಿ ಅದೆಷ್ಟು ನಿರಾಸೆ ತುಂಬಿತ್ತು ! ಅದೆಷ್ಟು ತಾಪ, ಅದೆಷ್ಟು ಕರುಣೆ, ಅದೆಷ್ಟು ದೈನ್ಯ, ಪ್ರಾರ್ಥನೆ ತುಂಬಿತ್ತೆಂದರೆ ಅದನ್ನು ಯಾರಿಂದಲು ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಈಗೀಗ ಎಲ್ಲ ರಹಸ್ಯ ಅವನಿಗೆ ಅರ್ಥವಾಗತೊಡಗಿತ್ತು. ಹೀಗಾಗಿ ಅವನ ನೊಂದ ಹೃದಯ ಮತ್ತೆ ಮತ್ತೆ ಅಯ್ಯೋ ದೇವರೆ ! ಇಷ್ಟು ಘೋರ ಕಳಂಕವೇ ನನ್ನ ಮೇಲೆ ! ಎಂದು ಪರಿತಪಿಸುತ್ತಿತ್ತು.

ಬದುಕಿನಲ್ಲಿ ಇದಕ್ಕಿಂತಲೂ ಮಹತ್ತರವಾದ ಆಪತ್ತನ್ನು ಕಲ್ಪಿಸಿಕೊಳ್ಳಲು ಸಾಧ್ಯವೇನು ? ಪ್ರಪಂಚದಲ್ಲಿ ಇದಕ್ಕಿಂತಲೂ ಘೋರವಾದ ನೀಚ ಕೆಲಸದ ಕಲ್ಪನೆ ಮಾಡುವುದು ಸಾಧ್ಯವೇನು ? ಬಹುಶಃ ಪ್ರಪಂಚ ಹುಟ್ಟಿದಂದಿನಿಂದ ಯಾವ ತಂದೆಯೂ ತನ್ನ ಮಗನ ಮೇಲೆ ಇಷ್ಟು ನಿರ್ದಯವಾದ ಕಳಂಕವನ್ನು ಹೊರಿಸಿರಲಾರ. ಇವನ ಚಾರಿತ್ರ್ಯವನ್ನು ಎಲ್ಲರೂ ಪ್ರಶಂಸಿಸುತ್ತಿದ್ದರು. ಇವನನ್ನು ಬೇರೆಯವರಿಗೆ ಆದರ್ಶ ಎಂದು ಭಾವಿಸಿದ್ದರು. ಅಪವಿತ್ರ ವಿಚಾರಗಳನ್ನು ಎಂದೂ ತನ್ನ ಬಳಿ ಸುಳಿಯದಂತೆ ನೋಡಿಕೊಂಡ ಇವನ ಮೇಲೆಯೇ ಇಷ್ಟು ಗಂಭೀರವಾದ ಕಳಂಕವನ್ನು ಹೊರಿಸಲಾಗಿದೆ. ತನ್ನ ಹೃದಯ ಒಡೆದು ಹೋಗುತ್ತಿರುವಂಥ ಅನುಭವ ಮಂಸಾರಾಮನಿಗೆ ಆಗತೊಡಗಿತು.

ಎರಡನೆಯ ಘಂಟೆಯೂ ಬಾರಿಸಿತು. ಹುಡುಗರೆಲ್ಲ ತಮ್ಮ ತಮ್ಮ ತರಗತಿಗಳಿಗೆ ಹೋದರು. ಆದರೆ ಮಂಸಾರಾಮ ಮಾತ್ರ ಅಂಗೈ ಮೇಲೆ ಗಲ್ಲವನ್ನಿಟ್ಟುಕೊಂಡು ಅನಿಮೇಷ ಕಣ್ಣುಗಳಿಂದ ನೆಲವನ್ನೇ ನಿಟ್ಟಿಸುತ್ತಾ ಕೂತಲ್ಲೇ ಕುಳಿತಿದ್ದ – ನನ್ನ ಸರ್ವಸ್ವವೂ ಜಲಮಗ್ನವಾಗಿದೆ. ಈಗ ನಾನು ಯಾರಿಗೂ ಮುಖ ತೋರಿಸುವಂತಿಲ್ಲ ಎಂದೆಲ್ಲ ಅವನ ಮನಸ್ಸು ಚಡಪಡಿಸುತ್ತಿತ್ತು. ತರಗತಿಗೆ ಗೈರು ಹಾಜರಾಗುತ್ತಿದ್ದೇನೆ, ದಂಡ ಬೀಳುತ್ತದೆ ಎಂಬ ಪರಿವೆಯೇ ಈಗ ಅವನಿಗಿರಲಿಲ್ಲ. ಅವನ ಸರ್ವಸ್ವವೂ ನಾಶವಾಗಿರುವಾಗ ಈ ಸಣ್ಣಪುಟ್ಟ ವಿಷಯಗಳಿಗೆಲ್ಲ ಭಯಪಡುವಂಥಾದ್ದೇನಿದೆ ? ಇಷ್ಟು ದೊಡ್ಡ ಕಳಂಕ ಹತ್ತಿದ ಮೇಲೂ ನಾನು ಬದುಕಿರುವುದೆಂದರೆ, ನನ್ನ ಬದುಕಿಗೇ ಧಿಕ್ಕಾರ !

ಅದೇ ಉದ್ವಿಗ್ನಾವಸ್ಥೆಯಲ್ಲಿ ಅವನು, 'ಅಮ್ಮಾ ! ನೀನು ಎಲ್ಲಿದ್ದೀಯಾ ? ನಿನ್ನ ಈ ಮಗ, ನೀನು ಪ್ರಾಣವನ್ನೇ ಕೊಡುತ್ತಿದ್ದ ಮಗ, ನೀನು ನಿನ್ನ ಜೀವನದ ಆಧಾರ ಎಂದು ತಿಳಿದುಕೊಂಡಿದ್ದ ಈ ಮಗ ಇಂದು ಕಡುಕಷ್ಟದಲ್ಲಿದ್ದಾನೆ. ನನ್ನ ತಂದೆಯೇ ನನ್ನ ಕೊರಳನ್ನು ಕತ್ತರಿಸುತ್ತಿದ್ದಾರೆ ಹಾಯ್ ! ಅಮ್ಮಾ ನೀನು ಎಲ್ಲಿದ್ದೀಯಾ ? ಎಂದು ಬಡಬಡಿಸತೊಡಗಿದ.

ಮಂಸಾರಾಮ ಪುನಃ ಶಾಂತಚಿತ್ತದಿಂದ ಯೋಚಿಸತೊಡಗಿದ: 'ತಂದೆಗೆ ನನ್ನ ಮೇಲೆ ಈ ಅನುಮಾನ ಏಕಾದರೂ ಬಂತು ? ಇದಕ್ಕೇನು ಕಾರಣವಿರಬಹುದು ? ಅವರ ಮನಸ್ಸಿನಲ್ಲಿ ಇಂಥ ಅನುಮಾನ ಉಂಟಾಗುವಂಥ ಯಾವ ಕೆಲಸವನ್ನು ನಾನು ಮಾಡಿದೆ ? ಅಷ್ಟಕ್ಕೂ ಅವರು ನನ್ನ ತಂದೆ. ಸುಮ್ಮ ಸುಮ್ಮನೆ ನನ್ನ ಮೇಲೆ ಆರೋಪ ಮಾಡಲು ಅವರು ನನ್ನ ಶತ್ರುವೂ ಅಲ್ಲ. ಖಂಡಿತವಾಗಿ ಅವರು ಏನನ್ನಾದರೂ ಕಂಡಿರಬೇಕು, ಇಲ್ಲವೇ ಕೇಳಿರಬೇಕು. ಅವರು ನನ್ನನ್ನು ಅದೆಷ್ಟು ಪ್ರೀತಿಸುತ್ತಿದ್ದರು ! ನಾನಿಲ್ಲದೆ ಅವರು ಊಟಕ್ಕೂ ಕುಳಿತುಕೊಳ್ಳುತ್ತಿರಲಿಲ್ಲ. ಇಂಥ ತಂದೆಯೇ ನನಗೆ ಶತ್ರುವಾಗಿಬಿಟ್ಟರು ಅಂದರೆ ಇದರಲ್ಲಿ ಕಾರಣವಿಲ್ಲದೆಯೇ ಇಲ್ಲ.

ಅಂದ ಹಾಗೆ, ಈ ಅನುಮಾನಕ್ಕೆ ಬೀಜಾರೋಪವಾದದ್ದಾದರೂ ಎಂದು ? ನನ್ನನ್ನು ಬೋರ್ಡಿಂಗ್ ಹೌಸ್‌ಗೆ ಸೇರಿಸಬೇಕೆಂಬ ಪ್ರಸ್ತಾಪ ಬಂದದ್ದು ಆಮೇಲೆ. ಅವತ್ತು ರಾತ್ರಿ ಅವರು ನನ್ನ ರೂಮಿಗೆ ಬಂದು ನನ್ನನ್ನು ಪರೀಕ್ಷಿಸಿದರು. ಅವತ್ತೇ ಅವರ ಮಾತುಕತೆ, ವ್ಯವಹರಿಸುವ ರೀತಿ ಎಲ್ಲವೂ ಬದಲಾಗಿದ್ದವು. ಅವರಿಗೆ ಅಪ್ರಿಯವಾಗುವಂಥ ಘಟನೆ ಅವತ್ತು ನಡೆದದ್ದಾರೂ ಏನು ? ಹೌದೌದು, ಆವತ್ತು ಏನನ್ನಾದರೂ ತಿನ್ನಲಿಕ್ಕೆ ಕೊಡಿ ಅಂತ ಕೇಳಲು ಹೊಸ ಅಮ್ಮನ ಬಳಿ ಹೋಗಿದ್ದಾಗ, ಅಪ್ಪಾಜಿಯವರು ಅಲ್ಲೇ ಕುಳಿತಿದ್ದರು. ಈಗ ನೆನಪಾಗುತ್ತಿದೆ. ಆಗಲೇ ಅವರ ಮುಖ ರಣ ರಣ ಅಂತ ಉರಿಯಲಾರಂಭಿಸಿತ್ತು ! ಆವತ್ತಿನಿಂದಲೇ ಹೊಸ ಅಮ್ಮ ನನ್ನಿಂದ ಪಾಠ ಹೇಳಿಸಿಕೊಳ್ಳುವುದನ್ನೂ ಬಿಟ್ಟಳು. ನಾನು ಆಕೆಯ ರೂಮಿಗೆ ಹೋಗುವುದು, ಬರುವುದು, ಅಮ್ಮನೊಂದಿಗೆ ಮಾತನಾಡುವುದು, ಆಕೆಗೆ ಪಾಠ ಹೇಳಿಕೊಡುವುದು ಅಪ್ಪಾಜಿಯವರಿಗೆ ಇಷ್ಟವಾಗುವುದಿಲ್ಲ ಎಂಬುದು ನನಗೆ ಅವತ್ತೇ ಗೊತ್ತಾಗಿದ್ದಿದ್ದರೆ ಇವತ್ತು ಈ ಸ್ಥಿತಿಯೇ ಬರುತ್ತಿರಲಿಲ್ಲವಲ್ಲ ! ಹೊಸ ಅಮ್ಮಾ..... ! ಈಗ ನೀನು ಎಂಥ ಕಷ್ಟ, ತೊಳಲಾಟವನ್ನು ಅನುಭವಿಸುತ್ತಿದ್ದೀಯೋ ಏನೋ ?'

ಮಂಸಾರಾಮ ಇದುವರೆಗೆ ನಿರ್ಮಲಾಳ ಬಗ್ಗೆ ಯೋಚಿಸಿರಲೇ ಇಲ್ಲ. ಈಗ ನಿರ್ಮಲಾಳ ನೆನಪಾಗುತ್ತಿದ್ದಂತೆಯೇ ಅವನ ಮೈ ಜುಂ ಎಂದಿತು. ಆಕೆಯ ಸರಳ ಸ್ನೇಹಶೀಲ ಹೃದಯ ಈ ಆಘಾತವನ್ನು ಹೇಗೆ ಸಹಿಸಿಕೊಳ್ಳಬಹುದು ? ಓಹ್ ! ಎಂಥ ಭ್ರಮೆಯಲ್ಲಿದ್ದೆ ನಾನು ? ನಾನು ಆಕೆಯ ಸ್ನೇಹ, ಪ್ರೀತಿಯನ್ನು ಚಾಲಾಕುತನ ಎಂದು ಭಾವಿಸಿದ್ದೆ. ಅಪ್ಪಾಜಿಯವರ ಭ್ರಮೆಯನ್ನು ದೂರಮಾಡುವುದಕ್ಕೆಂದೇ ಆಕೆಗೆ ನನ್ನ ಬಗೆಗೆ ಅಷ್ಟು ಕಠಿಣವಾಗಿ ನಡೆದುಕೊಳ್ಳಬೇಕಾಗಿ ಬರುತ್ತಿತ್ತು ಎಂಬುದು ನನಗೆ ಗೊತ್ತಾಗಲಿಲ್ಲ. ಓಹ್ ! ನಾನು ಆಕೆಗೆ ಎಂಥ ಅನ್ಯಾಯ ಮಾಡಿದ್ದೇನೆ. ಆಕೆಯ ಸ್ಥಿತಿ ನನ್ನ ಸ್ಥಿತಿಗಿಂತಲೂ ಹಾಳಾಗಿರಬಹುದು. ನಾನಾದರೂ ಇಲ್ಲಿಗೆ ಬಂದುಬಿಟ್ಟೆ ಆದರೆ ಆಕೆ ಎಲ್ಲಿಗೆ ಹೋಗಬೇಕು ? ಆಕೆ ಎರಡು ದಿನಗಳಿಂದಲೂ ಊಟ ಮಾಡಲಿಲ್ಲ ಎಂದು ಜಿಯಾ ಹೇಳುತ್ತಿದ್ದ. ಯಾವಾಗಲೂ ಅಳುತ್ತಿರುತ್ತಾಳಂತೆ. ಆಕೆಗೆ ಹೇಗೆ ಸಮಾಧಾನ ಮಾಡಲಿ ನಾನು ! ಈ ಅನಾಥನಿಗಾಗಿ ಆಕೆ ಯಾಕಾದರೂ ಕಷ್ಟಗಳನ್ನು ತನ್ನ ತಲೆಯ ಮೇಲೆ ಎಳೆದುಕೊಳ್ಳುತ್ತಿದ್ದಾಳೆ ? ಆಕೆ ಮತ್ತೆ ಮತ್ತೆ ನನ್ನ ಆರೋಗ್ಯವನ್ನು ಏಕೆ ವಿಚಾರಿಸಿಕೊಳ್ಳುತ್ತಿದ್ದಾಳೆ ? ನನ್ನ ಕಣ್ಣುಗಳಲ್ಲಿ ಮತ್ತೆ ಮತ್ತೆ ಏಕೆ ನೀರು ತರಿಸುತ್ತಿದ್ದಾಳೆ ? ಅಮ್ಮಾ , ನಿನ್ನ ಬಗ್ಗೆ ನನ್ನ ಹೃದಯದಲ್ಲಿ ಕೊಂಚವೂ ಕಳಂಕವಿಲ್ಲ. ನಿನ್ನನ್ನು ನಾನು ತಪ್ಪು ತಿಳಿದಿಲ್ಲ ಎಂದು ಯಾವ ರೀತಿ ಆಕೆಗೆ ಹೇಳಲಿ ?

ಆಕೆ ಈಗಲೂ ಮನೆಯಲ್ಲಿ ಕುಳಿತು ಅಳುತ್ತಿರಬಹುದು. ಎಂಥ ಅನರ್ಥವಾಯಿತು ! ಅಪ್ಪಾಜಿಯವರಿಗೆ ಏನಾಗಿದೆ ? ಇವರು ಮದುವೆಯಾದದ್ದು ಇದಕ್ಕಾಗಿಯೆ ಏನು ? ಓರ್ವ ಹೆಣ್ಣು ಮಗಳ ಹತ್ಯೆ ಮಾಡಲೆಂದೇ ಆಕೆಯನ್ನು ಮನೆಗೆ

ಕರೆದುಕೊಂಡು ಬಂದರೇನು ? ಈ ಕೋಮಲ ಪುಷ್ಪವನ್ನು ಒಸಕಿ ಹಾಕುವುದಕ್ಕೆಂದೇ ಬಿಡಿಸಿಕೊಂಡರೇನು ?

ಆಕೆ ಈ ಎಲ್ಲರಿಂದ ಹೇಗೆ ಮುಕ್ತಿ ಪಡೆಯುವಳು ? ಆ ನಿರಪರಾಧಿಯ ಮುಖದ ಕಾಂತಿ ಮತ್ತೆ ಪ್ರಜ್ವಲಿಸುವುದೇನು ? ನನ್ನೊಂದಿಗೆ ಸ್ನೇಹಪೂರ್ಣವಾಗಿ ವ್ಯವಹರಿಸಿದ್ದಕ್ಕಾಗಿಯೇ ಆಕೆಗೆ ಈ ಶಿಕ್ಷೆಯಾಗುತ್ತಿದೆ. ಆಕೆಯ ಒಳ್ಳೆಯತನಕ್ಕೆ ಸರಿಯಾದ ಕಾಣಿಕೆ ಸಿಗುತ್ತಿದೆ ! ಈ ಪ್ರಕಾರವಾಗಿ ಆಕೆ ನಿರ್ದಯವಾಗಿ ಆಘಾತಗಳನ್ನು ಸಹಿಸಿಕೊಳ್ಳುತ್ತಿರುವುದನ್ನು ನಾನು ನೋಡುತ್ತಾ ಕುಳಿತಿರಲೇನು ? ನನ್ನ ಮಾನಾಪಮಾನದ ಮಾತು ಹೇಗಾದರೂ ಇರಲಿ, ಆಕೆಯ ಗೌರವದ ರಕ್ಷಣೆಗಾಗಿ ನನ್ನ ಈ ಪ್ರಾಣವನ್ನಾದರೂ ಬಲಿದಾನ ಮಾಡಬೇಕು. ಇದರ ಹೊರತಾಗಿ ಬೇರೆ ಯಾವ ಮಾರ್ಗವೂ ಉಳಿದಿಲ್ಲ. ಓಹ್ ! ನನ್ನ ಹೃದಯದಲ್ಲಿ ಎಂಥೆಂಥ ಆಸೆಗಳಿದ್ದವು ! ಅವೆಲ್ಲವನ್ನೂ ಮಣ್ಣುಪಾಲು ಮಾಡಿಬಿಡಬೇಕಾಗಿ ಬಂದಿದೆ. ಓರ್ವ ಸಾಧ್ವಿಯನ್ನು ಅನುಮಾನಿಸಲಾಗುತ್ತಿದೆ, ಅದೂ ನನ್ನಿಂದಾಗಿ. ಎಂಥ ಸಂದರ್ಭವೇ ಬರಲಿ, ನಾನು ಆಕೆಯನ್ನು ರಕ್ಷಿಸಬೇಕು. ಇದು ನನ್ನ ಕರ್ತವ್ಯ. ಇದರಲ್ಲೇ ನಿಜವಾದ ಕ್ಷಾತ್ರಭಾವವಿದೆ. ಅಮ್ಮಾ, ನಾನು ನನ್ನ ರಕ್ತದಿಂದ ಈ ಕಳಂಕವನ್ನು ತೊಳೆಯುತ್ತೇನೆ. ನನ್ನ–ನಿನ್ನ ಒಳಿತು ಇದರಲ್ಲಿದೆ.

ಅವನು ದಿನವಿಡೀ ಇವೇ ವಿಚಾರಗಳಲ್ಲಿ ಮುಳುಗಿದ್ದ. ಸಂಜೆ ಅವನ ಇಬ್ಬರು ತಮ್ಮಂದಿರೂ ಬಂದು ಮನೆಗೆ ಬರುವಂತೆ ಒತ್ತಾಯ ಮಾಡಲಾರಂಭಿಸಿದರು.

ಸಿಯಾರಾಮ : 'ಅಣ್ಣಯ್ಯಾ, ನೀನು ಮನೆಗೆ ಯಾಕೆ ಬರಲಿಲ್ಲ ? ಬಾ. ಹೋಗೋಣ.'

ಮಂಸಾರಾಮ : 'ನೀನು ಬಾ ಅಂದ ಕೂಡಲೇ ಬರೋದಕ್ಕೆ ನನಗೆ ಪುರಸೊತ್ತಿಲ್ಲ.'

ಜಿಯಾರಾಮ : 'ನಾಳೆ ಭಾನುವಾರ ತಾನೆ ?'

ಮಂಸಾರಾಮ : 'ಭಾನುವಾರವೂ ಕೆಲಸವಿರುತ್ತೆ'

ಜಿಯಾರಾಮ : 'ಆಯಿತು, ಇವತ್ತಾದರೂ ಬರ್ತೀಯಲ್ಲ ?'

ಮಂಸಾರಾಮ : 'ಇಲ್ಲ . ನಾನು ಒಂದು ಮ್ಯಾಚ್‌ಗೆ ಹೋಗಬೇಕು.'

ಸಿಯಾರಾಮ : 'ಅಮ್ಮ ಕಜ್ಜೆ ಉಂಡೆ ಮಾಡ್ತಿದ್ದಾರೆ. ನೀನು ಮನೆಗೆ ಬರಲಿಲ್ಲಾಂದರೆ ನಿನಗೊಂದು ಸಿಗುವುದಿಲ್ಲ. ಜಿಯಾ, ನಾನು–ನೀನು ಸೇರಿಕೊಂಡು ಎಲ್ಲವನ್ನೂ ತಿಂದುಬಿಡೋಣ ಕಣೋ, ಅಣ್ಣಯ್ಯಂಗೆ ಕೊಡೋದೇ ಬೇಡ.'

ಜಿಯಾರಾಮ : 'ಅಣ್ಣಯ್ಯಾ, ನೀನು ನಾಳೆ ಮನೆಗೆ ಬರಲಿಲ್ಲಾಂದ್ರೆ, ಬಹುಶಃ ಅಮ್ಮಾನೇ ಇಲ್ಲಿಗೆ ಬಂದರೂ ಬರಬಹುದು.'

ಮಂಸಾರಾಮ : 'ಹಾಗೇನು ! ಆಕೆ ಇಲ್ಲಿಗೇಕೆ ಬರ್ತಾಳೆ ! ಇಲ್ಲಿಗೆ ಬಂದರೆ ಸುಮ್ಮನೆ ತೊಂದರೆ. ನಾನು ಯಾವುದೋ ಮ್ಯಾಚ್ ನೋಡೋಕೆ ಹೋಗ್ತಿದ್ದೀನಿ ಅಂತ ನೀನು ಹೇಳಿಬಿಡು.'

ಜಿಯಾರಾಮ : 'ನಾನೇಕೆ ಸುಳ್ಳು ಹೇಳಲಿ ? ಅಣ್ಣಯ್ಯ ಮುಖ ಊದಿಸಿಕೊಂಡು ಕುಳಿತಿದ್ದ ಅಂತ ಹೇಳ್ತೀನಿ. ನೋಡ್ತಾ ಇರು, ಅವರನ್ನು ನಾನು ಇಲ್ಲಿಗೆ ಕರೆದುಕೊಂಡು ಬರ್ತೀನೋ ಇಲ್ಲವೋ ಅಂತ.'

ಸಿಯಾರಾಮ : 'ನೀನು ಇವತ್ತು ಸ್ಕೂಲಿಗೂ ಹೋಗದೆ ಸುಮ್ಮನೆ ಮಲಗಿಕೊಂಡಿದ್ದೆ ಅಂತ ಹೇಳ್ತೀನಿ.'

'ಸರಿ, ನಾಳೆ ಬರುತ್ತೇನೆಂದು' ಹೇಳಿ ಮಂಸಾರಾಮ ಅವರ ಕಾಟದಿಂದ ತಪ್ಪಿಸಿಕೊಂಡ. ಆದರೆ ಅವರು ಹೊರಟು ಹೋದ ಮೇಲೆ ಪುನಃ ಚಿಂತಾಕ್ರಾಂತನಾದ. ಹಾಸಿಗೆಯ ಮೇಲೆ ಹೊರಳಾಡುತ್ತಾ ಇಡೀ ರಾತ್ರಿಯನ್ನು ಕಳೆದ. ಹಾಸಿಗೆಯ ಮೇಲೆ ಕುಳಿತುಕೊಂಡೇ ರಜಾದಿನವನ್ನೂ ಕಳೆದ. ಅಮ್ಮಾ ನಿಜವಾಗಿಯೂ ಬಂದು ಬಿಟ್ಟರೆ......? ಎಂಬ ಅನುಮಾನ ಅವನನ್ನು ಕಾಡತೊಡಗಿತು. ಯಾವುದೇ ವಾಹನ ಬಂದ ಸದ್ದಾದರೂ ಸಾಕು ಅಮ್ಮ ಬಂದುಬಿಟ್ಟಳೆ ಎಂದು ಅವನ ಎದೆ ಡವಡವ ಹೊಡೆದುಕೊಳ್ಳಲಾರಂಭಿಸುತ್ತಿತ್ತು.

ಹಾಸ್ಟೆಲ್‌ನಲ್ಲಿ ಒಂದು ಪುಟ್ಟ ಔಷಧಾಲಯವಿತ್ತು. ಒಬ್ಬ ಡಾಕ್ಟರು ಸಂಜೆ ಹೊತ್ತು ಒಂದು ಗಂಟೆ ಬಂದು ಹೋಗುತ್ತಿದ್ದರು. ಯಾವನಾದರೂ ಹುಡುಗ ಖಾಯಿಲೆ ಬಿದ್ದಿದ್ದರೆ ಅವನಿಗೆ ಔಷಧಿ ಕೊಟ್ಟು ಹೋಗುತ್ತಿದ್ದರು. ಇವತ್ತು ಅವರು ಎಂದಿನಂತೆ ಬಂದಾಗ ಮಂಸಾ ಏನನ್ನೋ ಯೋಚಿಸುತ್ತಾ ಅವರ ಹತ್ತಿರ ಹೋಗಿ ನಿಂತ. ಡಾಕ್ಟರು ಮಂಸಾರಾಮನನ್ನು ಚೆನ್ನಾಗಿ ಬಲ್ಲವರಾಗಿದ್ದರು. ಈ ರೀತಿ ಹತ್ತಿರ ಬಂದು ನಿಂತ ಮಂಸಾರಾಮನನ್ನು ನೋಡಿ ಆಶ್ಚರ್ಯದಿಂದ ಕೇಳಿದರು– 'ಏನಪ್ಪ ನೀನು ಹೀಗೆ ಇಳಿದು ಹೋಗಿದ್ದೀಯಾ ? ಏನಾಗಿದೆ ನಿನಗೆ ? ಪೇಟೆ ರುಚಿ ಹತ್ತಿತೇನು ನಿನಗೆ ? ಏನಾಗಿದೆ ನಿನ್ನ ಆರೋಗ್ಯಕ್ಕೆ ? ಬಾ ನೋಡೋಣ !'

ಮಂಸಾರಾಮ ನಕ್ಕು ನುಡಿದ : 'ನನಗೆ ಬದುಕು ಅನ್ನುವುದೇ ಒಂದು ರೋಗವಾಗಿದೆ. ಈ ರೋಗಕ್ಕೆ ನಿಮ್ಮಲ್ಲೇನಾದರೂ ಔಷಧಿ ಇದೆಯೇನು ?'

ಡಾಕ್ಟರ್ : 'ನಾನು ನಿನ್ನನ್ನು ಪರೀಕ್ಷೆ ಮಾಡಬೇಕು. ನಿನ್ನ ರೂಪವೇ ಬದಲಾಗಿದೆ. ನಿನ್ನ ಗುರುತೂ ಸಿಗುತ್ತಿಲ್ಲ.'

ಇಷ್ಟು ಹೇಳಿ ಅವರು ಮಂಸಾರಾಮನ ಕೈ ಹಿಡಿದುಕೊಂಡರು. ಎದೆ, ಬೆನ್ನು, ಕಣ್ಣುಗಳು ಮತ್ತು ನಾಲಗೆಯನ್ನು ಮತ್ತೆ ಮತ್ತೆ ನೋಡಿದರು. ನಂತರ ಕೊಂಚ ಚಿಂತಾಕ್ರಾಂತರಾಗಿ ನುಡಿದರು– 'ನಾನು ಇವತ್ತೇ ವಕೀಲರನ್ನು ಭೇಟಿಯಾಗುತ್ತೇನೆ, ನಿನಗೆ ಥಾಯಿಸಿಸ್ ಆಗ್ತಿದೆ. ಅದರ ಲಕ್ಷಣಗಳೇ ಇವೆಲ್ಲ.'

ಮಂಸಾರಾಮ ತುಂಬ ಉತ್ಸುಕತೆಯಿಂದ ಕೇಳಿದ – 'ಹಾಗಾದರೆ ಇನ್ನೆಷ್ಟು ದಿನಗಳಲ್ಲಿ ನನ್ನ ಕತೆ ಮುಗಿಯುತ್ತೆ ಡಾಕ್ಟರೆ ?'

ಡಾಕ್ಟರ್ : 'ಎಂಥ ಮಾತನಾಡ್ತಿದ್ದಿ ನೀನು ? ನಾನು ವಕೀಲರ ಜೊತೆ ಮಾತನಾಡಿ

ನಿನ್ನನ್ನು ಯಾವುದಾದರೊಂದು ಗಿರಿಧಾಮಕ್ಕೆ ಕಳಿಸುವಂತೆ ಸಲಹೆ ಕೊಡ್ತೀನಿ. ದೇವರ ದಯೆ ಇದ್ದರೆ ನೀನು ಗುಣಮುಖನಾಗ್ತೀಯೆ. ಖಾಯಿಲೆ ಇನ್ನೂ ಆರಂಭದ ಸ್ಟೇಜ್‌ನಲ್ಲಿದೆ.'

ಮಂಸಾರಾಮ : 'ಹಾಗಾದರೆ ಇನ್ನೂ ಎರಡು ವರ್ಷ ಬೇಕಾಗುತ್ತೆ ಅಂತ ಕಾಣುತ್ತೆ ಅಷ್ಟು ದಿನ ಕಾಯಲು ನನ್ನಿಂದ ಸಾಧ್ಯವಿಲ್ಲ. ಡಾಕ್ಟರೆ, ನನಗೆ ಥಾಯಿಸಿಸ್–ವಾಯಿಸಿಸ್ ಏನೂ ಆಗಿಲ್ಲ. ಜತೆಗೆ ಇನ್ನಾವ ಖಾಯಿಲೆಯೂ ಇಲ್ಲ, ನೀವು ವೃಥಾ ನನ್ನ ತಂದೆಯವರಿಗೇಕೆ ಕಷ್ಟ ಕೊಡ್ತೀರ ? ಸದ್ಯ, ನನಗೆ ತಲೆನೋವಿದೆ. ಇದಕ್ಕೆ ಔಷಧಿ ಕೊಡಿ. ಹಾಂ ! ನಿದ್ದೆನೂ ಬರಬೇಕು, ಅಂಥ ಔಷಧಿ ಕೊಡಿ. ನನಗೆ ಕಳೆದ ಎರಡು ರಾತ್ರಿಗಳಿಂದ ನಿದ್ದೆಯಿಲ್ಲ.'

ಡಾಕ್ಟರು ವಿಷದಾಯಕ ಔಷಧಿಗಳಿದ್ದ ಬೀರುವನ್ನು ಬಿಚ್ಚಿ, ಅಲ್ಲಿದ್ದ ಒಂದು ಶೀಶೆಯಿಂದ ಕೊಂಚ ಔಷಧಿಯನ್ನು ತೆಗೆದು ಮಂಸಾರಾಮನಿಗೆ ಕೊಟ್ಟರು. ಮಂಸಾರಾಮ ಕೇಳಿದ. 'ಇದು ಯಾವುದೋ ವಿಷ ಇದ್ದ ಹಾಗಿದೆ. ಇದನ್ನು ಕುಡಿದರೆ ಸತ್ತೇ ಹೋಗ್ತಾರೇನು ?'

ಡಾಕ್ಟರ್ : 'ಇಲ್ಲ, ಸಾಯುವುದಿಲ್ಲ. ಆದರೆ ತಲೆ ಸುತ್ತಂತೂ ಬರುತ್ತೆ'

ಮಂಸಾರಾಮ : 'ಔಷಧಿಯನ್ನು ಕುಡಿಯುತ್ತಿದ್ದಂತೆ ಪ್ರಾಣ ಏಕ್‌ದಂ ಹೊರಟೇ ಹೋಗುವಂಥ ಔಷಧಿಯೂ ನಿಮ್ಮ ಬಳಿ ಇದೆಯೇನು ?'

ಡಾಕ್ಟರ್ : 'ಒಂದು–ಎರಡಲ್ಲ, ಅಂಥ ಎಷ್ಟೋ ಔಷಧಿಗಳಿವೆ. ಈ ಶೀಶೆಯನ್ನು ನೋಡಿದ್ದೀಯಲ್ಲ. ಇದರಲ್ಲಿರುವ ಔಷಧಿಯ ಒಂದು ತೊಟ್ಟು ಹೊಟ್ಟೆಗೆ ಹೋದರೂ ಸಾಕು, ತಕ್ಷಣ ಪ್ರಾಣ ಹೊರಟು ಹೋಗುತ್ತೆ ಕಣ್ಣು ಮುಚ್ಚಿ ಬಿಡುವುದರೊಳಗಾಗಿ ಮನುಷ್ಯ ಹೆಣವಾಗಿರ್‍ತಾನೆ'

ಮಂಸಾರಾಮ : 'ಡಾಕ್ಟರೆ, ವಿಷ ಕುಡೀತಾರಲ್ಲ, ಅವರಿಗೆ ತುಂಬಾ ಹಿಂಸೆಯಾಗುತ್ತೇನು ?'

ಡಾಕ್ಟರು : 'ಎಲ್ಲ ವಿಷಗಳಿಂದಲೂ ಹಿಂಸೆಯಾಗುವುದಿಲ್ಲ. ಕೆಲವು ಔಷಧಿಗಳು ಹೇಗಿವೆಯೆಂದರೆ ಅವನ್ನು ಕುಡಿಯುತ್ತಿದ್ದಂತೆಯೇ ಸಾವು ಬರುತ್ತೆ ಈ ಶೀಶೆಯಲ್ಲಿರುವ ಔಷಧಿ ಅಂಥಾದ್ದು. ಇದನ್ನು ಕುಡಿಯುತ್ತಿದ್ದಂತೆಯೇ ಮನುಷ್ಯನ ಪ್ರಜ್ಞೆ ಹೊರಟು ಹೋಗುತ್ತೆ ಹೋದ ಪ್ರಜ್ಞೆ ಮತ್ತೆ ಬರುವುದಿಲ್ಲ.'

ಮಂಸಾರಾಮ ಯೋಚಿಸಿದ : 'ಹಾಗಾದರೆ ಪ್ರಾಣ ಬಿಡುವುದು ತುಂಬಾ ಸುಲಭ ಹಾಗಾದರೆ ಜನ ಏಕೆ ಇಷ್ಟು ಹೆದರುತ್ತಿದ್ದಾರೆ ? ಈ ಶೀಶೆ ಹೇಗೆ ಸಿಗುತ್ತೆ ನನಗೆ ? ಈ ಔಷಧಿಯ ಹೆಸರನ್ನು ತಿಳಿದುಕೊಂಡು ನಗರದ ಯಾವುದಾದರೊಂದು ದವಾಖಾನೆಯಲ್ಲಿ ಕೇಳಿದರೆ ಅವನು ಖಂಡಿತ ಕೊಡುವುದಿಲ್ಲ. ಆದರೆ ಅದನ್ನು ದೊರಕಿಸಿಕೊಳ್ಳುವುದು ಅಷ್ಟು ಕಷ್ಟವೇನಲ್ಲ. ಈಗ ಗೊತ್ತಾಗಿದೆ, ಪ್ರಾಣ ಕಳೆದುಕೊಳ್ಳುವುದು

ಬಹಳ ಸುಲಭ ಅಂತ. ತನಗೆ ಯಾವುದೋ ಬಹುಮಾನ ಬಂದಷ್ಟು ಖುಷಿಯಾಯಿತು. ಮಂಸಾರಾಮನಿಗೆ ತನ್ನ ಎದೆಯ ಮೇಲಿದ್ದ ಭಾರವೊಂದು ಕಡಿಮೆಯಾದಂಥ ಅನುಭವವಾದಂತೆ, ತಲೆಯ ತುಂಬ ಇದ್ದ ಚಿಂತೆಗಳ ಮೋಡಗಳು ಒಮ್ಮೆಗೇ ಚದುರಿ ಹೋದಂತೆ, ಎಷ್ಟೋ ತಿಂಗಳುಗಳ ನಂತರ ಅವನಿಗೆ ಒಂದು ಬಗೆಯ ಸ್ಫೂರ್ತಿ ಬಂದಂತೆ ಅನುಭವವಾಗತೊಡಗಿತು.

ಮಂಸಾರಾಮನ ಗೆಳೆಯರು ನಾಟಕ ನೋಡಲು ಹೋಗುವವರಿದ್ದರು. ಅವರು ವಾರ್ಡನ್‌ನಿಂದ ಅನುಮತಿಯನ್ನೂ ಪಡೆದುಕೊಂಡಿದ್ದರು. ಅವರ ಜತೆ ಮಂಸಾರಾಮನೂ ನಾಟಕ ನೋಡಲು ಹೊರಟ. ಈ ಪ್ರಪಂಚದಲ್ಲಿ ನನ್ನಷ್ಟು ಸುಖಿ ಯಾರೂ ಇಲ್ಲವೇನೋ ಎಂಬಷ್ಟರ ಮಟ್ಟಿಗೆ ಅವನು ಖುಷಿಯಾಗಿದ್ದ. ನಾಟಕದಲ್ಲಿನ ದೃಶ್ಯಾವಳಿಗಳನ್ನು ನೋಡುತ್ತ, ನಗುತ್ತ ಕೇಕೆ ಹಾಕಲಾರಂಭಿಸಿದ. ಮತ್ತೆ ಮತ್ತೆ ಚಪ್ಪಾಳೆ ತಟ್ಟುತ್ತಾ 'ವನ್ಸ್–ಮೋರ್' ಎಂದು ಕೂಗುವುದರಲ್ಲಿ ಅವನೇ ಮೊದಲಿಗನಾಗಿದ್ದ. ಹಾಡುಗಳನ್ನು ಕೇಳುವಾಗ 'ಹೋ......ಹೋ' ಎಂದು ಕಿರುಚುತ್ತಿದ್ದ. ಪ್ರೇಕ್ಷಕರ ದೃಷ್ಟಿ ಪುನಃ ಪುನಃ ಅವನತ್ತ ಹೊರಳುತ್ತಿತ್ತು. ನಾಟಕದ ಪಾತ್ರಧಾರಿಗಳ ದೃಷ್ಟಿಯೂ ಅವನ ಕಡೆ ಸರಿಯುತ್ತಿತ್ತು. ಇಂಥ ರಸಿಕನೂ ಭಾವುಕನೂ ಆದ ಈ ವ್ಯಕ್ತಿ ಯಾರು ಎಂದು ತಿಳಿದುಕೊಳ್ಳಲು ಅವರೂ ಕುತೂಹಲದಿಂದಿದ್ದರು. ಆದರೆ ಅವನ ಉಚ್ಛೃಂಖಲತೆಯನ್ನು ಕಂಡು ಆತನ ಮಿತ್ರರಿಗೆ ಆಶ್ಚರ್ಯವಾಗುತ್ತಿತ್ತು. ಆತ ಈ ಮೊದಲು ಶಾಂತ ಚಿತ್ತದವನೂ, ಗಂಭೀರ ಸ್ವಭಾವದವನೂ ಆಗಿದ್ದ. ಅಂಥ ಹುಡುಗ. ಈ ಹೊತ್ತು ಯಾಕಿಷ್ಟು ಹಾಸ್ಯ ಪ್ರವೃತ್ತಿಯವನಾಗಿದ್ದಾನೆ. ಅವನ ವಿನೋದ ವೃತ್ತಿ ಹೀಗೇಕೆ ಜಾಗೃತಗೊಂಡಿದೆ ಎಂಬುದರ ಬಗೆಗೆ ಅವರಿಗೆಲ್ಲ ಆಶ್ಚರ್ಯವಾಗಿತ್ತು.

ರಾತ್ರಿ ಎರಡು ಗಂಟೆಗೆ ಥಿಯೇಟರ್‌ನಿಂದ ವಾಪಸಾದ ನಂತರವೂ ಅವನ ಹಾಸ್ಯೋನ್ಮಾದ ಕಡಿಮೆಯಾಗಿರಲಿಲ್ಲ. ಆತ ಒಬ್ಬ ಹುಡುಗನ ಮಂಚವನ್ನೂ ಉರುಳಿಸಿದ. ಎಷ್ಟೋ ಹುಡುಗರ ರೂಮಿನ ಬಾಗಿಲುಗಳನ್ನು ಹೊರಭಾಗದಿಂದ ಮುಚ್ಚಿದ. ಹುಡುಗರು ಒಳಗಡೆಯಿಂದ ದಬದಬ ಅಂತ ಬಾಗಿಲು ತಟ್ಟಲಾರಂಭಿಸಿದರು. ಮಂಸಾರಾಮ ನಗುತ್ತಿದ್ದ. ಈ ಎಲ್ಲ ಗಲಾಟೆ–ಗಡಿಬಿಡಿಯಿಂದ ಹಾಸ್ಟೆಲ್ ವಾರ್ಡನ್‌ರ ನಿದ್ದೆಗೂ ಭಂಗವಾಗಿ ಅವರು ಎದ್ದು ಬಂದು, ಮಂಸಾರಾಮನ ಈ ತುಂಟಾಟಕ್ಕಾಗಿ ವಿಷಾದ ವ್ಯಕ್ತಪಡಿಸಿದರು. ಅವನ ಅಂತರಾಳದಲ್ಲಿ ಯಾವ ಬಗೆಯ ಭೀಷಣ ಕ್ರಾಂತಿಯಾಗುತ್ತಿದೆ ಎಂಬುದನ್ನು ಯಾರು ಬಲ್ಲವರಾಗಿದ್ದರು. ? ಅನುಮಾನದ ನಿರ್ದಯ ಆಘಾತ ಅವನ ನಾಚಿಕೆಯ ಸ್ವಭಾವ ಮತ್ತು ಆತ್ಮಾಭಿಮಾನವನ್ನು ತುಳಿದು ಹಾಕಿತ್ತು. ಈಗ ಅವನಿಗೆ ಅಪಮಾನ ಮತ್ತು ತಿರಸ್ಕಾರದ ಲೇಶ ಮಾತ್ರ ಭಯವೂ ಇರಲಿಲ್ಲ. ಇದು ವಿನೋದವಲ್ಲ, ಅವನ ಆತ್ಮದ ಕರುಣ ವಿಲಾಪವಾಗಿತ್ತು. ಉಳಿದ ಎಲ್ಲ ಹುಡುಗರೂ ಮಲಗಿದ ಮೇಲೆ ಅವನೂ ಮಂಚದ ಮೇಲೆ ಉರುಳಿಕೊಂಡ, ಆದರೆ ಅವನಿಗೆ ನಿದ್ದೆ ಬರಲಿಲ್ಲ. ಒಂದು ಕ್ಷಣದ

ನಂತರ ಎದ್ದು ತನ್ನ ಎಲ್ಲ ಪುಸ್ತಕಗಳನ್ನೂ ಜೋಡಿಸಿ, ಕಟ್ಟಿ ಪೆಟ್ಟಿಗೆಗೆ ಹಾಕಿದ. ಸಾಯುವುದು ನಿಶ್ಚಿತವಾಗಿರುವಾಗ ಓದಿ ಮಾಡುವುದೇನು ? ಇಷ್ಟೆಲ್ಲ ಕಷ್ಟಗಳು, ಇಷ್ಟೆಲ್ಲ ಯಾತನೆಗಳಿರುವ ಬದುಕಿಗಿಂತ ಸಾವೇ ಅವನಿಗೆ ಪ್ರಿಯವಾಗಿ ಕಂಡಿತು.

ಇಷ್ಟೆಲ್ಲ ಯೋಚನೆ ಮಾಡುತ್ತಿರುವಾಗಲೇ ಬೆಳಕು ಹರಿಯಿತು. ಮೂರು ರಾತ್ರಿಗಳಿಂದ ಅವನು ಒಂದು ಕ್ಷಣವೂ ನಿದ್ರಿಸಿರಲಿಲ್ಲ. ಈಗ ಎದ್ದಾಗ ಅವನ ಕಾಲುಗಳು ಗಡಗಡ ನಡುಗುತ್ತಿದ್ದುವು ಮತ್ತು ತಲೆ ಸುತ್ತುತ್ತಿತ್ತು. ಕಣ್ಣುಗಳು ಉರಿಯುತ್ತಿದ್ದುವು. ಶರೀರದ ಅಂಗಾಂಗಗಳೆಲ್ಲವೂ ಶಿಥಿಲಗೊಂಡಿದ್ದುವು. ಹೊತ್ತು ಏರುತ್ತಿತ್ತು. ಎದ್ದು ಕೈ–ಕಾಲು, ಮುಖ ತೊಳೆದುಕೊಳ್ಳುವಷ್ಟು ಶಕ್ತಿಯೂ ಅವನಿಗಿರಲಿಲ್ಲ. ಅಷ್ಟರಲ್ಲಿ ಇದ್ದಕ್ಕಿದ್ದಂತೆಯೇ ಭೂಂಗಿ ಬಟ್ಟೆಯ ಗಂಟಿನಲ್ಲಿ ಮಿಠಾಯಿಯ ಪೊಟ್ಟಣವನ್ನು ಇಟ್ಟುಕೊಂಡು ಬಂದದ್ದನ್ನು ಮಂಸಾರಾಮ ನೋಡಿದ. ಅವನಿಗೆ ಪ್ರಾಣವೇ ಹಾರಿಹೋದಂಥ ಅನುಭವವಾಯಿತು. ಅಯ್ಯೋ ದೇವರೆ ! ಇವರು ಬಂದುಬಿಟ್ಟರೆ ! ಈಗೇನು ಮಾಡುವುದು ! ಭೂಂಗಿ ಒಬ್ಬಳೇ ಬಂದಿರಲಾರಳು. ಟಾಂಗಾ ಹೊರಗಡೆ ನಿಂತಿರಬಹುದು. ಇವನಿಂದ ಏಳಲೂ ಆಗುತ್ತಿರಲಿಲ್ಲ. ಆದರೂ ಭೂಂಗಿಯನ್ನು ನೋಡುತ್ತಿದ್ದಂತೆಯೇ ಓಡಿಬಂದ. ಓಡಿ ಬರುತ್ತ ಗಾಬರಿಯಿಂದಲೇ 'ಅಮ್ಮನೂ ಬಂದಿದ್ದಾಳೇನೆ ?' ಎಂದು ಕೇಳಿದ. ಅಮ್ಮ ಬಂದಿಲ್ಲ ಎಂದು ಗೊತ್ತಾದ ಮೇಲೆ ಅವನ ಚಿತ್ತ ಶಾಂತವಾಯಿತು. ಭೂಂಗಿ ಹೇಳಿದಳು– 'ಅಣ್ಣ, ನಿನ್ನ ಮೇಲೆ ನಾನು ಯಾವ ಚಾಡಿಯನ್ನೂ ಹೇಳಿಲ್ಲ ಅಂತ ಅಮ್ಮಾವ್ರು ಹೇಳಿದರು. ಮತ್ತೆ ಇವತ್ತು ಕಣ್ಣೀರು ಹಾಕುತ್ತ ಈ ಸಿಹಿ ತಿಂಡಿಯನ್ನು ತಗೊಂಡು ಹೋಗಿ ಕೊಡು. ನನ್ನಿಂದಾಗಿ ಮನೆಯನ್ನು ತೊರೆದು ಯಾಕೆ ಹೋಗಬೇಕಾಗಿತ್ತು ಅಂತ ಕೇಳು' ಅಂತ ಹೇಳಿದರು. ಸಿಹಿ ತಿಂಡಿಯನ್ನು ಎಲ್ಲಿಡಲಿ ?'

ಮಂಸಾರಾಮ ಸಿಡುಕಿನಿಂದ ಹೇಳಿದ– 'ನನ್ನ ತಲೆಯ ಮೇಲಿಡೆ ಮುಂಡೆ ! ಈ ಸಿಹಿ ತಿಂಡಿಯನ್ನು ತಗೊಂಡು ಹೋಗ್ತೀಯೋ ಇಲ್ಲವೊ. ಇನ್ನೊಂದು ಸಾರಿ ಇಲ್ಲಿಗೆ ಬಂದೀಯಾ ಹುಶಾರ್ ! ಏನೋ ದೊಡ್ಡದಾಗಿ ಸಂದೇಶ ತಂದಿದ್ದಾಳೆ ! ನಿನ್ನ ಮನೆ, ನೀನು ಆರಾಮವಾಗಿರು, ನಾನಿಲ್ಲಿ ಸುಖವಾಗಿದ್ದೀನಿ ಅಂತ ಹೇಳು ಹೋಗು. ನನಗೆ ಯಾರ ಭಯವೂ ಇಲ್ಲ. ಯಾರು ಏನು ಬೇಕೋ ಅದನ್ನು ಮಾಡಿಕೊಳ್ಳಲಿ, ತಮ್ಮ ಮನಸ್ಸಿನ ಆಸೆಗಳನ್ನೆಲ್ಲ ಈಡೇರಿಸಿಕೊಳ್ಳಲಿ. ನಾನಿಲ್ಲಿರುವುದು ಆಕೆಗೆ ಇಷ್ಟವಿಲ್ಲದೆ ಹೋದರೆ ಅಲಹಾಬಾದ್‌ಗೋ, ಕಲ್ಕತ್ತೆಗೋ ಹೋಗ್ತೀನಿ ಅಂತ ಹೇಳು. ನನ್ನಂಥವನಿಗೆ ಬನಾರಸ್ಸೂ ಒಂದೇ, ಬೇರೆ ಊರೂ ಒಂದೇ. ಇಲ್ಲೇನು ಕೊಳ್ಳೆ ಹೋಗ್ತಿದೆ ?'

ಭೂಂಗಿ : 'ಅಣ್ಣ, ಈ ಸಿಹಿತಿಂಡಿಯನ್ನಾದರೂ ಇಟ್ಟುಕೊ. ಇಲ್ಲಾಂದ್ರೆ ಅಮ್ಮ ಅತ್ತು ಅತ್ತು ಸತ್ತೇ ಹೋಗ್ತಾರೆ. ನಿಜ ಹೇಳ್ತಿದ್ದೀನಿ, ಅವರು ಅತ್ತು ಅತ್ತು ಸತ್ತು ಹೋಗ್ತಾರೆ.'

ಮಂಸಾರಾಮ ತನ್ನ ಕಣ್ಣೀರಿನ ಧಾರೆಯನ್ನು ಒರೆಸಿಕೊಳ್ಳುತ್ತಾ ಹೇಳಿದ– 'ನನಗೋಸ್ಕರ ಸತ್ತು ಹೋಗ್ತಾರೇನು ! ನನಗೇನು ಸುಖ ಕೊಟ್ಟಿದ್ದಾರೆ ಅವರು– ನಾನು

ಪಶ್ಚಾತ್ತಾಪ ಪಡಲು ? ನನ್ನ ಸರ್ವನಾಶ ಮಾಡಿದರು. ನನಗೆ ಯಾವ ಸಂದೇಶವನ್ನೂ ಕಳಿಸಬೇಡಿ ಅಂತ ಅವರಿಗೆ ಹೇಳು. ನನಗೆ ಯಾವುದರ ಅವಶ್ಯಕತೆಯೂ ಇಲ್ಲ.'

ಭೂಂಗಿ : 'ಅಣ್ಣ ನಾನಿಲ್ಲಿ ಚೆನ್ನಾಗಿ ತಿಂದುಕೊಂಡು ಮಜವಾಗಿದ್ದೀನಿ ಅಂತ ನೀನು ಹೇಳ್ತಿದ್ದೀಯಾ. ಆದರೆ ನೀನು ಎಷ್ಟು ಬಡವಾಗಿದ್ದೀಯಾ ಗೊತ್ತಾ ? ಇಲ್ಲಿಗೆ ಬಂದಾಗ ಹೇಗಿದ್ದೆಯೋ, ಅದರಲ್ಲಿ ಅರ್ಧದಷ್ಟೂ ಇಲ್ಲ, ಅಷ್ಟು ಇಳಿದುಹೋಗಿದ್ದೀಯಾ.'

ಮಂಸಾರಾಮ : ನಿನ್ನ ಕಣ್ಣುಗಳು ಸರಿಯಾಗಿಲ್ಲ ಅಷ್ಟೆ ನೋಡ್ತಿರು. ಮೂರು–ನಾಲ್ಕು ದಿನಗಳಲ್ಲಿ ಹೇಗಾಗ್ತೀನಂತ. ಅತ್ತು–ಕರೆದು ಮಾಡುವುದು ಬೇಡವಂತೆ ಅಂತ ಹೋಗಿ ಹೇಳು. ಆಕೆ ಯಾವಾಗಲೂ ಅಳ್ತಾ ಇರ್ತಾರಂತೆ. ಊಟವನ್ನೂ ಮಾಡಲ್ಲವಂತೆ ಅಂತ ಕೇಳಿದ್ದೀನಿ. ಹೀಗೇಕೆ ಮಾಡ್ಬೇಕು ? ಅವರು ಹೀಗೆ ಮಾಡ್ತಿದ್ದರೆ ನನಗಿಂತ ಕೆಟ್ಟವನು ಯಾರೂ ಇಲ್ಲ ನೋಡು. ನನ್ನನ್ನು ಮನೆಯಿಂದ ಹೊರಗಟ್ಟಿದರು, ಸರಿ. ಈಗ ಅವರು ಶಾಂತವಾಗಿರಲಿ. ಮಹಾ ! ಇಲ್ಲದ ಪ್ರೀತಿಯನ್ನು ತೋರಿಸಲಿಕ್ಕೆ ಬಂದಿದ್ದಾರೆ. ಹೆಣ್ಣುಗಳ ಸ್ವಭಾವ ನನಗೆ ಚೆನ್ನಾಗಿ ಗೊತ್ತಿದೆ.'

ಭೂಂಗಿ ಹೊರಟು ಹೋದಳು. ಮಂಸಾರಾಮ ಅವಳೊಂದಿಗೆ ಮಾತನಾಡಿ ಕೊಂಚ ಸಮಾಧಾನ ಪಟ್ಟುಕೊಂಡ. ಈ ಅಭಿನಯ ಮಾಡಲು ತನ್ನೆಲ್ಲ ಮನೋಭಾವನೆಗಳನ್ನು ಆದಷ್ಟು ಕಷ್ಟಪಟ್ಟು ಅದುಮಿಡಬೇಕಾಯಿತು. ಹೀಗೆ ಮಾಡುವಾಗ ಅವನಿಗೆ ತುಂಬ ಕಷ್ಟವಾಗಿತ್ತು ಅವನ ಆತ್ಮಾಭಿಮಾನ ಈ ಎಲ್ಲ ಕಪಟ ಆಚರಣೆಗಳನ್ನು ಆದಷ್ಟು ಬೇಗ ಕೊನೆಗೊಳಿಸಲು ಚಡಪಡಿಸುತ್ತಿತ್ತು. ಆದರೆ ಇದೆಲ್ಲದರ ಪರಿಣಾಮ ಏನು, ಎಂತು ಎಂಬುದರ ಬಗ್ಗೆ ಅವನು ಯೋಚಿಸುತ್ತಿರಲಿಲ್ಲ. ನಿರ್ಮಲಾ ಈ ಆಘಾತವನ್ನು ಸಹಿಸಿಕೊಳ್ಳಬಲ್ಲಳೇ ? ಇದುವರೆಗೆ, ಸಾವನ್ನು ಕುರಿತ ಕಲ್ಪನೆಗಳನ್ನು ಮಾಡುವಾಗ ಅವನು ಬೇರೊಂದು ಜೀವಿಯ ಪ್ರಾಣವನ್ನು ಕುರಿತು ಯೋಚಿಸಿರಲಿಲ್ಲ. ಆದರೆ ಈಗ ತನ್ನ ಪ್ರಾಣದೊಂದಿಗೆ ಇನ್ನೊಂದು ಜೀವಿಯ ಪ್ರಾಣಸೂತ್ರವೂ ಬೆಸೆದುಕೊಂಡಿದೆ ಎಂಬ ಸಂಗತಿ ಒಮ್ಮೆಗೇ ಅವನಿಗೆ ಹೊಳೆಯಿತು. ತನ್ನ ಕಠೋರ ವ್ಯವಹಾರದಿಂದಾಗಿ ಆತನ ಪ್ರಾಣ ಹೋಯಿತು ಎಂದು ನಿರ್ಮಲಾ ಯೋಚಿಸಬಹುದು. ಹೀಗೆ ಯೋಚಿಸುತ್ತಿದ್ದಂತೆಯೇ ಆಕೆಯ ಕೋಮಲ ಹೃದಯ ಒಡೆದು ಹೋಗುವುದಿಲ್ಲವೇನು ? ಆಕೆಯ ಬದುಕು ಈಗಲೂ ಕಷ್ಟದಲ್ಲಿದೆ. ಅನುಮಾನದ ಕ್ರೂರವಾದ ನೇಣುಹಗ್ಗದ ಸರಿಗುಣಿಕೆಯಲ್ಲಿ ಸಿಕ್ಕಿಕೊಂಡಿರುವ ಈ ಅಬಲೆ ತನ್ನನ್ನು ಕೊಲೆಗಾರ್ತಿ ಎಂದು ಭಾವಿಸಿಕೊಂಡು ಬಹಳ ದಿನಗಳವರೆಗೆ ಜೀವಿಸಬಲ್ಲಳೆ ?

ಮಂಸಾರಾಮ ಮಂಚದ ಮೇಲೆ ಮಲಗಿಕೊಂಡು ರಗ್ಗನ್ನು ಹೊದ್ದುಕೊಂಡ. ಆದರೂ ಚಳಿಯಿಂದಾಗಿ ಅವನ ಎದೆ ಕಂಪಿಸುತ್ತಿತ್ತು. ಕೊಂಚ ಹೊತ್ತಿನಲ್ಲಿಯೇ ತೀವ್ರವಾದ ಜ್ವರ ಬಂತು, ಅವನು ಪ್ರಜ್ಞಾಹೀನನಾದ. ಈ ಪ್ರಜ್ಞಾಹೀನ ಸ್ಥಿತಿಯಲ್ಲಿ ಅನೇಕ ಕನಸುಗಳು ಕಾಣತೊಡಗಿದವು. ಮತ್ತೆ ಮತ್ತೆ ಎಚ್ಚರಗೊಂಡು ಬೆಚ್ಚಿ ಬೀಳುತ್ತಿದ್ದ, ಕಣ್ಣು ಬಿಡುತ್ತಿದ್ದ, ಪುನಃ ಪ್ರಜ್ಞಾಹೀನ ಸ್ಥಿತಿಗೆ ಮರಳುತ್ತಿದ್ದ.

ಆಗ, ಇದ್ದಕ್ಕಿದ್ದಂತೆಯೇ ವಕೀಲರು ಬಂದು ಅವರು ಮಾತನಾಡಿದ ಸದ್ದು ಕೇಳಿ ಬೆಚ್ಚಿದ. ಹೌದು, ವಕೀಲರದೇ ಧ್ವನಿ. ಅವನು ತಾನು ಹೊದ್ದಿದ್ದ ರಗ್ಗನ್ನು ತೆಗೆದು ಒಂದು ಮಗ್ಗುಲಿಗೆ ಎಸೆದು ಮಂಚದಿಂದ ಕೆಳಗಿಳಿದು ನೆಲದ ಮೇಲೆ ನಿಂತುಕೊಂಡ. ಈಗಿಂದೀಗಲೇ ಅವರ ಮುಂದೆ ತನ್ನ ಪ್ರಾಣ ಕಳೆದುಕೊಳ್ಳಬೇಕೆಂಬ ಆವೇಶವುಂಟಾಯಿತು ಅವನಲ್ಲಿ. ನಾನು ಸತ್ತರೆ ಅವರಿಗೆ ನಿಜಕ್ಕೂ ಸಂತೋಷವಾಗುತ್ತದೆ. ನಾನು ಸಾಯುವುದಕ್ಕೆ ಇನ್ನು ಎಷ್ಟು ಹೊತ್ತಿದೆ ಎಂಬುದನ್ನು ನೋಡಲಿಕ್ಕೆಂದೇ ಇವರು ಇಲ್ಲಿಗೆ ಬಂದಿದ್ದಾರೆ ಅಂತ ಕಾಣುತ್ತೆ ವಕೀಲರು ಅವನ ಕೈ ಹಿಡಿದುಕೊಂಡು – 'ನಿನ್ನ ಆರೋಗ್ಯ ಹೇಗಿದೆ ಮಗನೆ ? ಮಲಗಿಯೇ ಇರಬೇಕಿತ್ತು. ಹೋಗಿ ಮಲಗು, ನಿಂತಿರಬೇಡ ಹೋಗು' ಅಂದರು.

ಮಂಸಾರಾಮ : 'ನನ್ನ ಆರೋಗ್ಯ ತುಂಬಾ ಚೆನ್ನಾಗಿದೆ. ನಿಮಗೆ ವೃಥಾ ತೊಂದರೆಯಾಯಿತು.'

ವಕೀಲರು ಯಾವ ಮಾತನ್ನೂ ಆಡಲಿಲ್ಲ. ಮಗನ ಈ ಅವಸ್ಥೆಯನ್ನು ನೋಡಿ ಅವರ ಕಣ್ಣುಗಳು ತುಂಬಿ ಬಂದುವು. ದಷ್ಟಪುಷ್ಟವಾಗಿದ್ದ ಬಾಲಕ ! ನೋಡಿದರೆ ಮನಸ್ಸು ಪ್ರಫುಲ್ಲಗೊಳ್ಳುತ್ತಿತ್ತು. ಈಗ ಹಂಚಿಕಡ್ಡಿಯಾಗಿದ್ದಾನೆ. ಗುರುತೂ ಸಿಗುವುದಿಲ್ಲ. ವಕೀಲರು ಅವನನ್ನು ಮೆಲ್ಲಗೆ ಮಂಚದ ಮೇಲೆ ಮಲಗಿಸಿದರು. ಅವನ ಮೈ ತುಂಬ ರಗ್ಗನ್ನು ಹೊದಿಸಿದರು. ಅಲ್ಲೇ ನಿಂತು ಯೋಚಿಸಲಾರಂಭಿಸಿದರು– ಈಗ ಏನು ಮಾಡಬೇಕು ? ಈ ಮಗ ಕೈ ಬಿಟ್ಟು ಹೋಗುವುದಿಲ್ಲ ತಾನೆ ? ಈ ಯೋಚನೆ ಅವರ ಮನಸ್ಸಿಗೆ ಬಂದುದೇ ತಡ, ಅವರು ಶೋಕಾಕುಲರಾದರು. ಅಲ್ಲೇ ಇದ್ದ ಸ್ಟೂಲ್ ಮೇಲೆ ಕುಳಿತು ಬಿಕ್ಕಳಿಸಿ–ಬಿಕ್ಕಳಿಸಿ ಅಳಲಾರಂಭಿಸಿದರು. ಮಂಸಾರಾಮನೂ ಅಷ್ಟೆ ರಗ್ಗಿನ ಒಳಗೆ ಅಳುತ್ತಿದ್ದ. ಈಗ್ಗೆ ಕೆಲವು ದಿನಗಳ ಮುಂಚೆ ಈ ಮಗನನ್ನು ಕಂಡರೆ ಸಾಕು, ತಂದೆಯ ಹೃದಯ ಹೆಮ್ಮೆಯಿಂದ ಬೀಗುತ್ತಿತ್ತು. ಆದರೆ ಇವತ್ತು ಅವನ ಈ ದಾರುಣ ಅವಸ್ಥೆಯನ್ನು ನೋಡಿಯೂ ಅವನನ್ನು ಮನೆಗೆ ಕರೆದುಕೊಂಡು ಹೋಗುವುದೋ, ಬೇಡವೋ ಎಂದು ಯೋಚಿಸುತ್ತಿದ್ದಾರೆ. ಇಲ್ಲಿಯೇ ಇವನಿಗೆ ಔಷಧೋಪಚಾರ ಮಾಡಿಸಲು ಬರುವುದಿಲ್ಲವೇನು ? ಇಪ್ಪತ್ನಾಲ್ಕು ಗಂಟೆ ಕಾಲವೂ ನಾನು ಇಲ್ಲಿಯೇ ಕುಳಿತಿರುತ್ತೇನೆ. ಡಾಕ್ಟರು ಹೇಗೂ ಇಲ್ಲಿ ಇದ್ದೇ ಇರುತ್ತಾರೆ. ಯಾವುದೇ ತೊಂದರೆಯಿರುವುದಿಲ್ಲ. ಮನೆಗೆ ಕರೆದುಕೊಂಡು ಹೋಗುವುದರಲ್ಲಿ ಅವರಿಗೆ ತೊಂದರೆಗಳೇ ಕಾಣುತ್ತಿದ್ದುವು. ಎಲ್ಲಕ್ಕಿಂತ ದೊಡ್ಡ ತೊಂದರೆಯೆಂದರೆ ಮನೆಯಲ್ಲಿ ನಿರ್ಮಲಾ ಸದಾಕಾಲ ಇವನ ಪಕ್ಕದಲ್ಲಿಯೇ ಕುಳಿತಿರುತ್ತಾಳೆ ಎಂಬುದು. ಅವಳಿಗೆ ಬೇಡ ಅನ್ನುವಂತೆಯೂ ಇಲ್ಲ. ಇದು ಅವರಿಗೆ ಅಸಹನೀಯವಾದ ಕಾರ್ಯವಾಗಿತ್ತು.

ಅಷ್ಟರಲ್ಲಿ ವಾರ್ಡನ್ ಬಂದು ಹೇಳಿದರು : 'ವಕೀಲರೆ, ನೀವು ಈ ಹುಡುಗನನ್ನು ಕರೆದುಕೊಂಡು ಹೋದರೇನೇ ಚೆನ್ನ ಅಂತ ನನಗನ್ನಿಸುತ್ತೆ ಹೇಗಿದ್ದರೂ ಟಾಂಗಾ ತಂದಿದ್ದೀರಿ.

ಏನೂ ತೊಂದರೆಯಿಲ್ಲ. ಇಲ್ಲಿಯೇ ಇದ್ದರೆ ಈತನ ಯೋಗಕ್ಷೇಮ ನೋಡಿಕೊಳ್ಳಲಾಗುವುದಿಲ್ಲ.'

ವಕೀಲರು : 'ಹೌದೌದು, ಕರೆದುಕೊಂಡು ಹೋಗುವ ಉದ್ದೇಶದಿಂದಲೇ ನಾನೂ ಬಂದೆ ! ಆದರೆ ಇವನ ಸ್ಥಿತಿ ತುಂಬ ಗಂಭೀರವಾಗಿರುವಂತಿದೆ. ಕೊಂಚ ಅಜಾಗರೂಕತೆ ವಹಿಸಿದರೂ ಅಪಾಯವಾಗುವ ಸಾಧ್ಯತೆಯಿದೆ.'

ವಾರ್ಡನ್ : 'ಇಲ್ಲಿಂದ ಈತನನ್ನು ಕರೆದುಕೊಂಡು ಹೋಗುವುದರಲ್ಲಿ ಕೊಂಚ ತೊಂದರೆಯಾಗಬಹುದು. ಆದರೆ ಮನೆಯಲ್ಲಿ ಸಿಗುವಂಥ ವಿಶ್ರಾಂತಿ–ಸೇವೆ–ಶುಶ್ರೂಷೆ ಇಲ್ಲಿ ಯಾವುದೇ ಕಾರಣಕ್ಕೂ ಸಿಗುವುದಿಲ್ಲ. ಜೊತೆಗೆ ಖಾಯಿಲೆಯಾಗಿರುವ ಹುಡುಗನನ್ನು ಇಲ್ಲಿಟ್ಟುಕೊಳ್ಳುವುದೂ ನಿಯಮಗಳಿಗೆ ವಿರುದ್ಧವಾಗುತ್ತದೆ.'

ವಕೀಲರು : 'ನೀವು ಹೇಳಿದರೆ ಹೆಡ್‌ಮಾಸ್ಟರನ್ನೂ ಭೇಟಿಯಾಗಿ ಅವರಿಂದ ಅನುಮತಿಯನ್ನು ತೆಗೆದುಕೊಳ್ಳಲೇನು ? ಇಂಥ ಸ್ಥಿತಿಯಲ್ಲಿ ಇವನನ್ನು ಇಲ್ಲಿಂದ ಕರೆದುಕೊಂಡು ಹೋಗುವುದು ನನಗೆ ಕೊಂಚವೂ ಇಷ್ಟವಿಲ್ಲ.'

ವಕೀಲರ ಬಾಯಿಂದ ಹೆಡ್ಮಾಸ್ಟರರ ಹೆಸರನ್ನು ಕೇಳುತ್ತಿದ್ದಂತೆಯೇ ಇವರು ತಮಗೆ ಬೆದರಿಕೆ ಹಾಕುತ್ತಿದ್ದಾರೆ ಎಂದು ವಾರ್ಡನ್ ಭಾವಿಸಿದರು. ಈಗ ಕೊಂಚ ಕೋಪದಿಂದ– 'ಹೆಡ್‌ಮಾಸ್ಟರ್ ನಿಯಮ–ವಿರುದ್ಧವಾದ ಯಾವ ಕೆಲಸವನ್ನೂ ಮಾಡಲು ಹೇಳುವುದಿಲ್ಲ ಸ್ವಾಮಿ, ಇಷ್ಟು ದೊಡ್ಡ ಜವಾಬ್ದಾರಿಯನ್ನು ನಾನು ಹೇಗೆ ತೆಗೆದುಕೊಳ್ಳಲಿ ಹೇಳಿ ?' ಎಂದರು.

ಈಗ ಏನು ಮಾಡಬೇಕು ? ಹಾಗಾದರೆ ಈಗ ಮನೆಗೆ ಕರೆದುಕೊಂಡೇ ಹೋಗಬೇಕಾಗುತ್ತೇನೋ ? ಮನೆಗೆ ಕರೆದುಕೊಂಡು ಹೋದರೆ ಖಾಯಿಲೆ ತೀವ್ರಗೊಳ್ಳಬಹುದು ಎಂದು ಹೇಳಿದ್ದು, ಹಾಸ್ಟೆಲ್‌ನಲ್ಲೇ ಬಿಟ್ಟಿರಲು ಒಂದು ನೆಪವಷ್ಟೇ ಆಗಿತ್ತು. ಈಗ ಇಲ್ಲಿಂದ ಕರೆದುಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಲು ಯಾವುದಾದರೂ ನೆಪವುಂಟೇನು ? ಇದನ್ನು ಕೇಳಿದವರು ಡಾಕ್ಟರ್ ಫೀಸನ್ನು ಉಳಿಸುವುದಕ್ಕೋಸ್ಕರ ಮಗನನ್ನು ಕರೆದುಕೊಂಡು ಹೋಗಿ ಆಸ್ಪತ್ರೆಗೆ ಎಸೆದು ಬಂದ ಅಂತಲೇ ಆಡಿಕೊಳ್ತಾರೆ. ಆದರೆ ಈಗ ಮನೆಗೆ ಕರೆದುಕೊಂಡು ಹೋಗುವುದರ ಹೊರತಾಗಿ ಬೇರೆ ಮಾರ್ಗವೇ ಇರಲಿಲ್ಲ. ಒಂದು ವೇಳೆ ಈ ವಾರ್ಡನ್ ಲಂಚ ತೆಗೆದುಕೊಳ್ಳಲು ಒಪ್ಪಿಕೊಂಡರು ಅಂದರೆ ಸುಲಭವಾಗಿ ಎರಡು ಮೂರು ವರ್ಷಗಳ ಸಂಬಳದಷ್ಟು ಲಂಚವನ್ನೇ ತೆಗೆದುಗೊಳ್ಳಬಹುದು. ಆದರೆ ನಿಯಮ, ಕಾನೂನುಗಳಿಗೆ ಕಟ್ಟು ಬಿದ್ದಿರುವ ಜನಗಳಲ್ಲಿ ಅಷ್ಟು ಬುದ್ಧಿ, ವ್ಯವಹಾರ ಕುಶಲತೆ ಇರಬೇಕಲ್ಲ ? ಒಂದು ವೇಳೆ ಈ ಸಮಯದಲ್ಲಿ ಯಾರಾದರೂ ಬಂದು ಮಂಸಾರಾಮನನ್ನು ಮನೆಗೆ ಕರೆದುಕೊಂಡು ಹೋಗದಿರುವಂಥ ಒಂದು ಉಪಾಯವನ್ನು ಸೂಚಿಸಿದ್ದರೆ ಆತನ ಬಗ್ಗೆ ವಕೀಲರು ಆಜೀವಪರ್ಯಂತ ಋಣಿಯಾಗಿರುತ್ತಿದ್ದರು. ಈಗ ಯೋಚಿಸಲು ಸಮಯವೂ ಇರಲಿಲ್ಲ. ವಾರ್ಡನ್

ದೆವ್ವದಂತೆ ತಲೆಯ ಮೇಲೆ ಕುಳಿತಿದ್ದ. ಕೊನೆಗೆ ಬೇರೆ ದಾರಿ ಕಾಣದೆ ವಕೀಲರು ಒಂದಿಬ್ಬರ ನೆರವಿನಿಂದ ಮಂಸಾರಾಮನನ್ನು ಎತ್ತಿಕೊಳ್ಳ ತೊಡಗಿದರು. ಅರೆ ಪ್ರಜ್ಞಾವಸ್ಥೆಯಲ್ಲಿದ್ದ ಮಂಸಾರಾಮ ಬೆಚ್ಚಿ ಕಿರುಚಿದ– 'ಯಾರು ? ಏನು ?'

ವಕೀಲರು : 'ಯಾರೂ ಇಲ್ಲ ಮಗು, ನಾನು. ನಿನ್ನನ್ನು ಮನೆಗೆ ಕರೆದುಕೊಂಡು ಹೋಗೋದಕ್ಕೆ ಬಂದಿದ್ದೀನಿ. ಬಾ, ಎತ್ತಿಕ್ಕೊಳ್ತೀನೆ.'

ಮಂಸಾರಾಮ : 'ನನ್ನನ್ನು ಏಕೆ ಮನೆಗೆ ಕರ್ಕೊಂಡು ಹೋಗ್ತೀರಿ ? ನಾನು ಅಲ್ಲಿಗೆ ಬರುವುದಿಲ್ಲ.'

ವಕೀಲರು : 'ನೀನು ಇಲ್ಲಿ ಇರುವಂತಿಲ್ಲ. ಇಲ್ಲಿಯ ನಿಯಮವೇ ಹೀಗಿದೆ.'

ಮಂಸಾರಾಮ : 'ಏನೇ ಆದರೂ ನಾನು ಮನೆಗೆ ಬರುವುದಿಲ್ಲ. ನನಗೆ ಬೇರೆಲ್ಲಿಗಾದರೂ ಕರೆದುಕೊಂಡು ಹೋಗಿ – ಮರದ ಕೆಳಕ್ಕೆ ಯಾವುದಾದರೂ ಗುಡಿಸಿಲಿಗೆ ಎಲ್ಲಿಗಾದರೂ ಬರ್ತೀನಿ, ಆದರೆ ಮನೆಗೆ ಮಾತ್ರ ಬರೋಲ್ಲ.'

ವಾರ್ಡನ್ ವಕೀಲರಿಗೆ ಹೇಳಿದರು – 'ನೀವು ಇವನ ಮಾತುಗಳನ್ನು ಕೇಳಬೇಡಿ. ಈತನಿಗೆ ಪ್ರಜ್ಞೆಯಿಲ್ಲ.'

ಮಂಸಾರಾಮ : 'ಯಾರಿಗೆ ಪ್ರಜ್ಞೆಯಿಲ್ಲ ? ನನಗೆ ಪ್ರಜ್ಞೆಯಿಲ್ಲವೇನು ? ಯಾರಿಗಾದರೂ ನಾನು ಬೈಯುತ್ತಿದ್ದೀನೇನು ? ಕಚ್ಚುತ್ತಿದ್ದೀನೇನು ? ನನಗೆ ಪ್ರಜ್ಞೆಯಿಲ್ಲವೇನು ? ನನಗೆ ಇಲ್ಲೇ ಇರಲಿಕ್ಕೆ ಬಿಡಿ, ಏನಾಗುತ್ತೋ ಅದು ಇಲ್ಲಿಯೇ ಆಗಲಿ. ನನ್ನನ್ನು ಕರೆದುಕೊಂಡು ಹೋಗಲೇ ಬೇಕೂಂತ ಇದ್ದರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ. ನಾನು ಅಲ್ಲೇ ಇರ್ತೀನಿ. ಬದುಕಿದರೆ ಅಲ್ಲೇ ಬದುಕುತ್ತೇನೆ, ಸತ್ತರೆ ಅಲ್ಲೇ ಸಾಯುತ್ತೇನೆ. ಏನೇ ಆದರೂ ಮನೆಗೆ ಮಾತ್ರ ಬರೋಲ್ಲ.'

ಮಗ ಹೀಗೆ ಹಠ ಮಾಡುತ್ತಿರುವುದನ್ನು ನೋಡಿ ವಕೀಲರು ವಾರ್ಡನ್‌ರನ್ನು ಪುನಃ ಬೇಡಿಕೊಳ್ಳತೊಡಗಿದರು. ಆದರೆ ನಿಯಮಗಳಿಗೆ ಬದ್ಧರಾಗಿದ್ದ ವಾರ್ಡನ್ ಇವರ ಯಾವ ಮಾತನ್ನೂ ಕೇಳುವಂತಿರಲಿಲ್ಲ. ಇದು ಅಂಟು ರೋಗವಾಗಿದ್ದು, ಈ ರೋಗ ಬೇರೆಯವರಿಗೂ ಅಂಟಿತೆಂದರೆ ಅದಕ್ಕೆ ಯಾರು ಜವಾಬ್ದಾರರು ? ವಾರ್ಡನ್‌ರ ಈ ವಾದದ ಮುಂದೆ ವಕೀಲರ ಎಲ್ಲ ತರ್ಕಗಳೂ ಸಪ್ಪೆಯಾದುವು.

ಕೊನೆಗೆ ವಕೀಲರು ಮಂಸಾರಾಮನಿಗೆ ಹೇಳಿದರು : 'ಮಗು, ಮನೆಗೆ ಬರಲು ಏಕೆ ಒಲ್ಲೆ ಅನ್ತಿದ್ದೀಯಾ ? ಅಲ್ಲಿ ನಿನಗೆ ಎಲ್ಲ ಬಗೆಯ ಆರಾಮ ಸಿಗುತ್ತೆ.' ವಕೀಲರು ಈ ಮಾತುಗಳನ್ನು ಹೇಳುವುದೇನೋ ಹೇಳಿದರು. ಆದರೆ ಮಂಸಾರಾಮ ಎಲ್ಲಿ ತನ್ನ ಮಾತಿಗೆ 'ಹೂಂ' ಅಂದು ಬಿಡ್ತಾನೋ ಎಂದು ಒಳಗೊಳಗೇ ಭಯಪಡುತ್ತಿದ್ದರು. ಅವರು ಮಂಸಾರಾಮನನ್ನು ಆಸ್ಪತ್ರೆಯಲ್ಲಿಯೇ ಬಿಡಲು ಯಾವುದಾದರೊಂದು ನೆಪವನ್ನು ಹುಡುಕುತ್ತಿದ್ದರು ಹಾಗೂ ಎಲ್ಲ ಜವಾಬ್ದಾರಿಯನ್ನು ಮಂಸಾರಾಮನ ತಲೆಗೇ ಕಟ್ಟಲು ಬಯಸುತ್ತಿದ್ದರು. ಇದೆಲ್ಲ ವಾರ್ಡನ್‌ರ ಮುಂದೆಯೇ ನಡೆದಿತ್ತು. ಮಂಸಾರಾಮ ತನ್ನ

ಹಠದಿಂದಲೇ ಆಸ್ಪತ್ರೆಗೆ ಹೋಗುತ್ತಿದ್ದಾನೆ ಎಂಬುದಕ್ಕೆ ವಾರ್ಡನ್‌ರನ್ನು ಸಾಕ್ಷಿಯಾಗಿರಿಸಿಕೊಳ್ಳ ಬಯಸುತ್ತಿದ್ದರು. ಇದರಲ್ಲಿ ತಮ್ಮ ತಪ್ಪು ಏನೂ ಇಲ್ಲ ಎಂಬುದನ್ನು ಲೋಕಕ್ಕೆ ಹೇಳಲು ಇಚ್ಛಿಸುತ್ತಿದ್ದರು.

ಮಂಸಾರಾಮ ಸಿಡುಕಿನಿಂದಲೇ ನುಡಿದ : 'ಇಲ್ಲ, ಇಲ್ಲ. ನಾನು ಮನೆಗೆ ಬರಲ್ಲ ಅಂದ್ರೆ ಬರಲ್ಲ. ನನಗೆ ಮನೆ ಬೇಡ. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ. ನನ್ನನ್ನು ನೋಡಲು ಮನೆಯವರು ಯಾರೂ ಬರಬಾರ್ದು ಅಂತ ಹೇಳಿ. ನನಗೆ ಏನೂ ಆಗಿಲ್ಲ. ನನಗೆ ಯಾವ ಖಾಯಿಲೆಯೂ ಇಲ್ಲ. ನೀವು ನನ್ನನ್ನು ಬಿಟ್ಟು ಬಿಡಿ. ನಾನು ನಡೆದುಕೊಂಡು ಬರ್ತೀನಿ.'

ಅವನು ಎದ್ದು ನಿಂತ. ಉನ್ಮತ್ತನಂತೆ ಬಾಗಿಲವರೆಗೂ ನಡೆದುಕೊಂಡು ಹೋದ. ಆದರೆ ಅಷ್ಟು ದೂರ ನಡೆಯುವುದರೊಳಗಾಗಿ ಕಾಲುಗಳು ತತ್ತರಿಸತೊಡಗಿದವು. ವಕೀಲರು ಆಸರೆ ಕೊಟ್ಟು ಹಿಡಿದುಕೊಳ್ಳದೇ ಹೋಗಿದ್ದಿದ್ದರೆ, ಅವನು ಬಿದ್ದು ಪೆಟ್ಟು ಮಾಡಿಕೊಳ್ಳುತ್ತಿದ್ದ. ಆದರೆ ನೌಕರರ ನೆರವಿನಿಂದ ವಕೀಲರು ಅವನನ್ನು ಟಾಂಗಾದವರೆಗೆ ಕರೆದುಕೊಂಡು ಬಂದು ಕೂಡಿಸಿದರು.

ಟಾಂಗಾ ಆಸ್ಪತ್ರೆಯ ಕಡೆ ಹೊರಟಿತು. ವಕೀಲರು ಬಯಸಿದ್ದೇ ಆಯಿತು. ಈ ಶೋಕದಲ್ಲೂ ಅವರ ಮನಸ್ಸು ಖುಷಿ ಪಡುತ್ತಿತ್ತು. ಮಗ ತನ್ನ ಸ್ವಂತ ಇಚ್ಛೆಯಿಂದ ಆಸ್ಪತ್ರೆಗೆ ಹೋಗುತ್ತಿದ್ದ. ಮನೆ ಮತ್ತು ಮನೆಯವರ ಬಗ್ಗೆ ಅವನಿಗೆ ಯಾವುದೇ ಮಮಕಾರವಿಲ್ಲವೆಂಬುದಕ್ಕೆ ಇದೊಂದೇ ಸಾಕ್ಷಿ ಸಾಕಲ್ಲವೇನು ? ಮಂಸಾರಾಮ ನಿರ್ದೋಷಿ ಎಂದು ಇಷ್ಟರಿಂದಲೇ ಗೊತ್ತಾಗುವುದಿಲ್ಲವೇನು ?

ಆದರೆ ಕೊಂಚ ಹೊತ್ತಿನಲ್ಲಿಯೇ ಆ ಖುಷಿಯ ಸ್ಥಾನದಲ್ಲಿ ಅವರ ಮನಸ್ಸಿನ ತುಂಬಾ ವಿಷಾದ ಭಾವ ಜಾಗೃತವಾಯಿತು. ತನ್ನ ಪ್ರೀತಿಯ ಮಗನನ್ನು ಮನೆಗೆ ಕರೆದುಕೊಂಡು ಹೋಗುವ ಬದಲಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ಅವರ ವಿಶಾಲವಾದ ಮನೆಯಲ್ಲಿ ಮಗನಿಗೇ ಒಂದಿಷ್ಟು ಜಾಗವಿರಲಿಲ್ಲ, ಆದರಲ್ಲೂ ಆತನ ಬದುಕೇ ಕಷ್ಟದಲ್ಲಿದ್ದಾಗ, ಎಂಥ ವಿಡಂಬನೆ !

ಒಂದು ಕ್ಷಣದ ನಂತರ ಇದ್ದಕ್ಕಿದ್ದಂತೆಯೇ ವಕೀಲರ ಮನಸ್ಸಿನಲ್ಲಿ, ಮಂಸಾರಾಮ ನನ್ನ ಮನಸ್ಸಿನ ಭಾವನೆಗಳನ್ನು ಗ್ರಹಿಸಿದನೆ ? ಗ್ರಹಿಸಿ ಮನೆಗೆ ಬರುವುದಿಲ್ಲ ಎಂದು ಹಠ ಮಾಡಿದನೆ ? ಹೀಗೇನಾದರೂ ಆದರೆ ಎಲ್ಲ ಮುಳುಗಿ ಹೋದಂತೆ ಎಂಬ ವಿಚಾರಗಳು ಅವರಲ್ಲಿ ಮೂಡಿ ಬಂದವು.

ಈ ಅನರ್ಥದ ಕಲ್ಪನೆಯಿಂದಲೇ ವಕೀಲರು ರೋಮಾಂಚಿತರಾದರು. ಅವರ ಎದೆ ಡಬ ಡಬ ಅನ್ನತೊಡಗಿತು. ಹೃದಯದ ಮೇಲೆ ಆಘಾತವಾದಂಥ ಅನುಭವವಾಯಿತು. ಇವೇ ಆತನ ಏರುತ್ತಿರುವ ಜ್ವರಕ್ಕೆ ಕಾರಣವಾಗಿದ್ದರೆ ಆ ದೇವರೇ ಕಾಪಾಡಬೇಕು ! ಈಗ ಅವರ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ತಮ್ಮ ನಡುಗುತ್ತಿರುವ ಕೈಗಳನ್ನು ಬಿಸಿ

ಮಾಡಿಕೊಳ್ಳುವುದಕ್ಕೆಂದು ಅವರೇ ಹಾಕಿದ್ದ ಬೆಂಕಿ ಈಗ ಅವರ ಮನೆಯನ್ನೇ ಭಸ್ಮ ಮಾಡುತ್ತಿತ್ತು. ಕರುಣೆ, ಶೋಕ, ಪಶ್ಚಾತ್ತಾಪ ಮತ್ತು ಅನುಮಾನದಿಂದಾಗಿ ಅವರ ಮನಸ್ಸು ಗಾಬರಿಗೊಂಡಿತು. ಅವರ ಹೃದಯಾಂತರಾಳದಲ್ಲಿದ್ದ ಗುಪ್ತರೋದನದ ಧ್ವನಿ ಹೊರಗೆ ಕೇಳಿಸುವಂತಿದ್ದರೆ ಕೇಳುವವರು ಅತ್ತುಬಿಡುತ್ತಿದ್ದರು ! ಅವರ ಕಣ್ಣೀರು ಹೊರಗೆ ಚಿಮ್ಮಿ ಬರುವಂತಿದ್ದರೆ ಅದರ ಪ್ರವಾಹ ನಿಲ್ಲುವಂತಿರಲಿಲ್ಲ. ಅವರು ಮಗನ ಕಳಾಹೀನ ಮುಖದತ್ತ ಒಮ್ಮೆ ವಾತ್ಸಲ್ಯಪೂರ್ಣ ಕಣ್ಣುಗಳಿಂದ ನೋಡಿದರು. ಶೋಕಾಕುಲರಾಗಿ ಅವನನ್ನು ಎದೆಗಪ್ಪಿಕೊಂಡರು. ಮತ್ತು ಎಷ್ಟು ಅತ್ತರೆಂದರೆ ಬಿಕ್ಕಳಿಕೆಗಳು ಒಂದೇ ಸಮನೆ ಉಕ್ಕಿ ಬರಲಾರಂಭಿಸಿದುವು.

ಎದುರಿಗೆ ಆಸ್ಪತ್ರೆಯ ಬಾಗಿಲು ಕಾಣಿಸುತ್ತಿತ್ತು.

## ಹನ್ನೊಂದು

ತೋತಾರಾಮರು ಸಂಜೆ ಕಛೇರಿಯಿಂದ ಮನೆಗೆ ಬಂದ ಕೂಡಲೇ ನಿರ್ಮಲಾ 'ಅವನು ಹೇಗಿದ್ದಾನೆ ? ಅವನನ್ನು ನೋಡಿಕೊಂಡು ಬಂದಿರಾ ? 'ಎಂದು ಕೇಳಿದಳು. ನಿರ್ಮಲಾಳ ಮುಖದಲ್ಲಿ ತೋರಿಕೆಗಾದರೂ ಸರಿ ಚಿಂತೆ ಅಥವಾ ದುಃಖದ ಯಾವ ಛಾಯೆಯೂ ಕಾಣಲಿಲ್ಲ. ನಿರ್ಮಲಾ ಹಿಂದೆಂದಿಗಿಂತಲೂ ಇವತ್ತು ಹೆಚ್ಚು ಸಿಂಗರಿಸಿಕೊಂಡಿದ್ದನ್ನು ತೋತರಾಮರು ಗಮನಿಸಿದರು. ಉದಾಹರಣೆಗೆ ಅವಳು ಎಂದೂ ಕೊರಳಲ್ಲಿ ಸರವನ್ನು ಹಾಕಿಕೊಳ್ಳುತ್ತಿರಲಿಲ್ಲ. ಇವತ್ತು ಹಾಕಿಕೊಂಡಿದ್ದಳು. ಝುಮುಕಿಗಳ ಬಗೆಗೂ ಇಷ್ಟು ದಿನ ಅವಳಿಗೆ ಅಷ್ಟು ಒಲವಿರಲಿಲ್ಲ, ಇವತ್ತು ಅವು ರೇಷ್ಮೆ ಸೆರಗನ್ನು ಹೊದ್ದಿದ್ದ ಅವಳ ನೀಳ ಕೇಶರಾಶಿಯ ಕೆಳಭಾಗದ ಕಿವಿಗಳಲ್ಲಿ ದೀಪದಂತೆ ಫಳಫಳ ಹೊಳೆಯುತ್ತಿದ್ದವು.

ವಕೀಲರು ಅವಳ ಕಡೆಯಿಂದ ಮುಖ ತಿರುಗಿಸಿಕೊಂಡು– 'ಅವನು ಖಾಯಿಲೆಯಾಗಿದ್ದಾನೆ. ಇನ್ನೇನು ಹೇಳಲಿ ನಿನಗೆ ?' ಅಂದರು.

'ಅವನನ್ನು ಮನೆಗೆ ಕರೆದುಕೊಂಡು ಬರ್ತೀನಿ ಅಂತ ತಾನೇ ನೀವು ಹೋಗಿದ್ದದ್ದು ?'

ವಕೀಲರು ಸಿಡುಕಿನಿಂದ ನುಡಿದರು– 'ನಾನು ಬರೋದಿಲ್ಲಾಂತ ಹಠ ಹಿಡಿದರೆ ನಾನು ಬಲವಂತದಿಂದ ಅವನನ್ನು ಹೊತ್ತುಕೊಂಡು ಬರಬೇಕಿತ್ತೇನು ? ನಾನು ಎಷ್ಟು ಹೇಳಿದೆ ಗೊತ್ತೇನು ? ಮಗು, ಮನೆಗೆ ಹೋಗೋಣ ನಡಿ, ನಿನಗೆ ಅಲ್ಲಿ ಯಾವ ತೊಂದರೆಯೂ ಆಗುವುದಿಲ್ಲ ಅಂತ. ಆದರೆ ಮನೆ ಹೆಸರು ಎತ್ತಿದರೆ ಅವನ ಜ್ವರ ಎರಡು ಪಟ್ಟು ಜಾಸ್ತಿಯಾಗಿಬಿಡುತ್ತೆ ಅಂತ ಕಾಣುತ್ತೆ ನಾನು ಇಲ್ಲೇ ಸತ್ತರೂ ಚಿಂತೆಯಿಲ್ಲ,

ಮನೆಗೆ ಮಾತ್ರ ಬರುವುದಿಲ್ಲ ಅಂದುಬಿಟ್ಟ. ಕೊನೆಗೆ ಬೇರೆ ದಾರಿಯಿಲ್ಲದೆ ಅವನನ್ನು ಆಸ್ಪತ್ರೆಗೆ ಸೇರಿಸಿ ಬಂದೆ, ನಾನಿನ್ನೇನು ಮಾಡಲಿ ಹೇಳು ?'

ಅದೇ ಸಮಯಕ್ಕೆ ಸರಿಯಾಗಿ ರುಕ್ಮಿಣಿಯೂ ಬಂದು ಅಂಗಳದಲ್ಲಿ ನಿಂತಳು. ನಿಂತೇ ಹೇಳಿದಳು– 'ಹಠ ಅನ್ನುವುದು ಅವನ ಹುಟ್ಟು ಗುಣ. ಯಾರು ಜಪ್ಪಯ್ಯ ಅಂದರೂ ಅವನು ಇಲ್ಲಿಗೆ ಬರುವುದಿಲ್ಲ. ಅಲ್ಲಿಯೂ ಗುಣವಾಗುವುದಿಲ್ಲ ನೋಡ್ತಿರು.'

ವಕೀಲರು ಕಾತುರಗೊಂಡು ಹೇಳಿದರು– 'ನೀನು ಒಂದು ನಾಲ್ಕಾರು ದಿನಗಳ ಮಟ್ಟಿಗಾದರೂ ಅವನ ಬಳಿ ಇದ್ದು ಬಂದರೆ ಚೆನ್ನಾಗಿರುತ್ತೆ ತಂಗಿ. ನೀನು ಅವನ ಬಳಿ ಇದ್ದರೆ ಅವನಿಗೆ ಒಂಥರಾ ಸಮಾಧಾನವಾಗುತ್ತೆ. ತಂಗಿ, ನನ್ನ ಈ ಒಂದು ಮಾತನ್ನು ಕೇಳಬೇಕು ನೀನು. ಒಬ್ಬೊಂಟಿಯಾಗಿರುವ ಅವನು ಒಂದೇ ಸಮನೆ ಅಮ್ಮಾ..... ಅಮ್ಮಾ ಎಂದು ಅತ್ತು ಅತ್ತು ಪ್ರಾಣ ಬಿಡ್ತಾನೆ. ಅಮ್ಮನದೇ ಅವನಿಗೆ ಧ್ಯಾನ. ಈಗ ನಾನು ಅಲ್ಲಿಗೇ ಹೋಗ್ತಿದ್ದೇನೆ. ನೀನು ಬಂದರೆ ನಿನ್ನನ್ನೂ ಕರೆದುಕೊಂಡು ಹೋಗ್ತೇನೆ. ಅವನ ದೇಹಸ್ಥಿತಿ ಚೆನ್ನಾಗಿಲ್ಲ. ಅವನು ಮೊದಲಿನಂತಿಲ್ಲ. ದೇವರ ಇಚ್ಛೆ ಏನಿದೆಯೋ ಏನೋ !'

ಇಷ್ಟು ಹೇಳುತ್ತಾ–ಹೇಳುತ್ತಾ ನಿಂತಿದ್ದ ವಕೀಲರ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಸುರಿಯಲಾರಂಭಿಸಿತು. ಆದರೆ ರುಕ್ಮಿಣಿ ಅವಿಚಲ ಭಾವದಲ್ಲಿ ಹೇಳಿದಳು– 'ಆಯಿತು. ನಾನು ತಯಾರು. ನಾನು ಅವನ ಬಳಿ ಇರುವುದರಿಂದ ಅವನ ಪ್ರಾಣ ಉಳಿದುಕೊಳ್ಳುವುದಾದರೆ ಈಗಿಂದೀಗಲೇ ಓಡಿ ಹೋಗ್ತೇನೆ. ಆದರೆ ನನ್ನ ಒಂದು ಮಾತನ್ನು ಕಟ್ಟಿಟ್ಟುಕೋ ಅಣ್ಣಯ್ಯ. ಅವನ ಆರೋಗ್ಯ ಅಲ್ಲಿ ಸುಧಾರಿಸುವುದಿಲ್ಲ. ನಾನು ಅವನನ್ನು ಚೆನ್ನಾಗಿ ಬಲ್ಲೆ. ಅವನಿಗೆ ಯಾವ ಖಾಯಿಲೆಯೂ ಆಗಿಲ್ಲ. ಮನೆಯಿಂದ ಅವನನ್ನು ಹೊರಗೆ ಹಾಕಿದ್ದೇ ಅವನಿಗಿರುವ ದುಃಖ. ಈ ದುಃಖ ಜ್ವರದ ರೂಪದಲ್ಲಿ ಪ್ರಕಟಗೊಂಡಿದೆ, ಅಷ್ಟೆ. ನೀನು ಒಂದಲ್ಲ ನೂರು ಔಷಧಿಗಳನ್ನು ಕೊಡಿಸು, ಸಿವಿಲ್ ಸರ್ಜನ್‌ಗೆ ತೋರಿಸು, ಯಾವುದರ ಪ್ರಭಾವವೂ ಅವನ ಮೇಲಾಗುವುದಿಲ್ಲ.'

ವಕೀಲರು : 'ತಂಗಿ, ಅವನನ್ನು ಮನೆಯಿಂದ ಯಾರು ಹೊರಗೆ ಹಾಕಿದರು ? ಅವನು ಚೆನ್ನಾಗಿ ಓದಿಕೊಳ್ಳಲಿ ಅನ್ನುವ ಉದ್ದೇಶದಿಂದ ನಾನು ಹಾಸ್ಟೆಲ್‌ನಲ್ಲಿರು ಅಂತ ಹೇಳಿದೆ, ಅಷ್ಟೆ.'

ರುಕ್ಮಿಣಿ : 'ನೀನು ಯಾವ ಉದ್ದೇಶದಿಂದಲೇ ಕಳಿಸಿರು, ಆದರೆ ಇದು ಅವನ ಮನಸ್ಸಿಗೆ ನಾಟಿದೆ. ನಾನು ಯಾರ ಲೆಕ್ಕ ಜಮಾಕ್ಕೂ ಇಲ್ಲ. ಯಾವುದೇ ವಿಚಾರದಲ್ಲೂ ಮಾತನಾಡುವ ಅಧಿಕಾರ ನನಗಿಲ್ಲ. ನೀನು ಮನೆ ಯಜಮಾನ, ನಿನ್ನ ಹೆಂಡತಿ ಯಜಮಾನಿತಿ. ನಾನು ನೀವು ಹಾಕಿದ್ದು ತಿಂದುಕೊಂಡು ಬಿದ್ದಿರುವ ಅಭಾಗಿನಿ ವಿಧವೆ. ನನ್ನ ಮಾತು ಯಾರು ಕೇಳ್ತಾರೆ ? ನಾನು ಯಾರ ಲೆಕ್ಕದಲ್ಲಿದ್ದೀನಿ ? ಆದರೆ ಮಾತು ಬಂದಾಗ ಆಡದೇ ಇರಲು ನನ್ನಿಂದ ಆಗುವುದಿಲ್ಲ. ಮಂಸಾ ಮನೆಗೆ ಬಂದರೆ ಹುಶಾರಾಗ್ತಾನೆ ನೋಡು.

ನೀನು ಮೊದಲು ತೋರುತ್ತಿದ್ದಂಥ ಪ್ರೀತಿ ತೋರಿದರೆ ಮಾತ್ರ ಅವನು ಬದುಕಿಕೊಳ್ತಾನೆ ನೋಡು.'

ಇಷ್ಟು ಹೇಳಿ ರುಕ್ಮಿಣಿ ಅಲ್ಲಿಂದ ಹೊರಟು ಹೋದಳು. ಅವಳ ಕಾಂತಿಹೀನ, ಆದರೆ ಅನುಭವಪೂರ್ಣ ಕಣ್ಣುಗಳ ಮುಂದೆ ಏನೆಲ್ಲ ನಡೆಯುತ್ತೋ ಅದನ್ನೆಲ್ಲ ಆಕೆ ಅರ್ಥಮಾಡಿಕೊಳ್ಳುತ್ತಿದ್ದಳು. ಅವಳ ಎಲ್ಲ ಕೋಪ ನಿರಪರಾಧಿನಿ ನಿರ್ಮಲಾಳ ಮೇಲೆ ಹಾಯುತ್ತಿತ್ತು. ಈಗಲೂ ಅಷ್ಟೇ, ಈ ಲಕ್ಷ್ಮೀದೇವಿ ಮನೆಯಲ್ಲಿರುವ ತನಕ ಈ ಮನೆಯ ಸ್ಥಿತಿ ದಿನದಿಂದ ದಿನಕ್ಕೆ ಇನ್ನೂ ಹದಗೆಡುತ್ತಲೇ ಹೋಗುತ್ತದೆ– ಎಂದು ಹೇಳುವುದೇ ಅವಳ ಆಶಯವಾಗಿತ್ತು. ಆದರೆ ಈ ಮಾತುಗಳನ್ನು ಸ್ಪಷ್ಟವಾಗಿ ಹೇಳಲಿಲ್ಲವಾದರೂ ಅವಳು ಏನು ಹೇಳಬಯಸುತ್ತಾಳೆ ಎಂಬುದು ವಕೀಲರಿಗೆ ಅರ್ಥವಾಗದಿರಲಿಲ್ಲ. ಆಕೆ ಹೊರಟು ಹೋದ ಮೇಲೆ ವಕೀಲರು ತಲೆ ಎತ್ತಿದರು. ನಿಂತೇ ಯೋಚಿಸಲಾರಂಭಿಸಿದರು. ಅವರಿಗೆ ತಮ್ಮ ಮೇಲೆ ಎಷ್ಟು ಕೋಪ ಬರುತ್ತಿತ್ತೆಂದರೆ ಗೋಡೆಗೆ ತಲೆ ಚಚ್ಚಿಕೊಂಡು ಪ್ರಾಣ ಬಿಟ್ಟುಬಿಡಲೇ ಎಂದು ಯೋಚಿಸಲಾರಂಭಿಸಿದರು. ನಾನು ಮದುವೆ ಮಾಡಿಕೊಂಡದ್ದಾದರೂ ಏಕೆ ? ಮದುವೆ ಮಾಡಿಕೊಳ್ಳುವ ಆವಶ್ಯಕತೆಯಾದರೂ ಏನಿತ್ತು ? ಭಗವಂತ ಒಂದಲ್ಲ ಅಂತ, ಮೂರು–ಮೂರು ಮಕ್ಕಳನ್ನು ನನಗೆ ಕೊಟ್ಟಿದ್ದ. ಇನ್ನು ನನ್ನ ವಯಸ್ಸು ಐವತ್ತನ್ನು ಮುಟ್ಟುತ್ತಿತ್ತು. ಇಂಥಾದ್ದರಲ್ಲಿ ಮದುವೆ ಮಾಡಿಕೊಳ್ಳುವ ಮನಸ್ಸು ಏಕಾದರೂ ಮಾಡಿದೆ ? ಈ ಮೂಲಕವಾಗಿ ನನ್ನ ಸರ್ವನಾಶ ಮಾಡುವುದೇ ಅವನ ಇಚ್ಛೆಯಾಗಿತ್ತೇನು ? ಅವರು ತಲೆ ಎತ್ತಿ ಒಂದು ಸಾರಿ ನಿರ್ಮಲಾಳ ಅಚಲವಾದ ಮಂದಸ್ಮಿತ ಮೂರ್ತಿಯನ್ನು ನೋಡಿ ಆಸ್ಪತ್ರೆಯ ಕಡೆ ಹೊರಟರು. ನಿರ್ಮಲಾಳ ಮಂದಸ್ಮಿತ ಕಾಂತಿ ಅವರ ಮನಸ್ಸಿಗೆ ಮುದ ತಂದಿತ್ತು. ಎಷ್ಟೋ ದಿನಗಳ ನಂತರ ಇವತ್ತು ಅವರ ಚಿತ್ತ ಶಾಂತವಾಗಿತ್ತು. ಪ್ರೇಮಪೂರಿತ ಹೃದಯ ಇಂಥ ಹೊತ್ತಿನಲ್ಲಿ ಇಷ್ಟು ಶಾಂತವೂ ಅವಿಚಲವೂ ಆಗಿರುತ್ತದೆಯೇನು ? ಇಲ್ಲ, ಎಂದಿಗೂ ಇಲ್ಲ. ಹೃದಯಕ್ಕಾಗಿರುವ ನೋವನ್ನು ಭಾವನೆಗಳಿಂದ ಮುಚ್ಚಿಡಲು ಸಾಧ್ಯವಿಲ್ಲ. ತಮ್ಮ ಮನಸ್ಸಿನ ಈ ದುರ್ಬಲತೆಯ ಬಗೆಗೆ ಅವರಿಗೆ ಅತ್ಯಂತ ಖೇದವಾಯಿತು. ಅವರು ವಿನಾಕಾರಣ ತನ್ನ ಹೃದಯದಲ್ಲಿ ಅನುಮಾನಕ್ಕೆ ಜಾಗ ಕೊಟ್ಟು ಇಷ್ಟೆಲ್ಲ ಅನರ್ಥ ಮಾಡಿಕೊಂಡರು. ಮಂಸಾರಾಮನನ್ನು ಕುರಿತಂತೆ ಅವರ ಮನಸ್ಸು ಈಗ ತಿಳಿಯಾಗಿತ್ತು. ಆದರೆ ಆ ಜಾಗದಲ್ಲಿ ಈಗ ಇನ್ನೊಂದು ಅನುಮಾನ ಕಾಡಲಾರಂಭಿಸಿತು. ನನ್ನ ಮನಸ್ಸು ಮಂಸಾರಾಮನಿಗೆ ಅರ್ಥವಾಗಿಬಿಟ್ಟಿತೇನು ? ನನ್ನ ಮನಸ್ಸನ್ನು ಅರ್ಥಮಾಡಿಕೊಂಡೇ ಅವನು ಮನೆಗೆ ಬರಲು ಹಿಂದೇಟು ಹಾಕುತ್ತಿದ್ದಾನೇನು ? ಅವನು ನನ್ನ ಮನಸ್ಸನ್ನು ಅರ್ಥಮಾಡಿಕೊಂಡಿದ್ದೇ ಆದರೆ ತುಂಬಾ ಅನರ್ಥವಾಗುವುದು. ಈ ಕಲ್ಪನೆಯೇ ಅವರ ಮನಸ್ಸನ್ನು ದಹಿಸಲಾರಂಭಿಸಿತು. ಅವರ ದೇಹದ ಎಲ್ಲ ಮೂಳೆಗಳೂ ಹಾಹಾಕಾರ ಮಾಡುತ್ತಾ ದಹಿಸುವ ಜ್ವಾಲೆಗೆ ನೀರು ಸುರಿಯಲು ವ್ಯಾಕುಲತೆಯನ್ನನುಭವಿಸತೊಡಗಿದವು. ಅವರು

ಟಾಂಗಾವಾಲನಿಗೆ ಕುದುರೆ ಓಟವನ್ನು ಇನ್ನೂ ಹೆಚ್ಚಿಸುವಂತೆ ಹೇಳಿದರು. ಎಷ್ಟು ವರ್ಷಗಳ ನಂತರ ಇವತ್ತು ಅವರ ಹೃದಯ–ಮಂಡಲದ ಮೇಲಿಂದ ಕಪ್ಪು ಪರದೆ ಹಿಂದೆ ಸರಿದಂಥ, ಅಲ್ಲಿ ಬೆಳಕಿನ ಕಿರಣಗಳು ಒಳಗಡೆಯಿಂದ ಪುಟಿದು ಬರಲು ತಹತಹಿಸುತ್ತಿರುವಂಥ ಅನುಭವವಾಯಿತು. ಟಾಂಗಾವಾಲ ತೂಕಡಿಸುತ್ತಿದ್ದಾನೇನೋ ಎಂದು ನೋಡಲು ಅವರು ಕತ್ತನ್ನು ಹೊರಹಾಕಿದರು. ಕುದುರೆ ಇಷ್ಟು ನಿಧಾನವಾಗಿ ಎಂದೂ ಓಡಿದ್ದಿಲ್ಲವೇನೋ ಎಂದು ಅವರಿಗನ್ನಿಸಿತು.

ಆಸ್ಪತ್ರೆಗೆ ಬಂದವರೇ ಅವರು ಸರ್ರನೆ ಟಾಂಗಾದಿಂದ ಇಳಿದು ಮಂಸಾರಾಮನ ಬಳಿಗೆ ಹೋದರು. ಹೋಗಿ ನೋಡಿದರೆ ಡಾಕ್ಟರು ಅವನ ಮುಂದೆ ಚಿಂತಾಮಗ್ನರಾಗಿ ನಿಂತಿದ್ದಾರೆ. ವಕೀಲರಿಗೆ ಕೈ ಕಾಲುಗಳೇ ಬಿದ್ದು ಹೋದಂಥ ಅನುಭವವಾಯಿತು. ಬಾಯಿಂದ ಮಾತೇ ಹೊರಡಲಿಲ್ಲ. ತೊದಲುವ ಧ್ವನಿಯಲ್ಲಿ ಬಹಳ ಕಷ್ಟಪಟ್ಟು, 'ಈಗ ಹೇಗಿದ್ದಾನೆ ಡಾಕ್ಟರೆ ?' ಇಷ್ಟು ಕೇಳುತ್ತ–ಕೇಳುತ್ತ ಅವರು ಅಳಲಾರಂಭಿಸಿದರು. ಡಾಕ್ಟರು ಅವರ ಪ್ರಶ್ನೆಗೆ ಉತ್ತರ ಕೊಡಲು ಒಂದು ನಿಮಿಷದ ವಿಳಂಬವಾಗಿರಬಹುದು. ಅಷ್ಟರೊಳಗೆ ಅವರು ಪ್ರಾಣ ಹೊರಟೇ ಹೋದಂತೆ ಆದರು. ಅವರು ಹಾಸಿಗೆಯ ಮೇಲೆ ಕುಳಿತು ಪ್ರಜ್ಞಾಶೂನ್ಯನಾಗಿದ್ದ ಮಗನನ್ನು ತಮ್ಮ ತೊಡೆಯ ಮೇಲೆ ಹಾಕಿಕೊಂಡು ಮಗುವಿನಂತೆ ಬಿಕ್ಕಳಿಸಿ ಬಿಕ್ಕಳಿಸಿ ಅಳತೊಡಗಿದರು. ಮಂಸಾರಾಮನ ಮೈ ಕಾದ ಕಾವಲಿಯಂತೆ ಬೇಯುತ್ತಿತ್ತು. ಮಂಸಾರಾಮ ಒಮ್ಮೆ ಕಣ್ಣು ತೆರೆದ. ಓಹ್ ಎಂಥ ಭಯಂಕರ ನೋಟ ! ಎಂಥ ದೀನ ದೃಷ್ಟಿಯಿತ್ತು ಅಲ್ಲಿ ! ವಕೀಲರು ಮಗನನ್ನು ಎದೆಗಪ್ಪಿಕೊಂಡು ಡಾಕ್ಟರನ್ನು ಉದ್ದೇಶಿಸಿ– 'ನನ್ನ ಮಗನಿಗೆ ಏನಾಗಿದೆ ? ನೀವು ಯಾಕೆ ಸುಮ್ಮನಿದ್ದೀರಿ ? ' ಎಂದು ಪ್ರಶ್ನಿಸಿದರು.

ಡಾಕ್ಟರು ಸಂದಿಗ್ಧ ಸ್ವರದಲ್ಲಿ ನುಡಿದರು : 'ಏನಾಗಿದೆ ಅನ್ನುವುದನ್ನು ನೀವು ನೋಡ್ತಿದ್ದೀರಿ. ೧೦೬ ಡಿಗ್ರಿ ಜ್ವರವಿದೆ. ನಾನು ಏನಂತ ಹೇಳಲಿ ? ಜ್ವರ ಇನ್ನೂ ಹೆಚ್ಚಾಗುತ್ತಲೇ ಇದೆ, ನನ್ನ ಕೈಲಾದುದೆಲ್ಲವನ್ನೂ ನಾನು ಮಾಡಿದ್ದೇನೆ. ದೇವರ ಇಚ್ಛೆ ಏನಿದೆಯೋ ಏನೋ ! ನೀವು ಹೋದಾಗಲಾಯ್ತು ನಾನು ಒಂದು ನಿಮಿಷಕ್ಕೂ ಇಲ್ಲಿಂದ ಕದಲಿಲ್ಲ. ಊಟವನ್ನೂ ಮಾಡಿಲ್ಲ. ಈತನ ಆರೋಗ್ಯ ಎಷ್ಟು ಗಂಭೀರವಾಗಿದೆ. ಅಂದರೆ ಒಂದೊಂದು ನಿಮಿಷಕ್ಕೂ ಏನೇನು ಆಗುತ್ತೆ ಅಂತ ಹೇಳೋಕೆ ಬರ್ತಿಲ್ಲ. ಇದು ಮಹಾಜ್ವರ. ಈತನಿಗೆ ಪ್ರಜ್ಞೆಯೇ ಬಂದಿಲ್ಲ. ಇದ್ದಕ್ಕಿದ್ದಂತೆಯೇ ಡಿಲಿರಿಯಂ (Delirium) ಒತ್ತಿ–ಒತ್ತಿ ಬರುತ್ತದೆ. ಈತನಿಗೆ ನಿಮ್ಮ ಮನೆಯಲ್ಲಿ ಯಾರಾದರೂ ಏನನ್ನಾದರೂ ಅಂದರೇನು ? ಮತ್ತೆ ಮತ್ತೆ 'ಅಮ್ಮಾ, ನೀನು ಎಲ್ಲಿದ್ದೀಯಾ? ಎಲ್ಲಿದ್ದೀಯಾ ?' ಅಂತ ಕನವರಿಸುತ್ತಿದ್ದಾನೆ'

ಡಾಕ್ಟರ್ ಸಾಹೇಬರು ಇಷ್ಟು ಹೇಳುತ್ತಿದ್ದರು. ಅತ್ತ ಮಂಸಾರಾಮ ಒಮ್ಮೆಗೇ ಎದ್ದು ಕುಳಿತದ್ದೇ ವಕೀಲರಿಗೆ ಜಾಡಿಸಿ ಒದ್ದು ಮಂಚದಿಂದ ಕೆಳಗೆ ತಳ್ಳಿದ. ಆಮೇಲೆ ಉನ್ಮತ್ತ

ಸ್ವರದಲ್ಲಿ ಹೇಳಿದ– 'ನನಗೆ ಹೆದಿರಿಸುತ್ತಿದ್ದೀರಾ ಸ್ವಾಮಿ ನೀವು ? ನನಗೆ ಹೊಡೆದು ಸಾಯಿಸಿ, ಸಾಯಿಸಿ ಬಿಡಿ ! ಕತ್ತಿ ಸಿಗಲಿಲ್ಲವೇನು ನಿಮಗೆ ? ಹಗ್ಗ ಇದೆಯಲ್ಲ ? ಹಗ್ಗವೂ ಸಿಗಲಿಲ್ಲವೇನು ? ಕೊಡಿ ಅದನ್ನು ನಾನೇ, ನೇಣು ಹಾಕಿಕೊಳ್ತೇನೆ. ಅಯ್ಯೋ ಅಮ್ಮಾ, ಎಲ್ಲಿದ್ದೀಯಾ ನೀನು ? ಇಷ್ಟು ಹೇಳುತ್ತ–ಹೇಳುತ್ತ ಅವನು ಮತ್ತೆ ಪ್ರಜ್ಞಾಶೂನ್ಯನಾದ.

ವಕೀಲರು ಒಂದು ಕ್ಷಣ ಮಂಸಾರಾಮನ ಶಿಥಿಲಗೊಳ್ಳುತ್ತಿದ್ದ ಶರೀರವನ್ನೇ ಅತ್ಯಂತ ದುಃಖದ ಕಣ್ಣುಗಳಿಂದ ನೋಡಿದರು. ಅನಂತರ ಒಮ್ಮೆಗೇ ಅವರು ಡಾಕ್ಟರ್‌ರ ಕೈ ಹಿಡಿದುಕೊಂಡು ಅತ್ಯಂತ ದೈನ್ಯದಿಂದ ಆಗ್ರಹ ಪೂರ್ವಕವಾಗಿ ನುಡಿದರು– 'ಡಾಕ್ಟರ್ ಸಾಹೇಬರೇ, ಈ ಹುಡುಗನ್ನನ್ನು ಬದುಕಿಸಿ ಕೊಡಿ. ನೀವು ಬದುಕಿಸಿ ಕೊಡದಿದ್ದರೆ ನನ್ನ ಸರ್ವನಾಶವಾಗಿ ಬಿಡುತ್ತೆ. ನಾನು ಶ್ರೀಮಂತನಲ್ಲ. ಆದರೂ ನೀವು ಏನನ್ನು ಕೇಳ್ತಿರೋ ಅದನ್ನು ತಂದು ಕೊಡ್ತೀನಿ. ಇವನನ್ನು ಬದುಕಿಸಿ ಕೊಡಿ. ನೀವು ದೊಡ್ಡ–ದೊಡ್ಡ ಡಾಕ್ಟರುಗಳನ್ನು ಕರೆಯಿಸಿ, ಅವರ ಅಭಿಪ್ರಾಯಗಳನ್ನು ಕೇಳಿ. ನಾನು......ನಾನು ನನ್ನ ಸರ್ವಸ್ವವನ್ನೂ ಕೊಟ್ಟುಬಿಡುತ್ತೇನೆ. ಇವನನ್ನು ಈ ಸ್ಥಿತಿಯಲ್ಲಿ ನನ್ನಿಂದ ನೋಡಲಾಗುತ್ತಿಲ್ಲ ! ಅಯ್ಯೋ ನನ್ನ ಮಗನೆ !'

ಡಾಕ್ಟರು ಕರುಣಾಪೂರ್ಣ ಧ್ವನಿಯಲ್ಲಿ ಹೇಳಿದರು– 'ರಾಯರೆ, ನಿಮ್ಮೊಂದಿಗೆ ನಾನು ನಿಜ ಹೇಳ್ತಿದ್ದೇನೆ. ನನ್ನಿಂದ ಏನೆಲ್ಲ ಸಾಧ್ಯವಾಗುವುದೋ, ಅದನ್ನೆಲ್ಲ ಮಾಡುತ್ತಿದ್ದೇನೆ. ಬೇರೆ ಡಾಕ್ಟರುಗಳ ಸಲಹೆ–ಸೂಚನೆಗಳನ್ನು ತೆಗೆದುಕೊಳ್ಳಲು ನೀವು ಹೇಳ್ತಿದ್ದೀರ. ಈಗಲೇ ಡಾಕ್ಟರ್ ಲಹರಿ, ಡಾ. ಭಾಟಿಯಾ ಮತ್ತು ಡಾ. ಮಾಥುರ್ ಅವರನ್ನು ಕರೆಸ್ತೀನಿ. ವಿನಾಯಕ ಶಾಸ್ತ್ರಿಯವರನ್ನೂ ಕರೆಸಿಕೊಳ್ತೇನೆ, ಇಷ್ಟಾದರೂ ನಿಮಗೆ ಯಾವ ಪೊಳ್ಳು ಭರವಸೆಯನ್ನೂ ನಾನು ಕೊಡಲು ಇಚ್ಛಿಸುವುದಿಲ್ಲ. ಏಕೆಂದರೆ ಈತನ ದೇಹಸ್ಥಿತಿ ಅಷ್ಟು ಗಂಭೀರವಾಗಿದೆ.'

ವಕೀಲರು ಅಳುತ್ತಾ ಹೇಳಿದರು: 'ಹಾಗನ್ನಬೇಡಿ ಡಾಕ್ಟರ್, ಇಂಥ ಮಾತನ್ನು ಬಾಯಲ್ಲಿ ಹೇಳಬೇಡಿ. ಇವನ ಶತ್ರುಗಳ ದೇಹಸ್ಥಿತಿ ಗಂಭೀರವಾಗಲಿ. ಆದರೆ ಇವನು ಸುಧಾರಿಸಿಕೊಳ್ಳಲಿ, ದೇವರು ನನ್ನ ಬಗ್ಗೆ ಇಷ್ಟು ಕೋಪಗೊಳ್ಳುವುದಿಲ್ಲ ಅಂದುಕೊಂಡಿದ್ದೀನಿ. ನೀವು ಕಲ್ಕತ್ತೆಗೆ ಮತ್ತು ಬೊಂಬಾಯಿಯಲ್ಲಿರುವ ಡಾಕ್ಟರುಗಳಿಗೆ ತಾರು ಕೊಟ್ಟು ಅವರನ್ನೂ ಕರೆಸಿಕೊಳ್ಳಿ. ನಾನು ನನ್ನ ಜೀವನ ಪರ್ಯಂತ ನಿಮ್ಮ ಗುಲಾಮನಾಗಿರ್ತೇನೆ, ನನ್ನ ಕುಲದೀಪಕ ಇವನು. ನನ್ನ ಬದುಕಿನ ಆಧಾರ ಸ್ತಂಭ ಇವನೇ. ನನ್ನ ಎದೆ ಒಡೆದು ಹೋಗುತ್ತಿದೆ. ಇವನಿಗೆ ಪ್ರಜ್ಞೆ ಬರುವಂಥ ಯಾವುದಾದರೊಂದು ಔಷಧಿ ಕೊಡಿ. ಇವನಿಗೆ ಏನು ನೋವಿದೆ ಅನ್ನುವುದನ್ನು ನನ್ನ ಕಿವಿಯಿಂದ ಕೇಳಬೇಕು. ಅಯ್ಯೋ ಮಗನೆ !'

ಡಾಕ್ಟರ್ : 'ನೀವು ಕೊಂಚ ಸಮಾಧಾನ ಮಾಡಿಕೊಳ್ಳಿ. ನಿಮಗೆ ವಯಸ್ಸಾಗಿದೆ. ಹೀಗೆ ಅಯ್ಯೊ ಅಯ್ಯೊ ಅಂತ ಬಡಬಡಿಸಿದರೆ, ಮತ್ತು ಡಾಕ್ಟರುಗಳಿಗೆ ಫೀಸು ಕೊಟ್ಟಾಕ್ಷಣಕ್ಕೆ ಯಾವುದೇ ಪರಿಣಾಮವಾಗುವುದಿಲ್ಲ. ಶಾಂತಚಿತ್ತದಿಂದ ಕುಳಿತ್ಕೊಳ್ಳಿ. ನಗರದಲ್ಲಿರುವ

ಡಾಕ್ಟರುಗಳನ್ನು ಕರೆಸ್ತೀವಿ. ಅವರು ಏನ್ಮಾಡ್ತಾರೆ ಅನ್ನೋದನ್ನು ನೋಡೋಣ. ನೀವು ಹೀಗೆ ಮೈ ಪರಚಿಕೊಂಡು ಗಾಬರಿಯಾದರೆ ಹೇಗೆ ?'

ವಕೀಲರು : 'ಆಯಿತು ಡಾಕ್ಟರ್, ಇನ್ನು ನಾನು ಮಾತನಾಡುವುದಿಲ್ಲ. ತುಟಿ ಎರಡು ಮಾಡುವುದಿಲ್ಲ. ನಿಮಗಿಷ್ಟ ಬಂದಂತೆ ಮಾಡಿ. ನನ್ನ ಮಗನ್ನ ನಿಮ್ಮ ಮಡಿಲಿಗೆ ಹಾಕಿದ್ದೀನಿ. ನೀವೇ ಇವನನ್ನು ಉಳಿಸಬೇಕು. ಇವನಿಗೆ ಜ್ಞಾನ ಬಂದು ನನ್ನನ್ನು ಗುರುತಿಸಿ, ನನ್ನನ್ನು ಮಾತನಾಡಿಸಿ, ನಾನು ಹೇಳುವುದನ್ನು ಅರ್ಥ ಮಾಡಿಕೊಂಡರೆ ಸಾಕು. ಇದು ಸಾಧ್ಯವಾಗುವಂತೆ ಮಾಡುವ ಯಾವುದಾದರೂ ಸಂಜೀವಿನಿ ಇಲ್ಲವೇನು ? ಇದ್ದಿದ್ದರೆ ಇವನೊಂದಿಗೆ ಎರಡು ಮಾತುಗಳನ್ನಾದರೂ ಆಡಬಹುದಿತ್ತು .'

ಇಷ್ಟು ಹೇಳುತ್ತ – ಹೇಳುತ್ತ ವಕೀಲರು ಆವೇಶದಿಂದ ಮಂಸಾರಾಮನಿಗೆ ಹೇಳಿದರು : 'ಮಗು, ಕಣ್ಣು ಬಿಡು, ಕಣ್ಣು ಬಿಟ್ಟು ನನ್ನ ನೋಡು. ಏನಾಗಿದೆ ನಿನಗೆ ? ನಿನ್ನ ಬಗ್ಗೆ ನನ್ನ ಮನಸ್ಸಲ್ಲಿ ಯಾವ ಆಕ್ಷೇಪವೂ ಇಲ್ಲ. ನನ್ನ ಹೃದಯ ಶುದ್ಧವಾಗಿದೆ.'

ಡಾಕ್ಟರ್ : 'ಮತ್ತೆ ನೀವು ಬಡಬಡಿಸಲು ಶುರು ಮಾಡಿದಿರಲ್ಲ ! ರೀ ಸ್ವಾಮಿ, ನೀವು ಮಕ್ಕಳಲ್ಲ. ಮುದುಕರಾಗಿದ್ದೀರ. ಕೊಂಚ ಧೈರ್ಯದಿಂದಿರಿ.'

ವಕೀಲರು : 'ಆಯಿತು ಡಾಕ್ಟರೆ. ಇನ್ನು ಮಾತನಾಡೊಲ್ಲ. ಬಿಲ್ ಕುಲ್ ಇಲ್ಲ. ನಿಮಗೆ ಇಷ್ಟ ಬಂದಂತೆ ಮಾಡಿ. ಎಲ್ಲ ಭಾರವನ್ನು ನಿಮ್ಮ ಮೇಲೆ ಹಾಕಿದ್ದೇನೆ. ನನ್ನ ಹೃದಯ ಶುದ್ಧವಾಗಿದೆ ಅಂತ ತೋರಿಸೋದಕ್ಕೆ ಯಾವ ಮಾರ್ಗವೂ ಇಲ್ಲವೇನು ? ನೀವೇ ಹೇಳಿಬಿಡಿ ಡಾಕ್ಟರ್, ನೀವೇ ಹೇಳಿಬಿಡಿ – ನಿನ್ನ ಬಡಪಾಯಿ ಅಪ್ಪ ಹೊರಗೆ ಕುಳಿತುಕೊಂಡು ಅಳ್ತಾ ಇದ್ದಾನೆ ಅಂತ. ಇಷ್ಟನ್ನಾದರೂ ಹೇಳಿಬಿಡಿ. ನನಗಿನ್ನೇನೂ ಬೇಕಾಗಿಲ್ಲ. ನಾನು ಸುಮ್ಮನೆ ಕುಳಿತಿರ್ತೇನೆ. ಬಾಯಿ ಬಿಡೋಲ್ಲ. ನಾನು ಹೇಳಿದಷ್ಟನ್ನು ಖಂಡಿತ ಹೇಳಿಬಿಡಿ.'

ಡಾಕ್ಟರ್ : 'ರೀ ಸ್ವಾಮಿ, ನೀವು ಸುಮ್ಮನೆ ಬಾಯಿ ಮುಚ್ಚಿಕೊಂಡು ಕುಳಿತಿರ್ತೇನೆ ಅನ್ನೋದಾದ್ರೆ ಇಲ್ಲಿ ಕೂತಿರಿ. ಇಲ್ಲಾಂದ್ರೆ ಮನೆಗೆ ಹೋಗಿ ಅಂತ ವಿಧಿಯಿಲ್ಲದೆ ಹೇಳಬೇಕಾಗುತ್ತೆ ನೋಡಿ. ನಾನು ಆಫೀಸಿನಲ್ಲಿ ಕೂತ್ಕೊಂಡು ಡಾಕ್ಟರುಗಳಿಗೆ ಪತ್ರ ಬರಿತೀನಿ. ನೀವು ಸುಮ್ಮನೆ ಕುಳಿತಿರಿ.'

ನಿರ್ದಯಿ ಡಾಕ್ಟರ್ ! ಕೈಗೆ ಬಂದ ಮಗನ ಸ್ಥಿತಿ ಹೀಗೆ ಆಗಿರುವಾಗ ಧೈರ್ಯ ತಂದುಕೊಳ್ಳಲು ಯಾವ ತಂದೆಯಿಂದ ಆಗುತ್ತೆ ಹೇಳಿ. ವಕೀಲರು ತುಂಬ ಗಂಭೀರ ಸ್ವಭಾವದ ಮನುಷ್ಯರಾಗಿದ್ದರು. ಇಂಥ ಹೊತ್ತಿನಲ್ಲಿ ಕೈ–ಕೈ ಹಿಸುಕಿಕೊಂಡು, ಎಷ್ಟೇ ಮೈ ಪರಚಿಕೊಂಡರೂ ಏನೂ ಪ್ರಯೋಜನವಿಲ್ಲಾಂತ ಅವರಿಗೂ ಗೊತ್ತಿತ್ತು : ಆದರೆ ಶಾಂತಚಿತ್ತದಿಂದ ಕುಳಿತುಕೊಳ್ಳುವುದು ಅವರಿಗೂ ಸಾಧ್ಯವಿರಲಿಲ್ಲ. ಈ ಖಾಯಿಲೆ ತಾನೇ ತಾನಾಗಿ ಸಹಜವಾಗಿ ಬಂದಿದ್ದರೆ ಅವರು ಶಾಂತವಾಗಿ ಇದ್ದು ಬಿಡುತ್ತಿದ್ದರು. ಬೇರೆಯವರನ್ನೂ ಸಮಾಧಾನಪಡಿಸುತ್ತಿದ್ದರು. ತಾವೇ ಹೋಗಿ ಡಾಕ್ಟರ್‌ಗಳನ್ನು

ಕರೆದುಕೊಂಡು ಬರುತ್ತಿದ್ದರು. ಆದರೆ ಇವತ್ತು ಧಗಧಗಿಸುತ್ತಿರುವ ಬೆಂಕಿಯನ್ನು ಮೊದಲು ಇಟ್ಟವರು ತಾವೇ ಎಂಬುದು ಗೊತ್ತಾಗಿಯೂ ಅವರಿಂದ ಸುಮ್ಮನಿರಲು ಸಾಧ್ಯವೇನು ? ಯಾವನೇ ತಂದೆ ಅಂಥ ವಜ್ರ ಹೃದಯದವನಾಗಲು ಸಾಧ್ಯವೇನು ? ಅವರ ರೋಮ ರೋಮವೂ ಅವರಿಗೆ ಧಿಕ್ಕಾರ ಹಾಕುತ್ತಿತ್ತು. ನನ್ನಲ್ಲಿ ಇಂಥ ದುರ್ಭಾವನೆ ಬಂತಾದರೂ ಏಕೆ ? ಯಾವುದೇ ಪ್ರತ್ಯಕ್ಷ ಪ್ರಮಾಣವಿಲ್ಲದೆ ಇಂಥ ಭಯಂಕರ ಕಲ್ಪನೆಯನ್ನು ನಾನು ಹೇಗಾದರೂ ಮಾಡಿದೆ ? ಹಾಗಾದರೆ, ಅಂಥ ಸಂದರ್ಭದಲ್ಲಿ ನಾನು ಏನು ಮಾಡಬೇಕಾಗಿತ್ತು ? ಈಗ ನಾನು ಏನು ಮಾಡಿದೆನೋ ಅದರ ಹೊರತಾಗಿ ಇನ್ನೇನು ತಾನೇ ಮಾಡಲು ಸಾಧ್ಯವಿತ್ತು ? ಈ ಬಗ್ಗೆ ಖಚಿತವಾಗಿ ಯಾವುದೇ ತೀರ್ಮಾನವನ್ನು ಅವರಿಂದ ತೆಗೆದುಕೊಳ್ಳಲಾಗಲಿಲ್ಲ. ವಾಸ್ತವವಾಗಿ ಮದುವೆಯ ಬಂಧನದಲ್ಲಿ ಸಿಕ್ಕಿಕೊಂಡಂತಾಗಿದೆ. ಈ ಮದುವೆಯೇ ಈ ಎಲ್ಲ ಉಪದ್ರವಗಳ ಜಡವಾಗಿದೆ.

ಆದರೆ ಯಾರೂ ಮಾಡದಂಥ ಕೆಲಸವನ್ನು ನಾನೇನೂ ಮಾಡಿಲ್ಲ. ಎಲ್ಲ ಗಂಡು–ಹೆಣ್ಣುಗಳು ಮದುವೆಯಾಗುತ್ತಾರೆ. ಅವರ ಬದುಕು ಸಂತೋಷವಾಗಿಯೇ ಕಳೆಯುತ್ತದೆ. ಸಂತೋಷದಿಂದಿರಬೇಕೆಂದೇ ತಾನೆ ನಾವು ಮದುವೆ ಮಾಡಿಕೊಳ್ಳುವುದು. ತಾವಿರುವ ಮೊಹಲ್ಲಾದಲ್ಲೇ ನೂರಾರು ಗಂಡಸರು ಎರಡನೆಯ, ಮೂರನೆಯ, ನಾಲ್ಕನೆಯ, ಏಳನೆಯ ಮದುವೆಯನ್ನೂ ಮಾಡಿಕೊಂಡಿದ್ದಾರೆ, ನನಗಿಂತಲೂ ಹೆಚ್ಚು ವಯಸ್ಸಾಗಿತ್ತು ಇವರಿಗೆ. ಬದುಕಿದ್ದಷ್ಟು ದಿನ ಆರಾಮವಾಗಿಯೇ ಬದುಕಿದರು. ಆಮೇಲೆ, ತಮ್ಮ ಹೆಂಡತಿಗಿಂತಲೂ ಮುಂಚೆ ಇವರು ಸತ್ತರೆ ಅಂದರೆ ಹಾಗೇನೂ ಆಗಿಲ್ಲ. ನನಗಾದ ಗತಿಯೇ ಎಲ್ಲರಿಗೂ ಆಗಿದ್ದಿದ್ದರೆ ಮದುವೆ ಎಂಬ ಹೆಸರನ್ನು ಯಾರು ತಾನೇ ತೆಗೆದುಕೊಳ್ಳುತ್ತಿದ್ದರು. ನನ್ನ ತಂದೆ ಐವತ್ತೈದನೆಯ ವಯಸ್ಸಿನಲ್ಲಿ ಮದುವೆಯಾದರು. ನಾನು ಹುಟ್ಟುವಾಗ ಅವರಿಗೆ ಅರುವತ್ತು ವರ್ಷಕ್ಕಿಂತ ಕಡಿಮೆಯೇನೂ ಆಗಿರಲಿಲ್ಲ. ಅಂದ ಹಾಗೆ ಆವತ್ತಿಗೂ ಇವತ್ತಿಗೂ ಕೊಂಚ ಅಂತರ ಖಂಡಿತ ಬಂದಿದೆ. ಮೊದಲು ಹೆಂಗಸರು ಓದಿ–ಬರೆದು ಮಾಡುತ್ತಿರಲಿಲ್ಲ. ಗಂಡ ಎಂಥವನೇ ಆಗಿರಲಿ, ಹೇಗೇ ಇರಲಿ, ಅವನನ್ನು ಪೂಜನೀಯ ಎಂದು ಭಾವಿಸುತ್ತಿದ್ದರು. ಯುವಕ ಮುದುಕಿಯನ್ನು ಕಟ್ಟಿಕೊಂಡು ಸಂತೋಷದಿಂದಿರಲು ಸಾಧ್ಯವಿಲ್ಲವೆಂದ ಮೇಲೆ ಯುವತಿ ಮುದುಕನನ್ನು ಕಟ್ಟಿಕೊಂಡು ಸಂತೋಷದಿಂದಿರಲು ಹೇಗೆ ಸಾಧ್ಯ ? ಆದರೆ ನಾನು ಹೇಳಿಕೊಳ್ಳುವಷ್ಟು ಮುದಿಯನೇನೂ ಆಗಿರಲಿಲ್ಲ. ನನ್ನನ್ನು ನೋಡಿದವರು ಯಾರೂ ನನಗೆ ೪೦ ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿದೆ ಅಂತ ಹೇಳಲಿಕ್ಕೇನು ಬರುತ್ತಿರಲಿಲ್ಲ. ಒಟ್ಟಿನಲ್ಲಿ ಯೌವನಾವಸ್ಥೆ ಕಳೆದು ಹೋದ ಮೇಲೆ ಯುವತಿಯನ್ನು ಮದುವೆ ಮಾಡಿಕೊಂಡರೆ, ತಾನು ಯೌವನದಲ್ಲಿದ್ದೇನೆ ಎಂದು ತೋರಿಸಿಕೊಳ್ಳಲು ಏನಾದರೂ ಮಾಡಲೇಬೇಕಾಗುತ್ತೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಹೆಣ್ಣು ಸಹಜವಾಗಿಯೇ ನಾಚಿಕೆಯ ಸ್ವಭಾವದವಳು. ಕುಲಟೆಯರ ಮಾತು ಬೇರೆ, ಆದರೆ ಸಾಮಾನ್ಯವಾಗಿ ಹೆಣ್ಣು ಗಂಡಿಗಿಂತಲೂ ಹೆಚ್ಚು ಪಾಲು

ಸಂಯಮಶೀಲಳಾಗಿರುತ್ತಾಳೆ. ತನಗೆ ಅನುರೂಪನಾದ ಗಂಡನನ್ನು ಮದುವೆ ಮಾಡಿಕೊಂಡ ಹೆಣ್ಣು ಪರ ಪುರುಷನೊಂದಿಗೆ ಸರಸವಾಗಿ ವ್ಯವಹರಿಸಿದರೂ ಅವಳ ಮನಸ್ಸು ಶುದ್ಧವಾಗಿರುತ್ತದೆ. ಅನುರೂಪವಲ್ಲದ ಗಂಡನನ್ನು ಮದುವೆ ಮಾಡಿಕೊಂಡ ಹೆಣ್ಣು ಪರಪುರುಷನನ್ನು ಕಣ್ಣೆತ್ತಿ ನೋಡದಿರಬಹುದು, ಆದರೆ ಅವಳ ಮನಸ್ಸು ದುಃಖದಿಂದ ಕೂಡಿರುತ್ತದೆ. ಗುದ್ದಲಿಯ ಹೊಡೆತಕ್ಕೆ ಜಗ್ಗದಿದ್ದರೆ ಅದು ಪಕ್ಕಾಗೋಡೆ, ಕಚ್ಚಾಗೋಡೆ ಗುದ್ದಲಿಯ ಹೊಡೆತ ಬೀಳುವವರೆಗೆ ಮಾತ್ರ ಭದ್ರವಾಗಿ ನಿಂತಿರುತ್ತದೆ, ಅಷ್ಟೆ

ಹೀಗೆ ನಾನಾ ವಿಚಾರಗಳ ಬಗೆಗೆ ಚಿಂತಿಸುತ್ತಿದ್ದ ವಕೀಲರಿಗೆ ತೂಕಡಿಕೆ ಬಂತು. ಮನಸ್ಸಿನ ಭಾವನೆಗಳು ಕೂಡಲೇ ಸ್ವಪ್ನದ ರೂಪವನ್ನು ಪಡೆದುಕೊಂಡುವು. ಈ ಸ್ವಪ್ನದಲ್ಲಿ ಅವರು ನೋಡಿದ್ದು – ಅವರ ಮೊದಲ ಹೆಂಡತಿ ಮಂಸಾರಾಮನ ಮುಂದೆ ನಿಂತು ಅವರನ್ನು ಕೇಳುತ್ತಿದ್ದಾಳೆ– 'ಸ್ವಾಮಿ, ಇದೇನು ಮಾಡಿದಿರಿ ನೀವು ? ನಾನು ನನ್ನ ರಕ್ತದ ಒಂದೊಂದು ಹನಿಯನ್ನೂ ಧಾರೆಯೆರೆದು ಸಾಕಿದ್ದ ಈ ಮಗುವನ್ನು ಈ ರೀತಿ ನಿರ್ದಯರಾಗಿ ನೀವು ಕೊಂದು ಹಾಕಿದಿರಲ್ಲ ? ಇವನ ಮೇಲೆ ಎಂಥ ಘೋರವಾದ ಕಳಂಕವನ್ನು ಹೊರಿಸಿಬಿಟ್ಟಿರಿ ? ಈಗ ಅತ್ತು ಏನು ಪ್ರಯೋಜನ ? ಇವನನ್ನು ನೀವು ಕೈಯಿಂದ ಕಳೆದುಕೊಂಡಂತೆಯೇ ಸರಿ. ನಾನು ನಿಮ್ಮ ದಯೆಯಿಲ್ಲದ ಕೈಗಳಿಂದ ಇವನನ್ನು ಕಿತ್ತುಕೊಂಡು ನನ್ನ ಜತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದೇನೆ. ಈ ಮಟ್ಟದ ಅನುಮಾನ ಸ್ವಭಾವದ ವ್ಯಕ್ತಿ ನೀವೆಂದೂ ಆಗಿರಲಿಲ್ಲ. ನೀವು ಎರಡನೆಯ ಮದುವೆ ಮಾಡಿ ಕೊಳ್ಳುವುದರ ಜತೆ–ಜತೆಗೆ ಅನುಮಾನವನ್ನೂ ಕಟ್ಟಿಕೊಂಡು ಬಂದಿರಾ ? ಇಂಥ ಕೋಮಲ ಹೃದಯದವನ ಮೇಲೆ ಎಂಥ ಕಠೋರ ಆಘಾತ ಮಾಡಿದಿರಿ ! ಎಂಥ ಭಯಂಕರ ಕಳಂಕವನ್ನು ಹಚ್ಚಿದಿರಿ. ಇಂಥ ಅನುಮಾನವನ್ನು ಸಹಿಸಿಕೊಂಡೂ ಬದುಕುವ ವ್ಯಕ್ತಿ ನಾಚಿಕೆಗೆಟ್ಟವನು. ನನ್ನ ಮಗ ಅಂಥವನಲ್ಲ, ಇಷ್ಟು ಹೇಳುತ್ತ ಆಕೆ ತನ್ನ ಮಗನನ್ನು ಎತ್ತಿಕೊಂಡು ಹೊರಟು ಹೋದಳು. ವಕೀಲರು ಅಳುತ್ತ ಅವಳ ಕೈಯಿಂದ ಮಂಸಾರಾಮನನ್ನು ಕಿತ್ತುಕೊಳ್ಳಲು ಕೈ ಮುಂದೆ ಮಾಡಿದರು. ಅಷ್ಟರಲ್ಲಿ ಎಚ್ಚರವಾಯಿತು. ಡಾಕ್ಟರ್ ಲಹಿರಿ, ಡಾಕ್ಟರ್ ಭಾಟಿಯಾ ಮುಂತಾದ ಅರ್ಧ ಡಜನ್ ಡಾಕ್ಟರುಗಳು ಮುಂದೆ ನಿಂತಿರುವುದು ಕಾಣಿಸಿತು.

# ಹನ್ನೆರಡು

ಮೂರು ದಿನಗಳು ಕಳೆದುವು. ಆದರೆ ವಕೀಲರು ಮನೆಗೆ ಬರಲಿಲ್ಲ..... ರುಕ್ಮಿಣಿ ಎರಡೂ ಹೊತ್ತು ಹೋಗಿ ಮಂಸಾರಾಮನನ್ನು ನೋಡಿಕೊಂಡು ಬರುತ್ತಿದ್ದಳು. ಇಬ್ಬರು ಹುಡುಗರೂ ಹೋಗಿ ಬರುತ್ತಿದ್ದರು. ಆದರೆ ನಿರ್ಮಲಾ ಹೇಗೆ ಹೋಗಿಯಾಳು ? ಅವಳ ಕಾಲುಗಳು ಬೇಡಿಗಳಿಂದ ಬಿಗಿದಿದ್ದವು. ಆಕೆ ಮಂಸಾರಾಮನ ಆರೋಗ್ಯವನ್ನು ತಿಳಿದುಕೊಳ್ಳಲು ಕಾತುರಳಾಗಿಯೇನೋ ಇರುತ್ತಿದ್ದಳು. ರುಕ್ಮಿಣಿಯನ್ನು ಈ ಬಗ್ಗೆ ಕೇಳಿದರೆ ಬೈಗಳು ಮತ್ತು ಮಕ್ಕಳನ್ನು ಕೇಳಿದರೆ ತಲೆ–ಬುಡವಿಲ್ಲದ ಉತ್ತರಗಳು ಸಿಗುತ್ತಿದ್ದುವು. ಒಮ್ಮೆ ತಾನೇ ಹೋಗಿ ಅವನನ್ನು ನೋಡಿಕೊಂಡು ಬರಲೇ ಎಂದು ಮನಸ್ಸು ಚಡಪಡಿಸುತ್ತಿತ್ತು. ಆದರೆ ಅನುಮಾನ ವಕೀಲರ ಪುತ್ರ ಪ್ರೇಮವನ್ನು ಶಿಥಿಲಗೊಳಿಸಿಬಿಟ್ಟಾತು ಎಂಬ ಭಯ ಆಕೆಯನ್ನು ಕಾಡುತ್ತಿತ್ತು. ತಾನು ಹೋಗದೇ ಇರುವುದು ಆತನು ಸುಧಾರಿಸಿಕೊಳ್ಳುವುದರಲ್ಲಿ ಅಡ್ಡ ಬಂದರೆ ಎಂದೂ ಯೋಚಿಸುತ್ತಿದ್ದಳು. ಡಾಕ್ಟರುಗಳು ಯಾರ ಬಂಧುಗಳೂ ಅಲ್ಲ. ಅವರಿಗೆ ಬೇಕಾಗಿರುವುದು ಹಣ. ಹಣ ಸ್ವರ್ಗಕ್ಕಾದರೂ ಹೋಗಲಿ. ನರಕಕ್ಕಾದರೂ ಹೋಗಲಿ, ಇದನ್ನು ಕಟ್ಟಿಕೊಂಡು ಅವರಿಗೇನು ? ಅವಳ ಮನಸ್ಸಿನಲ್ಲಿ ತಾನು ಆಸ್ಪತ್ರೆಗೆ ಹೋಗಿ ಅಲ್ಲಿನ ಡಾಕ್ಟರಿಗೆ ಒಂದು ಸಾವಿರ ರೂಪಾಯಿಗಳ ಕಟ್ಟೊಂದನ್ನು ಕೊಟ್ಟು, 'ಇವನನ್ನು ಬದುಕಿಸಿಕೊಡಿ, ಈ ಹಣವನ್ನು ನೀವು ಇಟ್ಕೊಳ್ಳಿ' ಎಂದು ಹೇಳಿಬರುವ ಪ್ರಬಲ ಇಚ್ಛೆಯಾಗುತ್ತಿತ್ತು. ಆದರೆ ಆಕೆಯ ಬಳಿ ಅಷ್ಟು ಹಣವಾಗಲಿ, ಅಷ್ಟು ಧೈರ್ಯವಾಗಲಿ ಇರಲಿಲ್ಲ. ಈಗಲೂ ಆಕೆ ಅಲ್ಲಿಗೆ ಹೋದದ್ದೇ ಆದರೆ ಮಂಸಾರಾಮ ಚೆನ್ನಾಗಿ ಬಿಡುತ್ತಿದ್ದ. ಅವನಿಗೆ ಯಾವ ಬಗೆಯ ಸೇವೆ–ಶುಶ್ರೂಷೆ ಆಗಬೇಕೋ ಆ ಬಗೆಯಲ್ಲಿ ಆಗುತ್ತಿಲ್ಲ. ಆ ರೀತಿ ಆಗಿದ್ದಿದ್ದರೆ ! ಮೂರು ದಿನಗಳಾದರೂ ಜ್ವರ ಇಳಿಯುತ್ತಿರಲಿಲ್ಲವೇನು ? ಇದು ದೇಹಕ್ಕೆ ಬಂದಿರುವ ಜ್ವರವಲ್ಲ, ಮಾನಸಿಕ ಜ್ವರ. ಚಿತ್ತ ಶಾಂತವಾಗುವುದರಿಂದ ಮಾತ್ರ ಈ ಜ್ವರದ ಪ್ರಕೋಪ ಶಾಂತವಾಗುತ್ತದೆ. ಆಕೆ ಇಡೀ ರಾತ್ರಿ ಅವನ ಪಕ್ಕದಲ್ಲಿಯೇ ಕುಳಿತಿರುವಂತಿದ್ದರೆ, ಇದರಿಂದ ವಕೀಲರು ತಮ್ಮ ಮನಸ್ಸನ್ನು ಕೆಡಿಸಿಕೊಳ್ಳದೇ ಇದ್ದರೆ, ಬಹುಶಃ ಮಂಸಾರಾಮನಿಗೂ ತನ್ನ ತಂದೆಯ ಮನಸ್ಸು–ಹೃದಯ ಸ್ವಚ್ಛವಾಗಿದೆ, ಯಾವ ಕೆಟ್ಟ ಭಾವವೂ ಇವರ ಮನಸ್ಸಿನಲ್ಲಿಲ್ಲ ಎಂಬ ಭಾವನೆ ಬರುತ್ತಿತ್ತು. ಆಗ ಅವನ ಆರೋಗ್ಯ ಥಟ್ಟನೆ ಸುಧಾರಿಸಿ ಬಿಡುತ್ತಿತ್ತು. ಆದರೆ ಈ ರೀತಿ ಆಗುವುದು ಸಾಧ್ಯವೇನು ? ವಕೀಲರು ನನ್ನನ್ನು ಅಲ್ಲಿ ನೋಡಿ ಸಂತೋಷಗೊಳ್ಳುವರೇನು ? ಈಗಲೂ ಅವರ ಹೃದಯ ಶುದ್ಧವಾಗಿಲ್ಲವೇನು ? ಅವರು ಇಲ್ಲಿಂದ ಹೋಗುವಾಗ ತಮ್ಮ ತಪ್ಪಿಗೆ ಪಶ್ಚಾತ್ತಾಪ ಪಡುತ್ತಿರುವಂತೆ ಕಂಡಿತು. ಒಂದು ವೇಳೆ ಹೀಗಾಗದಿದ್ದರೆ

ತಾನು ಅಲ್ಲಿಗೆ ಹೋಗುತ್ತಿದ್ದಂತೆಯೇ ವಕೀಲರ ಸಂದೇಹ ಪುನಃ ಗರಿ ಗೆದರಿಬಿಟ್ಟರೆ ? ಇದರಿಂದಾಗಿ ಅವರು ಮಗನ ಪ್ರಾಣವನ್ನು ತೆಗೆದುಕೊಳ್ಳಲು ನಿಶ್ಚಯಿಸಿಬಿಟ್ಟರೆ ?

ಈ ದ್ವಂದ್ವದಲ್ಲಿಯೇ ಉಯ್ಯಾಲೆಯಂತೆ ತೊಯ್ದಾಡುತ್ತ–ತೊಯ್ದಾಡುತ್ತ ನಿರ್ಮಲಾ ಮೂರು ದಿನಗಳನ್ನು ಕಳೆದಳು. ಮನೆಯಲ್ಲಿ ಒಲೆ ಉರಿಯಲೂ ಇಲ್ಲ. ಯಾರೂ ಒಂದು ತುತ್ತನ್ನೂ ಎತ್ತಲಿಲ್ಲ. ಹುಡುಗರಿಗೆ ಪೇಟೆಯಿಂದ ಪೂರಿಗಳನ್ನು ತರಿಸಿಕೊಟ್ಟು ನಿರ್ಮಲಾ ಹಾಗೂ ರುಕ್ಮಿಣಿ ಹಸಿದುಕೊಂಡೇ ಮಲಗಿಬಿಡುತ್ತಿದ್ದರು. ಊಟ ಮಾಡಬೇಕೆಂದು ಅವರಿಗೆ ಅನ್ನಿಸುತ್ತಲೇ ಇರಲಿಲ್ಲ.

ನಾಲ್ಕನೆಯ ದಿನ ಸಿಯಾರಾಮ ಸ್ಕೂಲಿನಿಂದ ಬರುವಾಗ ಆಸ್ಪತ್ರೆಗೆ ಹೋಗಿ ಬಂದಿದ್ದ. ನಿರ್ಮಲಾ ಕೇಳಿದಳು– 'ಮಗು, ಅಣ್ಣ ಹೇಗಿದ್ದಾನೆ ? ಎದ್ದು ಕುಳಿತಿದ್ದಾನೋ ಹೇಗೆ ?'

ಜಿಯಾರಾಮ ಅಳು ಮೋರೆ ಮಾಡಿಕೊಂಡು ಹೇಳಿದ– 'ಇವತ್ತು ಅಣ್ಣಯ್ಯ ಒಂದು ಮಾತೂ ಆಡುತ್ತಿರಲಿಲ್ಲ. ಮಂಚದ ಮೇಲೆ ಸುಮ್ಮನೆ ಕುಳಿತುಕೊಂಡು ಜೋರು–ಜೋರಾಗಿ ಕೈಕಾಲು ಆಡಿಸುತ್ತಿದ್ದ.'

ನಿರ್ಮಲಾಳ ಮುಖ ಕಪ್ಪಿಟ್ಟಿತು. ಗಾಬರಿಯಿಂದಲೇ– 'ನಿನ್ನ ಅಪ್ಪಾಜಿ ಅಲ್ಲಿರಲಿಲ್ಲವೇನು ?'

ಜಿಯಾರಾಮ – 'ಏಕಿರಲಿಲ್ಲ ? ಇವತ್ತು ಅವರು ತುಂಬ ಅಳ್ತಿದ್ದರು.'

ನಿರ್ಮಲಾಳ ಎದೆ ಡವಡವ ಅನ್ನ ತೊಡಗಿತು. 'ಡಾಕ್ಟರುಗಳು ಅಲ್ಲಿರಲಿಲ್ಲ ವೇನು ?' ಎಂದಳು.

ಜಿಯಾರಾಮ – ಡಾಕ್ಟರುಗಳು ನಿಂತಿದ್ದರು. ನಿಂತು ತಮ್ಮ ತಮ್ಮಲ್ಲೇ ಏನೇನೋ ಮಾತನಾಡಿಕೊಳ್ಳುತ್ತಿದ್ದರು. ಎಲ್ಲರಿಗಿಂತಲೂ ದೊಡ್ಡ ಸಿವಿಲ್ ಸರ್ಜನ್ ಇಂಗ್ಲಿಷ್‌ನಲ್ಲಿ ಹೇಳ್ತಿದ್ದರು– ರೋಗಿ ಮೈಗೆ ಹೊಸ ರಕ್ತ ಕೊಡಬೇಕು ಅಂತ. ಆಗ ಅಪ್ಪಾಜಿ 'ನನ್ನ ದೇಹದಿಂದ ಎಷ್ಟು ರಕ್ತ ಬೇಕೋ ಅಷ್ಟು ರಕ್ತ ತಗೊಳ್ಳಿ' ಎಂದು ಹೇಳಿದರು. ಅದಕ್ಕೆ ಸಿವಿಲ್ ಸರ್ಜನ್ ನಕ್ಕು ಹೇಳಿದರು – 'ನಿಮ್ಮ ರಕ್ತದಿಂದ ಕೆಲಸವಾಗುವುದಿಲ್ಲ, ಯುವಕರ ಬ್ಲಡ್ ಬೇಕು. ಕೊನೆಗೆ ಅವರು ಸಿರೆಂಜ್‌ನಿಂದ ಯಾವುದೋ ಔಷಧಿಯನ್ನು ಅಣ್ಣನ ತೋಳಿಗೆ ಚುಚ್ಚಿದರು. ಆ ಸೂಜಿ ನಾಲ್ಕು ಅಂಗುಲಗಳಿಗಿಂತ ಕಡಿಮೆಯೇನೂ ಇರಲಿಲ್ಲ. ಅದನ್ನು ಚುಚ್ಚಿದರೂ ಅಣ್ಣಯ್ಯ ಮಿಸುಕಾಡಲಿಲ್ಲ. ನಾನಂತೂ ಭಯದಿಂದ ಕಣ್ಣು ಮುಚ್ಚಿಕೊಂಡು ಬಿಟ್ಟೆ

ದೊಡ್ಡ–ದೊಡ್ಡ ಮಹಾನ್ ಸಂಕಲ್ಪಗಳೆಲ್ಲ ಆವೇಶದಲ್ಲಿಯೇ ಜನ್ಮ ತಾಳುತ್ತವೆ ಅಂತ ಕಾಣುತ್ತದೆ. ಒಂದು ಕ್ಷಣದ ಹಿಂದೆ ನಿರ್ಮಲಾ ಭಯದಿಂದ ತತ್ತರಿಸಿ ಹೋಗಿದ್ದಳು. ಆದರೆ ಈಗ ಅವಳ ಮುಖ ದೃಢ ಸಂಕಲ್ಪದಿಂದ ಪ್ರಜ್ವಲಿಸುತ್ತಿತ್ತು. ಆಕೆ

ತನ್ನ ದೇಹದಿಂದ ರಕ್ತ ಕೊಡಲು ನಿಶ್ಚಯಿಸಿದ್ದಳು. ತಾನು ಕೊಡುವ ರಕ್ತದಿಂದ ಮಂಸಾರಾಮನ ಜೀವ ಉಳಿದುಕೊಳ್ಳುವುದೇ ಆದರೆ ತುಂಬ ಸಂತೋಷದಿಂದ ತನ್ನ ಶರೀರದ ಕೊನೆಯ ಹನಿ ರಕ್ತವನ್ನೂ ಕೊಡಲು ಅವಳು ಸಂಕಲ್ಪ ಮಾಡಿಕೊಂಡಳು. ಈಗ ಯಾರು ಏನೇ ಅಂದುಕೊಂಡರೂ ಚಿಂತೆಯಿಲ್ಲ. ಸರಿ, ಜಿಯಾರಾಮನಿಗೆ ಹೇಳಿದಳು– 'ಈಗ ನೀನು ಸರ್ರನೆ ಓಡಿ ಹೋಗಿ ಒಂದು ಟಾಂಗಾ ತೆಗೆದುಕೊಂಡು ಬಾ.'

ಜಿಯಾರಾಮ– 'ಈ ಹೊತ್ತಿನಲ್ಲಿ ಅಲ್ಲಿ ತುಂಬಾ ಜನ ಇರಬಹುದು, ಕೊಂಚ ಕತ್ತಾಗಲಿ ಬಿಡಿ.'

ನಿರ್ಮಲಾ : 'ಇಲ್ಲ, ನೀನು ಈಗಲೇ ಹೋಗಿ ಟಾಂಗಾ ಕರ್ಕೊಂಡು ಬಾ ಹೋಗು.'

ಜಿಯಾರಾಮ : 'ಅಪ್ಪಾಜಿ ಬೈದರೆ ?'

ನಿರ್ಮಲಾ : 'ಬೈಲಿ ಬಿಡು. ನೀನು ಸರ್ರನೆ ಹೋಗು.'

ಜಿಯಾರಾಮ : 'ಅಮ್ಮಾನೇ ಹೇಳಿ ಟಾಂಗಾ ತರಿಸಿಕೊಂಡರು ಅಂತ ನಾನು ಹೇಳ್ತಿನಿ.'

ನಿರ್ಮಲಾ : 'ಆಯಿತು.'

ಜಿಯಾರಾಮ ಟಾಂಗಾ ತರಲು ಹೋದ. ಟಾಂಗಾ ಬರುವಷ್ಟರಲ್ಲಿ ನಿರ್ಮಲಾ ತಲೆ ಬಾಚಿಕೊಂಡಳು. ಸೀರೆ ಬದಲಾಯಿಸಿಕೊಂಡಳು. ಒಡವೆಗಳನ್ನು ತೊಟ್ಟುಕೊಂಡಳು. ಎಲೆ–ಅಡಿಕೆ ಹಾಕಿಕೊಂಡಳು. ನಂತರ ಬಾಗಿಲ ಬಳಿ ಬಂದು ಟಾಂಗಾದ ದಾರಿಯನ್ನೇ ನೋಡಲಾರಂಭಿಸಿದಳು.

ರುಕ್ಮಿಣಿ ತನ್ನ ರೂಮಿನಲ್ಲಿ ಕುಳಿತಿದ್ದಳು. ನಿರ್ಮಲಾ ಇಷ್ಟೆಲ್ಲ ತಯಾರಿ ಮಾಡಿಕೊಂಡಿದ್ದನ್ನು ನೋಡಿ– 'ಎಲ್ಲಿಗೆ ಹೊರಟೆಯಮ್ಮಾ ?' ಅಂದಳು.

ನಿರ್ಮಲಾ : 'ಕೊಂಚ ಆಸ್ಪತ್ರೆಗೆ ಹೋಗಿ ಬರ್ತೇನೆ.'

ರುಕ್ಮಿಣಿ : 'ಅಲ್ಲಿಗೆ ಹೋಗಿ ಏನ್ಮಾಡ್ತೀಯಾ ?'

ನಿರ್ಮಲಾ : 'ಏನೂ ಇಲ್ಲ. ಏನ್ ಮಾಡುವುದಿದೆ ? ಏನು ಮಾಡುವುದಿದ್ದರೂ ಆ ದೇವರು ಮಾಡಬೇಕು. ಆದರೆ ಅವನನ್ನು ನೋಡಬೇಕೂಂತ ಮನಸ್ಸಾಗು ತ್ತಿದೆ.'

ರುಕ್ಮಿಣಿ : 'ಅಲ್ಲಿಗೆ ಹೋಗ ಬೇಡ ನೀನು.'

ನಿರ್ಮಲಾ ವಿನಯದಿಂದ ಕೇಳಿಕೊಂಡಳು. 'ಈಗ ಬಂದು ಬಿಡ್ತೇನೆ ಅಕ್ಕಾ. ಈಗ ಆತನ ಸ್ಥಿತಿ ಚೆನ್ನಾಗಿಲ್ಲ ಅಂತ ಜಿಯಾರಾಮ ಹೇಳ್ತಿದ್ದಾನೆ. ಇಲ್ಲಿರುವುದಕ್ಕೆ ಮನಸ್ಸಾಗುತ್ತಿಲ್ಲ. ನೀವೂ ಬನ್ನಿ ಅಕ್ಕ.'

ರುಕ್ಮಿಣಿ : 'ನಾನು ನೋಡಿಕೊಂಡು ಬಂದಿದ್ದೀನಿ. ಈಗ ಯಾರಾದರೂ ರಕ್ತ

ಕೊಟ್ಟರೆ ಮಾತ್ರ ಅವನು ಬದುಕಬಹುದೆಂಬ ಆಸೆಯಿದೆ. ಈಗ ಯಾರು ಕೊಡ್ತಾರೆ ರಕ್ತ ? ಯಾಕಾಗಿ ಕೊಡ್ತಾರೆ ? ರಕ್ತ ಕೊಟ್ಟರೂ ಕೊಟ್ಟವನ ಜೀವಕ್ಕೆ ಅಪಾಯ ವಿದೆಯಲ್ಲ ?'

ನಿರ್ಮಲಾ : 'ಅದಕ್ಕಾಗಿಯೇ ಹೋಗುತ್ತಿದ್ದೀನಿ. ನನ್ನ ರಕ್ತದಿಂದ ಆತನ ಜೀವ ಉಳಿಯುವುದಿಲ್ಲವೇನು ?

ರುಕ್ಮಿಣಿ : 'ಯಾಕೆ ಉಳಿಯುವುದಿಲ್ಲ ? ಯುವ ಶರೀರದ ರಕ್ತ ತಾನೇ ಬೇಕಾಗಿರುವುದು ?'

ಟಾಂಗಾ ಬಂತು. ನಿರ್ಮಲಾ ಮತ್ತು ಜಿಯಾರಾಮ ಇಬ್ಬರೂ ಹೋಗಿ ಟಾಂಗಾದಲ್ಲಿ ಕುಳಿತರು. ಟಾಂಗಾ ಹೊರಟಿತು.

ರುಕ್ಮಿಣಿ ಬಾಗಿಲಲ್ಲಿಯೇ ನಿಂತು ಬಹಳ ಹೊತ್ತಿನವರೆಗೂ ಅಳುತ್ತಿದ್ದಳು. ಅವಳ ಕೈಲಿ ಆಗುವಂತಿದ್ದರೆ ನಿರ್ಮಲಾಳನ್ನು ತಡೆದು ನಿಲ್ಲಿಸುತ್ತಿದ್ದಳು. ಕರುಣೆ ಮತ್ತು ಸಹಾನುಭೂತಿಯ ಆವೇಶ ಏನೇನಲ್ಲ ಮಾಡಿಸುತ್ತದೆ ಎಂಬುದನ್ನು ಅವಳು ನೋಡುತ್ತಿದ್ದಳು. ಓಹ್ ! ಇದೆಲ್ಲ ದೌರ್ಭಾಗ್ಯದ ಪ್ರೇರಣೆಯಲ್ಲದೆ ಮತ್ತೇನು ? ಸರ್ವನಾಶ ಮಾಡಿಕೊಳ್ಳುವ ಮಾರ್ಗ ಇದು !

ನಿರ್ಮಲಾ ಆಸ್ಪತ್ರೆಗೆ ಬಂದಳು. ಅಷ್ಟು ಹೊತ್ತಿಗೆ ಸಂಜೆಯ ದೀಪಗಳು ಹೊತ್ತಿಕೊಂಡಿದ್ದವು. ಡಾಕ್ಟರುಗಳು ತಮ್ಮ ಸಲಹೆ–ಸೂಚನೆಗಳನ್ನು ಕೊಟ್ಟು ಹೊರಟು ಹೋಗಿದ್ದರು. ಮಂಸಾರಾಮನ ಜ್ವರ ಬಹಳಷ್ಟು ಕಡಿಮೆಯಾಗಿತ್ತು. ನೆಟ್ಟ ಕಣ್ಣುಗಳಿಂದ ಅವನು ಬಾಗಿಲ ಕಡೆಯೇ ನೋಡುತ್ತಿದ್ದ. ಅವನ ದೃಷ್ಟಿ ಉನ್ಮುಕ್ತ ಆಕಾಶದತ್ತ ನೆಟ್ಟಿತ್ತು – ಆಕಾಶದ ದೇವತೆಗಳಿಗಾಗಿ ಕಾಯುತ್ತಿರುವಂತೆ. ತಾನು ಎಲ್ಲಿದ್ದೇನೆ ಎಂಬುದರ ಅರಿವೂ ಅವನಿಗಿರಲಿಲ್ಲ.

ಇದ್ದಕ್ಕಿದ್ದಂತೆಯೇ ಬಂದ ನಿರ್ಮಲಾಳನ್ನು ನೋಡಿ ಅವನು ಬೆಚ್ಚಿ ಎದ್ದು ಕುಳಿತ. ಅವನ ಸಮಾಧಿ ಭಂಗವಾಗಿತ್ತು. ಇದುವರೆಗೂ ಇರದಿದ್ದ ಅವನ ಪ್ರಜ್ಞೆ ಈಗ ಒಮ್ಮೆಗೇ ಮರಳಿ ಬಂದಿತ್ತು. ಮರೆತು ಹೋಗಿರುವ ಎಲ್ಲವೂ ಮರಳಿ ನೆನಪಾದಂತೆ ತಾನಿರುವ ಸ್ಥಿತಿಯ ಅರಿವಾಗಿತ್ತು ಅವನಿಗೆ. ಅವನು ನೆಟ್ಟ ಕಣ್ಣುಗಳಿಂದ ನಿರ್ಮಲಾಳನ್ನು ನೋಡಿ, ಮುಖ ತಿರುಗಿಸಿಕೊಂಡು ಬಿಟ್ಟ.

ವಕೀಲರು ಒಮ್ಮೆಗೇ ಗಡುಸಾಗಿ – 'ನೀನು ಇಲ್ಲಿಗೆ ಏನ್ ಮಾಡಲಿಕ್ಕೆ ಬಂದೆ ?' ಅಂತ ಪ್ರಶ್ನಿಸಿದರು.

ನಿರ್ಮಲಾ ಮೂಕಳಂತೆ ನಿಂತಳು. ತಾನು ಏಕಾಗಿ ಬಂದೆ ಎಂಬುದನ್ನು ಹೇಳಿ ಬಿಡಲೇ ? ಅವರ ಈ ನೇರ ಪ್ರಶ್ನೆಗೆ ಅವಳಿಂದ ಯಾವುದಾದರೂ ಉತ್ತರ ಕೊಡಲು ಸಾಧ್ಯವಾಯಿತೆ ? ಅವಳು ಯಾಕಾಗಿ ಬಂದಳು. ಇಂತಹ ಜಟಿಲ ಪ್ರಶ್ನೆ ಯಾರ ಮುಂದಾದರೂ ಬಂದಿರಬಹುದೆ ? ಮನೆಯ ಮಗ ಖಾಯಿಲೆಯಿಂದಿದ್ದಾನೆ.

ಇವನನ್ನು ನೋಡಲು ಬಂದಿದ್ದಾಳೆ. ಇದು ಕೇಳದೆಯೇ ಅರ್ಥವಾಗುವುದಿಲ್ಲವೇನು ? ಅಂದ ಮೇಲೆ ಈ ಪ್ರಶ್ನೆ ಏಕೆ ?

ಆಕೆ ಪ್ರಜ್ಞಾಶೂನ್ಯಳಾದವಳಂತೆ, ಚೈತನ್ಯವನ್ನೇ ಕಳೆದುಕೊಂಡವಳಂತೆ ನಿಂತಿದ್ದಳು. ಆಕೆ ತನ್ನ ಇಬ್ಬರು ಮಕ್ಕಳ ಬಾಯಿಂದಲೂ ವಕೀಲರ ಶೋಕ ಮತ್ತು ಸಂತಾಪದ ಮಾತುಗಳನ್ನು ಕೇಳಿ, ಈಗ ಅವರ ಮನಸ್ಸು ಸ್ವಚ್ಛವಾಗಿದೆ ಎಂದು ಅಂದುಕೊಂಡಿದ್ದಳು. ತಾನು ಹಾಗೆ ಅಂದುಕೊಂಡಿದ್ದು ಕೇವಲ ತನ್ನ ಭ್ರಮೆ ಎಂದೆನ್ನಿಸಿತು. ಹೌದು, ಅದು ಮಹಾಭ್ರಮೆ. ಕಣ್ಣೀರ ವೃಷ್ಟಿಯೂ ಅವರ ಅನುಮಾನದ ಅಗ್ನಿಯನ್ನು ಶಾಂತಗೊಳಿಸಿಲ್ಲ ಎಂಬುದು ಗೊತ್ತಾಗಿದ್ದಿದ್ದರೆ ಅವಳು ಇಲ್ಲಿಗೆ ಖಂಡಿತ ಬರುತ್ತಿರಲಿಲ್ಲ. ನೋವನ್ನು ಉಂಡು ಉಂಡು ಸಾಯುತ್ತಿದ್ದಳು. ಆದರೆ ಮನೆಯಿಂದ ಹೊರಗೆ ಕಾಲಿಡುತ್ತಿರಲಿಲ್ಲ.

ವಕೀಲರು ಪುನಃ ಅದೇ ಪ್ರಶ್ನೆಯನ್ನು ಕೇಳಿದರು– 'ನೀನು ಇಲ್ಲಿಗೆ ಏನ್ ಮಾಡಲಿಕ್ಕೆ ಬಂದೆ ?'

ನಿರ್ಮಲಾ ಅಷ್ಟೇ ದೃಢವಾಗಿ ಉತ್ತರಿಸಿದಳು– 'ನೀವು ಏನ್ ಮಾಡಲಿಕ್ಕೆ ಬಂದಿದ್ದೀರಿ ?'

ವಕೀಲರ ಮೂಗಿನ ಹೊಳ್ಳೆಗಳು ಅದುರಲಾರಂಭಿಸಿದುವು. ಅವರು ಆವೇಶ ಬಂದವರಂತೆ ಮಂಚದ ಮೇಲೆ ಕುಳಿತಿದ್ದವರು ಎದ್ದದ್ದೇ ನಿರ್ಮಲಾಳ ಕೈ ಹಿಡಿದುಕೊಂಡು ಹೇಳಿದರು: 'ನೀನು ಇಲ್ಲಿಗೆ ಬರುವ ಆವಶ್ಯಕತೆ ಇಲ್ಲ. ನಾನು ಕರೆದಾಗ ಬರಬೇಕು, ಗೊತ್ತಾಯಿತೇನು ?'

ಅರೆ, ಇದೇನು ಅನರ್ಥವಾಯಿತು ! ಮಂಸಾರಾಮನಿಂದ ಇದುವರೆಗೂ ಮಂಚ ಬಿಟ್ಟು ಅಲುಗಾಡುವುದಕ್ಕೂ ಆಗುತ್ತಿರಲಿಲ್ಲ. ಆದರೆ ಆತ ಈಗ ಒಮ್ಮೆಗೆ ಎದ್ದವನೇ ನಿರ್ಮಲಾಳ ಕಾಲುಗಳ ಮೇಲೆ ಬಿದ್ದು ಅಳುತ್ತ ಹೇಳಿದ – 'ಅಮ್ಮಾ, ಈ ಬಡಪಾಯಿಯಿಂದಾಗಿ ತಮಗೆ ವೃಥಾ ತುಂಬಾ ತೊಂದರೆಯಾಯಿತು. ನಾನು ತಮ್ಮ ಪ್ರೀತಿಯನ್ನು ಎಂದಿಗೂ ಮರೆಯುವುದಿಲ್ಲ. ತಮ್ಮ ಗರ್ಭದಲ್ಲೇ ನನ್ನ ಪುನರ್ಜನ್ಮವಾಗಲಿ, ಆ ಮೂಲಕ ತಮ್ಮ ಋಣವನ್ನು ನಾನು ತೀರಿಸುವಂತಾಗಲಿ ಎಂದು ಆ ಭಗವಂತನನ್ನು ನಾನು ಪ್ರಾರ್ಥಿಸುತ್ತಿದ್ದೇನೆ. ನಾನು ತಮ್ಮನ್ನು ಎಂದೂ ಮಲತಾಯಿ ಎಂದು ಭಾವಿಸಲೇ ಇಲ್ಲ, ನನ್ನ ಸ್ವಂತ ತಾಯಿ ಎಂದೇ ಭಾವಿಸಿದೆ. ತಮ್ಮ ವಯಸ್ಸು ನನ್ನ ವಯಸ್ಸಿಗಿಂತಲೂ ಹೆಚ್ಚು ಇಲ್ಲದಿರಬಹುದು. ಆದರೆ ತಾವು ನನ್ನ ತಾಯಿಯ ಸ್ಥಾನದಲ್ಲಿದ್ದಿರಿ. ಹೀಗಾಗಿ ನಾನು ಯಾವತ್ತೂ ತಮ್ಮನ್ನು ಅದೇ ದೃಷ್ಟಿಯಿಂದ ನೋಡಿದೆ. ನನ್ನಿಂದ ಹೆಚ್ಚು ಮಾತನಾಡಲಿಕ್ಕಾಗುತ್ತಿಲ್ಲ ಅಮ್ಮಾಜಿ, ನನ್ನನ್ನು ಕ್ಷಮಿಸಿ ಬಿಡಿ, ತಮ್ಮೊಂದಿಗೆ ಇದೇ ನನ್ನ ಕೊನೆಯ ಭೇಟಿ.'

ನಿರ್ಮಲಾ ತನ್ನ ಕಣ್ಣೀರ ಧಾರೆಯನ್ನು ತಡೆದುಕೊಳ್ಳುತ್ತಾ ಹೇಳಿದಳು– 'ಇಂಥ

ಮಾತುಗಳನ್ನು ಯಾಕಾದರೂ ಆಡ್ತೀಯಾ ಮಗು ? ಎರಡು–ಮೂರು ದಿನಗಳಲ್ಲಿ ಹುಶಾರಾಗ್ತೀಯ, ಸುಮ್ಮನಿರು.'

ಮಂಸಾರಾಮ ಕ್ಷೀಣ ಸ್ವರದಲ್ಲಿ ಹೇಳಿದ– 'ಇನ್ನು ನನಗೆ ಬದುಕಿ ಉಳಿಯುವ ಇಚ್ಛೆಯಿಲ್ಲ, ಈಗ ನನ್ನಲ್ಲಿ ಮಾತನಾಡುವ ಶಕ್ತಿಯೂ ಇಲ್ಲ.'

ಇಷ್ಟು ಹೇಳಿ ಮಂಸಾರಾಮ ನಿಶ್ಶಕ್ತನಾಗಿ ನೆಲದ ಮೇಲೆ ಬಿದ್ದ. ನಿರ್ಮಲಾ ಗಂಡನ ಕಡೆ ನಿರ್ಭಯವಾದ ಕಣ್ಣುಗಳಿಂದ ನೋಡುತ್ತ– 'ಡಾಕ್ಟರುಗಳು ಏನು ಹೇಳಿದರು ?' ಎಂದು ಕೇಳಿದಳು.

ವಕೀಲರು : 'ಮೈಯಲ್ಲಿ ಒಂದು ತೊಟ್ಟು ರಕ್ತಾನೂ ಇಲ್ಲ, ಹೊಸ ರಕ್ತ ಕೊಡಬೇಕು ಅಂದರು.'

ನಿರ್ಮಲಾ : 'ಹೊಸ ರಕ್ತವನ್ನು ಕೊಟ್ಟರೆ ಇವನ ಪ್ರಾಣ ಉಳಿಯುತ್ತೇನು ?'

ವಕೀಲರು ನಿರ್ಮಲಾಳನ್ನು ನೆಟ್ಟ ಕಣ್ಣುಗಳಿಂದ ನೋಡುತ್ತ ಹೇಳಿದರು– 'ನಾನು ದೇವರಲ್ಲ, ಈ ಡಾಕ್ಟರುಗಳನ್ನೂ ನಾನು ದೇವರು ಅಂತ ಅಂದುಕೊಂಡಿಲ್ಲ.'

ನಿರ್ಮಲಾ : 'ಹೊಸ ರಕ್ತ ಸಿಗದೇ ಇರುವಂಥ ಅಲಭ್ಯವಾದ ವಸ್ತುವೇನೂ ಅಲ್ಲವಲ್ಲ ?'

ವಕೀಲರು : 'ಆಕಾಶದ ನಕ್ಷತ್ರಗಳೂ ಅಲಭ್ಯವೇನೂ ಅಲ್ಲವಲ್ಲ. ಹತ್ತಿರದಲ್ಲೇ ಇವೆ.'

ನಿರ್ಮಲಾ : 'ನಾನು ನನ್ನ ರಕ್ತ ಕೊಡೋದಕ್ಕೆ ತಯಾರಿದ್ದೇನೆ. ಡಾಕ್ಟರನ್ನು ಕರೆಯಿರಿ.'

ವಕೀಲರು ಆಶ್ಚರ್ಯದಿಂದ ಹೇಳಿದರು– 'ನೀನು ಕೊಡ್ತೀಯಾ ?'

ನಿರ್ಮಲಾ : 'ಹೌದು ! ನನ್ನ ರಕ್ತದಿಂದ ಕೆಲಸವಾಗುವುದಿಲ್ಲವೇನು ?'

ವಕೀಲರು : 'ನೀನು ನಿನ್ನ ರಕ್ತವನ್ನು ಕೊಡ್ತೀಯಾ ? ಬೇಡ, ನಿನ್ನ ರಕ್ತದ ಆವಶ್ಯಕತೆಯಿಲ್ಲ. ನಿನ್ನ ಪ್ರಾಣಕ್ಕೆ ಅಪಾಯ ಬಂದೀತು.'

ನಿರ್ಮಲಾ : 'ನನ್ನ ಪ್ರಾಣ ಇನ್ನು ಯಾವತ್ತು ಉಪಯೋಗಕ್ಕೆ ಬರುತ್ತೆ ಹೇಳಿ.'

ವಕೀಲರ ಕಣ್ಣುಗಳು ತುಂಬಿ ಬಂದವು. ಹೇಳಿದರು – 'ಬೇಡ ನಿರ್ಮಲಾ, ನನ್ನ ದೃಷ್ಟಿಯಲ್ಲಿ ನಿನ್ನ ಪ್ರಾಣದ ಬೆಲೆ ಈಗ ತುಂಬಾ ಅಮೂಲ್ಯವಾದುದಾಗಿದೆ. ಇವತ್ತಿನವರೆಗೆ ನಿನ್ನ ಈ ಶರೀರ ನನ್ನ ಭೋಗದ ವಸ್ತುವಾಗಿತ್ತು, ಇವತ್ತಿನಿಂದ ನನ್ನ ಭಕ್ತಿಯ ವಸ್ತುವಾಗಿದೆ. ನಾನು ನಿನಗೆ ಅನ್ಯಾಯ ಮಾಡಿದ್ದೇನೆ, ಕ್ಷಮಿಸಿ ಬಿಡು.'

# ಹದಿಮೂರು

ಏನಾಗಬೇಕಿತ್ತೋ ಅದು ಆಗಿ ಹೋಯಿತು, ಯಾರದ್ದು ಏನೂ ನಡೆಯಲಿಲ್ಲ. ಡಾಕ್ಟರು ನಿರ್ಮಲಾಳ ದೇಹದಿಂದ ರಕ್ತ ತೆಗೆಯಲು ಪ್ರಯತ್ನ ಮಾಡುತ್ತಿದ್ದರು. ಅತ್ತ ಮಂಸಾರಾಮ ತನ್ನ ಉಜ್ವಲ ಚಾರಿತ್ರ್ಯದ ದರ್ಶನ ಮಾಡಿಸಿ ಈ ಇಹಲೋಕದಿಂದ ಬೀಳ್ಕೊಂಡು ಬಿಟ್ಟ. ನಿರ್ಮಲಾ ಬರಲಿ ಎಂದು ಅವನು ಅವಳ ದಾರಿಯನ್ನು ಕಾಯುತ್ತ ತನ್ನ ಪ್ರಾಣವನ್ನು ಹಿಡಿದಿಟ್ಟುಕೊಂಡಿದ್ದನೆಂದು ಕಾಣುತ್ತದೆ! ಆಕೆಯನ್ನು ನಿಷ್ಕಳಂಕಳೆಂದು ಸಾಬೀತುಗೊಳಿಸದೆ ಆತ ಹೇಗೆ ತಾನೇ ಪ್ರಾಣಬಿಟ್ಟಾನು ? ಈಗ ಅವನ ಉದ್ದೇಶ ಪೂರ್ಣಗೊಂಡಿತ್ತು. ನಿರ್ಮಲಾ ನಿರ್ದೋಷಿ ಎಂಬ ನಂಬಿಕೆ ವಕೀಲರಿಗೆ ಬಂದಿತ್ತು. ಆದರೆ ಇದು ಬಂದದ್ದು ಯಾವಾಗ ? ಕೈಲಿದ್ದದ್ದೆಲ್ಲವನ್ನೂ ಕಳೆದುಕೊಂಡ ಮೇಲೆ! ಪ್ರಾಣ ಹೋದ ಮೇಲೆ!!

ಪುತ್ರ ಶೋಕದಿಂದಾಗಿ ವಕೀಲರಿಗೆ ಬದುಕೇ ಭಾರವಾದಂತೆ ಭಾಸವಾಗತೊಡಗಿತು. ಅವತ್ತೇ ಕೊನೆ, ಅವತ್ತಿನಿಂದಾಚೆಗೆ ಅವರ ಮುಖದಲ್ಲಿ ನಗು ಅರಳಲೇ ಇಲ್ಲ. ಬದುಕಿರುವುದೇ ವ್ಯರ್ಥ ಎಂದು ಅವರಿಗೆ ಅನ್ನಿಸತೊಡಗಿತು. ಕಛೇರಿಗೆ ಹೋಗುತ್ತಿದ್ದರು. ಮೊಕದ್ದಮೆಗಳನ್ನು ಗೆಲ್ಲುವುದಕ್ಕಲ್ಲ, ಹೃದಯವನ್ನು ಹಗುರ ಮಾಡಿಕೊಂಡು ಬರಲು. ಗಂಟೆ, ಎರಡು ಗಂಟೆಗಳಲ್ಲಿ ಬೇಸರದಿಂದಾಗಿ ಅಲ್ಲಿಂದಲೂ ಬಂದುಬಿಡುತ್ತಿದ್ದರು. ಊಟಕ್ಕೆ ಕುಳಿತರೆ ತುತ್ತುಗಳು ಗಂಟಲ ಕೆಳಗೆ ಇಳಿಯುತ್ತಿರಲಿಲ್ಲ. ನಿರ್ಮಲಾ ಒಳ್ಳೊಳ್ಳೆಯ ರುಚಿರುಚಿಯಾದ ತಿಂಡಿಗಳನ್ನೇನ್ನೋ ಮಾಡುತ್ತಿದ್ದಳು. ಆದರೆ ವಕೀಲರು ಎರಡು–ಮೂರು ತುತ್ತು ತಿಂದು ಎದ್ದು ಬಿಡುತ್ತಿದ್ದರು. ತುತ್ತು ಬಾಯಿಂದ ಹೊರಗೆ ಬಂದುಬಿಡುತ್ತದೆಯೇನೋ ಎಂದನ್ನಿಸುತ್ತಿತ್ತು. ಮಂಸಾರಾಮನ ರೂಮಿನತ್ತ ಹೋಗುತ್ತಿದ್ದಂತೆಯೇ ಅವರ ಹೃದಯ ತುಂಬಿ ಬರುತ್ತಿತ್ತು. ಅವರ ಆಸೆ–ಆಕಾಂಕ್ಷೆಗಳ ಜ್ಯೋತಿ ಉರಿಯುತ್ತಿದ್ದ ಸ್ಥಳದಲ್ಲಿ ಇವತ್ತು ಅಂಧಕಾರ ಕವಿದಿತ್ತು. ಅವರ ಇನ್ನೂ ಇಬ್ಬರು ಮಕ್ಕಳು ಬದುಕಿದ್ದಾರೆ. ಆದರೇನು ? ಹಾಲು ಕೊಡುತ್ತಿದ್ದ ಹಸುವೇ ಸತ್ತು ಹೋದ ಮೇಲೆ ಕರುಗಳ ಮೇಲೆ ಹೇಗೆ ಭರವಸೆ ಇಡುವುದು ? ಹಸಿರು ಹೂವುಗಳಿಂದ ನಳನಳಿಸುತ್ತಿದ್ದ ವೃಕ್ಷವೇ ಬಿದ್ದು ಹೋದಮೇಲೆ ಇನ್ನು ಸಣ್ಣ ಪುಟ್ಟ ಗಿಡ–ಬಳ್ಳಿಗಳ ಪಾಡು ಏನೋ, ಎಂತೋ! ಹಾಗೆ ನೋಡಿದರೆ ಯುವಕರು, ಮುದುಕರು, ಹೀಗೆ ಎಲ್ಲರೂ ಒಂದಲ್ಲ ಒಂದು ದಿನ ಸಾಯಲೇಬೇಕು, ನಿಜ, ಆದರೆ ತಾನು ಈ ಹುಡುಗನ ಬಲಿ ತೆಗೆದುಕೊಂಡೆ ಎಂಬ ದುಃಖ ಅವರನ್ನು ಕಾಡುತ್ತಿತ್ತು. ಈ ಮಾತು ನೆನಪಿಗೆ ಬರುತ್ತಿದ್ದಂತೆಯೇ, ಹೃದಯ ಒಮ್ಮೆಗೇ ಕಿತ್ತು ಹೊರಗೆ ಬಂದಂಥ, ಎದೆ ಇದ್ದಕ್ಕಿದ್ದಂತೆಯೇ ಒಡೆದು ಹೋದಂಥ ಅನುಭವವಾಗುತ್ತಿತ್ತು ಅವರಿಗೆ.

ತನ್ನ ಗಂಡನ ಬಗೆಗೆ ನಿರ್ಮಲಾಳಿಗೆ ನಿಜವಾದ ಸಹಾನುಭೂತಿಯಿತ್ತು. ತನ್ನ

ಕೈಲಾದ ಮಟ್ಟಿಗೂ ಅವರನ್ನು ಸಂತೋಷವಾಗಿಡಲು ನಿರ್ಮಲಾ ಪ್ರಯತ್ನ ಪಡುತ್ತಿದ್ದಳಷ್ಟೇ ಅಲ್ಲದೆ ಮರೆತೂ ಹಿಂದಿನ ಪ್ರಸಂಗಗಳನ್ನು ನೆನಪು ಮಾಡುತ್ತಿರಲಿಲ್ಲ. ಅವಳ ಜೊತೆ ಮಂಸಾರಾಮನನ್ನು ಕುರಿತು ಮಾತನಾಡಲು ವಕೀಲರಿಗೆ ನಾಚಿಕೆಯಾಗುತ್ತಿತ್ತು. ನಿರ್ಮಲಾಳ ಮುಂದೆ ತನ್ನ ಹೃದಯಲ್ಲಿರುವುದನ್ನೆಲ್ಲ ತೆಗೆದಿಟ್ಟುಬಿಡಲೇ ಎಂಬ ಭಾವನೆ ಒಮ್ಮೊಮ್ಮೆ ಅವರಿಗೆ ಬರುತ್ತಿತ್ತು. ಆದರೆ ಈ ನಾಚಿಕೆ ಅವರ ನಾಲಗೆಯನ್ನು ಕಟ್ಟಿ ಹಾಕುತ್ತಿತ್ತು. ಈ ರೀತಿಯಾಗಿ, ತಮ್ಮ ದುಃಖವನ್ನು ಬೇರೆಯವರಿಗೆ ಹೇಳಿಕೊಳ್ಳುವುದರ ಮೂಲಕ ತಮ್ಮ ಹೃದಯವನ್ನು ಹಗುರ ಮಾಡಿಕೊಳ್ಳುವುದರಲ್ಲಿ ಸಿಗಬೇಕಾದ ತೃಪ್ತಿಯಿಂದಲೂ ಅವರು ವಂಚಿತರಾಗಿದ್ದರು. ನೋವು ಒಳಗೊಳಗೆ ಅವರನ್ನು ತಿನ್ನುತ್ತಾ ಹೋಗುತ್ತಿತ್ತು, ದಿನೇ ದಿನೇ ಅವರ ದೇಹ ಕರಗುತ್ತ ಹೋಗುತ್ತಿತ್ತು.

ಕೆಲವು ದಿನಗಳಿಂದೀಚೆಗೆ ಮಂಸಾರಾಮನ ಚಿಕಿತ್ಸೆ ಮಾಡುತ್ತಿದ್ದ ಡಾಕ್ಟರೊಂದಿಗೆ ವಕೀಲರ ಗೆಳೆತನ ಬೆಳೆದಿತ್ತು. ಅವರು ಆಗೊಮ್ಮೆ–ಈಗೊಮ್ಮೆ ಬಂದು ವಕೀಲರಿಗೆ ಸಮಾಧಾನ ಹೇಳುತ್ತಿದ್ದರು. ತಮ್ಮ ಜೊತೆಯಲ್ಲಿ ಸಂಜೆ ಹೊತ್ತು ವಾಯು ವಿಹಾರಕ್ಕೂ ಕರೆದುಕೊಂಡು ಹೋಗುತ್ತಿದ್ದರು. ಅವರ ಹೆಂಡತಿಯೂ ಎರಡು–ಮೂರು ಸಾರಿ ನಿರ್ಮಲಾಳನ್ನು ನೋಡಲು ಬಂದಿದ್ದರು. ನಿರ್ಮಲಾಳೂ ಎಷ್ಟೋ ಸಾರಿ ಅವರ ಮನೆಗೆ ಹೋಗಿದ್ದೂ ಉಂಟು. ಹೀಗೆ ಅವರ ಮನೆಗೆ ಹೋಗಿ ವಾಪಸ್ಸು ಬಂದ ನಂತರ ಎಷ್ಟೋ ದಿನಗಳವರೆಗೆ ನಿರ್ಮಲಾ ಉದಾಸಳಾಗಿರುತ್ತಿದ್ದಳು. ಆ ದಂಪತಿಗಳ ಸುಖಮಯ ದಾಂಪತ್ಯವನ್ನು ಕಂಡು ತನ್ನ ಸ್ಥಿತಿಯ ಬಗೆಗೆ ಆಕೆಗೆ ದುಃಖವಾಗದೇ ಇರುತ್ತಿರಲಿಲ್ಲ. ಡಾಕ್ಟರಿಗೆ ಒಟ್ಟು ಇನ್ನೂರು ರೂ. ಸಂಬಳ ಬರುತ್ತಿತ್ತು. ಆದರೆ ಅಷ್ಟರಲ್ಲಿಯೇ ಅವರಿಬ್ಬರೂ ಸುಖವಾಗಿ ಜೀವನ ಮಾಡುತ್ತಿದ್ದರು. ಮನೆಯಲ್ಲಿ ಒಬ್ಬಳು ಕೆಲಸದವಳಿದ್ದಳು, ಅಷ್ಟೆ ಉಳಿದ ಎಲ್ಲ ಮನೆಗೆಲಸಗಳನ್ನು ಆಕೆಯೇ ಮಾಡಿಕೊಳ್ಳುತ್ತಿದ್ದಳು. ಆಕೆಯ ಮೈಮೇಲೆ ಒಡವೆಗಳೂ ತುಂಬ ಕಡಿಮೆಯಿದ್ದುವು. ಆದರೆ ಅವರಿಬ್ಬರ ಮಧ್ಯೆ ಇದ್ದಂಥ ಪ್ರೇಮ ಹಣವನ್ನು ತೃಣಮಾಡಿಬಿಟ್ಟಿತ್ತು. ಗಂಡನನ್ನು ನೋಡಿ ಹೆಂಡತಿಯ ಮುಖ ಅರಳುತ್ತಿತ್ತು, ಹೆಂಡತಿಯ ಮುಖ ನೋಡಿ ಗಂಡ ಮುಗ್ಧನಾಗುತ್ತಿದ್ದ. ನಿರ್ಮಲಾಳ ಮನೆಯಲ್ಲಿ ಅವರ ಮನೆಗಿಂತಲೂ ಹೆಚ್ಚು ಸಂಪತ್ತಿತ್ತು. ಈಕೆಯ ಮೈ ಬಿರಿಯುವಷ್ಟು ಒಡವೆಗಳಿದ್ದವು. ಮನೆಯ ಯಾವ ಕೆಲಸವನ್ನೂ ತಾನು ಕೈಯಾರೆ ಮಾಡಬೇಕಾಗಿರಲಿಲ್ಲ. ಇಷ್ಟೆಲ್ಲಾ ಇದ್ದರೂ ಅವಳು ಹೆಚ್ಚು ದುಃಖಿಯಾಗಿದ್ದಳು. ಸುಧಾ ಸ್ಥಿತಿವಂತಳಲ್ಲದಿದ್ದರೂ ಸುಖಿಯಾಗಿದ್ದಳು. ನಿರ್ಮಲಾಳ ಬಳಿ ಇಲ್ಲದೇ ಇರುವಂಥ ಯಾವ ವಸ್ತುವೂ ಸುಧಾಳ ಬಳಿ ಇರಲಿಲ್ಲ, ನಿರ್ಮಲಾಳ ಶ್ರೀಮಂತಿಕೆಯ ಮುಂದೆ ಸುಧಾಳ ಶ್ರೀಮಂತಿಕೆ ಏನೂ ಆಗಿರಲಿಲ್ಲ. ಹೀಗಾಗಿ ನಿರ್ಮಲಾ ಸುಧಾಳ ಮನೆಗೆ ಹೆಚ್ಚು ಒಡವೆಗಳನ್ನು ಹಾಕಿಕೊಂಡು ಹೋಗಲು ಸಂಕೋಚವನ್ನನುಭವಿಸುತ್ತಿದ್ದಳು.

ಒಂದು ದಿನ ನಿರ್ಮಲಾ ಡಾಕ್ಟರ ಮನೆಗೆ ಹೋದಳು. ನಿರ್ಮಲಾಳ ಮುಖವನ್ನು

ನೋಡಿ ಸುಧಾ ಕೇಳಿದಳು– 'ತಂಗಿ, ಇವತ್ತು ಏಕೆ ಸಪ್ಪಗಿದ್ದೀಯಲ್ಲ ? ವಕೀಲ ಸಾಹೇಬರ ಆರೋಗ್ಯ ಸರಿಯಿದೆ ತಾನೆ ?'

ನಿರ್ಮಲಾ : 'ಏನ್ ಹೇಳ್ಲಿ ಸುಧಾ, ದಿನ–ದಿನಕ್ಕೂ ಅವರ ಆರೋಗ್ಯ ಎಷ್ಟು ಕೆಡುತ್ತಿದೆಯೆಂದರೆ ಏನೂ ಹೇಳ್ಲಿಕ್ಕೆ ಬರುತ್ತಿಲ್ಲ. ದೇವರ ಇಷ್ಟ ಏನಿದೆಯೋ ಏನೋ !'

ಸುಧಾ : 'ಹವೆ ಬದಲಾವಣೆಗಾಗಿ ಯಾವುದಾದರೂ ಗಿರಿಧಾಮಕ್ಕೆ ಅವರು ಹೋದರೆ ಒಳ್ಳೆಯದು ಅಂತ ಡಾಕ್ಟರು ಹೇಳುತ್ತಿದ್ದರು. ಇಲ್ಲದಿದ್ದರೆ ಅವರಿಗೆ ಯಾವುದಾದರೂ ಭಯಂಕರವಾದ ಖಾಯಿಲೆ ಬರುವ ಸಾಧ್ಯತೆಯಿದೆಯಂತೆ. ಡಾಕ್ಟರು ಈ ಮಾತನ್ನು ಎಷ್ಟೋ ಸಾರಿ ವಕೀಲ ಸಾಹೇಬರಿಗೂ ಹೇಳಿದ್ದಾರಂತೆ. ಆದರೆ ಅವರು 'ನನಗೇನೂ ಆಗಿಲ್ಲ. ನಾನು ಆರಾಮವಾಗಿದ್ದೀನಿ', ಅಂತ ಹೇಳ್ತಾರಂತೆ. ಇವತ್ತು ನೀನಾದರೂ ಹೇಳಿ ನೋಡು.'

ನಿರ್ಮಲಾ : 'ಡಾಕ್ಟರು ಮಾತನ್ನೇ ಕೇಳಲಿಲ್ಲಾಂದ ಮೇಲೆ ಇನ್ನು ನನ್ನ ಮಾತುಗಳನ್ನು ಕೇಳ್ತಾರೇನು ?'

ಇಷ್ಟು ಹೇಳುತ್ತಿರುವಾಗ ನಿರ್ಮಲಾಳ ಕಣ್ಣುಗಳು ತುಂಬಿ ಬಂದವು. ಇತ್ತೀಚೆಗೆ ಎಷ್ಟೋ ತಿಂಗಳುಗಳಿಂದ ಅವಳ ಮನಸ್ಸಿನಲ್ಲಿ ಕೊರೆಯುತ್ತಿದ್ದ ಅನುಮಾನ ಈಗ ಬಾಯಿಗೆ ಬಂದುಬಿಟ್ಟಿತು. ಇವತ್ತಿನವರೆಗೆ ಆಕೆ ಆ ಅನುಮಾನವನ್ನು ಬಚ್ಚಿಟ್ಟಿದ್ದಳು. ಈಗ ಬಚ್ಚಿಡಲು ಅವಳಿಂದಾಗಲಿಲ್ಲ. ಹೇಳಿದಳು– 'ತಂಗಿ ಅವರ ಆರೋಗ್ಯದ ಲಕ್ಷಣಗಳು ನನಗಂತೂ ಚೆನ್ನಾಗಿ ಕಾಣುತ್ತಿಲ್ಲ. ಭಗವಂತ ಏನು ಮಾಡ್ತಾನೋ ನೋಡೋಣ.'

ಸುಧಾ : 'ಹವೆಯ ಪರಿವರ್ತನೆಗಾಗಿ ಯಾವುದಾದರೂ ಗಿರಿಧಾಮಕ್ಕೆ ಹೋಗಿ ಬರುವಂತೆ ಇವತ್ತು ಒತ್ತಾಯ ಮಾಡಿ ಹೇಳು. ಮೂರು–ನಾಲ್ಕು ತಿಂಗಳು ಹೊರಗಡೆ ಇದ್ದರೆ ಎಷ್ಟೋ ಮಾತುಗಳನ್ನು ಮರೆಯಲಿಕ್ಕೆ ಸಾಧ್ಯವಾಗುತ್ತೆ. ಮನೆಯನ್ನು ಬದಲಾಯಿಸುವುದರಿಂದಲೂ ಅವರ ದುಃಖ ಕಡಿಮೆಯಾಗುತ್ತೆ ಅಂತ ನನಗನ್ನಿಸುತ್ತೆ. ಆದರೆ ನೀನು ಈಗ ಎಲ್ಲಿಗೂ ಹೋಗುವಂತಿಲ್ಲ ಅಲ್ಲವೆ ? ಈಗ ಎಷ್ಟು ತಿಂಗಳು ?'

ನಿರ್ಮಲಾ : 'ಎಂಟನೆಯ ತಿಂಗಳು ಕಳೆಯುತ್ತಿದೆ. ಈ ಚಿಂತೆಯೂ ನನ್ನನ್ನು ಹಿಂಡಿ ಹಿಪ್ಪೇಕಾಯಿ ಮಾಡುತ್ತಿದೆ. ಇದು ಬೇಕು ಅಂತ ನಾನು ಯಾವ ದೇವರಿಗೂ ಹರಕೆ ಹೊತ್ತಿರಲಿಲ್ಲ. ನನ್ನ ತಲೆಗೆ ಇದೊಂದು ಕಷ್ಟ ಬಂದು ಕೂತಿದೆ. ನಾನು ತುಂಬಾ ಅಭಾಗಿನಿ ತಂಗಿ. ಮದುವೆಗೆ ಒಂದು ತಿಂಗಳ ಮುಂಚೆ ನನ್ನ ತಂದೆ ತೀರಿ ಹೋದರು. ಅವರು ತೀರಿಕೊಳ್ಳುತ್ತಿದ್ದಂತೆಯೇ ನನ್ನ ತಲೆಯ ಮೇಲೆ ಶನಿ ಬಂದು ವಕ್ಕರಿಸಿಕೊಂಡ. ಮೊದಲು ನನ್ನ ಮದುವೆ ಗೊತ್ತಾಗಿದ್ದ ಮನೆಯವರು ಕೈಕೊಟ್ಟರು. ಕೊನೆಗೆ ನನ್ನ ತಾಯಿ ಬೇರೆ ದಾರಿ ಕಾಣದೆ ಇಲ್ಲಿಗೆ ಮದುವೆ ಮಾಡಿದರು. ಈಗ ನನ್ನ ತಂಗಿಯ ಮದುವೆಯಾಗಬೇಕಿದೆ. ಅವಳು ಎಂಥ ಮನೆ ಸೇರ್ತಾಳೋ ನೋಡ್ಬೇಕು.'

ಸುಧಾ : 'ಮೊದಲು ನಿನ್ನ ಮದುವೆ ಗೊತ್ತಾಗಿತ್ತಲ್ಲ, ಆ ಮನೆಯವರು ಆಮೇಲೆ ಏಕೆ ಬೇಡಾಂದ್ರು ?'

ನಿರ್ಮಲಾ : 'ಅವರಿಗೇ ಗೊತ್ತು ! ನನ್ನ ತಂದೆ ಸತ್ತು ಹೋದ ಮೇಲೆ ಬಂಗಾರ ತುಂಬಿದ ಚೀಲವನ್ನು ಅವರಿಗೆ ಕೊಡುವುದಕ್ಕೆ ಯಾರಿದ್ದರು ?'

ಸುಧಾ : 'ನೀಚರು, ಅವರು ಯಾವ ಊರಿನವರು ?'

ನಿರ್ಮಲಾ : 'ಲಖನೌದವರು, ಹೆಸರು ನೆನಪಿಲ್ಲ. ಹುಡುಗನ ಅಪ್ಪ ಅಬಕಾರಿ ಇಲಾಖೆಯಲ್ಲಿ ದೊಡ್ಡ ಅಧಿಕಾರಿಯಾಗಿದ್ದರು.'

ಸುಧಾ ಗಂಭೀರ ಭಾವದಿಂದ ಹೇಳಿದಳು– 'ಅವರ ಮಗ ಏನ್ ಮಾಡುತ್ತಿದ್ದ ?'

ನಿರ್ಮಲಾ : 'ಏನೂ ಇಲ್ಲ, ಎಲ್ಲೋ ಓದ್ತಿದ್ದ. ತುಂಬ ಚುರುಕಾಗಿದ್ದ.'

ಸುಧಾ ತಲೆ ತಗ್ಗಿಸಿ ಹೇಳಿದಳು– 'ಆತ ತನ್ನ ತಂದೆಯೊಂದಿಗೆ ಏನಾದರೂ ಹೇಳಿದ್ದನೇನು ? ಆತ ದೊಡ್ಡವನಾಗಿದ್ದ. ತನ್ನ ತಂದೆಯ ಬಾಯಿಯನ್ನು ಮುಚ್ಚಿಸಬಹುದಿತ್ತಲ್ಲ ?'

ನಿರ್ಮಲಾ : 'ಈಗ ನಾನು ಏನೂ ಅಂತ ಹೇಳಲಿ ತಂಗಿ ? ಬಂಗಾರದ ಗಟ್ಟಿಗಳು ಯಾರಿಗೆ ಪ್ರಿಯವಾಗುವುದಿಲ್ಲ ಹೇಳು ? ನಮ್ಮ ಮನೆಯಿಂದ ಸಂದೇಶ ತೆಗೆದುಕೊಂಡು ಹೋಗಿದ್ದ ಪಂಡಿತರು ಅಲ್ಲಿಂದ ಬಂದು ಹೇಳಿದ ಪ್ರಕಾರ ಆ ಹುಡುಗನೇ ಬೇಡಾಂದನಂತೆ. ಹುಡುಗನ ತಾಯಿಯೇನೋ ದೇವತೆಯಾಗಿದ್ದರು. ಅವರು ಮಗನಿಗೂ, ಗಂಡನಿಗೂ ತಿಳಿ ಹೇಳಿದರು. ಆದರೆ ಆಕೆಯ ಮಾತು ನಡೆಯಲಿಲ್ಲ.'

ಸುಧಾ : 'ಆ ಹುಡುಗ ನನ್ನ ಕೈಗೆ ಸಿಕ್ಕಿದ್ದಿದ್ದರೆ ತರಾಟೆಗೆ ತೆಗೆದುಕೊಳ್ಳುತ್ತಿದ್ದೆ.'

ನಿರ್ಮಲಾ : 'ನನ್ನ ಹಣೆಯಲ್ಲಿ ಏನು ಬರೆದಿತ್ತೋ ಅದು ಆಯಿತು. ಕೃಷ್ಣಾಳ ಪಾಡು ಏನಾಗುತ್ತೋ ಏನೋ !'

ನಿರ್ಮಲಾ ಹೋದಳು. ಸಂಜೆಯ ಹೊತ್ತಿಗೆ ಡಾಕ್ಟರು ಹೊರಗಡೆಯಿಂದ ಬಂದಾಗ ಸುಧಾ ಹೇಳಿದಳು: 'ರೀ, ಒಂದು ಮಾತು. ಒಂದು ಕಡೆ ಮದುವೆ ಗೊತ್ತಾದ ಮೇಲೆ, ಹಣದ ಆಸೆಯಿಂದ ಇನ್ನೊಂದು ಕಡೆ ಮದುವೆಯಾಗುವ ಮನುಷ್ಯರಿಗೆ ನೀವು ಏನನ್ನುತ್ತೀರಾ ?'

ಡಾ. ಸಿನ್ಹಾ ತನ್ನ ಹೆಂಡತಿಯ ಕಡೆ ಕುತೂಹಲದಿಂದ ನೋಡುತ್ತ ಹೇಳಿದರು– 'ಏನು ಹೇಳುವುದು ? ಹಾಗೆ ಮಾಡಬಾರದು.'

ಸುಧಾ : 'ಇದೊಂದು ನೀಚತನ, ಮೊದಲ ದರ್ಜೆಯ ಮುಟ್ಠಾಳತನ ಅಂತ ಹೇಳಿ.'

ಸಿನ್ಹಾ : 'ಹಾಗಂದರೂ ನನ್ನ ಅಭ್ಯಂತರವೇನಿಲ್ಲ.'

ಸುಧಾ : 'ಇದರಲ್ಲಿ ಯಾರದ್ದು ಜಾಸ್ತಿ ತಪ್ಪು ಹೇಳಿ – ಹುಡುಗನದೋ ಅಥವಾ ಹುಡುಗನ ಅಪ್ಪನದೋ ?'

ಸುಧಾ ಈ ಎಲ್ಲ ಪ್ರಶ್ನೆಗಳನ್ನು ಯಾವ ಉದ್ದೇಶದಿಂದ ಕೇಳುತ್ತಿದ್ದಾಳೆ ಎಂಬುದು ಸಿನ್ಹಾ ಅವರಿಗೆ ಇನ್ನೂ ಅರ್ಥವಾಗಲಿಲ್ಲ. ಆಶ್ಚರ್ಯದಿಂದ ನುಡಿದರು– 'ಪರಿಸ್ಥಿತಿಯ ಮೇಲೆ ಇದು ಅವಲಂಬಿಸಿರುತ್ತದೆ. ಹುಡುಗ ಅಪ್ಪನ ಅಧೀನದಲ್ಲೇ ಇದ್ದರೆ ಈ ಅಪ್ಪನದೇ ತಪ್ಪು ಅನ್ನಬೇಕು.'

ಸುಧಾ : 'ಅಪ್ಪನ ಅಧೀನದಲ್ಲಿದ್ದಾಕ್ಷಣಕ್ಕೆ ವಯಸ್ಸಿಗೆ ಬಂದ ಹುಡುಗನಿಗೆ ತನ್ನ ಕರ್ತವ್ಯದ ಪ್ರಜ್ಞೆ ಇರಬಾರದೇನು ? ತನಗೆ ಒಂದು ಕೋಟು ಬೇಕೆನ್ನಿಸಿದರೆ ಅಪ್ಪ ಬೇಡ ಅಂದರೂ ಅದನ್ನು ವಿರೋಧಿಸಿ ಅತ್ತು ಕರೆದು ಹೊಲಿಸಿಕೊಳ್ಳುವುದಿಲ್ಲವೇನು ? ಇಂಥ ಮಹತ್ವದ ವಿಚಾರದಲ್ಲಿ ತನಗನ್ನಿಸಿದ್ದನ್ನು ತನ್ನ ಅಪ್ಪನಿಗೆ ಹೇಳಬಾರದೇನು ? ಇಲ್ಲಿ ಆ ಹುಡುಗ ಮತ್ತು ಅಪ್ಪ ಇಬ್ಬರೂ ಅಪರಾಧಿಗಳೇ ಅಂತ ಹೇಳಿ. ಅಪ್ಪ ಇನ್ನೂ ಹೆಚ್ಚು ಅಪರಾಧಿ. ಮುದುಕರು, ಎಲ್ಲ ಖರ್ಚನ್ನೂ ನಾನು ನಿಭಾಯಿಸಬೇಕು. ಹೆಣ್ಣಿನ ಕಡೆಯವರಿಂದ ಎಷ್ಟು ಕಿತ್ತುಕೊಳ್ಳುವುದಕ್ಕಾಗುತ್ತದೆಯೋ ಅಷ್ಟನ್ನು ಕಿತ್ತುಕೊಂಡರೇನೆ ಒಳ್ಳೆಯದು, ಅಂತ ಯೋಚಿಸ್ತಾರೆ. ಆದರೆ ಗಂಡು ಕಡು ಸ್ವಾರ್ಥಿಯಲ್ಲದೇ ಹೋದರೆ ತನ್ನ ಆತ್ಮಾಭಿಮಾನದ ಪರಿಚಯ ಮಾಡಿಕೊಡುವುದೂ ಅವನ ಧರ್ಮವಾಗುತ್ತದೆ. ಅವನು ಲೋಭಿ ಮತ್ತು ಹೇಡಿ ಅಂತ ನಾನು ಹೇಳ್ತೀನಿ. ದೌರ್ಭಾಗ್ಯದಿಂದಾಗಿ ಇಂಥ ಒಬ್ಬ ಮನುಷ್ಯ ನನ್ನ ಗಂಡನಾಗಿದ್ದಾನೆ. ಯಾವ ಶಬ್ದಗಳಲ್ಲಿ ಈತನನ್ನು ಧಿಕ್ಕರಿಸಬೇಕೆಂದು ನನಗೆ ಗೊತ್ತಾಗುತ್ತಿಲ್ಲ.'

ಸಿನ್ಹಾ ಸಂಕೋಚದಿಂದ ಹೇಳಿದರು– 'ಅದು...... ಅದು...... ಅದು ಬೇರೆ ವಿಷಯ, ಕೊಡುವುದು–ತೆಗೆದುಕೊಳ್ಳುವುದು ಸಮಸ್ಯೆಯಾಗಿರಲಿಲ್ಲ. ಬೇರೇನೆ ವಿಷಯವಿತ್ತು. ಆ ಹುಡುಗಿಯ ತಂದೆ ತೀರಿಕೊಂಡಿದ್ದರು. ಅಂಥ ಪರಿಸ್ಥಿತಿಯಲ್ಲಿ ನಾನೇನು ಮಾಡಬೇಕಿತ್ತು ಹೇಳು ? ಜತೆಗೆ, ಹುಡುಗಿಯಲ್ಲಿ ಏನೋ ಐಬಿದೆ ಅನ್ನುವ ವಿಚಾರವೂ ಕಿವಿಗೆ ಬಿದ್ದಿತ್ತು. ಹೋಗಲಿ ಬಿಡು, ಅದು ಬೇರೆ ವಿಷಯ. ಅದು ಸರಿ, ಈ ಕತೆಯನ್ನೆಲ್ಲ ನಿನಗೆ ಯಾರು ಹೇಳಿದರು ?'

ಸುಧಾ : 'ಆ ಹುಡುಗಿ ಕಿವುಡಿ, ಕುಂಟಿ, ಗೂನಿ, ಕುಲಟೆಯಾಗಿದ್ದಳು ಅಂತಲೂ ಹೇಳಿಬಿಡಿ. ಯಾಕೆ ಸುಮ್ಮನಾದಿರಿ ? ಆ ಹುಡುಗಿಯಲ್ಲಿ ಏನು ಐಬಿತ್ತು ?'

ಸಿನ್ಹಾ : 'ನಾನಂತೂ ನೋಡಿರಲಿಲ್ಲ. ಆದರೆ, ಆ ಹುಡುಗಿಯಲ್ಲಿ ಏನೋ ಐಬಿತ್ತು ಅಂತ ಯಾರೋ ಹೇಳಿದರು.'

ಸುಧಾ : 'ಆಕೆಯಲ್ಲಿದ್ದ ದೊಡ್ಡ ಐಬೆಂದರೆ ಆಕೆಯ ತಂದೆ ತೀರಿಕೊಂಡಿದ್ದರು, ಅವರ ತಾಯಿ ಕೈಯಿಂದ ನಿಮಗೆ ಪುಟ್ಟ ಗಂಟನ್ನು ಕೊಡಲಿಕ್ಕೆ ಆಗ್ತಿರಲಿಲ್ಲ, ಅಲ್ವಾ ? ಇದನ್ನು ಒಪ್ಪಿಕೊಳ್ಳೋಕೆ ಯಾಕೆ ಹಿಂದು–ಮುಂದು ನೋಡ್ತಿದ್ದೀರಿ ? ನಾನು ನಿಮಗೆ ಏನಾದರೂ ಮಾಡಿಬಿಟ್ಟೇನು ಎಂಬ ಭಯವೇನು ? ನಾನು ಒಂದೆರಡು ಮಾತುಗಳನ್ನು ಅಂದರೂ ಈ ಕಿವಿಯಲ್ಲಿ ಕೇಳಿ ಆ ಕಿವಿಯಲ್ಲಿ ಬಿಟ್ಟು ಬಿಡಿ. ಇನ್ನೂ ಗಲಾಟೆ

ಮಾಡಿದರೆ ನೀವು ಕೈಲಿ ದೊಣ್ಣೆ ತೆಗೆದುಕೊಳ್ತೀರಿ, ದೊಣ್ಣೆಯ ಭಯದಿಂದ ಹೆಂಗಸಿನ ಬಾಯಿ ಮುಚ್ಚಿಸಬಹುದಲ್ಲವೆ ? ಆ ಹುಡುಗಿಯಲ್ಲಿ ಐಬಿತ್ತು ಎಂದೇ ಇಟ್ಟುಕೊಂಡರೂ, ಸಾಕ್ಷಾತ್ ಲಕ್ಷ್ಮಿಯಲ್ಲೂ ಏನಾದರೊಂದು ಐಬಿಲ್ಲದೇ ಇಲ್ಲ. ಒಟ್ಟಿನಲ್ಲಿ ನಿಮ್ಮ ಅದೃಷ್ಟ ಚೆನ್ನಾಗಿರಲಿಲ್ಲ ಅಂತ ಹೇಳಬೇಕು, ಅಷ್ಟೆ. ಇಲ್ಲದಿದ್ದರೆ ನನ್ನನ್ನು ಮದುವೆಯಾಗಬೇಕಾದ ಪ್ರಸಂಗ ಬರ್ತಿತ್ತಾ ?'

ಸಿನ್ಹಾ : 'ಅವಳು ಹಾಗಿದ್ದಳು, ಹೀಗಿದ್ದಳು ಅಂತ ನಿನಗೆ ಯಾರು ಹೇಳಿದರು ? ಅವರು ಇವರು ಹೇಳಿದ್ದನ್ನು ಕೇಳಿಕೊಂಡು ನೀನು ಅದನ್ನೇ ನಿಜ ಅಂತ ಒಪ್ಪಿಕೊಂಡ ಹಾಗೆ ನಾವೂ ಜನ ಹೇಳುವುದನ್ನು ನಂಬಿದೆವು.'

ಸುಧಾ : 'ನಾನು ಕಿವಿ ಮಾತನ್ನು ನಂಬಿಲ್ಲ. ನನ್ನ ಕಣ್ಣಿಂದ ನೋಡಿ ಹೇಳ್ತಿದ್ದೇನೆ. ನಿಮಗೆ ಹೆಚ್ಚು ಏನು ಹೇಳಲಿ ? ಆಕೆಯಂಥ ಸುಂದರಿಯನ್ನು ನಾನು ನೋಡಿಯೇ ಇಲ್ಲ.'

ಸಿನ್ಹಾ ಆವೇಶದಿಂದ ಕೇಳಿದರು : 'ಆಕೆ ಇಲ್ಲಿಯೇ ಇದ್ದಾಳೇನು ? ನಿಜ ಹೇಳು, ಅವಳನ್ನು ನೀನು ಎಲ್ಲಿ ನೋಡಿದೆ ಅಂತ ? ಆಕೆ ನಮ್ಮ ಮನೆಗೆ ಬಂದಿದ್ದಳೇನು ?'

ಸುಧಾ : 'ಹೌದು, ಮನೆಗೆ ಬಂದಿದ್ದಳು. ಒಂದು ಸಾರಿ ಅಲ್ಲ ಎಷ್ಟೋ ಸಾರಿ ಬಂದಿದ್ದಾಳೆ. ನಾನೂ ಆಕೆಯ ಮನೆಗೆ ಎಷ್ಟೋ ಸಾರಿ ಹೋಗಿದ್ದೀನಿ. ಏನೋ ಐಬಿದೆ ಅಂತ ನೀವು ಬಿಟ್ಟ ಹುಡುಗಿಯೇ ವಕೀಲರ ಹೆಂಡತಿ !'

ಸಿನ್ಹಾ : 'ನಿಜವಾಗಿಯೂ !'

ಸುಧಾ : 'ನಿಜವಾಗಲೂ, ಇವತ್ತು ನೀವೇ ಆ ಮಹಾಪುರುಷರು ಅಂತ ಆಕೆಗೆ ಗೊತ್ತಾದರೆ ಈ ಮನೆಗೆ ಇನ್ನೊಂದು ದಿನ ಕಾಲಿಡುವುದಿಲ್ಲ. ಅವಳಂಥ ಸುಶೀಲೆ, ಮನೆಗೆಲಸಗಳಲ್ಲಿ ನಿಪುಣೆ ಹಾಗೂ ಪರಮ ಸುಂದರಿಯಾದ ಹೆಂಗಸು ಈ ಊರಿನಲ್ಲಿ ಮೂರು–ನಾಲ್ಕು ಮಂದಿ ಇರಬಹುದು, ಅಷ್ಟೆ. ನೀವು ನನ್ನನ್ನು ಹಾಡಿ ಹೊಗಳ್ತೀರಿ. ನಾನು ಅವಳ ಮುಂದೆ ಏನೂ ಅಲ್ಲ. ಮನೆಯಲ್ಲಿ ದೇವರು ಕೊಟ್ಟ ಹಾಗೆ ಎಲ್ಲವೂ ಇದೆ, ಆದರೆ ಗಂಡ–ಹೆಂಡತಿಯ ಓರಿಗೆಯೇ ಸರಿಯಾಗಿಲ್ಲವೆಂದ ಮೇಲೆ ಏನಿದ್ದರೆ ಏನು ? ಈ ಮುದಿಯನ ಜತೆ ಧೈರ್ಯವಾಗಿ ಬಾಳು ನಡೆಸುತ್ತಿರುವ ಅವಳ ಧೈರ್ಯವೇ ಧೈರ್ಯ ! ನಾನಾಗಿದ್ದರೆ ಯಾವತ್ತೋ ವಿಷ ತಿಂದುಬಿಡುತ್ತಿದ್ದೆ ! ಮನಸ್ಸಿನ ವ್ಯಥೆಯನ್ನು ಹೇಳಿಕೊಳ್ಳುವುದರಿಂದ ಕೊಂಚ ಕಡಿಮೆಯಾಗುತ್ತೆ. ಹಾಗಾಗಿ ಆಕೆ ಎಲ್ಲರ ಜತೆ ನಗ್ತಾಳೆ, ಮಾತನಾಡ್ತಾಳೆ, ಒಡವೆ ವಸ್ತ್ರ ತೊಡ್ತಾಳೆ. ಆದರೆ ಆಕೆಯ ರೋಮ–ರೋಮವು ದುಃಖಿಸುತ್ತಿದೆ.'

ಸಿನ್ಹಾ : 'ವಕೀಲರನ್ನು ಆಕೆ ತುಂಬ ಶಪಿಸುತ್ತಿರಬಹುದಲ್ಲವೆ ?'

ಸುಧಾ : 'ಯಾಕೆ ಶಪಿಸುತ್ತಾಳೆ ! ವಕೀಲರು ಆಕೆಯ ಗಂಡ. ಪ್ರಪಂಚದಲ್ಲಿ

ಆಕೆಯ ಸರ್ವಸ್ವವೆಂದರೆ ವಕೀಲ ಸಾಹೇಬರೆ. ಆ ಗಂಡ ಮುದುಕನಾಗಿರಬಹುದು, ರೋಗಿಯಾಗಿರಬಹುದು. ಆದರೆ ಆತ ಗಂಡನೆ. ಕುಲವಧುಗಳು ಎಂದೂ ಗಂಡನನ್ನು ನಿಂದಿಸುವುದಿಲ್ಲ. ಕುಲಟೆಯರೇ ನಿಂದಿಸುವುದು. ವಕೀಲರ ಸ್ಥಿತಿಯನ್ನು ನೋಡಿ ಒಳಗೊಳಗೆ ನೂರು ನೋವು ಅನುಭವಿಸಿದರೂ ಹೊರಗೆ ತೋರ್ಪಡಿಸಿಕೊಳ್ಳುವುದಿಲ್ಲ. ಬಾಯಿ ಬಿಟ್ಟು ಒಂದು ಮಾತನ್ನೂ ಆಡುವುದಿಲ್ಲ.'

ಸಿನ್ಹಾ : 'ಈ ಇಳಿ ವಯಸ್ಸಿನಲ್ಲಿ ಮದುವೆ ಮಾಡಿಕೊಳ್ಳುವುದಕ್ಕೆ ವಕೀಲರಿಗೆ ಏನು ಹಿಡಿದಿತ್ತು ?'

ಸುಧಾ : 'ಇಂಥ ಗಂಡಸರು ಇಲ್ಲದೆ ಹೋದರೆ ಬಡ ಹೆಣ್ಣು ಮಕ್ಕಳನ್ನು ಗತಿ ಕಾಣಿಸುವವರು ಯಾರು ? ನೀವು ಮತ್ತು ನಿಮ್ಮ ಗೆಳೆಯರು ಹಣದ ಗಂಟನ್ನು ಮುಟ್ಟದೆ ಮಾತನ್ನೇ ಆಡುವುದಿಲ್ಲ ಅಂದ ಮೇಲೆ ಈ ಬಡ ಹೆಣ್ಣುಮಕ್ಕಳು ಇನ್ನೆಲ್ಲಿ ಹೋಗಬೇಕು ? ನೀವು ತುಂಬ ಅನ್ಯಾಯ ಮಾಡಿದ್ದೀರಿ, ಇದಕ್ಕಾಗಿ ನೀವು ಪ್ರಾಯಶ್ಚಿತ ಮಾಡಿಕೋಬೇಕು. ದೇವರು ಆಕೆಯ ಮಾಂಗಲ್ಯವನ್ನು ಕಾಪಾಡಲಿ. ವಕೀಲ ಸಾಹೇಬರಿಗೆ ಏನಾದರೂ ಆಯಿತೆಂದರೆ ಆ ಬಡಪಾಯಿಯ ಬದುಕೇ ಬರಡಾಗಿಬಿಡುತ್ತದೆ. ಇವತ್ತು ಆಕೆ ತುಂಬ ಗೋಳಾಡುತ್ತಿದ್ದಳು. ನೀವು ಗಂಡಸರು ತುಂಬ ನಿರ್ದಯಿಗಳು. ನಾನು ನನ್ನ ಸೋಹನನ ಮದುವೆಯನ್ನು ಯಾವುದಾದರೂ ಬಡ ಹುಡುಗಿಯೊಂದಿಗೆ ಮಾಡುತ್ತೇನೆ.'

ಡಾಕ್ಟರ್ ಸಾಹೇಬರು ಆಕೆಯ ಈ ಕೊನೆಯ ಮಾತುಗಳನ್ನು ಕೇಳಿಸಿಕೊಳ್ಳಲಿಲ್ಲ. ಅವರು ತೀವ್ರ ಚಿಂತಾಕ್ರಾಂತರಾದರು. ಅವರ ಮನಸ್ಸಿನಲ್ಲಿ ಮತ್ತೆ ಮತ್ತೆ 'ಅಕಸ್ಮಾತ್ತಾಗಿ ವಕೀಲ ಸಾಹೇಬರಿಗೆ ಏನಾದರೂ ಆಗಿಬಿಟ್ಟರೆ !' ಎಂಬ ಮಾತುಗಳೇ ಗುಂಯ್‌ಗುಡುತ್ತಿದ್ದುವು. ತನ್ನ ಸ್ವಾರ್ಥದ ಭಯಂಕರ ಸ್ವರೂಪ ಈಗ ಸ್ಪಷ್ಟವಾಗಿತ್ತು. ನಿಜ ಹೇಳಬೇಕೆಂದರೆ ಇದು ನನ್ನ ಅಪರಾಧ. ನಾನು ಅವತ್ತು ಆ ಹುಡುಗಿಯ ಹೊರತಾಗಿ ಬೇರೆ ಯಾವ ಹುಡುಗಿಯನ್ನೂ ಮದುವೆಯಾಗುವುದಿಲ್ಲ ಎಂದು ಹೇಳಿಬಿಟ್ಟಿದ್ದಿದ್ದರೆ ನನ್ನ ಇಚ್ಛೆಗೆ ವಿರುದ್ಧವಾಗಿ ಬೇರೆಡೆ ನನಗೆ ಮದುವೆ ಮಾಡುತ್ತಿದ್ದರೇನು ?

ಸುಧಾ ಒಮ್ಮೆಗೇ ಹೇಳಿದಳು– 'ನೀವು 'ಹೂಂ' ಅಂದರೆ ನಿರ್ಮಲಾಳ ಭೇಟಿ ಮಾಡಿಸುತ್ತೇನೆ. ನಿಮ್ಮ ಮೂತಿಯನ್ನು ಆಕೆಯೂ ನೋಡಲಿ. ಆಕೆ ನಿಮ್ಮ ಜತೆ ಒಂದು ಮಾತೂ ಆಡುವುದಿಲ್ಲ. ಆದರೆ ಬಹುಶಃ ಆಕೆ ತಿರಸ್ಕಾರ ತುಂಬಿದ ಒಂದು ನೋಟ ನಿಮ್ಮೆಡೆ ಬೀರಿದರೆ ಸಾಕು, ಅದನ್ನು ಜೀವನ ಪರ್ಯಂತ ನೀವು ಮರೆಯೋಕೆ ಆಗೊಲ್ಲ, ಹೇಳಿ, ನಾಳೆ ಕರೆಸಲಾ ? ನಿಮ್ಮ ಕಿರು ಪರಿಚಯವನ್ನು ಮಾತ್ರ ಆಕೆಗೆ ಮಾಡಿಕೊಡ್ತೇನೆ, ಅಷ್ಟೆ.'

ಸಿನ್ಹಾ ನುಡಿದರು : 'ಬೇಡ ಸುಧಾ, ಬೇಡ. ನಿನಗೆ ಕೈ ಮುಗಿತೀನಿ. ಈ ಕೆಲಸ

ಮಾತ್ರ ಮಾಡಬೇಡ ! ಒಂದು ವೇಳೆ ನೀನು ಹೀಗೆ ಮಾಡಿದರೆ ನಾನು ಮನೆ ಬಿಟ್ಟು ಓಡಿ ಹೋಗ್ತೇನೆ.'

ಸುಧಾ : 'ಮುಳ್ಳನ್ನು ಬಿತ್ತಿದ್ದೀರಿ ಅಂದ ಮೇಲೆ ಮುಳ್ಳಿನ ಫಲವನ್ನು ತಿನ್ನೋದಕ್ಕೆ ಯಾಕೆ ಹೆದರ್‍ತೀರಿ ? ಆಕೆಯ ಕತ್ತಿನ ಮೇಲೆ ಕತ್ತಿ ಬೀಸಿದ್ದೀರಿ. ಈಗ ಆಕೆ ಒದ್ದಾಡುವುದನ್ನೂ ಕೊಂಚ ನೋಡಿ. ನನ್ನ ತಾತ ನಿಮಗೆ ಐದು ಸಾವಿರ ಕೊಟ್ಟರು, ಅಲ್ವೆ ? ಈಗ ನಿಮ್ಮ ತಮ್ಮನ ಮದುವೆಯಲ್ಲೂ ಐದಾರು ಸಾವಿರ ಸಿಗುತ್ತೆ. ಆಗ ನಿಮ್ಮಷ್ಟು ಶ್ರೀಮಂತರು ಈ ಪ್ರಪಂಚದಲ್ಲಿ ಯಾರೂ ಇರೊಲ್ಲ. ಅಲ್ವೆ ? ಹನ್ನೊಂದು ಸಾವಿರ ರೂಪಾಯಿ ! ಅಬ್ಬಬ್ಬಾ ! ಹನ್ನೊಂದು ಸಾವಿರದಲ್ಲಿನ ಒಂದೊಂದೇ ರೂಪಾಯಿಯನ್ನು ತೆಗೆದು ತೆಗೆದು ಅತ್ತ ಕಡೆ ಇಡುವುದಕ್ಕೆ ಎಷ್ಟೋ ತಿಂಗಳು ಬೇಕಾಗ್ತವೆ ! ಮಜ ಉಡಾಯಿಸಿದರೂ ಮೂರು ಪೀಳಿಗೆಯವರು ಉಡಾಯಿಸಬಹುದು. ತಮ್ಮನಿಗೆ ಎಲ್ಲಿಯಾದರೂ ಮಾತುಕತೆ ನಡೆದಿದೆಯೇನು ?'

ಈ ವ್ಯಂಗ್ಯದಿಂದ ಡಾಕ್ಟರ್ ಸಾಹೇಬರು ಎಷ್ಟರಮಟ್ಟಿಗೆ ತತ್ತರಿಸಿ ಹೋದರೆಂದರೆ ತಗ್ಗಿಸಿದ ತಲೆಯನ್ನು ಮೇಲೆ ಎತ್ತಲಿಲ್ಲ. ಅವರ ಎಲ್ಲ ವಾಕ್ಚಾತುರ್ಯ ಎಲ್ಲೋ ಅಡಗಿ ಹೋಗಿತ್ತು. ಅಪ್ಪು ಪೆಟ್ಟು ತಿಂದಿದ್ದರು. ಬಾಯಿ ಬಿಡಲು ಆಗುತ್ತಿರಲಿಲ್ಲ. ಅದೇ ಹೊತ್ತಿಗೆ ಸರಿಯಾಗಿ ಯಾರೋ 'ಡಾಕ್ಟರ್ ಸಾಹೇಬರೇ' ಎಂದು ಕರೆದರು. ಬದುಕಿದೆಯಾ ಜೀವವೇ ಎಂದುಕೊಳ್ಳುತ್ತ ಡಾಕ್ಟರು ಹೊರಗೆ ಬಂದರು. ಹೆಣ್ಣು ಯಾವ ಮಟ್ಟದ ವ್ಯಂಗ್ಯ ಮಾಡಬಲ್ಲಳೆಂಬುದರ ಪರಿಚಯ ಅವರಿಗೆ ಇವತ್ತು ಆಗಿತ್ತು.

ರಾತ್ರಿ ಮಲಗುವಾಗ ಡಾಕ್ಟರು ಸುಧಾಳನ್ನು ಕೇಳಿದರು– 'ನಿರ್ಮಲಾಗೆ ಒಬ್ಬಳು ತಂಗಿಯಿರಬೇಕಲ್ಲವಾ ?'

ಸುಧಾ : 'ಹೌದು ಇದ್ದಾಳೆ. ಅವಳ ಚಿಂತೆಯೂ ಈಕೆಯನ್ನು ಈಗಲಿಂದಲೇ ಕಾಡುತ್ತಿದೆ. ನನ್ನ ಬಾಳು ಹೀಗಾಯಿತು, ಅವಳ ಬದುಕು ಹೇಗಾಗುತ್ತೊ ಎಂದು ಪೇಚಾಡಿಕೊಳ್ಳುತ್ತಿದ್ದಳು. ಅಮ್ಮನ ಬಳಿ ಒಂದು ಕಾಸೂ ಇಲ್ಲ. ಕೊನೆಗೆ ಬೇರೆ ದಾರಿ ಕಾಣದೆ ಯಾವನಾದರೂ ಮುದುಕನ ಕೊರಳಿಗೆ ಕಟ್ಟಿಬಿಡ್ತಾಳೆ ಅಂತ ಕೊರಗುತ್ತಿದ್ದಳು.'

ಸಿನ್ಹಾ : 'ನಿರ್ಮಲಾ ಈಗ ತನ್ನ ತಾಯಿಗೆ ನೆರವಾಗಬಹುದಲ್ಲವೆ'

ಸುಧಾ ತೀಕ್ಷ್ಣ ಸ್ವರದಲ್ಲಿ ಹೇಳಿದಳು— 'ನೀವು ಒಂದೊಂದು ಸಾರಿ ತಲೆ–ಬುಡವಿಲ್ಲದ ಮಾತುಗಳನ್ನು ಆಡ್ತೀರಿ. ನಿರ್ಮಲಾ ಎಷ್ಟು ನೆರವು ನೀಡಬಲ್ಲಳು ? ಬಹಳಾ ಅಂದ್ರೆ ಮುನ್ನೂರು–ನಾಲ್ನೂರು ರೂಪಾಯಿಗಳನ್ನು ಕೊಡಬಹುದೇ ಹೊರತಾಗಿ ಇನ್ನೇನು ತಾನೇ ಮಾಡಬಲ್ಲಳು ? ವಕೀಲರ ಸ್ಥಿತಿ ಚಿಂತಾಜನಕವಾಗಿದೆ. ಬೆಟ್ಟದಷ್ಟು ಆಯಸ್ಸು ಅವಳ ಮುಂದಿದೆ. ಇನ್ನು ಇವಳ ಮನೆಯ ಸ್ಥಿತಿ ಏನೋ ಎಂತೋ ಯಾರಿಗೆ ಗೊತ್ತು ? ಕಳೆದ ಆರು ತಿಂಗಳಿಂದಲೂ ವಕೀಲರು ಮನೆಯಲ್ಲಿಯೇ ಕುಳಿತಿದ್ದಾರೆ. ಹಣ ಆಕಾಶದಿಂದೇನೂ ಉದುರುವುದಿಲ್ಲವಲ್ಲ ? ಹತ್ತಿಪ್ಪತ್ತು ಸಾವಿರ ರೂಪಾಯಿಗಳಿದ್ದರೂ ಅದು

ಬ್ಯಾಂಕಿನಲ್ಲಿರಬಹುದು. ನಿರ್ಮಲಾಳ ಕೈಲಿರುತ್ತೇನು ? ನಮ್ಮ ಮನೆ ಖರ್ಚೇ ತಿಂಗಳಿಗೆ ಇನ್ನೂರು ರೂಪಾಯಿ ಇರಬೇಕಾದರೆ ಅವರ ಮನೆಯ ಖರ್ಚು ನಾಲ್ನೂರು ಆದರೂ ಇದ್ದೇ ಇರುತ್ತೆ'

ಸುಧಾಳಿಗೇನೋ ನಿದ್ದೆ ಹತ್ತಿತು. ಆದರೆ ಡಾಕ್ಟರ್ ಸಾಹೇಬರು ಬಹಳ ಹೊತ್ತಿನವರೆಗೆ ಮಗ್ಗಲು ಬದಲಿಸುತ್ತಲೇ ಇದ್ದರು. ಒಮ್ಮೆಗೇ ಏನನ್ನೋ ಯೋಚಿಸಿ ಎದ್ದು ಮೇಜಿನ ಬಳಿಗೆ ಬಂದು ಒಂದು ಪತ್ರ ಬರೆಯತೊಡಗಿದರು.

## ಹದಿನಾಲ್ಕು

ಮೂರು ಘಟನೆಗಳು ಒಟ್ಟಿಗೆ ನಡೆದುವು; ನಿರ್ಮಲಾ ಹೆಣ್ಣು ಮಗುವಿಗೆ ಜನ್ಮ ಕೊಟ್ಟಳು. ಕೃಷ್ಣಾಳ ಮದುವೆ ನಿಶ್ಚಯವಾಯಿತು ಮತ್ತು ತೋತಾರಾಮರ ಮನೆ ಹರಾಜಾಯಿತು. ನಿರ್ಮಲಾಗೆ ಹೆಣ್ಣು ಮಗುವಾದದ್ದು ಸಾಧಾರಣ ಘಟನೆಯಾದರೂ ಆಕೆಯ ದೃಷ್ಟಿಯಲ್ಲಿ ಇದು ಅವಳ ಬದುಕಿನಲ್ಲಿ ಘಟಿಸಿದ ಎಲ್ಲಕ್ಕಿಂತಲೂ ಮಹತ್ವದ ಘಟನೆಯಾಗಿತ್ತು. ಉಳಿದ ಎರಡು ಘಟನೆಗಳೂ ಅಸಾಧಾರಣವಾದವುಗಳೇ ಆಗಿದ್ದವು. ಕೃಷ್ಣಾಳ ವಿವಾಹ ಶ್ರೀಮಂತ ಮನೆಯಲ್ಲಿ ನಿಶ್ಚಿತವಾದದ್ದಾದರೂ ಹೇಗೆ ? ಅವಳ ತಾಯಿಯ ಬಳಿ ವರದಕ್ಷಿಣೆಯ ರೂಪದಲ್ಲಿ ಹಣ ಕೊಡಲು ಒಂದು ಬಿಡಿಕಾಸೂ ಇರಲಿಲ್ಲ. ಇತ್ತ, ಈಗ ನಿವೃತ್ತರಾಗಿ ಪೆಂಶನ್ ಮೇಲೆ ಬದುಕು ಸಾಗಿಸುತ್ತಿರುವ ವೃದ್ಧ ಸಿನ್ಹಾ ಸಾಹೇಬರು ಅವರ ವಂಶದಲ್ಲಿಯೇ ಲೋಭಿ ಎಂದು ಪ್ರಸಿದ್ಧರಾಗಿದ್ದರು. ಇಂಥವರು ತಮ್ಮ ಮಗನ ಮದುವೆಯನ್ನು ಇಂಥ ದರಿದ್ರರ ಮನೆಯಲ್ಲಿ ಮಾಡಿಕೊಳ್ಳಲು ಒಪ್ಪಿದ್ದಾದರೂ ಹೇಗೆ ? ಯಾರಿಂದಲೂ ನಂಬಲೂ ಆಗುತ್ತಿರಲಿಲ್ಲ. ಇದಕ್ಕಿಂತಲೂ ಆಶ್ಚರ್ಯದ ಸಂಗತಿ ಎಂದರೆ ವಕೀಲರ ಮನೆ ಹರಾಜಿಗೆ ಬಂದದ್ದು. ಜನ ವಕೀಲರನ್ನು ಲಕ್ಷಾಧಿಪತಿ ಎಂದು ಭಾವಿಸಿರದಿದ್ದರೂ ದೊಡ್ಡ ಮನುಷ್ಯ ಎಂದು ಅವಶ್ಯ ಭಾವಿಸಿದ್ದರು. ಅವರ ಮನೆ ಹರಾಜಿಗೆ ಬಂದದ್ದಾದರೂ ಹೇಗೆ ? ನಡೆದದ್ದು ಇದು : ಒಬ್ಬ ಸಾಹುಕಾರನಿಂದ ವಕೀಲರು ಸಾಲ ತೆಗೆದುಕೊಂಡಿದ್ದರು. ಆ ಹಣದಿಂದ ಇನ್ನೊಬ್ಬ ಜಮೀನ್ದಾರನ ಇಡೀ ಒಂದು ಹಳ್ಳಿಯನ್ನೇ ಗಿರವಿ ಇಟ್ಟುಕೊಂಡಿದ್ದರು. ಒಂದು–ಒಂದೂವರೆ ವರ್ಷದಲ್ಲಿ ಈ ಸಾಲವನ್ನು ತೀರಿಸಿಬಿಡಬಹುದೆಂದೂ, ಅಲ್ಲಿಂದ ಮುಂದೆ ಐದಾರು ವರ್ಷಗಳಲ್ಲಿ ಇಡೀ ಹಳ್ಳಿಯ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸಬಹುದೆಂದು ಯೋಚಿಸಿದರು. ಆ ಹಳ್ಳಿಯ ಜಮೀನ್ದಾರನಿಗೆ ನಾನು ಕೊಟ್ಟಿರುವ ಅಸಲು ಮತ್ತು ಬಡ್ಡಿಯನ್ನು ಕೊಡಲಾಗುವುದಿಲ್ಲ– ಎಂದೆಲ್ಲ ಯೋಚಿಸಿ ವಕೀಲರು ಈ ವ್ಯವಹಾರಕ್ಕೆ ಕೈ ಹಾಕಿದ್ದರು. ಹಳ್ಳಿಯೇನೋ

ದೊಡ್ಡದೇ. ಐನೂರು–ಆರುನೂರುಗಳ ಲಾಭವಿದ್ದೇ ಇರುತ್ತಿತ್ತು. ಆದರೆ ವಕೀಲರು ಮನಸ್ಸಿನಲ್ಲಿ ಯೋಚಿಸಿದ್ದು ಮನಸ್ಸಿನಲ್ಲಿಯೇ ಉಳಿಯಿತು. ಮನಸ್ಸಿಗೆ ಸಮಾಧಾನ ತಂದುಕೊಂಡು ಕಛೇರಿಗೆ ಹೋಗಬೇಕು ಎಂದು ಎಷ್ಟು ಯೋಚಿಸಿದರೂ ಅವರಿಂದ ಕಛೇರಿಗೆ ಹೋಗಲು ಆಗಲೇ ಇಲ್ಲ. ಪುತ್ರಶೋಕ ಅವರಿಗೆ ಯಾವ ಕೆಲಸಕ್ಕೂ ಕೈ ಹಾಕಲು ಅವಕಾಶ ಕೊಡಲಿಲ್ಲ. ಅದು ಅವರನ್ನು ಅಷ್ಟು ದುರ್ಬಲರನ್ನಾಗಿ ಮಾಡಿತ್ತು. ಮಗನ ಸಾವಿಗೆ ಕಾರಣನಾಗಿಯೂ ಮನಸ್ಸನ್ನು ಶಾಂತವಾಗಿಟ್ಟುಕೊಂಡಿರುವ ಹೃದಯಶೂನ್ಯನಾದ ತಂದೆ ಇರುವುದಾದರೂ ಉಂಟೇನು ?

ಒಂದು ವರ್ಷವಾದರೂ ಸಾಹುಕಾರನಿಗೆ ಬಡ್ಡಿ ಕೊಡಲಾಗಲಿಲ್ಲ. ಸರಿ, ಆ ಸಾಹುಕಾರ ಮತ್ತೆ ಮತ್ತೆ ಹೇಳಿಕಳುಹಿಸತೊಡಗಿದ. ಹೀಗೆ ಸಾಹುಕಾರ ಹೇಳಿಕಳುಹಿಸುವುದನ್ನು ನೋಡಿ ಕೆಂಡವಾದ ವಕೀಲರು ಒಂದು ಸಾರಿ, 'ನಾನು ಯಾರ ಗುಲಾಮನೂ ಅಲ್ಲ. ಆ ಸಾಹುಕಾರ ಏನು ಮಾಡಿಕೊಳ್ಳುತ್ತಾನೋ ಮಾಡಿಕೊಳ್ಳಲಿ, ನಾನೂ ನೋಡ್ತೇನೆ' ಎಂದು ರೇಗಿ ಕಳುಹಿಸಿದಾಗ ಸಾಹುಕಾರನಿಗೂ ಕೋಪ ಬಂತು. ಅವನು ಮೊಕದ್ದಮೆ ಹೂಡಿದ. ಆಗಲೂ ವಕೀಲರು ಹಾಜರಾಗಲಿಲ್ಲ. ಇದ್ದಕ್ಕಿದ್ದಂತೆಯೇ ಒಂದು ದಿನ ಡಿಕ್ರಿಯಾಯಿತು. ಇಲ್ಲಿ ಮನೆಯಲ್ಲಾದರೂ ಹಣ ಎಲ್ಲಿತ್ತು ? ಇಷ್ಟರಲ್ಲಿ ವಕೀಲರು ಬರಿಗೈಯಾಗಿದ್ದರು. ಅವರಿಂದ ಹಣದ ವ್ಯವಸ್ಥೆ ಮಾಡಲಾಗಲಿಲ್ಲ. ಸರಿ, ಮನೆ ಹರಾಜಿಗೆ ಬಂತು. ನಿರ್ಮಲಾ ಮನೆಯಲ್ಲಿಯೇ ಇದ್ದಳು. ಈ ವಿಷಯ ಗೊತ್ತಾಗುತ್ತಿದ್ದಂತೆಯೇ ಆಕೆ ಭೂಮಿಗೆ ಇಳಿದು ಹೋದಳು, ಕರುಳು ಕಿತ್ತು ಬಂದಂತಾಯಿತು. ಬದುಕಿನಲ್ಲಿ ಯಾವುದೇ ಸುಖ ಸಿಗದೆ ಹೋದರೂ ಆಕೆ ಹಣದ ಚಿಂತೆಯಿಂದ ಮುಕ್ತಾಗಿದ್ದಳು. ಹಣ ಮನುಷ್ಯನ ಜೀವನದಲ್ಲಿ ಎಲ್ಲಕ್ಕಿಂತಲೂ ಪ್ರಧಾನವಾದುದ್ದಾಗಿಲ್ಲದಿರಬಹುದು, ಆದರೆ ಅದು ಖಂಡಿತವಾಗಿ ಅವನ ಅತ್ಯಂತ ನಿಕಟವರ್ತಿಯಾಗಿರುತ್ತದೆ : ಈಗ ಬೇರೆಲ್ಲ ಚಿಂತೆಗಳ ಜತೆ ಈ ಚಿಂತೆಯೂ ಅವಳ ತಲೆ ತಿನ್ನತೊಡಗಿತು. ಅವಳು ಒಬ್ಬ ನೌಕರನೊಂದಿಗೆ ತನ್ನೆಲ್ಲ ಒಡವೆಗಳನ್ನು ಮಾರಿ ಮನೆಯನ್ನು ಉಳಿಸಿಕೊಳ್ಳುವಂತೆ ಹೇಳಿಕಳುಹಿಸಿದಳು. ಆದರೆ ವಕೀಲರು ಈ ಪ್ರಸ್ತಾಪವನ್ನು ಯಾವುದೇ ಕಾರಣಕ್ಕೂ ಒಪ್ಪಿಕೊಳ್ಳಲಿಲ್ಲ.

ಆ ದಿನದಿಂದಾಚೆಗೆ ವಕೀಲರು ಇನ್ನೂ ಚಿಂತಾಕ್ರಾಂತರಾದರು. ತಮ್ಮಲ್ಲಿದ್ದ ಐಶ್ವರ್ಯದ ಸುಖವನ್ನು ಅನುಭವಿಸಲು ಅವರು ಮದುವೆಯಾಗಿದ್ದರು. ಈಗ ಅದೆಲ್ಲ ಕೇವಲ ಹಿಂದಿನ ನೆನಪಾಗಿ ಮಾತ್ರ ಉಳಿದಿತ್ತು. ನಾಚಿಕೆಯಿಂದಾಗಿ ಅವರು ನಿರ್ಮಲಾಳಿಗೆ ಮುಖ ತೋರಿಸುವುದಕ್ಕೂ ಇಚ್ಛಿಸುತ್ತಿರಲಿಲ್ಲ. ತಾವು ನಿರ್ಮಲಾಳಿಗೆ ಮಾಡಿದ ಅನ್ಯಾಯದ ಅರಿವು ಅವರಿಗೆ ಈಗ ಆಗಲಾರಂಭಿಸಿತ್ತು. ಈಗ ಹುಟ್ಟಿರುವ ಹೆಣ್ಣು ಮಗು ಇದ್ದ ಬದ್ದ ಅವರ ಧೈರ್ಯವನ್ನೆಲ್ಲ ಹಿಂಡಿ ಹಾಕಿತ್ತು. ತನ್ನ ಸರ್ವನಾಶವಾಯಿತು ಎಂದು ಪರಿತಪಿಸಲಾರಂಭಿಸಿದರು.

ಹನ್ನೆರಡನೆಯ ದಿನ ನಿರ್ಮಲಾ ತನ್ನ ನವಜಾತಶಿಶುವನ್ನು ಕಂಕುಳಲ್ಲಿ ಎತ್ತಿಕೊಂಡು ಗಂಡನ ಬಳಿಗೆ ಬಂದಳು. ಆಕೆ ಈ ಸ್ಥಿತಿಯಲ್ಲೂ ಎಷ್ಟು ಸಂತೋಷವಾಗಿದ್ದಳೆಂದರೆ ಅವಳಿಗೆ ಯಾವ ಚಿಂತೆಯೂ ಇಲ್ಲವೇನೋ ಎಂದೇ ಅನ್ನಿಸುತ್ತಿತ್ತು. ಆ ಹೆಣ್ಣು ಮಗುವನ್ನು ತನ್ನ ಎದೆಗೆ ಅಪ್ಪಿಕೊಂಡು ಆಕೆ ತನ್ನ ಎಲ್ಲ ಚಿಂತೆಗಳನ್ನು ಮರೆತಿದ್ದಳು. ಮಗುವಿನ ನಳನಳಿಸುತ್ತಿದ್ದ ಬಟ್ಟಲುಗಣ್ಣುಗಳನ್ನು ನೋಡಿ ಅವಳ ಹೃದಯ ಪ್ರಫುಲ್ಲತೆಯನ್ನು ಅನುಭವಿಸುತ್ತಿತ್ತು. ಮಾತೃತ್ವದ ಈ ಅನನ್ಯ ಸುಖದಲ್ಲಿ ಅವಳ ಎಲ್ಲ ಕ್ಲೇಶಗಳೂ ದೂರವಾಗಿದ್ದುವು. ಆ ಮಗುವನ್ನು ಗಂಡನ ತೊಡೆಯ ಮೇಲೆ ಮಲಗಿಸಿ ಧನ್ಯತೆಯನ್ನು ಅನುಭವಿಸಲು ಇಚ್ಛಿಸುತ್ತಿದ್ದಳು. ಆದರೆ ವಕೀಲರು ಈ ಹೆಣ್ಣು ಮಗುವನ್ನು ನೋಡಿ ಮುಖ ಸಪ್ಪಗೆ ಮಾಡಿಕೊಂಡರು. ಆ ಮಗುವನ್ನು ತೊಡೆಯ ಮೇಲೆ ಹಾಕಿಕೊಂಡು ಮುದ್ದಾಡಲು ಅವರ ಹೃದಯ ಚಡಪಡಿಸಲಿಲ್ಲ. ಅವರು ಒಂದು ಸಾರಿ ಆ ಮಗುವಿನತ್ತ ಕರುಣಾಪೂರಿತ ಕಣ್ಣುಗಳಿಂದ ನೋಡಿ ತಲೆ ತಗ್ಗಿಸಿಕೊಂಡರು. ಮಗು ಮಂಸಾರಾಮನನ್ನೇ ಹೋಲುತ್ತಿತ್ತು.

ನಿರ್ಮಲಾ ಅವರ ಮನಸ್ಸಿನ ಭಾವನೆಗಳನ್ನು ಬೇರೆ ಅರ್ಥದಲ್ಲಿ ತೆಗೆದುಕೊಂಡಳು. ಆಕೆ ಅಪಾರ ಪ್ರೀತಿಯಿಂದ ಮಗುವನ್ನು ಯಾವ ರೀತಿ ಎದೆಗೆ ಅಪ್ಪಿಕೊಂಡಳೆಂದರೆ, ನೀವು ಈ ಮಗುವನ್ನು ಹೊರೆ ಎಂದು ಭಾವಿಸುವುದಾದರೆ ಇವತ್ತಿನಿಂದ ನಿಮ್ಮ ನೆರಳೂ ಇದರ ಮೇಲೆ ಬೀಳಲು ಅವಕಾಶ ಕೊಡುವುದಿಲ್ಲ. ಇಷ್ಟೆಲ್ಲ ತಪಸ್ಸು ಮಾಡಿ ಪಡೆದಿರುವ ಈ ರತ್ನದ ನಿರಾದರ ಮಾಡುವ ನಿಮ್ಮ ಹೃದಯ ಒಡೆದು ಹೋಗುವುದಿಲ್ಲವೇನು ? ಎಂದು ಹೇಳುತ್ತಿದ್ದಳೇನೋ ಎಂದೆನಿಸಿತು. ಆಕೆ ಆ ಕ್ಷಣವೇ ಮಗುವನ್ನು ಎತ್ತಿಕೊಂಡು ತನ್ನ ಕೋಣೆಗೆ ಹೋದಳು. ಹೋಗಿ ಬಹಳ ಹೊತ್ತಿನವರೆಗೂ ಅಳುತ್ತಿದ್ದಳು. ಆಕೆ ತನ್ನ ಗಂಡನ ಆಗಿನ ಉದಾಸೀನ ಭಾವವನ್ನು ಅರ್ಥಮಾಡಿಕೊಳ್ಳಲು ಕೊಂಚವೂ ಪ್ರಯತ್ನಿಸಲಿಲ್ಲ. ಪ್ರಯತ್ನಿಸಿದ್ದಿದ್ದರೆ ಬಹುಶಃ ಆಕೆ ಅವರನ್ನು ಇಷ್ಟು ಕಠೋರರೆಂದು ಭಾವಿಸುತ್ತಿರಲಿಲ್ಲವೇನೋ ! ತನ್ನ ಗಂಡನ ತಲೆಯ ಮೇಲಿದ್ದ ಜವಾಬ್ದಾರಿ ಆಕೆಯ ತಲೆಯ ಮೇಲಿನ್ನೂ ಬಂದಿರಲಿಲ್ಲ ! ಆಕೆ ಯೋಚಿಸುವ ಪ್ರಯತ್ನ ಮಾಡಿದ್ದಿದ್ದರೆ ಈ ಸಣ್ಣ ಸಂಗತಿ ಅವಳಿಗೆ ಅರ್ಥವಾಗದೆ ಇರುತ್ತಿತ್ತೇನು ?

ವಕೀಲರಿಗೆ ಒಂದೇ ಕ್ಷಣಮಾತ್ರದಲ್ಲಿ ತಾವು ಮಾಡಿದ ತಪ್ಪಿನ ಅರಿವಾಯಿತು. ತಾಯಿಯ ಹೃದಯ ವಾತ್ಸಲ್ಯ ಪ್ರೇಮದಲ್ಲಿ ಎಷ್ಟರ ಮಟ್ಟಿಗೆ ಅನುರಕ್ತವಾಗಿರುತ್ತದೆಯೆಂದರೆ ಭವಿಷ್ಯದ ಚಿಂತೆಗಳಾಗಲಿ, ತೊಂದರೆಗಳಾಗಲಿ, ಕೊಂಚವೂ ಅದನ್ನು ಭಯಭೀತಗೊಳಿಸುವುದಿಲ್ಲ. ತಾಯಿಯ ಅಂತಃಕರಣ ಒಂದು ಅಲೌಕಿಕ ಶಕ್ತಿಯನ್ನು ಅನುಭವಿಸುತ್ತಿರುತ್ತದೆ. ಅದು ಎಲ್ಲ ಕಷ್ಟಗಳನ್ನು ಪರಾಸ್ತಗೊಳಿಸುತ್ತದೆ. ವಕೀಲರು ಎದ್ದು ದಢದಢನೆ ಓಡಿ ರೂಮಿಗೆ ಬಂದವರೇ ಮಗುವನ್ನು ಎತ್ತಿಕೊಂಡು ಮುದ್ದಾಡುತ್ತ –

'ನನಗೆ ನೆನಪಾಗುತ್ತಿದೆ. ಮಂಸಾರಾಮನೂ ಹೀಗೆಯೇ ಇದ್ದ. ಥೇಟ್ ಹೀಗೆಯೇ' ಎಂದರು.

ನಿರ್ಮಲಾ : 'ಅಕ್ಕಾನೂ ಹೀಗೆಯೇ ಹೇಳುತ್ತಿದ್ದಾರೆ.'

ವಕೀಲರು : 'ಅವೇ ಬಟ್ಟಲುಗಣ್ಣುಗಳು ! ಅವೇ ಕೆಂಪು ತುಟಿಗಳು ! ದೇವರು ನಮಗೆ ಮಂಸಾರಾಮನನ್ನು ಈ ರೂಪದಲ್ಲಿ ಕೊಟ್ಟಿದ್ದಾನೆ. ಅದೇ ಹಣೆ, ಅದೇ ಮುಖ, ಅವೇ ಕೈ–ಕಾಲುಗಳು. ದೇವರೇ, ನಿನ್ನ ಲೀಲೆ ಅಪರಂಪಾರವಾದದ್ದು.'

ಅದೇ ಸಮಯಕ್ಕೆ ಸರಿಯಾಗಿ ರುಕ್ಮಿಣಿಯೂ ಅಲ್ಲಿಗೆ ಬಂದಳು. ವಕೀಲರನ್ನು ನೋಡುತ್ತಿದ್ದಂತೆಯೇ ಹೇಳಿದಳು– 'ನೋಡಪ್ಪ ಽ ನೋಡು, ಇವಳು ಮಂಸಾರಾಮನೇ ಹೌದೊ ಅಲ್ಲವೋ, ಹೇಳು. ಮತ್ತೆ ನೂರು ಜನ ನೂರು ಹೇಳಲಿ, ನಾನು ಹೇಳ್ತೀನಿ. ಅವನೇ ಮತ್ತೆ ಹುಟ್ಟಿ ಬಂದಿದ್ದಾನೆ, ಮಂಸಾರಾಮನೇ ಇವಳು. ಒಂದು ವರ್ಷವಾಯಿತಲ್ಲವೆ ಅವನು ಸತ್ತು ?

ವಕೀಲರು : 'ತಂಗಮ್ಮ, ಇವಳ ಒಂದೊಂದು ಅಂಗವೂ ಅವನದ್ದೇ. ಆ ದೇವರು ನನ್ನ ಮಂಸಾರಾಮನನ್ನು ನನಗೆ ಕೊಟ್ಟುಬಿಟ್ಟ. (ಮಗುವಿಗೆ) ಅಲ್ಲವೇನೆ ? ನೀನು ಮಂಸಾರಾಮ ತಾನೇ ? ನನ್ನನ್ನು ಬಿಟ್ಟು ಹೋಗುವ ಮಾತನ್ನು ಆಡಬಾರದು ನೀನು. ನಿನ್ನನ್ನು ಎಳೆದುಕೊಂಡು ಬರ್ತೀನಿ. ಎಷ್ಟು ಕಠೋರವಾಗಿ ಓಡಿಹೋಗಿದ್ದೆ ನೀನು ? ಕೊನೆಗೂ ನಿನ್ನನ್ನು ಕರೆದುಕೊಂಡು ಬಂದೆನೋ ಇಲ್ಲವೊ ? ಹೇಳಿದ್ದೀನಿ, ನನ್ನನ್ನು ಬಿಟ್ಟು ಹೋಗುವ ಮಾತನ್ನು ಆಡೀಯಾ ನೀನು. ಇಲ್ಲಿ ನೋಡು ತಂಗಮ್ಮ, ಹೇಗೆ ಪಿಳಿ–ಪಿಳಿ ಅಂತ ನೋಡ್ತಿದ್ದಾಳೆ.'

ಆ ಕ್ಷಣ ವಕೀಲರು ಪುನಃ ಅಭಿಲಾಷೆಗಳ ಮಹಲನ್ನು ಕಟ್ಟಲು ಆರಂಭಿಸಿದರು. ಮೋಹ ಅವರನ್ನು ಮತ್ತೆ ಮತ್ತೆ ಪ್ರಪಂಚದ ಕಡೆ ಆಕರ್ಷಿಸುತ್ತಿತ್ತು. ಮಾನವ ಜೀವನವೇ ! ನೀನು ಎಷ್ಟು ಕ್ಷಣಭಂಗುರವೋ ಅಷ್ಟೇ ದೀರ್ಘಾಯುಗಳಾಗಿವೆ ನಿನ್ನ ಕಲ್ಪನೆಗಳು ! ಪ್ರಪಂಚದಿಂದ ವಿರಕ್ತರಾಗುತ್ತಿದ್ದು, ಹಗಲು–ರಾತ್ರಿ ಮೃತ್ಯುವನ್ನು ಆಹ್ವಾನಿಸುತ್ತಿದ್ದ ತೋತಾರಾಮರು ಈಗ ಹುಲ್ಲು ಕಡ್ಡಿಯ ನೆರವಿನಿಂದ ದಡವನ್ನೇರಲು ತಮ್ಮೆಲ್ಲ ಶಕ್ತಿ–ಸಾಮರ್ಥ್ಯದಿಂದ ಕೈ–ಕಾಲು ಆಡಿಸುತ್ತಿದ್ದಾರೆ.

ಆದರೆ ಹುಲ್ಲುಕಡ್ಡಿಯನ್ನು ಹಿಡಿದು ಯಾರಾದರೂ ದಡವನ್ನು ಮುಟ್ಟಿದ್ದಾರೇನು ?

# ಹದಿನೈದು

ನಿರ್ಮಲಾಳಿಗೆ ತನ್ನ ಮನೆಯ ಸಮಸ್ಯೆಗಳಿಂದಲೇ ಬಿಡುಗಡೆಯಿರಲಿಲ್ಲವಾದರೂ ಕೃಷ್ಣಾಳ ಮದುವೆಯ ಸಂದೇಶ ಬಂದ ಮೇಲೆ ಏನೇ ಮಾಡಿದರೂ ಅವಳಿಂದ ಇರಲಾಗಲಿಲ್ಲ. ಆಕೆಯ ತಾಯಿ ಆಗ್ರಹಪೂರ್ವಕವಾಗಿ ಬರುವಂತೆ ಆಹ್ವಾನಿಸಿದ್ದಳು. ಅದರ ಜತೆಗೆ ಇದ್ದ ಇನ್ನೊಂದು ಆಕರ್ಷಣೆಯೆಂದರೆ ನಿರ್ಮಲಾಳ ಮದುವೆ ಮೊದಲು ಗೊತ್ತಾಗಿದ್ದ ಮನೆಯಲ್ಲೇ ಕೃಷ್ಣಾಳ ಮದುವೆಯೂ ನಿಶ್ಚಯವಾಗಿತ್ತು. ಆಶ್ಚರ್ಯದ ಸಂಗತಿಯೆಂದರೆ ಈಗ ಆ ಮನೆಯವರು ಯಾವುದೇ ಬಗೆಯ ವರದಕ್ಷಿಣೆಯನ್ನು ತೆಗೆದು ಕೊಳ್ಳದೆ ಮದುವೆ ಮಾಡಿಕೊಳ್ಳಲು ಸಿದ್ಧರಾಗಿದ್ದರು. ಕೃಷ್ಣಾ ಬಗ್ಗೆ ನಿರ್ಮಲಾಳಿಗೆ ತುಂಬಾ ಚಿಂತೆಯಾಗಿತ್ತು. ತನ್ನಂತೆಯೇ ಅವಳನ್ನು ಯಾರದ್ದೋ ತಲೆಗೆ ಕಟ್ಟಲಾಗುವುದೇನೊ ಎಂದು ಚಡಪಡಿಸುತ್ತಿದ್ದಳು. ಕೃಷ್ಣಾಳಿಗೆ ಒಳ್ಳೆಯ ಕಡೆ ಗಂಡನ್ನು ಹುಡುಕಲು ತನ್ನ ತಾಯಿಗೆ ನೆರವಾಗಲು ಆಕೆ ತುಂಬಾ ಇಚ್ಛಿಸುತ್ತಿದ್ದಳು. ಆದರೆ ಇತ್ತ ವಕೀಲರ ಕೈಗಳು ಕೈ ಕಟ್ಟಿ ಹೋಗಿದ್ದರಿಂದ ಹಾಗೂ ಮನೆ ಹರಾಜಿಗೆ ಬಂದದ್ದರಿಂದ ಅವಳ ಕೈಗಳೂ ಬರಿದಾಗಿದ್ದವು. ಇಂಥ ಅವಸ್ಥೆಯಲ್ಲಿ ತಾಯಿಯಿಂದ ಬಂದ ಸಂದೇಶ ಅವಳ ಮನಸ್ಸಿಗೆ ನೆಮ್ಮದಿ ತಂದಿತು. ಹೊರಡಲು ಸಿದ್ಧಳಾದಳು. ವಕೀಲರು ಸ್ಟೇಷನ್ನಿನವರೆಗೂ ಬಂದು ಬಿಟ್ಟು ಹೋದರು. ಪುಟ್ಟ ಮಗಳ ಮೇಲೆ ಅವರಿಗೆ ತುಂಬಾ ಪ್ರೇಮವಿತ್ತು. ಅವಳನ್ನು ಬಿಟ್ಟು ಇರುತ್ತಿರಲಿಲ್ಲ. ನಿರ್ಮಲಾಳ ಜತೆ ಹೊರಡುವುದಕ್ಕೂ ಇವರು ತಯಾರಾದರು. ಆದರೆ ಮದುವೆಗೆ ಒಂದು ತಿಂಗಳ ಮೊದಲು ಗಂಡ ಅತ್ತೆ ಮನೆಗೆ ಹೋಗಿ ಕೂಡುವುದು ನಿರ್ಮಲಾಳಿಗೆ ಸರಿಕಾಣಲಿಲ್ಲ.

ನಿರ್ಮಲಾ ತನ್ನ ತಾಯಿಗೆ ಈವರೆಗೆ ತನ್ನ ಬದುಕಿನ ದುಃಖದ ಕತೆಯನ್ನು ಹೇಳಿರಲಿಲ್ಲ. ಆಗಿ ಹೋಗಿರುವುದನ್ನು ಮತ್ತೆ ನೆನಪಿಸಿಕೊಂಡು ಅಳುವುದು, ಅತ್ತು ತಾಯಿಗೂ ಅಳುವಂತೆ ಮಾಡುವುದರಲ್ಲಿ ಯಾವ ಸಾರ್ಥಕತೆಯಿದೆ ಎಂದು ಆಕೆ ಯೋಚಿಸಿದಳು. ಹೀಗಾಗಿ ನಿರ್ಮಲಾ ತುಂಬಾ ಸಂತೋಷದಿಂದ ಇದ್ದಾಳೆ ಎಂದೇ ಆಕೆ ತಿಳಿದುಕೊಂಡಿದ್ದಳು. ಆದರೆ ಈಗ ನಿರ್ಮಲಾಳ ಮುಖ ನೋಡಿದ ಮೇಲೆ ಅವಳ ಕರುಳು ಕಿತ್ತು ಬಂದಂಥ ಅನುಭವವಾಯಿತು, ಹೃದಯದ ಮೇಲೆ ಆಘಾತವಾದಂಥ ಅನುಭವವಾಯಿತು. ಗಂಡನ ಮನೆಯಿಂದ ಬರುವ ಹೆಣ್ಣು ಮಕ್ಕಳು ಹೀಗೆ ಒಣಗಿದ ಹುಣಸೇಕಾಯಿಯಂತೆ ತೌರಿಗೆ ಬರುತ್ತಾರೇನು ? ಅದರಲ್ಲೂ ನಿರ್ಮಲಾಳಂಥ ಹುಡುಗಿಯರು ಬಿದಿಗೆ ಚಂದ್ರನಂತೆ ಗಂಡನ ಮನೆಗೆ ಹೋಗಿದ್ದನ್ನು, ಪೂರ್ಣಚಂದ್ರನಂತೆ ತೌರಿಗೆ ಬಂದ್ದದನ್ನು ಆಕೆ ನೋಡಿದ್ದಳು. ನಿರ್ಮಲಾ ಮೈ–ಕೈ ತುಂಬಿಕೊಂಡು ದಷ್ಟಪುಷ್ಟವಾಗಿರಬಹುದು, ಅವಳ ಮೈ

ಕಾಂತಿಯೇ ಬದಲಾಗಿರಬಹುದು, ಅವಳ ಅಂಗಾಂಗಗಳಲ್ಲಿನ ಶೋಭೆ ಇಲ್ಲಿದ್ದದ್ದಕ್ಕಿಂತಲೂ ಬೇರೆಯೇ ಆಗಿರಬಹುದು–ಎಂದೆಲ್ಲ ಆಕೆ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿದ್ದಳು. ಆದರೆ ಈಗ ನೋಡಿದರೆ ಅವಳು ಮೊದಲಿದ್ದದ್ದರ ಅರ್ಧದಷ್ಟೂ ಇಲ್ಲ. ಅವಳಲ್ಲಿ ಯೌವನದ ಚಂಚಲತೆಯಾಗಲಿ, ನೋಡಿದ ಕೂಡಲೇ ಹೃದಯವನ್ನು ಮೋಹಿಸುವ ನಳನಳಿಸುವ ಸೌಂದರ್ಯವಾಗಲಿ ಇರಲಿಲ್ಲ. ವಿಲಾಸಮಯ ಜೀವನದಿಂದ ಲಭ್ಯವಾಗುವ ಕಮನೀಯತೆಯಾಗಲಿ, ಸೌಕುಮಾರ್ಯವಾಗಲಿ ಅವಳಲ್ಲಿ ಹೆಸರಿಗೂ ಇರಲಿಲ್ಲ. ಮುಖ ಬಿಳಿಚಿಕೊಂಡಿತ್ತು, ಕಳಾಹೀನವಾಗಿತ್ತು, ಅಂಗಾಂಗಗಳು ಶಿಥಿಲಗೊಂಡಿದ್ದವು. ಹತ್ತೊಂಬತ್ತನೆಯ ವಯಸ್ಸಿಗೇ ಆಕೆ ಮುದುಕಿಯಾಗಿದ್ದಳು. ತಾಯಿ–ಮಕ್ಕಳು ಅತ್ತು–ಅತ್ತು ಸಾಕಾಗಿ ಸುಮ್ಮನಾದ ಮೇಲೆ ತಾಯಿ ಕೇಳಿದಳು– 'ಅಲ್ಲವೇ, ನಿನ್ನ ಗಂಡನ ಮನೆಯಲ್ಲಿ ಊಟಕ್ಕೆ ಇತ್ತೋ ಇಲ್ಲವೋ ನಿನಗೆ ? ಇಲ್ಲಿದ್ದಾಗಲೇ ಎಷ್ಟೋ ಚೆನ್ನಾಗಿದ್ದೆ ; ಅಲ್ಲಿ ಏನು ಕಷ್ಟವಿತ್ತು ನಿನಗೆ ?'

ಕೃಷ್ಣಾ ನಕ್ಕು ಹೇಳಿದಳು : 'ಅಲ್ಲಿ ನೀನು ಮನೆ ಯಜಮಾನಿ ತಾನೇ ? ಮನೆ ಯಜಮಾನಿ ಅಂದ ಮೇಲೆ ಪ್ರಪಂಚದ ಎಲ್ಲ ಚಿಂತೆಗಳೂ ಇರುತ್ತವೆ. ಊಟ ಮಾಡುವುದಕ್ಕೆ ಸಮಯ ಎಲ್ಲಿ ಸಿಗಬೇಕು ?'

ನಿರ್ಮಲಾ : 'ಹಾಗೇನಿಲ್ಲ ಅಮ್ಮ, ಅಲ್ಲಿಯ ನೀರು ನನಗೆ ಹಿಡಿಸುವುದಿಲ್ಲ. ಆರೋಗ್ಯ ಅಷ್ಟ ಕಷ್ಟೇ ಇರುತ್ತೆ.'

ತಾಯಿ : 'ವಕೀಲರು ಮದುವೆಗೆ ಬರುತ್ತಾರಲ್ಲ, ಆಗ ಕೇಳ್ತೀನಿ, ಮಲ್ಲಿಗೆ ಹೂವಿನಂಥ ನಮ್ಮ ಈ ಹುಡುಗೀನ ಕರೆದುಕೊಂಡು ಹೋಗಿ ಯಾವ ಗತಿ ಮಾಡಿದ್ದೀರಿ ನೋಡಿ ಅಂತ. ಆಯಿತು, ನೀನು ಹಣ ಏಕೆ ಕಳಿಸಿದ್ದೆ ನನಗೆ ? ನಾನು ಯಾವತ್ತೂ ಕೇಳಿರಲಿಲ್ಲ. ನೂರು ಕಷ್ಟ ಬಂದವು, ಹೋದವು. ಆದರೆ ಮಗಳ ಕೈಯಿಂದ ಹಣ ತೆಗೆದುಕೊಳ್ಳಬೇಕಾದಂಥ, ಅದರಿಂದ ಹೊಟ್ಟೆ ತುಂಬಿಕೊಳ್ಳುವಂಥಾದ್ದೇನಿರಲಿಲ್ಲ ನನಗೆ.'

ನಿರ್ಮಲಾ ಆಶ್ಚರ್ಯದಿಂದ ಕೇಳಿದಳು– 'ಹಣ ಯಾರು ಕಳಿಸಿದ್ದರು ? ನಾನಂತೂ ಕಳಿಸಿರಲಿಲ್ಲವಲ್ಲ ?'

ತಾಯಿ : 'ನೀನು ಐನೂರು ರೂಪಾಯಿ ಕಳಿಸಿರಲಿಲ್ಲವೇನು ?'

ಕೃಷ್ಣಾ : 'ನೀನು ಕಳಿಸಿರಲಿಲ್ಲ ಅಂದ್ರೆ ಆಕಾಶದಿಂದ ಅದಾಗಿ ಅದೇನೆ ಬಿತ್ತೇನು ? ಅದರಲ್ಲಿ ನಿನ್ನ ಹೆಸರು ಸ್ಪಷ್ಟವಾಗಿ ಬರೆದಿತ್ತು. ಅಂಚೆ ಮುದ್ರೆಯೂ ನಿಮ್ಮ ಊರಿನದೇ.'

ನಿರ್ಮಲಾ : 'ನಿನ್ನಾಣೆ ಹೇಳ್ತೀನಮ್ಮ, ನಾನು ಹಣವನ್ನು ಕಳಿಸಿಲ್ಲ. ನನ್ನ ಮನೆಯಲ್ಲಿ ಕೈಗೆ ಬಂದ ಮಗ ತೀರಿಹೋದ ಮೇಲಂತೂ ನನ್ನ ಗಂಡ ಆಫೀಸಿಗೆ ಹೋಗಿಲ್ಲ. ನನ್ನ ಕೈಯೇ ಬರಿದಾಗಿತ್ತು. ನನಗೆ ಹಣ ಎಲ್ಲಿಂದ ಬರ್ಬೇಕು ?'

ತಾಯಿ : 'ಇದು ಆಶ್ಚರ್ಯವಲ್ಲದೆ ಇನ್ನೇನು ? ನಿಮ್ಮ ಊರಲ್ಲಿ ನಮ್ಮ ನೆಂಟರಿಷ್ಟರೂ ಯಾರಿಲ್ಲ. ನಿನಗೆ ಗೊತ್ತಾಗದಂತೆ ವಕೀಲರು ಕಳಿಸಿದ್ದರೂ ಕಳಿಸಿರಬಹುದಾ ?'

ನಿರ್ಮಲಾ : 'ಇಲ್ಲಮ್ಮ, ನನಗೆ ಹಾಗೆ ಅನ್ನಿಸುವುದಿಲ್ಲ.'

ತಾಯಿ : 'ಇದನ್ನು ಪತ್ತೆ ಮಾಡಲೇಬೇಕು. ಆದರೆ ಆ ಹಣವನ್ನೆಲ್ಲ ನಾನು ಕೃಷ್ಣಾಳ ಬಟ್ಟೆ ಒಡವೆಗೆ ಅಂತ ಖರ್ಚು ಮಾಡಿಬಿಟ್ಟೆ'

ಅಷ್ಟರಲ್ಲಿ ಇಬ್ಬರ ಹುಡುಗರ ಮಧ್ಯೆ ಯಾವುದೋ ವಿಷಯಕ್ಕೆ ವಾದ ಶುರುವಾಯಿತು. ಕೃಷ್ಣಾ ಅದನ್ನು ಬಗೆಹರಿಸಲು ಅಲ್ಲಿಗೆ ಹೋದಳು. ನಿರ್ಮಲಾ ತಾಯಿಯನ್ನು ಕೇಳಿದಳು– 'ಈ ಮದುವೆ ವಿಚಾರ ಕೇಳಿ ನನಗೆ ತುಂಬಾ ಆಶ್ಚರ್ಯವಾಯಿತು. ಇದು ಹೇಗಾಯಿತು ಅಮ್ಮ ?'

ತಾಯಿ : 'ಇಲ್ಲೊ ಅಷ್ಟೆ. ಈ ವಿಷಯ ಕೇಳಿದವರೆಲ್ಲ ಆಶ್ಚರ್ಯವೋ ಆಶ್ಚರ್ಯಪಡುತ್ತಿದ್ದಾರೆ. ಅವತ್ತು ನಿನ್ನ ಮದುವೆ ಇದೇ ಮನೇಲಿ ನಿಶ್ಚಯವಾಗಿತ್ತು. ಆದರೆ ಅವರ ಹಣದ ಲೋಭದಿಂದಾಗಿ ಕಡಿದು ಹೋಯ್ತು. ಈಗ ಅವರೇ ಏನನ್ನೂ ತೆಗೆದುಕೊಳ್ಳದ ಹಾಗೆ ಮದುವೆ ಮಾಡಿಕೊಳ್ಳಲು ಹೇಗೆ ಒಪ್ಪಿ ಮುಂದೆ ಬಂದರು ಅನ್ನುವುದೇ ಅರ್ಥವಾಗುತ್ತಿಲ್ಲ. ಅವರೇ ಮೊದಲು ಪತ್ರ ಬರೆದರು. ನಾನು ನನ್ನ ಹತ್ತಿರ ಕೊಡೋಕೆ–ತಗೊಳ್ಳೋಕೆ ಅಂತ ಏನಿಲ್ಲ, ಕನ್ಯೆಯನ್ನು ಮಾತ್ರ ಧಾರೆ ಎರೆದುಕೊಡಬಲ್ಲೆ ಅಂತ ಸ್ಪಷ್ಟವಾಗಿ ಉತ್ತರ ಬರೆಸಿದೆ.'

ನಿರ್ಮಲಾ : 'ಅದಕ್ಕೇನಾದರೂ ಉತ್ತರ ಬಂತೇನು ?'

ತಾಯಿ : 'ಪಂಡಿತರೇ ಪತ್ರವನ್ನು ತೆಗೆದುಕೊಂಡು ಹೋಗಿದ್ದರು. ಈ ಸಾರಿ ಅವರು ಏನನ್ನೂ ತೆಗೆದುಕೊಳ್ಳಲು ಇಚ್ಛಿಸುತ್ತಿಲ್ಲ, ಈ ಮೊದಲು ಆದದ್ದಕ್ಕೆ ಅವರಿಗೆ ಪಶ್ಚಾತ್ತಾಪವೂ ಆಗಿದೆ ಅಂತ ಅವರೇ ಹೇಳುತ್ತಿದ್ದರು. ಅವರು ಇಷ್ಟು ಉದಾರವಾಗಿ ನಡೆದುಕೊಳ್ಳುತ್ತಾರೆ ಅಂತ ನನಗೂ ನಂಬಿಕೆಯಿರಲಿಲ್ಲ. ಅವರ ಮಗ ತುಂಬಾ ಒಳ್ಳೆಯವರಂತೆ. ಅವರು ತನ್ನ ತಂದೆಗೆ ಹೇಳಿ ಒಪ್ಪಿಸಿದ್ದಾರಂತೆ.'

ನಿರ್ಮಲಾ : 'ಆಗ ಆ ಮನುಷ್ಯನೂ ವರದಕ್ಷಿಣೆ ಅಂತ ಆಸೆ ಪಟ್ಟಿರಲಿಲ್ಲ ವೇನು ?'

ತಾಯಿ : 'ಹೌದೌದು, ಆದರೆ ಈಗ ಆತ ವರದಕ್ಷಿಣೆ ಮಾತು ಎತ್ತಿದರೆ ಸಾಕು ಉರಿದು ಬೀಳ್ತಾರೆ ಅಂತ ಪಂಡಿತರು ಹೇಳ್ತಿದ್ದರು. ಈ ಮನೆಯಲ್ಲಿ ತಾನು ಮದುವೆ ಮಾಡಿಕೊಳ್ಳಲಿಲ್ಲವಲ್ಲ ಅಂತ ಪಶ್ಚಾತ್ತಾಪ ಪಡುತ್ತಿದ್ದರಂತೆ. ಹಣಕ್ಕಾಗಿ ಈ ಸಂಬಂಧವನ್ನು ಬಿಟ್ಟರು, ಬೇರೆ ಕಡೆ ಕೈ ತುಂಬ ಹಣ ಸಿಕ್ಕಿತು, ಆದರೆ ಹುಡುಗಿ ಇಷ್ಟವಾಗಲಿಲ್ಲ ವಂತೆ.'

ತನ್ನನ್ನು ನಿಂದಿಸಿ, ತನ್ನ ತಂಗಿಯನ್ನು ಉದ್ಧಾರ ಮಾಡುತ್ತಿರುವ ಆ ಪುರುಷನನ್ನು ನೋಡಬೇಕೆಂಬ ಆಸೆ ನಿರ್ಮಲಾಳ ಮನಸ್ಸಿನಲ್ಲಿ ತುಂಬಿ ಬಂತು. ಆತ ಪ್ರಾಯಶ್ಚಿತ್ತವನ್ನೇ

ಮಾಡಿಕೊಳ್ಳುತ್ತಿರಬಹುದು. ಆದರೆ ಈ ರೀತಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ತಯಾರಿರುವಂಥವರು ಎಷ್ಟು ಜನ ಇದ್ದಾರೆ ? ಆತನೊಡನೆ ಮಾತನಾಡಲು, ನಮ್ರವಾದ ಶಬ್ದಗಳಲ್ಲೇ ಆತನನ್ನು ಛೇಡಿಸಲು, ತನ್ನ ಅನುಪಮ ಕಾಂತಿಯನ್ನು ತೋರಿಸಲು ಚಡಪಡಿಸತೊಡಗಿದಳು. ರಾತ್ರಿ ಅಕ್ಕತಂಗಿಯರು ಒಂದೇ ಕೋಣೆಯಲ್ಲಿ ಮಲಗಿದರು. ಮೊಹಲ್ಲಾದಲ್ಲಿ ಯಾವ ಯಾವ ಹುಡುಗಿಯರ ಮದುವೆಯಾಯಿತು, ಯಾರ್‍ಯಾರಿಗೆ ಮಕ್ಕಳಾದವು, ಯಾರ್‍ಯಾರು ತಾವು ಅವರು ಇಚ್ಛಿಸಿದಂಥ ಗಂಡುಗಳನ್ನು ಪಡೆದರು. ಯಾರ್‍ಯಾರ ಮದುವೆಗಳು ವೈಭವವಾಗಿ ನಡೆದುವು, ಯಾರ್‍ಯಾರು ಎಂಥೆಂಥ ಒಡವೆ–ವಸ್ತ್ರಗಳನ್ನು ಕೊಟ್ಟರು, ತೆಗೆದುಕೊಂಡರು, ಇವೇ ಮುಂತಾದ ವಿಷಯಗಳ ಬಗ್ಗೆ ಅಕ್ಕ–ತಂಗಿ ಬಹಳ ಹೊತ್ತಿನವರೆಗೂ ಮಾತನಾಡುತ್ತಿದ್ದರು. ಅಕ್ಕನ ಮನೆಯ ಸ್ಥಿತಿ–ಗತಿಯ ಬಗ್ಗೆ ಕೇಳಲು ಕೃಷ್ಣಾ ಮತ್ತೆ ಮತ್ತೆ ಉತ್ಸಾಹ ತೋರಿದಳಾದರೂ ನಿರ್ಮಲಾ ಆ ಮಾತಿನ ದಿಕ್ಕನ್ನೇ ಬದಲಾಯಿಸುತ್ತಿದ್ದಳು. ಆಕೆ ಕೇಳಲಿರುವ ವಿಷಯಗಳಿಗೆ ಉತ್ತರ ನೀಡಲು ತನಗೆ ಸಂಕೋಚವಾಗುವುದು ಎಂದು ಆಕೆಗೆ ಗೊತ್ತಿತ್ತು. ಆದರೆ ಒಮ್ಮೆ ಗಟ್ಟಿ ಮನಸ್ಸು ಮಾಡಿ ಕೃಷ್ಣಾ ಕೇಳಿಯೇಬಿಟ್ಟಳು– 'ಭಾವ ಮದುವೆಗೆ ಬರ್‍ತಾರೆ ತಾನೇ ?'

ನಿರ್ಮಲಾ : 'ಬನ್ನಿ ಅಂತ ಹೇಳಿದ್ದೀನಿ.'

ಕೃಷ್ಣಾ : 'ಈಗ ನಿನ್ನ ಕಂಡರೆ ಸಮಾಧಾನವಾಗಿದ್ದಾರೆಯೋ, ಇಲ್ಲ, ಈಗಲೂ ಮೊದಲಿನ ಸ್ಥಿತಿಯೇ ಇದೆಯೋ ? ಎರಡನೆಯ ಮದುವೆ ಮಾಡಿಕೊಂಡವರು ತಮ್ಮ ಹೆಂಡತಿಯನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಾರೆ ಅಂತ ನಾನು ಕೇಳಿದ್ದೀನಿ. ಆದರೆ ಇಲ್ಲಿ ಅದಕ್ಕೆ ವಿರುದ್ಧ. ಅಲ್ಲ, ಅಷ್ಟಕ್ಕೂ ಅವರು ಯಾವ ವಿಚಾರಕ್ಕೆ ಕೋಪ ಮಾಡಿಕೊಳ್ತಾರೆ ?'

ನಿರ್ಮಲಾ : 'ಬೇರೆಯವರ ಮನಸ್ಸಿನಲ್ಲಿರುವುದು ನನಗೆ ಹೇಗೆ ಗೊತ್ತಾಗುತ್ತೆ ?'

ಕೃಷ್ಣಾ : 'ನಿನ್ನ ವರ್ತನೆಯಿಂದಲೂ ಅವರು ಉರಿದು ಬೀಳ್ತಾ ಇರಬಹುದು.' ನೀನು ಇಲ್ಲಿಂದ ಹೋಗುವಾಗಲೇ ಸಿಟ್ಟಿನಿಂದಿದ್ದೆ. ಅಲ್ಲಿಗೆ ಹೋದ ಮೇಲೆ ಅವರಿಗೆ ಅದು ಇದು ಅಂತ ಅಂದಿರಬಹುದು.'

ನಿರ್ಮಲಾ : 'ಹಾಗಲ್ಲ ಕೃಷ್ಣಾ, ನಾನು ಬೇಕಾದರೆ ಪ್ರಮಾಣ ಮಾಡಿ ಹೇಳ್ತೀನಿ. ಅವರ ಬಗ್ಗೆ ನನ್ನ ಮನಸ್ಸಿನಲ್ಲಿ ಯಾವ ದುರ್ಭಾವನೆಯೂ ಇಲ್ಲ. ನನ್ನ ಕೈಲಾದಷ್ಟು ಸೇವೆಯನ್ನು ಮಾಡ್ತಿದ್ದೀನಿ. ಅವರ ಜಾಗದಲ್ಲಿ ಬೇರೆ ಯಾವ ದೇವತೆ ಇದ್ದಿದ್ದರೂ ಇದಕ್ಕಿಂತಲೂ ಹೆಚ್ಚಾಗಿ ನನ್ನಿಂದೇನನ್ನೂ ಮಾಡಲು ಆಗುತ್ತಿರಲಿಲ್ಲ. ಅವರೂ ನನ್ನನ್ನು ಪ್ರೀತಿಸುತ್ತಾರೆ. ಸದಾಕಾಲ ನನ್ನನ್ನು ತಮ್ಮ ಕಣ್ಣುಗಳಲ್ಲಿಟ್ಟುಕೊಂಡಿರುತ್ತಾರೆ. ಆದರೆ ಅವರ ಮತ್ತು ನನ್ನ ಕೈಗಳಾಚೆಗಿರುವುದರ ಬಗ್ಗೆ ಅವರು ತಾನೆ ಏನು ಮಾಡಬಲ್ಲರು, ನಾನೂ ತಾನೇ ಏನು ಮಾಡಬಲ್ಲೆ ? ಅವರು ಯುವಕರಾಗಲು, ನಾನು ಮುದುಕಿಯಾಗಲು ಸಾಧ್ಯವಿಲ್ಲವಲ್ಲ ? ಯೌವನದ ಉನ್ಮಾದವನ್ನು ಪಡೆದುಕೊಳ್ಳಲು ಅವರು ಅದೆಷ್ಟೋ

ರಸಗಳನ್ನು, ಭಸ್ಮಗಳನ್ನು ಸೇವಿಸುತ್ತಿರುತ್ತಾರೆ. ನಾನು ಮುದುಕಿಯಾಗಲು ಹಾಲು–ತುಪ್ಪ ಎಲ್ಲವನ್ನೂ ಬಿಟ್ಟಿದ್ದೇನೆ. ನಾನು ತೆಳುವಾಗಿರುವುದರಿಂದ ನನ್ನ ವಯಸ್ಸಿಗೂ ಅವರ ವಯಸ್ಸಿಗೂ ಇರುವ ಅಂತರ ಕೊಂಚ ಕಡಿಮೆಯಾದಂತೆ ಕಾಣಿಸುವುದೇನೋ ಎಂದು ನನಗೆ ಅನ್ನಿಸುತ್ತದೆ. ಆದರೆ ಪೌಷ್ಟಿಕ ಪದಾರ್ಥಗಳನ್ನು ತಿನ್ನುವುದರಿಂದ ಅವರಿಗೆ, ಉಪವಾಸವಿರುವುದರಿಂದ ನನಗೆ ಯಾವ ಲಾಭವೂ ಆಗಿಲ್ಲ. ಮಂಸಾರಾಮ ತೀರಿಹೋದನಂತರವಂತೂ ಅವರ ದೇಹಸ್ಥಿತಿ ಇನ್ನೂ ಕೆಟ್ಟು ಹೋಗಿದೆ.'

ಕೃಷ್ಣಾ : 'ಮಂಸಾರಾಮನನ್ನು ನೀನು ತುಂಬ ಪ್ರೀತಿಸುತ್ತಿದ್ದೆಯೇನು ?'

ನಿರ್ಮಲಾ : 'ಆ ಹುಡುಗನೇ ಆ ರೀತಿ ಇದ್ದ. ಅವನನ್ನು ಯಾರೇ ನೋಡಿದರೂ ಅವರು ಅವನನ್ನು ಪ್ರೀತಿಸುತ್ತಿದ್ದರು. ಅವನಿಗಿದ್ದಂಥ ಬಟ್ಟಲುಗಣ್ಣುಗಳನ್ನು ನಾನು ಇನ್ನೊಬ್ಬನಲ್ಲಿ ನೋಡಿಲ್ಲ. ಕಮಲದಂತೆ ಅವನ ಮುಖ ಯಾವಾಗಲೂ ಅರಳಿರುತ್ತಿತ್ತು. ಅವನು ಎಂಥ ಧೈರ್ಯಶಾಲಿಯಾಗಿದ್ದನೆಂದರೆ ಸಮಯ ಬಂದರೆ ಬೆಂಕಿಗೆ ಧುಮುಕಲು ಸಹ ಸಿದ್ಧವಿರುತ್ತಿದ್ದ. ಕೃಷ್ಣಾ, ನಿನ್ನ ಜತೆ ನಾನು ನಿಜ ಹೇಳ್ತಿದ್ದೀನಿ, ಅವನು ನನ್ನ ಹತ್ತಿರ ಬಂದು ಕುಳಿತರೆ ನನ್ನನ್ನು ನಾನೇ ಮರೆತು ಬಿಡುತ್ತಿದ್ದೆ. ಆತ ನನ್ನ ಮುಂದೆಯೇ ಕುಳಿತಿರಲಿ, ನಾನು ಅವನ ಮುಖವನ್ನೇ ನೋಡುತ್ತಿರಬೇಕು ಎಂದನ್ನಿಸುತ್ತಿತ್ತು. ನನ್ನ ಮನಸ್ಸಿನಲ್ಲಿ ಪಾಪವಿರಲಿಲ್ಲ. ಒಂದು ಕ್ಷಣಕ್ಕಾದರೂ ನಾನು ಆತನನ್ನು ಬೇರೆ ದೃಷ್ಟಿಯಿಂದ ನೋಡಿದ್ದರೆ ನನ್ನ ಕಣ್ಣುಗಳು ಹಿಂಗಿ ಹೋಗಲಿ. ಆದರೆ ಏಕೋ ಏನೋ ಆತ ನನ್ನ ಪಕ್ಕದಲ್ಲಿ ಕುಳಿತಿರುವಾಗ ನನ್ನ ಎದೆ ಉಲ್ಲಾಸದಿಂದ ಬೀಗುತ್ತಿತ್ತು. ಇದಕ್ಕಾಗಿಯೇ ನಾನು ಓದುವ ನೆಪ ಮಾಡಿದೆ. ಈ ನೆಪವಿಲ್ಲದೆ ಹೋಗಿದ್ದಿದ್ದರೆ ಆತ ಮನೆಯನ್ನು ಸೇರುತ್ತಿರಲೇ ಇಲ್ಲವಲ್ಲ ! ಆತನ ಮನಸ್ಸಿನಲ್ಲಿ ಒಂದು ವೇಳೆ ಪಾಪದೃಷ್ಟಿಯಿದ್ದಿದ್ದೇ ಆದರೆ ಅದಕ್ಕಾಗಿ ಏನೆಲ್ಲ ಬೇಕಾದರೂ ಮಾಡಲು ನಾನು ತಯಾರಿರುತ್ತಿದ್ದೆ.'

ಕೃಷ್ಣಾ : 'ಅಕ್ಕ, ಸುಮ್ಮನಿರು, ಎಂಥ ಮಾತು ಆಡ್ತಿದ್ದೀಯಾ ನೀನು ?'

ನಿರ್ಮಲಾ : 'ಹೌದೌದು, ಈ ಮಾತುಗಳು ಕೇಳಲು ಕೆಟ್ಟದಾಗಿ ಕಾಣಿಸುತ್ತವೆ. ಇವು ಕೆಟ್ಟ ಮಾತುಗಳೂ ಹೌದು. ಆದರೆ ಮನುಷ್ಯನ ಪ್ರಕೃತಿಯನ್ನು ಬದಲಿಸಲು ಯಾರಿಂದಲೂ ಸಾಧ್ಯವಿಲ್ಲವಲ್ಲ ? ನೀನೇ ಹೇಳು– ಐವತ್ತು ವರ್ಷದ ಒಬ್ಬ ಗಂಡಸೊಂದಿಗೆ ನಿನ್ನ ಮದುವೆಯಾದರೆ ನೀನು ಏನು ಮಾಡುತ್ತೀಯಾ ಅಂತ ?'

ಕೃಷ್ಣಾ : 'ವಿಷ ಕುಡಿದು ಪ್ರಾಣ ಬಿಡ್ತೇನೆ. ಅಂಥವನ ಮುಖದರ್ಶನವನ್ನೂ ನಾನು ಮಾಡುವುದಿಲ್ಲ.'

ನಿರ್ಮಲಾ : 'ಹಾಗನ್ನು, ಆ ಹುಡುಗ ಯಾವತ್ತೂ ನನ್ನ ಕಡೆ ಕಣ್ಣು ಎತ್ತಿ ನೋಡಲಿಲ್ಲ. ಆದರೆ ಮುದುಕರು ಯಾವಾಗಲೂ ಅನುಮಾನದ ಸ್ವಭಾವದವರಾಗಿರುತ್ತಾರೆ. ನಿನ್ನ ಭಾವ ಆ ಹುಡುಗನ ಶತ್ರುವಾದರು, ಕೊನೆಗೆ ಅವನ ಪ್ರಾಣವನ್ನು ತೆಗೆದುಕೊಂಡ ಮೇಲೇ ಅವರಿಗೆ ಸಮಾಧಾನವಾದದ್ದು. ತಂದೆಗೆ ತನ್ನ ಮೇಲೆ ಅನುಮಾನವಿದೆ ಅಂತ

ಅವನಿಗೆ ಗೊತ್ತಾದ ದಿನದಿಂದಲೇ ಅವನಿಗೆ ಜ್ವರ ಬಂತು. ಬಂದ ಜ್ವರ ಅವನ ಪ್ರಾಣಕ್ಕೆ ಸಂಚಕಾರ ತಂದಿತು. ಹಾಯ್ ! ಆತನ ಕೊನೆಗಳಿಗೆಯ ಆ ದೃಶ್ಯ ನನ್ನ ಕಣ್ಣುಗಳಿಂದ ಮರೆಯಾಗಲು ಸಾಧ್ಯವಿಲ್ಲ. ನಾನು ಆಸ್ಪತ್ರೆಗೆ ಹೋಗಿದ್ದೆ. ಆತ ಜ್ವರದಿಂದ ತಲ್ಲಣಿಸಿ ಪ್ರಜ್ಞಾಹೀನನಾಗಿ ಬಿದ್ದಿದ್ದ. ಏಳಲೂ ಶಕ್ತಿಯಿರಲಿಲ್ಲ. ಅಂಥಾದ್ದರಲ್ಲೂ ನನ್ನ ಮಾತಿನ ಶಬ್ದವನ್ನು ಕೇಳುತ್ತಿದ್ದಂತೆಯೇ ಬೆಚ್ಚಿ ಎದ್ದು ಕುಳಿತ. ಕುಳಿತು 'ಅಮ್ಮ ಅಮ್ಮ' ಎನ್ನುತ್ತ ನನ್ನ ಕಾಲುಗಳ ಮೇಲೆ ಬಿದ್ದ. (ಅಳುತ್ತ) ಕೃಷ್ಣಾ, ಆಗ ನನ್ನ ಪ್ರಾಣವನ್ನು ತೆಗೆದು ಅವನಿಗೆ ಧಾರೆ ಎರೆದುಬಿಡಲೇ ಎಂದು ಮನಸ್ಸಿಗೆ ಅನ್ನಿಸಿತು. ನನ್ನ ಕಾಲುಗಳ ಮೇಲೆಯೇ ಆತ ಪ್ರಜ್ಞಾಹೀನನಾದ. ಹಾಗೆ ಪ್ರಜ್ಞಾಹೀನನಾದವನು ಮತ್ತೆ ಕಣ್ಣು ತೆರೆಯಲಿಲ್ಲ. ಡಾಕ್ಟರು ಅವನ ದೇಹಕ್ಕೆ ಹೊಸ ರಕ್ತ ಕೊಡುವ ಪ್ರಸ್ತಾಪ ಮಾಡಿದ್ದರು. ಅದನ್ನು ಕೇಳುತ್ತಲೇ ನಾನು ಓಡಿಓಡಿ ಬಂದಿದ್ದೆ. ಆದರೆ ಡಾಕ್ಟರುಗಳು ಇದಕ್ಕಾಗಿ ಸಿದ್ಧತೆ ನಡೆಸುವಷ್ಟರಲ್ಲಿ ಅವನ ಪ್ರಾಣವೇ ಹೋಗಿತ್ತು.'

ಕೃಷ್ಣಾ : 'ಹೊಸ ರಕ್ತ ಕೊಟ್ಟಿದ್ದಿದ್ದರೆ ಅವನ ಪ್ರಾಣ ಉಳಿಯುತ್ತಿತ್ತೇನು ?'

ನಿರ್ಮಲಾ : 'ಯಾರಿಗೆ ಗೊತ್ತು ? ಆದರೆ ನಾನಂತೂ ನನ್ನ ಶರೀರದಲ್ಲಿನ ರಕ್ತದ ಕೊನೆ ಹನಿಯನ್ನೂ ಸಹ ಕೊಡುವುದಕ್ಕೆ ಸಿದ್ಧಳಾಗಿದ್ದೆ ! ಅಂಥ ಸ್ಥಿತಿಯಲ್ಲೂ ಅವನ ಮುಖಮಂಡಲ ದೇದೀಪ್ಯಮಾನವಾದ ಜ್ಯೋತಿಯಂತೆ ಕಂಗೊಳಿಸುತ್ತಿತ್ತು. ಆತ ನನ್ನನ್ನು ನೋಡುತ್ತಲೇ ಓಡಿ ಬಂದು ನನ್ನ ಕಾಲುಗಳ ಮೇಲೆ ಬೀಳದೇ ಇದ್ದಿದ್ದರೆ, ಅದಕ್ಕೂ ಮುಂಚೆ ಕೊಂಚ ರಕ್ತ ಅವನ ಶರೀರವನ್ನು ಸೇರಿದ್ದಿದ್ದರೆ ಬಹುಶಃ ಬದುಕುತ್ತಿದ್ದನೋ ಏನೋ !'

ಕೃಷ್ಣಾ : 'ನೀನು ಆಗಲೇ ಅವನನ್ನು ಮಲಗಿಸಬೇಕಾಗಿತ್ತಲ್ಲವೆ ?'

ನಿರ್ಮಲಾ : 'ಅಯ್ಯೋ ಹುಚ್ಚಿ, ನಿನಗಿನ್ನೂ ಅರ್ಥವಾಗಲಿಲ್ಲ ಅಂತ ಕಾಣುತ್ತೆ ಆತ ನನ್ನ ಕಾಲುಗಳ ಮೇಲೆ ಬಿದ್ದು, ತನ್ನದು ತಾಯಿ–ಮಗನ ಪ್ರೀತಿ ಎಂಬುದನ್ನು ತೋರಿಸಿ ನನ್ನ ತಂದೆಯ ಹೃದಯಾಂತರಾಳದಿಂದ ಅನುಮಾನವನ್ನು ದೂರ ಮಾಡಲು ಪ್ರಯತ್ನಿಸುತ್ತಿದ್ದ. ಇದಕ್ಕಾಗಿಯೇ ಅವನು ಎದ್ದದ್ದು. ನನ್ನ ಮನಸ್ಸಿನ ಕ್ಲೇಶವನ್ನು ದೂರ ಮಾಡುವುದಕ್ಕಾಗಿಯೇ ಅವನು ತನ್ನ ಪ್ರಾಣ ಕೊಟ್ಟು ತನ್ನ ಮನದ ಇಚ್ಛೆಯನ್ನು ಪೂರ್ಣಗೊಳಿಸಿಕೊಂಡ. ನಿನ್ನ ಭಾವ ಅವತ್ತಿನಿಂದ ಸರಿಯಾದರು. ಈಗ ಅವರಿರುವ ಸ್ಥಿತಿಯನ್ನು ನೋಡಿದರೆ ನನಗೆ ಮರುಕವುಂಟಾಗುತ್ತದೆ, ಪುತ್ರಶೋಕ ಅವರ ಪ್ರಾಣವನ್ನು ತೆಗೆದುಕೊಂಡೇ ಶಮನವಾಗುವುದು. ನನ್ನ ಮೇಲೆ ಅನುಮಾನಪಟ್ಟು ನನಗೆ ಮಾಡಿದ ಅನ್ಯಾಯಕ್ಕಾಗಿ ಅವರು ಪಶ್ಚಾತ್ತಾಪ ಪಡುತ್ತಿದ್ದಾರೆ. ಈಗ ಅವರಿರುವ ಸ್ಥಿತಿಯನ್ನು ನೋಡಿದರೆ ನೀನು ಹೆದರಿಬಿಡ್ತೀಯಾ. ತಾತ ಆಗಿದ್ದಾರೆ, ಸೊಂಟವೂ ಬಾಗುತ್ತಿದೆ.'

ಕೃಷ್ಣಾ : 'ಈ ಮುದುಕರು ಇಷ್ಟು ಅನುಮಾನದ ಸ್ವಭಾವದವರೇಕೆ ಆಗುತ್ತಾರೆ ಅಕ್ಕ ?'

ನಿರ್ಮಲಾ : 'ಇದನ್ನು ಆ ಮುದುಕರಿಗೇ ಕೇಳು.'

ಕೃಷ್ಣಾ : 'ನನಗನ್ನಿಸುತ್ತೆ ಅವರ ಹೃದಯದಲ್ಲಿ ತಾನು ಈ ಯುವತಿಗೆ ಸಂತೋಷ ನೀಡಲಾರೆ ಎಂಬ ಭಾವನೆ ಸದಾ ಜಾಗೃತವಾಗಿರುತ್ತಿತ್ತು ಅಂತ ಕಾಣುತ್ತದೆ. ಹೀಗಾಗಿ ಸಣ್ಣ ಪುಟ್ಟ ವಿಷಯಕ್ಕೂ ಅವರ ಮನಸ್ಸಿನಲ್ಲಿ ಅನುಮಾನ ಪಡುವ ಪ್ರವೃತ್ತಿ ಜಾಗೃತವಾಗಿರುತ್ತದೆ.'

ನಿರ್ಮಲಾ : 'ನಿನಗೂ ಗೊತ್ತಿದೆಯಲ್ಲ, ನನ್ನನ್ನು ಯಾಕೆ ಕೇಳ್ತೀಯಾ ?'

ಕೃಷ್ಣಾ : 'ಈ ಕಾರಣದಿಂದಾಗಿಯೇ ಅವರು ಹೆಂಡತಿಗೆ ಹೆದರಿಯೂ ಹೆದರ್‍ತಾರೆ. ನೋಡಿದವರು ಆತ ಪ್ರೀತಿಸುತ್ತಿದ್ದಾನೆ ಅಂತ ತಿಳಿದುಕೊಳ್ಳಬಹುದು ಅಲ್ಲವೆ ?'

ನಿರ್ಮಲಾ : 'ನೀನು ಈ ವಯಸ್ಸಿಗೇ ಇಷ್ಟೆಲ್ಲ ವಿಚಾರಗಳನ್ನು ಹೇಗೆ ತಿಳಿದುಕೊಂಡೆಯೆ ? ಇದೆಲ್ಲ ಹೋಗಲಿ ಬಿಡು ಈಗ. ನಿನ್ನನ್ನು ಮದುವೆಯಾಗುತ್ತಿರುವ ಗಂಡು ನಿನಗೆ ಇಷ್ಟವಾಗಿದ್ದಾನೆ ತಾನೆ ? ಆತನ ಫೋಟೋ ನೋಡಿದ್ದೀಯಾ ?'

ಕೃಷ್ಣಾ : 'ಹೌದು, ನೋಡಿದ್ದೀನಿ, ಒಳಗಡೆಯಿದೆ, ತರಲಾ, ನೋಡ್ತೀಯಾ ?' ಒಂದು ಕ್ಷಣದಲ್ಲಿ ಕೃಷ್ಣಾ ಒಳಗಡೆ ಹೋಗಿ ಫೋಟೋ ತಂದು ನಿರ್ಮಲಾಳ ಕೈಗಿತ್ತಳು.

ನಿರ್ಮಲಾ ಮುಗುಳ್ನಗುತ್ತ ಹೇಳಿದಳು– 'ನೀನು ತುಂಬ ಅದೃಷ್ಟವಂತೆ ಕಣೆ.'

ಕೃಷ್ಣಾ : 'ಅಮ್ಮನಿಗೂ ಇವರು ತುಂಬ ಇಷ್ಟವಾದರು.'

ನಿರ್ಮಲಾ : 'ನಿನಗೆ ಇಷ್ಟವಾಗಿದ್ದಾರೋ ಇಲ್ಲವೋ ಅಷ್ಟು ಹೇಳು, ಬೇರೆಯವರ ಸುದ್ದಿ ಬೇಡ.'

ಕೃಷ್ಣಾ : (ನಾಚುತ್ತ ) ನೋಡಲಿಕ್ಕೇನೋ ಚೆನ್ನಾಗಿದ್ದಾರೆ. ಆದರೆ ಅವರ ಸ್ವಭಾವ ಹೇಗಿದೆಯೋ ಏನೋ, ದೇವರಿಗೆ ಗೊತ್ತು ! ಇಂಥ ಒಳ್ಳೆಯ ಸ್ವಭಾವದ ಹುಡುಗ ತುಂಬ ಅಪರೂಪ ಅಂತ ಪಂಡಿತರೂ ಹೇಳುತ್ತಿದ್ದರು.'

ನಿರ್ಮಲಾ : 'ಇಲ್ಲಿಂದ ನಿನ್ನ ಫೋಟಾನೂ ಕಳಿಸಿದ್ದಿರಾ ?'

ಕೃಷ್ಣಾ : 'ಕಳಿಸಿದ್ದೆವು. ಪಂಡಿತರೇ ಹೋಗುವಾಗ ತಗೊಂಡು ಹೋಗಿದ್ದರು.'

ನಿರ್ಮಲಾ : 'ಆತನಿಗೆ ಇಷ್ಟವಾಯಿತೇನು ?'

ಕೃಷ್ಣಾ : 'ಯಾರ ಮನಸ್ಸಿನಲ್ಲಿ ಏನು ಇದೆಯೋ ಯಾರಿಗೆ ಗೊತ್ತು ? ಫೋಟೋ ನೋಡಿ ಅವರು ತುಂಬ ಖುಷಿ ಪಟ್ಟರು ಅಂತ ಪಂಡಿತರು ಹೇಳುತ್ತಿದ್ದರು.'

ನಿರ್ಮಲಾ : 'ಆಯಿತು. ನಾನು ನಿನ್ನ ಮದುವೆಯಲ್ಲಿ ಏನು ಉಡುಗೊರೆ ಕೊಡಲಿ ಹೇಳು. ನೀನು ಈಗಲೇ ಹೇಳಿದರೆ ಹೊಂದಿಸಬಹುದು.'

ಕೃಷ್ಣಾ : 'ನಿನಗೆ ಇಷ್ಟ ಬಂದದ್ದನ್ನು ಕೊಡಕ್ಕ. ಅವರಿಗೆ ಪುಸ್ತಕಗಳೆಂದರೆ ಪ್ರಾಣ. ಒಳ್ಳೊಳ್ಳೆಯ ಪುಸ್ತಕಗಳನ್ನು ತರಿಸಿಕೊಡು.'

ನಿರ್ಮಲಾ : 'ನಾನು ಗಂಡಿಗೆ ಏನು ಬೇಕು ಅಂತ ಕೇಳ್ತಿಲ್ಲ, ನಿನಗೆ ಏನ್ ಬೇಕೂಂತ ಕೇಳ್ತಿದ್ದೀನಿ.'

ಕೃಷ್ಣಾ : 'ನಾನು ಹೇಳ್ತಿರುವುದು ನನಗಾಗಿಯೇ.'

ನಿರ್ಮಲಾ : '(ಫ್ರೋಟೋ ಕಡೆ ನೋಡುತ್ತ ) ಇವರು ಹಾಕಿರುವ ಬಟ್ಟೆಗಳು ಖಾದಿಯವು ಕಂಡ ಹಾಗೆ ಕಾಣುತ್ತಿವೆಯಲ್ಲ ?'

ಕೃಷ್ಣಾ : 'ಹೌದಕ್ಕ ಇವರು ಖಾದಿ ಪ್ರೇಮಿಗಳು. ಹೆಗಲ ಮೇಲೆ ಖಾದಿ ಹೊತ್ತುಕೊಂಡು ಹಳ್ಳಿ ಹಳ್ಳಿಗೆ ಹೋಗಿ ಮಾರ್ತಾ ಇದ್ದರಂತೆ. ಭಾಷಣ ಮಾಡುವುದರಲ್ಲಿ ನಿಷ್ಣಾತರಂತೆ.'

ನಿರ್ಮಲಾ : 'ಹಾಗಾದರೆ ನೀನೂ ಖಾದಿ ಉಡಬೇಕಾಗುತ್ತೆ ದಪ್ಪನೆಯ ಬಟ್ಟೆಗಳನ್ನು ಕಂಡರೇನೆ ನಿನಗಾಗುವುದಿಲ್ಲವಲ್ಲ ?'

ಕೃಷ್ಣಾ : 'ಅವರಿಗೆ ದಪ್ಪ ಬಟ್ಟೆಗಳು ಇಷ್ಟವಾಗುತ್ತವೆ ಅಂದ ಮೇಲೆ ನನಗೆ ಯಾಕೆ ಆಗುವುದಿಲ್ಲ ? ಈಗ ನಾನೂ ನೂಲು ತೆಗೆಯುವುದನ್ನೂ ಕಲಿತು ಕೊಂಡಿದ್ದೀನಿ.'

ನಿರ್ಮಲಾ : 'ಹಾಗೇನು ! ನೂಲು ತೆಗೆಯಲಿಕ್ಕೆ ಬರುತ್ತೇನು ?'

ಕೃಷ್ಣಾ : 'ಹೌದಕ್ಕ ! ಸ್ವಲ್ಪ–ಸ್ವಲ್ಪ ಬರುತ್ತೆ. ಅವರು ಇಷ್ಟರಮಟ್ಟಿಗೆ ಖಾದಿಯನ್ನು ಪ್ರೀತಿಸುತ್ತಾರೆ ಅಂದ ಮೇಲೆ ನೂಲು ತೆಗೆಯುವುದೂ ಅವರಿಗೆ ಬರಬಹುದು. ನನಗೆ ನೂಲು ತೆಗೆಯಲು ಬರಲಿಲ್ಲಾಂದರೆ ಅವರ ಮುಂದೆ ನಾಚಿಕೆಯಿಂದ ತಲೆತಗ್ಗಿಸಬೇಕಾಗುತ್ತೆ'

ಈ ರೀತಿಯಾಗಿ ಮಾತನಾಡುತ್ತ–ಆಡುತ್ತ ಅಕ್ಕ–ತಂಗಿ ಮಲಗಿಕೊಂಡರು. ರಾತ್ರಿ ಸುಮಾರು ಎರಡು ಗಂಟೆಯ ಹೊತ್ತಿನಲ್ಲಿ ಮಗು ಅತ್ತಾಗ ನಿರ್ಮಲಾಳಿಗೆ ಎಚ್ಚರವಾಯಿತು. ಮಗ್ಗಲು ನೋಡಿದರೆ ಕೃಷ್ಣಾಳ ಮಂಚ ಖಾಲಿ ಇತ್ತು. ಇಷ್ಟು ರಾತ್ರಿಯಲ್ಲಿ ಕೃಷ್ಣಾ ಎಲ್ಲಿಗೆ ಹೋದಳು ಅಂತ ನಿರ್ಮಲಾಳಿಗೆ ಆಶ್ಚರ್ಯವಾಯಿತು. ಬಹುಶಃ ನೀರು ಕುಡಿಯಲು ಹೋಗಿರಬಹುದು ಅಂದುಕೊಂಡಳು. ಆದರೆ ನೀರು ತಲೆದಿಂಬಿನ ಪಕ್ಕದಲ್ಲಿಯೇ ಇದೆ. ಇನ್ನೆಲ್ಲಿಗೆ ಹೋದಳು ? ಅವಳು ಒಂದೆರಡು ಸಾರಿ ಅವಳ ಹೆಸರನ್ನು ಹಿಡಿದು ಕೂಗಿದಳು, ಆದರೆ ಕೃಷ್ಣಾಳ ಸುಳಿವಿಲ್ಲ. ಈಗ ನಿರ್ಮಲಾಳಿಗೆ ಗಾಬರಿಯಾಯಿತು. ಅವಳ ಮನಸ್ಸಿನಲ್ಲಿ ಅನೇಕ ಬಗೆಯ ಅನುಮಾನಗಳು ತಲೆ ಹಾಕಿದುವು. ಅವಳು ತನ್ನ ರೂಮಿಗೆ ಹೋಗಿದ್ದರೂ ಹೋಗಿರಬಹುದು ಎಂದು ಸಮಾಧಾನ ಮಾಡಿಕೊಂಡಳು. ಮಗು ಮಲಗಿಕೊಂಡಿತು. ನಿರ್ಮಲಾ ಎದ್ದು ಕೃಷ್ಣಾಳ ರೂಮಿನ ಬಾಗಿಲವರೆಗೂ ಬಂದಳು. ಅವಳು ಅಂದುಕೊಂಡಿದ್ದು ಸರಿಯಾಗಿಯೇ ಇತ್ತು. ಕೃಷ್ಣಾ ತನ್ನ ರೂಮಿನಲ್ಲಿಯೇ ಇದ್ದಳು. ಇಡೀ ಮನೆ ನಿದ್ರಿಸುತ್ತಿತ್ತು, ಕೃಷ್ಣಾ ನೂಲು ತೆಗೆಯುತ್ತಿದ್ದಳು. ಇಷ್ಟು ತನ್ಮಯತೆಯಿಂದ ಅವಳು ಸಿನಿಮಾವನ್ನೂ ನೋಡಿರಲಾರಳು. ನಿರ್ಮಲಾ ದಂಗುಬಡಿದವಳಂತೆ ನಿಂತಳು. ಒಳಗೆ ಬಂದು ನೋಡಿದಳು. ಇಷ್ಟು ಸರಿ ಹೊತ್ತಿನಲ್ಲಿ ಏನು ಮಾಡುತ್ತಿದ್ದಾಳೆ ಇವಳು ! ಇದು ನೂಲು ತೆಗೆಯುವ ಸಮಯವೇನು ?

ಕೃಷ್ಣಾ ಬೆಚ್ಚಿದವಳಂತೆ ಎದ್ದಳು. ಸಂಕೋಚದಿಂದ ತಲೆ ಬಗ್ಗಿಸಿ ನುಡಿದಳು– 'ನಿನಗೆ ಎಚ್ಚರವಾಯಿತೇನೆ ಅಕ್ಕ ? ನೀರನ್ನು ಅಲ್ಲಿಯೇ ಇಟ್ಟಿದ್ದೆನಲ್ಲ.'

ನಿರ್ಮಲಾ : 'ಹಗಲಲ್ಲಿ ನಿನಗೆ ಬಿಡುವಿಲ್ಲವೇನು– ಈ ಸರಿಹೊತ್ತಿನಲ್ಲಿ ನೂಲು ತೆಗೆಯುತ್ತ ಕುಳಿತಿದ್ದೀಯಾ ?'

ಕೃಷ್ಣಾ : 'ಹಗಲು ಹೊತ್ತಿನಲ್ಲಿ ಬಿಡುವೇ ಆಗುವುದಿಲ್ಲಕ್ಕ.'

ನಿರ್ಮಲಾ : (ನೂಲನ್ನು ನೋಡಿ) ನೂಲು ತುಂಬಾ ನವಿರಾಗಿಯೇ ಇದೆಯಲ್ಲ ?'

ಕೃಷ್ಣಾ : 'ಎಲ್ಲಿ ನವಿರಾಗಿದೆ ಅಕ್ಕ, ಎಷ್ಟು ದಪ್ಪ ಇದೆ ನೋಡು. ನವಿರಾದ ನೂಲು ತೆಗೆದು ನಾನು ಅವರಿಗೊಂದು ಪೇಟ ಮಾಡಿಕೊಡಬೇಕು ಅಂದುಕೊಂಡಿದ್ದೇನೆ. ಇದು ಅವರಿಗೆ ನನ್ನ ಕಾಣಿಕೆ.'

ನಿರ್ಮಲಾ : 'ನೀನು ಸರಿಯಾಗಿಯೇ ಯೋಚಿಸಿದ್ದೀಯಾ. ಅವರ ದೃಷ್ಟಿಯಲ್ಲಿ ಇದಕ್ಕಿಂತಲೂ ಬೆಲೆ ಬಾಳುವಂತಾದ್ದು, ಬೇರೆ ಯಾವುದಿದೆ ? ಈಗ ಸಾಕು, ಏಳು. ನಾಳೆ ನೂಲು ತೆಗೆಯುವಂತೆ, ಬಾ. ನಿನ್ನ ಆರೋಗ್ಯ ಕೆಟ್ಟರೆ ಇಷ್ಟು ಮಾಡಿದ್ದು ನೀರು ಪಾಲಾಗುತ್ತೆ'

ಕೃಷ್ಣಾ : 'ಇಲ್ಲ ಅಕ್ಕ, ನೀನು ಮಲಗು ಹೋಗು, ನಾನು ಬರ್ತೇನೆ.'

ನಿರ್ಮಲಾ ಹೆಚ್ಚು ಒತ್ತಾಯ ಮಾಡಲಿಲ್ಲ. ತಾನು ಮಲಗಲು ಹೋದಳು. ಮಲಗಿದರೆ ಎಷ್ಟು ಪ್ರಯತ್ನಪಟ್ಟರೂ ನಿದ್ದೆ ಬರಲಿಲ್ಲ. ಕೃಷ್ಣಾಳ ಉತ್ಸಾಹ ಮತ್ತು ಅವಳ ಲವಲವಿಕೆಯನ್ನೂ ನೋಡಿ ಅವಳ ಹೃದಯ ಯಾವುದೋ ಒಂದು ಆಕಾಂಕ್ಷೆಯ ಸೆಳವಿನಿಂದ ವಿಕ್ಷುಬ್ಧವಾಯಿತು. ಓಹ್ ! ಈಗ ಕೃಷ್ಣಾಳ ಹೃದಯ ಅದೆಷ್ಟು ಪ್ರಫುಲ್ಲವಾಗಿದೆ ! ಅನುರಾಗ ಅವಳನ್ನು ಉನ್ಮತ್ತವಾಗಿಸಿದೆ. ಆಗ ಇವಳಿಗೆ ತನ್ನ ಮದುವೆಯ ನೆನಪಾಯಿತು. ಆ ಮದುವೆ ನಿಶ್ಚಿತವಾದ ದಿನದಿಂದಲೇ ಅವಳ ಚಂಚಲತೆ, ಜೀವಂತಿಕೆ ಅವಳನ್ನು ತೊರೆದು ಹೋಗಿತ್ತು. ತನ್ನ ಕೊಠಡಿಯಲ್ಲಿ ಕುಳಿತು ತನ್ನ ದುರಾದೃಷ್ಟವನ್ನು ನೆನೆದು ಅಳುತ್ತಿದ್ದಳು. ಅಳುತ್ತ ತನ್ನ ಪ್ರಾಣ ಯಾಕಾದರೂ ಹೋಗುತ್ತಿಲ್ಲ ಎಂದು ದೇವರನ್ನು ಬೇಡಿಕೊಳ್ಳುತ್ತಿದ್ದಳು. ಅಪರಾಧಿ ಶಿಕ್ಷೆಯನ್ನು ನಿರೀಕ್ಷಿಸುವಂತೆ ಅವಳು ತನ್ನ ಮದುವೆಯನ್ನು ನಿರೀಕ್ಷಿಸುತ್ತಿದ್ದಳು. ಆ ಮದುವೆಯೊಂದಿಗೆ ಅವಳ ಬದುಕಿನ ಎಲ್ಲ ಆಸೆ–ಆಕಾಂಕ್ಷೆಗಳು ಲಯವಾಗುವುವು, ಮದುವೆ ಮಂಟಪದ ಕೆಳಗಿನ ಹವನ ಕುಂಡದಲ್ಲಿ ತನ್ನ ಬದುಕಿನ ಎಲ್ಲ ಆಸೆಗಳು ಉರಿದು ಭಸ್ಮವಾಗುವುವು ಎಂದು ಯೋಚಿಸುತ್ತಿದ್ದಳು.

# ಹದಿನಾರು

ತಿಂಗಳು ಕಳೆಯುವುದಕ್ಕೆ ಅಂಥ ಕಷ್ಟವೇನೂ ಆಗಲಿಲ್ಲ. ವಿವಾಹದ ಮುಹೂರ್ತವೂ ಬಂತು. ನೆಂಟರಿಷ್ಟರಿಂದ ಮನೆ ತುಂಬಿ ಹೋಯಿತು. ವಕೀಲರೂ ಒಂದು ದಿನ ಮುಂಚಿತವಾಗಿಯೇ ಬಂದಿದ್ದರು. ಅವರ ಜೊತೆ ನಿರ್ಮಲಾಳ ಗೆಳತಿಯೂ ಬಂದಿದ್ದಳು. ನಿರ್ಮಲಾ ಆಕೆಗೆ ಬರುವಂತೆ ಒತ್ತಾಯಪೂರ್ವಕವಾಗಿ ಹೇಳಿರಲಿಲ್ಲ. ಆದರೆ ಆಕೆ ತಾನಾಗಿಯೇ ಬರಲು ಇಚ್ಛಿಸುತ್ತಿದ್ದಳು. ನಿರ್ಮಲಾಳಲ್ಲಿ ವರನ ಅಣ್ಣನನ್ನು ನೋಡಬೇಕೆನ್ನುವ ಮಹತ್ವಾಕಾಂಕ್ಷೆ ಕಾಡುತ್ತಿತ್ತು. ಸಾಧ್ಯವಾದರೆ ಆತನ ಸುಬುದ್ಧಿಗೆ ಧನ್ಯವಾದಗಳನ್ನು ಹೇಳಬೇಕು ಎಂದುಂದುಕೊಂಡಿದ್ದಳು.

ಸುಧಾ ನಕ್ಕು ಕೇಳಿದಳು– 'ನೀನು ಅವರೊಂದಿಗೆ ಮಾತನಾಡ ಬಲ್ಲೆಯೇನು ?'

ನಿರ್ಮಲಾ : 'ಏಕೆ, ಮಾತನಾಡುವುದರಲ್ಲಿ ಯಾವ ತೊಂದರೆಯಿದೆ ? ಈಗಂತೂ ಬೇರೆಯೇ ಸಂಬಂಧವಾಗಿದೆಯಲ್ಲ ? ಇನ್ನು ನನ್ನಿಂದ ಮಾತನಾಡಲಿಕ್ಕಾಗದೆಯಿದ್ದರೆ ನೀನಿದ್ದೇ ಇರುತ್ತೀಯಲ್ಲ ?'

ಸುಧಾ : 'ಇಲ್ಲಮ್ಮಾ ಇಲ್ಲ, ನನ್ನಿಂದಂತೂ ಆಗುವುದಿಲ್ಲ. ಪರ ಪುರುಷನೊಂದಿಗೆ ಮಾತನಾಡೋಕೆ ನನ್ನಿಂದ ಆಗುವುದಿಲ್ಲ. ಇನ್ನೂ ಆ ಮನುಷ್ಯನ ಸ್ವಭಾವ ಹೇಗೋ ಏನೋ !'

ನಿರ್ಮಲಾ : 'ಮನುಷ್ಯ ಕೆಟ್ಟವನಲ್ಲ ಅಂತ ಕಾಣುತ್ತೆ. ಅಷ್ಟಕ್ಕೂ ನೀನು ಅವನನ್ನು ಮದುವೆ ಮಾಡಿಕೊಳ್ಳಬೇಕಾಗಿದೆಯೇನು ? ಕೊಂಚ ಮಾತನಾಡುವುದರಲ್ಲಿ ಏನು ತೊಂದರೆಯಿದೆ ? ಡಾಕ್ಟರ್ ಸಾಹೇಬರು ಇಲ್ಲಿದ್ದಿದ್ದರೆ ಅವರಿಂದ ಆರ್ಡರ್ ಮಾಡಿಸುತ್ತಿದ್ದೆ.'

ಸುಧಾ : 'ಹೃದಯದಿಂದ ಉದಾರವಾಗಿರುವಂಥವರು ಗುಣದಿಂದಲೂ ಒಳ್ಳೆಯವರಾಗಿರುತ್ತಾರೆ ಅಂದುಕೊಂಡಿದ್ದಿಯೇನು ? ಪರಸ್ತ್ರೀಯರನ್ನು ದುರುಗುಟ್ಟಿಕೊಂಡು ನೋಡುವುದರಲ್ಲಿ ಯಾವ ಗಂಡಸೂ ಸಂಕೋಚಪಟ್ಟುಕೊಳ್ಳುವುದಿಲ್ಲ ಗೊತ್ತಾ ?'

ನಿರ್ಮಲಾ : 'ಆಯಿತು, ನೀನು ಮಾತನಾಡಬೇಡ ಬಿಡು, ನಾನೇ ಮಾತನಾಡ್ತೀನಿ. ಎಷ್ಟು ದುರುಗುಟ್ಟಿಕೊಂಡು ನೋಡ್ತಾರೋ ನೋಡಲಿ, ಈ ಮಾತು ಇಲ್ಲಿಗೆ ಮುಗೀತಲ್ಲ ?'

ಅಷ್ಟರಲ್ಲಿ ಕೃಷ್ಣಾ ಬಂದು ಕುಳಿತು ಕೊಂಡಳು. ನಿರ್ಮಲಾ ಮುಗುಳ್ನಗುತ್ತ ಹೇಳಿದಳು– 'ನಿಜ ಹೇಳೇ ಕೃಷ್ಣಾ, ಈಗ ನಿನ್ನ ಮನಸ್ಸು ಯಾಕೆ ಉದ್ವಿಗ್ನವಾಗಿದೆ ಅಂತ ?'

ಕೃಷ್ಣಾ : 'ಭಾವ ಕರೀತಿದ್ದಾರೆ, ಮೊದಲು ಹೋಗಿ ಏನು ಅಂತ ಕೇಳು. ಆಮೇಲೆ ಹರಟೆ ಹೊಡೆಯೋಣ. ತುಂಬ ಕೋಪಿಸಿ ಕೊಂಡಿದ್ದಾರೆ.'

ನಿರ್ಮಲಾ : 'ಏನ್ ವಿಷಯ ? ನೀನು ಏನು ಅಂತ ಕೇಳಲಿಲ್ಲವೇನು ?'

ಕೃಷ್ಣಾ : 'ಮೈಗೆ ಹುಷಾರಿಲ್ಲಾಂತ ಕಾಣುತ್ತೆ ತುಂಬ ಬಡವಾಗಿದ್ದಾರೆ.'

ನಿರ್ಮಲಾ : 'ನೀನು ಕೊಂಚ ಹೊತ್ತು ಅಲ್ಲೇ ಕುಳಿತುಕೊಂಡು ಮಾತನಾಡಿಸುತ್ತ ಅವರ ಬೇಜಾರು ಕಳೆಯಬಹುದಿತ್ತಲ್ಲ ? ಇಲ್ಲಿಗೆ ಯಾಕೆ ಓಡಿ ಬಂದೆ ? ದೇವರು ದೊಡ್ಡವನು, ಇಲ್ಲದಿದ್ದರೆ ನಿನಗೂ ಇಂಥ ಗಂಡನೇ ಸಿಕ್ಕಿರುತ್ತಿದ್ದ. ಕೊಂಚ ಹೊತ್ತು ಕುಳಿತು ಮಾತನಾಡಬೇಕಿತ್ತು. ಮುದುಕರಿಗೆ ಮಾತುಗಳು ಅಂದ್ರೆ ತುಂಬಾ ಇಷ್ಟ ಮುದುಕರು ಮಾತುಗಳನ್ನು ರಸವತ್ತಾಗಿ ಆಡ್ತಾರೆ. ಯುವಕರು ಏನ್ ಮಾಡಲಿಕ್ಕೆ ಅವರ ಮುಂದೆ ?'

ಕೃಷ್ಣಾ : 'ಇಲ್ಲ ಅಕ್ಕ, ನೀನೇ ಹೋಗು. ಅವರ ಮುಂದೆ ಕುಳಿತುಕೊಂಡಿರಲು ನನ್ನಿಂದ ಸಾಧ್ಯವಿಲ್ಲ.'

ನಿರ್ಮಲಾ ಹೊರಟು ಹೋದ ಮೇಲೆ ಸುಧಾ ಕೃಷ್ಣಾಳಿಗೆ ಹೇಳಿದಳು– 'ಗಂಡಿನ ಕಡೆಯ ದಿಬ್ಬಣ ಬಂತು ಅಂತ ಕಾಣುತ್ತೆ ಬಾಗಿಲ ಪೂಜೆ ಮಾಡೋಲ್ಲವೇನು ?'

ಕೃಷ್ಣಾ : 'ನನಗೇನು ಗೊತ್ತು ಅಕ್ಕಾವರೆ, ಪಂಡಿತರು ಸಾಮಾನುಗಳನ್ನು ಹೊಂದಿಸಿಕೊಳ್ತಿದ್ದಾರೆ.'

ಸುಧಾ : 'ವರನ ಅತ್ತಿಗೆ ತುಂಬಾ ಕಟ್ಟುನಿಟ್ಟಾದ ಹೆಂಗಸು ಅಂತ ಕೇಳಿದ್ದೇನೆ.'

ಕೃಷ್ಣಾ : 'ನಿಮಗೆ ಹೇಗೆ ಗೊತ್ತು ?'

ಸುಧಾ : 'ನನಗೆ ಯಾರೋ ಹೇಳಿದರು. ಅದಕ್ಕೇ ಎಚ್ಚರಿಸುತ್ತಿದ್ದೀನಿ. ಏನು ಮಾತು ಅಂದರೂ ಸಹಿಸಿಕೋಬೇಕಾಗುತ್ತೆ'

ಕೃಷ್ಣಾ : 'ನನಗೆ ಜಗಳ ಆಡಿ ಅಭ್ಯಾಸವಿಲ್ಲ. ನಾನು ಬೈಸಿಕೊಳ್ಳಲಿಕ್ಕೆ ಅವಕಾಶವನ್ನೇ ಕೊಡದಿದ್ದರೆ ಅವರು ಸುಮ್ಮ ಸುಮ್ಮನೆ ಯಾಕೆ ಬಯ್ತಾರೆ ?'

ಸುಧಾ : 'ಆಕೆ ಹೀಗೆ ಅಂತ ಯಾರೋ ಹೇಳಿದರು. ಸುಮ್ಮ ಸುಮ್ಮನಾದರೂ ಕಾಲು ಕೆರೆದುಕೊಂಡು ಜಗಳ ತೆಗೀತಾಳಂತೆ ಆಕೆ.'

ಕೃಷ್ಣಾ : 'ಆಕೆ ನೂರು ಮಾತನಾಡಿದರೆ ನಾನು ಒಂದು ಮಾತನಾಡ್ತೀನಿ. ನಮ್ರತೆ ಕಲ್ಲನ್ನೂ ಕರಗಿಸುತ್ತಂತೆ.'

ಅಷ್ಟರಲ್ಲಿ ಗುಜುಗುಜು ಶುರುವಾಯಿತು. ದಿಬ್ಬಣ ಬರುತ್ತಿತ್ತು. ಇಬ್ಬರು ಹೆಂಗಸರೂ ಕಿಟಕಿಯ ಬಳಿ ಹೋಗಿ ಕುಳಿತರು. ಒಂದು ಕ್ಷಣದಲ್ಲಿ ನಿರ್ಮಲಾಳೂ ಅಲ್ಲಿಗೆ ಬಂದಳು.

ವರನ ಅಣ್ಣನನ್ನು ನೋಡಲು ಅವಳು ಕಾತರಿಸುತ್ತಿದ್ದಳು. ಸುಧಾ ಹೇಳಿದಳು– 'ಅಣ್ಣ ಯಾರು ಅಂತ ಹೇಗೆ ಪತ್ತೆಮಾಡೋದು ?'

ನಿರ್ಮಲಾ : 'ಪಂಡಿತರನ್ನು ಕೇಳಿದರೆ ಗೊತ್ತಾಗುತ್ತೆ. ಆನೆಯ ಮೇಲೆ ಕೃಷ್ಣಾಳ ಮಾವ ಕುಳಿತಿದ್ದಾರೆ. ಅರೆ, ಅಲ್ಲಿ ನೋಡು, ಆ ಡಾಕ್ಟರು ಇಲ್ಲಿಗೆ ಹೇಗೆ ಬಂದರು ! ಕುದುರೆಯ ಮೇಲೆ ಯಾರು ಕುಳಿತಿದ್ದಾರೆ ಅಂತ ಕಾಣಿಸ್ತಿಲ್ಲವೇನು ?

ಸುಧಾ : 'ಹೌದು, ಅವರೇ'

ನಿರ್ಮಲಾ : 'ಅವರು ಇವರ ಸ್ನೇಹಿತರಿರಬಹುದು. ನೆಂಟರೂ ಆಗಿರಬಹುದು.'

ಸುಧಾ : 'ಭೇಟಿಯಾದರೆ ಕೇಳೋಣ ತಡಿ.'

ನಿರ್ಮಲಾ : 'ಪಲ್ಲಕ್ಕಿಯಲ್ಲಿ ಕುಳಿತಿರುವ ಮನುಷ್ಯ ವರನ ಅಣ್ಣನ ತರಹವಂತೂ ಕಾಣುವುದಿಲ್ಲ !'

ಸುಧಾ : 'ಖಂಡಿತ, ಅವರ ಇಡೀ ಮೈಯನ್ನೆಲ್ಲ ಹೊಟ್ಟೆಯೇ ತುಂಬಿಕೊಂಡಿರುವಂತೆ ಕಾಣುತ್ತೆ'

ನಿರ್ಮಲಾ : 'ಆ ಇನ್ನೊಂದು ಆನೆಯ ಮೇಲೆ ಕುಳಿತಿರುವವರು ಯಾರು ಅಂತ ಗೊತ್ತಾಗಲಿಲ್ಲವಲ್ಲ !'

ಸುಧಾ : 'ಯಾರೇ ಆಗಿರಬಹುದು. ಆದರೆ ವರನ ಅಣ್ಣನಂತೂ ಖಂಡಿತ ಅಲ್ಲ. ಅವರ ವಯಸ್ಸು ಕಾಣುತ್ತಿಲ್ಲವೇನು. ನಲ್ವತ್ತು ವರ್ಷಗಳಿಗಿಂತಲೂ ಜಾಸ್ತಿಯಾಗಿದೆ.'

ನಿರ್ಮಲಾ : 'ಪಂಡಿತರು ಈಗ ಬಾಗಿಲ ಪೂಜೆ ಮಾಡಿಸುವ ಗಡಿಬಿಡಿಯಲ್ಲಿದ್ದಾರೆ, ಅವರನ್ನೇ ಕೇಳಬಹುದಿತ್ತು.'

ಅಷ್ಟರೊಳಗೆ ನೌಕರ ಬಂದ. ಪೆಟ್ಟಿಗೆಗಳ ಬೀಗದ ಕೈಗಳು ನಿರ್ಮಲಾಳ ಬಳಿಯಿದ್ದುವು, ಈಗ ಪೂಜೆಯಕಾರ್ಯಕ್ಕೆ ಹಣದ ಆವಶ್ಯಕತೆಯಿದ್ದುದರಿಂದ ಅಮ್ಮ ಹಣಕ್ಕಾಗಿ ಹೇಳಿಕಳಿಸಿದ್ದಳು. ಈತ ಕೂಡ ಪಂಡಿತ ಮೋಟೆರಾಮರ ಜತೆ ವರನ ಊರಿಗೆ ಅಕ್ಷತೆ ತೆಗೆದುಕೊಂಡು ಹೋಗಿದ್ದ.

ನಿರ್ಮಲಾ : 'ಹಣ ಈಗಲೇ ಬೇಕೇನು ?'

ನೌಕರ : 'ಹೌದಮ್ಮ, ಬಂದು ಕೊಡಿ.'

ನಿರ್ಮಲಾ : 'ಬಂದೆ, ಅಂದ ಹಾಗೆ ನೀನು ವರನ ಅಣ್ಣನನ್ನು ಗುರುತು ಹಿಡಿಯಬಲ್ಲೆಯೇನು ?'

ನೌಕರ : 'ಗುರುತು ಯಾಕೆ ಹಿಡೀಲಿಕ್ಕಾಗಲ್ಲ, ಇಲ್ಲೇ ಎದುರಿಗೇ ನಿಂತಿದ್ದಾರಲ್ಲ !'

ನಿರ್ಮಲಾ : 'ಎಲ್ಲಿ, ನನಗೆ ಕಾಣಿಸ್ತಲೇ ಇಲ್ಲವಲ್ಲ ?'

ನೌಕರ : 'ಅರೆ, ಇಲ್ಲೇ ಎದುರಿಗೆ ಕುದುರೆಯ ಮೇಲೆ ಕುಳಿತಿದ್ದಾರಲ್ಲ, ಅವರೇ ಅಣ್ಣ'

ನಿರ್ಮಲಾ ಆಶ್ಚರ್ಯದಿಂದ ಹೇಳಿದಳು : 'ಏನ್ ಹೇಳ್ತಿದ್ದೀಯಾ ನೀನು. ಕುದುರೆಯ ಮೇಲೆ ಕುಳಿತಿರುವವರು ವರನ ಅಣ್ಣನೇನು ? ನಿನಗೆ ಸರಿಯಾಗಿ ಗೊತ್ತೋ, ಇಲ್ಲ , ರೈಲು ಬಿಡುತ್ತಿದ್ದೀಯೋ ?'

ನೌಕರ : 'ಅಮ್ಮಾ, ಏನ್ ಮಾತನಾಡ್ತೀರ ನೀವು. ನಾನು ರೈಲು ಬಿಡ್ತೀನೇನು ? ಈಗ ತಾನೆ ಅವರಿಗೆ ತಿಂಡಿಯನ್ನು ಕೊಟ್ಟು ಬರ್ತಿದ್ದೀನಿ.'

ನಿರ್ಮಲಾ : 'ಅರೆ, ಇವರು ಡಾಕ್ಟರು, ನಮ್ಮ ನೆರೆಯಲ್ಲಿಯೇ ಇದ್ದಾರೆ. ನಿರ್ಮಲಾ

ಸುಧಾಳತ್ತ ನೋಡುತ್ತ ಹೇಳಿದಳು– 'ಕೇಳಿದೆಯಾ ಸುಧಾ ಇವನು ಹೇಳುತ್ತಿರುವ ಮಾತುಗಳನ್ನು !'

ಸುಧಾ ನಗುವನ್ನು ತಡೆದು ನುಡಿದಳು– 'ಸುಳ್ಳು ಹೇಳ್ತಿದ್ದಾನೆ ಇವನು.'

ನೌಕರ : 'ಆಯ್ತು ಅಮ್ಮ, ನಾನು ಸುಳ್ಳು ಹೇಳ್ತಿದ್ದೀನಿ. ದೊಡ್ಡವರ ಹತ್ತಿರ ವಾದ ಮಾಡುವುದಕ್ಕೆ ಆಗುತ್ತೇನು ? ಪಂಡಿತರನ್ನು ಕರೆದು ಅವರನ್ನೇ ಕೇಳೋಣ, ಆಗಲಾದರೂ ಒಪ್ಪಿಕೊಳ್ತೀರಲ್ಲವೆ ?'

ನೌಕರ ಹೋಗುವುದರಲ್ಲಿ ಕೊಂಚ ತಡವಾಯಿತು. ಈಗ ಮೋಟೆರಾಮರೇ ಸ್ವತಃ ಅಂಗಳಕ್ಕೆ ಬಂದು ಗಲಾಟೆ ಮಾಡಲಾರಂಭಿಸಿದರು– 'ಈ ಮನೆಯ ಗೌರವವನ್ನು ಆ ದೇವರೇ ಕಾಪಾಡಬೇಕು. ನೌಕರ ಹೋಗಿ ಒಂದು ಗಂಟೆಯಾಯಿತು. ಇನ್ನೂ ಹಣ ಈಸಿಕೊಂಡು ಬರುವುದರಲ್ಲೇ ಇದಾನೆ.'

ನಿರ್ಮಲಾ : 'ಪಂಡಿತರೆ, ಕೊಂಚ ಇಲ್ಲಿ ಬನ್ನಿ. ಎಷ್ಟು ಹಣ ಬೇಕು ?'

ಶಾಸ್ತ್ರಿಗಳು ಗೊಣಗುತ್ತ ಜೋರಾಗಿ ಏದುಸಿರು ಬಿಡುತ್ತ ಮೇಲಕ್ಕೆ ಬಂದರು. ಬಂದು ನಿಟ್ಟುಸಿರು ಬಿಡುತ್ತ– 'ಏನಮ್ಮ ನಿಂದು, ಮಾತನಾಡೋಕೆ ಈಗ ಸಮಯ ಇಲ್ಲ. ಬೇಗ ಹಣ ಕೊಟ್ಟು ಕಳುಹಿಸು.'

ನಿರ್ಮಲಾ : 'ಕೊಟ್ಟೆ ಕೊಟ್ಟೆ ಕೊಂಚ ತಾಳಿ. ಅಂದ ಹಾಗೆ ಒಂದು ವಿಷಯ ಈ ವರನ ಅಣ್ಣ ಯಾರು ಅಂತ ತೋರಿಸಿ.'

ಪಂಡಿತರು : 'ರಾಮ ! ರಾಮ ! ಇಷ್ಟು ವಿಷಯಕ್ಕೆ ನನಗೆ ಇಲ್ಲಿ ಬರೋ ಹಾಗೆ ಮಾಡಿದಿರಾ ? ಅವರ ಗುರುತು ಹಿಡೀಲಿಲ್ಲವೇನು ?'

ನಿರ್ಮಲಾ : 'ಅಲ್ಲಿ ಕುದುರೆಯ ಮೇಲೆ ಕುಳಿತಿರುವವರೇ ಅವರು ಅಂತ ಅವನು ಹೇಳಿದ.'

ಪಂಡಿತರು : 'ಮತ್ತಿನ್ಯಾರು ? ಅವರೇ ವರನ ಅಣ್ಣ.'

ನೌಕರ : 'ಅವಾಗಲಿಂದಲೂ ಹೇಳ್ತಿದ್ದೀನಿ ನಾನು. ಅಮ್ಮ ಒಪ್ಕೋತಾನೇ ಇಲ್ಲ ಪಂಡಿತರೆ.'

ನಿರ್ಮಲಾ ಸುಧಾಳತ್ತ ಸ್ನೇಹ, ಮಮತೆ, ವಿನೋದ ಮತ್ತು ಕೃತ್ರಿಮ ತಿರಸ್ಕಾರದ ನೋಟದಿಂದ ಒಮ್ಮೆ ನೋಡಿದಳು. ನೋಡುತ್ತ, ಹಾಗಾದರೆ ಇಷ್ಟು ಹೊತ್ತಿನವರೆಗೂ ನೀನೇ ನನಗೆ ಆಟ ಆಡಿಸುತ್ತಿದ್ದೆ ಅನ್ನು. ನನಗೆ ಗೊತ್ತಿದ್ದಿದ್ದರೆ ಇಲ್ಲಿಗೆ ನಿನ್ನನ್ನು ಕರೀತಲೇ ಇರಲಿಲ್ಲ. ಓಹ್ ದೊಡ್ಡ ಮನುಷ್ಯಳು ನೀನು. ಎಷ್ಟೋ ತಿಂಗಳುಗಳಿಂದ ನೀನು ನನ್ನೊಂದಿಗೆ ಚೆಲ್ಲಾಟ ಆಡ್ತಾ ಇದ್ದೀಯಾ, ನಾನೂ ನೋಡ್ತಿದ್ದೀನಿ. ಆದರೆ ಒಂದೇ ಒಂದು ಸಾರಿಯಾದರೂ ಮರೆತು ಸಹ ಈ ಸಂಬಂಧವಾಗಿ ನಿನ್ನ ಬಾಯಿಂದ ಒಂದು ಶಬ್ದವೂ ಬರಲಿಲ್ಲ. ನಾನು ಆಗಿದ್ದರೆ ಒಂದೆರಡು ದಿನಗಳಲ್ಲೇ ಒಳಗಿನದೆಲ್ಲವನ್ನೂ ಕಕ್ಕಿ ಬಿಡ್ತಿದ್ದೆ.'

ಸುಧಾ : 'ನಿನಗೆ ಗೊತ್ತಾಗಿದ್ದಿದ್ದರೆ ನೀನು ನನ್ನ ಮನೆಗೆ ಬರುತ್ತಿದ್ದೆಯೇನು ?'

ನಿರ್ಮಲಾ : 'ವಿಚಿತ್ರವಾಗಿದೆ. ನಾನು ಡಾಕ್ಟರ್ ಸಾಹೇಬರ ಜತೆಯಲ್ಲಿ ಎಷ್ಟೋ ಸಾರಿ ಮಾತನಾಡಿದ್ದೇನೆ. ಎಂಥ ತಪ್ಪು ಮಾಡಿದೆ ನೀನು ? ಕೃಷ್ಣಾ ನೀನು ನಿನ್ನ ಓರಗಿತ್ತಿಯ ತುಂಟಾಟವನ್ನು ನೋಡಿದೆಯಾ. ಇಂಥ ಮಾಯಾವಿನಿಯ ಬಗೆಗೆ ನೀನು ಯಾವಾಗಲೂ ಎಚ್ಚರಿಕೆಯಿಂದ ಇರಬೇಕು.'

ಕೃಷ್ಣಾ : 'ನಾನಂತೂ ಈ ದೇವಿಯ ಪಾದಗಳನ್ನು ತೊಳೆದು ಆ ತೀರ್ಥವನ್ನು ತಲೆಗೆ ಪ್ರೋಕ್ಷಿಸಿಕೊಳ್ಳುತ್ತೇನೆ. ಇವರ ದರ್ಶನವಾದದ್ದು ನನ್ನ ಭಾಗ್ಯ.'

ನಿರ್ಮಲಾ : 'ಈಗ ನನಗೆ ಗೊತ್ತಾಯಿತು ಬಿಡು. ನನ್ನ ತಾಯಿಗೆ ಹಣವನ್ನೂ ನೀನೇ ಕಳುಹಿಸಿರುವವಳು ಅಂತ. ಇದಕ್ಕೂ ನೀನು ತಲೆ ಅಲ್ಲಾಡಿಸಿದರೆ, ನಿನಗೆ ಹೊಡೆದೇ ಬಿಡ್ತೇನೆ ನೋಡ್ತಿರು.'

ಸುಧಾ : 'ಮನೆಗೆ ಬಂದ ಅತಿಥಿಗಳ ಅವಮಾನವನ್ನು ಈ ರೀತಿ ಮಾಡ್ತಾರೇನು ?'

ನಿರ್ಮಲಾ : 'ನಿನಗೆ ಇನ್ನೂ ಏನೇನು ಮಾಡ್ತೀನಿ ಅಂತ ನೋಡ್ತಿರು. ಏನೋ ಇರಲಿ ಅಂತ 'ಬಾ' ಅಂತ ಒಂದು ಸಾಲು ಬರೆದರೆ ನೀನು ನಿಜವಾಗಿಯೂ ಬಂದುಬಿಟ್ಟೆ ಅಲ್ಲಿಯ ಜನ ಏನಂದುಕೊಂಡರೋ ಏನೋ !'

ಸುಧಾ : 'ಎಲ್ಲರಿಗೂ ಹೇಳಿಯೇ ಬಂದಿದ್ದೇನೆ.'

ನಿರ್ಮಲಾ : 'ಇನ್ನು ನಿನ್ನ ಹತ್ತಿರ ನಾನು ಎಂದೂ ಸುಳಿಯುವುದಿಲ್ಲ.'

ಡಾಕ್ಟರ್ ಸಾಹೇಬರಿಂದ ಕೊಂಚ ದೂರವಿರು ಅಂತ ಒಂದು ಮಾತನ್ನಾದರೂ ಹೇಳಬೇಡವೇನು ?'

ಸುಧಾ : 'ಅವರು ನಿನ್ನನ್ನು ನೋಡಿದಾಕ್ಷಣಕ್ಕೆ ಏನು ತಪ್ಪಾಯಿತು. ನೋಡದೇ ಇದ್ದಿದ್ದರೆ ತಮ್ಮ ದೌರ್ಭಾಗ್ಯಕ್ಕಾಗಿ ಪರಿತಪಿಸುವ, ದುಃಖಿಸುವ ಸಂದರ್ಭವಾದರೂ ಹೇಗೆ ಬರುತ್ತಿತ್ತು ? ಹಣದ ಲೋಭಿಯಾದದ್ದರಿಂದ ತಾನು ಎಂಥ ಅಮೂಲ್ಯ ವಸ್ತುವನ್ನು ಕಳೆದುಕೊಂಡೆ ಎಂಬುದು ಹೇಗೆ ಗೊತ್ತಾಗುತ್ತಿತ್ತು ? ಈಗ ನಿನ್ನನ್ನು ನೋಡಿ ಮಹಾರಾಯರು ಕೈಕೈ ಹಿಸುಕಿಕೊಳ್ಳುತ್ತಿದ್ದಾರೆ. ಬಾಯಿಬಿಟ್ಟು ಏನೂ ಹೇಳುವುದಿಲ್ಲ, ಆದರೆ ಮನಸ್ಸಿನಲ್ಲಿ ತಮ್ಮ ತಪ್ಪಿಗಾಗಿ ಪಶ್ಚಾತ್ತಾಪ ಪಡುತ್ತಿದ್ದಾರೆ.'

ನಿರ್ಮಲಾ : 'ಇಲ್ಲಿಂದಾಚೆಗೆ ಎಂದೂ ನಿನ್ನ ಮನೆಗೆ ಬರುವುದಿಲ್ಲ.'

ಸುಧಾ : 'ಈಗ ನೀನು ನಮ್ಮಿಂದ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ನೀನು ಬರದಿದ್ದರೆ ನನಗೆ ನಿನ್ನ ಮನೆಯ ರಸ್ತೆ ಗೊತ್ತಿಲ್ಲವೇನು ?'

ಇಷ್ಟು ಹೊತ್ತಿಗೆ ದಿಬ್ಬಣದ ಸ್ವಾಗತ ಕಾರ್ಯ ಮುಗಿದಿತ್ತು. ಅತಿಥಿಗಳು ಕುಳಿತು ತಿಂಡಿ–ತೀರ್ಥ ಸೇವಿಸುತ್ತಿದ್ದರು. ವಕೀಲರ ಪಕ್ಕದಲ್ಲೇ ಡಾಕ್ಟರ್ ಸಿನ್ಹಾ ಕುಳಿತಿದ್ದರು. ನಿರ್ಮಲಾ ಸೆರಗಿನ ಮರೆಯಲ್ಲಿ ಅವರನ್ನು ಒಮ್ಮೆ ನೋಡಿದಳು. ಅವಳ ಎದೆ ಢವ ಢವ ಅನ್ನುತ್ತಿತ್ತು.

ಆರೋಗ್ಯ, ಯೌವನ ಮತ್ತು ಪ್ರತಿಭೆಯ ದೇವತೆಯಂತಿದ್ದರು ಅವರು. ಆದರೆ ಅವರ ಪಕ್ಕದಲ್ಲಿ ಕುಳಿತಿದ್ದವರು..... ಈ ವಿಷಯದಲ್ಲಿ ಏನನ್ನೂ ಹೇಳದಿರುವುದೇ ಸರಿ.

ಈ ಮೊದಲು ನಿರ್ಮಲಾ ಡಾಕ್ಟರ್ ಸಾಹೇಬರನ್ನು ನೂರು ಸಾರಿ ನೋಡಿದ್ದಳು. ಆದರೆ ಇವತ್ತು ಅವಳ ಹೃದಯದಲ್ಲಿ ಮೂಡಿದಂಥ ವಿಚಾರಗಳು ಈ ಹಿಂದೆ ಎಂದೂ ಮೂಡಿದ್ದಿರಲಿಲ್ಲ. ಅವರನ್ನು ಹತ್ತಿರ ಕರೆದು ಮನಸಾರೆ ಬೈಯುವ. ಸದಾಕಾಲಕ್ಕೂ ನೆನಪಿಟ್ಟು ಕೊಳ್ಳುವಂತೆ ಚುಚ್ಚು ಮಾತುಗಳನ್ನಾಡುವ, ಅಳಿಸಿ ಕೈಬಿಡುವ ಮನಸ್ಸಾಯಿತಾದರೂ ನಿರ್ಮಲಾ ಮರುಕ ತೋರಿ ಸುಮ್ಮನಾದಳು. ದಿಬ್ಬಣದ ಜತೆ ಬಂದಿದ್ದವರೆಲ್ಲ ಬಿಡದಿ ಮನೆಗೆ ಹೋಗಿಯಾಗಿತ್ತು ಊಟಕ್ಕೆ ಸಿದ್ಧತೆ ನಡೆಯುತ್ತಿತ್ತು ನಿರ್ಮಲಾ ಊಟಕ್ಕೆ ತಟ್ಟೆಗಳನ್ನು ಜೋಡಿಸುವುದರಲ್ಲಿ ವ್ಯಸ್ತಳಾಗಿದ್ದಳು. ಆಗ ಇದ್ದಕ್ಕಿದ್ದಂತೆಯೇ ನೌಕರ ಬಂದು– 'ಅಮ್ಮಾ, ಸುಧಾ ಅಮ್ಮನವರು ಕರೀತಿದ್ದಾರೆ ಬರಬೇಕಂತೆ. ನಿಮ್ಮ ರೂಮಿನಲ್ಲಿ ಕುಳಿತಿದ್ದಾರೆ' ಅಂದ.

ನಿರ್ಮಲಾ ತಟ್ಟೆಗಳನ್ನು ಅಲ್ಲೇ ಬಿಟ್ಟು ಗಾಬರಿಯಿಂದ ಸುಧಾಳ ಬಳಿಗೆ ಬಂದಳು. ಬಂದವಳು ರೂಮಿನ ಒಳಗಡೆ ಕಾಲಿಡುವಾಗ ಕ್ಷಣ ಹಿಮ್ಮೆಟ್ಟಿದ್ದಳು, ಡಾಕ್ಟರ್ ಸಿನ್ಹಾ ಅಲ್ಲೇ ನಿಂತಿದ್ದರು.

ಸುಧಾ ಮುಗುಳ್ನಗುತ್ತ ಹೇಳಿದಳು– 'ನಿರ್ಮಲಾ, ಇಲ್ಲಿ ನೋಡು, ಇವರನ್ನು ಕರೆಸಿದ್ದೀನಿ. ನಿನ್ನ ಮನಸ್ಸಿಗೆ ಬಂದಷ್ಟು ಬಯ್ಯಿ. ನಾನು ಇಲ್ಲಿಯೇ ನಿಂತುಕೊಂಡು ಹೊರಗೆ ಹೋಗದಂತೆ ತಡೀತೀನಿ.'

ಡಾಕ್ಟರ್ ಸಾಹೇಬರು ಗಂಭೀರ ಭಾವದಲ್ಲಿ ನುಡಿದರು– 'ಯಾರು ಓಡಿ ಹೋಗ್ತಾರೆ ? ತಲೆ ತಗ್ಗಿಸಿಕೊಂಡು ಇಲ್ಲೇ ನಿಂತಿದ್ದೀನಲ್ಲ.'

ನಿರ್ಮಲಾ ಕೈ ಜೋಡಿಸಿ ನುಡಿದಳು– 'ಇದೇ ರೀತಿಯ ಕೃಪಾದೃಷ್ಟಿಯನ್ನು ಯಾವಾಗಲೂ ಇಟ್ಟಿರಿ, ಮರೆಯಬೇಡಿ. ಇದೇ ನನ್ನ ವಿನಂತಿ.'

## ಹದಿನೇಳು

ಕೃಷ್ಣಾಳ ವಿವಾಹದ ಅನಂತರ ಸುಧಾ ಹೊರಟು ಹೋದಳು. ಆದರೆ ನಿರ್ಮಲಾ ತವರಿನಲ್ಲಿಯೇ ಉಳಿದುಕೊಂಡಳು. ವಕೀಲರು ಮತ್ತೆ ಮತ್ತೆ ಬರೆಯುತ್ತಿದ್ದರು ! ಆದರೆ ಅವಳು ಹೋಗಲಿಲ್ಲ. ಏಕೋ ಏನೋ ಅಲ್ಲಿಗೆ ಹೋಗಲು ಅವಳಿಗೆ ಮನಸ್ಸೇ ಆಗುತ್ತಿರಲಿಲ್ಲ. ಇಲ್ಲಿಂದ ಅವಳನ್ನು ಸೆಳೆದುಕೊಂಡು ಹೋಗುವಂಥ ಯಾವೊಂದು ಆಕರ್ಷಣೆಯೂ ಅಲ್ಲಿರಲಿಲ್ಲ. ಇಲ್ಲಿ ತಾಯಿಯ ಸೇವೆ ಮಾಡುತ್ತ, ತಮ್ಮಂದಿರನ್ನು ನೋಡಿಕೊಳ್ಳುವುದರಲ್ಲೇ ಆಕೆಯ ಸಮಯ ಸಂತೋಷದಿಂದ ಕಳೆದುಹೋಗುತ್ತಿತ್ತು.

ವಕೀಲರು ಸ್ವತಃ ಬಂದಿದ್ದರೆ ಬಹುಶಃ ಅಲ್ಲಿಗೆ ಹೋಗಲು ಸಿದ್ಧಳಾಗುತ್ತಿದ್ದಳೋ ಏನೋ ! ಆದರೆ ಮದುವೆಯಲ್ಲಿ ಮೊಹಲ್ಲಾದ ಹುಡುಗಿಯರೆಲ್ಲ ಅವರನ್ನು ಎಷ್ಟರ ಮಟ್ಟಿಗೆ ಚುಡಾಯಿಸಿ ಗೋಳು ಹೊಯ್ದುಕೊಂಡರೆಂದರೆ ಇಲ್ಲಿಗೆ ಬರುವುದೆಂದರೆ ಅವರಿಗೆ ಆಗುತ್ತಿರಲಿಲ್ಲ. ಸುಧಾ ಸಹ ಎಷ್ಟೋ ಪತ್ರಗಳನ್ನು ಬರೆದಳು. ಆದರೆ ನಿರ್ಮಲಾ ಅವಕ್ಕೂ ಸೊಪ್ಪು ಹಾಕಲಿಲ್ಲ. ಕೊನೆಗೊಂದು ದಿನ ಸ್ವತಃ ಸುಧಾಳೇ ತನ್ನ ನೌಕರನೊಂದಿಗೆ ಇಲ್ಲಿಗೆ ಬಂದೇ ಬಿಟ್ಟಳು.

ಇಬ್ಬರೂ ಪರಸ್ಪರ ಆಲಂಗಿಸಿಕೊಂಡರು. ಆಮೇಲೆ ಸುಧಾ ಹೇಳಿದಳು– 'ನಿನಗೆ ಅಲ್ಲಿಗೆ ಬರಲಿಕ್ಕೆ ಭಯವಾಗುತ್ತೇನು ?'

ನಿರ್ಮಲಾ : 'ಹೌದಮ್ಮ, ಭಯವಾಗುತ್ತೆ. ಮದುವೆ ಮಾಡಿ ಕೊಂಡು ಹೋದವಳು ಮೂರು ವರ್ಷದ ಮೇಲೆ ಬಂದೆ. ಈಗ ಅಲ್ಲಿಗೆ ಬಂದೆನೆಂದರೆ ಇಡೀ ಆಯಸ್ಸೇ ಅಲ್ಲಿ ಕಳೆದುಹೋಗುತ್ತೆ ಇಲ್ಲಿಗೆ ಬಾ ಅಂತ ಕರೆಯೋರು ಯಾರು, ಬರುವರು ಯಾರು ?'

ಸುಧಾ : 'ಬರುವುದಕ್ಕೆ ಯಾರಾದರೂ ಕರೆಯಬೇಕೇನು ? ಮನಸ್ಸು ಬಂದಾಗ ಬಂದರಾಯಿತು. ಅಲ್ಲಿ ವಕೀಲರು ನಿನಗೋಸ್ಕರ ತುಂಬಾ ಕಾಯುತ್ತಿದ್ದಾರೆ.'

ನಿರ್ಮಲಾ : 'ತುಂಬಾ ಕಾಯುತ್ತಿದ್ದಾರಾ ? ಏಕೆ, ರಾತ್ರಿ ಹೊತ್ತು ಅವರಿಗೆ ನಿದ್ದೆ ಬರಲ್ಲ ಅಂತ ಕಾಣುತ್ತೆ'

ಸುಧಾ : 'ನಿರ್ಮಲಾ, ನಿನ್ನ ಹೃದಯ ಕಲ್ಲಾಗಿದೆ. ಅವರನ್ನು ನೋಡಿದರೆ ಕರುಳು ಕಿತ್ತು ಬರುತ್ತೆ ಮನೆಯಲ್ಲಿ ಯಾರೂ ಕೇಳುವವರಿಲ್ಲ. ಮಾತನಾಡಿಸುವವರಿಲ್ಲ. ಮಕ್ಕಳೋ ಹೆಂಡತೀನೋ ಯಾರಿದ್ದಾರೆ. ಯಾರ ಹತ್ತಿರ ಮಾತನಾಡಲಿ, ಮನಸ್ಸನ್ನು ಹೇಗೆ ಹಗುರಾಗಿಸಿಕೊಳ್ಳಲಿ ? ಅಂತ ಹೇಳ್ತಿದ್ದರು. ಮನೆ ಬದಲಾಯಿಸಿ ಬೇರೆ ಮನೆಗೆ ಹೋದಲಾಗಾಯ್ತು ತುಂಬ ದುಃಖದಿಂದಿದ್ದಾರೆ.'

ನಿರ್ಮಲಾ : 'ಇನ್ನೂ ಇಬ್ಬರು ಮಕ್ಕಳನ್ನು ದೇವರು ಕೊಟ್ಟಿದ್ದಾನಲ್ಲ !'

ಸುಧಾ : 'ಅವರ ಬಗ್ಗೆನೂ ತುಂಬಾ ಹೇಳ್ತಿದ್ದರು. ಈಗಂತೂ ಜಿಯಾರಾಮ ಮಾತನ್ನೇ ಕೇಳುವುದಿಲ್ಲವಂತೆ. ಬಾಯಿಗೆ ಬಂದ ಹಾಗೆ, ಒರಟು ಒರಟಾಗಿ ಎದುರು ಉತ್ತರ ಕೊಡ್ತಾನಂತೆ. ಇನ್ನು ಚಿಕ್ಕವನು, ಅವನು ಅಣ್ಣನ ದಾರಿನೇ ಹಿಡಿದಿದ್ದಾನಂತೆ.'

ನಿರ್ಮಲಾ : 'ಜಿಯಾರಾಮ ಅಂಥವನಲ್ಲ. ಈ ತುಂಟಾಟ ಯಾವಾಗಲಿಂದ ಕಲಿತುಕೊಂಡನೋ ! ನಾನು ಹೇಳಿದ ಮಾತನ್ನು ತಳ್ಳಿ ಹಾಕಿದವನಲ್ಲ ಅವನು. ಸನ್ನೆಯಲ್ಲಿ ಹೇಳಿದ ಕೆಲಸವನ್ನು ಮಾಡ್ತಿದ್ದ.'

ಸುಧಾ : 'ನನಗೇನು ಗೊತ್ತು ಮಹಾರಾಯ್ತಿ. ನೀವೇ ಅಣ್ಣನಿಗೆ ವಿಷ ಕೊಟ್ಟು ಕೊಂದು ಹಾಕಿದಿರಿ, ನೀವು ಕೊಲೆಗಾರರು ಅಂತ ಅಪ್ಪನಿಗೆ ಹೇಳಿದನಂತೆ. ನಿನ್ನನ್ನು ಮದುವೆ ಮಾಡಿಕೊಂಡಿದ್ದಕ್ಕೂ ಎಷ್ಟೋ ಸಾರಿ ಬೈದನಂತೆ. ಎಂಥೆಂಥ ಮಾತನಾಡ್ತಾನೆ

ಅಂದ್ರೆ ವಕೀಲರು ಅಳ್ತಾ ಕುಳಿತುಬಿಡ್ತಾರೆ. ಇನ್ನೊ ಒಂದು ಸಂಗತಿ ಹೇಳಲಾ ? ಒಂದು ಸಾರಿಯಂತೂ ಕಲ್ಲು ತಗೊಂಡು ಅವರಿಗೆ ಹೊಡೆಯೋಕೆ ಹೋದನಂತೆ.'

ನಿರ್ಮಲಾ ಗಂಭೀರ ಚಿಂತೆಯಲ್ಲಿ ಮುಳುಗಿ ಹೇಳಿದಳು– 'ಹಾಗಾದರೆ ಹುಡುಗ ಮಹಾ ಪಟಿಂಗ. ಅವನ ಅಣ್ಣನಿಗೆ ಅವರು ವಿಷ ಕೊಟ್ಟರು ಅಂತ ಅವನಿಗೆ ಯಾರು ಹೇಳಿದರು ?'

ಸುಧಾ : 'ನಿನ್ನಿಂದಲೇ ಅವನು ಸುಧಾರಿಸಬೇಕು, ಅಷ್ಟೆ'

ಈಗ ನಿರ್ಮಲಾಳನ್ನು ಹೊಸ ಚಿಂತೆಯೊಂದು ಕಾಡತೊಡಗಿತು. ಜಿಯಾ ನಿಜವಾಗಲೂ ಹೀಗೆಯೇ ಇದ್ದರೆ ತನ್ನ ತಂದೆಗೆ ಎದುರು ಮಾತನಾಡುವಂಥ ಸ್ಥಿತಿಗೆ ಬಂದಿದ್ದರೆ ನನ್ನ ಮಾತನ್ನ ಎಲ್ಲಿ ಕೇಳುತ್ತಾನೆ. ನಾನು ಹೇಳಿದರೆ ಸುಮ್ಮನಾಗುತ್ತಾನೆಯೆ ? ಅವತ್ತು ರಾತ್ರಿ ಅವಳು ಬಹಳ ಹೊತ್ತಿನವರೆಗೆ ಇದೇ ಯೋಚನೆಯಲ್ಲಿದ್ದಳು. ಮಂಸಾರಾಮ ಬಹಳವಾಗಿ ನೆನಪಿಗೆ ಬಂದ. ಅವನಿದ್ದಿದ್ದರೆ ಬದುಕು ಆರಾಮವಾಗಿ ಸಾಗುತ್ತಿತ್ತು. ತನ್ನ ತಂದೆಯ ಮುಂದೆಯೇ ಈ ಮಗನ ವ್ಯವಹಾರ ಹೀಗಾದರೆ, ಅವರು ಇಲ್ಲದೆ ಹೋದಾಗ ಇವನನ್ನು ಹೇಗೆ ನಿಭಾಯಿಸುವುದು ? ಮನೆ ಕೈಯಿಂದ ತಪ್ಪಿ ಹೋಯಿತು, ಅದರ ಅಲ್ಪ–ಸ್ವಲ್ಪ ಸಾಲ ತಲೆಯ ಮೇಲೆ ಇರಲೂ ಬಹುದು. ಸಂಪಾದನೆ ನೋಡಿದರೆ ಹೀಗಿದೆ. ಆ ದೇವರೇ ಕಾಪಾಡಬೇಕು. ಇವತ್ತು ಮೊಟ್ಟ ಮೊದಲ ಸಾರಿ ನಿರ್ಮಲಾಳಿಗೆ ತನ್ನ ಹೆಣ್ಣು ಮಗುವಿನ ಚಿಂತೆ ಕಾಡಿತು. ಮುಂದೆ ಈ ಬಡಪಾಯಿಯ ಜೀವನ ಹೇಗಾಗುವುದೋ ಏನೋ ! ದೇವರು ಈ ಒಂದು ವಿಪತ್ತನ್ನು ತಲೆಯ ಮೇಲೆ ಹಾಕಿದ್ದಾನೆ. ನನಗೆ ಇದರ ಆವಶ್ಯಕತೆಯೇ ಇರಲಿಲ್ಲ. ಇದು ಹುಟ್ಟಲೇಬೇಕೆಂದಿದ್ದರೆ ಯಾವುದಾದರೂ ಶ್ರೀಮಂತರ ಮನೆಯಲ್ಲಿ ಹುಟ್ಟಿದ್ದಿದ್ದರೆ ಚೆನ್ನಿತ್ತು. ಪುಟ್ಟ ಮಗಳು ಅಮ್ಮನ ಎದೆಯನ್ನು ಅಪ್ಪಿಕೊಂಡು ಮಲಗಿತ್ತು. ಯಾರೋ ತನ್ನಿಂದ ಮಗುವನ್ನು ಕಿತ್ತುಕೊಂಡು ಹೋಗುತ್ತಿದ್ದಾರೇನೋ ಎಂಬಂಥ ಭಾವನೆ ಬಂದು ಅದನು ಮತ್ತೂ ಮಗ್ಗುಲಿಗೆ ಎಳೆದುಕೊಂಡಳು.

ನಿರ್ಮಲಾಳ ಮಂಚದ ಪಕ್ಕದಲ್ಲೇ ಸುಧಾಳ ಮಂಚವೂ ಇತ್ತು. ನಿರ್ಮಲಾ ಚಿಂತಾಸಾಗರದಲ್ಲಿ ಮುಳುಗಿ–ತೇಲುತ್ತಿದ್ದಳು. ಸುಧಾ ನಿದ್ದೆಯ ಆನಂದವನ್ನು ಅನುಭವಿಸುತ್ತಿದ್ದಳು. ಅವಳಿಗೆ ತನ್ನ ಮಗನ ಚಿಂತೆ ಏನಾದರೂ ಉಂಟೇನು ? ಮೃತ್ಯುವಿನ ದೃಷ್ಟಿಯಲ್ಲಿ ಇವನು ಮುದುಕ, ಇವನು ಯುವಕ ಎಂಬ ತಾರತಮ್ಯವೂ ಇಲ್ಲ. ಸುಧಾಳನ್ನು ಹಣ್ಣು ಮಾಡುವಂಥ ಯಾವ ಚಿಂತೆಯೂ ಆಕೆಗೆ ಇರಲಿಲ್ಲ. ತನ್ನ ಭವಿಷ್ಯದ ಬಗ್ಗೆ ಸುಧಾ ಬೇಸರದಿಂದಿರುವುದನ್ನು, ಚಿಂತಿಸುವುದನ್ನು ಅವಳು ಎಂದೂ ನೋಡಿರಲಿಲ್ಲ.

ಇದ್ದಕ್ಕಿದ್ದಂತೆಯೇ ಸುಧಾಳಿಗೆ ಎಚ್ಚರವಾಯಿತು. ನಿರ್ಮಲಾ ಇನ್ನು ಎಚ್ಚರವಾಗಿಯೇ ಇದ್ದಾಳೆ. ಕೇಳಿದಳು– 'ಅರೆ, ನಿನಗೆ ಇನ್ನೊ ನಿದ್ದೆ ಬರಲಿಲ್ಲವೆ ?'

ನಿರ್ಮಲಾ : 'ನಿದ್ದೆನೆ ಬರ್ತಾ ಇಲ್ಲ'

ಸುಧಾ : 'ಕಣ್ಣುಗಳನ್ನು ಮುಚ್ಚಿಕೊಂಡು ಮಲಗಿಕೋ, ನಿದ್ದೆ ಅದಾಗಿಯೇ ಬರುತ್ತೆ ಹಾಸಿಗೆಯ ಮೇಲೆ ಉರುಳುತ್ತಿದ್ದಂತೆಯೇ ಹೆಣವಾಗಿ ಬಿಡ್ತೀನಿ ನಾನು. ಅವರು ಎಚ್ಚರವಾಗಿದ್ದರೂ ನನಗೆ ಗೊತ್ತಾಗೋಲ್ಲ, ಎಲ್ಲಿಂದ ಬರುತ್ತೋ ನನಗೆ ಇಷ್ಟು ನಿದ್ದೆ, ಹಾಳಾದ್ದು. ಏನೋ ರೋಗ ಇರಬೇಕು.'

ನಿರ್ಮಲಾ : 'ಹೌದು, ಇದೊಂದು ದೊಡ್ಡ ರೋಗ. ಇದಕ್ಕೆ ರಾಜರೋಗ ಅಂತಾರೆ. ಡಾಕ್ಟರ್ ಸಾಹೇಬರಿಗೆ ಹೇಳು–ಏನಾದರೂ ಔಷಧಿ ಕೊಡಲಿ.'

ಸುಧಾ : 'ಅಷ್ಟಕ್ಕೂ ನಾನು ಎಚ್ಚರವಾಗಿದ್ದುಕೊಂಡು ಏನು ಯೋಚನೆ ಮಾಡಬೇಕಿದೆ ? ಯಾವತ್ತಾದರೂ ಅಪರೂಪಕ್ಕೆ ತವರಿನ ನೆನಪಾದರೆ ಅವತ್ತು ನಿದ್ದೆ ಕೊಂಚ ತಡವಾಗಿ ಬರುತ್ತೆ ಅಷ್ಟೆ.'

ನಿರ್ಮಲಾ : 'ಡಾಕ್ಟರ್ ಸಾಹೇಬರ ನೆನಪಾಗ್ತಿಲ್ಲವೇನು ?'

ಸುಧಾ : 'ಇಲ್ಲ, ಅವರ ನೆನಪು ಯಾಕಾಗುತ್ತೆ ? ನನಗೆ ಗೊತ್ತು. ಅವರು ಸಂಜೆ ಟೆನಿಸ್ ಆಡಿಕೊಂಡು ಬಂದಿದ್ದಾರೆ, ಊಟ ಮಾಡಿದ್ದಾರೆ, ಹಾಗೂ ಆರಾಮವಾಗಿ ಮಲಗಿದ್ದಾರೆ.'

ನಿರ್ಮಲಾ : 'ಅಗೋ, ಸೋಹನನೂ ಎದ್ದ. ನೀನು ಎಚ್ಚರವಾಗಿರಬೇಕಾದರೆ ಅವನು ಯಾಕೆ ಮಲಗಿಯಾನು !'

ಸುಧಾ : 'ಹೌದಮ್ಮ. ಇವನದು ವಿಚಿತ್ರ ಅಭ್ಯಾಸ. ನಾನು ಮಲಗಿದಾಗ ಮಲಗುತ್ತಾನೆ, ನಾನು ಎದ್ದಾಗ ಏಳ್ತಾನೆ. ತನ್ನ ಹಿಂದಿನ ಜನ್ಮದಲ್ಲಿ ಇವನು ತಪಸ್ವಿಯಾಗಿದ್ದ ಅಂತ ಕಾಣುತ್ತೆ ಅಲ್ಲಿ ನೋಡು, ಇವನ ಹಣೆಯ ಮೇಲೆ ತಿಲಕದ ಗುರುತು ಹೇಗೆ ಕಾಣಿಸ್ತಿದೆ ಅಂತ. ಇವನ ಭುಜದ ಮೇಲೂ ಇಂಥವೇ ಗುರುತುಗಳಿವೆ. ಖಂಡಿತವಾಗಿಯೂ ಇವನು ತಪಸ್ವಿಯಾಗಿದ್ದಿರಬೇಕು.'

ನಿರ್ಮಲಾ : 'ತಪಸ್ವಿಗಳು ಚಂದನದ ತಿಲಕ ಹಚ್ಚುವುದಿಲ್ಲ. ಹೀಗಾಗಿ ಇವನು ಹಿಂದಿನ ಜನ್ಮದಲ್ಲಿ ಧೂರ್ತ ಪೂಜಾರಿಯಾಗಿದ್ದಿರಬೇಕು. ಹೇ ಪುಟ್ಟ, ನೀನು ಎಲ್ಲಿ ಪೂಜಾರಿಯಾಗಿದ್ದೆಯೋ, ಕಳ್ಳ.'

ಸುಧಾ : 'ಇವನ ಮದುವೇನ ನಿನ್ನ ಮಗಳ ಜತೆ ಮಾಡ್ತೀನಿ.'

ನಿರ್ಮಲಾ : 'ಎಂಥ ಮಾತನಾಡ್ತಿದ್ದೀಯಾ ನೀನು, ಅಣ್ಣ–ತಂಗಿಯರ ಮದುವೆ ಎಲ್ಲಾದರೂ ಆಗುತ್ತೇನು ?'

ಸುಧಾ : 'ಯಾರು ಏನಂದರೂ ಸರಿ, ನಾನು ಮಾಡ್ತೀನಿ. ಇಂಥ ಸುಂದರ ಸೊಸೆ ನನಗೆ ಎಲ್ಲಿ ಸಿಗ್ತಾಳೆ ? ಅರೆ, ಇವನ ಮೈ ಬಿಸಿಯಾಗಿದ್ದಂತೆ ಕಾಣಿಸ್ತಿದೆ ನೋಡು, ಅಥವಾ ನನಗೆ ಹಾಗೆ ಅನ್ನಿಸ್ತಿದೆಯೊ ?'

ನಿರ್ಮಲಾ ಸೋಹನನ ಹಣೆ ಮುಟ್ಟಿ ಹೇಳಿದಳು– 'ಹೌದು ಸುಧಾ, ಮೈ ಬಿಸಿಯಾಗಿದೆ. ಈ ಜ್ವರ ಯಾವಾಗ ಬಂತು ? ಹಾಲು ಕುಡೀತಾ ಇದ್ದಾನೆ ತಾನೆ ?'

ಸುಧಾ : 'ಈಗ ತಾನೇ ಮಲಗಿದ್ದ. ಆಗ ಮೈಯೇನೂ ಬಿಸಿಯಿರಲಿಲ್ಲ. ಶೀತ ಆಗಿರಬೇಕು. ಬೆಚ್ಚಗೆ ಹೊದ್ದಿಸಿ ಮಲಗಿಸ್ತೀನಿ, ಬೆಳಗ್ಗೆಯ ಹೊತ್ತಿಗೆ ಸರಿಯಾಗಬಹುದು.'

ಬೆಳಗ್ಗೆಯ ಹೊತ್ತಿಗೆ ಸೋಹನನ ಸ್ಥಿತಿ ಇನ್ನಷ್ಟು ಗಂಭೀರವಾಯಿತು. ಮೂಗಿನಿಂದ ಸುರಿಯತೊಡಗಿತು. ಜ್ವರವೂ ಹೆಚ್ಚಾಯಿತು. ಕಣ್ಣುಗಳು ಮೇಲೆ ಕೆಳಕ್ಕೆ ಆಡತೊಡಗಿದವು. ತಲೆಯ ಆಯ ತಪ್ಪಿತು. ಕೈಕಾಲುಗಳನ್ನು ಆಡಿಸುವುದಕ್ಕೂ ಅವನಿಂದ ಆಗದಾಯಿತು. ನಗುವೂ ಮಾಯವಾಯಿತು, ಮಾತು ಆಡುತ್ತಿರಲಿಲ್ಲ, ಸುಮ್ಮನೆ ಮೌನವಾಗಿ ಬಿದ್ದುಕೊಂಡಿದ್ದ. ಯಾರು ಮಾತನಾಡುವುದೂ ಅವನಿಗೆ ಇಷ್ಟವಿಲ್ಲವೇನೋ ಎಂದನ್ನಿಸುತ್ತಿತ್ತು. ಈಗ ಕೊಂಚ ಕೆಮ್ಮೂ ಆರಂಭವಾಗಿತ್ತು. ಈಗಂತೂ ಸುಧಾ ಗಾಬರಿಯಾದಳು. ಡಾಕ್ಟರ್‌ರನ್ನು ಕರೆಸುವಂತೆ ನಿರ್ಮಲಾ ಸಲಹೆ ಕೊಟ್ಟಳು. ಆದರೆ ನಿರ್ಮಲಾಳ ತಾಯಿ ಹೇಳಿದಳು– 'ಈಗ ಡಾಕ್ಟರ್ ಹಕೀಮರನ್ನೇನು ಕರೆಸಬೇಕಿಲ್ಲ. ಮಗುವಿಗೆ ದೃಷ್ಟಿಯಾಗಿದೆ ಅಂತ ನನಗೆ ಕಾಣಿಸ್ತಿದೆ. ಇದಕ್ಕೆ ಯಾವ ಡಾಕ್ಟರ್ ಏನ್ ತಾನೇ ಮಾಡ್ತಾರೆ ?'

ಸುಧಾ : 'ಅಮ್ಮಾ, ಯಾರ ದೃಷ್ಟಿ ಆಗುತ್ತೆ ಇವನಿಗೆ ? ಇಲ್ಲಿಯವರೆಗೆ ಇವನನ್ನು ಹೊರಗೂ ಕರೆದುಕೊಂಡು ಹೋಗಿಲ್ಲ.'

ತಾಯಿ : 'ಯಾರೂ ದೃಷ್ಟಿ ಹಾಕಲ್ಲ ಮಗಳೆ, ಒಬ್ಬೊಬ್ಬರ ದೃಷ್ಟಿ ತುಂಬ ಕೆಟ್ಟದಾಗಿರುತ್ತದೆ. ಅದರಷ್ಟಕ್ಕೆ ಅದೇ ತಗುಲುತ್ತೆ. ಒಮ್ಮೊಮ್ಮೆ ತಾಯಿ–ತಂದೆಯ ದೃಷ್ಟಿಯೂ ತಗುಲಿಬಿಡುತ್ತದೆ. ಇವನು ಬೆಳಗ್ಗೆಯಿಂದ ಕುಣಿದು ಕುಪ್ಪಳಿಸುವುದನ್ನು ನೋಡಿಯೇ ಒಂದಲ್ಲ ಒಂದು ಅನಿಷ್ಟ ಆಗಿಯೇ ಆಗುತ್ತೆ ಅಂತ ಭಯವಾಗಿತ್ತು ನನಗೆ. ಕಣ್ಣುಗಳನ್ನು ನೋಡು, ಮೇಲ್ಗಣ್ಣು–ತೇಲ್ಗಣ್ಣುಗಳಾಗಿವೆ. ದೃಷ್ಟಿಯಾಗುವುದರ ಗುರುತು ಅಂದ್ರೆ ಇದೇನೆ.'

ಕೆಲಸದಾಕೆ ಮುದುಕಿ ಮತ್ತು ಪಕ್ಕದ ಮನೆಯ ಪಂಡಿತರ ಹೆಂಡತಿ ತಾಯಿಯ ಮಾತನ್ನೇ ಅನುಮೋದಿಸಿದರು. ಇನ್ನೊಬ್ಬ ಮಹಂಗೂ ಎಂಬುವನು ಬಂದು ಮಗುವಿನ ಮುಖ ನೋಡಿ, ನಕ್ಕು ಹೇಳಿದ– 'ಅಮ್ಮಾ ಇದು ದೃಷ್ಟೀನೆ, ಇನ್ನೇನೂ ಅಲ್ಲ. ಒಂದಷ್ಟು ಹಂಚಿಕಡ್ಡಿ ತನ್ನಿ. ದೃಷ್ಟಿ ತೆಗೆಯೋಣ. ದೇವರ ದಯೆಯಿಂದ ಸಂಜೆ ಹೊತ್ತಿಗೆ ಮಗು ನಗುತ್ತೆ ನಡೆದಾಡುತ್ತೆ.'

ಹಂಚಿಕಡ್ಡಿಯ ಐದು ತುಂಡುಗಳನ್ನು ತಂದರು. ಮಹಂಗೂ ಅದನ್ನು ಸಮವಾಗಿ ತುಂಡು ಮಾಡಿ ಒಂದು ದಾರಕ್ಕೆ ಕಟ್ಟಿದ. ಆನಂತರ ಏನನ್ನೋ ಗುನುಗುನಿಸುತ್ತಾ ತನ್ನ ಹರಿಷಿಣದ ಕೈಯಿಂದ ಐದು ಸಾರಿ ಸೋಹನನ ತಲೆಗೆ ನೀವಾಳಿಸಿದ. ಈಗ ನೋಡಿದರೆ ಸಮವಾಗಿದ್ದ ಆ ಹಂಚಿಕಡ್ಡಿಗಳು ದೊಡ್ಡವೂ–ಚಿಕ್ಕವೂ ಆಗಿದ್ದುವು. ಅಲ್ಲಿದ್ದ ಹೆಂಗಸರೆಲ್ಲ ಈ ಕೌತುಕವನ್ನು ನೋಡಿ ದಂಗಾದರು. ತಾವೇ ಕಣ್ಣಾರೆ ನೋಡಿದ್ದನ್ನು ಸಂದೇಹಿಸಲು ಸಾಧ್ಯವೇನು ? ಮಹಂಗೂ ಪುನಃ ಮಗುವಿಗೆ ಕಡ್ಡಿಗಳಿಂದ

ನೀವಾಳಿಸಲಾರಂಭಿಸಿದ. ಈಗ ಕಡ್ಡಿಗಳು ಹೆಚ್ಚು–ಕಡಿಮೆ ಸಮ–ಸಮವಾಗಿದ್ದವು. ಮೊದಲಿದ್ದ ಅಂತರ ಕಡಿಮೆಯಾಗಿ ಕೊಂಚ ಮಾತ್ರ ಅಂತರ ಉಳಿದಿತ್ತು! ಅಂದರೆ ದೃಷ್ಟಿಯ ಪ್ರಭಾವ ಈಗ ಕೊಂಚ ಮಾತ್ರ ಉಳಿದಿದೆ ಎಂಬುದಕ್ಕೆ ಪ್ರಮಾಣ ಸಿಕ್ಕಿದಂತಾಯಿತು. ಮಹಂಗೂ ಎಲ್ಲರಿಗೂ ಧೈರ್ಯ, ಸಮಾಧಾನ ಹೇಳಿ ಪುನಃ ಸಂಜೆ ಬರುವುದಾಗಿ ಭರವಸೆ ನೀಡಿ ಹೊರಟುಹೋದ. ಆದರೆ ಬಾಲಕನ ಸ್ಥಿತಿ ಹೊತ್ತು ಕಳೆದಂತೆ ಇನ್ನಷ್ಟು ಕೆಟ್ಟಿತು. ಕೆಮ್ಮು ಜಾಸ್ತಿಯಾಯಿತು. ಸಂಜೆ ಮಹಂಗೂ ಬಂದು ಮತ್ತೆ ತನ್ನ ಹಂಚಿ ಕಡ್ಡಿಯ ಪವಾಡವನ್ನು ತೋರಿಸಿದ. ಈಗ ಎಲ್ಲ ಕಡ್ಡಿಗಳೂ ಸಮವಾಗಿದ್ದುವು. ಎಲ್ಲ ಹೆಂಗಸರಿಗೂ ಸಮಾಧಾನವಾಯಿತು, ಅವರೆಲ್ಲ ನಿಶ್ಚಿಂತರಾದರು. ಆದರೆ ಸೋಹನ ಇಡೀ ರಾತ್ರಿಯನ್ನು ಕೆಮ್ಮುತ್ತಲೇ ಕಳೆದ. ಎಷ್ಟೋ ಸಾರಿ ಕಣ್ಣುಗಳು ತೇಲುಗಣ್ಣು ಮೇಲುಗಣ್ಣುಗಳಾದವು. ಸುಧಾ ಮತ್ತು ನಿರ್ಮಲಾ ಅವನ ಮುಂದೆ ಕುಳಿತುಕೊಂಡೇ ಇಡೀ ರಾತ್ರಿ ಕಳೆದರು. ರಾತ್ರಿಯೇನೋ ಕಳೆಯಿತು. ಈಗ ವೃದ್ಧೆ ತಾಯಿ ಇನ್ನೊಂದು ಉಪಾಯ ಹೇಳಿದಳು. ಮಹಂಗೂವಿನಿಂದ ದೃಷ್ಟಿ ತೆಗೆಯಲು ಆಗಲಿಲ್ಲ. ಆದ್ದರಿಂದ ಮೌಲ್ವಿಯನ್ನು ಕರೆದು ಕೊಂಡು ಬಂದು ಧೂಪ ಹಾಕಿಸೋಣ ಎಂದಳು. ಈ ಮಧ್ಯೆ ಸುಧಾಳಿಂದ ತನ್ನ ಗಂಡನಿಗೆ ಈ ಸುದ್ದಿಯನ್ನು ಕಳುಹಿಸಲು ಆಗಲಿಲ್ಲ. ಮನೆಯ ಕೆಲಸದಾಕೆ ಸೋಹನನನ್ನು ಒಂದು ಬಟ್ಟೆಯಲ್ಲಿ ಎತ್ತಿಕೊಂಡು ಮಸೀದಿಗೆ ಹೋಗಿ ಧೂಪ ಹಾಕಿಸಿಕೊಂಡು ಬಂದಳು. ಸಂಜೆಯೂ ಹೋಗಿ ಧೂಪ ಹಾಕಿಸಿಕೊಂಡು ಬಂದಳು. ಇಷ್ಟೆಲ್ಲ ಆದರೂ ಸೋಹನ ಕಣ್ಣು ಬಿಡಲಿಲ್ಲ. ರಾತ್ರಿಯಾಯಿತು. ರಾತ್ರಿ ಮಗುವಿಗೆ ಸುಖವಾಗಿ ನಿದ್ದೆ ಬರುತ್ತೆ, ಬೆಳಗ್ಗೆಯಾಗುತ್ತಿದ್ದಂತೆಯೇ ಗಂಡನಿಗೆ ಟೆಲಿಗ್ರಾಂ ಕೊಟ್ಟರಾಯಿತು ಎಂದು ಯೋಚಿಸಿದಳು.

ಆದರೆ ರಾತ್ರಿ ಆರಾಮವಾಗಿಯೇನೂ ಕಳೆಯಲಿಲ್ಲ. ಅರ್ಧರಾತ್ರಿ ಕಳೆಯುವುದರಲ್ಲಿಯೇ ಮಗು ಕೊನೆ ಉಸಿರೆಳೆಯಿತು. ಸುಧಾಳ ಜೀವನ ಸಂಪತ್ತು ನೋಡು ನೋಡುತ್ತಿದ್ದಂತೆಯೇ ಕೈಯಿಂದ ದೂರವಾಯಿತು.

ಮದುವೆ ಮನೆಯಲ್ಲಿ ಎಲ್ಲರ ಮನಸ್ಸನ್ನು ಪ್ರಫುಲ್ಲಗೊಳಿಸುತ್ತಿದ್ದ ಮಗು ಈಗ ಎಲ್ಲರನ್ನೂ ಶೋಕ ಸಾಗರದಲ್ಲಿ ಮುಳುಗಿಸಿತ್ತು. ಅದರ ಮುಗ್ಧ ಮುಖವನ್ನು ನೋಡುತ್ತ ತಾಯಿಯ ಹೃದಯ ನಲಿಯುತ್ತಿತ್ತು. ಈಗ ಅದೇ ಮುಖವನ್ನು ನೋಡುವಾಗ ಹೃದಯ ಒಡೆದು ಹೋಗುತ್ತಿದೆ. ಮನೆಯವರೆಲ್ಲ ಸುಧಾಗೆ ಸಮಾಧಾನ ಹೇಳುತ್ತಿದ್ದರು. ಆದರೆ ಕಣ್ಣೀರು ಬತ್ತುವಂತಿರಲಿಲ್ಲ. ಮನಸ್ಸಿಗೆ ಸಮಾಧಾನವೆಂಬುದೇ ಇರಲಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಗಂಡನಿಗೆ ಹೇಗೆ ಮುಖ ತೋರಿಸಬೇಕೆಂಬುದೇ ಆಕೆಯ ದುಃಖದ ತೀವ್ರತೆಗೆ ಕಾರಣವಾಗಿತ್ತು. ಅವರಿಗೆ ಸುದ್ದಿಯನ್ನೂ ಕೊಡಲಾಗಲಿಲ್ಲ.

ರಾತ್ರಿಯೇ ತಂತಿ ಕೊಟ್ಟರು. ಮಾರನೆಯ ದಿನ ಬೆಳಗ್ಗೆ ಒಂಬತ್ತು ಗಂಟೆಗೆ ಡಾಕ್ಟರ್ ಸಿನ್ಹಾ ಬಸ್ಸಿನಲ್ಲಿ ಬಂದರು. ಅವರು ಬಂದ ಸುದ್ದಿ ಕೇಳುತ್ತಿದ್ದಂತೆಯೇ ಸುಧಾ

ಇನ್ನೂ ಜೋರಾಗಿ ಅಳಲಾರಂಭಿಸಿದಳು. ಬಾಲಕನ ಕ್ರಿಯಾಕರ್ಮವಾಯಿತು. ಡಾಕ್ಟರ್ ಸಾಹೇಬರು ಎಷ್ಟೋ ಸಾರಿ ಒಳಗಡೆ ಹೋದರು. ಆದರೆ ಸುಧಾ ಅವರ ಬಳಿಗೆ ಬರಲಿಲ್ಲ. ಅವರ ಮುಂದೆ ಬರುವುದಾದರೂ ಹೇಗೆ ? ಮುಖ ಹೇಗೆ ತೋರಿಸುವುದು ? ಆಕೆ ತನ್ನ ಮೂರ್ಖತನದಿಂದ ಅವರ ಕರುಳಿನ ರತ್ನವನ್ನು ಕಿತ್ತುಕೊಂಡು ನದಿಗೆ ಎಸೆದಿದ್ದಳು. ಈಗ ಅವರ ಮುಂದೆ ಹೋಗುವುದೆಂದರೆ ಅವರ ಹೃದಯವನ್ನು ಚೂರು ಚೂರು ಮಾಡುವುದೆಂದೇ ಅರ್ಥ. ಮಗು ತಾಯಿಯ ತೋಳಿನಲ್ಲಿ ನಲಿದಾಡುವುದನ್ನು ನೋಡಿದಾಗ ಪತಿಯ ಕಣ್ಣುಗಳಲ್ಲಿ ಮಿಂಚು ಹರಿದಾಡುತ್ತಿತ್ತು. ಮಗು ಚಿಗರೆಯಂತೆ ತಂದೆಯ ತೋಳಿಗೆ ಜಿಗಿಯುತ್ತಿತ್ತು. ತಾಯಿ ಪುನಃ ಕರೆಯುತ್ತಿದ್ದಳು. ಆಗ ಅವನು ತಂದೆಯ ಎದೆಗೆ ಅವುಚಿಕೊಂಡುಬಿಡುತ್ತಿದ್ದ. ನೂರು ಸಾರಿ, ಸಾವಿರ ಸಾರಿ ಮುದ್ದಿಸಿದರೂ ತಂದೆಯ ತೋಳುಗಳನ್ನು ಬಿಟ್ಟು ಬರುತ್ತಿರಲಿಲ್ಲ. ಆಗ ತಾಯಿ ನೀನು ತುಂಬ ಸ್ವಾರ್ಥಿ ಎಂದು ಬೈಯ್ಯುತ್ತಿದ್ದಳು. ಇವತ್ತು ಆ ಮಗುವನ್ನು ತೋಳಿನಲ್ಲಿ ಎತ್ತಿಕೊಂಡು ಅದರ ತಂದೆಯ ಮುಂದೆ ಎಲ್ಲಿ ಹೋಗುವುದು ? ಬರಿದಾಗಿರುವ ಈಕೆಯ ಮಡಿಲನ್ನು ನೋಡಿ ಅವರು ಗೋಳೋ ಎಂದು ಅತ್ತು ಬಿಟ್ಟರೆ ? ತನ್ನ ಗಂಡನ ಮುಂದೆ ಹೋಗುವುದಕ್ಕಿಂತ ಸಾಯುವುದೇ ಒಳ್ಳೆಯದೆಂದು ಆಕೆಗೆ ಅನ್ನಿಸಿತು. ಗಂಡನ ಎದುರಿಗೆ ಹೋಗಬೇಕಾಗುವುದಲ್ಲ ಎಂದು ಆಕೆ ನಿರ್ಮಲಾಳನ್ನು ಬಿಟ್ಟು ಒಂದು ಘಳಿಗೆಯೂ ಇರುತ್ತಿರಲಿಲ್ಲ.

ನಿರ್ಮಲಾ ಹೇಳಿದಳು– 'ಅಮ್ಮಾ ಸುಧಾ, ಆದದ್ದು ಆಗಿ ಹೋಯಿತು. ಅವರ ಕಣ್ತಪ್ಪಿಸಿ ಎಷ್ಟು ಹೊತ್ತಿನವರೆಗೆ ಅಂತ ಓಡಾಡ್ತೀಯಾ ? ರಾತ್ರೆಗೆ ಅವರು ಹೊರಡ್ತಾರೆ ಅಂತ ಅಮ್ಮ ಹೇಳ್ತಿದ್ದಳು.'

ಸುಧಾ ತುಂಬಿದ ಕಣ್ಣುಗಳಿಂದ ಅವಳನ್ನೇ ನೋಡುತ್ತ ಹೇಳಿದಳು– 'ಯಾವ ಮುಖ ಇಟ್ಟುಕೊಂಡು ಅವರ ಮುಂದೆ ಹೋಗಲಿ ? ಅವರ ಮುಂದೆ ಹೋಗುತ್ತಿದ್ದಂತೆಯೇ ನನ್ನ ಕಾಲುಗಳು ನಡುಗಿ, ನಾನು ಬಿದ್ದೇ ಹೋಗುವೆನೇನೋ ಎಂಬ ಭಯವಾಗುತ್ತಿದೆ ನನಗೆ.'

ನಿರ್ಮಲಾ : 'ಬಾ, ನಾನೂ ಬರ್ತೇನೆ ನಿನ್ನ ಜತೆ. ನಿನ್ನನ್ನು ಹಿಡಿದುಕೊಂಡೇ ಇರ್ತೇನೆ.'

ಸುಧಾ : 'ನನ್ನನ್ನು ಅಲ್ಲಿ ಬಿಟ್ಟು ನೀನು ಓಡಿ ಹೋಗೊಲ್ಲ ತಾನೆ ?'

ನಿರ್ಮಲಾ : 'ಇಲ್ಲ, ಇಲ್ಲ, ಎಲ್ಲಿಗೂ ಹೋಗಲ್ಲ.'

ಸುಧಾ : 'ನನ್ನ ಕರುಳು ಕಿತ್ತು ಬಂದಂಥ ಅನುಭವವಾಗ್ತಾ ಇದೆ ನನಗೆ. ಇಷ್ಟು ದೊಡ್ಡ ವಜ್ರಾಘಾತವಾದರೂ ನಾನಿನ್ನು ಬದುಕಿದ್ದೀನಿ ಅನ್ನುವುದೇ ನನಗೆ ಆಶ್ಚರ್ಯವಾಗಿದೆ. ಅವರು ಸೋಹನನನ್ನು ತುಂಬ ಪ್ರೀತಿಸುತ್ತಿದ್ದರಮ್ಮ ! ಅವರ ಮನಸ್ಸಿಗೆ ಈಗ ಹೇಗಾಗಿದೆಯೋ ಏನೋ ! ಅವರಿಗೆ ಯಾವ ರೀತಿ ಧೈರ್ಯ ಹೇಳಲಿ ? ಅವರು ರಾತ್ರಿ ಹೋಗ್ತಾರಂತೇನು ?'

ನಿರ್ಮಲಾ : 'ಅವರು ರಜೆ ತೆಗೆದುಕೊಂಡು ಬಂದಿಲ್ಲವಂತೆ ಅಂತ ಅಮ್ಮ ಹೇಳ್ತಿದ್ದಳು.'

ಇಬ್ಬರೂ ಸ್ನೇಹಿತೆಯರು ಅಂಗಳಕ್ಕೆ ಬಂದರು. ಮುಂದೆ ರೂಮಿನ ಬಾಗಿಲಿನವರೆಗೂ ಬಂದು ಸುಧಾ ನಿರ್ಮಲಾಳನ್ನು ಕಳಿಸಿ, ತಾನೊಬ್ಬಳೇ ರೂಮಿನ ಒಳಗೆ ಬಂದಳು.

ಇತ್ತ ಡಾಕ್ಟರ್ ಸಾಹೇಬರು ಸುಧಾಳ ಸ್ಥಿತಿ ಏನಾಗಿದೆಯೋ ಏನೋ ಅಂತ ಗಾಬರಿ ಪಡುತ್ತಿದ್ದರು. ನಾನಾ ಬಗೆಯ ಅನುಮಾನಗಳು ಅವರ ಮನಸ್ಸನ್ನು ಕಾಡುತ್ತಿದ್ದುವು. ಊರಿಗೆ ಹೊರಡಲು ತಯಾರಾಗಿಯೇನೋ ಇದ್ದರು. ಆದರೆ ಅವರ ಮನಸ್ಸು ತಯಾರಿರಲಿಲ್ಲ. ಬದುಕೇ ಶೂನ್ಯವಾದಂಥ ಅನುಭವವಾಗುತ್ತಿತ್ತು ಅವರಿಗೆ. ಮನಸ್ಸಿನಲ್ಲೇ ನೋವನ್ನು ಅನುಭವಿಸುತ್ತಿದ್ದರು. ಈ ಮಗುವನ್ನು ದೇವರು ಇಷ್ಟು ಬೇಗ ನಮ್ಮಿಂದ ಕಿತ್ತುಕೊಳ್ಳಬೇಕು ಅಂತ ಯೋಚಿಸಿದ್ದಿದ್ದರೆ ನಮಗೆ ಯಾಕಾದರೂ ಇದನ್ನು ಕೊಡಬೇಕಾಗಿತ್ತು ? ಅವರು ಮಗು ಬೇಕೆಂದು ಹರಕೆಯನ್ನು ಕಟ್ಟಿರಲಿಲ್ಲ. ಆಜೀವಪರ್ಯಂತ ಅವರು ಮಕ್ಕಳಿಲ್ಲದೆಯೂ ಇರುತ್ತಿದ್ದರು. ಆದರೆ ಮಗುವನ್ನು ಪಡೆದು ಈಗ ಅದರಿಂದ ವಂಚಿತವಾದದ್ದು ಅವರಿಗೆ ಅಸಹನೀಯ ನೋವಾಗಿತ್ತು. ಮನುಷ್ಯ ನಿಜವಾಗಿಯೂ ದೇವರ ಆಟದ ಬೊಂಬೆಯೇನು ? ಮಾನವ ಜೀವನದ ಮಹತ್ವ ಇದೆಯೇನು ? ಬದುಕು ಅಂದರೆ ಮಕ್ಕಳ ಮರಳ ಮನೆ. ಇದನ್ನು ಕಟ್ಟುವುದರಲ್ಲೂ ತಡವಿಲ್ಲ, ನಾಶಪಡಿಸುವುದರಲ್ಲೂ ತಡವಿಲ್ಲ. ಮಕ್ಕಳಿಗೂ ತಾವು ಕಟ್ಟಿದ ಮರಳಿನ ಮನೆಗಳ ಮೇಲೆ, ತಮ್ಮ ಕಾಗದದ ದೋಣಿಗಳ ಮೇಲೆ, ತಮ್ಮ ಕೋಲು–ಕುದುರೆಯ ಮೇಲೆ ಪ್ರೀತಿಯಿರುತ್ತದೆ. ತಮ್ಮ ಪ್ರೀತಿಯ ಆಟದ ಸಾಮಾನುಗಳನ್ನು ಅವರು ಪ್ರಾಣ ಕಾಪಾಡಿಕೊಳ್ಳುವಂತೆ ಕಾಪಾಡಿಕೊಳ್ಳುತ್ತಾರೆ. ಆ ದೇವರು ಬಾಲಕನೇ ಆಗಿದ್ದರೆ ಅವನು ವಿಚಿತ್ರ ಬಾಲಕ.

ಆದರೆ ಬುದ್ಧಿ ದೇವರ ಈ ರೂಪವನ್ನು ಒಪ್ಪುವುದಿಲ್ಲ. ಅನಂತ ಸೃಷ್ಟಿಯ ಕರ್ತೃ ಈ ರೀತಿ ಉದ್ಧಂಡ ಬಾಲಕನಾಗಿರಲು ಸಾಧ್ಯವಿಲ್ಲ. ನಾವು ನಮ್ಮ ಬುದ್ಧಿಗೂ ನಿಲುಕದ ಅನೇಕ ಗುಣಗಳಿಂದ ಅವನನ್ನು ಹಾಡಿ ಹೊಗಳುತ್ತೇವೆ. ನಾವು ಆರೋಪಿಸುವ ಗುಣಗಳೆಲ್ಲವೂ ಅವನಲ್ಲಿವೆಯೇ ? ನಗು ನಗುತ್ತ ಆಡುತ್ತಿರುವ ಬಾಲಕರ ಪ್ರಾಣಹರಣ ಮಾಡುವುದೂ ಒಂದು ಆಟವೆ ? ದೇವರೂ ಇಂಥ ಪೈಶಾಚಿಕ ಆಟವನ್ನು ಆಡುತ್ತಾನೇನು?

ಇದ್ದಕ್ಕಿದ್ದಂತೆಯೇ ಮೆಲು ಹೆಜ್ಜೆಗಳನ್ನಿಡುತ್ತ ಸುಧಾ ರೂಮಿನ ಒಳಗಡೆ ಬಂದಳು. ಡಾಕ್ಟರು ಸಾಹೇಬರು ಎದ್ದರು. ಎದ್ದು ಆಕೆಯ ಹತ್ತಿರ ಬಂದು ಹೇಳಿದರು – "ಎಲ್ಲಿದ್ದೆ ಸುಧಾ ? ನಾನು ನೀನು ಬರುವುದನ್ನೇ ಕಾಯುತ್ತಿದ್ದೆ.'

ಸುಧಾಳ ಕಣ್ಣುಗಳಿಗೆ ಇಡೀ ರೂಮು ತೇಲುತ್ತಿರುವಂಥ ಅನುಭವವಾಯಿತು. ಗಂಡನ ಕೊರಳನ್ನು ಕೈಗಳಿಂದ ಬಳಸಿ, ತನ್ನಯ ಎದೆಯ ಮೇಲೆ ಇಟ್ಟು ಅವಳು ಅಳಲಾರಂಭಿಸಿದಳು. ಈ ಅಶ್ರುಪ್ರವಾಹದಲ್ಲಿ ಆಕೆಗೆ ಅಸೀಮ ಧೈರ್ಯ ಮತ್ತು ಸಾಂತ್ವನ ಸಿಕ್ಕಂತಾಯಿತು. ಗಂಡನ ಎದೆಗೆ ಒರಗಿದ್ದ ಆಕೆಗೆ ತನ್ನ ಹೃದಯದಲ್ಲಿ ಒಂದು ವಿಚಿತ್ರ

ಬಗೆಯ ಸ್ಫೂರ್ತಿ ಮತ್ತು ಶಕ್ತಿ ಬಂದಂಥ ಅನುಭವವಾಗುತ್ತಿತ್ತು – ಬೀಸುವ ಗಾಳಿಗೆ ನಡುಗುತ್ತಿರುವ ದೀಪಕ್ಕೆ ಸೆರಗಿನ ಮರೆ ಸಿಕ್ಕಿದರೆ ಹೇಗೋ ಹಾಗೆ.

ಡಾಕ್ಟರ್ ಸಾಹೇಬರು ಹೆಂಡತಿಯ ಅಶ್ರುಸಿಂಚಿತ ಕೆನ್ನೆಗಳನ್ನು ತಮ್ಮ ಎರಡು ಕೈಗಳಲ್ಲಿಡಿದುಕೊಂಡು ನುಡಿದರು – " ಸುಧಾ ನೀನು ಮನಸ್ಸನ್ನು ಏಕೆ ಇಷ್ಟು ಚಿಕ್ಕದು ಮಾಡಿಕೊಳ್ತೀಯಾ ? ಸೋಹನ ತನ್ನ ಜೀವನದಲ್ಲಿ ಏನನ್ನು ಮಾಡಲಿಕ್ಕೆ ಬಂದಿದ್ದನೋ ಅದನ್ನು ಮಾಡಿಯಾದ ಮೇಲೆ ಇಲ್ಲಿಯೇ ಯಾಕಾಗಿ ಉಳಿತಿರುತ್ತಾನೆ ! ಯಾವುದೇ ಒಂದು ಮರ ನೀರು ಮತ್ತು ಬೆಳಕಿನಿಂದ ಬೆಳೆಯುವಂತೆ, ಗಾಳಿಯ ಪ್ರಬಲವಾದ ಹೊಡೆತಗಳಿಂದ ಶಕ್ತಿಶಾಲಿಯೂ ಆಗುತ್ತದೆ. ಅದೇ ರೀತಿ ಪ್ರೇಮ ಸಹ ಆಘಾತಗಳಿಂದಲೇ ವಿಕಾಸಗೊಳ್ಳುತ್ತದೆ. ಸುಖದಲ್ಲಿ ನಕ್ಕುನಲಿಯುವವರು ಬಹಳಷ್ಟು ಜನ ಸಿಗ್ತಾರೆ, ದುಃಖದಲ್ಲೂ ನಮ್ಮ ಜೊತೆ ಅಳುವವರೇ ನಮ್ಮ ನಿಜವಾದ ಮಿತ್ರರು. ಪ್ರೇಮಿಗಳ ಜೀವನದಲ್ಲಿ ಜತೆಗೂಡಿ ಅಳುವಂಥ ಸಂದರ್ಭ ಬರಲಿಲ್ಲ ಅಂದರೆ ಅವರಿಗೆ ಪ್ರೇಮದ ಬೆಲೆ ಗೊತ್ತಾಗುವುದಾದರೂ ಹೇಗೆ? ಸೋಹನನ ಮೃತ್ಯು ನಮ್ಮಿಬ್ಬರ ಮಧ್ಯೆ ಇದ್ದ ದ್ವೈತವನ್ನು ಸಂಪೂರ್ಣವಾಗಿ ಅಳಿಸಿ ಹಾಕಿದೆ. ಇವತ್ತೇ ನಾವು ನಮ್ಮ ನಿಜವಾದ ರೂಪವನ್ನು ನೋಡಿದ್ದು ಅಂತ ತಿಳಿದುಕೋ.'

ಸುಧಾ ಬಿಕ್ಕಳಿಸುತ್ತಾ ಹೇಳಿದಳು– "ನಾನು ಅವನಿಗೆ ದೃಷ್ಟಿಯಾಗಿದೆ ಎನ್ನುವ ಭ್ರಮೆಯಲ್ಲಿಯೇ ಇದ್ದೆ. ನೀವು ಅವರ ಮುಖವನ್ನೂ ನೋಡಲಿಕ್ಕೆ ಆಗಲಿಲ್ಲವಲ್ಲ. ಇತ್ತೀಚಿನ ದಿನಗಳಲ್ಲಿ ಅವನಿಗೆ ಇಂಥ ಬುದ್ಧಿ ಎಲ್ಲಿಂದ ಬಂತೋ ಏನೋ ! ನಾನು ಅತ್ತರೆ ಅವನು ತನ್ನ ದುಃಖವನ್ನು ಮರೆತು ನಕ್ಕು ಬಿಡುತ್ತಿದ್ದ. ಜ್ವರ ಬಂದು ಮೂರೇ ದಿನಕ್ಕೆ ನನ್ನ ಮುದ್ದು ಮಗ ಕಣ್ಮುಚ್ಚಿಕೊಂಡ. ಔಷಧಿಯನ್ನೂ ಕೊಡಿಸಲಿಲ್ಲ.'

ಇಷ್ಟು ಹೇಳುತ್ತಿರುವಾಗ ಸುಧಾಳ ಕಣ್ಣುಗಳಿಂದ ಮತ್ತೆ ಕಣ್ಣೀರಿನ ಪ್ರವಾಹ ಹರಿಯಿತು. ಡಾಕ್ಟರ್ ಸಿನ್ಹಾ ಅವಳನ್ನು ಎದೆಗೆ ಆಲಂಗಿಸಿಕೊಂಡು ಕರುಣೆ ತುಂಬಿದ ಧ್ವನಿಯಲ್ಲಿ ಹೇಳಿದರು – "ಪ್ರಿಯೆ, ಇದುವರೆಗೆ ಯಾವುದೇ ಮನೆಯವರು ತಮ್ಮ ಬಾಲಕನೋ, ವೃದ್ಧನೋ ತೀರಿಕೊಂಡಾಗ, ನಾವು ಮಾಡಬೇಕಾದ ಶುಶ್ರೂಷೆ, ಕೊಡಿಸಬೇಕಾದ ಔಷಧಿಗಳನ್ನು ಸಂಪೂರ್ಣವಾಗಿ ಕೊಡಿಸಿದ್ದೇವೆ ಎಂದು ಸಮಾಧಾನ ಪಟ್ಟುಕೊಂಡಿದ್ದಿಲ್ಲ.'

ಸುಧಾ : "ನಿರ್ಮಲಾ ನನ್ನ ಸಹಾಯಕ್ಕೆ ಬಂದಳು. ನಾನು ಆಗೊಮ್ಮೆ ಈಗೊಮ್ಮೆ ತೂಕಡಿಸಿದರೂ ಅವಳು ಒಮ್ಮೆಯಾದರೂ ಕಣ್ಣು ಮುಚ್ಚಲಿಲ್ಲ. ಇಡೀ ರಾತ್ರಿ ಕುಳಿತಿರುತ್ತಿದ್ದಳು, ಇಲ್ಲ, ತಿರುಗಾಡುತ್ತಿರುತ್ತಿದ್ದಳು. ಅವಳು ಮಾಡಿದ ಸಹಾಯವನ್ನು ನಾನು ಎಂದಿಗೂ ಮರೆಯುವಂತಿಲ್ಲ. ನೀವು ಇವತ್ತೇ ಹೋಗ್ತಿದ್ದೀರೇನು ?'

ಡಾಕ್ಟರ್ : "ಹೌದು, ರಜೆ ತೆಗೆದುಕೊಂಡು ಬರಲಿಕ್ಕೆ ಬಿಡುವೇ ಇರಲಿಲ್ಲ. ಸಿವಿಲ್ ಸರ್ಜನ್ ಶಿಕಾರಿಗೆ ಹೋಗಿದ್ದರು.'

ಸುಧಾ : "ಅವರು ಯಾವಾಗಲೂ ಶಿಕಾರಿಯಲ್ಲೇ ಇರ್ತಾರೇನು?'

ಡಾಕ್ಟರ್ : "ರಾಜರುಗಳಿಗೆ ಇನ್ನೇನು ಕೆಲಸ ?'

ಸುಧಾ : "ಇವತ್ತು ಹೋಗಲಿಕ್ಕೆ ನಾನು ಬಿಡುವುದಿಲ್ಲ.'

ಡಾಕ್ಟರ್ : "ನನಗೂ ಹೋಗಲಿಕ್ಕೆ ಮನಸ್ಸಿಲ್ಲ.'

ಸುಧಾ : "ಹಾಗಾದರೆ ಸರಿ, ತಂತಿ ಕೊಟ್ಬಿಡಿ. ನಾನು ನಿಮ್ಮ ಜತೆಯಲ್ಲೇ ಬರ್ತೀನಿ. ನಿರ್ಮಲಾಳನ್ನು ಕರೆದುಕೊಂಡು ಹೋಗೋಣ.'

ಸುಧಾ ಅಲ್ಲಿಂದ ಹಿಂತಿರುಗಿದಳು. ಅವಳ ಹೃದಯದ ಭಾರ ಈಗ ಕೊಂಚ ಹಗುರವಾದಂತೆ ಆಗಿತ್ತು. ಗಂಡನ ಪ್ರೇಮದ ಕೋಮಲ ಮಾತುಗಳು ಅವಳ ಎಲ್ಲ ದುಃಖವನ್ನು ದೂರಮಾಡಿದ್ದವು. ಪ್ರೇಮದಲ್ಲಿ ಅಸೀಮ ವಿಶ್ವಾಸವಿದೆ, ಅಸೀಮ ಧೈರ್ಯವಿದೆ, ಅಸೀಮ ಶಕ್ತಿ ಇದೆ.

## ಹದಿನೆಂಟು

ನಮಗೆ ಕಷ್ಟಗಳು ಬಂದಾಗ ಅವುಗಳಿಂದ ನಮಗೆ ದುಃಖವಷ್ಟೇ ಆಗುವುದಿಲ್ಲ. ಬೇರೆಯವರ ಬೈಗುಳನ್ನು ಸಹ ಸಹಿಸಿಕೊಳ್ಳಬೇಕಾಗುತ್ತದೆ. ನಮ್ಮ ಬಗ್ಗೆ ಮಾತನಾಡಿಕೊಳ್ಳಲು ಜನಕ್ಕೆ ಒಂದು ಅವಕಾಶ ಸಿಗುತ್ತದೆ. ಇಂಥ ಒಂದು ಅವಕಾಶಕ್ಕಾಗಿ ಅವರು ತುದಿಗಾಲಿನಲ್ಲಿ ನಿಂತಿರುತ್ತಾರೆ. ಮಂಸಾರಾಮ ಸಾಯುತ್ತಿದ್ದಂತೆಯೇ ಸಮಾಜಕ್ಕೆ ಆತನ ಬಗ್ಗೆ ಮಾತನಾಡಿಕೊಳ್ಳಲು ಒಂದು ನೆಪ ಸಿಕ್ಕಿತು. ಒಳಗಿನ ವಿಷಯ ಯಾರಿಗೆ ಗೊತ್ತು ? ಆದರೆ ಪ್ರತ್ಯಕ್ಷವಾಗಿ ಕಾಣಿಸುವ ವಿಷಯವೆಂದರೆ ಇದೆಲ್ಲ ಮಲತಾಯಿಯ ಪ್ರಸಾದ. ಮಲತಾಯಿಯ ಕೈಲಿ ಸಾಕಿ ಸಲಹಿಸಿಕೊಳ್ಳುವಂಥ ಗತಿ ದೇವರು ಯಾರಿಗೂ ಕೊಡದಿರಲಿ ಎಂದೇ ಎಲ್ಲರೂ ಮಾತನಾಡಿಕೊಳ್ಳುತ್ತಿದ್ದರು. ನಿಮ್ಮ ನಗುನಗುತ್ತಿರುವ ಸಂಸಾರವನ್ನು ಹಾಳುಗೆಡಹಿ ಕೊಳ್ಳಬೇಕೆ, ನಿಮ್ಮ ಮಕ್ಕಳ ಕೊರಳಿಗೆ ಉರುಳು ಹಾಕಬೇಕೆ, ಹಾಗಿದ್ದರೆ ಮೊದಲ ಹೆಂಡತಿಯ ಮಕ್ಕಳು ಬದುಕಿರುವಾಗಲೇ ಎರಡನೆಯ ಮದುವೆ ಮಾಡಿಕೊಳ್ಳಿ ಎಂದು ಅಂದುಕೊಳ್ಳುತ್ತಿದ್ದರು. ಎರಡನೆಯ ಹೆಂಡತಿ ಮನೆಗೆ ಕಾಲಿರಿಸುತ್ತಿದ್ದಂತೆಯೇ ಮನೆ ಹಾಳಾಗಿ ಹೋಗಿದ್ದನ್ನು ಎಲ್ಲಾದರೂ ಕಂಡಿದ್ದೀರೇನು ? ಆಕೆ ಮನೆಗೆ ಬರುವುದಕ್ಕೆ ಮುಂಚೆ ಈ ತಂದೆ ಮಕ್ಕಳು ಅಂದರೆ ಪ್ರಾಣ ಬಿಡುತ್ತಿದ್ದ. ಅದೇ ಆಕೆ ಬರುತ್ತಿದ್ದಂತೆಯೇ ಶತ್ರುವಾಗಿಬಿಟ್ಟ. ಈತನ ಬುದ್ಧಿಯೇ ಬದಲಾಗಿ ಬಿಟ್ಟಿತು. ಮೊದಲ ಹೆಂಡತಿಯ ಮಕ್ಕಳನ್ನು ತನ್ನ ಮಕ್ಕಳು ಅಂತ ತಿಳಿದುಕೊಂಡಿರುವ ಹೆಣ್ಣೇ ಈ ಪ್ರಪಂಚದಲ್ಲಿ ಜನ್ಮವೆತ್ತಿಲ್ಲ ಅಂತ ಕಾಣುತ್ತದೆ.

ಜನ ಈ ರೀತಿ ಟೀಕೆ ಟಿಪ್ಪಣಿ ಮಾಡಿ ಸುಮ್ಮನಾಗುತ್ತಿರಲಿಲ್ಲ. ಕೆಲವರು ಜಿಯಾರಾಮ ಮತ್ತು ಸಿಯಾರಾಮರೊಡನೆ ವಿಶೇಷ ಸ್ನೇಹ ಬೆಳೆಸಿಕೊಂಡರು. ಈ ಇಬ್ಬರಿಗೆ ಅವರು

ಬಹುವಾದ ಸಹಾನುಭೂತಿಯನ್ನು ತೋರಿಸಲಾರಂಭಿಸಿದರು. ಒಂದಿಬ್ಬರು ಮಹಿಳೆಯರಂತೂ ಅವರ ತಾಯಿಯ ಗುಣ ಸ್ವಭಾವವನ್ನು ನೆನಪು ಮಾಡಿಕೊಂಡು ಕಣ್ಣೀರು ಸುರಿಸಿದರು. ಅಯ್ಯೋ ದೇವರೆ, ತಾನು ಸತ್ತ ಮೇಲೆ ತನ್ನ ಮಕ್ಕಳ ಗತಿ ಹೀಗಾಗುತ್ತೆ ಅಂತ ಆಕೆಗೆ ಗೊತ್ತಿತ್ತೇನೆ? ಪಾಪ ! ಈಗ ಮಕ್ಕಳಿಗೆ ಕುಡಿಯಲಿಕ್ಕೆ ಹಾಲಿಲ್ಲ, ತಿನ್ನಲಿಕ್ಕೆ ತುಪ್ಪವಿಲ್ಲ, ಎಂದೆಲ್ಲ ಶೋಕಿಸುತ್ತಿದ್ದರು.

ಸಿಯಾರಾಮ ಕೇಳುತ್ತಿದ್ದ –"ಏಕಿಲ್ಲ ? ಹಾಲು–ತುಪ್ಪ ಕೊಡುತ್ತಿದ್ದಾರಲ್ಲ?' ಹೆಂಗಸರು ಹೇಳುವರು– "ಕೊಡ್ತಾರೆ, ಕೊಡ್ತಾರೆ. ಮಗು, ಹಾಲು ಕೊಟ್ಟರೇನಾಯಿತು, ಕೊಡುವುದರಲ್ಲೂ ನಾಲ್ಕಾರು ಬಗೆಗಳಿವೆ. ನೀರುಹಾಲನ್ನು ಒಂದು ಸೇರು ತರಿಸಿಟ್ಟಾಯಿತು. ಕುಡಿದರೆ ಕುಡಿ, ಬಿಟ್ಟರೆ ಬಿಡಿ ಅಂದರಾಯಿತೇನು ? ಯಾಕೆ ಕುಡೀಲಿಲ್ಲ ಅಂತ ಯಾರಾದರೂ ಕೇಳ್ತಾರೇನು ? ಕರೆಸಿದ ಹಾಲಿಗೂ, ತರಿಸಿದ ಹಾಲಿಗೂ ವ್ಯತ್ಯಾಸವಿಲ್ಲವೇನು? ಅದರ ಮುಖ ನೋಡಿದರೇ ಗೊತ್ತಾಗುತ್ತೆ ಹಾಲಿನ ರೂಪವನ್ನು ಮುಚ್ಚಿಡುವುದಕ್ಕಾಗುವು ದಿಲ್ಲ ಗೊತ್ತೇನು?' ಈ ಆಕ್ಷೇಪಣೆಗೆ ಉತ್ತರ ಕೊಡಲು ಜಿಯಾರಾಮನಿಗೆ ತನ್ನ ತಾಯಿ ಬದುಕಿದ್ದಾಗ ಆಕೆ ಕೊಡುತ್ತಿದ್ದ ಹಾಲಿನ ರುಚಿಯ ನೆನಪು ಇರಲಿಲ್ಲ. ಹೀಗಾಗಿ ಸುಮ್ಮನಾಗುತ್ತಿದ್ದ.

ಈ ಎಲ್ಲರ ಶುಭಾಕಾಂಕ್ಷೆಗಳ ಪ್ರಭಾವ ಆಗುವುದು ಸಹಜವಾಗಿಯೇ ಇತ್ತು. ಜಿಯಾರಾಮನಿಗೆ ತನ್ನ ಮನೆಯವರನ್ನು ಕಂಡರೇ ಒಂದು ಬಗೆಯ ದ್ವೇಷವಾಗ ಲಾರಂಭಿಸಿತು. ಮನೆ ಹರಾಜಾದ ಮೇಲೆ ವಕೀಲರು ಇನ್ನೊಂದು ಬಾಡಿಗೆ ಮನೆ ಹಿಡಿದರು. ಈಗ ಬಾಡಿಗೆ ಕೊಡಬೇಕೆಂಬ ಚಿಂತೆ ಕಾಡತೊಡಗಿತು. ನಿರ್ಮಲಾ ಬೆಣ್ಣೆ ತೆಗೆದುಕೊಳ್ಳುವುದನ್ನು ನಿಲ್ಲಿಸಿದಳು. ಆದಾಯವೇ ಇಲ್ಲದಾಗ ಖರ್ಚು ಹೇಗೆ ಮಾಡುವುದು ! ಮನೆಯಲ್ಲಿದ್ದ ಇಬ್ಬರು ಕೆಲಸಗಾರರನ್ನೂ ಬಿಡಿಸಿದರು. ಇದೆಲ್ಲ ಜಿಯಾರಾಮನಿಗೆ ಕೊಂಚವೂ ಇಷ್ಟವಾಗಲಿಲ್ಲ. ನಿರ್ಮಲಾ ತೌರುಮನೆಗೆ ಹೋದಾಗ ವಕೀಲರು ಹಾಲನ್ನೂ ನಿಲ್ಲಿಸಿದರು. ಈಗ ತಾನೆ ಜನ್ಮ ತಾಳಿರುವ ಹೆಣ್ಣು ಮಗುವಿನ ಚಿಂತೆ ಈಗಲಿಂದಲೇ ಅವರ ತಲೆ ತಿನ್ನುತ್ತಿತ್ತು.

ಜಿಯಾರಾಮ ಕೋಪದಿಂದಲೇ ನುಡಿದ–'ಹಾಲನ್ನು ನಿಲ್ಲಿಸಿದ ಮಾತ್ರಕ್ಕೆ ನೀವು ಮನೆ ಕಟ್ಟಿಸುವಂತಿದ್ದರೆ ಊಟವನ್ನೂ ನಿಲ್ಲಿಸಿಬಿಡಿ.'

ವಕೀಲರು : 'ಹಾಲು ಕುಡಿಯಲೇಬೇಕು ಅಂತಿದ್ದರೆ ಹೋಗಿ ಹಾಲನ್ನು ಕರೆಸಿಕೊಂಡು ಯಾಕೆ ಬರಬಾರದು ? ಇಲ್ಲಿ ನೀರಿಗೆ ದುಡ್ಡು ಕೊಡಲು ನನ್ನಿಂದಾಗುವುದಿಲ್ಲ.'

ಜಿಯಾರಾಮ : 'ನಾನು ಹಾಲು ಕರೆಸಿಕೊಂಡು ಬರಲು ಹೋದಾಗ ನಮ್ಮ ಸ್ಕೂಲಿನ ಹುಡುಗರು ನೋಡಿದರೆ?'

ವಕೀಲರು : 'ನೋಡಿದರೆ ! ಏನಾಗುತ್ತೆ ? ಮನೆಗೆ ಹಾಲು ತರಲು ಹೋಗಿದ್ದೆ ಅಂತ ಹೇಳು. ಹಾಲು ತರುವುದು ಕಳ್ಳತನವೇನಲ್ಲವಲ್ಲ?'

ಜಿಯಾರಾಮ : "ಕಳ್ಳತನವಲ್ಲವೆ? ನೀವು ಹಾಲು ತರುತ್ತಿರುವಾಗ ಯಾರಾದರೂ ನೋಡಿದರೆ ನಿಮಗೆ ನಾಚಿಕೆಯಾಗುವುದಿಲ್ಲವೇನು?'

ವಕೀಲರು : 'ಖಂಡಿತ ಆಗುವುದಿಲ್ಲ. ನನ್ನ ಈ ಕೈಗಳಿಂದಲೇ ನಾನು ನೀರು ಸೇದಿದ್ದೀನಿ, ಅಕ್ಕಿ, ಗೋಧಿ ಚೀಲಗಳನ್ನು ಹೊತ್ತು ತಂದಿದ್ದೀನಿ, ನನ್ನ ತಂದೆ ಲಖಪತಿಯೇನು ಆಗಿರಲಿಲ್ಲ.'

ಜಿಯಾರಾಮ : ' ನನ್ನ ತಂದೆ ಬಡವರೇನೂ ಅಲ್ಲ. ನಾನ್ಯಾಕೆ ಹೋಗಿ ಹಾಲು ಕರೆಸಿಕೊಂಡು ಬರಬೇಕು ? ಮನೆಯಲ್ಲಿದ್ದ ಕೆಲಸಗಾರರನ್ನು ಯಾಕೆ ಕೆಲಸದಿಂದ ತೆಗೆದಿರಿ ನೀವು?'

ವಕೀಲರು : 'ನನ್ನ ಸಂಪಾದನೆ ಮೊದಲಿನಂತಿಲ್ಲ ಎಂಬುದು ನಿನ್ನ ಕಣ್ಣಿಗೆ ಕಾಣಿಸುತ್ತಿಲ್ಲವೇನು ? ನನ್ನ ಸ್ಥಿತಿ ಅರ್ಥ ಮಾಡಿಕೊಳ್ಳದಷ್ಟು ಮುಗ್ಧನೇನೂ ಅಲ್ಲವಲ್ಲ ನೀನು?'

ಜಿಯಾರಾಮ : 'ನಿಮ್ಮ ಸಂಪಾದನೆ ಯಾಕಾದರೂ ಕಡಿಮೆಯಾಯ್ತು?'

ವಕೀಲರು : ' ನಿನಗೆ ಬುದ್ಧಿಯೇ ಇಲ್ಲಾಂದ ಮೇಲೆ ನಿನಗೆ ಹೇಗೆ ಹೇಳಲಿ ನಾನು? ಇತ್ತೀಚೆಗೆ ಈ ಬದುಕೇ ಸಾಕಾಗಿದೆ. ಇಂಥಾದ್ದರಲ್ಲಿ ಮೊಕದ್ದಮೆಗಳನ್ನು ಹೇಗೆ ತಗೋಬೇಕು? ತಗೊಂಡರೂ ಅದನ್ನು ನಿಭಾಯಿಸುವರು ಯಾರು ? ಮೊದಲಿದ್ದ ಮನಸ್ಥಿತಿಯೂ ಈಗ ಉಳಿದಿಲ್ಲ. ಈಗ ನಾನು ನನ್ನ ಉಳಿದ ದಿನಗಳನ್ನು ಲೆಕ್ಕ ಹಾಕುತ್ತಿದ್ದೇನೆ. ನನ್ನ ಎಲ್ಲ ಆಸೆ, ಆಕಾಂಕ್ಷೆಗಳು ನಿನ್ನ ಅಣ್ಣನ ಜತೆಯಲ್ಲೇ ಹೊರಟು ಹೋದವು.'

ಜಿಯಾರಾಮ : ' ನೀವು ನಿಮ್ಮ ಕೈಯಾರೆ ಮಾಡಿದ್ದು ತಾನೆ?'

ವಕೀಲರು ಕಿರುಚಿ ಹೇಳಿದರು : ' ಸಾಕು ನಿಲ್ಲಿಸೋ ಬದ್‌ಮಾಶ್, ಎಲ್ಲ ದೇವರ ಇಚ್ಛೆ. ತನ್ನ ಕೈಯಿಂದಲೇ ಯಾರಾದರೂ ತಮ್ಮ ಕೊರಳನ್ನು ತಾವೇ ಕತ್ತರಿಸಿಕೊಳ್ತಾರೇನು?'

ಜಿಯಾರಾಮ : 'ದೇವರು ಬಂದು ನಿಮ್ಮ ಮದುವೆ ಮಾಡಲಿಲ್ಲವಲ್ಲ?'

ವಕೀಲರು ಈಗ ಸಹನೆ ಕಳೆದುಕೊಂಡರು. ಕಣ್ಣುಗಳನ್ನು ಕೆಂಪು ಮಾಡಿಕೊಂಡು ನುಡಿದರು –' ಇವತ್ತು ನನ್ನ ಜತೆ ಜಗಳ ಆಡಬೇಕೂಂತ ಕಾಲು ಕೆರೆದುಕೊಂಡು ಬಂದಿದ್ದೀಯೇನು? ಯಾವ ಗತ್ತಿನ ಮೇಲೆ ಬಂದಿದ್ದಿ? ನೀನು ದುಡಿದದ್ದನ್ನು ನಾನು ತಿನ್ತಿಲ್ಲವಲ್ಲ? ಅಂಥ ದಿನ ಬಂದಾಗ ನನಗೆ ಉಪದೇಶ ಕೊಡುವಿಯಂತೆ, ಆಗ ನಾನು ಕೇಳ್ತೀನಿ. ಈಗ ನನಗೆ ಉಪದೇಶ ಕೊಡುವಂಥ ಯಾವ ಅಧಿಕಾರವೂ ನಿನಗಿಲ್ಲ. ಇನ್ನೂ ಕೊಂಚ ದಿನ ವಿನಯ ಮತ್ತು ಒಳ್ಳೆಯ ಸಂಸ್ಕಾರಗಳನ್ನು ಕಲಿತುಕೊ. ನಾನು ಏನು ಕೆಲಸ ಮಾಡ್ತೀನೋ ಅದಕ್ಕೆ ನಿನ್ನಿಂದ ಸಲಹೆ–ಸೂಚನೆಗಳನ್ನು ತೆಗೆದುಕೊಳ್ಳೋಕೆ ನೀನೇನೂ ನನ್ನ ಸಲಹೆಗಾರನಲ್ಲ. ನಾನು ಸಂಪಾದಿಸಿರೋ ಆಸ್ತೀನ ನನ್ನಿಷ್ಟ ಬಂದ ಹಾಗೆ ಖರ್ಚು ಮಾಡ್ತೀನಿ. ಇದರ ಬಗ್ಗೆ ತುಟಿ ಎರಡು ಮಾಡೋದಕ್ಕೆ ನಿನಗೆ ಯಾವ ಅಧಿಕಾರವೂ ಇಲ್ಲ. ಇನ್ನೊಂದ್ಸಾರಿ ಈ ರೀತಿ ನೀನು ನನ್ನ ಜತೆ ಅಸಭ್ಯವಾಗಿ ನಡೆದುಕೊಂಡೆ ಅಂದ್ರೆ ಪರಿಣಾಮ

ನೆಟ್ಟಗಾಗೊಲ್ಲ. ಮಂಸಾರಾಮನಂಥ ರತ್ನವನ್ನು ಕಳೆದುಕೊಂಡೇ ನನ್ನ ಪ್ರಾಣ ಹೋಗಲಿಲ್ಲಾಂದ ಮೇಲೆ ನೀನಿಲ್ಲದೇ ಹೋದರೆ ನಾನು ಖಂಡಿತ ಸಾಯುವುದಿಲ್ಲ, ಗೊತ್ತಾಯ್ತೇನು?'

ತಂದೆಯಿಂದ ಇಷ್ಟು ಬೈಗುಳನ್ನು ತಿಂದರೂ ಜಿಯಾರಾಮ ಅಲ್ಲಿಂದ ಕದಲಲಿಲ್ಲ. ಯಾವುದೇ ಸಂಕೋಚವಿಲ್ಲದೆ ಹೇಳಿದ – "ಹಾಗಾದರೆ ನಮಗೆ ಎಷ್ಟೇ ತೊಂದರೆ ಆದ್ರೂ ಬಾಯಿ ಬಿಡಬಾರ್ದು ಅಂತ ತಾನೆ ನೀವು ಹೇಳೋದು? ನನ್ನಿಂದ ಇದು ಸಾಧ್ಯವಿಲ್ಲ. ವಿನಯ ಮತ್ತು ಒಳ್ಳೆಯ ಸಂಸ್ಕಾರಗಳನ್ನಿಟ್ಟುಕೊಂಡಿದ್ದ ಅಣ್ಣನಿಗೆ ಸಿಕ್ಕ ಬಹುಮಾನದ ಆಸೆ ನನಗಿಲ್ಲ. ವಿಷ ತಿಂದು ಪ್ರಾಣ ಬಿಡುವಷ್ಟು ಧೈರ್ಯ ನನ್ನಲಿಲ್ಲ. ಇಂಥ ವಿನಯಕ್ಕೆ ದೂರದಿಂದಲೇ ನಮೋ ನಮಃ.'

ವಕೀಲರು : "ಇಂಥ ಮಾತುಗಳನ್ನು ಆಡೋದಕ್ಕೆ ನಿನಗೆ ನಾಚಿಕೆ ಆಗೊಲ್ವೇನು?'

ಜಿಯಾರಾಮ : "ಹುಡುಗರು ದೊಡ್ಡವರನ್ನು ನಕಲು ಮಾಡ್ತಾರೆ.'

ವಕೀಲರ ಕೋಪ ಶಾಂತವಾಯಿತು. ಜಿಯಾರಾಮನ ಮೇಲೆ ತಮ್ಮ ಮಾತುಗಳ ಯಾವ ಪ್ರಭಾವವೂ ಆಗುತ್ತಿಲ್ಲ ಎಂಬ ಮಾತಿನ ಅರಿವು ಆಗುತ್ತಿತ್ತು. ಸರಿ, ಎಂದು ಎದ್ದು ಹೊರಗೆ ಬಂದರು. ಈ ಮನೆ ಬಹಳ ಬೇಗ ಸರ್ವನಾಶವಾಗಿಬಿಡುತ್ತದೆ ಎಂಬ ತೀರ್ಮಾನಕ್ಕೆ ಬಂದರು.

ಅವತ್ತಿನಿಂದಾಚೆಗೆ ತಂದೆ–ಮಗನ ಮಧ್ಯೆ ಒಂದಲ್ಲ ಒಂದು ವಿಷಯಕ್ಕೆ ದಿನವೂ ಜಗಳ ನಡೆದೇ ಇರುತ್ತಿತ್ತು. ವಕೀಲರು ಎಷ್ಟು ಶಾಂತ ರೀತಿಯಿಂದ ಮಾತನಾಡುತ್ತಿದ್ದರೋ ಅಷ್ಟೇ ಜೋರಾಗಿ ಮಾತನಾಡುತ್ತಿದ್ದ ಜಿಯಾರಾಮ ಹುಲಿಯಂತಾಗುತ್ತಿದ್ದ. ಒಂದು ದಿನ ರುಕ್ಮಿಣಿಗೆ ಜಿಯಾರಾಮ ಎಷ್ಟರ ಮಟ್ಟಿಗೆ ಹೇಳಿದನೆಂದರೆ. "ಅಪ್ಪ ಅಂತ ಸುಮ್ಮನೆ ಬಿಟ್ಟಿದ್ದೀನಿ. ಅಲ್ಲದೆ ಹೋಗಿದ್ದಿದ್ದರೆ ತುಂಬಿದ ಪೇಟೆಯಲ್ಲಿ ಹೊಡೆಸಿ ಬಿಡುತ್ತಿದ್ದೆ. ಅಂಥ ಸ್ನೇಹಿತರಿದ್ದಾರೆ ನನಗೆ.' ರುಕ್ಮಿಣಿ ಈ ಮಾತುಗಳನ್ನು ವಕೀಲರಿಗೆ ಹೇಳಿದಳು. ವಕೀಲರು ಮೇಲು ನೋಟಕ್ಕೆ ಅಲಕ್ಷ್ಯ ತೋರಿದಂತೆ ನಟಿಸಿದರೂ ಅವರ ಮನಸ್ಸಿನಲ್ಲಿ ಒಂದು ಬಗೆಯ ಅನುಮಾನ ಮನೆ ಮಾಡಿಕೊಂಡಿತು. ಸರಿ, ಸಂಜೆ ಹೊತ್ತು ವಾಯು ವಿಹಾರಕ್ಕೆಂದು ಹೊರಗೆ ಹೋಗುವುದನ್ನು ನಿಲ್ಲಿಸಿದರು. ಈಗ ಅವರ ತಲೆಯ ಮೇಲೆ ಇನ್ನೊಂದು ಚಿಂತೆ ಸವಾರಿ ಮಾಡತೊಡಗಿತು. ನಿರ್ಮಲಾಳ ಜತೆಯೂ ಈ ಮೂಢ ಇದೇ ರೀತಿ ವ್ಯವಹರಿಸಿದರೆ ಏನು ಮಾಡುವುದು ಎಂದು ಯೋಚಿಸಿ, ನಿರ್ಮಲಾಳನ್ನು ಕರೆಸಿಕೊಳ್ಳಲಿಲ್ಲ. ಒಂದು ಸಾರಿ ಜಿಯಾರಾಮ ಮೆಲುದನಿಯಲ್ಲಿ ಹೇಳಿಯೂ ಇದ್ದ.–'ನಾನೂ ನೋಡ್ತೀನಿ ಈ ಸಾರಿ ಅವಳು ಹೇಗೆ ಮನೆಗೆ ಬರ್ತಾಳೆ ಅಂತ. ದೂರದಲ್ಲಿ ಕಾಣುತ್ತಿದ್ದಂತೆಯೇ ನಾನು ಉಗಿದು ಹಿಂದಕ್ಕೆ ಅಟ್ಟದೇ ಹೋದರೆ ನನ್ನ ಹೆಸರು ಜಿಯಾರಾಮ ಅಲ್ಲ. ಈ ಮುದುಕ ಏನ್ ಮಾಡಿಕೊಳ್ತಾನೋ ನಾನೂ ನೋಡ್ತೀನಿ.' ಈತನಿಗೆ ಏನನ್ನು ಸಹ ಮಾಡಲು ತನ್ನಿಂದ ಸಾಧ್ಯವಿಲ್ಲ ಎಂಬುದು ವಕೀಲರಿಗೂ ಗೊತ್ತಿತ್ತು. ಹೊರಗಿನ ಮನುಷ್ಯ ಆಗಿದ್ದರೆ

ಪೋಲೀಸರ ಮತ್ತು ಕಾನೂನಿನ ವಶಕ್ಕೆ ಕೊಡಬಹುದಿತ್ತು. ಆದರೆ ತನ್ನ ಮಕ್ಕಳಿಗೆ ಏನು ಮಾಡುವುದು. ಮನುಷ್ಯ ಸೋತರೆ ತನ್ನ ಮಕ್ಕಳಿಗೇ ಸೋಲುತ್ತಾನೆ ಅಂತ ಸರಿಯಾಗಿಯೇ ಹೇಳಿದ್ದಾರೆ.

ಒಂದು ದಿನ ಡಾ. ಸಿನ್ಹಾರವರು ಜಿಯಾರಾಮನನ್ನು ಕರೆದು ಬುದ್ಧಿ ಹೇಳಲು ಪ್ರಾರಂಭಿಸಿದರು. ಜಿಯಾರಾಮ ಅವರನ್ನು ಗೌರವಿಸುತ್ತಿದ್ದ. ಸರಿ, ಸುಮ್ಮನೆ ಅವರ ಮಾತುಗಳನ್ನು ಕೇಳುತ್ತ ಕುಳಿತ. ಕೊನೆಯಲ್ಲಿ ಡಾಕ್ಟರು "ನೀನು ಏನು ಇಷ್ಟ ಪಡ್ತೀಯಾ, ನಿನ್ನ ಮನಸ್ಸಿನಲ್ಲಿ ಏನಿದೆ ಅದನ್ನಾದರೂ ಹೇಳು ?' ಅಂದದಕ್ಕೆ ಜಿಯಾರಾಮ ನುಡಿದ – "ಸ್ಪಷ್ಟವಾಗಿ ಹೇಳಲಾ ? ತಪ್ಪು ತಿಳ್ಕೋಳಲ್ಲವಾ ನೀವು?'

ಸಿನ್ಹಾ – "'ಇಲ್ಲ, ನಿನ್ನ ಮನಸ್ಸಿನಲ್ಲಿರುವುದನ್ನು ಸ್ಪಷ್ಟವಾಗಿ ಹೇಳಿಬಿಡು.'

ಜಿಯಾರಾಮ : "ಹಾಗಾದರೆ ಕೇಳಿ, ಅಣ್ಣಯ್ಯ ಸತ್ತ ಮೇಲೆ ಅಪ್ಪಾಜಿಯ ಮುಖ ನೋಡಿದರೆ ಸಾಕು, ಕೋಪ ಉಕ್ಕಿ ಬರುತ್ತೆ ಇವರೇ ಅಣ್ಣಯ್ಯನ ಹತ್ಯೆ ಮಾಡಿದರು ಅಂತಾನೆ ನನಗನ್ನಿಸುತ್ತೆ ಅವಕಾಶ ಸಿಕ್ಕರೆ ಒಂದಲ್ಲ ಒಂದು ದಿನ ಉಳಿದಿರುವ ನಮ್ಮಿಬ್ಬರ ಹತ್ಯೆಯನ್ನೂ ಮಾಡಿ ಬಿಡುತ್ತಾರೆ. ಇದು ಅವರ ಇಷ್ಟವಾಗಿಲ್ಲದೇ ಇದ್ದಿದ್ದರೆ ಅವರು ಈ ಮದುವೆಯನ್ನಾದರೂ ಯಾಕೆ ಮಾಡಿಕೊಳ್ಳುತ್ತಿದ್ದರು?'

ಡಾಕ್ಟರು ತುಂಬ ಕಷ್ಟದಿಂದ ಉಕ್ಕಿಬರುತ್ತಿದ್ದ ತಮ್ಮ ನಗುವನ್ನು ತಡೆದು ಹೇಳಿದರು – "ನಿಮ್ಮ ಹತ್ಯೆ ಮಾಡಲು ಅವರು ಮದುವೆಯಾಗಬೇಕಿತ್ತು ಎಂಬ ನಿನ್ನ ತರ್ಕ ನನಗೆ ಅರ್ಥವಾಗುತ್ತಿಲ್ಲ. ಮದುವೆ ಮಾಡಿಕೊಳ್ಳದೆಯೇ ನಿಮ್ಮ ಹತ್ಯೆ ಮಾಡಬಹುದಿತ್ತಲ್ಲ?'

ಜಿಯಾರಾಮ : "ಇಲ್ಲ, ಅದು ಎಂದೂ ಆಗ್ತಿರಲಿಲ್ಲ. ಆಗ ಅವರ ಮನಸ್ಸು ಬೇರೆ ರೀತಿಯಿತ್ತು. ನಮ್ಮನ್ನು ಕಂಡರೆ ಪ್ರಾಣ ಬಿಡುತ್ತಿದ್ದರು. ಈಗ ನಮ್ಮ ಮುಖವನ್ನು ನೋಡಲು ಸಹ ಇಷ್ಟ ಪಡುತ್ತಿಲ್ಲ. ಈಗ ಅವರಿಬ್ಬರ ಹೊರತಾಗಿ ಬೇರೆ ಯಾರೂ ಆ ಮನೆಯಲ್ಲಿರಬಾರದೆಂಬುದೇ ಅವರ ಇಚ್ಛೆಯಾಗಿದೆ. ಈಗ ಅವರಿಗೆ ಆಗುವ ಗಂಡು ಮಕ್ಕಳ ಹಾದಿಯಿಂದ ನಮ್ಮನ್ನು ದೂರ ಮಾಡಬೇಕು ಎಂಬುದೇ ಅವರಿಬ್ಬರ ಮನಸ್ಸಿನ ಆಸೆಯಾಗಿದೆ. ಅದಕ್ಕೆ ಅವರು ನಮಗೆ ನಾನಾ ಬಗೆಯ ಕಷ್ಟಗಳನ್ನು ಕೊಟ್ಟು ಮನೆಯಿಂದ ಹೊರಗೆ ಅಟ್ಟಲು ಪ್ರಯತ್ನಿಸುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಅವರು ಇತ್ತೀಚೆಗೆ ಯಾವ ಮೊಕದ್ದಮೆಗಳನ್ನೂ ತೆಗೆದುಕೊಳ್ಳುತ್ತಿಲ್ಲ. ನಾವು ಅಣ್ಣ–ತಮ್ಮ ಇವತ್ತು ಸತ್ತೆವು ಅಂದರೆ, ನೋಡ್ತಿರಿ, ನಾಳೆಯಿಂದ ಅವರ ಬದುಕಿನಲ್ಲಿ ಎಂಥ ಉಲ್ಲಾಸ ಬರುತ್ತೆ ಅಂತ.'

ಡಾಕ್ಟರು : "ನಿಮಗೆ ಮನೆಯಿಂದ ಹೊರಗೆ ಕಳುಹಿಸಲೇಬೇಕೆಂದುಕೊಂಡಿದ್ದರೆ ಏನಾದರೂ ಒಂದು ಆರೋಪ ಹೊರಿಸಿ ಮನೆಯಿಂದ ಹೊರಗೆ ಅಟ್ಟುತ್ತಿದ್ದರು.'

ಜಿಯಾರಾಮ : "ಹಾಗೆ ಮಾಡಲಿ ಅಂತಾನೆ ನಾನು ತಯಾರಾಗಿಯೇ ಕುಳಿತಿದ್ದೀನಿ.'

ಡಾಕ್ಟರ್ : "ಏನ್ ತಯಾರಿ ನಡೆಸಿದ್ದೀಯಪ್ಪ?'

ಜಿಯಾರಾಮ : "ಸಮಯ ಬಂದಾಗ ನಿಮಗೇ ಗೊತ್ತಾಗುತ್ತೆ'

ಇಷ್ಟು ಹೇಳಿ ಜಿಯಾರಾಮ ಹೊರಟು ಬಿಟ್ಟ. ಡಾಕ್ಟರ್ ಸಿನ್ಹಾ ಬಹಳಷ್ಟು ಸಾರಿ ಕರೆದರು. ಆದರೆ ಅವನು ತಿರುಗಿಯೂ ನೋಡಲಿಲ್ಲ. ಮುಂದೆ ಎಷ್ಟೋ ದಿನಗಳ ನಂತರ ಡಾಕ್ಟರ್ ಸಾಹೇಬರು ಒಮ್ಮೆ ಜಿಯಾರಾಮನನ್ನು ಸಂಧಿಸುವ ಪ್ರಸಂಗ ಬಂತು. ಡಾಕ್ಟರ್ ಸಾಹೇಬರು ಸಿನೆಮಾಪ್ರಿಯರು. ಜಿಯಾರಾಮನ ಪ್ರಾಣವಂತೂ ಸಿನೆಮಾಗಳಲ್ಲಿಯೇ ಇತ್ತು. ಡಾಕ್ಟರ್ ಸಾಹೇಬರು ಸಿನೆಮಾದ ವಿಮರ್ಶೆ ಮಾಡುತ್ತ ಜಿಯಾರಾಮನನ್ನು ಮಾತಿಗೆ ಎಳೆದುಕೊಂಡು, ಹಾಗೆಯೇ ತಮ್ಮ ಮನೆಗೆ ಕರೆದುಕೊಂಡು ಬಂದರು. ಊಟದ ಸಮಯವಾಗಿತ್ತು. ಹೀಗಾಗಿ ಇಬ್ಬರೂ ಊಟಕ್ಕೆ ಕುಳಿತರು. ಡಾಕ್ಟರ್ ಮನೆಯ ಊಟದ ರುಚಿ ಜಿಯಾರಾಮನಿಗೆ ತುಂಬ ಹಿಡಿಸಿತು. ಹೇಳಿದ – 'ನಮ್ಮ ಮನೆಯಲ್ಲಿ ಅಡಿಗೆಯವನನ್ನು ತೆಗೆದ ಮೇಲಂತೂ ಊಟದಲ್ಲಿ ರುಚಿಯೇ ಇಲ್ಲ ! ಅತ್ತೆ ಸಪ್ಪೆ ಅಡಿಗೆ ಮಾಡ್ತಾರೆ, ಏನೋ ಬಲವಂತಕ್ಕೆ ತಿನ್ತೇನೆ. ಊಟ ಅಂದ್ರೇನೆ ಬೇಜಾರು.'

ಡಾಕ್ಟರು : "ನಮ್ಮ ಮನೆಯಲ್ಲಿ ಅಡುಗೆ ಇದಕ್ಕಿಂತಲೂ ರುಚಿಯಾಗಿರುತ್ತೆ. ನಿನ್ನ ಅತ್ತೆ ಈರುಳ್ಳಿ ಬೆಳ್ಳುಳ್ಳಿಯನ್ನು ಮುಟ್ಟುವುದಿಲ್ಲ ಅಂತ ಕಾಣುತ್ತೆ'

ಜಿಯಾರಾಮ : "ಹೌದು, ಏನೋ ಒಂದಿಷ್ಟು ಬೇಯಿಸಿಟ್ಟು ಬಿಡ್ತಾರೆ. ಯಾರು ತಿಂದರು, ಯಾರು ಬಿಟ್ಟರು ಎಂಬುದರ ಬಗ್ಗೆ ಅಪ್ಪಾಜಿಯವರಿಗೆ ಯಾವ ಕಾಳಜಿಯೂ ಇಲ್ಲ. ಈಗ ಅಡಿಗೆಯವನನ್ನೂ ಬಿಡಿಸಿ ಬಿಟ್ಟಿದ್ದಾರೆ. ಮನೆಯಲ್ಲಿ ಹಣಕಾಸು ಇಲ್ಲದಿದ್ದರೆ ಇಷ್ಟೊಂದು ಒಡವೆ ವಸ್ತ್ರಗಳು ಹೇಗೆ ಬರ್ತಿವೆ?'

ಡಾಕ್ಟರ್ : "ಹಾಗಲ್ಲ ಜಿಯಾರಾಮ, ಅವರ ಆದಾಯ ನಿಜಕ್ಕೂ ಬಹಳ ಕಡಿಮೆಯಾಗಿದೆ. ನೀನು ಅವರನ್ನು ತುಂಬಾ ಅನುಮಾನಿಸುತ್ತಿದ್ದೀಯಾ?'

ಜಿಯಾರಾಮ : (ನಕ್ಕು) "ನಾನು ಅವರನ್ನು ಅನುಮಾನಿಸುತ್ತಿದ್ದೀನೇನು? ಪ್ರಮಾಣ ಮಾಡಿ ಹೇಳ್ತಿದ್ದೀನಿ, ಅವರ ಎದುರಿನಲ್ಲೂ ಒಂದಲ್ಲ ಒಂದು ಸಾರಿ ಹೇಳಿಯೇ ಹೇಳ್ತೀನಿ – ಅವರು ನನಗೆ ಕೆಟ್ಟ ಹೆಸರು ತರಲೇಬೇಕೂಂತ ತೀರ್ಮಾನಿಸಿ ಕೊಂಡಿದ್ದಾರೆ. ವಿನಾ ಕಾರಣ ನನ್ನ ಬೆನ್ನ ಹಿಂದೆ ಬಿದ್ದಿದ್ದಾರೆ. ನನ್ನ ಸ್ನೇಹಿತರನ್ನು ಕಂಡರೂ ಅವರಿಗೆ ಆಗೊಲ್ಲ. ನೀವೇ ಯೋಚಿಸಿ – ಸ್ನೇಹಿತರಿಲ್ಲದೆ ಯಾವನೇ ಮನುಷ್ಯ ಬದುಕಿರಲು ಸಾಧ್ಯವಾಗುತ್ತೇನು ? ಲುಚ್ಚಾಗಳ ಸಹವಾಸ ಮಾಡೋಕೆ ನಾನೇನು ಲುಚ್ಚಾ ಅಲ್ಲ. ಆದರೆ ಅವರು ನಿನ್ನ ಸ್ನೇಹಿತರು ಅಂಥವರು, ಇಂಥವರು ಅಂತ ನನಗೆ ದಿನವೂ ಸತಾಯಿಸುತ್ತಿರುತ್ತಾರೆ. ನಿನ್ನೆ ನಾನು ಹೇಳಿಯೇ ಬಿಟ್ಟೆ – ನನ್ನ ಸ್ನೇಹಿತರು ಮನೆಗೆ ಬಂದೇ ಬರ್ತಾರೆ. ಬೇರೆಯವರಿಗೆ ಇಷ್ಟವಾಗುತ್ತೋ ಬಿಡುತ್ತೋ ಅದನ್ನು ಕಟ್ಟಿಕೊಂಡು ನನಗೇನಾಗಬೇಕು ಅಂತ. ಯಾರೇ ಆಗಲಿ ಸಾರ್, ಸದಾಕಾಲ ಈ ಕಿರಿಕಿರಿಯನ್ನು ಯಾರಿಂದ ಸಹಿಸಿಕೊಂಡಿರೋಕೆ ಆಗುತ್ತೆ?'

ಡಾಕ್ಟರ್ : "ನನಗಂತೂ ಅವರನ್ನು ಕಂಡರೆ ಅಯ್ಯೋ ಅನ್ನಿಸುತ್ತೆ. ಈ ವಯಸ್ಸಿನಲ್ಲಿ

ಅವರು ಆರಾಮವಾಗಿರಬೇಕಿತ್ತು. ಒಂದು ಕಡೆ ವೃದ್ಧಾಪ್ಯ, ಇನ್ನೊಂದು ಕಡೆ ಕೈಗೆ ಬಂದ ಮಗನ ಸಾವಿನ ಶೋಕ, ಆರೋಗ್ಯವು ಚೆನ್ನಿಲ್ಲ. ಇಂಥ ಮನುಷ್ಯನಿಂದ ಏನು ತಾನೆ ಮಾಡಲು ಸಾಧ್ಯ? ಏನೋ ಅಷ್ಟೋ ಇಷ್ಟೋ ಮಾಡಿಕೊಂಡು ಹೋಗುತ್ತಿದ್ದಾರಲ್ಲ, ಅದೇ ಜಾಸ್ತಿ ಅಂತ ತಿಳಿದುಕೋಬೇಕು. ಈಗ ನಿನ್ನಿಂದ ಏನೂ ಮಾಡಲಿಕ್ಕಾಗದಿದ್ದರೂ ಕೊನೇ ಪಕ್ಷ ನಿನ್ನ ಸದ್‌ವ್ಯವಹಾರದಿಂದ ಅವರನ್ನು ಸಂತೋಷದಿಂದಿಡಬಹುದು. ಮುದುಕರನ್ನು ಖುಷಿಯಲ್ಲಿಡುವುದು ಅಂಥ ಕಷ್ಟದ ಕೆಲಸವೇನಲ್ಲ. ನನ್ನ ಮಾತು ನಂಬು, ನೀನು ನಗುನಗುತ್ತ ಮಾತನಾಡಿದರೆ, ಅಷ್ಟೇ ಸಾಕು, ಅವರು ಸಂತೋಷದಿಂದಿರುತ್ತಾರೆ. ಅಪ್ಪಾಜಿ, ನಿಮ್ಮ ಆರೋಗ್ಯ ಹೇಗಿದೆ? ಎಂದು ನೀನು ಕೇಳಿದರೆ ಸಾಕು ಅವರಿಗೆ ಸಂತೋಷ ವಾಗುತ್ತದೆ. ಇದರಿಂದ ನೀನು ಏನು ಕಳೆದುಕೊಳ್ತೀಯ? ನಿಜ ಹೇಳ್ತಿದ್ದೀನಿ. ಅವರು ನನ್ನ ಮುಂದೆ ಎಷ್ಟೋ ಸಾರಿ ಅತ್ತಿದ್ದಾರೆ. ಅವರು ಇನ್ನೊಂದು ಮದುವೆ ಮಾಡಿಕೊಂಡು ತಪ್ಪು ಮಾಡಿದ್ದಾರೆ ಅಂತಲೇ ಇಟ್ಟುಕೋ, ಇದನ್ನು ಅವರೂ ಒಪ್ಪಿಕೊಳ್ತಾರೆ, ನೀನು ನಿನ್ನ ಕರ್ತವ್ಯದಿಂದ ವಿಮುಖನಾಗುತ್ತೀಯೇನು? ಅವರು ನಿನ್ನ ತಂದೆ. ನೀನು ಅವರ ಸೇವೆ ಮಾಡಬೇಕು. ಅವರ ಮನಸ್ಸಿಗೆ ದುಃಖವಾಗುವಂಥ ಒಂದು ಮಾತನ್ನೂ ನೀನು ಆಡಬಾರದು. ಎಲ್ಲರೂ ನನ್ನ ದುಡಿಮೆ ತಿನ್ನುತ್ತಿದ್ದಾರೆಯೇ ಹೊರತು ನನ್ನ ಬಗ್ಗೆ ಯಾರೂ ಕಾಳಜಿ ಮಾಡುತ್ತಿಲ್ಲ ಎಂದು ಅವರು ಯೋಚಿಸಲು ಅವಕಾಶ ಯಾಕೆ ಕೊಡಬೇಕು? ನಿನಗಿಂತಲೂ ನಾನು ವಯಸ್ಸಿನಲ್ಲಿ ದೊಡ್ಡವನು. ಆದರೆ, ಜಿಯಾರಾಮ, ನಾನೆಂದೂ ನನ್ನ ತಂದೆಗೆ ಎದುರಾಗಿ ನಿಂತು ಮಾತನಾಡಿದ್ದಿಲ್ಲ. ಅವರು ಇವತ್ತೂ ನನಗೆ ಬೈಯುತ್ತಾರೆ. ತಲೆತಗ್ಗಿಸಿಕೊಂಡು ಬೈಸಿಕೊಳ್ತೇನೆ. ಅವರು ಅಂದರೆ, ಆಡಿದರೆ ನನ್ನ ಒಳ್ಳೆಯದಕ್ಕೆ ಅಂತ ನನಗೆ ಗೊತ್ತಿದೆ. ತಂದೆ–ತಾಯಿಗಿಂತಲೂ ಮಿಗಿಲಾದ ಹಿತೈಷಿಗಳು ಬೇರೆ ಯಾರಿರಲು ಸಾಧ್ಯ? ಅವರ ಋಣದಿಂದ ಯಾರಿಗೆ ತಾನೆ ಮುಕ್ತರಾಗಲು ಸಾಧ್ಯ?'

ಜಿಯಾರಾಮ ಕುಳಿತುಕೊಂಡು ಅಳುತ್ತಿದ್ದ. ಅವನ ಎಲ್ಲ ಸದ್ಭಾವನೆಗಳು ಸಂಪೂರ್ಣವಾಗಿ ಇನ್ನೂ ನಾಶವಾಗಿರಲಿಲ್ಲ. ತನ್ನ ಕೆಟ್ಟತನ ಅವನಿಗೆ ಸ್ಪಷ್ಟವಾಗಿ ಕಾಣಿಸುತ್ತಿತ್ತು ಇವತ್ತು ಆದಷ್ಟು ವಿಷಾದ ಈ ಹಿಂದೆ ಅವನಿಗೆ ಎಂದೂ ಆಗಿರಲಿಲ್ಲ. ಅಳುತ್ತ ಡಾಕ್ಟರಿಗೆ ಹೇಳಿದ – "ನನಗೆ ತುಂಬ ನಾಚಿಕೆಯಾಗುತ್ತಿದೆ, ಬೇರೆಯವರ ಹೇಳಿಕೆಯ ಮಾತುಗಳನ್ನು ಕೇಳಿಬಿಟ್ಟೆ ಇಲ್ಲಿಂದಾಚೆಗೆ ನೀವು ನನ್ನ ಬಗ್ಗೆ ಯಾವ ದೂರನ್ನೂ ಕೇಳುವುದಿಲ್ಲ. ನೀವು ನನ್ನ ತಂದೆಗೆ ಹೇಳಿ ನನ್ನೆಲ್ಲ ತಪ್ಪುಗಳನ್ನು ಅವರು ಕ್ಷಮಿಸುವಂತೆ ಮಾಡಿ. ನಾನು ನಿಜಕ್ಕೂ ಪಾಪಿ. ಅವರಿಗೆ ತುಂಬ ಕಷ್ಟಕೊಟ್ಟೆ. ನನ್ನ ತಪ್ಪುಗಳನ್ನು ಕ್ಷಮಿಸುವಂತೆ ಹೇಳಿಬಿಡಿ. ಅವರು ಕ್ಷಮಿಸದೇ ಹೋದರೆ ನಾನು ಕಳಂಕ ಹೊತ್ತು ಎಲ್ಲಿಗಾದರೂ ಓಡಿಹೋಗಿ ಕೆರೆಗೋ ಬಾವಿಗೋ ಬಿದ್ದು ಪ್ರಾಣ ಕಳೆದುಕೊಳ್ತೀನಿ ನೋಡಿ.'

ಡಾಕ್ಟರ್ ಸಾಹೇಬರಿಗೆ ತಮ್ಮ ಉಪದೇಶ ಯಶಸ್ವಿಯಾದದ್ದು ನೋಡಿ ತುಂಬ ಖುಷಿಯಾಯಿತು. ಜಿಯಾರಾಮನನ್ನು ಎದೆಗೆ ಅಪ್ಪಿಕೊಂಡು ಬೀಳ್ಕೊಟ್ಟರು.

ಜಿಯಾರಾಮ ಮನೆಗೆ ಬಂದಾಗ ಹನ್ನೊಂದು ಗಂಟೆಯಾಗಿತ್ತು. ವಕೀಲರು ಆಗತಾನೆ ಊಟ ಮಾಡಿ ಹೊರಗೆ ಬಂದಿದ್ದರು. ಅವನನ್ನು ನೋಡುತ್ತಿದ್ದಂತೆಯೇ ಕೇಳಿದರು – "ಎಷ್ಟು ಗಂಟೆ ಗೊತ್ತಾ? ಹನ್ನೆರಡು ಹೊಡೀತಿದೆ.'

ಜಿಯಾರಾಮ ನಮ್ರನಾಗಿ ಹೇಳಿದ – "ಡಾಕ್ಟರ್ ಸಿನ್ಹಾ ಸಿಕ್ಕಿದ್ದರು. ಅವರ ಜತೆ ಅವರ ಮನೆಯವರೆಗೂ ಹೋದೆ. ಊಟ ಮಾಡು ಅಂತ ಬಲವಂತ ಮಾಡಿದರು, ಮಾಡಿದೆ. ಹೀಗಾಗಿ ಹೊತ್ತಾಯಿತು.'

ವಕೀಲರು : "ಡಾಕ್ಟರ್ ಸಿನ್ಹಾರ ಮುಂದೆ ನಿನ್ನ ಗೋಳು ಹೇಳಿಕೊಳ್ಳೋಕೆ ಅಂತ ಹೋಗಿದ್ದಿಯೋ ಅಥವಾ ಇನ್ನೇನಾದರೂ ಕೆಲಸವಿತ್ತೋ?'

ಜಿಯಾರಾಮನ ನಮ್ರತೆಯಲ್ಲಿ ಕಾಲುಭಾಗ ಎಗರಿ ಹೋಯಿತು. ಹೇಳಿದ – "ಗೋಳನ್ನು ಯಾರ ಮುಂದೆಯೂ ಹೇಳಿಕೊಳ್ಳುವ ಅಭ್ಯಾಸ ನನಗಿಲ್ಲ.'

ವಕೀಲರು : "ಕೊಂಚವೂ ಇಲ್ಲವ? ನಿನ್ನ ಬಾಯಿಂದ ಮಾತುಗಳೇ ಹೊರಡೋದಿಲ್ಲ, ಅಲ್ವಾ? ನಿನ್ನ ಬಗ್ಗೆ, ನನ್ನೊಂದಿಗೆ ಹೇಳ್ತಾರಲ್ಲ, ಅವರು ಕತೆಕಟ್ಟಿ ಹೇಳ್ತಾರೆ ಅಂತ ಕಾಣುತ್ತೆ'

ಜಿಯಾರಾಮ : "ಬೇರೆ ದಿನಗಳ ವಿಚಾರ ಬೇಡಿ. ಇವತ್ತಿನ ವಿಚಾರ ಹೇಳ್ತಿದ್ದೀನಿ. ಇವತ್ತು ನಿಮ್ಮ ಮುಂದೆ ಹೇಳದೇ ಇರುವಂಥ ಯಾವ ವಿಚಾರವನ್ನೂ ಹೇಳಿಲ್ಲ.'

ವಕೀಲರು : "ತುಂಬ ಸಂತೋಷ, ನನಗೆ ಮಹದಾನಂದವಾಯಿತು. ಇವತ್ತಿನಿಂದ ಗುರುದೀಕ್ಷೆ ತಗೊಂಡೆ ತಾನೆ ?

ಜಿಯಾರಾಮನ ನಮ್ರತೆಯ ಇನ್ನೊಂದು ಕಾಲು ಭಾಗ ಎಗರಿಹೋಯಿತು. ಈಗ ತಲೆ ಎತ್ತಿ ಹೇಳಿದ – "ಯಾವ ಗುರುದೀಕ್ಷೆಯನ್ನು ತೆಗೆದುಕೊಳ್ಳದೆಯೂ ಮನುಷ್ಯ ತನ್ನ ತಪ್ಪುಗಳ ಬಗ್ಗೆ ನಾಚಿಕೆಪಟ್ಟುಕೊಳ್ಳುವ ಅವಕಾಶವಿದೆ. ನಮ್ಮನ್ನು ನಾವು ಸುಧಾರಿಸಿಕೊಳ್ಳಲು ಯಾವ ಗುರುಮಂತ್ರವೂ ಬೇಕೇ ಬೇಕೂಂತ ಏನೂ ಇಲ್ಲ.'

ವಕೀಲರು : "ಇನ್ನು ಮೇಲೆ ಆ ಲುಚ್ಚಾ ಹುಡುಗರು ಇಲ್ಲಿಗೆ ಬರುವುದಿಲ್ಲ ತಾನೆ?

ಜಿಯಾರಾಮ : "ನಿಮ್ಮಲ್ಲಿ ಸಾಕಷ್ಟು ಪ್ರಮಾಣಗಳಿಲ್ಲದೆಯೇ ಯಾರನ್ನಾದರೂ ಲುಚ್ಚಾ ಅಂತ ಯಾಕೆ ಕರೀತೀರಿ?'

ವಕೀಲರು : "ನಿನ್ನ ಎಲ್ಲ ಸ್ನೇಹಿತರು ಲುಚ್ಚಾ–ಲಫಂಗಗಳೇ. ಒಬ್ಬನೂ ಒಳ್ಳೆಯ ಮನುಷ್ಯನಿಲ್ಲ. ಅವರನ್ನೆಲ್ಲ ಕರೆದುಕೊಂಡು ಬಂದು ಇಲ್ಲಿ ಸಂತೆ ಸೇರಿಸಬೇಡ ಅಂತ ನಾನು ನಿನಗೆ ಎಷ್ಟೋ ಸಾರಿ ಹೇಳಿದ್ದೀನಿ, ಆದರೆ ನೀನು ಕೇಳಲಿಲ್ಲ. ಇವತ್ತು ಕೊನೆಯ ಸಾರಿ ಹೇಳ್ತಿದ್ದೀನಿ, ಇನ್ನೊಂದು ಸಾರಿ ನೀನು ಆ ನಿನ್ನ ಸ್ನೇಹಿತರನ್ನು ಇಲ್ಲಿ ಸೇರಿಸಿಕೊಂಡರೆ, ನಾನು ಪೊಲೀಸರಿಗೆ ದೂರು ಕೊಡಬೇಕಾಗುತ್ತೆ ನೋಡು.'

ಜಿಯಾರಾಮನ ನಮ್ರತೆಯ ಇನ್ನೊಂದು ಕಾಲುಭಾಗ ಎಗರಿ ಹೋಯಿತು. ಕೋಪದಿಂದಲೇ ನುಡಿದ – "ಆಯಿತು, ಹಾಗೆಯೇ ಮಾಡಿ. ಪೊಲೀಸರಿಗೆ ದೂರು

ಕೊಡಿ. ಪೊಲೀಸರು ಏನ್ ಮಾಡ್ತಾರೆ ಅಂತ ನಾನೂ ನೋಡ್ತೀನಿ. ನನ್ನ ಸ್ನೇಹಿತರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನ ಪೊಲೀಸ್ ಅಧಿಕಾರಿಗಳ ಮಕ್ಕಳೇ. ನೀವು ಇಷ್ಟು ಕಷ್ಟ ಪಟ್ಟು ನನ್ನ ಸುಧಾರಣೆಗೆ ಹಟ ತೊಟ್ಟಿರುವಾಗ ನಾನೇಕೆ ವೃಥಾ ಕಷ್ಟ ಪಡಲಿ?'

ಇಷ್ಟು ಹೇಳುತ್ತ ಜಿಯಾರಾಮ ತನ್ನ ಕೋಣೆಗೆ ಹೋದ, ಅಲ್ಲಿಂದಾಚೆಗೆ ಕೆಲವು ಕ್ಷಣಗಳಲ್ಲಿಯೇ ಹಾರ್ಮೋನಿಯಂನ ಮಧುರ ಸ್ವರ ಕೇಳಿ ಬಂತು.

ಸಹೃದಯತೆಯಿಂದ ಹೊತ್ತಿಸಿದ ದೀಪ ನಿಷ್ಕರುಣವಾದ ವ್ಯಂಗ್ಯದ ಹೊಡೆತಕ್ಕೆ ಸಿಕ್ಕಿ ನಂದಿ ಹೋಯಿತು. ಸೆಟೆದು ನಿಂತಿದ್ದ ಕುದುರೆಯ ಮೈಮೇಲೆ ಪ್ರೀತಿಯಿಂದ ಕೈಯಾಡಿಸುತ್ತಿದ್ದಂತೆಯೇ ಅದು ವೇಗವಾಗಿ ಓಡಲಾರಂಭಿಸಿತ್ತು! ಆದರೆ ಹಂಟರ್ ಏಟು ಬೀಳುತ್ತಿದ್ದಂತೆ ಮತ್ತೆ ಸೆಟೆದು ನಿಂತು ಗಾಡಿಯನ್ನು ಹಿಂದಕ್ಕೆಳೆಯಲಾರಂಭಿಸಿತು.

## ಹತ್ತೊಂಬತ್ತು

ಈಗ ಸುಧಾಳ ಜತೆ ನಿರ್ಮಲಾಳು ಬರಬೇಕಾಯಿತು. ಆಕೆ ಇನ್ನೊಂದಷ್ಟು ದಿನ ತವರಿನಲ್ಲಿರಬೇಕೆಂದು ಬಯಸುತ್ತಿದ್ದಳು. ಆದರೆ ಶೋಕಾಕುಲಳಾಗಿದ್ದ ಸುಧಾ ಒಂಟಿಯಾಗಿ ಹೇಗೆ ಇರಬಲ್ಲಳು ಎಂದು ಯೋಚಿಸಿ ಅವಳಿಗಾಗಿ ನಿರ್ಮಲಾ ಕೂಡ ಬರಬೇಕಾಯಿತು. ರುಕ್ಮಿಣಿ ಭೂಂಗಿಗೆ ಹೇಳಿದಳು – "ನೋಡು, ತೌರುಮನೆಯಲ್ಲಿ ಎಷ್ಟು ಚೆನ್ನಾಗಿ ಆಗಿ ಬಂದಿದ್ದಾಳೆ.'

ಭೂಂಗಿ ಹೇಳಿದಳು – "ಅಕ್ಕ, ತಾಯಿ ಕೈ ಅನ್ನ ಹೆಣ್ಣು ಮಕ್ಕಳಿಗೆ ತುಂಬಾ ಇಷ್ಟವಾಗುತ್ತೆ'

ರುಕ್ಮಿಣಿ : "ಸರಿಯಾಗಿಯೇ ಹೇಳಿದೆ ಕಣೆ ಭೂಂಗಿ, ತಮ್ಮ ಮಕ್ಕಳಿಗೆ ಹೇಗೆ ತಿನ್ನಿಸಬೇಕು ಅನ್ನುವುದು ತಾಯಿಯಾದವಳಿಗೆ ಮಾತ್ರ ಗೊತ್ತು.'

ತಾನು ಬಂದದ್ದರಿಂದ ಮನೆಯಲ್ಲಿನ ಯಾರೊಬ್ಬರಿಗಾದರೂ ಸಂತೋಷವಾಗಿದೆ ಎಂದು ನಿರ್ಮಲಾಳಿಗೆ ಅನ್ನಿಸಲಿಲ್ಲ. ವಕೀಲರು ತುಂಬ ಸಂತೋಷವನ್ನೇನೋ ವ್ಯಕ್ತಪಡಿಸಿದರು. ಆದರೆ ಹೃದಯದಲ್ಲಿದ್ದ ನೋವು ಮತ್ತು ಚಿಂತೆಯನ್ನು ಅವರಿಂದ ಮುಚ್ಚಿಡಲಾಗಲಿಲ್ಲ. ಸುಧಾ ನಿರ್ಮಲಾಳ ಮಗುವಿಗೆ ಆಶಾ ಎಂದು ಹೆಸರಿಟ್ಟಿದ್ದಳು. ಆಕೆ ಆಶೆಯ ಜೀವಂತ ಬೊಂಬೆಯಂತಿದ್ದಳು. ಅವಳನ್ನು ನೋಡಿದರೆ ಸಾಕು, ಎಲ್ಲ ಚಿಂತೆಗಳೂ ದೂರವಾಗುತ್ತಿದ್ದವು. ವಕೀಲರು ಅವಳನ್ನು ಎತ್ತಿಕೊಳ್ಳಬಯಸಿದರು. ಆದರೆ ಅವಳು ಅಳತೊಡಗಿದಳು. ತನಗೆ ತಂದೆಯ ಪರಿಚಯವೇ ಇಲ್ಲವೇನೋ ಎಂಬಂತೆ ಓಡಿಬಂದು ಅಮ್ಮನನ್ನು ತಬ್ಬಿಕೊಂಡಳು. ವಕೀಲರು ಮಿಠಾಯಿಯ ಆಸೆ ತೋರಿಸಿ ಅವಳ ಮನಸ್ಸನ್ನು ಗೆಲ್ಲಲು ಪ್ರಯತ್ನಿಸಬೇಕೆಂದು ಯೋಚಿಸಿದರು. ಆದರೆ ಮಿಠಾಯಿಯನ್ನು ತರಿಸಲು

ಮನೆಯಲ್ಲಿ ಯಾವ ನೌಕರನೂ ಇರಲಿಲ್ಲ. ಅವರು ಸಿಯಾರಾಮನಿಗೆ ಎರಡು ಆಣೆಗೆ ಮಿಠಾಯಿಯನ್ನು ತರಲು ಹೇಳಿದರು.

ಜಿಯಾರಾಮ ಅಲ್ಲಿಯೇ ಕುಳಿತಿದ್ದ, ಹೇಳಿದ – "ನಮಗೆ ಅಂತ ನೀವು ಯಾವತ್ತೂ ಮಿಠಾಯಿಯನ್ನು ತರಿಸುವುದೇ ಇಲ್ಲವಲ್ಲ?'

ವಕೀಲರು ಸಿಡುಕಿನಿಂದಲೇ ಹೇಳಿದರು – "ನೀವಿನ್ನೂ ಮಕ್ಕಳಲ್ಲ.'

ಜಿಯಾರಾಮ : "ಹಾಗಾದರೆ ಮುದುಕರೇನು? ಮಿಠಾಯಿ ತರಿಸಿ ಮುಂದೆ ಇಡಿ, ನಾವು ಮಕ್ಕಳೋ ಮುದುಕರೋ ಅಂತ ಗೊತ್ತಾಗುತ್ತೆ ತೆಗೀರಿ ಇನ್ನೂ ನಾಲ್ಕಾಣೆಯನ್ನು ! ಆಶಾ ನೆಪದಲ್ಲಿ ನಮಗೂ ಮಿಠಾಯಿ ತಿನ್ನುವ ಭಾಗ್ಯ ಬರಲಿ!'

ವಕೀಲರು : "ಈಗ ನನ್ನ ಬಳಿ ದುಡ್ಡಿಲ್ಲ. ಹೋಗೋ ಸಿಯಾ, ಬೇಗ ಬಾ'

ಜಿಯಾರಾಮ : "ಸಿಯಾ ಹೋಗುವುದಿಲ್ಲ. ಅವನು ಯಾರ ಗುಲಾಮನೂ ಅಲ್ಲ. ಆಶಾ ಅವಳಪ್ಪನ ಮಗಳಾದರೆ ಇವನೂ ತನ್ನ ಅಪ್ಪನ ಮಗನೇ.'

ವಕೀಲರು : "ಅರ್ಥವಿಲ್ಲದ ಮಾತುಗಳನ್ನು ಯಾಕೆ ಆಡ್ತಿದ್ದೀಯಾ? ಎಳೆ ಮಗುವಿನೊಂದಿಗೆ ಪೈಪೋಟಿ ಮಾಡಲು ನಿನಗೆ ನಾಚಿಕೆಯಾಗುವುದಿಲ್ಲವೇನು? ಹೋಗೊ ಸಿಯಾರಾಮ, ತಗೋ ಈ ಹಣ.'

ಜಿಯಾರಾಮ : "ಹೋಗಬೇಡ ಕಣೋ ಸಿಯಾ, ನೀನು ಯಾರ ಜವಾನನೂ ಅಲ್ಲ.'

ಸಿಯಾ ಈಗ ಪೇಚಿಗೆ ಸಿಕ್ಕಿಕೊಂಡ. ಯಾರು ಹೇಳುವುದನ್ನು ಕೇಳಬೇಕು? ಕೊನೆಗೆ ಅವನು ಜಿಯಾರಾಮ ಹೇಳಿದಂತೆ ಕೇಳುವುದು ಎಂದು ತೀರ್ಮಾನಿಸಿದ. ಅಪ್ಪ ಬಹಳ ಹೆಚ್ಚೆಂದರೆ ರೇಗುತ್ತಾರೆ. ಆದರೆ ಜಿಯಾರಾಮ ಹೊಡೀತಾನೆ. ಆಗ ಯಾರ ಬಳಿ ದೂರು ತೆಗೆದುಕೊಂಡು ಹೋಗಬೇಕು? ಎಂದೆಲ್ಲ ಯೋಚಿಸಿ ಹೇಳಿದ – "ಇಲ್ಲ, ನಾನು ಹೋಗಲ್ಲ'.

ವಕೀಲರು ಕೋಪದಿಂದ ನುಡಿದರು – "ಸರಿ ಹಾಗಾದರೆ, ಇನ್ನೊಂದು ಸಾರಿ ಏನನ್ನಾದರೂ ಕೇಳೋಕೆ ನನ್ನ ಹತ್ತಿರ ಬಂದ್–ಗಿಂದೀಯಾ'

ವಕೀಲರು ತಾವೇ ಅಂಗಡಿಗೆ ಹೋಗಿ ಒಂದು ರೂಪಾಯಿಯ ಮಿಠಾಯಿಯನ್ನು ತೆಗೆದುಕೊಂಡು ಬಂದರು. ಎರಡು ಆಣೆಗೆ ಮಿಠಾಯಿ ಕೊಡಿ ಅಂತ ಕೇಳಲು ಅವರಿಗೆ ನಾಚಿಕೆಯಾಯಿತು. ಮಿಠಾಯಿ ಅಂಗಡಿಯವ ಅವರನ್ನು ಗುರುತಿಸುತ್ತಿದ್ದ. ಅವನು ಮನಸ್ಸಿನಲ್ಲಿ ಏನಂದುಕೊಂಡಾನು?

ಮಿಠಾಯಿ ತೆಗೆದುಕೊಂಡು ವಕೀಲರು ಒಳಗೆ ಹೋದರು. ಅಪ್ಪ ಕೈಯಲ್ಲಿ ಹಿಡಿದುಕೊಂಡಿದ್ದ ಮಿಠಾಯಿಯ ಪೊಟ್ಟಣವನ್ನು ಸಿಯಾರಾಮ ನೋಡಿದ. ಸಿಯಾರಾಮನಿಗೆ ತಾನು ಅಪ್ಪನ ಮಾತನ್ನು ಯಾಕಾದರೂ ಕೇಳಬಾರದಿತ್ತು ಎಂದನ್ನಿಸಿತು. ಈಗ ಯಾವ ಮುಖ ಇಟ್ಟುಕೊಂಡು ಮಿಠಾಯಿಯನ್ನು ಕೇಳಲು ಒಳಗೆ

ಹೋಗುವುದು ! ತುಂಬಾ ತಪ್ಪಾಯಿತು. ಅವನು ಮನಸ್ಸಿನಲ್ಲಿಯೇ ಜಿಯಾರಾಮ ಕೊಡಬಹುದಾಗಿದ್ದ ಏಟುಗಳನ್ನು ಈ ಮಿಠಾಯಿಯ ಸಿಹಿಯೊಂದಿಗೆ ತುಲನೆ ಮಾಡಿಕೊಳ್ಳಲಾರಂಭಿಸಿದ.

ಆಗ ಇದ್ದಕ್ಕಿದ್ದಂತೆಯೇ ಭೂಂಗಿ ಎರಡು ಪ್ಲೇಟುಗಳಲ್ಲಿ ಮಿಠಾಯಿಯನ್ನು ತಂದು ಅವರ ಮುಂದಿಟ್ಟಳು. ಜಿಯಾರಾಮ ಕೋಪದಿಂದ "ಇಲ್ಲಿಂದ ಎತ್ತಿಕೊಂಡು ಹೋಗು,' ಅಂದ

ಭೂಂಗಿ : "ಯಾಕೆ ಕೋಪ ಮಾಡಿಕೊಳ್ತೀಯಪ್ಪ ? ಮಿಠಾಯಿ ಚೆನ್ನಾಗಿಲ್ಲ ವೇನು?'

ಜಿಯಾರಾಮ : "ಆಶಾಗೆ ಅಂತ ಮಿಠಾಯಿ ತಂದಿರೋದು, ನಮಗೆ ಅಂತ ಅಲ್ಲ. ಎತ್ತಿಕೊಂಡು ಹೋಗ್ ಇಲ್ಲಿಂದ. ಇಲ್ಲಾಂದರೆ ಬೀದಿಗೆ ಎಸೆದು ಬಿಡ್ತೀನಿ ನೋಡು. ನಾವು ಇಲ್ಲಿ ಒಂದೊಂದು ಕಾಸಿಗೂ ಸಾಯ್ತಿದ್ದೀವಿ. ಅಲ್ಲಿ ನೋಡಿದರೆ ರೂಪಾಯಿಗಟ್ಟಲೆ ಮಿಠಾಯಿ ಬರುತ್ತೆ'

ಭೂಂಗಿ : "ನೀನಾದರೂ ತಗೋಳ್ಳಪ್ಪ ಸಿಯಾ. ಇವರು ತಗೋಳ್ಳದೇ ಹೋದರೂ ಹೋಗಲಿ.'

ಸಿಯಾರಾಮ ಹೆದರುತ್ತಲೇ ಕೈ ಮುಂದೆ ಮಾಡಿದ. ಆದರೆ ಜಿಯಾರಾಮ ಬೈದ – "ಆ ಮಿಠಾಯಿಯನ್ನು ಮುಟ್ಟಿಗಿಟ್ಟೀಯಾ, ಮುಟ್ಟಿದರೆ ಕೈ ಮುರಿದು ಬಿಡ್ತೀನಿ, ಆಸೆಬುರುಕ !'

ಈ ಮಾತುಗಳನ್ನು ಕೇಳಿ ಸಿಯಾರಾಮ ಕೊಂಚ ಹಿಮ್ಮೆಟ್ಟಿದ. ಅವನಿಗೆ ಮಿಠಾಯಿಯನ್ನು ಎತ್ತಿ ತಿನ್ನುವಷ್ಟು ಧೈರ್ಯವಾಗಲಿಲ್ಲ.

ನಿರ್ಮಲಾ ಈ ಕತೆಯನ್ನು ಕೇಳಿದವಳೇ ಮಕ್ಕಳ ಮನಸ್ಸನ್ನು ರಮಿಸಲು ತಾನೇ ಬರಲು ಎದ್ದಳು. ಆದರೆ ವಕೀಲರು ಹೋಗಬೇಡ ಅಂತ ಕ್ರೂರವಾದ ಆಣೆಯನ್ನಿಟ್ಟುಕೊಂಡರು.

ನಿರ್ಮಲಾ : "ಅವರ ಕೋಪವೆಲ್ಲ ನನ್ನ ಮೇಲೆ ಅಂತ ನಿಮಗೆ ಗೊತ್ತಾಗುತ್ತಿಲ್ಲ.'

ವಕೀಲರು : "ಆಯಿತು, ತಾಯಿಯಿಲ್ಲದ ಮಕ್ಕಳು ಅಂತ ಅವರಿಗೆ ಗೋಳು ಹೊಯ್ದುಕೊಳ್ಳುತ್ತಿದ್ದಾರೆ ಅಂತ ಜನ ಅಂತಾರೆ ಅಂತ ನಾನು ಏನೂ ಮಾಡ್ತಿಲ್ಲ. ಇಲ್ಲದೆ ಹೋಗಿದ್ದರೆ ಅವರು ಇಷ್ಟು ಹಠ ಮಾಡೋಣ ಅಂದರೇನು, ಒಂದು ಕ್ಷಣದಲ್ಲಿ ಸುಮ್ಮನಿರಿಸಿಬಿಡುತ್ತಿದ್ದೆ.'

ನಿರ್ಮಲಾ : "ಈ ರೀತಿ ಕೆಟ್ಟ ಹೆಸರು ಬರಬಹುದು ಅಂತಲೇ ನನಗೆ ಭಯವಾಗ್ತಿದೆ.'

ವಕೀಲರು : "ಈಗ ನಾನು ಹೆದರೊಲ್ಲ. ಯಾರು ಏನು ಬೇಕಾದರೂ ಅಂದುಕೊಳ್ಳಲಿ.'

ನಿರ್ಮಲಾ : "ಅವರು ಮೊದಲು ಈ ರೀತಿ ಇರಲಿಲ್ಲ'.

ವಕೀಲರು : "ಮಕ್ಕಳು ಬದುಕಿದ್ದಾಗ ನೀನು ಯಾಕೆ ಮದುವೆ ಮಾಡಿಕೊಂಡೆ ಅಂತ ಅವನು ನನಗೇ ಕೇಳ್ತಿದ್ದಾನೆ. ನೀವು ಮಂಸಾರಾಮನಿಗೆ ವಿಷ ಕೊಟ್ಟು ಸಾಯಿಸಿದಿರಿ ಅಂತ ಹೇಳ್ತಾನೆ. ಈ ಮಾತು ಆಡಲು ಅವನಿಗೆ ಒಂದಿಷ್ಟೂ ಸಂಕೋಚವಾಗ್ತಿಲ್ಲ ! ಅವನು ಮಗ ಅಲ್ಲ, ಶತ್ರು.'

ಜಿಯಾರಾಮ ಅಲ್ಲೇ ಬಾಗಿಲ ಮರೆಯಲ್ಲಿ ನಿಂತಿದ್ದ. ಗಂಡ–ಹೆಂಡತಿಯ ಮಧ್ಯೆ ಈ ಮಿಠಾಯಿಯ ವಿಷಯದಲ್ಲಿ ಏನೇನು ಮಾತುಕತೆಯಾಗುತ್ತಿದೆ, ಕೇಳಿಸಿ ಕೊಳ್ಳೋಣ ಎಂದೇ ಅವನು ಅಲ್ಲಿ ಬಂದು ನಿಂತಿದ್ದ. ವಕೀಲರ ಕೊನೆಯ ಮಾತುಗಳನ್ನು ಕೇಳಿಸಿಕೊಂಡ ಮೇಲೆ ಅವನಿಂದ ಸುಮ್ಮನಿರಲಾಗಲಿಲ್ಲ. ಹೇಳಿದ – "ಶತ್ರುವಲ್ಲದಿದ್ದರೆ ನೀವು ಅವನ ಬೆನ್ನ ಹಿಂದೆ ಯಾಕೆ ಬೀಳ್ತಿದ್ದಿರಿ ? ಇವತ್ತು ನೀವು ಬಾಯಿಬಿಟ್ಟು ಹೇಳ್ತಿದ್ದೀರಿ. ನಾನು ಅವತ್ತೇ ನಿಮ್ಮ ಮನಸ್ಸನ್ನು ಅರ್ಥಮಾಡಿಕೊಂಡಿದ್ದೀನಿ. ಅಣ್ಣ ಅರ್ಥಮಾಡಿಕೊಂಡಿರಲಿಲ್ಲ, ಅದಕ್ಕೇ ಮೋಸ ಹೋದ. ನಮ್ಮ ಹತ್ತಿರ ನಿಮ್ಮ ಬೇಳೆ ಬೇಯೊಲ್ಲ. ಇಡೀ ಊರಿಗೆ ಊರೇ ಹೇಳ್ತಿದೆ – ಅಣ್ಣನಿಗೆ ನೀವು ವಿಷ ಹಾಕಿದಿರಿ ಅಂತ. ನಾನು ಹೇಳಿದರೆ ನಿಮಗೆ ಕೋಪ ಯಾಕೆ ಬರ್ಬೇಕು?'

ನಿರ್ಮಲಾ ಅಲ್ಲೇ ಕಲ್ಲಾದಳು. ಆಕೆಗೆ ತನ್ನ ಮೈಮೇಲೆ ಯಾರೋ ಕೆಂಡಗಳನ್ನು ಸುರಿದಂಥ ಅನುಭವವಾಯಿತು. ವಕೀಲರು ಬೈದು ಜಿಯಾರಾಮ ನನ್ನು ಸುಮ್ಮನಿರಿಸಲು ಬಯಸಿದರು. ಆದರೆ ಜಿಯಾರಾಮ ಯಾವುದೇ ಸಂಕೋಚವಿಲ್ಲದೆ ನಿಂತಲ್ಲೇ ನಿಂತು ಸೇರಿಗೆ ಸವಾಸೇರು ಎಂಬಂತೆ ಎದುರು ಜವಾಬು ಕೊಡುತ್ತಿದ್ದ. ನಿರ್ಮಲಾಳಿಗೂ ಅವನ ಮೇಲೆ ಕೋಪ ಬಂತು. ನಿನ್ನೆ ಮೊನ್ನೆಯ ಬಚ್ಚಾ, ಆಕಡೆ ಕಡ್ಡಿ ತೆಗೆದು ಈ ಕಡೆ ಇಡೋಕೆ ಬರಲ್ಲ, ಮನೆಯವರನ್ನೆಲ್ಲ ತಾನೇ ಸಾಕುತ್ತಿರುವಂತೆ ಎದುರಿಗೆ ನಿಂತು ಉದ್ಧಟತನದಿಂದ ವಾದಿಸುತ್ತಿದ್ದಾನೆ. ತನ್ನ ಹುಬ್ಬುಗಳನ್ನು ಗಂಟಿಕ್ಕಿಕೊಂಡು ಹೇಳಿದಳು – "ಸಾಕಪ್ಪ ಸಾಕು, ಜಿಯಾರಾಮ, ನಿನ್ನದು ಅತಿಯಾಯಿತು. ನೀನು ತುಂಬ ಯೋಗ್ಯ ಅಂತ ಇವತ್ತು ಗೊತ್ತಾಯಿತು. ಹೊರಗೆ ಹೋಗಿ ಕುಳಿತುಕೋ ನಡಿ.'

ವಕೀಲರು ಇದುವರೆಗೆ ಕೊಂಚ ಮೆಲುದನಿಯಲ್ಲಿಯೇ ಮಾತನಾಡುತ್ತಿದ್ದರು, ಈಗ ನಿರ್ಮಲಾಳ ಬೆಂಬಲ ಸಿಕ್ಕಿದ್ದು ಗೊತ್ತಾದಾಗ ಅವರ ಹೃದಯ ಕೋಪದಿಂದ ಉಕ್ಕಿ ಬಂತು. ಹಲ್ಲು ಕಡಿಯುತ್ತ ಕೈ ಎತ್ತಿಕೊಂಡೇ ಜಿಯಾರಾಮನತ್ತ ನುಗ್ಗಿ ಬಂದರು. ನಿರ್ಮಲಾ ಅವರ ಕೈಗಳನ್ನು ಹಿಡಿದುಕೊಳ್ಳುವುದಕ್ಕೆ ಮುಂದೆ ಬಂದಳು – ಅಷ್ಟರಲ್ಲಿಯೇ ಅವರು ಕೈ ಬೀಸಿದ್ದರು. ಆ ಏಟು ನಿರ್ಮಲಾಳ ಕೆನ್ನೆಗೆ ಬಿತ್ತು. ಕೆನ್ನೆಗೆ ಏಟು ಬೀಳುತ್ತಿದ್ದಂತೆಯೇ ಅವಳ ತಲೆ ಸುತ್ತಿ ಬಂತು. ವಕೀಲರ ಬಡಕಲು ಕೈಗಳಲ್ಲಿ ಇಷ್ಟು ಶಕ್ತಿ ಇದೆ ಎಂಬುದರ ಕಲ್ಪನೆಯೂ ಆಕೆಗಿರಲಿಲ್ಲ. ತಲೆ ಹಿಡಿದುಕೊಂಡು ಅಲ್ಲೇ ಕುಳಿತುಬಿಟ್ಟಳು. ವಕೀಲರ ಕೋಪ ಈಗ ಇನ್ನಷ್ಟು ಇಮ್ಮಡಿಸಿತು. ಎದ್ದವರೇ ಜಿಯಾರಾಮನಿಗೆ ಒಂದು ಹೊಡೆತ ಕೊಟ್ಟರು. ಈಗ

ಜಿಯಾರಾಮ ಅವರ ಕೈಯನ್ನು ಹಿಡಿದುಕೊಂಡು ಅವರನ್ನು ಹಿಂದಕ್ಕೆ ತಳ್ಳಿ ಹೇಳಿದ – "ದೂರ ನಿಂತುಕೊಂಡು ಮಾತನಾಡಿ. ವೃಥಾ ಯಾಕೆ ಮಾನ ಕಳೆದುಕೊಳ್ತೀರಾ ? ಅಮ್ಮನ ಮುಖ ನೋಡಿ ಸುಮ್ಮನೆ ಬಿಡ್ತಿದ್ದೀನಿ, ಇಲ್ಲದಿದ್ದರೆ ತೋರಿಸ್ತಿದ್ದೆ.'

ಇಷ್ಟು ಹೇಳಿ ಅವನು ಹೊರಗೆ ಬಂದ. ವಕೀಲರು ಪ್ರಜ್ಞಾಶೂನ್ಯರಾದವರಂತೆ ನಿಂತರು. ಈ ಹೊತ್ತು ಜಿಯಾರಾಮನ ಮೇಲೆ ವಜ್ರಾಘಾತವಾಗಿದ್ದಿದ್ದರೆ ಬಹುಶಃ ವಕೀಲರಿಗೆ ಹೆಚ್ಚಿನ ಆನಂದವಾಗುತ್ತಿತ್ತು. ಈ ಮಗನನ್ನೇ ಒಂದು ಕಾಲದಲ್ಲಿ ತೊಡೆಯ ಮೇಲೆ ಹಾಕಿಕೊಂಡು ಮುದ್ದು ಮಾಡುತ್ತ ಆನಂದಿಸುತ್ತಿದ್ದ ವಕೀಲರು ಈಗ ಅವನಿಗೆ ಏನಾದರೂ ಆಗಬಾರದೆ ಎಂದು ಮನಸ್ಸಿನಲ್ಲಿ ಬಗೆ ಬಗೆಯ ಕೆಟ್ಟ ಕಲ್ಪನೆಗಳನ್ನು ಮಾಡತೊಡಗಿದರು.

ರುಕ್ಮಿಣಿ ಇದುವರೆಗೆ ತನ್ನ ಕೋಣೆಯಲ್ಲಿದ್ದಳು. ಈಗ ಹೊರಗೆ ಬಂದು – "ವಯಸ್ಸಿಗೆ ಬಂದ ಮಕ್ಕಳ ಮೇಲೆ ಕೈ ಮಾಡಬಾರದು' ಎಂದಳು.

ವಕೀಲರು ಅವುಡುಗಚ್ಚುತ್ತ ನುಡಿದರು – "ಇವನನ್ನು ಮನೆ ಬಿಟ್ಟು ಓಡಿಸಿದಾಗಲೇ ನನಗೆ ತೃಪ್ತಿ. ಭಿಕ್ಷೆ ಬೇಡಲಿ ಇಲ್ಲ, ಕಳ್ಳತನ ಮಾಡಲಿ ನನಗೇನಾಗಬೇಕು?'

ರುಕ್ಮಿಣಿ : "ಯಾರ ಮಾನ ಹೋಗುತ್ತೆ?'

ವಕೀಲರು : "ನನಗೆ ಅದರ ಚಿಂತೆಯಿಲ್ಲ.'

ನಿರ್ಮಲಾ : "ನಾನು ಇಲ್ಲಿಗೆ ಬರುವುದರಿಂದ ಇಷ್ಟು ರಾದ್ಧಾಂತ ಆಗುತ್ತೆ ಅಂತ ಗೊತ್ತಿದ್ದಿದ್ದರೆ ನಾನು ಕನಸು–ಮನಸಿನಲ್ಲಿಯೂ ಇಲ್ಲಿಗೆ ಬರುತ್ತಿರಲಿಲ್ಲ. ಈಗೇನಾಯಿತು, ನನ್ನನ್ನು ಕಳಿಸಿಬಿಡಿ. ಈ ಮನೇಲಿ ನನ್ನಿಂದ ಇರಲಿಕ್ಕಾಗುವುದಿಲ್ಲ.'

ರುಕ್ಮಿಣಿ : "ನಿನಗೆ ಅವನು ತುಂಬಾ ಗೌರವ ಕೊಡ್ತಾನೆ ಮಗಳೆ, ನೀನಿಲ್ಲದೆ ಹೋಗಿದ್ದರೆ ಇವತ್ತು ಇನ್ನೇನು ಅನರ್ಥವಾಗುತ್ತಿತ್ತೋ ಏನೋ !'

ನಿರ್ಮಲಾ : "ಈಗ ತಾನೆ ಏನು ಉಳಿದಿದೆ ಅಕ್ಕ ! ನಾನು ನೆಲ ಉರುಬಿ–ಉರುಬಿ ಹೆಜ್ಜೆ ಇಟ್ಟರೂ ಕೆಟ್ಟ ಹೆಸರೂ ನನಗೇ ಬರ್ತಿದೆ. ಮನೆಗೆ ಈಗ ತಾನೇ ಹೆಜ್ಜೆ ಇಟ್ಟಿದ್ದೀನಿ. ಇಷ್ಟೆಲ್ಲ ಮಹಾಭಾರತವಾಯಿತು. ಆ ದೇವರೆ ಕಾಪಾಡಬೇಕು.'

ರಾತ್ರಿ ಊಟಕ್ಕೆ ಯಾರೂ ಏಳಲಿಲ್ಲ. ವಕೀಲರು ಮಾತ್ರ ಊಟ ಮಾಡಿದರು. ಇವತ್ತು ನಿರ್ಮಲಾಗೆ ಇನ್ನೊಂದು ಚಿಂತೆ ಕಾಡಲಾರಂಭಿಸಿತು. ಈ ಬದುಕು ಹೇಗೆ ಸಾಗುವುದು ! ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೇ ಆಗಿದ್ದಿದ್ದರೆ ಅಂಥ ಚಿಂತೆ ಮಾಡಬೇಕಾಗಿರಲಿಲ್ಲ. ಈಗ ಹೊಸ ವಿಪತ್ತೊಂದು ತಲೆಯ ಮೇಲೆ ಬಂದಿದೆ. ಈ ಹೆಣ್ಣು ಮಗುವಿನ ಹಣೆಯಲ್ಲಿ ಏನು ಬರೆದಿದೆಯೋ ಶಿವನೆ, ಎಂದು ಅವಳು ಯೋಚಿಸುತ್ತಿದ್ದಳು.

# ಇಪ್ಪತ್ತು

ಚಿಂತೆಯಲ್ಲಿ ನಿದ್ದೆ ಹೇಗೆ ಬಂದೀತು ? ನಿರ್ಮಲಾ ಮಂಚದ ಮೇಲೆ ಮಲಗಿಕೊಂಡು ಮಗ್ಗುಲು ಬದಲಿಸುತ್ತಿದ್ದಳು. ನಿದ್ದೆ ಬಂದರೆ ಸಾಕೆಂದು ಆಕೆ ಅದೆಷ್ಟು ಹಂಬಲಿಸುತ್ತಿದ್ದಳು. ಆದರೆ ನಿದ್ದೆ ಅವಳ ಬಳಿಗೆ ಬಾರದಂತೆ ಪ್ರತಿಜ್ಞೆ ಮಾಡಿದ ಹಾಗೆ ಕಾಣುತ್ತಿತ್ತು. ದೀಪ ತುಂಬಿತ್ತು. ಕಿಟಕಿಯ ಬಾಗಿಲುಗಳನ್ನು ತೆರೆದಿದ್ದರು. ಟಿಕ್–ಟಿಕ್ ಅನ್ನುತ್ತಿದ್ದ ಗಡಿಯಾರವನ್ನು ಇನ್ನೊಂದು ರೂಮಿನಲ್ಲಿಟ್ಟಿದ್ದರು. ಆದರೂ ನಿದ್ದೆ ಹತ್ತಿರ ಸುಳಿದಿರಲಿಲ್ಲ. ಏನೆಲ್ಲ ವಿಷಯಗಳನ್ನು ಯೋಚಿಸಬಹುದಿತ್ತೋ ಆ ಎಲ್ಲ ವಿಷಯಗಳನ್ನು ಕುರಿತು ಯೋಚಿಸಿದಳು. ಚಿಂತೆಗಳು ಸದ್ಯ ದೂರವಾಗಿದ್ದವು. ಆದರೆ ರೆಪ್ಪೆ ಮುಚ್ಚಲು ಸಾಧ್ಯವಾಗಲಿಲ್ಲ ಆಗ ಆಕೆ ಪುನಃ ದೀಪ ಹೊತ್ತಿಸಿದಳು. ಆ ಬೆಳಕಿನಲ್ಲಿ ಒಂದು ಪುಸ್ತಕ ಓದ ತೊಡಗಿದಳು. ಮೂರೋ–ನಾಲ್ಕೋ ಪುಟಗಳನ್ನು ಓದಿರಬೇಕು, ಅಷ್ಟರಲ್ಲಿ ಮಂಪರು ಬಂದಂತಾಯಿತು ; ಪುಸ್ತಕ ತೆರೆದೇ ಇತ್ತು.

ಇದ್ದಕ್ಕಿದ್ದಂತೆಯೇ ಜಿಯಾರಾಮ ರೂಮಿಗೆ ಹೆಜ್ಜೆ ಇಟ್ಟ. ಅವನ ಕಾಲುಗಳು ಗಡಗಡ ನಡುಗುತ್ತಿದ್ದವು. ಅವನು ರೂಮಿನ ಮೇಲೆ ಕೆಳಗೆ ನೋಡಿದ. ನಿರ್ಮಲಾ ಮಲಗಿದ್ದಳು. ಅವಳ ತಲೆದಿಂಬಿನ ಬಳಿಯಿದ್ದ ಕಟ್ಟೆಯ ಮೇಲೆ ಒಂದು ಪುಟ್ಟದಾದ ಹಿತ್ತಾಳೆಯ ಪೆಟ್ಟಿಗೆಯಿತ್ತು. ಜಿಯಾರಾಮ ಮೆಲ್ಲಗೆ ಹೆಜ್ಜೆ ಇಟ್ಟು ಅಲ್ಲಿಗೆ ಹೋದ. ಮೆಲ್ಲಗೆ ಆ ಪೆಟ್ಟಿಗೆಯನ್ನು ಕೈಗೆ ತೆಗೆದುಕೊಂಡು ಬಹಳ ವೇಗವಾಗಿ ರೂಮಿನಿಂದ ಹೊರಗೆ ಬಂದ. ಆ ಸಮಯಕ್ಕೆ ನಿರ್ಮಲಾಳಿಗೂ ಎಚ್ಚರವಾಗಿ ಕಣ್ಣು ಬಿಟ್ಟಳು. ಬೆಚ್ಚಿ ಎದ್ದು ಕುಳಿತಳು. ಬಾಗಿಲವರೆಗೂ ಬಂದು ನೋಡಿದಳು. ಎದೆ ಬಡಿತ ನಿಂತಂಥ ಅನುಭವವಾಯಿತು. ಇವನು ಜಿಯಾರಾಮನೇ ! ನನ್ನ ರೂಮಿಗೆ ಏನು ಮಾಡಲಿಕ್ಕೆ ಬಂದಿದ್ದ ? ನನಗೆ ಭ್ರಮೆಯಾಗಿಲ್ಲ ತಾನೆ ? ಬಹುಶಃ ಅಕ್ಕನ ರೂಮಿಗೆ ಹೋಗಿದ್ದನೆಂದು ಕಾಣುತ್ತದೆ. ಇಲ್ಲಿಗೆ ಬರುವಂಥ ಕೆಲಸವಾದರೂ ಏನಿತ್ತು ? ಬಹುಶಃ ನನ್ನೊಂದಿಗೆ ಏನಾದರೂ ಮಾತನಾಡಲು ಬಂದಿದ್ದಿರಬಹುದೆಂದು ಕಾಣುತ್ತದೆ. ಆದರೆ ಈ ಸಮಯದಲ್ಲಿ ಏನು ಮಾತನಾಡುವುದಿತ್ತು ? ಅವನ ಮನಸ್ಸು ಎಂಥಾದ್ದಿರಬಹುದು ? ಅವಳ ಹೃದಯ ಕಂಪಿಸತೊಡಗಿತು.

ವಕೀಲರು ಮನೆಯ ಮಾಳಿಗೆಯ ಮೇಲೆ ಮಲಗಿದ್ದರು. ಅಲ್ಲಿಗೆ ಹೋಗಲು ಮೆಟ್ಟಿಲುಗಳು ಇಲ್ಲದಿದ್ದರಿಂದ ನಿರ್ಮಲಾ ಅಲ್ಲಿಗೆ ಹೋಗಿ ಮಲಗಿರಲಿಲ್ಲ. ಈಗ ಅವರ ಬಳಿಗೆ ಹೋಗಿ ಅವರನ್ನು ಎಚ್ಚರಿಸಲೇ ಎಂದು ಒಂದು ಕ್ಷಣ ಯೋಚಿಸಿದಳು. ಆದರೆ ಹೋಗುವ ಧೈರ್ಯವಾಗಲಿಲ್ಲ. ಮೊದಲೇ ಅನುಮಾನದ ಮನುಷ್ಯ. ಏನು ಯೋಚಿಸುತ್ತಾರೋ, ಕೋಪದಿಂದ ಏನಾದರೂ ಮಾಡಿದರೆ ! ಆಕೆ ಪುನಃ ಒಳಗೆ ಬಂದು ಪುಸ್ತಕ ಓದಲಾರಂಭಿಸಿದಳು. ಬೆಳಗ್ಗೆ ಕೇಳಿದರೆ ವಿಷಯ ಗೊತ್ತಾಗುತ್ತದೆ, ನನಗೇ

ಭ್ರಮೆಯಾಗಿರಬಹುದು. ನಿದ್ದೆಗಣ್ಣಿನಲ್ಲಿ ಹೀಗೆ ಆಗುವುದುಂಟು, ಬೆಳಗ್ಗೆ ಕೇಳಿದರಾಯಿತು ಎಂದು ನಿಶ್ಚಯಿಸಿಕೊಂಡರೂ ಆಕೆಗೆ ನಿದ್ದೆ ಬರಲಿಲ್ಲ.

ಬೆಳಗಾದಾಗ ತಿಂಡಿಯನ್ನು ತೆಗೆದುಕೊಂಡು ನಿರ್ಮಲಾ ತಾನೇ ಜಿಯಾರಾಮನ ಬಳಿಗೆ ಬಂದಳು. ನಿರ್ಮಲಾಳನ್ನು ನೋಡಿ ಅವನು ಬೆಚ್ಚಿದ. ದಿನವೂ ಭೂಂಗಿ ಬರುತ್ತಿದ್ದಳು. ಇವತ್ತು ಈಕೆ ಬಂದದ್ದಾದರೂ ಏಕೆ ? ನಿರ್ಮಲಾಳತ್ತ ನೋಡುವ ಧೈರ್ಯವೂ ಅವನಿಗಾಗಲಿಲ್ಲ.

ಅತ್ಯಂತ ವಿಶ್ವಾಸದಿಂದಲೇ ಅವನತ್ತ ನೋಡುತ್ತ ನಿರ್ಮಲಾ ಕೇಳಿದಳು – "ರಾತ್ರಿ ನೀನು ನನ್ನ ರೂಮಿಗೆ ಬಂದಿದ್ದೆಯಾ ?'

ಜಿಯಾರಾಮ ಆಶ್ಚರ್ಯ ವ್ಯಕ್ತಪಡಿಸುತ್ತ ಕೇಳಿದ – "ನಾನಾ ? ರಾತ್ರಿ ಹೊತ್ತು ನಾನ್ಯಾಕೆ ಬರಲಿ? ಯಾಕೆ, ಯಾರಾದರೂ ಬಂದಿದ್ದರೇನು?'

ನಿರ್ಮಲಾ ತನ್ನ ಮಾತುಗಳಿಂದ ಅವನಿಗೆ ನಂಬಿಕೆ ಬರುವಂಥ ಧೃಡಭಾವದಿಂದ ಹೇಳಿದಳು–"ಹೌದು, ಯಾರೋ ನನ್ನ ರೂಮಿನಿಂದ ಹೊರಗೆ ಹೋದಂಥ ಅನುಭವವಾಯಿತು ನನಗೆ. ನಾನು ಅವನ ಮುಖವನ್ನಂತೂ ನೋಡಲಿಲ್ಲ. ಆದರೆ ಬೆನ್ನನ್ನು ನೋಡಿ ಬಹುಶಃ ನೀನೆ ಯಾವುದೋ ಕೆಲಸಕ್ಕೆ ಬಂದಿದ್ದಿಯೇನೋ ಅಂದುಕೊಂಡೆ. ಯಾರು ಬಂದಿದ್ದರು ಅಂತ ಹೇಗೆ ಪತ್ತೆ ಮಾಡೋದು ? ಅಂತೂ ಯಾರೋ ಒಬ್ಬರು ಖಂಡಿತ ಬಂದಿದ್ದರು.'

ಜಿಯಾರಾಮ ತನ್ನನ್ನು ನಿರಪರಾಧಿ ಎಂದು ಪ್ರಮಾಣ ಮಾಡಿ ತೋರಿಸುವ ಪ್ರಯತ್ನ ಮಾಡುತ್ತಾ ಹೇಳಿದ – "ನಾನು ರಾತ್ರಿ ಪಿಕ್ಚರ್‌ಗೆ ಹೋಗಿದ್ದೆ. ಅಲ್ಲಿಂದ ವಾಪಸಾಗುವಾಗ ಒಬ್ಬ ಸ್ನೇಹಿತನ ಮನೆಯಲ್ಲಿ ಮಲಗಿಕೊಂಡುಬಿಟ್ಟೆ. ನಾನು ಬಂದು ಸ್ವಲ್ಪ ಹೊತ್ತಾಯಿತು ಅಷ್ಟೇ. ನನ್ನ ಜತೆ ಇನ್ನೂ ಕೆಲವು ಸ್ನೇಹಿತರಿದ್ದರು. ನೀವು ಯಾರಿಗೆ ಬೇಕಾದರೂ ಕೇಳಿಕೊಳ್ಳಿ. ಅಮ್ಮ, ಅಂದ ಹಾಗೆ ನನಗೆ ತುಂಬ ಭಯವಾಗ್ತಿದೆ. ಮನೆಯಲ್ಲಿ ಯಾವುದಾದರೂ ವಸ್ತು ಮಾಯವಾಗಿರೋದು, ಅದು ನನ್ನ ಮೇಲೆ ಬಂದರೆ ನಾನು ಏನು ಮಾಡಲಿ ? ಕಳ್ಳನನ್ನಂತೂ ಯಾರೂ ಹಿಡಿಯೊಲ್ಲ, ಅದು ನನ್ನ ತಲೆಗೆ ಬರುತ್ತೆ ಅಷ್ಟೇ. ಅಪ್ಪಾಜಿ ಎಂಥವರು ಅಂತ ನಿಮಗೂ ಗೊತ್ತು. ನನಗೆ ಹೊಡೀಲಿಕ್ಕೆ ಬರ್ತಾರೆ.'

ನಿರ್ಮಲಾ : "ನಿನ್ನ ಮೇಲೆ ಯಾಕೆ ಬರುತ್ತೆ ಪಾಪ ! ಒಂದು ವೇಳೆ ನೀನೇ ಆಗಿದ್ದರೂ ನಿನ್ನ ಮೇಲೆ ಯಾರು ಕಳ್ಳತನದ ಆರೋಪ ಹೊರಿಸೊಲ್ಲ. ಕಳ್ಳರು ಬೇರೆಯವರ ವಸ್ತುಗಳ ಕಳ್ಳತನ ಮಾಡುತ್ತಾರೆ, ತನ್ನ ಮನೆಯ ವಸ್ತುಗಳನ್ನು ಯಾರಾದರೂ ಕಳ್ಳತನ ಮಾಡ್ತಾರೇನು ?'

ಅದುವರೆಗೂ ನಿರ್ಮಲಾಳ ದೃಷ್ಟಿ ಆ ಸಣ್ಣ ಪೆಟ್ಟಿಗೆಯ ಕಡೆ ಹೋಗಿರಲಿಲ್ಲ. ಆಕೆ ಅಡಿಗೆ ಮಾಡುವುದರಲ್ಲಿ ಮಗ್ನಳಾಗಿದ್ದಳು. ವಕೀಲರು ಕಛೇರಿಗೆ ಹೋದ ಮೇಲೆ ಆಕೆ ಸುಧಾಳನ್ನು ಮಾತನಾಡಿಸಿಕೊಂಡು ಬರೋಣವೆಂದು ಸಿದ್ಧಳಾದಳು. ಇತ್ತೀಚೆಗೆ ಎಷ್ಟೋ

ದಿನಗಳಿಂದ ಆಕೆಯನ್ನು ಭೆಟ್ಟಿಯಾಗಿರಲಿಲ್ಲ. ರಾತ್ರಿ ನಡೆದ ಘಟನೆಯ ಬಗೆಗೆ ಆಕೆಯೊಡನೆ ಸಮಾಲೋಚಿಸಬೇಕಿತ್ತು. ಭೂಂಗಿಯನ್ನು ಕರೆದು "ರೂಮಿನಲ್ಲಿ ನನ್ನ ಒಡವೆಯ ಪೆಟ್ಟಿಗೆಯಿದೆ, ತೆಗೆದುಕೊಂಡು ಬಾ' ಅಂದಳು.

ಭೂಂಗಿ ವಾಪಸ್ಸು ಬಂದು "ರೂಮಿನಲ್ಲೆಲ್ಲೂ ಒಡವೆ ಪೆಟ್ಟಿಗೆ ಸಿಗಲಿಲ್ಲಮ್ಮ, ಎಲ್ಲಿಟ್ಟಿದ್ದೀರಾ?' ಎಂದು ಕೇಳಿದಳು.

ನಿರ್ಮಲಾ ಕೋಪದಿಂದ ಹೇಳಿದಳು –"ಹೇಳಿದ ಒಂದು ಕೆಲಸವನ್ನು ನೀನು ಎಂದಾದರೂ ಒಂದೇ ಸಾರಿಗೆ ಮಾಡಿದ್ದೀಯೇನು? ರೂಮನ್ನು ಬಿಟ್ಟು ಎಲ್ಲಿಗೆ ಹೋಗುತ್ತೆ ಅದು? ಅಲ್ಮಾರಿನಲ್ಲಿ ನೋಡಿದೆಯೇನು ?'

ಭೂಂಗಿ : "ಇಲ್ಲ ಅಮ್ಮ, ಅಲ್ಮಾರಿನಲ್ಲಿ ನೋಡಲಿಲ್ಲ, ಸುಳ್ಳು ಯಾಕೆ ಹೇಳಲಿ?'

ನಿರ್ಮಲಾ ನಸು ನಕ್ಕು ಹೇಳಿದಳು – "ಹೋಗಿ ನೋಡು ಹೋಗು, ಬೇಗ ಬಾ,' ಒಂದು ಕ್ಷಣದಲ್ಲಿಯೇ ವಾಪಸು ಬಂದ ಭೂಂಗಿ ಬರಿಗೈಲಿದ್ದಳು. "ಅಲ್ಮಾರಿಯಲ್ಲೂ ಇಲ್ಲ ಅಮ್ಮ, ಇನ್ನೆಲ್ಲಿ ಹುಡುಕಬೇಕು ಹೇಳಿ ಹುಡುಕ್ತೀನಿ' ಅಂದಳು.

ನಿರ್ಮಲಾ ಕೋಪಗೊಂಡು ಎದ್ದಳು –"ನಿನಗೆ ದೇವರು ಯಾಕಾದರೂ ಕಣ್ಣು ಕೊಟ್ಟಿದ್ದಾನೆಯೊ, ನಾ ಬೇರೆ ಕಾಣೆ. ನೋಡ್ತಿರು, ಕಣ್ಣು ಮುಚ್ಚಿ ಬಿಡುವುದರಲ್ಲಿ ನಾನು ತರ್ತೀನೋ ಇಲ್ಲವೋ ಅಂತ.'

ಭೂಂಗಿಯೂ ಆಕೆಯನ್ನು ಹಿಂಬಾಲಿಸಿದಳು. ನಿರ್ಮಲಾ ಅಲ್ಲೇ ಇದ್ದ ಅಲ್ಮಾರಿಯ ಮೇಲ್ಭಾಗದತ್ತ ಕಣ್ಣು ಹಾಯಿಸಿದಳು, ಅಲ್ಮಾರಿಯನ್ನು ತೆಗೆದು ನೋಡಿದಳು. ಮಂಚದ ಕೆಳಗೆ ಬಗ್ಗಿ ನೋಡಿದಳು. ನಂತರ ಬಟ್ಟೆಗಳನ್ನಿಟ್ಟಿದ್ದ ದೊಡ್ಡ ಪೆಟ್ಟಿಗೆಯನ್ನೂ ತೆರೆದು ನೋಡಿದಳು. ಒಡವೆ ಪೆಟ್ಟಿಗೆ ಎಲ್ಲೂ ಕಾಣಲಿಲ್ಲ. ಒಡವೆ ಪೆಟ್ಟಿಗೆ ಮಂಗಮಾಯವಾದುದಕ್ಕೆ ಆಕೆಗೆ ಆಶ್ಚರ್ಯವಾಯಿತು.

ಇದ್ದಕ್ಕಿದ್ದಂತೆಯೇ ಆಕೆಗೆ ರಾತ್ರಿಯ ಘಟನೆ ಮಿಂಚಿನಂತೆ ಕಣ್ಮುಂದೆ ಹೊಳೆಯಿತು. ಕರುಳು ಕಿತ್ತು ಬಂದಂಥ ಅನುಭವವಾಯಿತು. ಈವರೆಗೆ ನಿಶ್ಚಿಂತೆಯಿಂದ ಹುಡುಕುತ್ತಿದ್ದಳು. ಈಗ ಅವಳ ಮೈ–ಮನಸ್ಸುಗಳೆರಡೂ ಬಿಸಿಯಾದವು. ಗಡಿಬಿಡಿಯಿಂದ ಕಣ್ಣಲ್ಲಿ ಕಣ್ಣಿಟ್ಟು ಎಲ್ಲ ಕಡೆಯೂ ಹುಡುಕಿದಳು. ಎಲ್ಲೂ ಅದರ ಸುಳಿವೂ ಕಾಣಲಿಲ್ಲ. ಎಲ್ಲೆಲ್ಲಿ ಹುಡುಕುವ ಅವಶ್ಯಕತೆಯಿರಲಿಲ್ಲವೋ ಅಲ್ಲೆಲ್ಲ ಹುಡುಕಿದಳು. ಅಷ್ಟು ದೊಡ್ಡದಾದ ಒಡವೆ ಪೆಟ್ಟಿಗೆ ಹಾಸಿಗೆಯ ಕೆಳಗೆ ಹೇಗೆ ಹೋದಾತು ? ಆಕೆ ಅಲ್ಲಿಯೂ ನೋಡಿದಳು. ಕ್ಷಣಕ್ಷಣಕ್ಕೂ ಆಕೆಯ ಮುಖದ ಕಾಂತಿ ಮಲಿನವಾಗುತ್ತಿತ್ತು. ಪ್ರಾಣವೇ ಹಾರಿ ಹೋದಂಥ ಅನುಭವವಾಗುತ್ತಿತ್ತು. ಕೊನೆಗೆ ನಿರಾಶಳಾಗಿ ತನ್ನ ಎದೆಗೆ ಒಂದೇಟು ಹಾಕಿಕೊಂಡಳು. ಅನಂತರ ಅಳತೊಡಗಿದಳು.

ಒಡವೆಗಳೇ ಹೆಂಗಸರ ಸಂಪತ್ತು. ಗಂಡನ ಇನ್ನಾವುದೇ ಸಂಪತ್ತಿನ ಮೇಲೆ ಹೆಣ್ಣಿಗೆ ಅಷ್ಟು ಅಧಿಕಾರವಿರುವುದಿಲ್ಲ. ಈ ಒಡವೆಗಳೇ ಆಕೆಯ ಗೌರವ ಮತ್ತು ಶಕ್ತಿಯಾಗಿರುತ್ತವೆ.

ನಿರ್ಮಲಾಳ ಬಳಿ ಐದಾರು ಸಾವಿರ ರೂ. ಬೆಲೆ ಬಾಳುವ ಒಡವೆಗಳಿದ್ದವು. ಈ ಒಡವೆಗಳನ್ನು ಧರಿಸಿ ಆಕೆ ಹೊರಗೆ ಹೊರಟಳೆಂದರೆ, ಒಡವೆಗಳು ಮೈಮೇಲೆ ಇದ್ದಷ್ಟು ಹೊತ್ತು ಅವಳ ಹೃದಯ ಉಲ್ಲಾಸದಿಂದ ಪುಟಿಯುತ್ತಿರುತ್ತಿತ್ತು. ಆಕೆಯ ಒಂದೊಂದು ಒಡವೆಯೂ ಆಕೆಯನ್ನು ವಿಪತ್ತು ಮತ್ತು ತೊಂದರೆಗಳಿಂದ ರಕ್ಷಿಸುವ ಒಂದೊಂದು ಅಸ್ತ್ರವಾಗಿತ್ತು. ರಾತ್ರಿ ತಾನೇ ಆಕೆ ಯೋಚಿಸುತ್ತಿದ್ದಳು – ಜಿಯಾರಾಮನಿಂದ ಬೈಸಿಕೊಂಡು ಅನ್ನಿಸಿಕೊಂಡು ತಾನು ಇಲ್ಲಿರುವುದಿಲ್ಲ. ಬೇರೆಯವರ ಮುಂದೆ ಕೈ ಚಾಚುವಂಥ ಪ್ರಸಂಗವನ್ನು ದೇವರು ಕೊಡದಿರಲಿ. ತನ್ನ ಒಡವೆಗಳ ಸಹಾಯದಿಂದ ಹೇಗೋ ಜೀವನ ಸಾಗಿಸಬಹುದು. ತನ್ನ ಹೆಣ್ಣು ಮಗಳನ್ನು ಹೇಗಾದರೂ ಒಂದು ದಡ ಮುಟ್ಟಿಸಬಹುದು. ತನಗೆ ಇನ್ನಾವ ಚಿಂತೆಯಿದೆ? ಈ ಒಡವೆಗಳನ್ನು ಯಾರು ತಾನೆ ಕಸಿದುಕೊಳ್ಳುತ್ತಾರೆ ? ಇವತ್ತು ಈ ಒಡವೆಗಳು ನನ್ನ ಶೃಂಗಾರದ ಸಾಧನಗಳಾಗಿದ್ದರೆ ಮುಂದೇ ಇವೇ ಬದುಕಿನ ಆಧಾರವಾಗುತ್ತವೆ ಎಂದು. ಹೀಗೆ ಯೋಚಿಸುವಾಗ ಅವಳಿಗೆ ಒಂದು ಬಗೆಯ ನೆಮ್ಮದಿ ಸಿಕ್ಕಿತ್ತು. ಈಗ ಆ ಸಂಪತ್ತೇ ಕೈಯಿಂದ ಜಾರಿ ಹೋಗಿದೆ. ಈಗ ಅವಳು ನಿರಾಧಾರಳಾಗಿದ್ದಳು. ಈಗ ಅವಳಿಗೆ ಪ್ರಪಂಚದಲ್ಲಿ ಯಾವೊಂದು ಆಸರೆಯೂ ಇರಲಿಲ್ಲ. ಯಾವ ನೆರವೂ ಕಾಣಲಿಲ್ಲ. ಅವಳ ಆಸೆ–ಆಕಾಂಕ್ಷೆಗಳ ನೆಲಗಟ್ಟು ಬುಡಸಮೇತ ಕೊಚ್ಚಿ ಹೋಗಿತ್ತು. ಅವಳು ಬಿಕ್ಕಳಿಸಿ ಬಿಕ್ಕಳಿಸಿ ಅಳತೊಡಗಿದಳು. ದೇವರೆ ! ನಿನ್ನಿಂದ ಇಷ್ಟೂ ನೋಡಲಾಗಲಿಲ್ಲವೇನು? ಆ ಅಭಾಗಿನಿಯನ್ನು ಮೊದಲೇ ವಿಕಲಾಂಗಳನ್ನಾಗಿ ಮಾಡಿದ್ದೆ. ಈಗ ಆಕೆಯ ಕಣ್ಣುಗಳನ್ನು ಕಿತ್ತುಕೊಂಡುಬಿಟ್ಟೆಯೇನು ! ಈಗ ಆಕೆ ಯಾರ ಮುಂದೆ ಕೈಚಾಚಬೇಕು? ಯಾರ ಮನೆಯ ಭಿಕ್ಷೆ ಬೇಡಬೇಕು? ಬೆವರಿನಿಂದ ಆಕೆಯ ಮೈ ತೊಯ್ದು ಹೋಗಿದೆ, ಅತ್ತು ಅತ್ತು ಕಣ್ಣುಗಳು ಊದಿಕೊಂಡಿವೆ ! ನಿರ್ಮಲಾ ತಲೆ ಕೆಳಗೆ ಮಾಡಿ ಅಳುತ್ತಿದ್ದಳು. ರುಕ್ಮಿಣಿ ಆಕೆಗೆ ಸಮಾಧಾನ ಮಾಡುತ್ತಿದ್ದಳು. ಆದರೂ ಆಕೆಯ ಕಣ್ಣೀರ ಪ್ರವಾಹ ಮಾತ್ರ ನಿಂತಿರಲಿಲ್ಲ. ಶೋಕ ಜ್ವಾಲೆ ಕಡಿಮೆಯಾಗುತ್ತಿರಲಿಲ್ಲ.

ಮೂರು ಗಂಟೆಗೆ ಜಿಯಾರಾಮ ಸ್ಕೂಲಿನಿಂದ ಬಂದ. ನಿರ್ಮಲಾ ಆತ ಬಂದ ಸುದ್ದಿ ಕೇಳುತ್ತಲೇ ವಿಕ್ಷಿಪ್ತಳಂತೆ ಎದ್ದು ಅವನ ರೂಮಿನ ಬಾಗಿಲಿಗೆ ಬಂದು ಹೇಳಿದಳು – 'ಮಗು, ತಮಾಷೆಗೆ ಹೀಗೆ ಮಾಡಿದ್ದರೆ ಕೊಟ್ಟುಬಿಡು. ಈ ಬಡಪಾಯಿಗೆ ಸತಾಯಿಸುವುದರಿಂದ ಏನು ಸಿಗುತ್ತೆ ನಿನಗೆ?'

ಜಿಯಾರಾಮ ಒಂದು ಕ್ಷಣ ತತ್ತರಿಸಿದ. ಇದು ಅವನ ಮೊದಲ ಕಳ್ಳತನವಾಗಿತ್ತು. ಹಿಂಸೆಯಲ್ಲೂ ಮನರಂಜನೆ ಪಡೆದುಕೊಳ್ಳುವಂಥ ಕಾಠಿಣ್ಯ ಭಾವ ಅವನಿಗಿನ್ನೂ ಕರಗತವಾಗಿರಲಿಲ್ಲ. ಅವನ ಬಳಿ ಆ ಒಡವೆ ಪೆಟ್ಟಿಗೆ ಇದ್ದಿದ್ದರೆ ಅದನ್ನು ಮೊದಲಿದ್ದ ಜಾಗದಲ್ಲಿಡಲು ಅವನಿಗಿನ್ನೊಮ್ಮೆ ಅವಕಾಶ ಸಿಕ್ಕಿದ್ದಿದ್ದರೂ ಸಾಕಾಗಿತ್ತು, ಅದನ್ನು ಬಹುಶಃ ಅವನು ಇಟ್ಟು ಬಿಡುತ್ತಿದ್ದ. ಆದರೆ ಪೆಟ್ಟಿಗೆ ಅವನ ಕೈ ಬಿಟ್ಟಾಗಿತ್ತು. ಅವನ ಸ್ನೇಹಿತರು ಅದನ್ನು ಸರಾಫ್ ಅಂಗಡಿಗೆ ಸಿಕ್ಕಿದಷ್ಟು ಹಣಕ್ಕೆ ಮಾರಿದ್ದರು. ಕಳ್ಳರಿಗೆ ಸುಳ್ಳಿನ ಹೊರತಾಗಿ

ಇನ್ಯಾರು ರಕ್ಷಿಸಬಲ್ಲರು? ಹೇಳಿದ – ಚೆನ್ನಾಗಿ ಹೇಳಿದಿರಿ ಅಮ್ಮ. ನಾನು ನಿಮ್ಮ ಜತೆ ತಮಾಷೆ ಮಾಡ್ತೀನೇನು? ನೀವು ಇದುವರೆಗೂ ನನ್ನ ಮೇಲೆ ಅನುಮಾನ ಪಡುತ್ತಿದ್ದೀರೇನು ? ನಾನು ಹೇಳಿದೆನಲ್ಲ, ನಾನು ನಿನ್ನೆ ರಾತ್ರಿ ಮನೆಯಲ್ಲಿರಲಿಲ್ಲ ಅಂತ. ನೀವು ಯಾಕೆ ನಂಬುತ್ತಿಲ್ಲ ? ನೀವು ನ್ನನ್ನು ಇಷ್ಟು ನೀಚ ಅಂತ ಭಾವಿಸಿಕೊಂಡಿರುವುದನ್ನು ನೋಡಿ ನನಗೆ ದುಃಖವಾಗ್ತಿದೆ.'

ನಿರ್ಮಲಾ ಕಣ್ಣೀರು ಒರೆಸಿಕೊಳ್ಳುತ್ತ ಹೇಳಿದಳು – "ನಾನು ನಿನ್ನ ಮೇಲೆ ಅನುಮಾನ ಪಡುತ್ತಿಲ್ಲ ಮಗು, ನಿನ್ನ ಮೇಲೆ ಕಳ್ಳತನದ ಆರೋಪ ಹೊರಿಸುತ್ತಿಲ್ಲ. ನೀನು ತಮಾಷೆ ಮಾಡ್ತಿರಬಹುದು ಅಂತ ನಾನು ಅಂದುಕೊಂಡೆ ಅಷ್ಟೆ'

ಜಿಯಾರಾಮನೇ ಕದ್ದಿರುವುದು ಎಂದು ಆಕೆ ಹೇಗೆ ತಾನೇ ಹೇಳಿಯಾಳು? ಹಾಗೆ ಹೇಳಿದರೆ ಪ್ರಪಂಚ ಏನನ್ನುತ್ತದೆ ? ತಾಯಿ ಸತ್ತಿದ್ದಾಳೆ ಅಂತ ಆಕೆ ಕಳ್ಳತನವನ್ನು ಹೊರಿಸುತ್ತಿದ್ದಾಳೆ ಅನ್ನುತ್ತೆ ಆಕೆಯ ಮುಖಕ್ಕೇ ಜನ ಕಪ್ಪು ಬಳಿಯುತ್ತಾರೆ.

ಜಿಯಾರಾಮ ಆಶ್ವಾಸನೆಯನ್ನು ಕೊಡುತ್ತ ಹೇಳಿದ – "ಬನ್ನಿ ನೋಡೋಣ, ಅಲ್ಲ, ಯಾರು ತಗೊಂಡು ಹೋದರು ? ಯಾವ ದಾರೀಲಿ ಬಂದ ಕಳ್ಳ ?'

ಭೂಂಗಿ : "ಅಣ್ಣಯ್ಯ, ನೀನು ಕಳ್ಳರು ಯಾವ ರಸ್ತೆಯಲ್ಲಿ ಬರ್ತಾರೆ ಅಂತ ಕೇಳ್ತಿದ್ದೀಯೇನು ? ಕಳ್ಳರು ಇಲಿಯ ಬಿಲಗಳಿಂದಲೂ ಬರಬಹುದು. ಇಲ್ಲೋ ನಾಲ್ಕೂ ಕಡೆ ಕಿಟಿಕಿಗಳಿವೆ'

ನಿರ್ಮಲಾ : "ಇಡೀ ಮನೆಯನ್ನು ಶೋಧಿಸಿದೆ. ಈಗ ಇನ್ನೆಲ್ಲಿ ಹುಡುಕಲಿಕ್ಕೆ ಹೇಳ್ತಿದ್ದೀಯಾ?'

ಜಿಯಾರಾಮ : "ನೀವು ಮಲಗಿದಿರಿ ಅಂದ್ರೆ ಹೆಣಗಳು ಬಿದ್ದುಕೊಂಡಂತೆ ಮಲಗಿಬಿಡ್ತೀರಿ.'

ನಾಲ್ಕು ಗಂಟೆಗೆ ವಕೀಲರು ಮನೆಗೆ ಬಂದರು. ಬಂದವರೇ ನಿರ್ಮಲಾಳ ಅವಸ್ಥೆಯನ್ನು ನೋಡಿ ಕೇಳಿದರು – "ಆರೋಗ್ಯ ಹೇಗಿದೆ ? ಏನಾದರೂ ತೊಂದರೆಯಿದೆಯೇನು?' ಇಷ್ಟು ಕೇಳುತ್ತ ಅವರು ಆಶಾಳನ್ನು ಎತ್ತಿಕೊಂಡರು.

ನಿರ್ಮಲಾಳಿಂದ ಯಾವ ಉತ್ತರವನ್ನು ಕೊಡಲಾಗಲಿಲ್ಲ. ಪುನಃ ಅಳತೊಡಗಿದಳು.

ಭೂಂಗಿ ನುಡಿದಳು : "ಈ ತರಹ ಯಾವತ್ತೂ ಆಗಿರಲಿಲ್ಲ. ನನ್ನ ಆಯಸ್ಸನ್ನು ಪೂರ್ತಿ ಈ ಮನೇಲಿ ಕಳೆದಿದ್ದೇನೆ. ಇವತ್ತಿನವರೆಗೆ ಯಾವುದೇ ಕಳ್ಳತನವಾಗಿರಲಿಲ್ಲ. ಇದು ಭೂಂಗಿ ಕೆಲಸ ಅಂತ ಜನ ಅನ್ನಬಹುದು. ಆ ದೇವರೆ ಎಲ್ಲವನ್ನೂ ನೋಡಿಕೊಳ್ಳಲಿ.'

ವಕೀಲರು ಕೋಟಿನ ಬಟನ್ ಬಿಚ್ಚುತ್ತಿದ್ದರು. ಮತ್ತೆ ಬಟನ್‌ಗಳನ್ನು ಹಾಕುತ್ತ ಕೇಳಿದರು – "ಏನಾಯಿತೀಗ ? ಯಾವುದಾದರೂ ವಸ್ತುವಿನ ಕಳುವಾಗಿದೆಯೇನು ?'

ಭೂಂಗಿ : 'ಅಮ್ಮಾವರ ಎಲ್ಲ ಒಡವೆಗಳೂ ಕಳುವಾಗಿವೆ.'

ವಕೀಲರು : ' ಎಲ್ಲಿಟ್ಟಿದ್ದಿರಿ?'

ನಿರ್ಮಲಾ ಬಿಕ್ಕಳಿಸುತ್ತಲೇ ರಾತ್ರಿಯ ಎಲ್ಲಾ ಘಟನೆಯನ್ನು ವಿಸ್ತಾರವಾಗಿ ಹೇಳಿದಳು. ಆದರೆ ಜಿಯಾರಾಮನಂಥ ಒಬ್ಬ ವ್ಯಕ್ತಿ ತನ್ನ ಕೋಣೆಯಿಂದ ಹೊರಗೆ ಹೋದದ್ದನ್ನು ಮಾತ್ರ ಹೇಳಲಿಲ್ಲ. ವಕೀಲರು ನಿಟ್ಟುಸಿರು ಬಿಡುತ್ತ ಹೇಳಿದರು – "ದೇವರು ತುಂಬ ಅನ್ಯಾಯ ಮಾಡ್ತಿದ್ದಾನೆ. ಈಗಾಗಲೇ ನೊಂದಿರುವವರಿಗೇ ಮತ್ತೆ ಮತ್ತೆ ನೋಯಿಸುತ್ತಿದ್ದಾನೆ, ಹಿಂಡಿ ಹಿಪ್ಪೇಕಾಯಿ ಮಾಡುತ್ತಿದ್ದಾನೆ. ನಮ್ಮ ಪಾಲಿಗೆ ಕೆಟ್ಟ ದಿನಗಳು ಬರಲಾರಂಭಿಸಿವೆ ಎಂದು ನನಗನ್ನಿಸುತ್ತಿದೆ. ಒಂದು ವೇಳೆ ಕಳ್ಳ ಬಂದ ಎಂದಿಟ್ಟುಕೊಂಡರೂ ಯಾವ ಕಡೆಯಿಂದ ಬಂದ ? ಎಲ್ಲೂ ಸುರಂಗವೇನೂ ಬಿದ್ದಿಲ್ಲವಲ್ಲ ? ಯಾವ ಕಡೆಯಿಂದಲೂ ಬರಲಿಕ್ಕೆ ಆಗುವುದಿಲ್ಲವಲ್ಲ ? ಇಷ್ಟು ದೊಡ್ಡ ಶಿಕ್ಷೆಗೆ ಯೋಗ್ಯವಾಗುವಂಥ ಯಾವ ಪಾಪವನ್ನೂ ನಾನು ಮಾಡಿಲ್ಲ. ನಾನು ಮತ್ತೆ ಮತ್ತೆ ಹೇಳ್ತಾಲೇ ಇದ್ದೆ. ಒಡವೆ ಪೆಟ್ಟಿಗೆಯನ್ನು ಹೀಗೆ ಹೊರಗಡೆ ಇಡಬೇಡಾಂತ. ಆದರೆ ನನ್ನ ಮಾತನ್ನು ಯಾರು ಕೇಳ್ತಾರೆ?'

ನಿರ್ಮಲಾ : "ಇಂಥ ವಿಪತ್ತು ಬರುತ್ತೇಂತ ನನಗೇನು ಗೊತ್ತಿತ್ತು ?'

ವಕೀಲರು : "ಎಲ್ಲ ದಿನಗಳು ಒಂದೇ ರೀತಿ ಇರಲ್ಲ ಅನ್ನುವುದಾದರೂ ಗೊತ್ತಿರಲಿಲ್ಲವೇನು ? ಇವತ್ತು ಅದೇ ಒಡವೆಗಳನ್ನು ಮಾಡಿಸಲಿಕ್ಕೆ ಅಂತ ಹೋದರೆ ಹತ್ತು ಸಾವಿರ ರೂ. ಗಳಿಗಿಂತಲೂ ಕಡಿಮೆಯೇನೂ ಆಗುವುದಿಲ್ಲ. ಇವತ್ತಿನ ನನ್ನ ಸ್ಥಿತಿ ನಿನ್ನಿಂದೇನೂ ಮುಚ್ಚಿಟ್ಟಿಲ್ಲ. ಜೀವನದ ಖರ್ಚಿಗೇ ಕಣ್ಣು ಬಾಯಿ ಬಿಡುವಂತಾಗಿದೆ. ಇಂಥಾದ್ದರಲ್ಲಿ ಒಡವೆಗಳನ್ನು ಎಲ್ಲಿಂದ ಮಾಡಿಸುವುದು ? ಹೋಗಿ ಪೋಲೀಸರಿಗೆ ಕಂಪ್ಲೇಂಟ್ ಕೊಟ್ಟು ಬರ್ತೀನಿ. ಆದರೆ ಅದರಿಂದ ಯಾವ ಲಾಭವಿಲ್ಲ ಅಂತಲೂ ಗೊತ್ತಿದೆ.'

ನಿರ್ಮಲಾ ಆಕ್ಷೇಪಿಸುತ್ತ ಹೇಳಿದಳು – "ಪೋಲೀಸಿಗೆ ಹೋಗುವುದರಿಂದ ಯಾವ ಲಾಭವೂ ಇಲ್ಲ ಅಂತ ಗೊತ್ತಿದ್ದ ಮೇಲೆ ಅಲ್ಲಿಗೆ ಯಾಕಾದರೂ ಹೋಗ್ತಿದ್ದೀರಿ?'

ವಕೀಲರು : "ಸುಮ್ಮನಿರಲು ಮನಸ್ಸು ಒಪ್ಪುತ್ತಿಲ್ಲ. ನೀನೇ ಹೇಳು, ಇಷ್ಟು ದೊಡ್ಡ ನಷ್ಟವನ್ನು ಅನುಭವಿಸಿಯೂ ಸುಮ್ಮನೆ ಕೂರಲು ಮನಸ್ಸು ಒಪ್ಪುತ್ತಿಲ್ಲ.'

ನಿರ್ಮಲಾ : "ಸಿಗುವಂತಿದ್ದರೆ ಯಾಕಾದರೂ ಹೋದವು ? ಒಟ್ಟಿನಲ್ಲಿ ನನ್ನ ಹಣೆಯಲ್ಲಿ ಬರೆದಿರಲಿಲ್ಲ ಅಂದ ಮೇಲೆ ಅವು ನನ್ನ ಹತ್ತಿರ ಹೇಗೆ ಇದ್ದಾವು?'

ವಕೀಲರು : "ಹಣೆಯಲ್ಲಿ ಬರೆದಿದ್ದರೆ ಸಿಗುತ್ತವೆ. ಇಲ್ಲದಿದ್ದರೆ ಹೋದ ಹಾಗೆ ಅಂತ ತಿಳ್ಕೊ.'

ವಕೀಲರು ರೂಮಿನಿಂದ ಹೊರಟರು. ನಿರ್ಮಲಾ ಅವರ ಕೈ ಹಿಡಿದುಕೊಂಡು ಹೇಳಿದಳು–"ನಾನು ಹೇಳ್ತಿದ್ದೀನಿ, ಹೋಗಬೇಡಿ ಅಂದ್ರೆ ಒಂದಕ್ಕೆ ಎರಡು ಕೊಡಬೇಕಾಗಿ ಬಂದ್ರೆ ಏನ್ ಮಾಡೋದು?'

ವಕೀಲರು ಕೈ ಬಿಡಿಸಿಕೊಂಡು ಹೇಳಿದರು – "ಮಕ್ಕಳಂತೆ ಹಠ ಮಾಡ್ತಿದ್ದೀಯಲ್ಲ ನೀನು ! ಹತ್ತು ಸಾವಿರ ರೂ.ಗಳ ನಷ್ಟವಾದರೂ ಸುಮ್ಮನಿದ್ದು ಬಿಡಬೇಕೇನು ? ನಾನು

ಅಳುತ್ತಿಲ್ಲ, ಆದರೆ ನನ್ನ ಹೃದಯ ಅನುಭವಿಸುತ್ತಿರುವ ನೋವು ನನಗೊಬ್ಬನಿಗೆ ಮಾತ್ರ ಗೊತ್ತು.' ಇಷ್ಟು ಹೇಳಿ ಅವರು ರೂಮಿನಿಂದ ವೇಗವಾಗಿ ಹೊರ ಬಂದರು. ಸೀದಾ ಪೊಲೀಸ್ ಸ್ಟೇಷನ್ನಿಗೆ ಹೋದರು. ಇನ್ಸ್‌ಪೆಕ್ಟರ್ ಇವರನ್ನು ತುಂಬಾ ಗೌರವಿಸುತ್ತಿದ್ದ. ಒಂದು ಸಾರಿ ಒಂದು ಲಂಚದ ಮೊಕದ್ದಮೆಯಲ್ಲಿ ಅವನನ್ನು ವಕೀಲರು ಬಚಾವು ಮಾಡಿದ್ದರು. ಆತ ಇವರೊಡನೆ ತಪಾಸಣೆ ಮಾಡಲು ಮನೆಗೇ ಬಂದ. ಆತನ ಹೆಸರು ಅಲಾಯಾರ್ ಖಾನ್ ಅಂತ

ಸಂಜೆಯಾಗಿತ್ತು. ಇನ್ಸ್‌ಪೆಕ್ಟರ್ ಮನೆಯ ಹಿಂಭಾಗ–ಮುಂಭಾಗದಲ್ಲೆಲ್ಲ ಸುತ್ತಿ – ಸುತ್ತಿ ನೋಡಿದ. ಒಳಗೆ ಹೋಗಿ ನಿರ್ಮಲಾಳ ಕೊಠಡಿಯನ್ನು ಗಮನವಿಟ್ಟು ನೋಡಿದ. ಮೇಲಿನ ಸಜ್ಜೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ. ಮೊಹಲ್ಲಾದ ನಾಲ್ಕಾರು ಜನರೊಂದಿಗೆ ಈ ವಿಷಯವನ್ನು ಎತ್ತಿಕೊಂಡು ಮಾತನಾಡಿದ. ಆನಂತರ ಆತ ವಕೀಲರಿಗೆ ಹೇಳಿದ – "ಸಾಹೇಬರೆ, ದೇವರಾಣೆಗೂ ಹೇಳ್ತೀನಿ, ಇದು ಯಾವ ಹೊರಗಿನ ವ್ಯಕ್ತಿಯ ಕೆಲಸವೂ ಅಲ್ಲ, ದೇವರಾಣೆಗೂ ಹೇಳ್ತೀದ್ದೀನಿ – ಈ ಕಳ್ಳತನವನ್ನು ಹೊರಗಿನವರು ಮಾಡಿದ್ದಾರೆ ಆಂತ ಗೊತ್ತಾದರೆ ನಾನು ಈ ಕೆಲಸವನ್ನೇ ಬಿಟ್ಟು ಬಿಡ್ತೇನೆ. ನಿಮ್ಮ ಮನೆಯಲ್ಲಿನ ಯಾರ ಮೇಲಾದರೂ ಅನುಮಾನವಿದೆಯೇನು?'

ವಕೀಲರು : "ಈಗ ಮನೆಯಲ್ಲಿ ಒಬ್ಬಳು ಕೆಲಸದಾಕೆ ಇದ್ದಾಳೆ, ಅಷ್ಟೆ.'

ಇನ್ಸ್‌ಪೆಕ್ಟರ್ : "ಸಾಹೇಬರೆ, ಈಕೆ ಅರೆ ಹುಚ್ಚಿ. ಇದು ಇವಳ ಕೆಲಸವಲ್ಲ. ದೇವರಾಣೆಗೂ ಹೇಳ್ತಿದ್ದೀನಿ.'

ವಕೀಲರು : "ಇನ್ಯಾರಿದ್ದಾರೆ ಮನೇಲಿ ? ನನ್ನ ಇಬ್ಬರು ಮಕ್ಕಳಿದ್ದಾರೆ, ಹೆಂಡತಿಯಿದ್ದಾಳೆ, ನನ್ನ ತಂಗಿ ಇದ್ದಾಳೆ. ಇವರಲ್ಲಿ ಯಾರನ್ನು ಅನುಮಾನಿಸಲಿ?'

ಇನ್ಸ್‌ಪೆಕ್ಟರ್ : "ದೇವರಾಣೆಗೂ ಹೇಳ್ತೀದ್ದೀನಿ, ಯಾರೆ ಆಗಿರಬಹುದು, ಒಟ್ಟಿನಲ್ಲಿ ಇದು ಮನೆಯವರದೇ ಕೆಲಸ. ಇಂಶಾ ಅಲ್ಲಾ ! ಮೂರು–ನಾಲ್ಕು ದಿನಗಳ ಒಳಗೆ ನಿಮಗೆ ಯಾರು ಅಂತ ಬಂದು ಹೇಳ್ತೀನಿ, ಮಾಲು ಪೂರ್ತಾ ಸಿಕ್ಕೇ ಸಿಗುತ್ತೆ ಅಂತ ಭರವಸೆ ಕೊಡಲಾರೆ, ಆದರೆ ದೇವರಾಣೆಗೂ ಹೇಳ್ತೀನಿ, ಕಳ್ಳನನ್ನಂತೂ ಹಿಡಿದು ಕೊಡುತ್ತೀನಿ.'

ಇನ್ಸ್‌ಪೆಕ್ಟರ್ ಹೊರಟು ಹೋದ. ವಕೀಲರು ಬಂದು ಈ ವಿಷಯವನ್ನು ನಿರ್ಮಲಾಗೆ ಹೇಳಿದರು. ನಿರ್ಮಲಾಳ ಕೈಕಾಲುಗಳು ನಡುಗಲಾರಂಭಿಸಿದವು. ವಿನಂತಿಸಿದಳು – 'ದಯವಿಟ್ಟು ಇನ್ಸ್‌ಪೆಕ್ಟರಿಗೆ ಹೇಳಿ, ಯಾವ ವಿಚಾರಣೆಯನ್ನೂ ಮಾಡೋದು ಬೇಡ ಅಂತ, ನಿಮ್ಮ ಕಾಲಿಗೆ ಬೀಳ್ತೀನಿ ರೀ.'

ವಕೀಲರು : "ನೀನು ಯಾಕೆ ಹೀಗೆ ಮಾಡ್ತಿದ್ದೀಯಾ?'

ನಿರ್ಮಲಾ : "ನಿಮಗೆ ಹೇಗೆ ಹೇಳಲಿ ? ಮನೆಯವರೆ ಯಾರೋ ಮಾಡಿರುವ ಕೆಲಸ ಇದು ಅಂತ ಆತ ಹೇಳ್ತಿದ್ದಾನೆ.'

ವಕೀಲರು : "ಹೇಳಲಿ ಬಿಡು.'

ಜಿಯಾರಾಮ ತನ್ನ ರೂಮಿನಲ್ಲಿ ಕುಳಿತುಕೊಂಡು ದೇವರ ಜಪ ಮಾಡುತ್ತಿದ್ದ. ಅವನ ಮುಖ ಕಪ್ಪಿಟ್ಟಿತ್ತು. ಪೋಲಿಸರು ಮುಖ ನೋಡಿಯೇ ಕಳ್ಳನನ್ನು ಹಿಡಿದು ಬಿಡುತ್ತಾರೆ ಎಂಬ ವಿಷಯವನ್ನು ಅವನು ಕೇಳಿದ್ದ. ಅವನಿಗೆ ಹೊರಗೆ ಬರುವ ಧೈರ್ಯವಾಗಲಿಲ್ಲ. ವಕೀಲರ ಮತ್ತು ಇನ್ಸ್‌ಪೆಕ್ಟರ್ ನಡುವೆ ಏನು ಮಾತುಕತೆಯಾಯಿತು ಎಂಬುದನ್ನು ತಿಳಿದುಕೊಳ್ಳಲು ಅವನು ಕಾತರ ಪಡುತ್ತಿದ್ದ. ಇನ್ಸ್‌ಪೆಕ್ಟರ್ ಹೋದ ಮೇಲೆ ಯಾವುದೋ ಕೆಲಸಕ್ಕೆಂದು ಭೂಂಗಿ ಹೊರಗೆ ಬಂದಾಗ ಜಿಯಾರಾಮ ಕೇಳಿದ– "ಆ ಇನ್ಸ್‌ಪೆಕ್ಟರ್ ಏನು ಹೇಳುತ್ತಿದ್ದ ಭೂಂಗಿ?'

ಭೂಂಗಿ ಹತ್ತಿರ ಬಂದು ಹೇಳಿದಳು – "ಮನೆಯವರಲ್ಲೇ ಯಾರೋ ಒಬ್ಬರ ಕೆಲಸ ಇದು, ಹೊರಗಿನವರದ್ದಲ್ಲ ಅಂತ ಹೇಳ್ತಿದ್ದ.'

ಜಿಯಾರಾಮ : "ಇದಕ್ಕೆ ಅಪ್ಪಾಜಿ ಏನೂ ಹೇಳಲಿಲ್ಲವಾ?'

ಭೂಂಗಿ : "ಏನನ್ನೂ ಹೇಳಲಿಲ್ಲ, ಸುಮ್ಮನೆ ಹೂಂ, ಹೂಂ, ಅನ್ನುತ್ತಿದ್ದರು. ಈ ಮನೆಯಲ್ಲಿ ಈ ಭೂಂಗಿ ಒಬ್ಬಳು ತಾನೇ ಹೊರಗಿನವಳು, ಉಳಿದವರೆಲ್ಲ ಮನೆಯವರೇ ತಾನೆ ?'

ಜಿಯಾರಾಮ : "ನಾನೂ ಹೊರಗಿನವನೇ, ನೀನೊಬ್ಬಳೇ ಅಂತ ಯಾಕೆ ಹೇಳ್ತಿಯಾ?'

ಭೂಂಗಿ : "ನೀನು ಹೊರಗಿನವನು ಅಂತ ಯಾಕೆ ಹೇಳ್ತೀಯಾ ಅಣ್ಣಾ?'

ಜಿಯಾರಾಮ : "ಮನೆಯ ಯಾರ ಮೇಲೂ ನನಗೆ ಅನುಮಾನವಿಲ್ಲ ಅಂತ ಅಪ್ಪಾಜಿ ಇನ್ಸ್‌ಪೆಕ್ಟರಿಗೆ ಹೇಳಲಿಲ್ಲವೇನು?'

ಭೂಂಗಿ : "ಏನೂ ಹೇಳ್ದಂಗೆ ಆಗಲಿಲ್ಲ ಅಣ್ಣ, ಪಾಪ, ಆ ಇನ್ಸ್‌ಪೆಕ್ಟರ್ ಭೂಂಗಿ ಹುಚ್ಚಿ ಅವಳೇನು ಕಳ್ಳತನ ಮಾಡ್ತಾಳೆ ಅಂತ ಹೇಳಿದರು. ಆದರೆ ಯಜಮಾನರು ನನ್ನನ್ನು ಸಿಗಿಸಲು ಪ್ರಯತ್ನ ಮಾಡಿದರು.'

ಜಿಯಾರಾಮ : "ಹಾಗಾದರೆ ನೀನು ತಪ್ಪಿಸಿಕೊಂಡುಬಿಟ್ಟೆ ಇನ್ನು ಉಳಿದವನು ನಾನು. ನೀನೇ ಹೇಳು "ಅವತ್ತು ರಾತ್ರಿ ನೀನು ನನ್ನನ್ನು ಮನೆಯಲ್ಲಿ ನೋಡಿದೆಯೇನು?'

ಭೂಂಗಿ : "ಇಲ್ಲ ಅಣ್ಣಾ, ನೀನು ಥೇಟರ್‌ಗೆ ಹೋಗಿದ್ದಿ ಅಲ್ಲವೆ?'

ಜಿಯಾರಾಮ : "ಹೀಗಂತ ಸಾಕ್ಷಿ ಹೇಳ್ತಿ ತಾನೆ?'

ಭೂಂಗಿ : "ಇದೇನು ಮಾತನಾಡ್ತಿ ಅಣ್ಣ. ಅಮ್ಮಾವರು ಈ ವಿಚಾರಣೆಯೇ ಬೇಡ ಅಂತ ಹೇಳ್ತಿದ್ದಾರೆ, ಇನ್ನು ಸಾಕ್ಷಿ ಎಲ್ಲಿ ಬಂತು ?'

ಜಿಯಾರಾಮ : "ನಿಜವಾಗಿಯೂ....?'

ಭೂಂಗಿ : "ಹೌದು, ಮತ್ತೆ ಮತ್ತೆ ಅವರು ಈ ತನಿಖೆ–ವಿಚಾರಣೆ ಒಂದೂ ಬೇಡ ಅಂತ ಹೇಳ್ತಿದ್ದರು. ಒಡವೆ ಹೋದರೆ ಹೋಗಲಿ ಅಂದರು. ಆದರೆ ಯಜಮಾನ್ರು ಕೇಳ್ಲಿಲ್ಲ.'

ಐದಾರು ದಿನಗಳ ಕಾಲ ಜಿಯಾರಾಮ ಹೊಟ್ಟೆ ತುಂಬ ಊಟ ಮಾಡಲಿಲ್ಲ. ಎರಡು, ಮೂರು ತುತ್ತು ಬಾಯಿಗಿಟ್ಟುಕೊಳ್ಳುತ್ತಿದ್ದಂತೆಯೇ ನನಗೆ ಹಸಿವಿಲ್ಲ ಎಂದು ಎದ್ದು ಬಿಡುತ್ತಿದ್ದ. ಅವನ ಮುಖದಲ್ಲಿ ಒಂದು ಚೂರೂ ಕಳೆಯೆ ಇಲ್ಲದಾಗಿತ್ತು. ಎಚ್ಚರವಾಗಿದ್ದುಕೊಂಡೇ ರಾತ್ರಿಗಳನ್ನು ಕಳೆಯುತ್ತಿದ್ದ. ಪ್ರತಿ ಕ್ಷಣವೂ ಇನ್ಸ್‌ಪೆಕ್ಟರ್ ಬಂದರೆ ......... ಬಂದರೆ ಎಂದು ಕಾತರದಿಂದ ನಿರೀಕ್ಷಿಸುತ್ತಿದ್ದ. ಸ್ಥಿತಿ ಇಷ್ಟು ಗಂಭೀರವಾಗುತ್ತದೆ ಎಂಬುದು ಅವನಿಗೆ ಮೊದಲೇ ಗೊತ್ತಿದ್ದಿದ್ದರೆ ಎಂದೂ ಅವನು ಇಂಥ ಕೆಲಸ ಮಾಡುತ್ತಿರಲಿಲ್ಲ. ಯಾವನಾದರೂ ಕಳ್ಳನ ಮೇಲೆ ಈ ಆರೋಪ ಬರುತ್ತದೆ, ನನ್ನ ಬಗ್ಗೆ ಯಾರ ಮನಸ್ಸಿನಲ್ಲೂ ಅನುಮಾನ ಬರುವುದಿಲ್ಲ ಎಂದೇ ಅವನು ಲೆಕ್ಕ ಹಾಕಿದ್ದ. ಆದರೆ ಈಗ ಅವನ ಗುಟ್ಟೇ ರಟ್ಟಾಗುವುದರಲ್ಲಿತ್ತು. ಆ ಇನ್ಸ್‌ಪೆಕ್ಟರ್ ನಡೆಸುತ್ತಿದ್ದ ವಿಚಾರಣೆಗಳಿಂದ ಜಿಯಾರಾಮನಿಗೆ ತುಂಬ ಚಿಂತೆಯಾಗಿತ್ತು.

ಏಳನೆಯ ದಿನ ಸಂಜೆ ಜಿಯಾರಾಮ ಮನೆಗೆ ಬಂದಾಗ ಅವನು ತುಂಬಾ ಚಿಂತಾಕ್ರಾಂತನಾಗಿದ್ದ. ಇವತ್ತಿನವರೆಗೂ ತಾನು ಬಚಾವಾಗುತ್ತೇನೆಂಬುದರ ಬಗ್ಗೆ ಅವನಿಗೆ ಕೊಂಚವಾದರೂ ಆಸೆಯಿತ್ತು. ಏಕೆಂದರೆ ಮಾಲು ಇದುವರೆಗೆ ಪತ್ತೆಯಾಗಿ ಅದನ್ನು ವಶಪಡಿಸಿಕೊಂಡಿರಲಿಲ್ಲ. ಆದರೆ ಇವತ್ತು ಮಾಲು ಪತ್ತೆಯಾಗಿ ಅದನ್ನು ವಶಪಡಿಸಿಕೊಂಡಿದ್ದರ ಬಗ್ಗೆ ಸುದ್ದಿ ಸಿಕ್ಕಿತ್ತು. ಈಗ ಇನ್ಸ್‌ಪೆಕ್ಟರ್ ಕಾನ್‌ಸ್ಟೇಬಲ್‌ನನ್ನು ಜತೆಯಲ್ಲಿ ಕರೆದುಕೊಂಡು ಬರುತ್ತಿರಬಹುದು. ಈಗ ತಪ್ಪಿಸಿಕೊಳ್ಳುವ ಯಾವ ಉಪಾಯವೂ ಇಲ್ಲ. ಇನ್ಸ್‌ಪೆಕ್ಟರಿಗೆ ಲಂಚ ಕೊಟ್ಟರೆ ಆತ ಮೊಕದ್ದಮೆಯನ್ನು ಮುಚ್ಚಿ ಹಾಕಲೂಬಹುದು. ಹಣ ಕೈಲಿತ್ತು. ಆದರೆ ಇದನ್ನು ರಹಸ್ಯವಾಗಿಡಲು ಸಾಧ್ಯವೇ? ಇನ್ನೂ ಮಾಲು ಸಿಕ್ಕಿಲ್ಲ. ಆಗಲೇ ಇಡೀ ಊರಿನಲ್ಲೆಲ್ಲ ಮಗನೇ ಒಡವೆಗಳನ್ನು ಕದ್ದಿದ್ದಾನೆ ಎಂಬ ಗುಲ್ಲು ಎದ್ದಿದೆ. ಇನ್ನು ಮಾಲು ಕೈಗೆ ಸಿಕ್ಕಿತೆಂದರೆ ಬೀದಿ ಬೀದಿಯಲ್ಲಿ ಇದೇ ಸುದ್ದಿಯಾಗುತ್ತದೆ. ಆಗ ನಾನು ಯಾರಿಗೂ ಮುಖ ತೋರಿಸುವಂತಿಲ್ಲ.

ವಕೀಲರು ಕಛೇರಿಯಿಂದ ಬಂದಾಗ ತುಂಬ ಗಾಬರಿಯಿಂದಿದ್ದರು. ತಲೆಯ ಮೇಲೆ ಕೈಯಿಟ್ಟುಕೊಂಡು ಮಂಚದ ಮೇಲೆ ಕೂತುಬಿಟ್ಟರು.

ನಿರ್ಮಲಾ ಕೇಳಿದಳು : "ಬಟ್ಟೆ ಬದಲಾಯಿಸುವುದಿಲ್ಲವೇನು? ದಿನಾಲು ಬರುವುದಕ್ಕಿಂತಲೂ ತಡವಾಗಿ ಬಂದಿದ್ದೀರಲ್ಲ ಇವತ್ತು'

ವಕೀಲರು : "ಬಟ್ಟೆ ಏನು ಬದಲಾಯಿಸುವುದು ? ಕೇಳಿದೆಯೇನು?'

ನಿರ್ಮಲಾ : "ಏನ್ ವಿಷಯ? ನನಗೇನು ಗೊತ್ತಿಲ್ಲವಲ್ಲ?'

ವಕೀಲರು : "ಮಾಲು ಸಿಕ್ಕಿತು, ಈಗ ಜಿಯಾ ತಪ್ಪಿಸಿಕೊಳ್ಳುವ ಸಾಧ್ಯತೆಯಿಲ್ಲ.'

ನಿರ್ಮಲಾಳಿಗೆ ಆಶ್ಚರ್ಯವಾಗಲಿಲ್ಲ. ಈ ವಿಚಾರ ಅವಳಿಗೆ ಮೊದಲೇ ಗೊತ್ತಿತ್ತು ಎಂಬ ಭಾವ ಅವಳ ಮುಖಭಾವದಿಂದ ಗೊತ್ತಾಗುತ್ತಿತ್ತು. ಹೇಳಿದಳು – "ಪೊಲೀಸರಿಗೆ ಹೇಳಬೇಡಿ ಅಂತ ನಾನು ಮೊದಲೇ ನಿಮಗೆ ಹೇಳಲಿಲ್ಲವೇನು?'

ವಕೀಲರು : "ನಿನಗೆ ಜಿಯಾನ ಮೇಲೆ ಅನುಮಾನವಿತ್ತೇನು?'

ನಿರ್ಮಲಾ: "ಯಾಕಿರಲಿಲ್ಲ ? ನನ್ನ ರೂಮಿನಿಂದ ಅವನು ಹೊರಗೆ ಹೋಗುತ್ತಿರುವುದನ್ನು ನಾನು ನೋಡಿದ್ದೆ.'

ವಕೀಲರು : "ಹಾಗಾದರೆ ಅದನ್ನು ನೀನು ನನಗೇಕೆ ಹೇಳಲಿಲ್ಲ?'

ನಿರ್ಮಲಾ : "ಈ ಮಾತನ್ನು ನಾನು ಹೇಳುವಂತಿರಲಿಲ್ಲ. ಹೇಳಿದ್ದಿದ್ದರೆ ನಾನು ಬೇಕೂಂತಲೇ ಹೊಟ್ಟೆಕಿಚ್ಚಿನಿಂದ ಅವನ ಮೇಲೆ ಆರೋಪ ಹೊರಿಸುತ್ತಿದ್ದೇನೆ ಅಂತ ನೀವು ಯೋಚಿಸುತ್ತಿದ್ದಿರಿ. ಹೇಳಿ ನೋಡೋಣ, ನೀವು ಹೀಗೆ ಯೋಚಿಸುತ್ತಿರಲಿಲ್ಲವೇನು ? ಸುಳ್ಳು ಹೇಳಬೇಡಿ, ಹೇಳಿ.'

ವಕೀಲರು : "ಇರಬಹುದು, ನಾನು ಇಲ್ಲ ಅನ್ನಲ್ಲ. ಆದರೂ ಆ ಹೊತ್ತಿನಲ್ಲಿ ನೀನು ನನ್ನೊಂದಿಗೆ ಹೇಳಿಬಿಡಬೇಕಾಗಿತ್ತು. ಆಗ ರಿಪೋರ್ಟ್ ಕೊಡುವ ಪರಿಸ್ಥಿತಿ ಬರುತ್ತಿರಲಿಲ್ಲ. ನೀನು ನಿನ್ನ ಮಟ್ಟಿಗೆ ಒಳ್ಳೆಯವಳಾಗಬೇಕೂಂತ ಯೋಚಿಸಿದೆಯೇ ಹೊರತಾಗಿ ಮುಂದಿನ ಪರಿಣಾಮ ಏನಾಗುತ್ತೆ ಅಂತ ಯೋಚಿಸಲಿಲ್ಲ. ನಾನು ಈಗಲೇ ಪೋಲೀಸ್ ಸ್ಟೇಷನ್‌ಗೆ ಹೋಗ್ತೀನಿ, ಆ ಲಾಯರ್ ಖಾನ್ ಬರುತ್ತಿರಬಹುದು.'

ನಿರ್ಮಲಾ ಹತಾಶಳಾಗಿ ಕೇಳಿದಳು – "ಈಗ ಏನ್ ಮಾಡೋದು?'

ವಕೀಲರು ಆಕಾಶದತ್ತ ನೋಡುತ್ತ ನುಡಿದರು – "ದೇವರ ಇಷ್ಟದಂತೆ ಆಗಲಿ ! ಸಾವಿರನೋ ಎರಡು ಸಾವಿರನೋ ಲಂಚ ಕೊಡಲು ನನ್ನಿಂದ ಆಗುವಂತಿದ್ದರೆ ಇದನ್ನು ಇಲ್ಲಿಯೇ ಮುಚ್ಚಿಬಿಡಬಹುದು. ಆದರೆ ನನ್ನ ಕೈ ಹೇಗಿದೆ ಅಂತ ನಿನಗೆ ಗೊತ್ತಿದೆ. ಅದೃಷ್ಟ ಖೋಟಾ, ಇನ್ನೇನಿಲ್ಲ ಅವನು ಪಾಪ ಮಾಡಿದ್ದಾನೆ ಅಂದ ಮೇಲೆ ಶಿಕ್ಷೆಯನ್ನು ಬೇರೆಯವರು ಅನುಭವಿಸಲಿಕ್ಕೆ ಬರುತ್ತೇನು : ಒಬ್ಬ ಮಗನ ಗತಿ ಹಾಗಾಯ್ತು, ಈ ಮಗನ ಗತಿ ಹೀಗಾಗಿದೆ ! ಇವನು ಅಯೋಗ್ಯ, ಪಾಪಿ, ಮೃಗಳ್ಳ ಅನ್ನೋದೇನೋ ಸರಿ, ಆದರೆ ಇವನು ನನ್ನ ಮಗ ತಾನೆ ! ಇವತ್ತಲ್ಲ ನಾಳೆ ಒಳ್ಳೆಯವನಾಗುತ್ತಿದ್ದ, ಈ ಪೆಟ್ಟನ್ನು ನನ್ನಿಂದ ಸಹಿಸಿ ಕೊಳ್ಳುವುದಕ್ಕೆ ಆಗುವುದಿಲ್ಲ.'

ನಿರ್ಮಲಾ : "ಏನೋ ಅಷ್ಟೋ ಇಷ್ಟೋ ಕೊಟ್ಟು ಪ್ರಾಣ ಉಳಿಸಿಕೊಳ್ಳುವುದಕ್ಕೆ ಆಗುತ್ತೆ ಅನ್ನೋದಾದರೆ ನಾನು ಹಣದ ವ್ಯವಸ್ಥೆಯನ್ನು ಮಾಡುತ್ತೇನೆ.'

ವಕೀಲರು : "ಹಾಗಾ ? ಮಾಡ್ತೀಯಾ ? ಎಷ್ಟು ಹಣ ಕೊಡಬಲ್ಲೆ?'

ನಿರ್ಮಲಾ : "ಎಷ್ಟು ಬೇಕಾಗುತ್ತೆ?'

ವಕೀಲರು : "ಒಂದು ಸಾವಿರಕ್ಕಿಂತಲೂ ಕಡಿಮೆಯಾದರೆ ಬಹುಶಃ ಮಾತು ಕುದುರುವುದಿಲ್ಲ. ನಾನು ಅವನ ಒಂದು ಕೇಸಿನಲ್ಲಿ ಆತನಿಂದ ಒಂದು ಸಾವಿರ ತಗೊಂಡಿದ್ದೆ. ಇವತ್ತು ಅವನು ಅದನ್ನು ವಸೂಲಿ ಮಾಡ್ಕೊತಾನೆ.'

ನಿರ್ಮಲಾ : " ಆಯಿತು ಈಗಲೇ ಪೋಲೀಸ್ ಸ್ಟೇಷನ್ನಿಗೆ ಹೋಗಿ ಬನ್ನಿ.'

ವಕೀಲರಿಗೆ ಪೋಲೀಸ್ ಸ್ಟೇಷನ್ನಿನಲ್ಲಿ ತುಂಬ ಸಮಯ ಹಿಡಿಯಿತು. ಏಕಾಂತದಲ್ಲಿ

ಮಾತನಾಡಲು ಬಹಳ ಹೊತ್ತಾದ ನಂತರ ಅವಕಾಶ ಸಿಕ್ಕಿತು. ಆ ಲಾಯರ್ ಖಾನ್ ಹಳೆ ಹುಲಿ. ಬಲು ಕಷ್ಟ ಪಟ್ಟು ಅವನನ್ನು ದಾರಿಗೆ ತರಬೇಕಾಯಿತು. ಐನೂರು ರೂಪಾಯಿ ತೆಗೆದುಕೊಂಡರೂ ಏನೋ ಉಪಕಾರ ಮಾಡಿದವನಂತೆ ಋಣ ಭಾರವನ್ನು ಅವರ ಮೇಲೆ ಹೇರಿದ. ಅಂತೂ ಕೆಲಸವಾಯಿತು. ವಕೀಲರು ಮನೆಗೆ ಬಂದು ನಿರ್ಮಲಾಗೆ ಹೇಳಿದರು – "ಕೆಲಸ ಆಯಿತು ನಿರ್ಮಲಾ, ನೀನು ಹಣ ಕೊಟ್ಟೆ ಆದರೆ ನನ್ನ ಬಾಯಿ ಕೆಲಸ ಮಾಡಿತು. ಬಹಳ ಕಷ್ಟದಿಂದ ಒಪ್ಪಿಕೊಂಡ. ಇದನ್ನು ಮರೆಯೋಕೆ ಆಗುತ್ತೇನು ? ಸರಿ, ಜಿಯಾರಾಮ ಊಟ ಮಾಡಿದನೆ?'

ನಿರ್ಮಲಾ : "ಎಲ್ಲಿ ಮಾಡಿದ, ಸುತ್ತಿಕೊಂಡು ಇನ್ನೂ ಮನೆಗೆ ಬಂದಿಲ್ಲ.'

ವಕೀಲರು : "ಗಂಟೆ ಹನ್ನೆರಡಾಗಿರಬೇಕಲ್ಲ?'

ನಿಮಲಾ : "ಎಷ್ಟೋ ಸಾರಿ ಅವನ ರೂಮಿಗೆ ಹೋಗಿ ನೋಡಿಕೊಂಡು ಬಂದೆ, ಅವನಿಲ್ಲ ಅಲ್ಲಿ.'

ವಕೀಲರು : "ಸಿಯಾರಾಮ?'

ನಿರ್ಮಲಾ : "ಅವನು ಊಟ ಮಾಡಿ ಮಲಗಿದ್ದಾನೆ'

ವಕೀಲರು : "ಜಿಯಾರಾಮ ಎಲ್ಲಿ ಹೋದ ಅಂತ ಕೇಳಲಿಲ್ಲವೇನು?'

ನಿರ್ಮಲಾ : "ಕೇಳಿದ್ದೆ, ತನಗೆ ಏನೂ ಹೇಳಿ ಹೋಗಲಿಲ್ಲ ಅಂತ ಹೇಳಿದ.'

ವಕೀಲರಿಗೆ ಅನುಮಾನ ಬಂತು. ಸಿಯಾರಾಮನನ್ನು ಎಚ್ಚರಿಸಿ ಕೇಳಿದರು – "ನಿನಗೆ ಜಿಯಾರಾಮ ಏನಾದರೂ ಹೇಳಿದನಾ? ಎಷ್ಟು ಹೊತ್ತಿಗೆ ಬರ್ತಾನಂತೆ? ಎಲ್ಲಿಗೆ ಹೋಗಿದ್ದಾನೆ ?'

ಸಿಯಾರಾಮ ತಲೆ ಕೆರೆದುಕೊಳ್ಳುತ್ತಾ, ಕಣ್ಣುಗಳನ್ನು ಒಸಕಿಕೊಳ್ಳುತ್ತಾ ನುಡಿದ– "ನನಗೇನೂ ಹೇಳಲಿಲ್ಲ.'

ವಕೀಲರು : "ಡ್ರೆಸ್ ಮಾಡಿಕೊಂಡು ಹೋದನೆ?'

ಸಿಯಾರಾಮ : "ಇಲ್ಲ, ಪಂಚೆ ಜುಬ್ಬ ತೊಟ್ಟುಕೊಂಡಿದ್ದ.'

ವಕೀಲರು : "ಹೋಗುವಾಗ ಖುಷಿಯಾಗಿದ್ದನಾ?'

ಸಿಯಾರಾಮ : "ಖುಷಿಯಾಗಿದ್ದಂತೆ ಕಾಣಿಸಲಿಲ್ಲ. ಎಷ್ಟೋ ಸಾರಿ ಒಳಗಡೆ ಬರಬೇಕು ಅಂತ ಅಂದುಕೊಂಡ, ಆದರೆ ಹೊಸ್ತಿಲ ಒಳಗಡೆ ಹೆಜ್ಜೆ ಇಡದೇ ಹಾಗೆಯೇ ವಾಪಸ್ಸು ಹೋದ. ಎಷ್ಟೋ ಹೊತ್ತು ಹೊರಗಡೆ ಸುಮ್ಮನೇ ನಿಂತಿದ್ದ. ಏನನ್ನೋ ಯೋಚಿಸುತ್ತ ಹೋಗುವಾಗ ಕಣ್ಣುಗಳನ್ನು ಒರೆಸಿಕೊಳ್ಳುತ್ತಿದ್ದ. ಈಗ್ಗೆ ಕೆಲವು ದಿನಗಳಿಂದ ಸಾಮಾನ್ಯವಾಗಿ ಅಳ್ತಾನೆ ಇರ್ತಿದ್ದ.'

ವಕೀಲರು ಇನ್ನು ತಮ್ಮ ಬದುಕಿನಲ್ಲಿ ಏನೂ ಉಳಿದಿಲ್ಲವೇನೋ ಎಂಬಂತೆ ತಣ್ಣನೆಯ ನಿಟ್ಟುಸಿರಿಡುತ್ತ ನಿರ್ಮಲಾಗೆ ಹೇಳಿದರು – "ನೀನು ಒಳ್ಳೆಯವಳಾಗಬೇಕೆಂದು ನನಗೇನೂ ಹೇಳಲಿಲ್ಲ. ಆದರೆ ಎಂಥ ಶತ್ರುವೂ ನನ್ನ ಮೇಲೆ ಇಂಥ ಹಗೆಯನ್ನು ಸಾಧಿಸಿರಲಿಲ್ಲ.

ಜಿಯಾರಾಮನ ತಾಯಿ ಬದುಕಿದ್ದಿದ್ದರೆ ಆಕೆ ನನಗೆ ಹೇಳೋಕೆ ಹೀಗೆ ಸಂಕೋಚ ಮಾಡಿಕೊಳ್ತಿದ್ದಳೇನು ? ಎಂದಿಗೂ ಇಲ್ಲ.'

ನಿರ್ಮಲಾ : "ಕೊಂಚ ಡಾಕ್ಟರ್ ಹತ್ತಿರ ಯಾಕಾದರೂ ಹೋಗಿ ಬರಬಾರದು ಅಂತ? ಬಹುಶಃ ಅಲ್ಲಿ ಇದ್ದರೂ ಇರಬಹುದು. ಎಷ್ಟೋ ಹುಡುಗರು ದಿನವೂ ಬರ್ತಿರ್ತಾರೆ, ಅವರನ್ನು ಕೇಳಿ. ಏನಾದರೂ ವಿಷಯ ಗೊತ್ತಾಗಬಹುದು. ನಾನು ಎಷ್ಟೇ ಹುಶಾರಾಗಿದ್ದರೂ ಕೆಟ್ಟ ಹೆಸರು ತಲೆಗೆ ಬಂದೇ ಬಂತು.'

ವಕೀಲರು ತೆರೆದಿಟ್ಟಿದ್ದ ಕಿಟಕಿಗೆ ಹೇಳಿದರು – "ಆಯಿತು, ಹೋಗ್ತೀನಿ, ಈಗ ಮಾಡುವುದಕ್ಕೆ ಉಳಿದಿರುವುದಾದರೂ ಏನಿದೆ?'

ವಕೀಲರು ಹೊರಗೆ ಬಂದರು, ಡಾಕ್ಟರ್ ಸಿನ್ಹಾ ಅಲ್ಲೇ ನಿಂತಿದ್ದರು. ವಕೀಲರು ಬೆಚ್ಚಿ ಕೇಳಿದರು – "ಬಂದು ಬಹಳ ಹೊತ್ತಾಯಿತೇನು?'

ಡಾಕ್ಟರ್ : "ಇಲ್ರಿ, ಈಗ ತಾನೆ ಬಂದೆ. ನೀವು ಈಗ ಎಲ್ಲಿಗೆ ಹೋಗ್ತಿದ್ದೀರಿ? ರಾತ್ರಿ ಹನ್ನೆರಡೂವರೆ ಗಂಟೆಯಾಗ್ತಿದೆ.'

ವಕೀಲರು : "ನಿಮ್ಮ ಮನೆಯ ಕಡೇನೆ ಬರ್ತಿದ್ದೆ. ಜಿಯಾರಾಮ ಊರು ಸುತ್ತಿ ಇನ್ನೂ ಬಂದಿಲ್ಲ. ನಿಮ್ಮ ಮನೆಯ ಕಡೆ ಬಂದಿದ್ದನೇನು?'

ಡಾಕ್ಟರ್ ಸಿನ್ಹಾ ವಕೀಲರ ಎರಡೂ ಕೈಗಳನ್ನು ಹಿಡಿದುಕೊಂಡು – "ವಕೀಲರೆ, ಈಗ ನೀವು ಧೈರ್ಯದಿಂದ .......' ಎಂದಷ್ಟೇ ಹೇಳಿದರು. ವಕೀಲರು ಎದೆಗೆ ಗುಂಡೇಟು ಬಿದ್ದ ಮನುಷ್ಯನಂತೆ ದೊಪ್ಪನೆ ನೆಲದ ಮೇಲೆ ಬಿದ್ದರು.

## ಇಪ್ಪತ್ತೊಂದು

ರುಕ್ಮಿಣಿ ಹುಬ್ಬು ಗಂಟಿಕ್ಕಿಕೊಂಡು ಕೇಳಿದಳು–"ಈ ಹುಡುಗ ಬರಿ ಕಾಲಲ್ಲೇ ಸ್ಕೂಲಿಗೆ ಹೋಗಬೇಕೇನು?'

ನಿರ್ಮಲಾ ಮಗಳ ತಲೆ ಬಾಚುತ್ತ ಹೇಳಿದಳು –"ನಾನೇನು ಮಾಡಲಿ? ನನ್ನ ಹತ್ತಿರ ಹಣ ಇಲ್ಲ.'

ರುಕ್ಮಿಣಿ : "ಒಡವೆ ಮಾಡಿಸಿಕೊಳ್ಳೋಕೆ ಹಣ ಬರುತ್ತೆ ಮಕ್ಕಳಿಗೆ ಚಪ್ಪಲಿ ತರಬೇಕು ಅಂದ್ರೆ ಆ ಹಣಕ್ಕೆ ಬೆಂಕಿ ಬಿದ್ದಿರುತ್ತೆ ಇಬ್ಬರಂತೂ ಹೋದರು. ಈಗ ಉಳಿದಿರುವ ಒಬ್ಬನನ್ನು ಸಹ ಅಳಿಸಿ–ಅಳಿಸಿ ಸಾಯಿಸಬೇಕೂಂತ ಇದ್ದೀಯೇನು?'

ನಿರ್ಮಲಾ ನಿಟ್ಟುಸಿರಿಟ್ಟು ಹೇಳಿದಳು– "ಬದುಕೋಕೆ ಇಷ್ಟ ಇರೋನು ಬದುಕ್ತಾನೆ, ಸಾಯಬೇಕೂಂತ ಇರೋನು ಸಾಯ್ತಾನೆ. ನಾನು ಯಾರಿಗೂ ಬದುಕಿಸಲು, ಸಾಯಿಸಲು ಹೋಗುವವಳಲ್ಲ.'

ಇತ್ತೀಚೆಗೆ ಒಂದಲ್ಲ ಒಂದು ಮಾತಿಗೆ ನಿರ್ಮಲಾ ಮತ್ತು ರುಕ್ಮಿಣಿಯ ಮಧ್ಯೆ ದಿನವೂ ಮಾತು ನಡೆದೇ ಇರುತ್ತಿತ್ತು. ಒಡವೆಗಳ ಕಳ್ಳತನವಾದ ಮೇಲಂತು ನಿರ್ಮಲಾಳ ಸ್ವಭಾವ ಸಂಪೂರ್ಣ ಬದಲಾಗಿಬಿಟ್ಟಿದೆ. ಅವಳು ಒಂದೊಂದು ಕಾಸನ್ನೂ ಹಲ್ಲಲ್ಲಿ ಕಚ್ಚಿ ಹಿಡಿಯುತ್ತಿದ್ದಾಳೆ. ಸಿಯಾರಾಮ ಅತ್ತು–ಅತ್ತು ಪ್ರಾಣ ಕಳೆದುಕೊಂಡರೂ ಸರಿ, ಅವನಿಗೆ ಚಾಕಲೇಟ್‌ಗೆ ಅಂತ ಒಂದು ಪೈಸೆಯನ್ನೂ ಕೊಡುತ್ತಿಲ್ಲ. ಕೇವಲ ಸಿಯಾರಾಮನೊಂದಿಗಷ್ಟೇ ಆಕೆ ಈ ರೀತಿ ವ್ಯವಹರಿಸುತ್ತಿಲ್ಲ, ತನ್ನ ಎಷ್ಟೋ ಅವಶ್ಯಕತೆಗಳನ್ನು ಸಹ ಪೂರೈಸಿಕೊಳ್ಳುತ್ತಿಲ್ಲ. ಸೀರೆ ಹರಿದು ಚಿಂದಿ–ಚಿಂದಿಯಾಗುವವರೆಗೆ ಹೊಸ ಸೀರೆಯನ್ನು ಕೊಂಡು ಕೊಳ್ಳುತ್ತಿಲ್ಲ. ತಿಂಗಳಾದರೂ ತಲೆಗೆ ಎಣ್ಣೆ ತರಿಸುತ್ತಿಲ್ಲ. ಮೊದಲು ಆಕೆಗೆ ಎಲೆ–ಅಡಿಕೆ ಹಾಕಿಕೊಳ್ಳುವ ಅಭ್ಯಾಸವಿತ್ತು. ಈಗ ತಿಂಗಳುಗಳಿಂದ ಎಲೆ ಅಡಿಕೆ ತರಿಸುತ್ತಿಲ್ಲ. ಮಗುವಿಗೆ ಹಾಲು ಸಹ ತೆಗೆದುಕೊಳ್ಳುತ್ತಿಲ್ಲ. ಪುಟ್ಟ ಮಗುವಿನ ಭವಿಷ್ಯ ವಿರಾಟ್ ರೂಪದಲ್ಲಿ ನಿಂತು ಅವಳ ತಲೆ ತುಂಬಿಕೊಂಡಿದೆ.

ವಕೀಲರು ಈಗ ತಮ್ಮನ್ನು ಸಂಪೂರ್ಣವಾಗಿ ನಿರ್ಮಲಾಳಿಗೆ ಒಪ್ಪಿಸಿ ಕೊಂಡಿದ್ದಾರೆ. ಅವಳ ಯಾವುದೇ ವ್ಯವಹಾರದಲ್ಲಿ ಮಧ್ಯೆ ಪ್ರವೇಶಿಸುತ್ತಿಲ್ಲ. ಏಕೋ ಏನೋ ಆಕೆಗೆ ಹೆದರಿದವರಂತೆ ವ್ಯವಹರಿಸುತ್ತಿದ್ದಾರೆ. ಈಗ ಅವರು ತಪ್ಪದೇ ಕಛೇರಿಗೆ ಹೋಗುತ್ತಿದ್ದಾರೆ. ಇಷ್ಟು ಶ್ರಮವನ್ನು ಅವರು ತಮ್ಮ ಯೌವನದ ದಿನಗಳಲ್ಲೂ ಪಟ್ಟಿರಲಿಲ್ಲ. ಕಣ್ಣುಗಳು ಮಂಜಾಗುತ್ತಿವೆ. ಡಾಕ್ಟರ್ ಸಿನ್ಹಾ ರಾತ್ರಿ ಓದು–ಬರಹವನ್ನು ಮಾಡಬೇಡಿ ಅಂತ ಹೇಳಿದ್ದಾರೆ, ಜೀರ್ಣಶಕ್ತಿ ಮೊದಲೇ ದುರ್ಬಲವಾಗಿತ್ತು. ಈಗ ದಮ್ಮು ಹೊಸದಾಗಿ ಶುರುವಾಗಿದೆ. ಆದರೂ ಪಾಪ, ಅವರು ಬೆಳಗಿನಿಂದ ಸಂಜೆಯವರೆಗೂ ಕೆಲಸ ಮಾಡುತ್ತಿರುತ್ತಾರೆ. ಕೆಲಸ ಮಾಡಲು ಮನಸ್ಸು ಇಷ್ಟಪಡಲಿ, ಇಷ್ಟಪಡದಿರಲಿ, ಆರೋಗ್ಯ ಸರಿಯಾಗಿರಲಿ, ಇಲ್ಲದಿರಲಿ, ಕೆಲಸವನ್ನಂತೂ ಮಾಡಬೇಕಿದೆ. ಅವರನ್ನು ನೋಡಿದರೆ ಈಗ ನಿರ್ಮಲಾಳಿಗಂತೂ ಕೊಂಚವೂ ಮರುಕವುಂಟಾಗುವುದಿಲ್ಲ. ಭವಿಷ್ಯದ ಚಿಂತೆ ಮಾಡುತ್ತ – ಮಾಡುತ್ತ ಆಕೆ ತನ್ನಂತರಂಗದ ಎಲ್ಲ ಸದ್ಭಾವನೆಗಳನ್ನೂ ನಾಶಪಡಿಸಿಕೊಂಡಿದ್ದಾಳೆ. ಯಾವನಾದರೂ ಭಿಕ್ಷುಕನ ಧ್ವನಿ ಕೇಳಿಸಿದರೆ ಕೆಂಡವಾಗುತ್ತಾಳೆ. ಆಕೆ ಒಂದು ಕಾಸನ್ನೂ ಖರ್ಚು ಮಾಡಲು ಇಚ್ಛಿಸುತ್ತಿಲ್ಲ.

ಒಂದು ದಿನ ಆಕೆ ಸಿಯಾರಾಮನಿಗೆ ತುಪ್ಪ ತರುವಂತೆ ಹೇಳಿ ಕಳುಹಿಸಿದಳು. ಭೂಂಗಿಯ ಮೇಲೆ ಅವಳಿಗೆ ನಂಬಿಕೆಯಿರಲಿಲ್ಲ. ಇತ್ತೀಚೆಗೆ ಭೂಂಗಿಯಿಂದ ಯಾವ ಸಾಮಾನನ್ನೂ ಆಕೆ ತರಿಸುತ್ತಿರಲಿಲ್ಲ. ಸಿಯಾರಾಮನಲ್ಲಿ ಕದಿಯುವ, ಕಳ್ಳ–ಕಪಟ ಮಾಡುವ ಅಭ್ಯಾಸವಿರಲಿಲ್ಲ. ಪಾವು ತಂದು ಅರ್ಧಸೇರು ಎಂದು ಹೇಳುವುದನ್ನು ಕಲಿತಿರಲಿಲ್ಲ. ಸಾಮಾನ್ಯವಾಗಿ ಬಜಾರಿನ ಎಲ್ಲ ಕೆಲಸಗಳನ್ನು ಅವನೇ ಮಾಡಬೇಕಾಗುತ್ತಿತ್ತು. ನಿರ್ಮಲಾ ಪ್ರತಿಯೊಂದು ವಸ್ತುವನ್ನೂ ತೂಕ ಮಾಡಿ ನೋಡುತ್ತಿದ್ದಳು. ಒಂದಿಷ್ಟು ಕಡಿಮೆಯಿದೆ ಎಂದೆನ್ನಿಸಿದರೂ ಸಾಕು ಅದನ್ನು ವಾಪಸ್ಸು ಕಳಿಸುತ್ತಿದ್ದಳು. ಸಿಯಾರಾಮನ ಬಹಳಷ್ಟು

ಸಮಯ ವಸ್ತುಗಳನ್ನು ತಂದು–ವಾಪಸ್ಸು ಕೊಡುವುದರಲ್ಲಿಯೇ ಕಳೆದು ಹೋಗುತ್ತಿತ್ತು. ಅಂಗಡಿಗಳಲ್ಲಿ ಅವನಿಗೆ ಬೇಗ ಸಾಮಾನುಗಳನ್ನು ಕೊಡುತ್ತಿರಲಿಲ್ಲ. ಇವತ್ತು ಅಂಥದೇ ಪ್ರಸಂಗ ಬಂತು. ಸಿಯಾರಾಮ ತನ್ನ ದೃಷ್ಟಿಯಲ್ಲಿ ಚೆನ್ನಾಗಿರುವಂಥ ತುಪ್ಪವನ್ನು ನಾಲ್ಕಾರು ಅಂಗಡಿಗಳಲ್ಲಿ ವಿಚಾರಿಸಿಯೇ ತಂದಿದ್ದ. ಆದರೆ ನಿರ್ಮಲಾ ಅದನ್ನು ಮೂಸಿ ನೋಡುತ್ತಿದ್ದಂತೆಯೇ ಹೇಳಿದಳು–''ಈ ತುಪ್ಪ ಚೆನ್ನಾಗಿಲ್ಲ. ವಾಪಸ್ ಕೊಟ್ಟು ಬಾ ಹೋಗು.'

ಸಿಯಾರಾಮ ಬೇಸರದಿಂದಲೇ ನುಡಿದ–''ಇದಕ್ಕಿಂತಲೂ ಒಳ್ಳೆಯ ತುಪ್ಪ ಯಾರ ಅಂಗಡಿಯಲ್ಲೂ ಇಲ್ಲ. ನಾನು ಎಲ್ಲ ಅಂಗಡಿಗಳಲ್ಲೂ ವಿಚಾರಿಸಿಯೇ ತಂದಿದ್ದೀನಿ.'

ನಿರ್ಮಲಾ : ''ಹಾಗಾದರೆ ನಾನು ಸುಳ್ಳು ಹೇಳ್ತೀನೇನು?'

ಸಿಯಾರಾಮ : ''ನಾನು ಹಾಗಂತ ಹೇಳ್ತಿಲ್ಲ. ಆದರೆ ಆ ಅಂಗಡಿಯವನು ಈಗ ತುಪ್ಪವನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲ. ಮಾಲು ನಿನ್ನ ಕಣ್ಮುಂದಿದೆ, ಎಷ್ಟು ಸಾರಿ ಬೇಕಾದರೂ ನೋಡು, ಆದರೆ, ಬೋಣಿಗೆ ಸಮಯ ಇದು. ನೀನು ವಾಪಸ್ಸು ತಂದರೆ ನಾನಂತೂ ತಗೊಳಲ್ಲ ಅಂತ ಹೇಳಿದ. ನಾನು ವಾಸನೆ ನೋಡಿ, ರುಚಿ ನೋಡಿ ತಗೊಂಡೆ. ಈಗ ನಾನು ಯಾವ ಮುಖ ಇಟ್ಟುಕೊಂಡು ಹೋಗಲಿ?'

ನಿರ್ಮಲಾ ಹಲ್ಲು ಕಡಿಯುತ್ತ ನುಡಿದಳು –''ಈ ತುಪ್ಪ ಬೆರಕೆಯದು. ನೀನು ಚೆನ್ನಾಗಿದೆ ಅಂತ ಹೇಳ್ತಿದ್ದೀಯಲ್ಲೋ? ಇದನ್ನು ನಾನು ಅಡಿಗೆ ಮನೆಗೆ ತಗೊಂಡು ಹೋಗಲ್ಲ. ನಿನಗಿಷ್ಟವಿದ್ದರೆ ತಗೊಂಡು ಹೋಗಿ ವಾಪಸ್ಸು ಮಾಡು, ಇಲ್ಲಾಂದರೆ ನೀನೇ ತಿಂದುಕೊ.'

ತುಪ್ಪದ ಬಟ್ಟಲನ್ನು ಅಲ್ಲಿಯೇ ಬಿಟ್ಟು ನಿರ್ಮಲಾ ಮನೆಯೊಳಕ್ಕೆ ಹೋದಳು. ಸಿಯಾರಾಮ ಕೋಪ ಮತ್ತು ಕ್ಷೋಭೆಯಿಂದಾಗಿ ತಳಮಳಿಸತೊಡಗಿದ. ಯಾವ ಮುಖ ಹೊತ್ತುಕೊಂಡು ಅವನು ಅದನ್ನು ವಾಪಸು ಮಾಡಲು ಹೋಗುತ್ತಾನೆ? ನಾನು ವಾಪಸ್ಸು ತೆಗೆದುಕೊಳ್ಳುವುದಿಲ್ಲ ಅಂತ ಅಂಗಡಿಯವ ಹೇಳಿಯೇ ಹೇಳುತ್ತಾನೆ. ಆಗ ಏನು ಮಾಡುವುದು? ಆಗ ಅಕ್ಕಪಕ್ಕದ ಅಂಗಡಿಯವರು ಹಾಗೂ ರಸ್ತೆಯಲ್ಲಿ ಹೋಗಿ ಬರುವವರೆಲ್ಲ ನಿಂತು ನೋಡುತ್ತಾರೆ. ಅವರೆಲ್ಲರ ಮುಂದೆ ಅಪಮಾನಿತನಾಗಬೇಕಾಗುತ್ತದೆ. ಹಾಗೆ ನೋಡಿದರೆ ಪೇಟೆಯಲ್ಲಿ ಯಾವೊಬ್ಬ ಅಂಗಡಿಯವನೂ ಅವನಿಗೆ ಬೇಗ ಸಾಮಾನುಗಳನ್ನು ಕೊಡುತ್ತಿರಲಿಲ್ಲ. ಈಗ ಅವನು ಯಾರ ಅಂಗಡಿಯ ಮುಂದೂ ನಿಲ್ಲುವಂತಿಲ್ಲ. ನಾಲ್ಕು ಕಡೆಯಿಂದಲೂ ಅವನಿಗೆ ಬೈಗುಳಗಳ ಸುರಿಮಳೆಯಾಗುತ್ತದೆ.

ಅವನು ಮನಸ್ಸಿನಲ್ಲಿಯೇ ಅಂದುಕೊಂಡ –''ಇಲ್ಲಿಯೇ ಬಿದ್ದಿರಲಿ ಬಿಡು ಈ ತುಪ್ಪ ನಾನು ವಾಪಸ್ಸು ಕೊಡುವುದಿಲ್ಲ.'

ತಾಯಿಯಿಲ್ಲದ ಮಕ್ಕಳ ಸಮಾನ ದುಃಖಿ ಹಾಗೂ ದೀನ ಪ್ರಾಣಿ ಈ ಪ್ರಪಂಚದಲ್ಲಿ ಯಾರೂ ಇಲ್ಲವೆಂದು ಕಾಣುತ್ತದೆ. ಅವನಿಗೆ ಈಗ ತನ್ನ ತಾಯಿಯ ನೆನಪಾಯಿತು.

ಅಮ್ಮ ಇದ್ದಿದ್ದರೆ ತನಗೆ ಇದೆಲ್ಲವನ್ನೂ ಅನುಭವಿಸಬೇಕಾಗಿ ಬರುತ್ತಿತ್ತೇನು? ಅಣ್ಣಂದಿರು ಹೋದರು. ಈಗ ಎಲ್ಲ ಕಷ್ಟಗಳನ್ನು ಸಹಿಸಲು ನಾನಾದರೂ ಯಾಕೆ ಬದುಕಿದ್ದೇನೆ ? ಸಿಯಾರಾಮನ ಕಣ್ಣುಗಳಿಂದ ಕಣ್ಣೀರ ಧಾರೆ ಪ್ರವಹಿಸಲಾರಂಭಿಸಿತು. ಶೋಕ ವಿಹ್ವಲವಾದ ಅವನ ಕಂಠದಿಂದ ನಿಟ್ಟುಸಿರಿನೊಂದಿಗೆ, "ಅಮ್ಮಾ ..... ನನ್ನನ್ನು ಯಾಕಾದರೂ ಮರೆತೆ? ನನ್ನನ್ನು ನಿನ್ನ ಬಳಿ ಕರೆದುಕೊಳ್ಳುವುದಿಲ್ಲವೇನು?' ಎಂಬ ಮಾತುಗಳು ಬಾಯಿಂದ ಹೊರಬಂದವು.

ಇದ್ದಕ್ಕಿದ್ದಂತೆಯೇ ನಿರ್ಮಲಾ ಪುನಃ ರೂಮಿನತ್ತ ಬಂದಳು. ಸಿಯಾರಾಮ ಹೊರಟು ಹೋಗಿರಬಹುದು ಎಂದು ಅವಳು ಅಂದುಕೊಂಡಿದ್ದಳು. ಆದರೆ ಅವನು ಅಲ್ಲಿಯೇ ಕುಳಿತಿದ್ದುದನ್ನು ನೋಡಿದ್ದೇ ತಡ ಕೋಪದಿಂದ ಗದರಿಸಿದಳು – "ಇನ್ನೂ ನೀನು ಇಲ್ಲೇ ಕುಳಿತುಕೊಂಡಿದ್ದಿಯೇನು? ನಾನು ಅಡಿಗೆ ಮಾಡೋದು ಯಾವಾಗ?'

ಸಿಯಾರಾಮ ಕಣ್ಣೀರು ಒರೆಸಿಕೊಂಡು ಹೇಳಿದ–'ನನಗೆ ಸ್ಕೂಲಿಗೆ ತಡವಾಗುತ್ತೆ'

ನಿರ್ಮಲಾ : 'ಒಂದು ದಿನ ತಡವಾಗಿ ಹೋದರೆ ಆಕಾಶವೇನೂ ಕಳಚಿ ಬೀಳೋಲ್ಲಪ್ಪೋ. ಇದು ಮನೆಯ ಕೆಲಸ ತಾನೆ?'

ಸಿಯಾರಾಮ : "ದಿನವೂ ನನಗೆ ಇದೇ ರಾಮಾಯಣವಾಗಿದೆ. ಯಾವತ್ತೂ ಹೊತ್ತಿಗೆ ಸರಿಯಾಗಿ ಸ್ಕೂಲಿಗೆ ಹೋಗೋಕೆ ಆಗಿಲ್ಲ. ಮನೆಯಲ್ಲೂ ಓದೋದಕ್ಕೆ ಸಮಯ ಸಿಗೊಲ್ಲ. ಯಾವುದೇ ಸಾಮಾನು ತಂದರೂ ಎರಡು–ಮೂರು ಸಾರಿ ವಾಪಾಸು ಕಳಿಸದೇ ನೀವು ಅದನ್ನು ಒಳಕ್ಕೆ ತೆಗೆದುಕೊಳ್ಳೋದಿಲ್ಲ. ಅಲ್ಲಿ ಅವರು ನನಗೆ ಬೈತಾರೆ, ನನಗೆ ಅಪಮಾನವಾಗುತ್ತೆ ನಿಮಗೇನು ?'

ನಿರ್ಮಲಾ : "ಹೌದು, ನನಗೇನು? ನಾನು ನಿನ್ನ ಶತ್ರು ತಾನೆ? ನೀನು ನನ್ನವನು ಆಗಿದ್ದರೆ ನನಗೆ ದುಃಖವಾಗ್ತಿತ್ತು. ದೇವರೆ, ಇವನಿಗೆ ಓದಿ ಬರೆಯಲಿಕ್ಕೆ ಆಗದ ಹಾಗೆ ಮಾಡಪ್ಪ ಅಂತ ನಾನು ದೇವರಿಗೆ ಹರಕೆ ಕಟ್ಟಿದ್ದೀನಿ. ನನ್ನಲ್ಲಿರುವುದೆಲ್ಲ ದುರ್ಗುಣಗಳೇ. ಇದರಲ್ಲಿ ನಿನ್ನದೇನೂ ತಪ್ಪಿಲ್ಲಪ್ಪ ಮಲತಾಯಿ ಅನ್ನುವ ಹೆಸರೇ ಕೆಟ್ಟದ್ದು. ಸ್ವಂತ ತಾಯಿ ವಿಷ ಕುಡಿಸಿದರೂ ಅದು ಅಮೃತ. ನಾನು ಅಮೃತ ಕುಡಿಸಿದರೂ ಅದು ವಿಷವೇ ಆಗುತ್ತೆ. ನಿಮ್ಮಿಂದಾಗಿ ನನ್ನ ಸರ್ವನಾಶವಾಯಿತು. ಅತ್ತು, ಕರೆಯುವುದರಲ್ಲೇ ನನ್ನ ಆಯುಷ್ಯವೆಲ್ಲ ಸವೆದು ಹೋಯಿತು. ಆ ದೇವರು ನನಗೆ ಯಾಕಾದರೂ ಜನ್ಮ ಕೊಟ್ಟಿದ್ದಾನೋ ಎಂಬುದೇ ನನಗೆ ಗೊತ್ತಾಗಲಿಲ್ಲ. ನಿನ್ನ ದೃಷ್ಟಿಯಲ್ಲಿ ನಾನು ಮಜ ಮಾಡ್ತಿದ್ದೀನಿ ಅಲ್ಲವಾ ? ನಿನಗೆ ಹಿಂಸಿಸುವುದರಲ್ಲೇ ನನಗೆ ಸಂತೋಷವಿದೆ ಅಲ್ಲವಾ ? ಈ ಕಷ್ಟಗಳಿಗೆಲ್ಲ ಕೊನೆ ಯಾವಾಗ ಎಂದು ಆ ದೇವರಿಗೂ ತಿಳಿಯದು.'

ಇಷ್ಟು ಹೇಳುತ್ತ–ಹೇಳುತ್ತ ನಿರ್ಮಲಾಳ ಕಣ್ಣುಗಳು ತುಂಬಿ ಬಂದವು. ಅವಳು ಒಳಗೆ ಹೋದಳು. ಅವಳು ಅಳುವುದನ್ನು ನೋಡಿ ಸಿಯಾರಾಯ ಕೊಂಚ ಆರ್ದ್ರನಾದ. ಅವನಿಗೆ ದುಃಖವಾಗದಿದ್ದರೂ ಈಗ ಇನ್ನಾವ ಶಿಕ್ಷೆಯಾಗುವುದೋ ಎಂದು ಕಳ್ಪಿಸತೊಡಗಿದ.

ಅವನು ಮೆಲ್ಲಗೆ ತುಪ್ಪದ ಬಟ್ಟಲನ್ನು ಕೈಗೆತ್ತಿಕೊಂಡು ಅದನ್ನು ಹಿಂತಿರುಗಿಸಲು ಪೇಟೆಯ ಕಡೆಗೆ ಹೊರಟ. ನಾಯಿಯೊಂದು ಊರಿಗೆ ಹೊಸದಾಗಿ ಬರುತ್ತದೆಯಲ್ಲ, ಹಾಗೆ. ಅಂಥ ನಾಯಿಯಂತೆ ಇವನ ಮನಸ್ಸಿನಾಳದಲ್ಲಿನ ನೋವು ಅವನ ಒಂದೊಂದು ಭಾವದಲ್ಲೂ ಪ್ರಕಟವಾಗುತ್ತಿತ್ತು. ಈ ಅವಸ್ಥೆಯಲ್ಲಿ ಅವನನ್ನು ನೋಡಿದ ಯಾರೇ ಆದರೂ ಆತ ಅನಾಥ ಎಂದು ಹೇಳಿಬಿಡಬಹುದಾಗಿತ್ತು.

ಸಿಯಾರಾಮ ಒಂದೊಂದು ಹೆಜ್ಜೆಯನ್ನು ಮುಂದಿಟ್ಟು ಹೋಗುತ್ತಿದ್ದಂತೆ ಮುಂದೆ ಬರಲಿರುವ ವಿಪತ್ತಿನ ಭಯದಿಂದಾಗಿ ಅವನಿಗೆ ತನ್ನ ಹೃದಯ ಬಡಿತವೇ ನಿಂತು ಹೋದಂಥ ಅನುಭವವಾಗುತ್ತಿತ್ತು. ಅವನು ತೀರ್ಮಾನಿಸಿಕೊಂಡ : ಅಂಗಡಿಯವ ತುಪ್ಪವನ್ನು ವಾಪಸ್ಸು ತೆಗೆದುಕೊಳ್ಳದೇ ಹೋದರೆ ಅದನ್ನು ಅಲ್ಲಿಯೇ ಬಿಟ್ಟು ಬಂದುಬಿಡುತ್ತೇನೆ. ಆಗ ಅವನು ತಾನಾಗಿಯೇ ನನ್ನನ್ನು ಕರೆಯುತ್ತಾನೆ. ಆಗ ಅವನಿಗೆ ಬೈಯಲು ಶಬ್ದಗಳನ್ನು ಯೋಚಿಸಿಕೊಂಡ. ಸಾಹುಕಾರ್ರೆ, ಗಿರಾಕಿಗಳ ಕಣ್ಣಿಗೆ ಮಣ್ಣನ್ನೇಕೆ ಎರಚುತ್ತೀರಿ ? ತೋರಿಸುವುದು ಒಳ್ಳೆಯ ಮಾಲನ್ನು, ಕೊಡುವುದು ಕೆಟ್ಟಮಾಲು ಎಂದು ಬೈಯಬೇಕೆಂದುಕೊಂಡು ತೀರ್ಮಾನಿಸಿಯೇ ಹೊರಟನಾದರೂ ಅವನ ಹೆಜ್ಜೆಗಳು ಮುಂದಕ್ಕೆ ಸಾಗುತ್ತಲೇ ಇರಲಿಲ್ಲ. ತಾನು ಬರುತ್ತಿರುವುದನ್ನು ಸಾಹುಕಾರ ದೂರದಿಂದಲೇ ನೋಡದಿದ್ದರೆ ಸಾಕು ಎಂದುಕೊಂಡ. ಏಕೆಂದರೆ ಒಮ್ಮೆಗೆ ಯಾರ ಕಣ್ಣಿಗೂ ಬೀಳದಂತೆ ಅವನ ಅಂಗಡಿಯ ಮುಂದೆ ಪ್ರತ್ಯಕ್ಷನಾಗಲು ಅವನು ಬಯಸುತ್ತಿದ್ದ. ಹೀಗಾಗಿ ಅವನು ಬಳಸುದಾರಿಯ ಮೂಲಕ ಅವನ ಅಂಗಡಿಯ ಮುಂದೆ ಪ್ರತ್ಯಕ್ಷನಾದ.

ಸಾಹುಕಾರ ಅವನನ್ನು ನೋಡುತ್ತಲೇ – "ಕೊಟ್ಟ ಸಾಮಾನನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲಾಂತ ಮೊದಲೇ ನಾನು ಹೇಳಿರಲಿಲ್ಲವೇನು ? ಹೇಳು, ಹೇಳಿದ್ದೆನೋ, ಇಲ್ಲವೋ ?' ಎಂದ.

ಸಿಯಾರಾಮ ಸಿಟ್ಟಿನಿಂದಲೇ ಹೇಳಿದ –"ನೀವು ನನಗೆ ತೋರಿಸಿದ ಮಾಲನ್ನು ಕೊಟ್ಟರೇನ್ರಿ ? ತೋರಿಸಿದ್ದೊಂದು, ಕೊಟ್ಟಿದ್ದಿನ್ನೊಂದು. ವಾಪಸ್ಸು ಮಾಡದೇ ಏನು ಮಾಡ್ತಾರೆ ? ಬಿಸಾಡುವ ಮಾಲನ್ನು ನಾನ್ಯಾಕೆ ತಗೊಳ್ಳಿ ?'

ಸಾಹುಕಾರ : "ಇದಕ್ಕಿಂತಲೂ ಒಳ್ಳೆಯ ಮಾಲು ಇಡೀ ಪೇಟೆಯಲ್ಲಿಯೇ ಸಿಗೊಲ್ಲ. ಬಟ್ಟಲು ತಗೊಂಡು ಹೋಗಿ ನೋಡಿಕೊಂಡು ಬಾ ಹೋಗು.'

ಸಿಯಾರಾಮ : "ನನಗೆ ಅಷ್ಟು ಬಿಡುವಿಲ್ಲ, ನಿಮ್ಮ ತುಪ್ಪ ನೀವು ತಗೊಳ್ಳಿ.'

ಸಾಹುಕಾರ : "ಇಲ್ಲ, ವಾಪಸ್ಸು ತಗೊಳಲ್ಲ.'

ಸಾಹುಕಾರನ ಅಂಗಡಿಯ ಮುಂಭಾಗದಲ್ಲಿ ಓರ್ವ ಜಟಾಧಾರಿ ಸನ್ಯಾಸಿ ಕುಳಿತುಕೊಂಡು ಈ ತಮಾಷೆಯನ್ನು ನೋಡುತ್ತಿದ್ದ. ಆತ ಎದ್ದು ಸಿಯಾರಾಮನ ಬಳಿಗೆ ಬಂದು ಬಟ್ಟಲಿನಲ್ಲಿದ್ದ ತುಪ್ಪವನ್ನು ಮೂಸಿ ನೋಡಿ ಹೇಳಿದ –'ಮಗು ತುಪ್ಪ ಒಳ್ಳೆಯದಿರುವಂತೆ ಕಾಣುತ್ತಿದೆಯಲ್ಲ?'

ಸಾಹುಕಾರನಿಗೆ ಈ ಮಾತುಗಳ ಬೆಂಬಲ ಸಿಕ್ಕಿದ್ದೇ ತಡ, ಹೇಳಿದ – "ಬಾಬೂಜಿ, ನಾವು ಯಾವತ್ತೂ ಕೆಟ್ಟ ಮಾಲನ್ನು ಯಾರಿಗೂ ಕೊಡುವುದಿಲ್ಲ, ಅದರಲ್ಲೂ ದಿನವೂ ಮುಖ ನೋಡುವಂಥವರಿಗೆ ಕೆಟ್ಟ ಮಾಲನ್ನು ಕೊಡಲಿಕ್ಕಾಗುತ್ತದೆಯೇನು ?'

ಸನ್ಯಾಸಿ : "ತುಪ್ಪ ತಗೊಂಡು ಮನೆಗೆ ಹೋಗು ಮಗು, ತುಪ್ಪ ತುಂಬ ಚೆನ್ನಾಗಿದೆ.'

ಸಿಯಾರಾಮ ಅಳತೊಡಗಿದ. ತುಪ್ಪ ಚೆನ್ನಾಗಿಲ್ಲ ಅಂಥ ಪ್ರಮಾಣೀಕರಿಸಿ ತೋರಿಸಲು ಅವನ ಬಳಿ ಈಗ ಯಾವ ಆಧಾರ ತಾನೆ ಇತ್ತು ? ಹೇಳಿದ –"ಅಮ್ಮ ಹೇಳ್ತಾಳಲ್ಲ, ತುಪ್ಪ ಚೆನ್ನಾಗಿಲ್ಲಾಂತ, ಅವರು ವಾಪಸ್ಸು ಕೊಟ್ಟು ಬಾ ಅಂದರು. ನಾನು ತುಪ್ಪ ಚೆನ್ನಾಗಿದೆ ಅಂದರೂ ಅವರು ಕೇಳುವುದಿಲ್ಲ?'

ಸಾಹುಕಾರ : "ಇವನ ಅಮ್ಮ ಹೇಳಬಹುದು, ಎಂಥ ಮಾಲು ಕೊಟ್ಟರೂ ಅವರಿಗೆ ಹಿಡಿಸುವುದೇ ಇಲ್ಲ, ಈ ಬಡಪಾಯಿ ಹುಡುಗನನ್ನು ಆಕೆ ಹತ್ತು ಸಾರಿ ಸುತ್ತಾಡಿಸುತ್ತಾರೆ. ಮಲತಾಯಿ ಅಲ್ಲವೆ, ಅದಕ್ಕೆ ! ಸ್ವಂತ ತಾಯಿಯಾಗಿದ್ದರೆ ಆಕೆ ಹೀಗೆ ಮಾಡುತ್ತಿದ್ದಳೇನು?'

ಸನ್ಯಾಸಿ ಸಿಯಾರಾಮನನ್ನು ಕರುಣಾಪೂರ್ಣ ದೃಷ್ಟಿಯಿಂದ ನೋಡಿದ –"ಅವನಿಗೆ ರಕ್ಷಣೆ ನೀಡಲು ತನ್ನ ಹೃದಯ ಕಾತರಿಸುತ್ತಿದೆಯೇನೋ ಎಂಬಂತೆ. ಆಮೇಲೆ ತುಂಬ ಕೋಮಲ ಧ್ವನಿಯಲ್ಲಿ ಪ್ರಶ್ನಿಸಿದ–"ನಿನ್ನ ತಾಯಿ ಸ್ವರ್ಗವಾಸಿಗಳಾಗಿ ಎಷ್ಟು ದಿನಗಳಾದವು ಮಗು?'

ಸಿಯಾರಾಮ : "ಆರನೆಯ ವರುಷ ನಡೆಯುತ್ತಿದೆ.'

ಸನ್ಯಾಸಿ : "ಹಾಗಾದರೆ ಆಗ ನೀನು ಇನ್ನೂ ಚಿಕ್ಕವನು ಅಂತ ಕಾಣುತ್ತೆ ದೇವರೇ ! ನಿನ್ನ ಲೀಲೆ ಎಷ್ಟು ವಿಚಿತ್ರವಾಗಿದೆ ! ಹಾಲು ಕುಡಿಯುವ ವಯಸ್ಸಿನ ಹಸುಗೂಸಿಗೆ ಮಾತೃ ಪ್ರೇಮದಿಂದ ವಂಚಿಸಿ ಬಿಟ್ಟೆಯಲ್ಲ, ಎಂಥ ಅನರ್ಥ ಮಾಡಿದೆ ! ಆರು ವರ್ಷದ ಬಾಲಕ ರಾಕ್ಷಸಿಯಂಥ ಮಲತಾಯಿಯ ಮಡಿಲಿಗೆ ಬಿದ್ದಿದ್ದಾನಲ್ಲ ! ದಯಾನಿಧಿ ನೀ ಧನ್ಯನಾದೆ ! ಸನ್ಯಾಸಿ ಹೇಳಿದ–ಸಾಹುಕಾರ್ರೆ ಏನೋ ಹೋಗಲಿ, ಈ ಹುಡುಗನ ಮೇಲೆ ಕನಿಕರಿಸಿ ತುಪ್ಪವನ್ನು ವಾಪಸ್ಸು ತೆಗೆದುಕೊಳ್ಳಿ. ನೀವು ತೆಗೆದುಕೊಳ್ಳದೆ ಹೋದರೆ ಇವನ ಅಮ್ಮ ಈತನನ್ನ ಮನೆಗೆ ಸೇರಿಸೊಲ್ಲ ಅಂತ ಕಾಣುತ್ತೆ ದೇವರ ದಯೆ ಇದ್ದರೆ ನಿಮ್ಮ ಈ ತುಪ್ಪ ಬೇಗ ಖರ್ಚಾಗಿಯೇ ಆಗುತೆ. ನನ್ನ ಆಶೀರ್ವಾದ ನಿಮಗಿದೆ.'

ಸಾಹುಕಾರ ಹಣವನ್ನು ವಾಪಸ್ಸು ಕೊಡಲಿಲ್ಲ. ಈ ಹುಡುಗ ಇನ್ನೆಷ್ಟು ಸಾರಿ ತುಪ್ಪಕ್ಕಾಗಿ ಅಂಗಡಿಗಳನ್ನು ಸುತ್ತಬೇಕಾಗುತ್ತದೆಯೋ ಎಂದು ಯೋಚಿಸಿ ತನ್ನ ಅಂಗಡಿಯಲ್ಲಿದ್ದ ಅತ್ಯುತ್ತಮವಾದ ತುಪ್ಪವನ್ನು ಸಿಯಾರಾಮನಿಗೆ ಕೊಟ್ಟ. ಈ ಸನ್ಯಾಸಿ ಎಷ್ಟು ಒಳ್ಳೆಯವರು ಎಂದು ಸಿಯಾರಾಮ ಮನಸ್ಸಿನಲ್ಲಿಯೇ ಯೋಚಿಸುತ್ತಿದ್ದ. ಅವರು ಶಿಫಾರಸ್ಸು ಮಾಡದೇ ಇದ್ದಿದ್ದರೆ ಸಾಹುಕಾರ ಒಳ್ಳೆಯ ತುಪ್ಪವನ್ನು ಕೊಡುತ್ತಿದ್ದನೇನು ?

ಸಿಯಾರಾಮ ತುಪ್ಪವನ್ನು ತೆಗೆದುಕೊಂಡು ಹೊರಟಾಗ ಸನ್ಯಾಸಿಯೂ ಅವನ ಜತೆಗೆ ಹೊರಟ. ರಸ್ತೆಯಲ್ಲಿ ಆತ ಪ್ರೀತಿಯಿಂದ ಮಾಡನಾಡತೊಡಗಿದ –"ಮಗು, ನನ್ನ

ತಾಯಿಯೂ ನಾನು ಮೂರು ವರ್ಷದ ಮಗುವಾಗಿದ್ದಾಗ ಈ ಲೋಕ ಬಿಟ್ಟು ಪರಲೋಕಕ್ಕೆ ಹೋದರು. ಅವತ್ತಿನಿಂದ ತಾಯಿಯಿಲ್ಲದ ಮಕ್ಕಳನ್ನು ನೋಡಿದಾಗ ಹೃದಯ ಕಿತ್ತು ಬರುತ್ತದೆ.'

ಸಿಯಾರಾಮ ಹೇಳಿದ–"ನಿಮ್ಮ ತಂದೆಯವರೂ ಎರಡನೆಯ ಮದುವೆ ಮಾಡಿಕೊಂಡಿದ್ದರೇನು?'

ಸನ್ಯಾಸಿ : 'ಹೌದು ಮಗು, ಅಲ್ಲದಿದ್ದರೆ ನಾನು ಸನ್ಯಾಸಿ ಯಾಕಾಗುತ್ತಿದ್ದೆ ? ಮೊದಲು ನನ್ನ ತಂದೆ ಮದುವೆ ಮಾಡಿಕೊಂಡಿರಲಿಲ್ಲ. ಆಗ ಅವರು ನನ್ನನ್ನು ತುಂಬ ಪ್ರೀತಿಸುತ್ತಿದ್ದರು. ಆಮೇಲೆ ಯಾಕೋ ಏನೋ ಅವರು ಮನಸ್ಸನ್ನು ಬದಲಾಯಿಸಿದರು. ಸರಿ, ಮದುವೆ ಮಾಡಿಕೊಂಡರು. ನಾನು ಸನ್ಯಾಸಿಯಲ್ಲವೆ? ಕೆಟ್ಟ ಮಾತುಗಳನ್ನಾಡಬಾರದು. ನನ್ನ ಮಲತಾಯಿ ಎಷ್ಟು ರೂಪವತಿಯಾಗಿದ್ದಳೋ ವ್ಯವಹಾರದಲ್ಲಿ ಅಷ್ಟೇ ಕಠೋರವಾಗಿದ್ದಳು. ನನಗೆ ಇಡೀ ದಿನವೆಲ್ಲ ತಿನ್ನಲಿಕ್ಕೆ ಏನನ್ನೂ ಕೊಡುತ್ತಿರಲಿಲ್ಲ. ಅತ್ತರೆ ಹೊಡೆಯುತ್ತಿದ್ದಳು. ನನ್ನ ಕಂಡರೆ ತಂದೆಯವರೂ ಅಷ್ಟಕ್ಕಷ್ಟೇ ಆದರು. ನನ್ನ ಮುಖ ಕಂಡರೇ ಉರಿದು ಬೀಳುತ್ತಿದ್ದರು. ನಾನು ಅತ್ತರೆ ಅವರು ಬಂದು ನನಗೆ ಹೊಡೆಯುತ್ತಿದ್ದರು. ಕೊನೆಗೆ ಒಂದು ದಿನ ನಾನು ಮನೆ ಬಿಟ್ಟು ಬಂದೆ.'

ಸಿಯಾರಾಮನ ಮನಸ್ಸಿನಲ್ಲಿಯೂ ಮನೆಬಿಟ್ಟು ಓಡಿ ಹೋಗುವ ವಿಚಾರ ಎಷ್ಟೋ ಸಾರಿ ಬಂದಿತ್ತು. ಈಗಲೂ ಅಷ್ಟೆ ಅವನ ಮನಸ್ಸಿನಲ್ಲಿ ಈ ವಿಚಾರವೇ ಇತ್ತು. ಆತ ತುಂಬ ಉತ್ಸುಕತೆಯಿಂದ ಹೇಳಿದ –'ಮನೆ ಬಿಟ್ಟು ನೀವು ಎಲ್ಲಿಗೆ ಹೋದಿರಿ?'

ಸನ್ಯಾಸಿ ನಕ್ಕು ನುಡಿದರು–"ಅವತ್ತೆ ನನ್ನೆಲ್ಲ ಕಷ್ಟಗಳು ದೂರವಾದುವು. ಯಾವತ್ತು ಮನೆಯ ಮೋಹಪಾಶದಿಂದ ಹೊರ ಬಂದೆನೋ ಅವತ್ತೇ ನನ್ನಲ್ಲಿದ್ದ ಭಯ ದೂರವಾಯಿತು. ಅವತ್ತೇ ನನ್ನ ಉದ್ಧಾರವಾಯಿತು. ಇಡೀ ದಿನ ನಾನು ಸೇತುವೆಯ ಕೆಳಗೆ ಕುಳಿತಿದ್ದೆ. ಸಂಜೆಯ ಹೊತ್ತಿಗೆ ನನಗೆ ಒಬ್ಬ ಮಹಾತ್ಮರು ಸಿಕ್ಕಿದರು, ಅವರ ಹೆಸರು ಸ್ವಾಮಿ ಪರಮಾನಂದರು ಅಂತ. ಅವರು ಬಾಲ ಬ್ರಹ್ಮಚಾರಿಗಳು. ನನ್ನ ಬಗ್ಗೆ ಕನಿಕರ ತೋರಿ ಅವರು ನನ್ನನ್ನು ತಮ್ಮ ಬಳಿ ಇಟ್ಟುಕೊಂಡರು. ಅವರು ದೊಡ್ಡ ಯೋಗಿಗಳು. ಹೀಗಾಗಿ ಅವರು ನನಗೂ ಯೋಗವಿದ್ಯೆಯನ್ನು ಕಲಿಸಿದರು. ಈಗ ನನಗೆ ಎಂಥ ಅಭ್ಯಾಸವಾಗಿದೆ ಎಂದರೆ ನನಗೆ ಇಚ್ಛೆ ಬಂದಾಗ ನಾನು ನನ್ನ ತಾಯಿಯ ದರ್ಶನ ಮಾಡುತ್ತೇನೆ, ಅವರೊಂದಿಗೆ ಮಾತನಾಡುತ್ತೇನೆ.'

ಸಿಯಾರಾಮ ನೆಟ್ಟಗಣ್ಣುಗಳಿಂದ ಅವರನ್ನೇ ನೋಡುತ್ತ ಕೇಳಿದ –"ನಿಮ್ಮ ತಾಯಿಯವರು ತೀರಿಕೊಂಡಿದ್ದರಲ್ಲ?'

ಸನ್ಯಾಸಿ : "ಆದರೇನಾಯಿತು ಮಗು, ಯೋಗವಿದ್ಯೆಯಲ್ಲಿ ಎಂಥ ಶಕ್ತಿಯಿದೆ ಅಂದರೆ ಮೃತಾತ್ಮರನ್ನೂ ಕರೆಸಿಕೊಳ್ಳಬಹುದು.'

ಸಿಯಾರಾಮ : 'ನಾನು ಯೋಗವಿದ್ಯೆ ಕಲಿತು ನನ್ನ ತಾಯಿಯನ್ನೂ ನೋಡಬಹುದೆ?'

ಸನ್ಯಾಸಿ : "ಖಂಡಿತ ! ಅಭ್ಯಾಸದಿಂದ ಏನೆಲ್ಲವನ್ನೂ ಸಾಧಿಸಬಹುದು. ಆದರೆ ಯೋಗ್ಯನಾದ ಗುರು ಸಿಗಬೇಕು, ಅಷ್ಟೆ. ಯೋಗದಿಂದ ದೊಡ್ಡ ದೊಡ್ಡ ಸಿದ್ಧಿಗಳು ಕೈಗೂಡುತ್ತವೆ. ಬೇಕಾದಷ್ಟು ಹಣವನ್ನು ಕ್ಷಣಮಾತ್ರದಲ್ಲಿ ಬೇಡಿಕೊಳ್ಳಬಹುದು. ಎಂಥ ಖಾಯಿಲೆಯಿದ್ದರೂ ಅದಕ್ಕೆ ಔಷಧಿಯನ್ನೂ ಸೂಚಿಸಬಹುದು.'

ಸಿಯಾರಾಮ : "ತಾವು ಇರುವುದು ಯಾವ ಊರಲ್ಲಿ?'

ಸನ್ಯಾಸಿ : "ಮಗು, ನಮಗೆ ಇಂಥ ಊರು ಅನ್ನುವುದಿಲ್ಲಪ್ಪ. ನಾವು ಊರುಗಳನ್ನು ಸುತ್ತುತ್ತಿರುತ್ತೇವೆ. ನೀನಿನ್ನು ಮನೆಗೆ ಹೋಗು, ನಾನು ಸ್ನಾನಕ್ಕೆ ಹೋಗ್ತೀನಿ.'

ಸಿಯಾರಾಮ : "ನಾನು ನಿಮ್ಮ ಜತೆಯಲ್ಲೇ ಬರ್ತೀನಿ, ನಡೆಯಿರಿ, ನನಗೆ ನಿಮ್ಮ ಜತೆಯಲ್ಲೇ ಇರಬೇಕು ಅನ್ನಿಸ್ತಿದೆ.'

ಸನ್ಯಾಸಿ : "ಬೇಡ ಮಗು, ನಿನಗೆ ಶಾಲೆಗೆ ಹೋಗಲು ಹೊತ್ತಾಗುತ್ತೆ.'

ಸಿಯಾರಾಮ : "ಮತ್ತೆ ತಮ್ಮ ದರ್ಶನವಾಗುವುದು ಯಾವಾಗ ?'

ಸನ್ಯಾಸಿ : "ಯಾವಾಗಲಾದರೂ ಬರ್ತೇನೆ ಮಗು, ನಿನ್ನ ಮನೆ ಎಲ್ಲಿದೆ?'

ಸಿಯಾರಾಮ ತುಂಬಾ ಖುಷಿಯಿಂದ ಹೇಳಿದ – "ಬನ್ನಿ ಮನೆಗೆ ಹೋಗೋಣ, ಮನೆ ಇಲ್ಲೇ ಹತ್ತಿರದಲ್ಲಿದೆ. ತಾವು ಕೃಪೆ ಮಾಡಿದಂತಾಗುತ್ತೆ.'

ಸಿಯಾರಾಮ ಖುಷಿಯಿಂದ ಹೆಜ್ಜೆ ಹಾಕುತ್ತಿದ್ದ. ಬಂಗಾರದ ಗಂಟೇ ತನಗೆ ಸಿಕ್ಕಿದಿಯೇನೋ ಎಂಬಂತೆ ಖುಷಿಯಾಗಿದ್ದ. ಮನೆಯ ಮುಂದೆ ಬಂದು "ಒಳಗೆ ಬನ್ನಿ ಸ್ವಾಮೀಜಿ, ಕೊಂಚ ಹೊತ್ತು ಕುಳಿತುಕೊಂಡು ಹೋಗಿ.'

ಸನ್ಯಾಸಿ : "ಇಲ್ಲ ಮಗು, ಈಗ ಕುಳಿತುಕೊಳ್ಳುವುದಿಲ್ಲ. ನಾಳೆ ನಾಡಿದ್ದರಲ್ಲಿ ಯಾವಾಗಲಾದರೂ ಒಮ್ಮೆ ಬರುತ್ತೇನೆ. ಇದೇ ತಾನೇ ನಿನ್ನ ಮನೆ?'

ಸಿಯಾರಾಮ : "ನಾಳೆ ಎಷ್ಟು ಹೊತ್ತಿಗೆ ಬರ್ತೀರಿ?'

ಸನ್ಯಾಸಿ : "ಇಂಥ ಸಮಯಕ್ಕೇ ಬರುತ್ತೇನೆಂದು ಹೇಳಲು ಬರುವುದಿಲ್ಲ. ಯಾವಾಗಲೋ ಒಮ್ಮೆ ಬರುತ್ತೇನೆ.'

ಸನ್ಯಾಸಿ ಮುಂದೆ ನಡೆದರು. ಅಲ್ಲೇ ಕೊಂಚ ದೂರದಲ್ಲಿ ಇನ್ನೊಬ್ಬ ಸನ್ಯಾಸಿ ಅವರಿಗೆ ಭೇಟಿಯಾದರು. ಅವರ ಹೆಸರು ಹರಿಹರಾನಂದ ಅಂತ.

ಪರಮಾನಂದ ಕೇಳಿದರು –"ಎಲ್ಲೆಲ್ಲಿಗೆ ಹೋಗಿದ್ದಿರಿ ? ಏನಾದರೂ ಬೇಟೆ ಸಿಕ್ಕಿತೇನು?'

ಹರಿಹರಾನಂದ : "ಈ ಕಡೆ ನಾಲ್ಕೂ ಕಡೆ ಹೋಗಿದ್ದೆ. ಯಾವ ಬೇಟೆಯೂ ಸಿಗಲಿಲ್ಲ. ಒಬ್ಬಿಬ್ಬರು ಸಿಕ್ಕಿದ್ದರು. ಆದರೆ ಅವರು ನನಗೇ ತಮಾಷೆ ಮಾಡಿದರು.'

ಪರಮಾನಂದ : "ನನಗೆ ಒಬ್ಬ ಸಿಕ್ಕಿದ್ದಾನೆ. ಅವನು ಬಲೆಗೆ ಬೀಳ್ತಾನೇನೋ ನೋಡಬೇಕು.'

ಹರಿಹರಾನಂದ : "ನೀನು ಹೇಳ್ತಾನೆ ಇರ್ತಿಯಾ ! ಬಂದವನು ಒಂದೆರಡು ದಿನಗಳಲ್ಲಿಯೇ ಓಡಿ ಹೋಗ್ತಾನೆ.'

ಪರಮಾನಂದ : "ಈಗಿನವನು ಓಡಿ ಹೋಗಲ್ಲ ನೋಡ್ತಿರು. ಇವನ ತಾಯಿ ಸತ್ತು ಹೋಗಿದ್ದಾರೆ. ಅಪ್ಪ ಎರಡನೆ ಮದುವೆ ಮಾಡಿಕೊಂಡಿದ್ದಾನೆ. ಮಲತಾಯಿ ಕಷ್ಟಕೊಡುತ್ತಿದ್ದಾಳೆ. ಮನೆ ಅವನಿಗೆ ಸಾಕಾಗಿದೆ.'

ಹರಿಹರಾನಂದ : "ಇದೇ ಅವನ ಮನೆ ಸ್ಥಿತಿಯಾಗಿದ್ದರೆ ಅವನು ಖಂಡಿತ ಬಲೆಗೆ ಬೀಳ್ತಾನೆ. ಸರಿಯಾಗಿ ಗಾಳ ಹಾಕಿದ್ದೀಯ ತಾನೆ?'

ಪರಮಾನಂದ : "ಚೆನ್ನಾಗಿಯೇ ಹಾಕಿದ್ದೀನಿ. ಈ ಉಪಾಯ ಎಲ್ಲಕ್ಕಿಂತಲೂ ಚೆನ್ನಿದೆ. ಮೊದಲು ಈ ಮೊಹಲ್ಲಾದಲ್ಲಿ ಯಾವ–ಯಾವ ಮನೆಗಳಲ್ಲಿ ಮಲತಾಯಿಯಂದಿರಿದ್ದಾರೆ ಎಂಬುದನ್ನು ಪತ್ತೆ ಮಾಡಿ ಆ ಮನೆಗಳ ಮೇಲೆ ಬಲೆ ಬೀಸಬೇಕು.

## ಇಪ್ಪತ್ತೆರಡು

ನಿರ್ಮಲಾ ಕೋಪದಿಂದ ಕೇಳಿದಳು –"ಇಷ್ಟು ಹೊತ್ತು ಎಲ್ಲಿ ಹಾಳಾಗಿ ಹೋಗಿದ್ದೆ?'

ಸಿಯಾರಾಮ ಒರಟಾಗಿಯೇ ಉತ್ತರಿಸಿದ –"ರಸ್ತೆಯಲ್ಲಿ ಮಲಗಿಕೊಂಡಿದ್ದೆ.'

ನಿರ್ಮಲಾ : "ನೀನು ಮಲಗಿದ್ದೆ ಅಂತ ನಾನು ಹೇಳುತ್ತಿಲ್ಲ. ಆದರೆ ಈಗ ಎಷ್ಟು ಗಂಟೆ ಅಂತ ಗೊತ್ತೇನು ? ಹತ್ತು ಗಂಟೆ ಯಾವಾಗಲೋ ಆಗಿಹೋಯ್ತು. ಪೇಟೆ ಅಷ್ಟು ದೂರವಿಲ್ಲವಲ್ಲ?'

ಸಿಯಾರಾಮ : "ಅಷ್ಟೇನೂ ದೂರವಿಲ್ಲ ಅಲ್ಲವಾ, ಮನೆಯ ಬಾಗಿಲಲ್ಲೇ ಇದೆಯಾ?'

ನಿರ್ಮಲಾ : "ಕೇಳಿದಕ್ಕೆ ನೇರವಾಗಿ ಉತ್ತರ ಕೊಡು. ಏನೋ ನನ್ನ ಕೆಲಸ ಮಾಡಲಿಕ್ಕೆ ಹೋದವನಂತೆ ಮಾತನಾಡುತ್ತಿದ್ದೀಯಲ್ಲ?'

ಸಿಯಾರಾಮ : "ನೀವು ವೃಥಾ ಹರಟುತ್ತಿದ್ದೀರಲ್ಲ ? ಒಂದು ಸಾರಿ ಕೊಂಡ ಮಾಲನ್ನು ವಾಪಸ್ಸು ಮಾಡುವುದು ಸುಲಭವಾದ ಕೆಲಸವೇನು ? ಸಾಹುಕಾರನ ಜತೆ ಗಂಟೆಗಟ್ಟಲೆ ಜಗಳ ಕಾಯಬೇಕಾಯ್ತು. ಏನೋ ದೇವರ ದಯೆ, ಈ ಸನ್ಯಾಸಿ ನನ್ನ ಪರ ವಕಾಲತ್ತು ಮಾಡಲಾಗಿ ಸಾಹುಕಾರ ವಾಪಸ್ಸು ತೆಗೆದುಕೊಂಡ. ಇಲ್ಲದೇ ಹೋಗಿದ್ದರೆ ಅವನು ಖಂಡಿತ ತೆಗೆದುಕೊಳ್ತಿರಲಿಲ್ಲ. ರಸ್ತೆಯಲ್ಲಿ ಎಲ್ಲೂ ಒಂದು ನಿಮಿಷವೂ ನಿಲ್ಲಲಿಲ್ಲ. ಸೀದಾ ಬಂದಿದ್ದೇನೆ.'

ನಿರ್ಮಲಾ : "ತುಪ್ಪ ತರೋಕೆ ಅಂತ ಬೆಳಿಗ್ಗೆ ಹೋಗಿ ಹನ್ನೆರಡು ಗಂಟೆಗೆ ಬಂದಿದ್ದೀಯ ? ಈಗ ಸೌದೆ ತರೋಕೆ ಹೋಗಿ ಸಂಜೆಗೆ ಬರ್ತೀಯ ಅಲ್ಲವಾ ? ನಿನ್ನ ತಂದೆ ಏನನ್ನೂ ತಿನ್ನದೆಯೇ ಹೋದರು. ನೀನು ಇಷ್ಟು ಹೊತ್ತು ಮಾಡ್ತೀನಿ

ಅಂತ ಮೊದಲೆ ಯಾಕೆ ಹೇಳಬಾರದಿತ್ತು? ಈಗ ಹೋಗಿ ಸೌದೆ ತರ್ತೀಯಾ ತಾನೆ?'

ಈಗ ಸಿಯಾರಾಮನಿಂದ ಸಹಿಸಿಕೊಳ್ಳಲಿಕ್ಕಾಗಲಿಲ್ಲ. ಸಿಟ್ಟಿನಿಂದಲೇ ಹೇಳಿದ –'ಸೌದೆ ಬೇರೆ ಯಾರಿಂದಲಾದರೂ ತರಿಸಿಕೊಳ್ಳಿ. ನನಗೆ ಸ್ಕೂಲಿಗೆ ಹೊತ್ತಾಯ್ತು.'

ನಿರ್ಮಲಾ : "ಊಟ ಮಾಡುವುದಿಲ್ವೇನು?'

ಸಿಯಾರಾಮ : "ಇಲ್ಲ.'

ನಿರ್ಮಲಾ : "ನಾನು ಅಡಿಗೆ ಮಾಡ್ತೀನಿ. ಆದರೆ ಸೌದೆ ತರೋಕೆ ನಾನು ಹೋಗುವುದಿಲ್ಲ.'

ಸಿಯಾರಾಮ : "ಭೂಂಗಿನ ಕಳಿಸೋಕೆ ಆಗುವುದಿಲ್ಲವೇನು ?'

ನಿರ್ಮಲಾ : "ಭೂಂಗಿ ಎಂಥ ಸಾಮಾನುಗಳನ್ನು ತರ್ತಾಳೆ ಅಂತ ನಿನಗೆ ಗೊತ್ತಿಲ್ಲವೇನು?'

ಸಿಯಾರಾಮ : "ಈಗ ಹೋಗೋದಕ್ಕೆ ನನ್ನಿಂದಂತೂ ಸಾಧ್ಯವಿಲ್ಲ.'

ನಿರ್ಮಲಾ : 'ನನ್ನ ಮೇಲೆ ತಪ್ಪು ಹಾಕಬೇಡ.'

ಸಿಯಾರಾಮ ಎಷ್ಟೋ ದಿನಗಳಿಂದ ಸ್ಕೂಲಿಗೆ ಹೋಗಿರಲಿಲ್ಲ. ಮನೆಯಿಂದ ಪೇಟೆಗೆ, ಪೇಟೆಯಿಂದ ಮನೆಗೆ ಸುತ್ತುವುದರಲ್ಲಿಯೇ ಅವನ ಸಮಯವೆಲ್ಲ ಹಾಳಾಗಿ ಪುಸ್ತಕಗಳನ್ನು ಕಣ್ಣಿಂದ ನೋಡಲೂ ಬಿಡುವಾಗಿರಲಿಲ್ಲ. ಸ್ಕೂಲಿಗೆ ಹೋದರೆ ಬೈಸಿಕೊಳ್ಳಬೇಕು, ಬೆಂಚಿನ ಮೇಲೆ ನಿಲ್ಲಬೇಕು, ಹುಡುಗರಿಂದ ಕಿಚಾಯಿಸಿಕೊಳ್ಳಬೇಕು, ಇಷ್ಟಲ್ಲದೆ ಅಲ್ಲಿ ಇನ್ನೇನು ಸಿಗುತ್ತೆ. ಆತ ಮನೆಯಿಂದ ಪುಸ್ತಕಗಳನ್ನು ತೆಗೆದುಕೊಂಡು ಸ್ಕೂಲಿಗೆ ಅಂತ ಹೋಗುತ್ತಿದ್ದನಾದರೂ, ಸ್ಕೂಲಿಗೆ ಹೋಗದೆ ಊರ ಹೊರಗೆ ಯಾವುದಾದರೂ ಒಂದು ಮರದ ಕೆಳಗೆ ಕುಳಿತುಬಿಡುತ್ತಿದ್ದ. ಇಲ್ಲ, ಪೊಲೀಸರ ಕವಾಯತು ನೋಡುತ್ತಾ ನಿಂತು ಬಿಡುತ್ತಿದ್ದ. ಮೂರು ಗಂಟೆಯ ಹೊತ್ತಿಗೆ ಮನೆಗೆ ವಾಪಸ್ಸು ಬರುತ್ತಿದ್ದ. ಇವತ್ತು ಅವನು ಮನೆಯಿಂದ ಹೊರಟಾಗಲೇ ಹೊಟ್ಟೆ ತಾಳ ಹಾಕುತ್ತಿತ್ತು. ಹತ್ತು ಗಂಟೆಯ ಹೊತ್ತಿಗೆ ಮನೆಯಲ್ಲಿ ತಿಂಡಿ ಮಾಡಲು ಆಗುತ್ತಿರಲಿಲ್ಲವೇನು ? ಅಪ್ಪ ಏನನ್ನೂ ತಿನ್ನದಂತೆಯೇ ಹೋದರು ಅಂತ ಇಟ್ಟುಕೊಂಡರೂ ನನಗಾಗಿ ಏನನ್ನಾದರೂ ಮಾಡಲು ಮನೆಯಲ್ಲಿ ಏನೂ ಇರಲಿಲ್ಲವೇನು ? ಅಮ್ಮ ಇದ್ದಿದ್ದರೆ, ಹೀಗೆ ನಾನು ಬರಿ ಹೊಟ್ಟೆಯಲ್ಲಿ ಹೋಗಲು ಬಿಡುತ್ತಿದ್ದಳೇನು ? ಈಗ ನನಗೆ ಯಾರೂ ಇಲ್ಲ.

ಸಿಯಾರಾಮನ ಮನಸ್ಸು ಈಗ ಸನ್ಯಾಸಿಯನ್ನು ನೋಡಲು ತವಕಿಸತೊಡಗಿತು. ಅವನು ಯೋಚಿಸಲಾರಂಭಿಸಿದ– ಈ ಹೊತ್ತಿನಲ್ಲಿ ಅವರು ಎಲ್ಲಿ ಸಿಗುತ್ತಾರೆ ? ಎಲ್ಲಿಗೆ ಹೋಗಿ ಅವರನ್ನು ನೋಡಲಿ ? ಅವನ ಮನಮೋಹಕ ಮಾತುಗಳು, ಉತ್ಸಾಹ ತುಂಬುವ ಸಮಾಧಾನ – ಅವನ ಮನಸ್ಸಿನ ತುಂಬ ಆವರಿಸಿದ್ದವು. ಉದ್ವೇಗದಲ್ಲಿ ಅವನು

ಅಂದುಕೊಂಡ : ನಾನು ಅವರ ಜತೆಯಲ್ಲಿಯೇ ಯಾಕೆ ಹೋಗಬಾರದು ? ಅಷ್ಟಕ್ಕೂ ನನಗೆ ಮನೆಯಲ್ಲಿ ಕೊಳ್ಳೆ ಹೋಗುತ್ತಿರುವುದಾದರೂ ಏನು ?

ಅವತ್ತು ಅವನು ಮನೆಯಿಂದ ಹೊರಟವನು ಸೀದಾ ಮನೆಗೆ ಹೋಗದೆ ಸಾಹುಕಾರನ ಅಂಗಡಿಗೇ ಹೋದ. ಬಹುಶಃ ಅಲ್ಲಿ ಸನ್ಯಾಸಿಯೊಡನೆ ಭೇಟಿಯಾದರೂ ಆಗಬಹುದು ಎಂದು ಯೋಚಿಸುತ್ತ ಆದರೆ ಅಲ್ಲಿ ಸನ್ಯಾಸಿಯಿರಲಿಲ್ಲ, ಬಹಳ ಹೊತ್ತು ಅಲ್ಲೇ ನಿಂತಿದ್ದು ಮನೆಗೆ ವಾಪಸ್ಸಾದ.

ಮನೆಗೆ ಬಂದು ಇನ್ನು ಆಗತಾನೆ ಕುಳಿತಿದ್ದ. ಅಷ್ಟರಲ್ಲಿ ನಿರ್ಮಲಾ ಬಂದದ್ದೇ ಗುಡುಗಿದಳು –"ಇವತ್ತು ಯಾಕೆ ಇಷ್ಟು ಹೊತ್ತು ಮಾಡಿದೆ ? ಬೆಳಗ್ಗೆ ತಿಂಡಿ ಮಾಡಲಿಲ್ಲ, ಈಗಲೂ ಉಪವಾಸವಿರಬೇಕೇನು ? ಪೇಟೆಗೆ ಹೋಗಿ ಒಂದಿಷ್ಟು ತರಕಾರಿ ತಗೊಂಡು ಬಾ ಹೋಗು.'

ಸಿಯಾರಾಮ ಸಿಟ್ಟಿನಿಂದಲೇ ನುಡಿದ – "ಬೆಳಗ್ಗೆಯಿಂದ ಒಂದು ತುತ್ತು ಅನ್ನ ಸಹ ತಿಂದಿಲ್ಲ. ತಿಂದಿದ್ದೀಯೋ, ಬಿಟ್ಟಿದ್ದೀಯೋ ಅಂತ ನೀವು ಕೇಳ್ತಿಲ್ಲ. ಒಂದು ಚೂರು ತಿನ್ನೋದಕ್ಕೆ ಏನಾದರು ಕೊಟ್ಟಿರಾ ? ಇಷ್ಟಾದರೂ ಪೇಟೆಗೆ ಹೋಗುವಂತೆ ಆರ್ಡರ್ ಮಾಡ್ತಿದ್ದೀರಾ? ನಾನು ಪೇಟೆಗೆ ಬಿಲ್‌ಕುಲ್ ಹೋಗಲ್ಲ. ನಾನು ಯಾರ ಗುಲಾಮನೂ ಅಲ್ಲ. ಇಷ್ಟೆಲ್ಲ ಮಾಡಿದರೂ ನೀವು ಕೊಡುವುದು ಒಂದು ಚೂರು ರೊಟ್ಟಿ ತಾನೆ ? ಇನ್ನೇನು ಕೊಡ್ತೀರಾ ? ಇಷ್ಟು ರೊಟ್ಟಿ ನಾನು ಮೈ ಮುರಿದು ದುಡಿದರೆ ಅಲ್ಲಿ ಸಿಕ್ಕೇ ಸಿಗುತ್ತೆ ನಾನು ಕೂಲಿ ಮಾಡಿಯೇ ತಿನ್ನಬೇಕು ಅಂತಿದ್ದರೆ ನಿಮ್ಮ ಹತ್ತಿರ ಕೂಲಿ ಮಾಡೊಲ್ಲ. ಹೋಗ್ ಹೋಗಿ, ನನಗೇ ಅಂತ ಏನನ್ನೂ ಮಾಡಬೇಡಿ ನೀವು.'

ನಿರ್ಮಲಾ ಅವಾಕ್ಕಾದಳು. ಇವತ್ತು ಏನಾಯಿತು ಈ ಹುಡುಗನಿಗೆ? ಇಷ್ಟು ದಿನಗಳು ಒಂದು ಮಾತು ಸಹ ಆಡದಂತೆ ಹೇಳಿದ ಕೆಲಸ ಮಾಡಿಕೊಂಡು ಬರುತ್ತಿದ್ದ. ಆದರೆ ಇವತ್ತು ಉಲ್ಟಾ ಮಾತನಾಡ್ತಿದ್ದಾನೆ. ಇಷ್ಟಾದರೂ ಸಿಯಾರಾಮ ಹೊಟ್ಟೆಗೆ ತಿನ್ನಲಿ ಅಂತ ನಾಲ್ಕಾರು ಆಣೆ ಕೊಡಬೇಕು ಅಂತ ನಿರ್ಮಲಾಳಿಗೆ ಅನ್ನಿಸಲೇ ಇಲ್ಲ. ಇತ್ತೀಚೆಗೆ ಅವಳು ಅಷ್ಟು ಜಿಪುಣಳಾಗಿದ್ದಳು. ಹೇಳಿದಳು –"ಮನೆ ಕೆಲಸ ಮಾಡಿದರೆ ಅದು ಕೂಲಿ ಅನ್ನಿಸಿಕೊಳ್ಳುವುದಿಲ್ಲ ಕಣೋ. ನಾನು ಅಡಿಗೆ ಮಾಡುವುದಿಲ್ಲ ಅಂದರೆ, ನಿಮ್ಮ ತಂದೆ ಕಛೇರಿಗೆ ಹೋಗುವುದಿಲ್ಲ, ಏನಾಗುತ್ತೆ ಗೊತ್ತೇನು ? ಪೇಟೆಗೆ ಹೋಗದಿದ್ದರೆ ಬೇಡ, ಬಿಡು. ನಾನು ಭೂಂಗಿಯಿಂದಲೇ ತರಿಸಿಕೊಳ್ತೇನೆ. ನಿನಗೆ ಪೇಟೆಗೆ ಹೋಗುವುದು ಅಂದ್ರೆ ಅಷ್ಟು ಕಷ್ಟವಾಗುತ್ತೆ ಅಂತ ಗೊತ್ತಿದ್ರೆ ನಿನಗೆ ಖಂಡಿತ ಕಳಿಸ್ತಿರಲಿಲ್ಲ. ತಪ್ಪಾಯಿತು, ಕೆನ್ನೆಗೆ ಹೊಡೆದುಕೊಳ್ತೀನಿ. ಇನ್ನೊಂದು ದಿನ ನಿನ್ನ ಕಳಿಸಿದರೆ ಕೇಳು.'

ಸಿಯಾರಾಮನಿಗೆ ಮನಸ್ಸಿನಲ್ಲಿ ಕೊಂಚ ನಾಚಿಕೆಯಾದಂಥ ಅನುಭವವಾದಂತಾಯಿತಾದರೂ ಅವನು ಪೇಟೆಗೆ ಹೋಗಲಿಲ್ಲ. ಅವನ ಮನಸ್ಸೆಲ್ಲ ಆ ಸನ್ಯಾಸಿಯಲ್ಲೇ ನೆಟ್ಟಿತ್ತು. ತನ್ನೆಲ್ಲ ದುಃಖಗಳ ಕೊನೆಯಾಗುವುದು ಹಾಗೂ ತನ್ನೆಲ್ಲ ಆಸೆಗಳು ಈಡೇರುವುದು

ಆ ಸನ್ಯಾಸಿಯ ಆಶೀರ್ವಾದದಿಂದಲೇ ಎಂದು ಅವನು ನಂಬಿದ್ದ. ಅವರ ಚರಣಾರವಿಂದಗಳಲ್ಲಿ ತನ್ನ ಬದುಕು ಸಾರ್ಥಕವಾಗುವುದು ಎಂದು ಅವನು ಪೂರ್ಣ ವಿಶ್ವಾಸದಿಂದಿದ್ದ. ಸಂಜೆಯಾಗುವಷ್ಟರಲ್ಲಿ ಅವನು ಸುಸ್ತಾಗಿ ಹೋದ. ಇಡೀ ಪೇಟೆಯನ್ನೆಲ್ಲ ಶೋಧಿಸಿದ. ಆದರೆ ಸನ್ಯಾಸಿ ಎಲ್ಲೂ ಪತ್ತೆಯಾಗಲಿಲ್ಲ. ಇಡೀ ದಿನವೆಲ್ಲ ಅನ್ನ–ನೀರುಗಳಿಲ್ಲದೆ ಆ ಬಡಪಾಯಿ ಹುಡುಗ ದುಃಖಿಸುತ್ತ ಸಿಕ್ಕ ಸಿಕ್ಕ ಅಂಗಡಿ, ಬೀದಿ ಮತ್ತು ದೇವಾಲಯಗಳಲ್ಲಿ ತನಗೆ ಸಿಗಬಹುದಾಗಿದ್ದ ಆಶ್ರಯಕ್ಕಾಗಿ ಅರಸುತ್ತಾ ಬಂದ. ಅವರಿಲ್ಲದೆ ತನ್ನಿಂದ ಬದುಕುವುದು ಸಾಧ್ಯವಿಲ್ಲ ಎಂದನ್ನಿಸಿತು ಅವನಿಗೆ. ಹಾಗೆಯೇ ಹೋಗುತ್ತಿರುವಾಗ ದಾರಿಯಲ್ಲಿ ಸಿಕ್ಕಿದ ಒಂದು ದೇವಸ್ಥಾನದ ಮುಂದೆ ಯಾವನೋ ಒಬ್ಬ ಸನ್ಯಾಸಿ ನಿಂತಿದ್ದು ಕಂಡಿತು. ಇವರನ್ನೇ ಅವರು ಎಂದು ಭಾವಿಸಿಕೊಂಡು ಹರ್ಷೋಲ್ಲಾಸದಿಂದ ಬೇಗಿ ಹೋದ. ಓಡಿಹೋಗಿ ಆ ಸನ್ಯಾಸಿಯ ಪಕ್ಕದಲ್ಲಿ ನಿಂತುಕೊಂಡ. ಆದರೆ ಆ ಸನ್ಯಾಸಿ ಬೇರೆಯವರಾಗಿದ್ದರು. ನಿರಾಶನಾಗಿ ಅಲ್ಲಿಂದ ಮುಂದೆ ಹೊರಟ.

ಕ್ರಮೇಣ ಬೀದಿಗಳಲ್ಲಿ ನಿಶ್ಶಬ್ದ ಆವರಿಸಿಕೊಂಡಿತು. ಮನೆಗಳ ಬಾಗಿಲುಗಳು ಮುಚ್ಚಿಕೊಂಡವು. ರಸ್ತೆ ಬದಿಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ಬಿದಿರಿನ ಚಾಪೆಯ ಮೇಲೆ, ಗೋಣಿಚೀಲ ಹಾಸಿಕೊಂಡು, ಅದನ್ನೇ ಹೊದ್ದುಕೊಂಡು ಭಾರತದ ಪ್ರಜೆಗಳು ಸುಖ ನಿದ್ರೆಯಲ್ಲಿ ಲೀನರಾದರು. ಆದರೆ ಸಿಯಾರಾಮ ಮನೆಗೆ ಹಿಂತಿರುಗಲಿಲ್ಲ. ಈಗ ಆ ಮನೆಗೆ ಹೋಗುವುದೆಂದರೆ ಅವನಿಗೆ ಇರಿಸು ಮುರಿಸಾಗತೊಡಗಿತ್ತು. ಆ ಮನೆಯಲ್ಲಿ ಅವನನ್ನು ಪ್ರೀತಿಸುವವರು ಯಾರೂ ಇರಲಿಲ್ಲ. ಪರಾವಲಂಬಿಯಂತೆ ಬಿದ್ದಿರಬೇಕಾಗುತ್ತಿತ್ತು. ತನಗೆ ಬೇರೆ ಯಾವ ಆಶ್ರಯವಿಲ್ಲದ್ದರಿಂದ ಈ ಅವಲಂಬನೆಯನ್ನು ಆಶ್ರಯಿಸಬೇಕಾಗಿತ್ತು. ತಾನು ಮನೆಗೆ ಬರಲಿಲ್ಲವೆಂಬ ಚಿಂತೆ ಅಲ್ಲಿ ಯಾರನ್ನು ಕಾಡುತ್ತದೆ ? ಅಪ್ಪಾಜಿ ಊಟ ಮಾಡಿ ಮಲಗಿರಬಹುದು. ಅಮ್ಮ ಸಹ ವಿಶ್ರಾಂತಿ ಪಡೆಯಲು ಹೋಗುತ್ತಿರಬಹುದು. ಮನೆಯಲ್ಲಿ ಯಾರೊಬ್ಬರೂ ತನ್ನ ರೂಮಿನ ಕಡೆ ಕಣ್ಣು ಹಾಯಿಸಿರಲಾರರು. ಅಂದ ಹಾಗೆ ಅತ್ತೆ ಮಾತ್ರ ಗಾಬರಿಗೊಂಡಿರಬಹುದು. ಆಕೆ ಮಾತ್ರ ಈಗಲೂ ನನ್ನ ದಾರಿ ಕಾಯುತ್ತಿರಬಹುದು. ನಾನು ಮನೆ ಸೇರುವವರೆಗೆ ಆಕೆ ಊಟ ಮಾಡುವುದಿಲ್ಲ.

ರುಕ್ಮಿಣಿಯ ನೆನಪಾಗುತ್ತಿದ್ದಂತೆಯೇ ಸಿಯಾರಾಮ ಮನೆಯ ಕಡೆ ಹೆಜ್ಜೆ ಹಾಕಿದ. ಆಕೆಯಿಂದ ಇನ್ನೇನು ಮಾಡಲು ಸಾಧ್ಯವಾಗದಿದ್ದರೂ ಕೊನೆಯ ಪಕ್ಷ ತೊಡೆಯ ಮೇಲೆ ಮಲಗಿಸಿಕೊಂಡು ಅಪ್ಪಿ ಮುದ್ದಾಡುತ್ತ ಅಳುತ್ತಿದ್ದಳು. ಅವನು ಹೊರಗಡೆಯಿಂದ ಮನೆಗೆ ಹೋಗುತ್ತಿದ್ದಂತೆಯೇ ಕೈಕಾಲು ಮುಖ ತೊಳೆಯಲು ನೀರು ತಂದುಕೊಡುತ್ತಿದ್ದಳು. ಪ್ರಪಂಚದಲ್ಲಿರುವ ಎಲ್ಲ ಮಕ್ಕಳು ಹಾಲನ್ನೇ ಮುಕ್ಕಳಿಸುವುದಿಲ್ಲ, ಎಲ್ಲರೂ ಬಂಗಾರವನ್ನೇ ತಿನ್ನುವುದಿಲ್ಲ. ಎಷ್ಟೋ ಜನಗಳಿಗೆ ಹೊಟ್ಟೆ ತುಂಬ ಊಟ ಸಹ ಸಿಗುವುದಿಲ್ಲ. ಆದರೆ, ಮಾತೃವಾತ್ಸಲ್ಯದಿಂದ ವಂಚಿತರಾದವರು ಮಾತ್ರ ಮನೆ ಬಿಟ್ಟು ಹೊರಗೆ ಹೋಗುತ್ತಾರೆ.

ಸಿಯಾರಾಮ ಮನೆಯ ಕಡೆ ಹೊರಟಿದ್ದ. ಅಷ್ಟರಲ್ಲಿ ಇದ್ದಕ್ಕಿದ್ದಂತೆಯೇ ಪರಮಾನಂದ ಸನ್ಯಾಸಿ ಒಂದು ಗಲ್ಲಿಯಿಂದ ಹೊರಗೆ ಬಂದದ್ದು ಕಾಣಿಸಿತು.

ಸಿಯಾರಾಮ ಬಂದು ಅವರ ಕೈಯನ್ನು ಹಿಡಿದುಕೊಂಡ. ಪರಮಾನಂದರು ಬೆಚ್ಚಿ 'ಮಗು, ನೀನಿಲ್ಲಿ ಹೇಗೆ ಬಂದೆ?' ಅಂದರು.

ಸಿಯಾರಾಮ ಏನೋ ನೆಪ ಹೇಳಿದ – "ಇಲ್ಲೇ ನನ್ನ ಸ್ನೇಹಿತನನ್ನು ಭೇಟಿಯಾಗಲು ಬಂದಿದ್ದೆ. ನೀವು ಇಲ್ಲಿಂದ ಎಷ್ಟು ದೂರದಲ್ಲಿದ್ದೀರಿ ಸ್ವಾಮೀಜಿ ?'

ಪರಮಾನಂದ : "ನಾವು ಇಲ್ಲಿಂದ ಹರಿದ್ವಾರಕ್ಕೆ ಹೋಗುತ್ತಿದ್ದೇವೆ ಮಗು.'

ಸಿಯಾರಾಮ ನಿರಾಶೆಯ ಸ್ವರದಲ್ಲಿ ಕೇಳಿದ – "ಇವತ್ತೇ ಹೊರಟು ಹೋಗುತ್ತೀರೇನು?'

ಪರಮಾನಂದ : 'ಹೌದು ಮಗು, ಪುನಃ ಇನ್ನೊಮ್ಮೆ ಬಂದಾಗ ನಿನ್ನನ್ನು ಭೇಟಿಯಾಗುತ್ತೇವೆ.'

ಸಿಯಾರಾಮ ಕಾತರದ ಧ್ವನಿಯಲ್ಲಿ ಹೇಳಿದ – "ಇನ್ನೊಮ್ಮೆ ಬಂದಾಗ !'

ಪರಮಾನಂದ : "ಪುನಃ ಬೇಗ ಬರ್ತೇವೆ ಮಗು.'

ಸಿಯಾರಾಮ ದೀನನಾಗಿ ಕೇಳಿಕೊಂಡ –'ನಾನು ನಿಮ್ಮ ಜೊತೆಲ್ಲಿಯೇ ಬರ್ತೀನಿ.'

ಪರಮಾನಂದ : "ನನ್ನ ಜತೆ ! ನಿನ್ನ ಮನೆಯವರು ನಿನ್ನನ್ನು ಕಳಿಸ್ತಾರೇನು ?'

ಸಿಯಾರಾಮ : "ನನ್ನ ಮನೆಯವರಲ್ಲಿ ಯಾರು ತಾನೆ ನನ್ನ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ ?' ಇನ್ನು ಮುಂದಕ್ಕೆ ಅವನಿಂದ ಏನನ್ನೂ ಹೇಳಲಾಗಲಿಲ್ಲ. ಅವನ ತುಂಬಿ ಬಂದ ಕಣ್ಣುಗಳು ಅವನ ಕರುಣಗಾಥೆಯನ್ನು ಅವನು ಬಾಯಿಂದ ಮಾತುಗಳ ಮೂಲಕ ಹೇಳುವುದಕ್ಕಿಂತಲೂ ತೀಕ್ಷ್ಣವಾಗಿ ಹೇಳಿದವು.

ಪರಮಾನಂದರು ಹುಡುಗನನ್ನು ಎದೆಗಪ್ಪಿಕೊಂಡು ನುಡಿದರು –"ಆಯಿತು ಮಗು, ನಿನಗೆ ಅಷ್ಟು ಇಷ್ಟವಿದ್ದರೆ ನಡೆ, ಸಾಧು ಸಂತರ ಜತೆಯಲ್ಲಿ ಸಿಗುವ ಆನಂದವನ್ನೂ ಅನುಭವಿಸು. ದೇವರು ಇಷ್ಟಪಟ್ಟರೆ ನಿನ್ನ ಇಷ್ಟವೂ ಈಡೇರುತ್ತೆ'

ಕಾಳಿನ ಮೇಲೆ ಸುತ್ತುತ್ತಿದ್ದ ಪಕ್ಷಿ ಕೊನೆಗೂ ಕಾಳಿನ ಮೇಲೆ ಬಿದ್ದೇ ಬಿಟ್ಟಿತು. ಈಗ ಅವನ ಬದುಕಿನ ಅಂತ್ಯವಾಗುವುದು ಪಂಜರದಲ್ಲೋ ? ಕಟುಕನ ಕತ್ತಿಯ ಅಡಿಯಲ್ಲೋ, ಬಲ್ಲವರಾರು ?

# ಇಪ್ಪತ್ತಮೂರು

ವಕೀಲರು ಐದು ಗಂಟೆಗೆ ಕಛೇರಿಯಿಂದ ಬಂದರು. ಬಂದವರೇ ಒಳಗೆ ನಡೆದು ಮಂಚದ ಮೇಲೆ ಕುಸಿದರು. ವೃದ್ಧಾಪ್ಯದ ಶರೀರ, ಜತೆಗೆ ಇವತ್ತು ಇಡೀ ದಿನ ಅವರು ಊಟ ಮಾಡಿರಲಿಲ್ಲ. ಮುಖ ಬಾಡಿ ಹೋಗಿತ್ತು. ಇವತ್ತು ಸಂಪಾದನೆ ಏನೂ ಆಗಿಲ್ಲ ಎಂದು ನಿರ್ಮಲಾ ತಿಳಿದುಕೊಂಡಳು.

ನಿರ್ಮಲಾ ಕೇಳಿದಳು – "ಇವತ್ತು ಏನೂ ಸಿಗಲಿಲ್ಲವೇನು?'

ವಕೀಲರು : "ಇಡೀ ದಿನವೆಲ್ಲ ಎಷ್ಟೋ ಕಷ್ಟ ಪಟ್ಟೆ ಒಂದು ಕಾಸೂ ಸಿಗಲಿಲ್ಲ.'

ನಿರ್ಮಲಾ : "ಆ ಕ್ರಿಮಿನಲ್ ಕೇಸ್ ಏನಾಯಿತು?'

ವಕೀಲರು : "ನನ್ನ ಕಕ್ಷಿದಾರನಿಗೆ ಸಜೆಯಾಯಿತು.'

ನಿರ್ಮಲಾ : "ಆ ಪಂಡಿತರ ಮೊಕದ್ದಮೆ ?'

ವಕೀಲರು : "ಆ ಪಂಡಿತರಿಗೆ ಡಿಕ್ರಿಯಾಯಿತು.'

ನಿರ್ಮಲಾ : "ದಾವಾ ಹಾಕಿರುವ ಕೇಸಿನಲ್ಲಿ ಗೆದ್ದೇ ಗೆಲ್ತೀನಿ ಅಂತ ನೀವು ಹೇಳ್ತಿದ್ದಿರಲ್ಲ ?'

ವಕೀಲರು : "ಹೇಳ್ತಾಯೇನೋ ಇದ್ದೆ. ಈಗಲೂ ಹೇಳ್ತಿದ್ದೀನಿ. ದಾವಾ ಗೆದ್ದೇ ಗೆಲ್ಲಬೇಕಿತ್ತು ಅಂತ. ಅಷ್ಟೊಂದು ತಲೆ ಯಾರು ಕೆಡಿಸಿಕೊಳ್ತಾರೆ ?'

ನಿರ್ಮಲಾ : "ಆ ಇನ್ನೊಂದು ಮೊಕದ್ದಮೆ ಏನಾಯಿತು ?'

ವಕೀಲರು : "ಅದರಲ್ಲೂ ಸೋಲಾಯಿತು.'

ನಿರ್ಮಲಾ : "ಹಾಗಾದರೆ ಇವತ್ತು ಬೆಳಿಗ್ಗೆ ಎದ್ದು ಯಾರ ದರಿದ್ರ ಮುಖ ನೋಡಿದ್ದಿರಿ ?'

ವಕೀಲರಿಂದ ಈಗ ಕೆಲಸ ಮಾಡಲು ಖಂಡಿತ ಸಾಧ್ಯವಾಗುತ್ತಿರಲಿಲ್ಲ. ಮೊದಲನೆಯದಾಗಿ ಅವರ ಬಳಿ ಮೊಕದ್ದಮೆಗಳೇ ಬರುತ್ತಿರಲಿಲ್ಲ. ಎರಡನೆಯದಾಗಿ ಯಾರಾದರೂ ಬಂದರೆ ಅವರ ಮೇಲೆ ರೇಗಿಬಿಡುತ್ತಿದ್ದರು. ಆದರೆ ಅವರು ವೈಫಲ್ಯಗಳನ್ನು ನಿರ್ಮಲಾಳಿಂದ ಮುಚ್ಚಿಡುತ್ತಿದ್ದರು. ಯಾವತ್ತೂ ಒಂದು ಕಾಸು ಸಹ ಸಂಪಾದನೆ ಯಾಗುತ್ತಿರಲಿಲ್ಲವೋ ಅವತ್ತು ಯಾರಿಂದಲಾದರೂ ನಾಲ್ಕಾರು ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡು ಬಂದು ನಿರ್ಮಲಾಳ ಕೈಗೆ ಇಡುತ್ತಿದ್ದರು. ಸರಿ ಸುಮಾರು ಎಲ್ಲ ಸ್ನೇಹಿತರಿಂದಲೂ ಅವರು ಒಂದಲ್ಲ ಒಂದನ್ನು ಕಡ ತೆಗೆದುಕೊಂಡಿದ್ದರು. ಇವತ್ತು ಅದೂ ಸಾಧ್ಯವಾಗಿರಲಿಲ್ಲ.

ನಿರ್ಮಲಾ ಚಿಂತಾಕ್ರಾಂತಳಾಗಿ ನುಡಿದಳು – "ಆದಾಯದ ಸ್ಥಿತಿ ಹೀಗಾಗಿದೆ ! ಈಗ ಆ ದೇವರೆ ಕಾಪಾಡಬೇಕು. ಈ ಮಗನ ಸ್ಥಿತಿ ಹೇಗಿದೆ ಅಂದ್ರೆ ಪೇಟೆಗೆ ಹೋಗುವುದೂ ಕಷ್ಟವಾಗಿದೆ ಇವನಿಗೆ. ಎಲ್ಲ ಕೆಲಸವನ್ನೂ ಭೂಂಗಿಯಿಂದಲೇ

ಮಾಡಿಸಬೇಕು ಅನ್ನಿಸುತ್ತೆ. ಬೆಳಗ್ಗೆ ತುಪ್ಪ ತರ್ಲಿಕ್ಕೆ ಅಂತ ಹೋದವನು ಹನ್ನೊಂದು ಗಂಟೆಗೆ ಬಂದ. ಹೋಗಿ ಸೌದೆ ತಗೊಂಡು ಬಾ ಅಂತ ಎಷ್ಟು ಬೇಡಿಕೊಂಡೆ ಗೊತ್ತಾ ? ಆದರೆ ಹೇಳಿದ ಮಾತು ಕೇಳಲಿಲ್ಲ.'

ವಕೀಲರು : 'ಹಾಗಾದರೆ ಅಡಿಗೆ ಮಾಡಲಿಲ್ಲವೇನು ?'

ನಿರ್ಮಲಾ : 'ಇಂಥ ಮಾತುಗಳನ್ನು ಆಡುವುದರಿಂದಲೇ ನೀವು ಮೊಕದ್ದಮೆಗಳಲ್ಲಿ ಸೋಲುವುದು. ಸೌದೆ ಇಲ್ಲದೆಯೇ ಇದುವರೆಗೆ ಯಾರಾದರೂ ಅಡಿಗೆ ಮಾಡಿದ್ದರೆ, ನಾನೂ ಮಾಡ್ತಿದ್ದೆ.'

ವಕೀಲರು : 'ಹಾಗಾದರೆ ಅವನು ಏನನ್ನೂ ತಿನ್ನದೇ ಹೋದನೇನು ?'

ನಿರ್ಮಲಾ : 'ಅವನಿಗೆ ತಿನ್ನಲಿಕ್ಕೆ ಅಂತ ಕೊಡಲು ಮನೇಲಿ ಏನಿತ್ತು ?'

ವಕೀಲರು : ಹೆದರುತ್ತಲೇ ಕೇಳಿದರು – 'ಒಂದ್ನಾಲ್ಕು ಕಾಸಾದರೂ ಕೊಟ್ಟಿಯೇನು ?'

ನಿರ್ಮಲಾ ಮುಖ ಸಿಂಡರಿಸಿಕೊಂಡು ಹೇಳಿದಳು – 'ಮನೇಲಿ ದುಡ್ಡಿನ ಗಿಡ ಹಾಕಿದ್ದೀರಿ ಅಲ್ಲವಾ ಕಿತ್ತುಕೊಡೋದಕ್ಕೆ'

ವಕೀಲರು ಯಾವೊಂದು ಉತ್ತರವನ್ನೂ ಕೊಡಲಿಲ್ಲ. ತಿನ್ನಲು ಇಲ್ಲವೇ ಕುಡಿಯಲು ಏನಾದರೂ ಕೊಡಬಹುದೆಂದು ವಕೀಲರು ಕೊಂಚ ಹೊತ್ತು ಕಾದರು. ಆದರೆ ನಿರ್ಮಲಾ ನೀರನ್ನೂ ತರಲಿಲ್ಲ. ಸರಿ, ವಕೀಲರು ನಿರಾಶರಾಗಿ ಹೊರಗೆ ಬಂದರು. ಸಿಯಾರಾಮ ಪಟ್ಟಿರಬಹುದಾದ ಕಷ್ಟವನ್ನು ಕಲ್ಪಿಸಿಕೊಂಡು ಅವರ ಮನಸ್ಸು ಚಂಚಲವಾಯಿತು. ಇಡೀ ದಿನ ಕಳೆದುಹೋಗಿದೆ. ಪಾಪ, ಬಡಪಾಯಿ ಹುಡುಗ ಇದುವರೆಗೆ ಏನನ್ನೂ ತಿಂದಿಲ್ಲ. ರೂಮಿನಲ್ಲಿ ಬಿದ್ದುಕೊಂಡಿರಬಹುದು. ಭೂಂಗಿಯಿಂದಲೇ ಒಂದು ಸಾರಿ ಸೌದೆಯನ್ನು ತರಿಸಿಕೊಂಡಿದ್ದಿದ್ದರೆ ಅಂಥ ನಷ್ಟವಾದರೂ ಏನಾಗುತ್ತಿತ್ತು ? ಮನೆಮಂದಿಯನ್ನು ಉಪವಾಸ ಕೆಡವಿ ಉಳಿಸುವ ಹಣ ಯಾಕಾದರೂ ಬೇಕು ? ಅವರು ತಮ್ಮ ಹಳೇ ಪೆಟ್ಟಿಗೆಯನ್ನು ಹುಡುಕತೊಡಗಿದರು–ನಾಲ್ಕಾರು ಕಾಸುಗಳು ಸಿಗಬಹುದೇನೋ ಎಂದು. ಅದರೊಳಗೆ ಇದ್ದ ಎಲ್ಲ ಕಾಗದ ಪತ್ರಗಳನ್ನು ತೆಗೆದು ಹೊರಗಿಟ್ಟು ಒಂದೊಂದು ಮೂಲೆಯನ್ನೂ ತಡಕಿ–ತಡಕಿ ನೋಡಿದರು. ಆದರೆ ಏನೂ ಸಿಗಲಿಲ್ಲ. ನಿರ್ಮಲಾಳ ಪೆಟ್ಟಿಗೆಯಲ್ಲಿ ಹಣ ಬಿಡುವುದಿಲ್ಲವೆಂದ ಮೇಲೆ ಈ ಪೆಟ್ಟಿಗೆಯಲ್ಲಿ ಬಹುಶಃ ಹಣವ ಹೂವೂ ಬಿಡಲಾರದು. ಆದರೆ ಅದೃಷ್ಟವೆನ್ನಬೇಕು. ಕಾಗದ ಪತ್ರಗಳನ್ನು ಕೊಡವಿ ಕೊಡವಿ ಇಡುತ್ತಿದ್ದಾಗ ಅವುಗಳೊಳಗಿಂದ ನಾಲ್ಕಾಣೆಯ ಪಾವಲಿಯೊಂದು ಕೆಳಗೆ ಬಿತ್ತು. ಅದನ್ನು ನೋಡಿ ವಕೀಲರು ಸಂತೋಷದಿಂದ ಕುಪ್ಪಳಿಸಿದರು. ಈ ಮೊದಲು ಸಾವಿರಾರು ರೂಪಾಯಿಗಳನ್ನು ಅವರು ಸಂಪಾದಿಸಿದ್ದರು. ಆದರೆ ಈಗ ಆ ಪಾವಲಿ ಕೈಗೆ ಸಿಕ್ಕಾಗ ಆದಷ್ಟು ಸಂತೋಷ ಅವರಿಗೆ ಹಿಂದೆಂದೂ ಆಗಿರಲಿಲ್ಲ. ಆ ಪಾವಲಿಯನ್ನು ಕೈಲಿ ಹಿಡಿದುಕೊಂಡು ಸಿಯಾರಾಮನ ಕೋಣೆಯ ಮುಂದೆ ನಿಂತು ಅವನನ್ನು ಕರೆದರು. ಆದರೆ

ಯಾವೊಂದು ಜವಾಬೂ ಬರಲಿಲ್ಲ. ಈಗ ಅವರು ಕೋಣೆಯ ಒಳಗಡೆ ಹೋಗಿ ನೋಡಿದರು. ಸಿಯಾರಾಮ ಕಾಣಿಸಲಿಲ್ಲ. ಹಾಗಾದರೆ ಅವನಿನ್ನೂ ಸ್ಕೂಲಿನಿಂದ ಬಂದಿಲ್ಲವೇನು ? ಮನಸ್ಸಿನಲ್ಲಿ ಈ ಪ್ರಶ್ನೆ ತಲೆ ಹಾಕುತ್ತಿದ್ದಂತೆಯೇ ಒಳಗೆ ಹೋಗಿ ಭೂಂಗಿಯನ್ನು ಕೇಳಿದರು. ಸ್ಕೂಲಿನಿಂದ ಬಂದಿದ್ದಾನೆ ಎಂದು ಗೊತ್ತಾಯಿತು.

ವಕೀಲರು ಕೇಳಿದರು – 'ಏನಾದರೂ ಕುಡಿದನಾ, ತಿಂದನಾ ?'

ಭೂಂಗಿ ಯಾವೊಂದು ಉತ್ತರವನ್ನೂ ಕೊಡಲಿಲ್ಲ. ಮೂಗು ಒರೆಸಿಕೊಳ್ಳುತ್ತ , ಮುಖ ಮರೆಮಾಡಿಕೊಂಡು ಹೊರಟು ಹೋದಳು.

ವಕೀಲರು ಮೆಲ್ಲಗೆ ನಡೆದು ತಮ್ಮ ಕೋಣೆಗೆ ಬಂದು ಕುಳಿತುಕೊಂಡರು. ಇವತ್ತು ಮೊಟ್ಟಮೊದಲ ಸಾರಿ ನಿರ್ಮಲಾಳ ಮೇಲೆ ಸಿಟ್ಟುಬಂತು. ಆದರೆ ಆ ಸಿಟ್ಟಿನ ಆಘಾತ ತಮ್ಮ ಮೇಲೆ ಆಗತೊಡಗಿತು. ಆ ಕತ್ತಲ ಕೋಣೆಯಲ್ಲಿ ನೆಲದ ಮೇಲೆ ಮಲಗಿಕೊಂಡು ಅವರು ಮಗನ ಬಗ್ಗೆ ಇಷ್ಟು ಉದಾಸೀನರಾಗಿದ್ದುದಕ್ಕೆ ತಮ್ಮನ್ನು ತಾವೇ ಧಿಕ್ಕರಿಸಿಕೊಳ್ಳತೊಡಗಿದರು. ಇಡೀ ದಿನ ಬಳಲಿದ್ದರು. ಕೊಂಚ ಹೊತ್ತಿನಲ್ಲಿಯೇ ಅವರಿಗೆ ನಿದ್ದೆ ಹತ್ತಿತ್ತು.

ಭೂಂಗಿ ಬಂದು ಎಚ್ಚರಿಸಿದಳು – 'ಬಾಬೂಜಿ, ಅಡಿಗೆ ಆಗಿದೆ.'

ವಕೀಲರು ಬೆಚ್ಚಿಬಿದ್ದವರಂತೆ ಎದ್ದರು. ಕೋಣೆಯಲ್ಲಿ ಲ್ಯಾಂಪ್ ಉರಿಯುತ್ತಿತ್ತು. ಕೇಳಿದರು – 'ಗಂಟೆ ಎಷ್ಟಾಯಿತು ಭೂಂಗಿ ? ನಿದ್ದೆ ಬಂದುಬಿಟ್ಟಿತು.'

ಭೂಂಗಿ : 'ಪೊಲೀಸ್ ಸ್ಟೇಷನಿನ್ನಲ್ಲಿ ಈಗ ಒಂಬತ್ತು ಗಂಟೆ ಹೊಡೀತು ಅಂತ ಕಾಣುತ್ತೆ'

ವಕೀಲರು : 'ಸಿಯಾ ಬಂದನಾ ?'

ಭೂಂಗಿ : 'ಬಂದಿದ್ದರೆ ಮನೇಲಿ ಇರ್ತಾರಲ್ವಾ ?'

ವಕೀಲರು : 'ಬಂದನೋ ಇಲ್ಲವೋ ಅಂತ ನಾನು ಕೇಳ್ತಿದ್ದೀನಿ, ನೀನು ಮನಸ್ಸಿಗೆ ಬಂದ ಹಾಗೆ ಏನು ಉತ್ತರ ಕೊಡ್ತಿದ್ದೀಯಾ? ಬಂದನೋ ಇಲ್ಲವೋ ಅಷ್ಟು ಹೇಳು.'

ಭೂಂಗಿ : 'ನಾನು ನೋಡ್ಲಿಲ್ಲ. ನಿಮ್ಮ ಹತ್ತಿರ ಯಾಕೆ ಸುಳ್ಳು ?'

ವಕೀಲರು ಪುನಃ ಮಲಗಿದರು. 'ಅವನೂ ಬರಲಿ, ಆಗ ಏಳ್ತೇನೆ' ಅಂದರು. ಅವರು ಅರ್ಧ ಗಂಟೆಯವರೆಗೆ ಬಾಗಿಲ ಕಡೆಗೆ ಕಣ್ಣುಗಳನ್ನು ಹಾಸಿಕೊಂಡು ಮಲಗಿದ್ದರು. ಆಮೇಲೆ ಎದ್ದು ಹೊರಗೆ ಬಂದು ಬಲಭಾಗದ ರಸ್ತೆಯುದ್ದಕ್ಕೂ ಒಂದೆರಡು ಫರ್ಲಾಂಗ್ ದೂರ ಹೋದರು. ಮತ್ತೆ ಮನೆಗೆ ಬಂದು ಕೇಳಿದರು – 'ಸಿಯಾ ಬಂದನಾ ?'

ಒಳಗಿನಿಂದ ಉತ್ತರ ಬಂತು – 'ಇನ್ನೂ ಇಲ್ಲ.'

ವಕೀಲರು ಈಗ ಎಡಭಾಗದ ರಸ್ತೆಯುದ್ದಕ್ಕೂ ನಡೆದು, ಆ ರಸ್ತೆಯ ತಿರುವಿನವರೆಗೂ ಹೋದರು. ಸಿಯಾರಾಮ ಎಲ್ಲೂ ಕಾಣಿಸಲಿಲ್ಲ. ಅಲ್ಲಿಂದ ಮನೆಗೆ ಬಂದು, ಬಾಗಿಲಲ್ಲಿ ನಿಂತು 'ಸಿಯಾ ಬಂದನಾ ?' ಅಂತ ಕೇಳಿದರು.

ಒಳಗಿನಿಂದ ಉತ್ತರ ಬಂತು – 'ಇಲ್ಲ'

ಪೊಲೀಸ್ ಸ್ಟೇಷನ್ನಿನಲ್ಲಿ ಹತ್ತು ಗಂಟೆ ಹೊಡೆದರು.

ವಕೀಲರು ಬಹಳ ತೀವ್ರಗತಿಯಿಂದ ಪಾರ್ಕ್ ಕಡೆ ಹೊರಟರು. ಅಲ್ಲಿ ಸುತ್ತಾಡಲು ಹೋಗಿರಬಹುದು. ಹಸಿರು ಹುಲ್ಲಿನ ಮೇಲೆ ಕುಳಿತಾಗ ಹಾಗೆಯೇ ತೂಕಡಿಕೆ ಬಂದು ಅಲ್ಲಿಯೇ ಮಲಗಿರಬಹುದು – ಎಂದೆಲ್ಲ ಯೋಚಿಸಿದರು. ಪಾರ್ಕಿಗೆ ಬಂದು ಅವರು ಪ್ರತಿ ಬೆಂಚನ್ನೂ ನೋಡಿದರು. ನಾಲ್ಕೂ ಕಡೆ ಸುತ್ತಿದರು. ಬಹಳಷ್ಟು ಮಂದಿ ಹುಲ್ಲಿನ ಮೇಲೆ ಮಲಗಿದ್ದರು. ಆದರೆ ಸಿಯಾರಾಮ ಎಲ್ಲೂ ಪತ್ತೆಯಿಲ್ಲ. ಅವರು ಸಿಯಾರಾಮನ ಹೆಸರನ್ನು ಹಿಡಿದು ಜೋರಾಗಿ ಕೂಗಿದರು, ಆದರೆ ಯಾವ ಕಡೆಯಿಂದಲೂ ಉತ್ತರ ಬರಲಿಲ್ಲ.

ಬಹುಶಃ ಸ್ಕೂಲಿನಲ್ಲಿ ಯಾವುದಾದರೂ ಮನರಂಜನೆ ಕಾರ್ಯಕ್ರಮವಿರಬಹುದೆಂದು ಯೋಚಿಸಿದರು. ಸ್ಕೂಲು ಒಂದು ಮೈಲಿಗಿಂತಲೂ ದೂರವಿತ್ತು. ಸ್ಕೂಲಿನ ಕಡೆ ಹೊರಟರು. ಆದರೆ ಅರ್ಧ ದಾರಿಯವರೆಗೂ ಹೋಗಿ ವಾಪಸು ಬಂದರು. ಇಡೀ ಪೇಟೆ ಮುಚ್ಚಿತ್ತು. ಯಾವ ಮನರಂಜನೆ ಕಾರ್ಯಕ್ರಮವಿದ್ದರೂ ಅದು ಇಷ್ಟು ಹೊತ್ತಿನವರೆಗೆ ನಡೆಯುವುದಿಲ್ಲ ಎಂದುಕೊಂಡರು. ಈ ಮಧ್ಯೆ ಇಷ್ಟು ಹೊತ್ತಿಗೆ ಅವನು ಮನೆಗೆ ಬಂದಿರಬಹುದೆಂಬ ಆಸೆ ಅವರ ಮನಸ್ಸಿನಲ್ಲಿ ಮೂಡಿತು. ಬಾಗಿಲಿಗೆ ಬಂದು 'ಸಿಯಾ ಬಂದನಾ ?' ಎಂದು ಕೂಗಿ ಕೇಳಿದರು. ಕಿಟಕಿ, ಬಾಗಿಲು ಮುಚ್ಚಿದ್ದುವು. ಯಾವೊಂದು ಉತ್ತರವೂ ಬರಲಿಲ್ಲ. ಮತ್ತೆ ಜೋರಾಗಿ ಕೂಗಿದರು. ಈಗ ಭೂಂಗಿ ಬಾಗಿಲು ತೆಗೆದು ಹೇಳಿದಳು – 'ಇನ್ನೂ ಬಂದಿಲ್ಲ.' ಈಗ ವಕೀಲರು ಮೆಲ್ಲಗೆ ಭೂಂಗಿಯನ್ನು ತಮ್ಮ ಬಳಿಗೆ ಕರೆದು ಅತ್ಯಂತ ದೀನ ಸ್ವರದಲ್ಲಿ ಕೇಳಿದರು – 'ಭೂಂಗಿ, ನಿನಗೆ ಮನೆಯ ವಿಚಾರವೆಲ್ಲ ಗೊತ್ತು. ಇವತ್ತು ಏನಾಯ್ತು ಹೇಳು.'

ಭೂಂಗಿ : 'ಬಾಬೂಜಿ, ನಾನು ಸುಳ್ಳು ಹೇಳುವುದಿಲ್ಲ. ಅಮ್ಮಾವರು ನನ್ನನ್ನು ಕೆಲಸದಿಂದ ತೆಗೆದುಹಾಕಬಹುದು, ಅಷ್ಟೇ ತಾನೆ ? ಆದರೆ ಬೇರೆಯವರ ಮಕ್ಕಳನ್ನು ನೋಡಿಕೊಳ್ಳುವ ರೀತಿ ಇದಲ್ಲ. ಏನಾದರೂ ಸಣ್ಣಪುಟ್ಟ ಕೆಲಸ ಬಿದ್ದರೂ ಸಾಕು, ಅಮ್ಮ ಅವನನ್ನು ಪೇಟೆಗೆ ಅಟ್ಟುತ್ತಾರೆ. ಇಡೀ ದಿನ ಅವನಿಗೆ ಪೇಟೆಗೆ ಹೋಗಿ ಬರುವುದೇ ಉದ್ಯೋಗವಾಗಿದೆ. ಇವತ್ತು ಅವನು ಸೌದೆ ತರಲಿಲ್ಲಾಂತ ಹೇಳಿ ಒಲೆಯನ್ನೇ ಹೊತ್ತಿಸಲಿಲ್ಲ. ಹೇಳಿದರೆ ಮುಖ ಊದಿಸಿಕೊಳ್ತಾರೆ. ನೀವು ನೋಡಿಕೊಳ್ಳದೇ ಹೋದರೆ ಮಕ್ಕಳನ್ನು ಇನ್ಯಾರು ನೋಡಿಕೊಳ್ಳಬೇಕು ? ಬನ್ನಿ , ಊಟ ಮಾಡಿ, ಅಮ್ಮಾವರು ಬಹಳ ಹೊತ್ತಿನಿಂದ ಕಾಯುತ್ತಿದ್ದಾರೆ.'

ವಕೀಲರು : 'ಈಗ ನಾನು ಊಟ ಮಾಡುವುದಿಲ್ಲಾಂತ ಹೇಳ್ಹೋಗು.'

ವಕೀಲರು ಮತ್ತೆ ತಮ್ಮ ಕೋಣೆಗೆ ಹೋದರು. ನಿಟ್ಟುಸಿರು ಬಿಟ್ಟರು. ದುಃಖತಪ್ತರಾಗಿದ್ದ ಅವರ ಬಾಯಿಂದ ಹೊರಬಿದ್ದ ಮಾತುಗಳೆಂದರೆ – 'ದೇವರೆ, ನೀನು

ಕೊಡುವ ಶಿಕ್ಷೆಗಳು ಇನ್ನೂ ಮುಗಿಯಲಿಲ್ಲವೇನು ? ಈ ಕುರುಡನಿಗೆ ಆಸರೆಯಾಗಿದ್ದ ಊರುಗೋಲನ್ನೂ ಕೈಯಿಂದ ಕಿತ್ತುಕೊಳ್ಳುವೆಯೇನು ?'

ನಿರ್ಮಲಾ ಬಂದು ಹೇಳಿದಳು – 'ಇವತ್ತು ಸಿಯಾರಾಮ ಇಷ್ಟು ಹೊತ್ತಿನವರೆಗೂ ಬಂದಿಲ್ಲ ನೋಡಿ. ಅಡಿಗೆ ಮಾಡ್ತೀನಿ, ಊಟ ಮಾಡಿಕೊಂಡು ಹೋಗು ಅಂತ ನಾನು ಹೇಳ್ತಾನೆ ಇದ್ದೆ ಆದರೆ ಯಾವ ಮಾಯದಲ್ಲಿ ಹೋದನೋ ಗೊತ್ತಿಲ್ಲ! ಎಲ್ಲಿ ಸುತ್ತುತ್ತಿದ್ದಾನೋ ಯಾರಿಗೆ ಗೊತ್ತು ? ಹೇಳಿದ ಮಾತು ಕೇಳಿದರೆ ಕೇಳಿ. ಇನ್ನೂ ಎಷ್ಟು ಹೊತ್ತು ಅಂತ ಅವನ ರಸ್ತೆಯನ್ನು ನೋಡುವುದು. ಬನ್ನಿ, ಊಟಮಾಡಿ. ಅವನಿಗೆ ಊಟ ಎತ್ತಿಟ್ಟಿರ್ತೀನೆ.'

ವಕೀಲರು ನಿರ್ಮಲಾಳತ್ತ ಬಿರುಗಣ್ಣುಗಳಿಂದ ನೋಡುತ್ತ ಹೇಳಿದರು – 'ಈಗ ಎಷ್ಟು ಗಂಟೆಯಾಗಿರಬಹುದು ?'

ನಿರ್ಮಲಾ : 'ಯಾರಿಗೆ ಗೊತ್ತು , ಹತ್ತಾಗಿರಬಹುದು.'

ವಕೀಲರು : 'ಹತ್ತಲ್ಲ. ಹನ್ನೆರಡಾಗಿದೆ ಮಹರಾಯ್ತಿ.'

ನಿರ್ಮಲಾ : 'ಆಗಲೇ ಹನ್ನೆರಡಾಯಿತೇನು ? ಇಷ್ಟು ಹೊತ್ತು ಯಾವತ್ತೂ ಮಾಡ್ತಿರಲಿಲ್ಲ. ಆಯಿತು ಈಗ ಎಷ್ಟು ಹೊತ್ತಿನವರೆಗೆ ಅಂತ ಅವನನ್ನ ಕಾಯ್ತೀರಾ ? ಮಧ್ಯಾಹ್ನ ಏನನ್ನೂ ತಿಂದಿಲ್ಲ. ಇಂಥ ಕೆಟ್ಟ ಹುಡುಗನ್ನ ನಾನೂ ಎಂದು ನೋಡಿಲ್ಲ.'

ವಕೀಲರು : 'ನಿನಗೆ ತೊಂದರೆ ಕೊಡ್ತಾನಾ ?'

ನಿರ್ಮಲಾ : 'ನೋಡಿ ಮತ್ತೆ, ಇಷ್ಟು ರಾತ್ರಿಯಾಗಿದೆ. ಮನೆ ಜ್ಞಾನ ಬೇಡವೇನು ?'

ವಕೀಲರು : 'ಬಹುಶಃ ಇದು ಅವನ ಕೊನೆಯ ತುಂಟತನವಿರಬಹುದು !'

ನಿರ್ಮಲಾ : 'ಎಂಥ ಮಾತನಾಡ್ತೀರಿ ? ಎಲ್ಲಿಗೆ ಹೋಗ್ತಾನೆ ? ಯಾವನಾದರೂ ಸ್ನೇಹಿತನ ಮನೆಯಲ್ಲಿ ಮಲಗಿರಬಹುದು ಅಂತ ಕಾಣುತ್ತೆ !'

ವಕೀಲರು : 'ಹಾಗಾಗಿದ್ದರೆ ಒಳ್ಳೆಯದೇ ಆಯಿತು. ದೇವರೆ, ಹಾಗೆಯೇ ಮಾಡಿರಪ್ಪ'

ನಿರ್ಮಲಾ : 'ಬೆಳಗ್ಗೆ ಬಂದಾಗ ಕೊಂಚ ವಿಚಾರಿಸಿಕೊಳ್ಳಿ.'

ವಕೀಲರು : 'ಊಂ ಚೆನ್ನಾಗಿಯೇ ವಿಚಾರಿಸಿಕೊಳ್ತೀನಿ.'

ನಿರ್ಮಲಾ : 'ಬನ್ನಿ ಊಟ ಮಾಡುವಿರಂತೆ, ತುಂಬಾ ಹೊತ್ತಾಗಿದೆ'

ವಕೀಲರು : 'ಬೆಳಗ್ಗೆ ಅವನನ್ನು ಚೆನ್ನಾಗಿ ವಿಚಾರಿಸಿಕೊಂಡೇ ಊಟ ಮಾಡ್ತೀನಿ. ಅವನು ಮನೆಗೆ ಬರಲಿಲ್ಲಾಂದ್ರೆ ಇಂಥ ಪ್ರಾಮಾಣಿಕ ನೌಕರ ನಿನಗಿನ್ನಾರು ಸಿಗ್ತಾರೆ ?'

ನಿರ್ಮಲಾ ಕೋಪದಲ್ಲಿಯೇ ಹೇಳಿದಳು – 'ಹಾಗಾದರೆ ನಾನು ಅವನನ್ನು ಓಡಿಸಿದೆನಾ ?'

ವಕೀಲರು : 'ಇಲ್ಲ, ಹಾಗಂತ ಯಾರು ಹೇಳಿದರು ? ನೀನ್ಯಾಕೆ ಅವನ್ನು ಓಡಿಸ್ತೀಯಾ ! ನೀನು ಹೇಳಿದ ಕೆಲಸಗಳನ್ನೆಲ್ಲ ಮಾಡ್ತಿದ್ದನಲ್ಲ ಅವನು. ಅವನು ಹೋಗಿದ್ದಕ್ಕೆ ನಿನಗೆ ನೋವಾಗಿರಬಹುದು ಅಲ್ಲವೆ !'

ನಿರ್ಮಲಾ ಮುಂದಕ್ಕೆ ಮಾತನಾಡಲಿಲ್ಲ. ಮಾತಿಗೆ ಮಾತು ಬೆಳೆಯುವ ಭಯವಿತ್ತು.

ಹೀಗಾಗಿ ಅವಳು ಸುಮ್ಮನಾದಳು. ವಕೀಲರಿಗೆ ಮಲಗಿ ಅಂತಲೂ ಹೇಳಲಿಲ್ಲ. ಕೊಂಚ ಹೊತ್ತಿನಲ್ಲಿ ಭೂಂಗಿ ಒಳಗಿನಿಂದ ಬಾಗಿಲನ್ನು ಹಾಕಿಕೊಂಡಳು.

ವಕೀಲರಿಗೆ ನಿದ್ದೆ ಬರುವುದು ಸಾಧ್ಯವಿತ್ತೇನು ? ಮೂವರು ಮಕ್ಕಳಲ್ಲಿ ಒಬ್ಬ ಮಾತ್ರ ಬದುಕಿದ್ದ. ಅವನೂ ಕೈಯಿಂದ ಹೊರಟು ಹೋದರೆ ಬದುಕಿನಲ್ಲಿ ಅಂಧಕಾರವಲ್ಲದೆ ಮತ್ತೇನು ಉಳಿಯುತ್ತದೆ. ಹೆಸರು ಹೇಳಲೂ ಒಬ್ಬನಾದರೂ ಇದ್ದಾನೆಯೇ ? ಅಯ್ಯೋ ದೇವರೆ, ಎಂಥೆಂಥ ರತ್ನಗಳು ಕೈಯಿಂದ ಹೊರಟುಹೋದುವು ? ವಕೀಲರ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿದ್ದರೆ ಇದರಲ್ಲಿ ಆಶ್ಚರ್ಯವೇನು ? ಪಶ್ಚಾತ್ತಾಪ ಹಾಗೂ ತೀವ್ರ ಗ್ಲಾನಿ ಎಂಬ ಅಂಧಕಾರದಲ್ಲಿ ಒಂದೇ ಒಂದು ಆಸೆಯ ಕಿರಣ ಅವರನ್ನು ಹಿಡಿದುಕೊಂಡಿತ್ತು. ಆ ಕಿರಣವೂ ಲುಪ್ತವಾಯಿತೆಂದರೆ ಅವರಿಗೆ ಏನಾಗುವುದು ಎಂಬುದನ್ನು ಯಾರು ತಾನೇ ಕಲ್ಪಿಸಿಕೊಳ್ಳಬಲ್ಲರು ?

ಎಷ್ಟೋ ಸಾರಿ ವಕೀಲರಿಗೂ ತೂಕಡಿಕೆ ಬಂತು. ಆದರೆ ಅಷ್ಟು ಸಾರಿಯೂ ಸಿಯಾರಾಮ ಬಂದಂತಾಗಿ, ಅವನ ಹೆಜ್ಜೆಯ ಸಪ್ಪಳವಾದಂತಾಗಿ ಬೆಚ್ಚಿ ಎಚ್ಚರವಾಗುತ್ತಿದ್ದರು.

ಬೆಳಗಾಗುತ್ತಿದ್ದಂತೆಯೇ ವಕೀಲರು ಮತ್ತೆ ಸಿಯಾರಾಮನನ್ನು ಹುಡುಕಲು ಹೊರಟರು. ಯಾರನ್ನಾದರೂ ಕೇಳಲು ಅವರಿಗೆ ನಾಚಿಕೆಯಾಗುತ್ತಿತ್ತು. ಯಾವ ಬಾಯಿಂದ ಕೇಳುವುದು ? ಅವರಿಗೆ ಯಾರಿಂದಲೂ ಸಹಾನುಭೂತಿಯ ನಿರೀಕ್ಷೆಯಿರಲಿಲ್ಲ. ಎದುರಿಗೆ ಹೇಳದಿದ್ದರೂ ಎಲ್ಲರೂ ಮನಸ್ಸಿನಲ್ಲಿಯೇ, ಮಾಡಿದ್ದುಣ್ಣೋ ಮಹರಾಯ ಎಂದು ಹೇಳಿಕೊಳ್ಳುತ್ತಿರಬಹುದು. ಇಡೀ ದಿನ ಅವರು ಸ್ಕೂಲಿನ ಆಟದ ಬಯಲು, ಪೇಟೆ ಮತ್ತು ಪಾರ್ಕು, ಹೀಗೆ ಎಲ್ಲಾ ಕಡೆಯೂ ಹುಡುಕಿದರು. ಎರಡು ದಿನಗಳಿಂದ ಅವರು ನಿರಾಹಾರಿಗಳಾಗಿದ್ದಾಗ್ಯೂ ಅವರಿಗೆ ಇಷ್ಟು ಶಕ್ತಿ ಎಲ್ಲಿಂದ ಬಂತೋ, ಏನೋ !

ರಾತ್ರಿ ಹನ್ನೆರಡು ಗಂಟೆಗೆ ವಕೀಲರು ಮನೆಗೆ ಬಂದರು. ಬಾಗಿಲಲ್ಲಿಯೇ ಲಾಟೀನು ಉರಿಯುತ್ತಿತ್ತು. ನಿರ್ಮಲಾ ಬಾಗಿಲಲ್ಲಿಯೇ ನಿಂತಿದ್ದಳು. ಅವರು ಹತ್ತಿರ ಬರುತ್ತಿದ್ದಂತೆಯೇ ಹೇಳಿದಳು – 'ಹೇಳಿಯೂ ಹೋಗಲಿಲ್ಲ. ಎಲ್ಲಿ ಹೋದನೋ ಏನೋ ! ಏನಾದರೂ ಪತ್ತೆಯಾಯಿತೇನು ?'

ವಕೀಲರು ನೆಟ್ಟಗಣ್ಣುಗಳಿಂದ ಅವಳನ್ನು ಒಂದೇ ಸಮನೆ ದುರುಗುಟ್ಟಿಕೊಂಡು ನೋಡುತ್ತ ಹೇಳಿದರು – 'ನನ್ನ ಕಣ್ಮುಂದೆ ನಿಂತುಕೋ ಬೇಡ, ಹೊರಟು ಹೋಗೆ ಇಲ್ಲಿಂದ. ಇಲ್ಲಾಂದ್ರೆ ತುಂಬ ಕೆಟ್ಟದಾಗುತ್ತೆ ನೋಡು. ನನ್ನ ಮನಸ್ಸು ಸ್ವಾಧೀನದಲ್ಲಿಲ್ಲ. ಇದೆಲ್ಲ ಮಾಡಿದ್ದು ನೀನೇ. ನಿನ್ನಿಂದಾಗಿಯೇ ಇವತ್ತು ನನಗೆ ಈ ಗತಿ ಬಂದಿದೆ. ಆರು ವರ್ಷಗಳ ಮುಂಚೆ ಈ ಮನೆಯ ಸ್ಥಿತಿ ಹೀಗಿತ್ತೇನು ? ನೀನು ನನ್ನ ಸುಂದರವಾದ ಮನೆಯನ್ನು ಹಾಳುಗೆಡವಿದೆ. ನಳನಳಿಸುತ್ತಿದ್ದ ತೋಟವನ್ನು ಸರ್ವನಾಶ ಮಾಡಿದೆ. ಈಗ ಉಳಿದಿರುವುದು ಈ ಒಂದು ಕೊರಡು ಮಾತ್ರ. ಈ ಕೊರಡನ್ನು ನಾಶ ಮಾಡಿದ

ಮೇಲೇ ನಿನಗೆ ಶಾಂತಿ ಸಿಗುವುದು ಅಂತ ಕಾಣುತ್ತೆ. ನನ್ನ ಸರ್ವನಾಶ ಮಾಡಿಕೊಳ್ಳಲು ನಿನ್ನನ್ನು ನನ್ನ ಮನೆಗೆ ಕರೆದುಕೊಂಡು ಬಂದಿರಲಿಲ್ಲ. ಸುಖಜೀವನವನ್ನು ಇನ್ನಷ್ಟು ಸುಖವಾಗಿಸಿಕೊಳ್ಳಲು ಬಯಸುತ್ತಿದ್ದೆ. ಆದರೆ ಈಗ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗಿದೆ. ಬಾಳೆಎಲೆಯಂತೆ ಸೂಕ್ಷ್ಮವಾಗಿದ್ದ ನನ್ನ ಮಕ್ಕಳನ್ನು ನೀನು ಜವಾನರನ್ನಾಗಿ ಮಾಡಿಕೊಂಡೆ. ನಾನು ಇದನ್ನೆಲ್ಲ ನೋಡುತ್ತಿದ್ದರೂ ಕುರುಡನಂತೆ ಕುಳಿತಿದ್ದೆ. ಹೋಗು, ನನಗೆ ಒಂದಿಷ್ಟು ವಿಷ ಕಳಿಸು, ಈಗ ಉಳಿದಿರುವುದು ಇದೊಂದೆ, ಇದೂ ಆಗಿ ಹೋಗಲಿ.'

ನಿರ್ಮಲಾ ಅಳುತ್ತ ಹೇಳಿದಳು – 'ನಾನು ನತದೃಷ್ಟೆ. ನೀವು ಏನಂದರೂ ಅನ್ನಿಸಿಕೊಳ್ತೀನಿ. ಆ ದೇವರು ನನಗೆ ಜನ್ಮವನ್ನಾದರೂ ಯಾಕೆ ಕೊಟ್ಟ ? ಅಂದ ಹಾಗೆ ಸಿಯಾರಾಮ ವಾಪಸು ಬರುವುದೇ ಇಲ್ಲ ಅಂತ ನೀವಾದರೂ ಯಾಕೆ ಭಾವಿಸುತ್ತಿದ್ದೀರಿ ?'

ವಕೀಲರು ತಮ್ಮ ಕೋಣೆಯತ್ತ ಹೋಗುತ್ತ ನುಡಿದರು – 'ನನ್ನ ಹೊಟ್ಟೆ ಉರಿಸಬೇಡವೆ. ಹೋಗಿ ಒಂದು ತಂಬಿಗೆ ಹಾಲು ಕುಡಿ ಹೋಗು, ನಿನ್ನ ಮನೋಕಾಮನೆ ಈಡೇರಿತಲ್ಲ, ಇನ್ನೇನು ಆಗಬೇಕು ?'

## ಇಪ್ಪತ್ನಾಲ್ಕು

ನಿರ್ಮಲಾ ಇಡೀ ರಾತ್ರಿ ಅಳುತ್ತಿದ್ದಳು. ಎಂಥ ಗುರುತರವಾದ ಆರೋಪ ! ಆಕೆ ಜಿಯಾರಾಮ ಒಡವೆಗಳನ್ನು ತೆಗೆದುಕೊಂಡು ಹೋಗುತ್ತಿರುವುದನ್ನು ಕಣ್ಣಾರೆ ಕಂಡರೂ ಅದನ್ನು ಹೇಳುವುದಕ್ಕೆ ಹಿಂಜರಿದಳು. ಯಾಕೆಂದರೆ ಮಿಥ್ಯಾರೋಪ ಮಾಡಿ ಆ ಹುಡುಗನ ಬಗ್ಗೆ ವಿಷ ಕಾರುತ್ತಿದ್ದಾಳೆ ಅಂತ ಜನ ಅಂದಾರು ಅನ್ನುವ ಭಯದಿಂದ ಇವತ್ತು ಅವಳು ಮೌನವಾಗಿದ್ದರೂ ಆಕೆಯನ್ನು ಅಪರಾಧಿನಿ ಎಂದೇ ಗುರುತಿಸಲಾಗುತ್ತಿದೆ. ಅವಳು ಜಿಯಾರಾಮನನ್ನು ಅದೇ ಕ್ಷಣದಲ್ಲಿ ತಡೆದಿದ್ದರೆ, ಅವನು ನಾಚಿಕೆಯಿಂದ ಮನೆ ಬಿಟ್ಟು ಎಲ್ಲಿಗಾದರೂ ಓಡಿ ಹೋಗುತ್ತಿದ್ದ. ಆಗಲೂ ಆಕೆಯ ತಲೆಗೇ ಆ ಅಪವಾದವನ್ನು ಕಟ್ಟುತ್ತಿರಲಿಲ್ಲವೇನು ?

ಸಿಯಾರಾಮನ ಜೊತೆಗಾದರೂ ಆಕೆ ಕಾಠಿಣ್ಯವಾಗಿ ಎಲ್ಲಿ ವ್ಯವಹರಿಸಿದಳು ? ಏನೋ ಒಂದಿಷ್ಟು ಉಳಿತಾಯ ಮಾಡಬೇಕು ಎನ್ನುವ ಉದ್ದೇಶದಿಂದ ಸಿಯಾರಾಮನನ್ನು ಅಂಗಡಿಗೆ ಕಳಿಸಿ ಸಾಮಾನು ತರಿಸುತ್ತಿದ್ದಳು. ಈ ಉಳಿತಾಯ ಮಾಡಿ ತನಗಾಗಿ ಒಡವೆಗಳನ್ನು ಮಾಡಿಸಿಕೊಳ್ಳಲು ಬಯಸುತ್ತಿದ್ದಳೇನು ? ಮನೆಯ ಆದಾಯದ ಗತಿ ಇಷ್ಟು ಕೆಟ್ಟಿರುವಾಗ, ಕಾಸು – ಕಾಸಿನ ಮೇಲೂ ನಿಗಾ ಇಟ್ಟು , ಕಾಸು–ಕಾಸನ್ನು ಕೂಡಿ ಹಾಕಲು ಅವಳ ಬಳಿ ಇನ್ನಾವ ಉಪಾಯ ಉಳಿದಿತ್ತು ? ಬೆಳೆದ ಮಕ್ಕಳ ಮೇಲೆ ಭರವಸೆಯಿಡುವಂತಿಲ್ಲ.

ಮುದುಕನ ಪ್ರಾಣ ಯಾವಾಗ ಹೋಗುವುದೋ ಏನೋ ! ಮಗಳ ಮದುವೆಗೆ ಆಕೆ ಯಾರ ಮುಂದೆ ಕೈಚಾಚಬೇಕು ? ಹೆಣ್ಣು ಮಗುವಿನ ಭಾರವನ್ನು ಆಕೆಯೊಬ್ಬಳೆ ಏನೂ ಹೊತ್ತಿರಲಿಲ್ಲ. ಆಕೆ ತನ್ನ ಗಂಡನಿಗೋಸ್ಕರ ಒಂದಿಷ್ಟನ್ನು ಹಾಗೂ–ಹೀಗೂ ಕೂಡಿಹಾಕಬಯಸುತ್ತಿದ್ದಳು. ಬರೀ ಗಂಡನಿಗಾಗಿಯಷ್ಟೆಯೇನು ? ತಂದೆಯ ನಂತರ ಸಿಯಾರಾಮ ತಾನೆ ಮನೆಯ ಯಜಮಾನನಾಗುತ್ತಿದ್ದುದು ? ತಂಗಿಯ ಮದುವೆ ಮಾಡುವ ಜವಾಬ್ದಾರಿ ಅವನ ತಲೆಯ ಮೇಲೆ ಬೀಳುತ್ತಿರಲಿಲ್ಲವೇನು ? ನಿರ್ಮಲಾ ಉಳಿತಾಯ ಮಾಡುವ ಎಲ್ಲ ಮಾರ್ಗಗಳನ್ನು ಹುಡುಕಿಕೊಂಡದ್ದು ಗಂಡ ಮತ್ತು ಮಗನ ಕಷ್ಟದಲ್ಲಿ ಪಾಲ್ಗೊಳ್ಳುವುದಕ್ಕಾಗಿ ತಾನೆ ? ಇಂಥ ಪರಿಸ್ಥಿತಿಯಲ್ಲಿ ಮಗಳ ಮದುವೆಯೆಂದರೆ ಸಂಕಟದ ಮಾತಲ್ಲದೆ ಬೇರೇನು ? ಇದನ್ನು ಮಾಡಲು ಹೋದಾಗಲೂ ಆಕೆಗೆ ಅಪವಾದವಲ್ಲದೆ ಇನ್ನೇನು ದಕ್ಕಿತು ?

ಮಧ್ಯಾಹ್ನವಾಯಿತು, ಇವತ್ತು ಸಹ ಒಲೆ ಹೊತ್ತಿಸಲಾಗಲಿಲ್ಲ. ಊಟ ಮಾಡುವುದು ಜೀವನದ ಒಂದು ಕೆಲಸ, ಆದರೆ ಊಟದ ಬಗೆಗೂ ಯಾರಿಗೂ ಆಸಕ್ತಿಯಿರಲಿಲ್ಲ. ವಕೀಲರು ಹೊರಗೆ, ನಿರ್ಮಲಾ ಒಳಗೆ ಹೆಣಗಳಂತೆ ಬಿದ್ದಿದ್ದರು. ಮಗಳು ಹೊರಗೆ–ಒಳಗೆ ತಿರುಗಾಡುತ್ತಿದ್ದಳು. ಅವಳೊಂದಿಗೆ ಯಾರೂ ಮಾತನಾಡುತ್ತಿರಲಿಲ್ಲ. ಅವಳು ಮತ್ತೆ ಮತ್ತೆ ಸಿಯಾರಾಮನ ಕೋಣೆಯ ಬಳಿ ಹೋಗಿ ನಿಂತು 'ಅನ್ನ–ಅನ್ನ' ಎಂದು ಕೂಗುತ್ತಿದ್ದಳು. ಆದರೆ 'ಅನ್ನ' ನಿಂದ ಯಾವ ಜವಾಬೂ ಬರುತ್ತಿರಲಿಲ್ಲ.

ಸಂಜೆಯ ಹೊತ್ತಿಗೆ ವಕೀಲರು ಬಂದು ನಿರ್ಮಲಾಳನ್ನು ಕೇಳಿದರು – 'ನಿನ್ನ ಹತ್ತಿರ ಹಣ ಇದೆಯೇನು ?'

ನಿರ್ಮಲಾ ಬೆಚ್ಚಿ ಕೇಳಿದಳು – 'ಯಾಕೆ ?'

ವಕೀಲರು : 'ಕೇಳಿದ್ದಕ್ಕೆ ಉತ್ತರಕೊಡು.'

ನಿರ್ಮಲಾ : 'ನಿಮಗೆ ಗೊತ್ತಿಲ್ಲವೇನು ? ಕೊಡುವವರು ನೀವೇ ತಾನೆ ?'

ವಕೀಲರು : 'ನಿನ್ನ ಹತ್ತಿರ ಸ್ವಲ್ಪವಾದರೂ ಹಣ ಇದೆಯೋ ಇಲ್ಲವೋ ಅಷ್ಟು ಹೇಳು. ಇದ್ದರೆ ಕೊಡು, ಇಲ್ಲ ಅಂದರೆ ಅದನ್ನೇ ಸ್ಪಷ್ಟವಾಗಿ ಹೇಳು.'

ನಿರ್ಮಲಾ ಈಗಲೂ ಸ್ಪಷ್ಟವಾಗಿ ಉತ್ತರಿಸಲಿಲ್ಲ – 'ಇದ್ದರೆ ಮನೇಲಿ ತಾನೇ ಇರಬೇಕು. ನಾನು ಎಲ್ಲಿಗೂ ಕಳಿಸಿಲ್ಲವಲ್ಲ ?'

ವಕೀಲರು ಹೊರಗೆ ಬಂದರು. ನಿರ್ಮಲಾಳ ಬಳಿ ಹಣವಿದೆ ಎಂಬುದು ಅವರಿಗೆ ಗೊತ್ತಿತ್ತು. ವಾಸ್ತವವಾಗಿ ಅವಳ ಹತ್ತಿರ ಹಣ ಇದ್ದೂ ಇತ್ತು. ತನ್ನ ಹತ್ತಿರ ಹಣ ಇಲ್ಲ ಅಂತ, ಅಥವಾ ಇದೆ, ನಾನು ಕೊಡುವುದಿಲ್ಲ ಅಂತ ಆಕೆ ಹೇಳಲಿಲ್ಲ. ಆದರೆ ಆಕೆಯ ಮಾತುಗಳಿಂದ ಆಕೆಗೆ ಕೊಡಲು ಇಷ್ಟವಿಲ್ಲವೆಂಬುದಂತೂ ಸ್ಪಷ್ಟವಾಗಿತ್ತು.

ರಾತ್ರಿ ಒಂಬತ್ತು ಗಂಟೆಯ ಹೊತ್ತಿಗೆ ವಕೀಲರು ರುಕ್ಮಿಣಿಯ ಬಳಿಗೆ ಹೋಗಿ ಹೇಳಿದರು

– 'ತಂಗಿ, ನಾನು ಹೊರಗೆ ಹೋಗ್ತಿದ್ದೇನೆ. ಭೂಂಗಿಗೆ ಹೇಳಿ ನನ್ನ ಹಾಸಿಗೆ ಕಟ್ಟಿಸು. ಟ್ರಂಕ್‌ನಲ್ಲಿ ಕೆಲವು ಬಟ್ಟೆಗಳನ್ನು ಇಡಿಸು.'

ರುಕ್ಮಿಣಿ ಅಡಿಗೆ ಮಾಡುತ್ತಿದ್ದಳು. ಹೇಳಿದಳು – 'ನಿನ್ನ ಹೆಂಡತಿ ರೂಮಿನಲ್ಲಿದ್ದಾಳೆ. ಅವಳಿಗೆ ಯಾಕೆ ಹೇಳಬಾರದು ? ಎಲ್ಲಿಗೆ ಹೋಗಬೇಕೂಂತ ಇದ್ದೀಯಾ ?'

ವಕೀಲರು – 'ನಾನು ನಿನಗೆ ಹೇಳ್ತಿದ್ದೀನಿ. ಆಕೆಗೆ ಹೇಳುವ ಹಾಗಿದ್ದರೆ ನಿನಗ್ಯಾಕೆ ಹೇಳ್ತಿದ್ದೆ ? ಇವತ್ತು ನೀನ್ಯಾಕೆ ಅಡಿಗೆ ಮಾಡ್ತಿದ್ದೀಯಾ ?'

ರುಕ್ಮಿಣಿ : 'ಇನ್ಯಾರು ಮಾಡಬೇಕು ? ಆಕೆಗೆ ತಲೆ ನೋವಂತೆ. ಅದ್ಸರಿ, ಇಷ್ಟು ಹೊತ್ತಿನಲ್ಲಿ ನೀನು ಎಲ್ಲಿಗೆ ಹೋಗ್ತಿದ್ದೀಯಾ ? ಬೆಳಗ್ಗೆ ಹೋದರೆ ಆಗೊಲ್ಲವೇನು ?'

ವಕೀಲರು : 'ಹೀಗೆ ನಾಳೆ–ನಾಳೆ ಅಂದುಕೊಂಡು ಮೂರು ದಿನಗಳಾದವು. ಆ ಊರು–ಈ ಊರು ಹುಡುಕ್ತೀನಿ. ಬಹುಶಃ ಸಿಯಾರಾಮ ಎಲ್ಲಿಯಾದರೂ ಸಿಕ್ಕರೂ ಸಿಗಬಹುದು. ಅವನು ಯಾವನೋ ಒಬ್ಬ ಸನ್ಯಾಸಿ ಜತೆ ಮಾತನಾಡ್ತಿದ್ದ ಅಂತ ಯಾರೋ ಹೇಳಿದರು. ಅವನು ಇವನನ್ನು ಹುರಿದುಂಬಿಸಿ ಕರೆದುಕೊಂಡು ಹೋಗಿರಲೂಬಹುದು.'

ರುಕ್ಮಿಣಿ : 'ವಾಪಸ್ ಯಾವಾಗ ಬರ್ತೀಯಾ ?'

ವಕೀಲರು : 'ಹೇಳಲಿಕ್ಕಾಗಲ್ಲ, ವಾರ ಆಗಬಹುದು, ತಿಂಗಳಾಗಬಹುದು. ಹೀಗೆ ಅಂತ ಹೇಗೆ ಹೇಳುವುದು. ?'

ರುಕ್ಮಿಣಿ : 'ಇವತ್ತು ಯಾವ ವಾರ ? ಇವತ್ತು ಪ್ರಯಾಣ ಮಾಡಬಹುದೋ, ಬೇಡವೋ ಅಂತ ಪಂಡಿತರನ್ನು ಕೇಳಿದ್ದೀಯೇನು ?'

ವಕೀಲರು ಊಟಕ್ಕೆ ಎದ್ದರು. ಈಗ ನಿರ್ಮಲಾಗೆ ಅವರ ಬಗೆಗೆ ಕರುಣೆಯ ಭಾವನೆ ಉಕ್ಕಿಬಂತು. ಅವಳ ಎಲ್ಲ ಕೋಪವೂ ಒಮ್ಮೆಗೇ ಶಾಂತವಾಯಿತು. ತಾನಾಗಿಯೇ ಮಾತನಾಡಲಿಲ್ಲ. ಆದರೆ ತನ್ನ ಪುಟ್ಟ ಮಗಳನ್ನು ಎಚ್ಚರಿಸಿ, ಮುದ್ದಿಸಿ, ರಮಿಸಿ ಹೇಳಿದಳು – 'ನೋಡೆ ಅಲ್ಲಿ , ನಿಮ್ಮ ಅಪ್ಪಾಜಿ ಎಲ್ಲಿಗೋ ಹೊರಟಿದ್ದಾರೆ. ಎಲ್ಲಿಗೆ ಹೋಗ್ತೀರಿ ಅಂತ ಕೇಳು ಹೋಗು.'

ಮಗಳು ಬಾಗಿಲಲ್ಲಿ ನಿಂತು ಇಣುಕಿ ಕೇಳಿದಳು – 'ಅಪ್ಪಾಜಿ, ಎಲ್ಲಿಗೆ ಹೋಗ್ತಿದ್ದೀಽಽ?'

ವಕೀಲರು : 'ದೂರ ಹೋಗ್ತಿದ್ದೀನಿ ಮಗಳೆ, ನಿನ್ನ ಅಣ್ಣನ್ನ ಹುಡುಕಿಕೊಂಡು ಬರ್ತೀನಿ.'

ಮಗಳು ಅಲ್ಲಿಂದಲೇ ಹೇಳಿದಳು – 'ನಾನೂ ಬರ್ಲಾ ?'

ವಕೀಲರು : 'ನಾನು ತುಂಬ ದೂರ ಹೋಗ್ತಿದ್ದೀನಿ. ಬರುವಾಗ ನಿನಗೆ ಬಹಳಷ್ಟು ಸಾಮಾನು ತರ್ತೀನಿ. ಬಾ, ಹತ್ತಿರ ಬರಲ್ವೇನೆ?'

ಮಗಳು ನಸುನಗುತ್ತ ಅಲ್ಲೇ ಬಚ್ಚಿಟ್ಟುಕೊಂಡಳು, ಮತ್ತೆ ಮುಂದಿನ ಕ್ಷಣದಲ್ಲೇ ಬಾಗಿಲ ಹೊರಗೆ ತಲೆ ಹಾಕಿ, 'ನಾನೂ ಬರ್ತೀನಿ' ಎಂದಳು.

ವಕೀಲರು ಅಷ್ಟೇ ಮುದ್ದಿನಿಂದ ಹೇಳಿದರು – 'ನಿನ್ನ ಕರ್ಕೊಂಡು ಹೋಗಲ್ಲ ನಾನು.'

ಮಗಳು : 'ನನ್ನನ್ನು ಯಾಕೆ ಕರ್ಕೊಂಡು ಹೋಗಲ್ಲ ?'

ವಕೀಲರು : 'ನೀನು ನನ್ನ ಹತ್ತಿರ ಬರಲ್ಲವಲ್ಲ, ಅದಕ್ಕೆ'

ಮಗಳು ಪುಟ್ಟ ಪುಟ್ಟ ಹೆಜ್ಜೆಗಳನ್ನು ಇಡುತ್ತ ಬಂದು ತಂದೆಯ ತೊಡೆಯ ಮೇಲೆ ಕುಳಿತಳು. ಕೊಂಚ ಹೊತ್ತು ವಕೀಲರು ಆಕೆಯ ಬಾಲಕ್ರೀಡೆಗಳನ್ನು ನೋಡುತ್ತ ತಮ್ಮ ಅಂತರ್ವೇದನೆಯನ್ನು ಮರೆತರು.

ಊಟ ಮಾಡಿ ವಕೀಲರು ಹೊರಗೆ ಬಂದರು. ನಿರ್ಮಲಾ ನಿಂತು ನೋಡುತ್ತಿದ್ದಳು. ಅವಳು ಹೇಳಲು ಬಯಸುತ್ತಿದ್ದಳು – ನೀವು ವೃಥಾ ಹೋಗುತ್ತಿದ್ದೀರಿ ಅಂತ. ಆದರೆ ಹಾಗೆ ಹೇಳುವ ಸ್ಥಿತಿಯಲ್ಲಿ ಅವಳಿರಲಿಲ್ಲ. ಒಂದಷ್ಟು ರೂಪಾಯಿಗಳನ್ನು ತೆಗೆದುಕೊಡಲಾ ಎಂದು ಯೋಚಿಸಿದಳು. ಆದರೆ ಕೊಡಲಾಗದಂಥ ಸ್ಥಿತಿಯಲ್ಲಿ ಅವಳಿದ್ದಳು.

ಆದರೂ ಅವಳಿಂದ ಇರಲಾರಲಿಲ್ಲ. ಆಗ ಹೋಗಿ ರುಕ್ಮಿಣಿಗೆ ಹೇಳಿದಳು – 'ಅಕ್ಕ ಅವರಿಗೆ ಕೇಳಿ, ಎಲ್ಲಿಗೆ ಹೋಗ್ತಿದ್ದಾರೆ ಅಂತ. ನನಗೆ ಮಾತೇ ಹೊರಡ್ತಿಲ್ಲ. ಆದರೆ ಮಾತನಾಡದೆ ಇರಲೂ ಸಾಧ್ಯವಾಗುತ್ತಿಲ್ಲ. ಗೊತ್ತು–ಗುರಿಯಿಲ್ಲದೆ ಎಲ್ಲೆಲ್ಲಿ ಅಂತ ಸುತ್ತುವುದು, ವ್ಯರ್ಥವಾಗಿ ಮೈ ಕೈ ನೋವಲ್ಲವೆ ?'

ರುಕ್ಮಿಣಿ ಅತ್ಯಂತ ಕರುಣಾಪೂರ್ಣ ಕಣ್ಣುಗಳಿಂದ ಅವಳತ್ತ ನೋಡಿ ತನ್ನ ಕೋಣೆಗೆ ಹೋದಳು.

ನಿರ್ಮಲಾ ಮಗಳನ್ನು ಎತ್ತಿಕೊಂಡು ಯೋಚಿಸುತ್ತ ನಿಂತಳು – ಮನೆಯಿಂದ ಹೊರಡುವಾಗ ಬಹುಶಃ ಮಗಳನ್ನು ನೋಡಲು ಅಥವಾ ನನ್ನನ್ನು ಮಾತನಾಡಿಸಲು ಬರಬಹುದು, ಎಂದು. ಆದರೆ ಆಸೆ ಆಸೆಯಾಗಿಯೇ ಉಳಿಯಿತು. ವಕೀಲರು ಹಾಸಿಗೆ–ಟ್ರಂಕು ತೆಗೆದುಕೊಂಡು ಟಾಂಗಾ ಏರಿದರು.

ಆಗ ನಿರ್ಮಲಾಳ ಹೃದಯ ಕಿತ್ತು ಬಂದಂತಾಯಿತು. ಇನ್ನು ಮುಂದೆ ತನ್ನ ಇವರ ಭೇಟಿಯಾಗುವುದಿಲ್ಲ ಎಂದು ಆಕೆಗೆ ಏಕೋ ಏನೋ ಅನ್ನಿಸಿತು. ವಕೀಲರನ್ನು ತಡೆಯೋಣ ಎಂದುಕೊಂಡು ಆಕೆ ಧೈರ್ಯಗುಂದಿದವಳಂತೆ ಬಾಗಿಲವರೆಗೂ ಬಂದಳು. ಆದರೆ ಅಷ್ಟು ಹೊತ್ತಿಗೆ ಟಾಂಗಾ ಹೊರಟು ಹೋಗಿತ್ತು.

# ಇಪ್ಪತ್ತೈದು

ದಿನಗಳು ಉರುಳಿದುವು. ಒಂದು ತಿಂಗಳು ಕಳೆಯಿತು. ವಕೀಲರು ಮರಳಿ ಬರಲಿಲ್ಲ. ಪತ್ರವನ್ನೂ ಬರೆಯಲಿಲ್ಲ. ಅವರು ವಾಪಸ್ಸು ಮನೆಗೆ ಬಾರದೆ ಹೋದರೆ ಮುಂದೆ ಏನು ಮಾಡುವುದು ಎಂಬ ಚಿಂತೆ ನಿರ್ಮಲಾಳನ್ನು ನಿತ್ಯವೂ ಕಾಡತೊಡಗಿತು. ಅವರ ಮಾನಸಿಕ ಸ್ಥಿತಿ ಹೇಗಿರಬಹುದು ? ಎಲ್ಲೆಲ್ಲಿ ಸುತ್ತಿ ಸುತ್ತಿ ಬಸವಳಿಯುತ್ತಿರಬಹುದು ? ಅವರ ಆರೋಗ್ಯ ಹೇಗಿರಬಹುದು ಎಂಬುದರ ಬಗ್ಗೆ ಆಕೆಗೆ ಚಿಂತೆಯಿರಲಿಲ್ಲ. ಆದರೆ ತನ್ನ ಬಗ್ಗೆ , ತನಗಿಂತಲೂ ಹೆಚ್ಚಾಗಿ ತನ್ನ ಮಗಳ ಬಗ್ಗೆ ಹೆಚ್ಚಿನ ಚಿಂತೆಯಿತ್ತು. ಸಂಸಾರವನ್ನು ಹೇಗೆ ನಿಭಾಯಿಸುವುದು ? ದೇವರು ನಮ್ಮನ್ನೆಲ್ಲ ಹೇಗೆ ಕಾಪಾಡಬಲ್ಲ ? ಮಗಳ ಭವಿಷ್ಯ ಏನಾಗುತ್ತದೆ ? ಆಕೆ ಹಾಗೂ ಹೀಗೂ ಉಳಿತಾಯ–ಮಿಗಿತಾಯ ಮಾಡಿ ಉಳಿಸಿದ್ದ ಹಣವೂ ದಿನೇ ದಿನೇ ಕರಗುತ್ತಿತ್ತು. ಈ ಹಣದಲ್ಲಿ ಒಂದೊಂದು ಕಾಸನ್ನು ಖರ್ಚು ಮಾಡುವಾಗಲೂ ಆಕೆಗೆ ಎಷ್ಟು ನೋವಾಗುತ್ತಿತ್ತೆಂದರೆ ತನ್ನ ದೇಹದಿಂದ ರಕ್ತ ಒಂದೊಂದೇ ಹನಿಯಾಗಿ ಹನಿಯುತ್ತಿದೆಯೇನೋ ಎಂದನ್ನಿಸುತ್ತಿತ್ತು. ಆಗೆಲ್ಲ ಬೇಸರದಿಂದ ವಕೀಲರಿಗೆ ಶಾಪ ಹಾಕುತ್ತಿದ್ದಳು. ಮಗಳು ಯಾವುದಾದರೂ ಮಾತಿಗೆ ಅತ್ತರೆ ಶನಿ, ದರಿದ್ರ ಮುಂಡೇದು ಅಂತ ಬೈಯುತ್ತಿದ್ದಳು. ಅಷ್ಟೇ ಅಲ್ಲ, ರುಕ್ಮಿಣಿ ಮನೆಯಲ್ಲಿರುವುದು ಹೇಗೆ ಅನ್ನಿಸತೊಡಗಿತ್ತೆಂದರೆ ಅವಳು ತನ್ನ ತಲೆಯ ಮೇಲಿರುವ ಭಾರ ಎಂಬ ಭಾವನೆಯನ್ನು ಅನುಭವಿಸಲಾರಂಭಿಸಿದ್ದಳು. ಹೊಟ್ಟೆ ಉರಿಯಲಾರಂಭಿಸಿದಾಗ ಮಾತುಗಳು ಬೆಂಕಿಯ ಉಂಡೆಗಳಾಗುತ್ತವೆ. ಒಂದು ಕಾಲದಲ್ಲಿ ನಿರ್ಮಲಾ ತುಂಬ ಮೃದುಭಾಷಿಣಿಯಾಗಿದ್ದಳು ಆದರೆ ಈಗ ಕರ್ಕಶಭಾಷಿಣಿಯಾಗಿದ್ದಳು. ಇಡೀ ದಿನ ಅವಳ ಬಾಯಿಂದ ಕೆಟ್ಟ ಮಾತುಗಳು ಹೊರಹೊಮ್ಮುತ್ತಿದ್ದವು. ಅವಳ ಮಾತುಗಳಲ್ಲಿದ್ದ ಆ ಕೋಮಲತೆ ಎಲ್ಲಿ ಹೋಯಿತೊ ಏನೋ ! ಆಕೆಯ ಭಾವನೆಗಳಲ್ಲಿದ್ದ ಮಾಧುರ್ಯ ಎಲ್ಲಿ ಮಾಯವಾಯಿತೋ ಏನೊ ! ಭೂಂಗಿ ಎಷ್ಟೋ ದಿನಗಳಿಂದ ಈ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದಳು. ಸಹನಶೀಲಳಾದ ಹೆಣ್ಣು ಆಕೆ, ಅವಳಿಂದಲೂ ಇಪ್ಪತ್ನಾಲ್ಕು ಗಂಟೆ ನಿರ್ಮಲಾಳ ವಟಗುಟ್ಟುವಿಕೆಯನ್ನು ಕೇಳಲಾಗಲಿಲ್ಲ. ಸರಿ, ಒಂದು ದಿನ ಆಕೆಯೂ ಈ ಮನೆಯನ್ನು ತೊರೆದು ಹೋದಳು. ವಿಚಿತ್ರವೆಂದರೆ ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದ ತನ್ನ ಮಗುವಿನ ಮುಖ ಕಂಡರೂ ಆಕೆಗೆ ಜಿಗುಪ್ಸೆಯಾಗತೊಡಗಿತು. ಮಾತು ಮಾತಿಗೂ ರೇಗುತ್ತಿದ್ದಳು, ಹೊಡೆದೂ ಬಿಡುತ್ತಿದ್ದಳು. ಆಗೆಲ್ಲ ರುಕ್ಮಿಣಿ ಅಳುವ ಮಗುವನ್ನು ಎತ್ತಿಕೊಂಡು ರಮಿಸಿ ಸುಮ್ಮನಾಗಿಸುತ್ತಿದ್ದಳು. ಈ ಅನಾಥೆಗೆ ಆಕೆಯೇ ಆಶ್ರಯವಾಗಿದ್ದಳು.

ಈಗ ನಿರ್ಮಲಾಳಿಗೆ ಪ್ರಿಯವಾಗಿದ್ದ ಒಂದೇ ಒಂದು ವಿಷಯವೆಂದರೆ ಸುಧಾಳೊಂದಿಗೆ ಮಾತನಾಡುವುದು. ಅವಳ ಮನೆಗೆ ಹೋಗುವ ನೆಪಕ್ಕಾಗಿ ಹೊಂಚು

ಹಾಕುತ್ತಿರುತ್ತಿದ್ದಳು. ತನ್ನ ಮಗುವನ್ನು ಎಲ್ಲಿಗೂ ಕರೆದುಕೊಂಡು ಹೋಗಲು ಇತ್ತೀಚೆಗೆ ಆಕೆ ಇಚ್ಛಿಸುತ್ತಿರಲಿಲ್ಲ. ಏಕೆಂದರೆ ಈ ಮುಂಚೆ ಆ ಮಗುವಿಗೆ ತಿನ್ನಲಿಕ್ಕೆ ಎಷ್ಟು ಬೇಕೋ ಅಷ್ಟು ತನ್ನ ಮನೆಯಲ್ಲಿಯೇ ಸಿಗುತ್ತಿತ್ತು. ಅವರ ಮನೆಯಲ್ಲಿ ಆಡಿಕೊಂಡು. ಬರುತ್ತಿದ್ದಳು. ಆದರೆ ಈಗ ಆ ಮನೆಗೆ ಹೋಗುತ್ತಿದ್ದಂತೆಯೇ ಅವಳಿಗೆ ಹಸಿವಾಗುತ್ತಿತ್ತು. ಆಗ ನಿರ್ಮಲಾ ಅವಳನ್ನು ದುರುಗುಟ್ಟಿಕೊಂಡು ನೋಡುತ್ತಿದ್ದಳು. ಮುಷ್ಟಿಯನ್ನು ತೋರಿಸಿ ಹೆದರಿಸುತ್ತಿದ್ದಳು. ಹೀಗಾಗಿ ನಿರ್ಮಲಾ ಮಗುವನ್ನು ಅವರ ಮನೆಗೆ ಕರೆದುಕೊಂಡು ಹೋಗುತ್ತಿರಲಿಲ್ಲ. ಸುಧಾಳ ಜತೆಯಲ್ಲಿದ್ದಾಗ ಆಕೆಗೆ ತಾನು ಮನುಷ್ಯಳು ಎಂದನ್ನಿಸುತ್ತಿತ್ತು. ಅವಳ ಜತೆಯಲ್ಲಿದ್ದಷ್ಟು ಹೊತ್ತು ನಿರ್ಮಲಾ ತನ್ನ ಎಲ್ಲ ಚಿಂತೆಗಳನ್ನು ಮರೆಯುತ್ತಿದ್ದಳು . ಕುಡುಕ ಕುಡಿದ ಅಮಲಿನಲ್ಲಿ ತನ್ನೆಲ್ಲ ಚಿಂತೆಗಳನ್ನು ಮರೆಯುತ್ತಾನಲ್ಲ, ಹಾಗೆ, ಸುಧಾಳ ಮನೆಗೆ ಹೋಗಿ ತನ್ನೆಲ್ಲ ಚಿಂತೆಗಳನ್ನು ಮರೆಯುತ್ತಿದ್ದಳು. ನಿರ್ಮಲಾಳನ್ನು ಆಕೆಯ ಮನೆಯಲ್ಲಿ ನೋಡಿದವರು. ಇಲ್ಲಿನ ನಿರ್ಮಲಾಳನ್ನು ನೋಡಿ ಆಶ್ಚರ್ಯ ಪಡುತ್ತಿದ್ದರು. ಅಲ್ಲಿನ ಕರ್ಕಶ ಧ್ವನಿಯ, ಕಟುಭಾಷಿಣಿ ನಿರ್ಮಲಾ ಇಲ್ಲಿ ಹಾಸ್ಯವಿನೋದ ಮತ್ತು ಮಾಧುರ್ಯದ ಪ್ರತ್ಥಳಿಯಾಗುತ್ತಿದ್ದಳು. ಯೌವನ ಸಹಜವಾದ ಭಾವನೆಗಳು ತನ್ನ ಮನೆಯಲ್ಲಿ ಗರಿಗೆದರದೆ ಇಲ್ಲಿ ಗರಿಗೆದರಿಕೊಳ್ಳುತ್ತಿದ್ದುವು. ಅವಳು ಇಲ್ಲಿಗೆ ಬರುವಾಗ ಒಳ್ಳೆ ಸೀರೆಯುಟ್ಟು, ನೀಟಾಗಿ ತಲೆ ಬಾಚಿಕೊಂಡು ಉಲ್ಲಾಸದ ಚಿಲುಮೆಯಾಗುತ್ತಿದ್ದಳು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ತನ್ನ ಗೋಳಿನ ಕತೆಯನ್ನು ತನ್ನ ಮನಸ್ಸಿನಲ್ಲೇ ಇಟ್ಟುಕೊಳ್ಳುತ್ತಿದ್ದಳು. ಇಲ್ಲಿಗೆ ಅಳುವುದಕ್ಕಲ್ಲ, ನಗುವುದಕ್ಕಾಗಿ ಬರುತ್ತಿದ್ದಳು.

ಬಹುಶಃ ಅವಳ ಹಣೆಯಲ್ಲಿ ಈ ಸುಖವೂ ಬರೆದಿರಲಿಲ್ಲ ಅಂತ ಕಾಣುತ್ತದೆ. ಸಾಮಾನ್ಯವಾಗಿ ನಿರ್ಮಲಾ ಮಧ್ಯಾಹ್ನ ಅಥವಾ ಸಂಜೆಯ ಹೊತ್ತು ಸುಧಾಳ ಮನೆಗೆ ಹೋಗುತ್ತಿದ್ದಳು. ಒಂದು ದಿನ ಅವಳ ಮನಸ್ಸಿಗೆ ಎಷ್ಟು ಬೇಸರವಾಗಿತ್ತೆಂದರೆ ಒಂದು ಬೆಳಗಿನ ಹೊತ್ತು ಆಕೆಯ ಮನೆಗೆ ಹೋದಳು. ಆಗ ಸುಧಾ ನದಿ ಸ್ನಾನಕ್ಕೆಂದು ಹೋಗಿದ್ದಳು. ಡಾಕ್ಟರು ಆಸ್ಪತ್ರೆಗೆ ಹೋಗಲು ಬಟ್ಟೆ ಹಾಕಿಕೊಳ್ಳುತ್ತಿದ್ದರು, ಕೆಲಸದಾಕೆ ತನ್ನ ಕೆಲಸಕಾರ್ಯಗಳಲ್ಲಿ ಮಗ್ನಳಾಗಿದ್ದಳು. ನಿರ್ಮಲಾ ತನ್ನ ಗೆಳತಿಯ ರೂಮಿಗೆ ಹೋಗಿ ನಿಶ್ಚಿಂತಳಾಗಿ ಕುಳಿತಳು. ಸುಧಾ ಏನೋ ಕೆಲಸದಲ್ಲಿರಬೇಕು. ಈಗ ಬರಬಹುದು ಎಂದು ಭಾವಿಸಿದ್ದಳು. ಎರಡು–ಮೂರು ನಿಮಿಷಗಳು ಕಳೆದುವು. ಅವಳು ಎದ್ದು ಅಲ್ಮಾರಿಯಲ್ಲಿದ್ದ ಚಿತ್ರಗಳ ಒಂದು ಪುಸ್ತಕವನ್ನು ತೆಗೆದುಕೊಂಡು, ತನ್ನ ನೀಳ ತಲೆಗೂದಲುಗಳನ್ನು ಹರಡಿಕೊಂಡು ಮಂಚದ ಮೇಲೆ ಮಲಗಿಕೊಂಡು ಚಿತ್ರಗಳನ್ನು ನೋಡತೊಡಗಿದಳು. ಈ ಮಧ್ಯೆ ಯಾವುದೋ ಕೆಲಸಕ್ಕಾಗಿ ಡಾಕ್ಟರು ನಿರ್ಮಲಾ ಕುಳಿತಿದ್ದ ರೂಮಿಗೆ ಬರಬೇಕಾಯಿತು. ಬಹುಶಃ ತಮ್ಮ ಕನ್ನಡಕವನ್ನು ಹುಡುಕಬೇಕಾಗಿತ್ತು. ಅವರು ನಿರ್ಮಲಾಳಿದ್ದ ರೂಮಿಗೆ ಒಮ್ಮೆಗೇ ಬಂದುಬಿಟ್ಟರು. ನಿರ್ಮಲಾ ಬಾಗಿಲ ಕಡೆ ಕೇಶರಾಶಿಯನ್ನು ಹರಡಿಕೊಂಡು ಮಲಗಿದ್ದಳು. ಡಾಕ್ಟರು ಒಳಗಡೆ ಬರುತ್ತಿದ್ದಂತೆಯೇ ಬೆಚ್ಚಿ ಎದ್ದು ಕೂತಳು.

ತಲೆಗೂದಲುಗಳನ್ನು ಸರಿಪಡಿಸಿಕೊಂಡು ತಲೆಯ ಮೇಲೆ ಸೆರಗು ಹಾಕಿಕೊಳ್ಳುತ್ತ ಮಂಚದ ಮೇಲಿಂದ ಇಳಿದು ನಿಂತಳು. ಡಾಕ್ಟರು ರೂಮಿನಿಂದ ಹೊರಗೆ ಬರುತ್ತ ಹೇಳಿದರು – 'ಕ್ಷಮಿಸು ನಿರ್ಮಲಾ, ನೀನು ಇಲ್ಲಿದ್ದೀಯಾ ಅಂತ ಗೊತ್ತಿರಲಿಲ್ಲ. ನನ್ನ ಕನ್ನಡಕ ನನ್ನ ರೂಮಿನಲ್ಲಿ ಸಿಗುತ್ತಿಲ್ಲ. ಎಲ್ಲಿಟ್ಟೆ ಅಂತ ಮರೆತುಹೋಗಿದೆ. ಬಹುಶಃ ಇಲ್ಲಿರಬಹುದು ಅಂತ ತಿಳ್ಕೊಂಡಿದ್ದೆ.'

ನಿರ್ಮಲಾ ಮಂಚದ ತಲೆದಿಂಬಿನ ಕಡೆ ಕಣ್ಣಾಡಿಸಿದಳು, ಕನ್ನಡಕದ ಡಬ್ಬಿ ಕಾಣಿಸಿತು, ಅವಳು ಮುಂದೆ ಬಂದು ಅದನ್ನು ತೆಗೆದುಕೊಂಡು ತಲೆ ತಗ್ಗಿಸಿಕೊಂಡು, ದೇಹವನ್ನು ಹಿಡಿ ಮಾಡಿಕೊಂಡು ಸಂಕೋಚದಿಂದ ಡಾಕ್ಟರ್ ಅವರಿಗೆ ಕೊಡಲು ಕೈ ಮುಂದೆ ಮಾಡಿದಳು. ಡಾಕ್ಟರ್ ಸಾಹೇಬರು ನಿರ್ಮಲಾಳನ್ನು ಎರಡು–ಮೂರು ಸಾರಿ ಹಿಂದೆಯೂ ನೋಡಿದ್ದರು. ಆದರೆ ಈಗ ಅವರ ಮನಸ್ಸಿನಲ್ಲಿ ಬಂದಂಥ ಭಾವನೆಗಳು ಹಿಂದೆಂದೂ ಅವರ ಮನಸ್ಸಿನಲ್ಲಿ ಬಂದದ್ದಿರಲಿಲ್ಲ. ಅದೆಷ್ಟೋ ವರ್ಷಗಳಿಂದ ಅವರ ಹೃದಯದಲ್ಲಡಗಿದ್ದ ಜ್ವಾಲೆ ಈಗ ಗಾಳಿಯ ಸ್ಪರ್ಶ ಪಡೆದು ಇದ್ದಕ್ಕಿದ್ದಂತೆಯೇ ಭಗ್ಗನೆ ಮೇಲೆದ್ದಿತು. ಅವರ ಕನ್ನಡಕ ತೆಗೆದುಕೊಳ್ಳಲು ಕೈ ಮುಂದೆ ಮಾಡಿದರು. ಅವರ ಕೈ ನಡುಗುತ್ತಿತ್ತು. ಕನ್ನಡಕವನ್ನು ತೆಗೆದುಕೊಂಡು ಅವರು ಹೊರಗೆ ಬರಲಿಲ್ಲ. ಬದಲಾಗಿ ಯಾವುದೋ ಭಾವನೆಯಲ್ಲಿ ಮುಳುಗಿ ಹೋದವರಂತೆ ಅಲ್ಲೇ ನಿಂತುಬಿಟ್ಟರು. ಆ ಏಕಾಂತದಿಂದ ಭಯಭೀತಳಾದ ನಿರ್ಮಲಾ 'ಸುಧಾ ಎಲ್ಲಿಗಾದರೂ ಹೋಗಿದ್ದಾಳೇನು ?' ಎಂದು ಕೇಳಿದಳು.

ಡಾಕ್ಟರ್ ಸಾಹೇಬರು ತಲೆ ತಗ್ಗಿಸಿಕೊಂಡೇ ಉತ್ತರಿಸಿದರು : 'ಸ್ನಾನಕ್ಕೆಂದು ನದಿಗೆ ಹೋಗಿದ್ದಾಳೆ.'

ಈಗಲೂ ಡಾಕ್ಟರು ಹೊರಗೆ ಹೋಗಲಿಲ್ಲ. ಅಲ್ಲೇ ನಿಂತಿದ್ದರು. ನಿರ್ಮಲಾ ಪುನಃ ಕೇಳಿದಳು – 'ಎಷ್ಟು ಹೊತ್ತಿಗೆ ಬರ್ತಾರೆ ?'

ಡಾಕ್ಟರ್ ತಲೆ ತಗ್ಗಿಸಿಕೊಂಡೇ 'ಈಗ ಬರಬಹುದು' ಅಂದರು.

ಈಗಲೂ ಅವರು ಹೊರಗೆ ಹೋಗಲಿಲ್ಲ. ಅವರ ಮನಸ್ಸಿನಲ್ಲಿ ಭಯಂಕರ ದ್ವಂದ್ವ ಸಾಗಿತ್ತು. ಔಚಿತ್ಯವಲ್ಲ, ಸಂಕೋಚ ಅವರ ನಾಲಗೆಯನ್ನು ಕಟ್ಟಿ ಹಾಕಿತ್ತು. ಈಗ ನಿರ್ಮಲಾ ಹೇಳಿದಳು – 'ಆಕೆ ಎಲ್ಲಿಗೋ ಹೋಗಿರಬೇಕು ಅಂತ ಕಾಣುತ್ತೆ. ಸರಿ, ನಾನು ಬರ್ತೀನೆ.'

ಈಗ ಡಾಕ್ಟರ ಮನಸ್ಸಿನಲ್ಲಿದ್ದ ಸಂಕೋಚದ ದಾರ ಸಡಿಲವಾಗಿತ್ತು. ನದಿಯ ದಂಡೆಗೆ ಓಡುತ್ತ ಬಂದ ಸೈನ್ಯಕ್ಕೆ ಒಂದು ಅದ್ಭುತವಾದ ಶಕ್ತಿ ಬಂದು ಬಿಡುತ್ತದೆ. ಡಾಕ್ಟರ್ ಸಾಹೇಬರು ತಲೆ ಎತ್ತಿ ನಿರ್ಮಲಾಳನ್ನು ನೋಡಿ ಅನುರಾಗ ತುಂಬಿದ ಧ್ವನಿಯಲ್ಲಿ ನುಡಿದರು – 'ಬೇಡ ನಿರ್ಮಲಾ, ಸುಧಾ ಇನ್ನೇನು ಬಂದು ಬಿಡ್ತಾಳೆ, ಈಗಲೇ ನೀನು ಹೋಗಬೇಡ. ದಿನಾಲೂ ಸುಧಾಗೋಸ್ಕರ ನೀನು ಕುಳಿತಿರುತ್ತೀಯಾ, ಇವತ್ತು ನನಗೋಸ್ಕರ ಕುಳಿತುಕೊ. ಈ ಬೆಂಕಿಯಲ್ಲಿ ನಾನು ಎಷ್ಟು ದಿನಗಳವರೆಗೂ ಬೇಯಲಿ ? ನಿಜ ಹೇಳ್ತೀನಿ ನಿರ್ಮಲಾ........'

ನಿರ್ಮಲಾ ಮುಂದಕ್ಕೆ ಇನ್ನೇನನ್ನೂ ಕೇಳಿಸಿಕೊಳ್ಳಲಿಲ್ಲ. ಇಡೀ ಭೂಮಿ ಸುತ್ತುತ್ತಿರುವಂಥ,

ತನ್ನ ಪ್ರಾಣದ ಮೇಲೆ ವಜ್ರಾಘಾತಗಳಾಗುತ್ತಿರುವಂಥ ಅನುಭವವಾಯಿತು ಆಕೆಗೆ. ಅವಳು ತನ್ನ ಭುಜಗಳ ಮೇಲೆ ಹೊದ್ದುಕೊಂಡಿದ್ದ ಶಾಲನ್ನು ಕೈಗೆ ತೆಗೆದುಕೊಂಡು ಬಾಯಿಂದ ಒಂದು ಮಾತನ್ನೂ ಆಡದೆ ರೂಮಿನಿಂದ ಹೊರಗೆ ಬಂದಳು. ಡಾಕ್ಟರ್ ದಿಕ್ಕು ಗಾಣದವರಂತೆ ಅಳುಮೋರೆ ಮಾಡಿಕೊಂಡು ನಿಂತೇ ಇದ್ದರು. ಹೊರಗೆ ಬಂದ ಆಕೆಯನ್ನು ತಡೆಯುವ, ಇಲ್ಲ, ಆಕೆಯೊಂದಿಗೆ ಯಾವೊಂದು ಮಾತನ್ನಾಗಲಿ ಆಡುವ ಧೈರ್ಯವಾಗಲಿಲ್ಲ ಅವರಿಗೆ.

ನಿರ್ಮಲಾ ಬಾಗಿಲವರೆಗೆ ಬಂದಿದ್ದಳು. ಸುಧಾ ಟಾಂಗಾದಲ್ಲಿ ಇಳಿಯುತ್ತಿರುವುದು ಕಂಡಿತು. ಸುಧಾ ಆಕೆಯನ್ನು ನೋಡಿದಳು. ಕೂಡಲೇ ಏನು ಬಂದದ್ದು ಎಂದು ಕೇಳಬೇಕೆಂದು ಓಡಿಬಂದಳು. ಆದರೆ ನಿರ್ಮಲಾ ಮಾತಿಗೆ ಅವಕಾಶ ಕೊಡದಂತೆ ಬಾಣದಂತೆ ಬಿರುಸಾಗಿ ಹೊರಟು ಹೋದಳು. ಸುಧಾ ಒಂದು ಕ್ಷಣ ವಿಸ್ಮಯದಿಂದ ನಿಂತಲ್ಲೇ ನಿಂತುಬಿಟ್ಟಳು. ವಿಷಯ ಏನೆಂದು ಒಂದು ಕ್ಷಣ ಅವಳಿಗೆ ಅರ್ಥವಾಗಲಿಲ್ಲ. ಅವಳ ಮನಸ್ಸು ವಿಕ್ಷುಬ್ಧತೆಗೊಳಗಾಯಿತು. ತಕ್ಷಣ ಒಳಗೆ ಹೋದಳು. ಏನಾಯಿತು ಅಂತ ಕೆಲಸದವಳನ್ನು ವಿಚಾರಿಸಿದಳು. ಕೆಲಸದಾಕೆಯೋ, ಇಲ್ಲ , ಜವಾನನೋ ಆಕೆಗೆ ಅಪಮಾನವಾಗುವಂಥ ಮಾತನಾಡಿರಬೇಕೆಂದು ಅವಳು ಅಂದುಕೊಂಡಿದ್ದಳು. ತಪ್ಪು ಮಾಡಿದವರನ್ನು ಕೂಡಲೇ ಮನೆಯಿಂದ ಹೊರಗೆ ಅಟ್ಟಬೇಕೆಂದುಕೊಂಡಳು. ಮೊದಲು ತನ್ನ ಕೋಣೆಗೆ ನುಗ್ಗಿ ಬಂದಳು. ಅಲ್ಲಿ ಡಾಕ್ಟರು ಸಪ್ಪೆ ಮೋರೆ ಹಾಕಿಕೊಂಡು ಮಂಚದ ಮೇಲೆ ಕುಳಿತಿದ್ದುದು ಕಂಡಿತು. 'ನಿರ್ಮಲಾ ಇಲ್ಲಿಗೆ ಬಂದಿದ್ದಳಾ ?' ಸುಧಾ ಪ್ರಶ್ನಿಸಿದಳು.

ಡಾಕ್ಟರು ತಲೆ ಕೆರೆದುಕೊಳ್ಳುತ್ತ 'ಹೌದು ಬಂದಿದ್ದಳು' ಅಂದರು.

ಸುಧಾ : 'ಜವಾನನೋ, ಕೆಲಸದಾಕೆಯೋ ಅವಳಿಗೆ ಏನಾದರೂ ಅಂದರೇನು ? ನನ್ನೊಂದಿಗೂ ಮಾತನಾಡಲಿಲ್ಲ. ಸರ್‍ರಂತ ಹೊರಟೇಹೋದಳು.'

ಡಾಕ್ಟರ ಮುಖ ಕಳಾಹೀನವಾಯಿತು. ಹೇಳಿದರು – 'ಇಲ್ಲಿ ಯಾರೂ ಏನನ್ನೂ ಅಂದಿಲ್ಲ'

ಸುಧಾ : 'ಯಾರೋ ಏನೋ ಅಂದಿದ್ದಾರೆ. ನಾನು ಕೇಳ್ತೀನಿ ನೋಡ್ತಿರಿ. ದೇವರಾಣೆ, ಯಾರು ಆಕೆಗೆ ಅಂದರೋ ಅವರನ್ನು ಈಗಿಂದೀಗಲೇ ಮನೆಯಿಂದ ಅಟ್ತೀನಿ.'

ಡಾಕ್ಟರು ತೊದಲುತ್ತ ನುಡಿದರು – 'ಯಾರು ಏನು ಅಂದರೋ ನನಗೊಂದೂ ಕೇಳಿಸಲಿಲ್ಲ. ನೀನು ಬಂದದ್ದನ್ನು ಆಕೆ ಗಮನಿಸಲಿಲ್ಲಾಂತ ಕಾಣುತ್ತೆ'

ಸುಧಾ : 'ಅರೆ ವಾಹ್ ! ನೋಡಲಿಲ್ಲವಾ ? ಆಕೆಯ ಕಣ್ಮುಂದೆಯೇ ನಾನು ಟಾಂಗಾದಿಂದ ಇಳಿದಿದ್ದೀನಿ. ಆಕೆ ನನ್ನನ್ನು ನೋಡಿದಳು. ಆದರೆ ಒಂದು ಮಾತನ್ನೂ ಆಡಲಿಲ್ಲ. ಈ ರೂಮಿಗೆ ಬಂದಿದ್ದಳಾ ?'

ಡಾಕ್ಟರ ಮೈ ತಣ್ಣಗಾಯಿತು. ತೊದಲುತ್ತಲೇ ನುಡಿದರು – 'ಬಂದಿದ್ದಳಲ್ಲ' ?

ಸುಧಾ : 'ನೀವು ಇಲ್ಲಿ ಕುಳಿತಿರುವುದನ್ನು ನೋಡಿ ಹೋಗಿರಬಹುದು ಆಕೆ. ಆಗ

ಮನೆಯಲ್ಲಿನ ಕೆಲಸದಾಕೆ ಏನೋ ಅಂದಿರಬಹುದು. ಕೆಳವರ್ಗದ ಜನ. ಮಾತನಾಡೋ ರೀತಿ ಗೊತ್ತಿಲ್ಲ. ಏ ಸುಂದರಿ, ಬಾರೇ ಇಲ್ಲಿ.'

ಡಾಕ್ಟರ್ : 'ಆಕೆಯನ್ನು ಯಾಕೆ ಕರೀತಿಯಾ ? ಆಕೆ ಇಲ್ಲಿಂದ ನೇರವಾಗಿ ಹೊರಗೆ ಹೋದಳು. ಅವರ ಜತೆ ಒಂದು ಮಾತನ್ನೂ ಆಡಲಿಲ್ಲ.'

ಸುಧಾ : 'ಹಾಗಾದರೆ ನೀವೇ ಏನಾದರೂ ಅಂದಿರಬೇಕು.'

ಡಾಕ್ಟರರ ಎದೆ ಡವಡವ ಅನ್ನುತ್ತಿತ್ತು – 'ನಾನು ಯಾಕೆ ಅನ್ನಲಿ ? ನಾನೇನು ಹಳ್ಳಿ ಗಮಾರನೇನು ?'

ಸುಧಾ : 'ಆಕೆ ಒಳಗೆ ಬಂದದ್ದು ನೋಡಿಯೂ ನೀವು ಇಲ್ಲಿ ಕುಳಿತೇ ಇದ್ದರೇನು ?'

ಡಾಕ್ಟರ್ : 'ನಾನಿಲ್ಲಿರಲೇ ಇಲ್ಲ. ಹೊರಗಡೆಯ ರೂಮಿನಲ್ಲಿ ನಾನು ನನ್ನ ಕನ್ನಡಕವನ್ನು ಹುಡುಕುತ್ತಿದ್ದೆ. ಅದು ಅಲ್ಲೆಲ್ಲೂ ಸಿಗಲಿಲ್ಲ. ಸರಿ, ಈ ರೂಮಿನಲ್ಲಿರಬಹುದೆಂದು ಅಂದುಕೊಂಡು ರೂಮಿಗೆ ಬಂದರೆ, ಆಕೆ ಇಲ್ಲೇ ಕುಳಿತಿದ್ದಳು. ನಾನಿನ್ನೇನು ಹೊರಗೆ ಹೋಗಬೇಕೆಂದುಕೊಂಡು ಹೊರಟ್ಟಿದ್ದೆ , ಅಷ್ಟರಲ್ಲಿ ಆಕೆಯೇ – 'ಏನಾದರೂ ಬೇಕಿತ್ತೇನು' ಅಂತ ಕೇಳಿದಳು. 'ನನ್ನ ಕನ್ನಡಕ ಇಲ್ಲೇ ಎಲ್ಲೋ ಇರಬಹುದು ನೋಡಿ' ಅಂದೆ. ಕನ್ನಡಕ ಇಲ್ಲೇ ತಲೆದಿಂಬಿನ ಪಕ್ಕದಲ್ಲಿತ್ತು. ಆಕೆ ಇದನ್ನು ಎತ್ತಿಕೊಟ್ಟಳು. ಅಷ್ಟೆ, ಇನ್ನೇನಿಲ್ಲ.'

ಸುಧಾ : 'ನಿಮಗೆ ಕನ್ನಡಕ ಕೊಡುತ್ತಿದ್ದಂತೆಯೇ ಆಕೆ ಗಾಬರಿಯಿಂದ ಓಡಿ ಹೋದದ್ದೇಕೆ ಅಂತ ಹೇಳ್ತೀರ ?'

ಡಾಕ್ಟರ್ : 'ಗಾಬರಿಗೊಂಡೇನು ಆಕೆ ಹೋಗಲಿಲ್ಲವಲ್ಲ ? ಆಕೆ ಹೊರಟು ನಿಂತಾಗ 'ಸುಧಾ ಈಗ ಬರಬಹುದು, ಕುಳಿತುಕೊಳ್ಳಿ' ಅಂದೆ. ಆಕೆ ಕುಳಿತುಕೊಳ್ಳದಿದ್ದಕ್ಕೆ ನಾನೇನು ಮಾಡಲಿ ?'

ಸುಧಾ ಏನನ್ನೋ ಯೋಚಿಸುತ್ತ ಹೇಳಿದಳು – 'ನನಗೊಂದೂ ಅರ್ಥವಾಗುತ್ತಿಲ್ಲ. ಅವಳನ್ನು ಮಾತನಾಡಿಸಿಕೊಂಡು ಬರ್ತೀನಿ ತಡೀರಿ, ವಿಷಯ ಏನೂಂತ ಗೊತ್ತಾಗುತ್ತೆ'

ಡಾಕ್ಟರ್ : 'ಇಷ್ಟು ಅವಸರ ಏಕೆ ? ಆಮೇಲೆ ಹೋದರಾಯಿತು ಬಿಡು. ಇಡೀ ದಿನ ಇದೆ'

ಸುಧಾ ಶಾಲನ್ನು ಹೊದ್ದುಕೊಳ್ಳುತ್ತ 'ನನ್ನ ಹೊಟ್ಟೆಗೆ ಮೆಣಸಿನಕಾಯಿ ಕಿವುಚಿದಂತಾಗಿದೆ, ಅಂಥಾದ್ದರಲ್ಲಿ ಅವಸರವೇನು ಅಂತಿದ್ದೀರೇನು. ?'

ಸುಧಾ ವೇಗವಾಗಿ ಹೆಜ್ಜೆ ಹಾಕುತ್ತ ನಿರ್ಮಲಾಳ ಮನೆಯನ್ನು ಐದು ನಿಮಿಷದಲ್ಲಿ ತಲುಪಿದಳು. ಒಳಗೆ ಹೋಗಿ ನೋಡಿದರೆ ನಿರ್ಮಲಾ ತನ್ನ ಕೋಣೆಯ ಮಂಚದ ಮೇಲೆ ಮಲಗಿಕೊಂಡು ಅಳುತ್ತಿದ್ದಳು. ಮಗಳು ಆಕೆಯ ಪಕ್ಕದಲ್ಲಿ ನಿಂತುಕೊಂಡು 'ಯಾಕೆ ಅಲುತ್ತಿದ್ದೀಯಮ್ಮಾ ?' ಅಂತ ಕೇಳುತ್ತಿದ್ದಳು.

ಸುಧಾ ಮಗಳನ್ನು ಎತ್ತಿಕೊಂಡು ನಿರ್ಮಲಾಳನ್ನು ಕೇಳಿದಳು. 'ತಂಗಮ್ಮ, ನಿಜ

ಹೇಳು, ಏನ್ ವಿಷಯಾ ಅಂತ ! ನನ್ನ ಮನೆಯಲ್ಲಿ ಯಾರಾದರೂ ಏನಾದರೂ ಅಂದರಾ ? ನಾನು ಎಲ್ಲರನ್ನೂ ಕೇಳಿದೆ. ಯಾರೂ ಉತ್ತರಿಸಲಿಲ್ಲ.'

ನಿರ್ಮಲಾ ಕಣ್ಣೀರು ಒರೆಸಿಕೊಳ್ಳುತ್ತ ನುಡಿದಳು— 'ಯಾರೂ ಏನನ್ನೂ ಅನ್ನಲಿಲ್ಲ ತಂಗಿ, ಅಷ್ಟಕ್ಕೂ ನಿಮ್ಮ ಮನೆಯಲ್ಲಿ ನನಗೆ ಯಾರು ಅಂತಾರೆ ?'

ಸುಧಾ : 'ಹಾಗಾದರೆ ನನ್ನ ಜತೆ ಯಾಕೆ ಮಾತನಾಡಲಿಲ್ಲ ? ಅಲ್ಲಿಂದ ಬರುವಾಗ ಯಾಕೆ ಅಳ್ತಿದ್ದೆ ?'

ನಿರ್ಮಲಾ : 'ನನ್ನ ದುರಾದೃಷ್ಟಕ್ಕೆ ಅಳ್ತಿದ್ದೀನಿ, ಅಷ್ಟೆ.'

ಸುಧಾ : 'ನೀನು ನಿಜ ಹೇಳದೆ ಹೋದರೆ ಆಣೆ ಇಡ್ತೀನಿ ನೋಡು.'

ನಿರ್ಮಲಾ : 'ಆಣೆ ಪ್ರಮಾಣ ಮಾಡಬೇಡ ಮಹರಾಯಿತಿ, ನನಗೆ ಯಾರೂ ಏನೂ ಅನ್ನಲಿಲ್ಲ. ಸುಳ್ಳು ಸುಳ್ಳು ಯಾರ ಮೇಲೆ ಯಾಕೆ ಹೇಳಲಿ ?'

ಸುಧಾ : 'ನನ್ನಾಣೆಗೂ !'

ನಿರ್ಮಲಾ : 'ನೀನು ವೃಥಾ ಹಠ ಮಾಡ್ತಿದ್ದೀಯಾ !'

ಸುಧಾ : 'ನೀನು ಹೇಳದೆ ಹೋದರೆ, ನಿರ್ಮಲಾ, ನನ್ನ ಮೇಲೆ ನಿನಗೆ ಕೊಂಚವೂ ಪ್ರೀತಿ ಇಲ್ಲ ಅಂದ್ಕೋತೀನಿ. ಮಾತಿನ ನೆಂಟಸ್ತನ ಅಷ್ಟೆ ನಮ್ಮದು ಅಂತ ಅಂದುಕೊಳ್ಳಲಾ ? ನಾನು ನಿನ್ನೊಂದಿಗೆ ಎಂದೂ ಏನನ್ನೂ ಮುಚ್ಚುಮರೆ ಮಾಡಿಲ್ಲ. ಆದರೆ ನೀನು ನನ್ನನ್ನು ಪರಕೀಯಳು ಅಂತ ಭಾವಿಸುತ್ತೀಯೇನು ? ನಿನ್ನ ಬಗ್ಗೆ ನನಗೆ ತುಂಬಾ ವಿಶ್ವಾಸವಿತ್ತು ಆದರೆ ಇವತ್ತು ಗೊತ್ತಾಯ್ತು. ಯಾರಿಗೆ ಯಾರೂ ಆಗೊಲ್ಲ ಅಂತ.'

ಸುಧಾಳ ಕಣ್ಣುಗಳಲ್ಲಿ ನೀರಾಡಿತು. ಅವಳು ಮಗುವನ್ನು ಕೆಳಕ್ಕಿಳಿಸಿ ಹೊರಡುವುದಕ್ಕೆಂದು ಬಾಗಿಲ ಕಡೆ ಹೊರಟಳು. ನಿರ್ಮಲಾ ಎದ್ದದ್ದೇ ಅವಳ ಕೈ ಹಿಡಿದುಕೊಂಡು, ಅಳುತ್ತ ಅಳುತ್ತ ಹೇಳಿದಳು— 'ಸುಧಾ, ನಿನ್ನ ಕಾಲಿಗೆ ಬೀಳ್ತೀನಿ, ಏನಾಯ್ತು ಅಂತ ಕೇಳಬೇಡ. ಇದರಿಂದ ನಿನಗೆ ದುಃಖವಾಗುತ್ತೆ. ಬಹುಶಃ ನಿನಗೆ ನನ್ನ ಮುಖ ತೋರಿಸಲು ಸಹ ನನ್ನಿಂದ ಆಗುವುದಿಲ್ಲ. ನಾನು ಅಭಾಗಿನಿಯಲ್ಲದಿದ್ದರೆ ಇಂಥ ದಿನಗಳನ್ನು ನೋಡುವಂಥ ಪರಿಸ್ಥಿತಿ ಬರುತ್ತಿತ್ತೇನು ? ದೇವರು ನನ್ನನ್ನು ಈ ಪ್ರಪಂಚದಿಂದ ಕರೆದುಕೊಂಡರೆ ಸಾಕು ಅಂತ ನಾನು ಯೋಚಿಸುತ್ತಿದ್ದೇನೆ. ಈಗಲೇ ಇಂಥ ದುರ್ಗತಿಯಾಗುತ್ತಿರುವಾಗ ಮುಂದೇನಾಗುತ್ತೋ, ಆ ದೇವರಿಗೇ ಗೊತ್ತು .'

ಈ ಮಾತುಗಳಲ್ಲಿದ್ದಂಥ ಸೂಚ್ಯಭಾವಗಳನ್ನು ಸುಧಾ ಅರ್ಥಮಾಡಿ ಕೊಳ್ಳದೆಯೇನೂ ಇರಲಿಲ್ಲ. ಡಾಕ್ಟರು ಏನೋ ಏನೋ...... ಮಾಡಿದ್ದಾರೆ ಎಂಬುದು ಈಗ ಅವಳಿಗೆ ಸ್ಪಷ್ಟವಾಯಿತು. ಅವರು ತೊದಲುತ್ತ ಮಾತನಾಡಿದ ರೀತಿ, ತಾನು ಕೇಳಿದ ಪ್ರಶ್ನೆಗಳಿಗೆ ಕೊಟ್ಟ ಹಾರಿಕೆಯ ಉತ್ತರ, ಕಾಂತಿಹೀನವಾದ ಪಶ್ಚಾತ್ತಾಪದಿಂದ ಬೇಯುತ್ತಿದ್ದ ಮುಖ–ಈ ಎಲ್ಲ ಅವಳಿಗೆ ನೆನಪಾದುವು. ಅವಳು ಅಡಿಯಿಂದ ಮುಡಿಯವರೆಗೆ ಗಡಗಡ ನಡುಗಿದಳು. ಅವಳು ಏನೊಂದನ್ನು ಮಾತನಾಡದೆ ಸಿಂಹಿಣಿಯೋಪಾದಿಯಲ್ಲಿ

ಕೋಪದಿಂದ ಕೆಂಡವಾಗಿ ಬಾಗಿಲ ಕಡೆಗೆ ಬಂದಳು. ನಿರ್ಮಲಾ ಆಕೆಯನ್ನು ತಡೆಯಲು ಪ್ರಯತ್ನಿಸಿದಳಾದರೂ ಅವಳಿಂದ ತಡೆಯಲಾಗಲಿಲ್ಲ. ಸುಧಾ ನೋಡು–ನೋಡುತ್ತಿದ್ದಂತೆಯೇ ರಸ್ತೆಗೆ ಬಂದಿದ್ದಳು ಮತ್ತು ಮನೆಯ ಕಡೆ ಹೆಜ್ಜೆ ಹಾಕಲಾರಂಭಿಸಿದಳು ! ಅತ್ತ ನಿರ್ಮಲಾ ನಿಂತಲ್ಲೇ ನೆಲದ ಮೇಲೆ ಕುಸಿದು ಕುಳಿತುಕೊಂಡು ಬಿಕ್ಕಳಿಸಿ–ಬಿಕ್ಕಳಿಸಿ ಅಳಲಾರಂಭಿಸಿದಳು.

## ಇಪ್ಪತ್ತಾರು

ನಿರ್ಮಲಾ ಇಡೀ ದಿನ ಮಂಚದ ಮೇಲೆ ಮಲಗಿಕೊಂಡಿದ್ದಳು. ಅವಳ ದೇಹದಲ್ಲಿ ಪ್ರಾಣವೇ ಇಲ್ಲವೇನೋ ಎಂಬಂಥ ಸ್ಥಿತಿಗೆ ಆಕೆ ಮುಟ್ಟಿದ್ದಳು. ಸ್ನಾನವನ್ನೂ ಮಾಡಲಿಲ್ಲ. ಊಟಕ್ಕೂ ಏಳಲಿಲ್ಲ. ಸಂಜೆಯ ಹೊತ್ತಿಗೆ ಆಕೆಗೆ ಜ್ವರ ಬಂತು. ಇಡೀ ರಾತ್ರಿ ಅವಳ ಮೈ ಕಾದ ಕಾವಲಿಯಂತೆ ಬೇಯುತ್ತಿತ್ತು. ಎರಡನೆಯ ದಿನವೂ ಜ್ವರ ಇಳಿಯಲಿಲ್ಲ. ಕೊಂಚ ಕಡಿಮೆಯಾಯಿತು, ಅಷ್ಟೆ. ಆಗ ಮಂಚದ ಮೇಲೆ ಮಲಗಿಕೊಂಡು ಅನಿಮೇಷ ದೃಷ್ಟಿಯಿಂದ ಬಾಗಿಲ ಕಡೆಗೇ ನೋಡುತ್ತಿದ್ದಳು. ನಾಲ್ಕೂ ಕಡೆ ಶೂನ್ಯ ಆವರಿಸಿತ್ತು. ಆಕೆಯ ಒಳಗೂ ಹೊರಗೂ ಶೂನ್ಯ ಭಾವ ಕವಿದಿತ್ತು. ಆಕೆಗೆ ಯಾವ ಚಿಂತೆಯೂ ಇರಲಿಲ್ಲ, ಯಾವ ನೆನಪೂ ಇರಲಿಲ್ಲ. ಯಾವ ದುಃಖವೂ ಇರಲಿಲ್ಲ. ಮೈ–ಮನಸ್ಸುಗಳು ತಮ್ಮ ಸ್ಪಂದನ ಶಕ್ತಿಯನ್ನೇ ಕಳೆದುಕೊಂಡಿದ್ದುವು.

ಇದ್ದಕ್ಕಿದ್ದಂತೆಯೇ ರುಕ್ಮಿಣಿ ಮಗುವನ್ನು ಎತ್ತಿಕೊಂಡು ಬಂದು ಅವಳ ಮುಂದೆ ನಿಂತಳು. ನಿರ್ಮಲಾ ಕೇಳಿದಳು— 'ಇವಳು ತುಂಬ ಅತ್ತಳೇನು ?'

ರುಕ್ಮಿಣಿ : 'ಇಲ್ಲ, ಒಂದು ಸಾರಿಯಾದರೂ ನಿನ್ನನ್ನು ನೆನಸಿಕೊಳ್ಳಲಿಲ್ಲ. ಇಡೀ ರಾತ್ರಿ ಸುಮ್ಮನೇ ಮಲಗಿಕೊಂಡಿದ್ದಳು. ಸುಧಾ ಸ್ವಲ್ಪ ಹಾಲನ್ನು ಕಳಿಸಿದ್ದಳು. ಅದನ್ನೇ ಕುಡಿಸಿದ್ದೆ.'

ನಿರ್ಮಲಾ : 'ಹಾಲಿನವಳು ಹಾಲು ಹಾಕಲಿಲ್ಲವೇನು ?'

ರುಕ್ಮಿಣಿ : 'ಹಳೆಯ ಬಾಕಿ ಕೊಟ್ಟರೇನೆ ಹಾಲು ಕೊಡುವುದು ಅಂತ ಹೇಳಿದಳು. ಈಗ ನಿನ್ನ ಆರೋಗ್ಯ ಹೇಗಿದೆ ?'

ನಿರ್ಮಲಾ : 'ನನಗೇನೂ ಆಗಿಲ್ಲ. ನಿನ್ನೆ ಮೈ ಕೊಂಚ ಬಿಸಿಯಾಗಿತ್ತು, ಅಷ್ಟೆ.'

ರುಕ್ಮಿಣಿ : 'ಡಾಕ್ಟರ್ ಸಾಹೇಬರ ಬಗ್ಗೆ ಗೊತ್ತಾಯ್ತಾ ?'

ನಿರ್ಮಲಾ ಗಾಬರಿಯಿಂದಲೇ ಕೇಳಿದಳು : 'ಯಾಕೆ ! ಏನಾಯಿತು ? ಆರೋಗ್ಯವಾಗಿದ್ದಾರೆ ತಾನೆ ?'

ರುಕ್ಮಿಣಿ : 'ಆರೋಗ್ಯ ಕೇಳ್ತಿದ್ದೀಯಾ. ಅಲ್ಲಿ ಅವರ ಹೆಣ ಎತ್ತಲು ಸಿದ್ಧತೆಗಳಾಗುತ್ತಿವೆ.

ಅವರು ವಿಷ ತಿಂದರು ಅಂತ ಕೆಲವರು ಹೇಳಿದರೆ, ಹೃದಯದ ಬಡಿತವೇ ನಿಂತು ಹೋಯಿತು ಅಂತ ಕೆಲವರು ಹೇಳ್ತಿದ್ದಾರೆ. ಏನಾಯಿತು ಅಂತ ಆ ದೇವರೇ ಬಲ್ಲ.'

ನಿರ್ಮಲಾ ನಿಟ್ಟುಸಿರಿಟ್ಟಳು. ತುಂಬಿ ಬಂದ ಗಂಟಲಿನಲ್ಲಿಯೇ ಹೇಳಿದಳು— 'ಅಯ್ಯೋ ದೇವರೆ, ಈಗ ಸುಧಾಳ ಗತಿ ಏನು ? ಅವಳು ಹೇಗೆ ಬದುಕಿರ್ತಾಳೆ ?'

ಇಷ್ಟು ಹೇಳು-ಹೇಳುತ್ತ ಅವಳು ಅಳಲಾರಂಭಿಸಿದಳು. ಬಹಳ ಹೊತ್ತಿನವರೆಗೂ ಬಿಕ್ಕಳಿಸುತ್ತಲೇ ಇದ್ದಳು. ಆಮೇಲೆ ಮಂಚ ಬಿಟ್ಟು ಇಳಿದು ಸುಧಾಳ ಮನೆಗೆ ಹೋಗಲು ಸಿದ್ಧಳಾದಳು. ಕಾಲುಗಳು ಗಡ ಗಡ ನಡುಗುತ್ತಿದ್ದವು. ಗೋಡೆಗೆ ಒರಗಿ ನಿಂತುಕೊಂಡಳು. ಅವಳ ಮನಸ್ಸು ತಡೆಯುತ್ತಿರಲಿಲ್ಲ. ಸುಧಾ ಇಲ್ಲಿಂದ ಹೋಗಿ ಏನೇನು ಅಂದಳೋ ಏನೋ ! ನಾನು ಅವಳಿಗೆ ಏನನ್ನೂ ಹೇಳಿರಲಿಲ್ಲ. ನನ್ನ ಮಾತುಗಳಿಗೆ ಯಾವ ಅರ್ಥ ಕಲ್ಪಿಸಿದಳೋ ಏನೋ ! ಅಯ್ಯೋ ! ಅಂಥ ರೂಪವಂತ, ಅಂಥ ದಯಾಳು, ಅಂಥ ಸುಶೀಲ ಸ್ವಭಾವದ ಮನುಷ್ಯನಿಗೆ ಈ ಬಗೆಯ ಅಂತ್ಯವೆ ? ತನ್ನ ಕೋಪದ ಪರಿಣಾಮ ಇಷ್ಟು ಭೀಷಣವಾಗುವುದು ಎಂಬುದು ಅವಳಿಗೆ ಗೊತ್ತಿದ್ದಿದ್ದರೆ, ವಿಷವನ್ನು ಗುಟುಕರಿಸಿ, ಆ ಸಂಗತಿಯನ್ನು ನಗು ನಗುತ್ತ ತಳ್ಳಿ ಹಾಕಿಬಿಡುತ್ತಿದ್ದಳು.

ನನ್ನ ಕಠೋರ ಸ್ವಭಾವದಿಂದಾಗಿಯೇ ಡಾಕ್ಟರ್ ಅವರಿಗೆ ಈ ಅಂತ್ಯ ಬಂತು ಎಂಬ ಸಂಗತಿ ತಲೆಯನ್ನು ಕೊರೆಯಲಾರಂಭಿಸುತ್ತಿದ್ದಂತೆಯೇ ನಿರ್ಮಲಾಳ ಹೃದಯ ತತ್ತರಿಸತೊಡಗಿತು. ಎಂಥ ವೇದನೆಯಾಗಲಾರಂಭಿಸಿತೆಂದರೆ ಅವಳ ಹೃದಯವನ್ನು ಯಾರೋ ಮುಳ್ಳಿನಿಂದ ತಿವಿಯುತ್ತಿರುವಂಥ ಅನುಭವವಾಯಿತು. ಆಕೆ ಡಾಕ್ಟರರ ಮನೆಗೆ ಹೊರಟಳು.

ಹೆಣವನ್ನು ಎತ್ತಿದರು. ಹೊರಗೆ ನಿಶ್ಶಬ್ದ ಆವರಿಸಿತ್ತು. ಮನೆಯಲ್ಲಿ ಹೆಂಗಸರು ಜಮಾಯಿಸಿದ್ದರು. ಸುಧಾ ನೆಲದ ಮೇಲೆ ಕುಳಿತು ಅಳುತ್ತಿದ್ದಳು. ನಿರ್ಮಲಾಳನ್ನು ನೋಡುತ್ತಿದ್ದಂತೆಯೇ ಆಕೆ ಜೋರಾಗಿ ಕಿರುಚಿ ಅಳಲಾರಂಭಿಸಿದ್ದಷ್ಟೇ ಅಲ್ಲ, ಹೋಗಿ ಅವಳನ್ನು ಎದೆಗೆ ಅಪ್ಪಿಕೊಂಡಳು. ಬಹಳ ಹೊತ್ತಿನವರೆಗೂ ಇಬ್ಬರೂ ಅಳುತ್ತಿದ್ದರು.

ಹೆಂಗಸರ ಗುಂಪು ಕರಗಿ ಹೋದ ಮೇಲೆ ಇಬ್ಬರೂ ಏಕಾಂತದಲ್ಲಿದ್ದಾಗ ನಿರ್ಮಲಾ ಕೇಳಿದಳು— 'ಏನಿದೆಲ್ಲ ಸುಧಾ ? ನೀನು ಅವರಿಗೆ ಏನಂದೆ ?'

ಸುಧಾ : ಈ ಪ್ರಶ್ನೆಗೆ ಉತ್ತರವನ್ನು ತನ್ನ ಮನಸ್ಸಿಗೆ ಅದೆಷ್ಟು ಸಾರಿ ಕೊಟ್ಟುಕೊಂಡಿದ್ದಳೋ ಏನೋ ! ಆದರೆ ತನ್ನ ಮನಸ್ಸು ಸಮಾಧಾನಗೊಂಡ ಉತ್ತರವನ್ನು ನಿರ್ಮಲಾಗೂ ಕೊಟ್ಟಳು— 'ಸುಮ್ಮನಿರಲಿಕ್ಕೆ ನನ್ನಿಂದಾಗಲಿಲ್ಲ ತಂಗಿ, ಕೋಪ ಮಾಡಿಕೊಳ್ಳುವಂಥ ವಿಷಯಕ್ಕೆ ಕೋಪ ಬಂದೇ ಬರುತ್ತಲ್ಲ ?'

ನಿರ್ಮಲಾ : 'ನಾನು ನಿನ್ನೊಂದಿಗೆ ಅಂಥ ಯಾವ ವಿಷಯವನ್ನೂ ಹೇಳಿರಲಿಲ್ಲವಲ್ಲ ?'

ಸುಧಾ : 'ನೀನು ಹ್ಯಾಗೆ ಹೇಳ್ತೀಯಾ ? ಹೇಳಲಿಕ್ಕೆ ನಿನ್ನಿಂದ ಆಗ್ತಾನೂ ಇರಲಿಲ್ಲ.

ಆದರೆ ಏನು ಮಾತುಕತೆಯಾಯಿತೋ ಅದನ್ನು ಅವರು ನನಗೆ ಹೇಳಿದರು. ಅದಕ್ಕೆ ಬಾಯಿಗೆ ಬಂದದ್ದು ಬೈದೆ. ಯಾವುದಾದರೂ ಒಂದು ವಿಷಯ ಮನಸ್ಸಿಗೆ ಬಂತು ಅಂದರೆ ಅದು ಆಯಿತು ಅಂತಾನೇ ತಿಳಿಕೋಬೇಕು. ಅವಕಾಶ ಸಿಕ್ಕಿದರೆ ಅದು ನಿಲ್ಲುವುದಿಲ್ಲ. ನಾನು ತಮಾಷೆಗೆ ಹೇಳಿದೆ ಅಂತ ಭಾವಿಸಿಕೊಂಡು ಯಾರು ಸುಮ್ಮನಾಗುವುದಿಲ್ಲ. ಅದರಲ್ಲೂ ಏಕಾಂತದಲ್ಲಿ ಅಂಥ ಮಾತುಗಳು ನಾಲಿಗೆಯ ಮೇಲೆ ಬಂದವೆಂದರೆ ಅಲ್ಲಿಗೆ ಅವನ ನಿಯತ್ತು ಕೆಟ್ಟಿದೆ ಅಂತಾನೆ ತಿಳ್ಕೊಬೇಕು. ನಾನು ನಿನಗೆ ಹೇಳಿರಲಿಲ್ಲ ತಂಗಿ, ಅವರ ಮನಸ್ಸು ನಿನ್ನ ಮೇಲಿರುವುದನ್ನು ನಾನು ಗಮನಿಸಿದ್ದೆ. ಆಗೆಲ್ಲ ನಾನು ವೃಥಾ ತಪ್ಪು ತಿಳಿದುಕೊಳ್ತಿದ್ದೀನಿ ಅಂತಾನೆ ಭಾವಿಸಿದ್ದೆ. ಈಗ ಗೊತ್ತಾಯಿತು. ಅವರು ಹಾಗೆ ನೋಡುತ್ತಿದ್ದುದ್ದಕ್ಕೆ ಏನು ಅರ್ಥ ವಿತ್ತು ಅಂತ ಈಗ ಗೊತ್ತಾಗ್ತಿದೆ ನನಗೆ ಪ್ರಪಂಚದ ಅನುಭವ ಇನ್ನೂ ಇದ್ದಿದ್ದರೆ ನೀನು ನನ್ನ ಮನೆಗೆ ಬರದಂತೆ ನೋಡಿಕೊಳ್ಳುತ್ತಿದ್ದೆ. ಕೊನೇ ಪಕ್ಷ ಅವರ ಕಣ್ಣು ನಿನ್ನ ಮೇಲೆ ಬೀಳದಂತೆಯಾದರೂ ನೋಡಿಕೊಳ್ಳುತ್ತಿದ್ದೆ. ಆದರೆ ಗಂಡಸರ ಮನಸ್ಸು ಹೊರಗೊಂದು ಒಳಗೊಂದು ಅಂತ ನನಗೇನು ಗೊತ್ತು. ದೇವರ ಇಚ್ಛೆಯಂತೆ ಏನು ಆಗಬೇಕಿತ್ತೋ ಅದು ಆಯಿತು. ಅಂಥ ಸೌಭಾಗ್ಯಕ್ಕಿಂತಲೂ ಇಂಥ ವೈಧವ್ಯವನ್ನು ನಾನು ಕೆಟ್ಟದ್ದು ಅಂತ ಭಾವಿಸಿಲ್ಲ. ಹಣವನ್ನೇ ಹಾವಾಗಿಸಿಕೊಂಡು ಕಚ್ಚಿಸಿಕೊಳ್ಳುವ ಶ್ರೀಮಂತನಿಗಿಂತಲೂ ದರಿದ್ರ ಮನುಷ್ಯನೇ ಹೆಚ್ಚು ಸುಖಿ. ಉಪವಾಸ ಮಾಡುವುದು ಎಷ್ಟೋ ಸುಲಭ. ಆದರೆ ವಿಷದ ಊಟ ಮಾಡುವುದು ಅದಕ್ಕಿಂತಲೂ ಎಷ್ಟೋ ಪಟ್ಟು ಕಷ್ಟ.

ಅದೇ ಸಮಯಕ್ಕೆ ಸರಿಯಾಗಿ ಡಾಕ್ಟರ್ ಸಿನ್ಹಾರ ತಮ್ಮ ಮತ್ತು ಕೃಷ್ಣಾ ಮನೆಗೆ ಬಂದರು. ಮನೆಯಲ್ಲಿ ಪುನಃ ಗೋಳು ಆರಂಭವಾಯಿತು.

## ಇಪ್ಪತ್ತೇಳು

ಇನ್ನೊಂದು ತಿಂಗಳೂ ಕಳೆಯಿತು. ಸುಧಾ ತನ್ನ ಮೈದುನನೊಂದಿಗೆ ಮಾರನೆ ದಿನವೇ ಹೊರಟು ಹೋದಳು ! ಈಗ ನಿರ್ಮಲಾ ಒಂಟಿಯಾದಳು. ಈ ಮೊದಲು ಅವಳೊಡನೆ ಮಾತನಾಡುತ್ತ , ನಕ್ಕುನಲಿಯುತ್ತ ಹೇಗೋ ಸಮಯವನ್ನು ಕಳೆಯುತ್ತಿದ್ದಳು. ಈಗ ಅಳುವುದೊಂದೇ ಅವಳ ಪಾಲಿಗೆ ಇದ್ದ ಕೆಲಸವಾಗಿತ್ತು. ಅವಳ ಆರೋಗ್ಯವೂ ದಿನ–ದಿನಕ್ಕೆ ಕೆಡುತ್ತಾ ಹೋಗುತ್ತಿತ್ತು. ಹಳೆಯ ಮನೆಯ ಬಾಡಿಗೆ ಜಾಸ್ತಿಯಾದದ್ದರಿಂದ ಕಡಿಮೆ ಬಾಡಿಗೆಗೆ ಇನ್ನೊಂದು ಮನೆಯನ್ನು ಹುಡುಕಿಕೊಂಡಳು. ಈ ಮನೆ ಇಕ್ಕಟ್ಟಾದ ಗಲ್ಲಿಯೊಂದರಲ್ಲಿತ್ತು. ಒಂದು ರೂಮು, ಒಂದು ಚಿಕ್ಕ ಅಂಗಳದ ಮನೆ. ಬೆಳಕು ಬಾರದ, ಗಾಳಿ ಆಡದ ಮನೆ. ಮನೆ ತುಂಬ ದುರ್ಗಂಧ ತುಂಬಿರುತ್ತಿತ್ತು.

ಇನ್ನು ಊಟ–ತಿಂಡಿಯ ಸ್ಥಿತಿ ಹೇಗಿತ್ತೆಂದರೆ ಕೈಲಿ ಹಣವಿದ್ದರೂ ಒಮ್ಮೊಮ್ಮೆ ಉಪವಾಸ ಮಾಡಬೇಕಾಗುತ್ತಿತ್ತು , ಪೇಟೆಗೆ ಹೋಗಿ ತರುವವರು ಯಾರು. ತನ್ನ ಗಂಡನಿಲ್ಲ. ಯಾವ ಹುಡುಗನೂ ಇಲ್ಲ. ದಿನವೂ ಅಡಿಗೆ ಮಾಡುವ ಕಷ್ಟ ಯಾರಿಗೆ ಬೇಕು ? ಹೆಂಗಸರು ದಿನವೂ ಊಟ ಮಾಡಬೇಕಾದ ಅಗತ್ಯವಾದರೂ ಏನು? ಒಪ್ಪತ್ತು ಊಟ ಮಾಡಿದರೆ ಮುಂದಿನ ಎರಡು ದಿನಗಳವರೆಗೂ ಊಟ ಮಾಡುತ್ತಿರಲಿಲ್ಲ. ಮಗುವಿಗೆ ಮಾತ್ರ ಬಿಸಿ ಹಲ್ವಾ ಅಥವಾ ರೊಟ್ಟಿಗಳನ್ನು ಮಾಡುತ್ತಿದ್ದರು. ಹೀಗಿದ್ದಾಗ ಆರೋಗ್ಯ ಕೆಡದೆ ಇರುತ್ತದೆಯೇನು ? ಚಿಂತೆ, ಶೋಕ, ಅವ್ಯವಸ್ಥೆ – ಒಂದೋ ಎರಡೋ ! ತಾಪತ್ರಯಗಳೇ ತುಂಬಿದ್ದುವು. ಇದರ ಮೇಲೆ ನಿರ್ಮಲಾ ಔಷಧಿ ತೆಗೆದುಕೊಳ್ಳುವುದಿಲ್ಲ ಅಂತ ಪ್ರತಿಜ್ಞೆ ಮಾಡಿದ್ದಳು. ಇನ್ನೇನು ಮಾಡಿಯಾಳು ? ಇದ್ದ ಸ್ವಲ್ಪ ಹಣದಲ್ಲಿ ಔಷಧಿಯನ್ನು ಎಲ್ಲಿಂದ ಕೊಳ್ಳುವುದು ? ಎರಡು ಹೊತ್ತು ಊಟಕ್ಕೇ ಗತಿಯಿಲ್ಲದ ಕಡೆ ಔಷಧಿ ಹೇಗೆ ಬಂದಾತು ? ನಿರ್ಮಲಾ ದಿನದಿನಕ್ಕೂ ಒಣಗಿ ಹೋಗುತ್ತಿದ್ದಳು.

ಒಂದು ದಿನ ರುಕ್ಮಿಣಿ ಹೇಳಿದಳು — 'ಹೀಗೆ ಎಷ್ಟು ದಿನಾಂತ ಕೊರಗ್ತಾ ಇರ್ತೀಯಾ. ಪ್ರಾಣವೊಂದಿದ್ದರೆ ಏನ್ ಬೇಕಾದರೂ ಮಾಡಬಹುದು. ಬಾ ಹೋಗೋಣ. ದವಾಖಾನೆಗೆ ಹೋಗೋಣ ಬಾ.'

ನಿರ್ಮಲಾ ವಿರಕ್ತಭಾವದಿಂದ ನುಡಿದಳು—– 'ಅಳುವುದಕ್ಕೆಂದೇ ಬದುಕಿರುವುದಕ್ಕಿಂತ ಸಾಯುವುದೇ ವಾಸಿ.'

ರುಕ್ಮಿಣಿ : 'ನಾವು ಕರೆದ ಮಾತ್ರಕ್ಕೆ ಸಾವು ಬರುವುದಿಲ್ಲಮ್ಮ.'

ನಿರ್ಮಲಾ : 'ಸಾವು ನಾವು ಕರೆಯದೆಯೇ ಬರುತ್ತೆ ಅಂದ ಮೇಲೆ ನಾವು ಕರೆದರೆ ಯಾಕೆ ಬರಲ್ಲ ಹೇಳಿ. ಅದು ಬರುವುದರಲ್ಲಿ ಇನ್ನು ಹೆಚ್ಚು ದಿನಗಳನ್ನು ಕಾಯಬೇಕಾಗಿಲ್ಲ. ಅಕ್ಕ ಇನ್ನು ಎಷ್ಟು ದಿನ ಬದುಕಿರುತ್ತೇನೋ ಅಷ್ಟು ವರ್ಷ ಬದುಕಿದ್ದೆ ಅಂತ ತಿಳ್ಕೊಳ್ಳಿ.'

ರುಕ್ಮಿಣಿ : 'ಮನಸ್ಸನ್ನು ಚಿಕ್ಕದು ಮಾಡ್ಕೋಬೇಡಮ್ಮ. ಪ್ರಪಂಚದ ಸುಖವನ್ನು ನೀನು ಇನ್ನೂ ಎಲ್ಲಿ ಅನುಭವಿಸಿದ್ದೀಯಾ ?'

ನಿರ್ಮಲಾ : 'ಇಷ್ಟು ದಿನ ನಾನು ನೋಡಿರುವುದನ್ನೇ ಈ ಪ್ರಪಂಚದ ಸುಖ ಅನ್ನುವುದಾದರೆ, ಈ ಸುಖ ನನಗೆ ಸಾಕಾಗಿದೆ. ನಿಜಹೇಳ್ತಿದ್ದೀನಿ ಅಕ್ಕ ಈ ಹೆಣ್ಣು ಮಗುವಿನ ಮೋಹ ನನ್ನನ್ನು ಕಟ್ಟಿಹಾಕಿದೆ. ಇದಿಲ್ಲದೆ ಹೋಗಿದ್ದರೆ ನಾನು ಯಾವತ್ತೊ ಹೊರಟು ಹೋಗಿರುತ್ತಿದ್ದೆ. ಈ ಬಡಪಾಯಿಯ ಹಣೆಯಲ್ಲಿ ಏನು ಬರೆದಿದೆಯೋ ಯಾರಿಗೆ ಗೊತ್ತು' ?

ಇಬ್ಬರೂ ಅಳತೊಡಗಿದರು, ಇತ್ತೀಚೆಗೆ ನಿರ್ಮಲಾ ಹಾಸಿಗೆ ಹಿಡಿದಾದ ನಂತರ ರುಕ್ಮಿಣಿಯ ಹೃದಯದಲ್ಲಿ ಮರುಕದ ಸ್ರೋತಸ್ವಿನಿ ಪುಟಿಯಲಾರಂಭಿಸಿದೆ. ಈಗ ಅವಳ ಹೃದಯದಲ್ಲಿ ಲೇಶಮಾತ್ರ ದ್ವೇಷವೂ ಇಲ್ಲ. ಏನೇ ಕೆಲಸ ಮಾಡುತ್ತಿರಲಿ, ನಿರ್ಮಲಾಳ ಧ್ವನಿ ಕಿವಿಗೆ ಬೀಳುತ್ತಿದ್ದಂತೆಯೇ ಅದನ್ನು ಬಿಟ್ಟು ಓಡಿ ಬರುತ್ತಾಳೆ. ಗಂಟೆಗಟ್ಟಲೆ ಅವಳ ಬಳಿ

ಕುಳಿತುಕೊಂಡು ಕತೆ–ಪುರಾಣವನ್ನು ಹೇಳುತ್ತಾಳೆ. ನಿರ್ಮಲಾಳ ಬಾಯಿ ರುಚಿಗೆ ತಕ್ಕಂಥ ತಿಂಡಿಯನ್ನು ಮಾಡಿಕೊಡುತ್ತಾಳೆ. ನಿರ್ಮಲಾ ಯಾವಾಗಲಾದರೂ ನಕ್ಕರೆ, ಆ ನಗೆಯನ್ನು ನೋಡಿ ತೃಪ್ತಿಪಟ್ಟುಕೊಳ್ಳುತ್ತಾಳೆ. ಮಗುವನ್ನು ತನ್ನ ಕೊರಳ ಮಾಲೆ ಮಾಡಿಕೊಂಡಿದ್ದಾಳೆ. ಅವಳು ಮಲಗಿದಾಗ ಮಲಗುತ್ತಾಳೆ. ಅವಳು ಎದ್ದಾಗ ಏಳುತ್ತಾಳೆ. ಆ ಮಗಳೇ ಅವರ ಬದುಕಿನ ಇಂಬಾಗಿದ್ದಾಳೆ.

ರುಕ್ಮಿಣಿ ಕೊಂಚ ತಡೆದು ಹೇಳಿದಳು –– 'ನಿರ್ಮಲಾ, ಇಷ್ಟು ನಿರಾಶಳೇಕೆ ಆಗ್ತಿದ್ದೀಯಾ? ದೇವರ ದಯೆಯಿದ್ದರೆ ಮೂರು–ನಾಲ್ಕು ದಿನಗಳಲ್ಲಿ ಆರೋಗ್ಯ ಸರಿ ಹೋಗುತ್ತೆ ಬಾ ನನ್ನ ಜತೆ, ವೈದ್ಯರ ಹತ್ತಿರ ಹೋಗಿ ಬರೋಣ, ತುಂಬ ಒಳ್ಳೆಯವರು.'

ನಿರ್ಮಲಾ : 'ಅಕ್ಕ, ನನಗೆ ಯಾವ ವೈದ್ಯರ, ಯಾವ ಔಷಧಿಯ ಪ್ರಯೋಜನವೂ ಆಗುವುದಿಲ್ಲ. ನೀವು ನನ್ನ ಬಗ್ಗೆ ಚಿಂತಿಸಬೇಡಿ. ಈ ನನ್ನ ಮಗಳನ್ನು ನಿಮ್ಮ ಮಡಿಲಿಗೆ ಹಾಕಿ ಹೋಗುತ್ತಿದ್ದೇನೆ. ಇವಳು ಬದುಕಿ–ಉಳಿದರೆ ಒಳ್ಳೆ ವಂಶಸ್ಥರ ಮನೇಲಿ ಮದುವೆ ಮಾಡಿ. ನಾನು ಇವಳಿಗೆ ಜನ್ಮ ಕೊಟ್ಟ ಅಪರಾಧಿನಿ ಅಷ್ಟೆ. ಇವಳಿಗೆಂದು ನಾನು ಬದುಕಿನಲ್ಲಿ ಏನನ್ನೂ ಮಾಡಲಿಲ್ಲ. ಇವಳಿಗೆ ಮದುವೆ ಮಾಡದೆ ಕನ್ಯೆಯಾಗಿಯೇ ಇಡಿ, ಬೇಕು ಅಂದರೆ ವಿಷ ಕೊಟ್ಟು ಕೊಂದು ಹಾಕಿ, ಆದರೆ ಅಪಾತ್ರನ ಕೊರಳಿಗೆ ಮಾತ್ರ ಕಟ್ಟಬೇಡಿ. ಇದೊಂದನ್ನೇ ನಾನು ನಿಮ್ಮಲ್ಲಿ ಬೇಡಿಕೊಳ್ಳುವುದು. ನಿಮ್ಮ ಸೇವೆಯನ್ನು ನನ್ನಿಂದ ಮಾಡಲಿಕ್ಕಾಗಲಿಲ್ಲವಲ್ಲ ಎಂಬ ದುಃಖ ನನಗಿದೆ. ಈ ಅಭಾಗಿನಿಯಿಂದ ಯಾರಿಗೂ ಸುಖ ಸಿಗಲಿಲ್ಲ. ನನ್ನ ನೆರಳು ಯಾರ ಮೇಲೆ ಬಿತ್ತೋ ಅವರ ಸರ್ವನಾಶವಾಯಿತು. ಯಜಮಾನರು ಮನೆಗೆ ಬಂದರೆ ಈ ಪಾಪಿಯನ್ನು ಕ್ಷಮಿಸುವಂತೆ ಕೇಳಿಕೊಳ್ಳಿ.'

ರುಕ್ಮಿಣಿ ಅಳುತ್ತ ಹೇಳಿದಳು – 'ಮಗಳೆ, ನೀನು ಯಾವ ತಪ್ಪನ್ನೂ ಮಾಡಿಲ್ಲ. ದೇವರಾಣೆಗೂ ಹೇಳ್ತಿದ್ದೀನಿ. ನಿನ್ನ ಬಗ್ಗೆ ನನ್ನ ಮನಸ್ಸಿನಲ್ಲಿ ಯಾವ ವಿಧವಾದ ಕಲ್ಮಶವಿಲ್ಲ. ಅಂದ ಹಾಗೆ ನಾನೇ ನಿನ್ನ ಬಗ್ಗೆ ಕಟುವಾಗಿ ನಡೆದುಕೊಂಡಿದ್ದೇನೆ ಎಂಬ ದುಃಖ ಕೊನೆಯವರೆಗೂ ನನ್ನನ್ನು ಕಾಡುತ್ತಿರುತ್ತೆ'

ನಿರ್ಮಲಾ ಕಾತರ ನೇತ್ರಗಳಿಂದ ನೋಡುತ್ತ ಹೇಳಿದಳು – 'ಅಕ್ಕ , ಹೇಳುವ ಮಾತಲ್ಲ, ಆದರೆ ಹೇಳದೆ ಇರಲು ಸಾಧ್ಯವಾಗುತ್ತಿಲ್ಲ. ಯಜಮಾನರು ಮೊದಲಿನಿಂದಲೂ ನನ್ನನ್ನು ಅಪನಂಬಿಕೆಯ ದೃಷ್ಟಿಯಿಂದಲೇ ನೋಡಿದರು. ಆದರೆ ನಾನು ಯಾವತ್ತೂ ಅವರನ್ನು ಮನಸ್ಸಿನಿಂದ ಉಪೇಕ್ಷಿಸಿಲ್ಲ. ಆಗಬೇಕಾದ್ದು ಆಗಿ ಹೋಗಿತ್ತು. ಅಧರ್ಮ ಮಾಡಿ ಸತ್ತ ಮೇಲೆ ನರಕಕ್ಕೆ ಯಾಕೆ ಹೋಗಬೇಕು ಹೇಳಿ. ಹಿಂದಿನ ಜನ್ಮದಲ್ಲಿ ಯಾವ ಪಾಪ ಮಾಡಿದ್ದೆನೋ ಏನೋ ಈ ಜನ್ಮದಲ್ಲಿ , ಪ್ರಾಯಶ್ಚಿತ್ತವನ್ನು ಅನುಭವಿಸಬೇಕಾಗಿ ಬಂತು. ಈ ಜನ್ಮದಲ್ಲೂ ಪಾಪ ಮಾಡಿದ್ದರೆ ಮುಂದೆ ಏನಾಗುವುದೋ ಯಾರಿಗೆ ಗೊತ್ತು ?'

ನಿರ್ಮಲಾಳ ಉಸಿರಾಟ ತೀವ್ರವಾಗತೊಡಗಿತ್ತು. ಆಕೆ ಮತ್ತೆ ಮಂಚದ ಮೇಲೆ ಮಲಗಿಕೊಂಡಳು. ಮಲಗಿದ ಜಾಗದಿಂದಲೇ ತನ್ನ ಮಗಳ ಕಡೆ ಎಂಥ ದೃಷ್ಟಿ ಬೀರಿದಳೆಂದರೆ

ಅವಳ ಬದುಕಿನ ಎಲ್ಲ ದಾರುಣ ಕಥೆ ಆ ದೃಷ್ಟಿಯಲ್ಲಿತ್ತು. ಮಾತುಗಳಲ್ಲಿ ಅದನ್ನೆಲ್ಲ ಬಿಂಬಿಸುವ ಸಾಮರ್ಥ್ಯವೆಲ್ಲಿ ಬರಬೇಕು ?

ಮೂರು ದಿನಗಳವರೆಗೆ ನಿರ್ಮಲಾಳ ಕಣ್ಣುಗಳಿಂದ ಕಣ್ಣೀರ ಧಾರೆ ಪ್ರವಹಿಸುತ್ತಲೇ ಇತ್ತು. ಅವಳು ಯಾರೊಂದಿಗೂ ಮಾತನಾಡುತ್ತಿರಲಿಲ್ಲ, ಯಾರನ್ನೂ ನೋಡುತ್ತಿರಲಿಲ್ಲ. ಯಾರು ಮಾತನಾಡಿದ್ದನ್ನೂ ಕೇಳಿಸಿಕೊಳ್ಳುತ್ತಿರಲಿಲ್ಲ. ಸುಮ್ಮನೆ ಅಳುತ್ತಿರುತ್ತಿದ್ದಳು. ಅವಳ ಮನಸ್ಸಿನ ವೇದನೆಯನ್ನು ಯಾರು ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು ?

ನಾಲ್ಕನೆಯ ದಿನ ಸಂಜೆಯ ಹೊತ್ತಿಗೆ ಅವಳ ದಾರುಣ ಕಥೆ ಕೊನೆಗೊಂಡಿತು. ಆಗ ಪಶು ಪಕ್ಷಿಗಳು ತಮ್ಮ ತಮ್ಮ ಗೂಡುಗಳಿಗೆ ಹಿಂತಿರುಗುತ್ತಿದ್ದುವು. ನಿರ್ಮಲಾಳ ಪ್ರಾಣ ಪಕ್ಷಿ ಸಹ ದಿನವಿಡೀ ಬೇಟೆಗಾರರ ಗುರಿಗಳಿಂದ, ತಿನ್ನಲು ನಾಲಿಗೆ ಚಾಚಿಕೊಂಡು ಬರುವ ಪಕ್ಷಿಗಳಿಂದ ಮತ್ತು ಗಾಳಿಯ ಪ್ರಚಂಡ ಹೊಡೆತಗಳಿಂದ ತತ್ತರಿಸುತ್ತ ವ್ಯಥಿತ ಮನಸ್ಸಿನಿಂದ ತನ್ನ ಗೂಡಿನತ್ತ ಹಾರಿಹೋಯಿತು.

ಮೊಹಲ್ಲಾದ ಜನ ಸೇರಿದರು. ಹೆಣವನ್ನು ಹೊರಗಡೆ ತಂದಿಟ್ಟರು. ಸಂಸ್ಕಾರ ಯಾರು ಮಾಡಬೇಕು ಎಂಬ ಪ್ರಶ್ನೆ ಬಂದು ಜನ ಈ ಬಗ್ಗೆ ಚಿಂತಿಸುತ್ತಿರುವಾಗಲೇ ಇದ್ದಕ್ಕಿದ್ದಂತೆಯೇ ಒಂದು ಗಂಟನ್ನು ಭುಜಕ್ಕೆ ನೇತು ಹಾಕಿಕೊಂಡಿದ್ದ ಒಬ್ಬ ದಾರಿಹೋಕ ಮುದುಕ ಅಲ್ಲಿ ಬಂದು ನಿಂತರು. ಅವರೇ ತೋತಾರಾಮ.